

ಸಂಪುಟ
೨೦

ಸಂಚ
೮

ಬನ್ನಿ ನರನಾರೀಗಣ!

(ಸಭ್ಯರ)

ಪ್ರೀತಿಗಿರಿಜಾನಾಥನೊಸಗೆಯ ಜಾತ್ರೆಗಿಂದಿದೆ ಶುಭದಿನ—
ಗೀತದುಲಿಯಿದು ಎತಕೆಂಬಿರಿ? ಎಲ್ಲರಿಗು ಬರಲಾತನ ||

೧

ರಸ-ರಸಾಲವು ಕೊಡತು ತಳರಲಿ
ಒಸಗೆಹಂದರ ಬಲಿದಿದೆ —
ಕುಸುರುಮಲ್ಲಿಗೆ ನಸುಬಿರಿದ ಹೂ-
ಹಸೆಯ ಜಗುಲಿಯ ಸವೆದಿದೆ—
ಬಗೆಬಗೆಯ ಬಣ್ಣಗಳ ತೋರಣ
ಬಿಗಿವಡೆದ ಮೇಲ್ವಾಸಿನೋರಣ
ದುಗುಡ-ದುಮ್ಮನಗಳನಿವಾರಣ-
ಸ್ನೇಹಯೋಗಿಪವೋವನ....
ಪ್ರೀತಿಗಿರಿಜಾನಾಥನೊಸಗೆಯ
ಜಾತ್ರೆಗಿಂದಿದೆ ಶುಭದಿನ!

೨

ಮನ-ಮನದಿ ಹೋತೇರಿ ಸಂತಸ
ಕಳೆಯ ಕರೆವಾ ಕೇತನ—
ತನು-ತನುವಿನೊಳು ಕುಣಿ-ಕುಣಿಯುತಿದೆ
ಬೆಲುವ ಬಯಸುವ ಚೇತನ—
ಹೃದಯವುಳ್ಳವರೆಲ್ಲ ಬನ್ನಿ,
ಕದತೆರೆದ ಬಗೆತೇರ ತನ್ನಿ,
ಪ್ರೀತಿಗಿರಿಜೆಗೆ ಜಯವು ಎನ್ನಿ —
ಬನ್ನಿ ನರನಾರೀಗಣ!
ಪ್ರೀತಿಗಿರಿಜಾನಾಥನೊಸಗೆಯ
ಜಾತ್ರೆಗಿದುವೇ ಶುಭದಿನ ||

೧೯೫೮ JAYANTI ಜನೇವ

ಈ ಸಂಚಿಕೆಯಲ್ಲಿ :

ಬಳ್ಳಾರಿಯಲ್ಲಿ ಕನ್ನಡ ಸಾ. ಸಮ್ಮೇಳನ (ಸಂಪಾದಕೀಯ)
ಸಂಪಾದಕರು ೨೮೧

ನಾಡನಡೆ (ಸಾಂದರ್ಭಿಕ ಗಳು)
'ಕಾಲಭೈರವ' ೨೮೩

ವ್ಯಭಿಚಾರ (ಸಣ್ಣಕಥೆ)
ಶ್ರೀ. ರಾಘವೇಂದ್ರ ಖಾಸನೀಸ ಎಂ. ಎ., ಡಿಪ್. ಲಿಬ್. ಪುಣೆ ೨೮೫

ರನ್ನನ ಚಕ್ರೇಶ್ವರ ಚರಿತೆ (ಸಾಹಿತ್ಯಸಂಶೋಧನ)
ಶ್ರೀ. ವೆಂ. ಬಿ. ಲೋಕಾಪುರ ಬಿ. ಎ., ಬಿ. ಟಿ, ಡಿ. ಬಿ ಇ. ಹುಬ್ಬಳ್ಳಿ ೨೯೦

ಗೆಳತೀ ನೋಡ ಜಾತ್ರಿ (ನಲ್ವಾಡು)
ಶ್ರೀ. ಎಸ್. ವಿ. ಗಲಗಲಿ. ಧಾರವಾಡ ೨೯೬

ಜಾರದು (ಜಾನಪದ ನೀಳ್ಗೀತ)
ಶ್ರೀ ರಂಗರಾವ ದೇಶಪಾಂಡೆ, ಆಲದಕಟ್ಟಿ ೨೯೩

ತಾಮ್ರಪಟಗಳು (ಪರಿಚಯಾತ್ಮಕ ಪ್ರಬಂಧ)
ಶ್ರೀ. ಎ. ಎಂ. ಅಣ್ಣೀಗೇರಿ ಎಂ. ಎ. ಧಾರವಾಡ ೨೯೪

೪×೧೦ (ಸಣ್ಣಕಥೆ)
"ಹೇಮಂತರಾಜ" ಮಾಲಾಡ, ಮುಂಬಯಿ ೨೯೭

ರಾಯರ ಸೊಸೆ (ಹಳೆಯ ನಾಟಕದ ನೆನಪು)
ಶ್ರೀ. ಕೆ. ಜಿ. ಹಲಸಗಿ ಬಿ. ಎ., ಬಿ. ಟಿ. ಧಾರವಾಡ ೩೦೩

ದಕ್ಷಿಣಕನ್ನಡ ಜಿಲ್ಲೆಯ ಜೋಗುಳ (ಜಾನಪದ ಸಾಹಿತ್ಯ)
ಶ್ರೀ. ಡಿ. ಮಹಾಲಿಂಗಭಟ್ಟ 'ವಿದ್ವಾನ್' ಎಡನಾಡು ೩೦೬

ಕನ್ನಡದಲ್ಲಿ ಸಣ್ಣಕತೆಗಳು (ಸಾಹಿತ್ಯಪರಿಚಯ)
ಪ್ರೊ. ಸಿ. ಎಸ್. ಕುಲಕರ್ಣಿ ಎಂ. ಎ. ಧಾರವಾಡ ೩೦೭

ಶಬ್ದಶಕುಂತಲಾ (ಕವನ)
ಶ್ರೀ ಅರವಿಂದ ನಾತಕರ್ಣಿ ಬಿ. ಎಸ್ಸಿ., ಎಲ್ಎಲ್. ಬಿ. ಮುಂಬಯಿ ೩೧೧

ಕಣ್ಣಿಲ್ಲದಾಗ (ಸಣ್ಣಕಥೆ)
ಶ್ರೀ. "ರಂಜನ" ಭಟ್ಟ, ನಾಗಪುರ ೩೧೨

ಕಿರುಗತೆಗಳು
ಶ್ರೀ. ಎಚ್. ಡಿ. ಟಿ. ಇನಾಮದಾರ ಗುಲ್ಬರ್ಗಾ ೩೧೫

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ ೩೧೬
ಶ್ರೀ. ಕೆ. ಎಸ್. ಕಟ್ಟಿ ಮತ್ತು ಶ್ರೀ. ಕೆ. ಎಸ್. ಶರ್ಮಾ

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೨೦ ಸಂಚಿಕೆ ೬

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೬ ಆಣೆ.

⁂

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯಸಮ್ಮೇಳನ

ಇದೇ ತಿಂಗಳ ದಿನಾಂಕ ೧೮-೧೯-೨೦ ರಂದು ಬಳ್ಳಾರಿಯಲ್ಲಿ ೪೦ನೆಯ ಕನ್ನಡ ಸಾಹಿತ್ಯಸಮ್ಮೇಳನದ ಅಧಿವೇಶನ ಸೇರಲಿದೆ. ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯಸಮ್ಮೇಳನವು ಸೇರುತ್ತಿರುವುದು ಇದು ಮೂರನೆಯ ಸಲ. ಹಿಂದೆ ೧೯೨೬ರಲ್ಲಿ ಶ್ರೀಮಾನ್ ಪಿ. ಜಿ. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಒಮ್ಮೆ ಸೇರಿದ್ದಿತು; ೧೯೩೮ರ ಡಿಸೆಂಬರ್ ತಿಂಗಳಲ್ಲಿ ಶ್ರೀಮಾನ್ ದಿವಾಕರರ ಅಧ್ಯಕ್ಷತೆಯಲ್ಲಿ ಮತ್ತೊಮ್ಮೆ ಸೇರಿದ್ದಿತು. ಹಿಂದಿನವೆರಡೂ ಸಮ್ಮೇಳನಗಳು ಸೇರಿದ ಕಾಲದಲ್ಲಿ, ಬಳ್ಳಾರಿ ನಗರವೂ ಜಿಲ್ಲಾಪ್ರದೇಶವೂ, ಆಂಧ್ರ-ಕರ್ನಾಟಕಗಳ ಎಳೆದಾಟದ ಕ್ಷೇತ್ರಗಳಾಗಿದ್ದುವು. ಎರಡೂ ಸಮ್ಮೇಳನಕಾಲದಲ್ಲಿ ಆಂಧ್ರಪಕ್ಷಪಾತಿಗಳ ಪ್ರತ್ಯಕ್ಷಾಪ್ರತ್ಯಕ್ಷ ಅಸಹಕಾರ ವಿರೋಧಗಳು ಇದ್ದೇ ಇರುತ್ತಿದ್ದುವು. ಆದರೂ, ಬಳ್ಳಾರಿ ಎ ಕನ್ನಡಿಗರ ಕರ್ನಾಟಕತ್ವದ ಕಚ್ಚು, ಎರಡೂ ಸಲದ ಸಮ್ಮೇಳನಗಳು ಅತ್ಯಂತ ಯಶಸ್ವಿಯಾಗುವಂತೆ ಮಾಡಿತು; ವಿರೋಧಿಗಳ ಮನಸ್ಸಿನಲ್ಲಿ ಬಳ್ಳಾರಿ ತಮಗೆ ದಕ್ಕುವಂತಹದಲ್ಲ ವೆಂಬುದನ್ನು ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿತು.

ಇಂದು ಬಳ್ಳಾರಿ ಸಂಪೂರ್ಣ ಕನ್ನಡಿಗರದಾಗಿದೆ. ಎಂತಲೇ ಹಿಂದಿನ ಕನ್ನಡ ವಿರೋಧಿಗಳೂ ಇಂದು ವಿರೋಧವನ್ನು ಬಿಟ್ಟುಕೊಟ್ಟು ಸಮ್ಮೇಳನದ ಸ್ವಾಗತಮಂಡಲಿಯಲ್ಲಿ ಸೇ ಕೊಂಡು ಸಹಕಾರನೀಡಲು ಸಿದ್ಧರಾಗಿದ್ದಾರೆ. ಆದುದರಿಂದಲೇ ಈ ಸಲದ ಸಮ್ಮೇಳ ಸಮಾರಂಭ, ಇನ್ನೂ ಯಶಸ್ವಿಯಾಗಿ ನೆರವೇರಬಹುದೆಂದು ನಿರೀಕ್ಷಿಸಿದರೆ ಅದು ತಪ್ಪಲ್ಲ.

ಸ್ಥಾನಮಾಹಾತ್ಮ್ಯ

ಬಳ್ಳಾರಿ ಕನ್ನಡಸಂಸ್ಕೃತಿಯಿಂದಲೇ ಕಳೆಗೊಂಡ ನಗರ. ಅನೇಕ ಹಳಗನ್ನಡ ಕಾವ್ಯಗಳೂ, ವೀರಶೈವ ವಚನಗ್ರಂಥಗಳೂ ಎಲ್ಲಕ್ಕಿಂತ ಮೊದಲು ಅಚ್ಚುಗೊಂಡು ಬೆಳಕನ್ನ ಕಂಡುದು ಬಳ್ಳಾರಿಯ ಸೆಟ್ಟರ ಪ್ರಯತ್ನದಿಂದಲೇ! ಕರ್ನಾಟಕದ ಆಧುನಿಕ ರಂಗಭೂಮಿಯನ್ನ ಪ್ರಾರಂಭಿಸಿದ ಸನ್ಮಾನ ಬಳ್ಳಾರಿಯ ನಾಟಕಾಭಿಮಾನಿಗಳಿಗೇ ಸಲ್ಲಬೇಕು. ದಿವಂಗತ ಕೃಷ್ಣಮಾಚಾರ್ಯರು ಆಂಧ್ರನಾಟಕ ಪಿತಾಮಹರೆನಿಸಿಕೊಂಡಂತೆ, ಕರ್ನಾಟಕ ನಾಟಕಕ್ಕೂ ಪಿತಾಮಹರೆನಿಸಿಕೊಳ್ಳಬಲ್ಲ ಚರಿತ್ರೆಯನ್ನು ಪಡೆದಿದ್ದಾರೆ. ವಿಜಯನಗರದ ಭವ್ಯಸಾಮ್ರಾಜ್ಯದ ಸುಪ್ತವೈಭವದಲ್ಲಿ ಬಾಳುತ್ತಿರುವ ಬಳ್ಳಾರಿಯ ನಾಗರಿಕರು, ಉದಾರರು; ರಸಿಕರು, ವಿದ್ಯಾವಿಲಾಸಿಗಳು. ಒಂದು ನಾಡಹಬ್ಬವನ್ನು ಮಾಡಿದರೂ ವೈಭವ-ವಿಜೃಂಭಣೆಗಳಿಂದ ಮಾಡುವವರು. ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿಯೂ ರಾಜವೈಭವದ ಗಂಭೀರಸೌಂದರ್ಯವನ್ನು ಬಯಸುವವರು. ಎಂತಲೇ ೧೯೨೬ರ ಸಮ್ಮೇಳನ ಕಾಲದಲ್ಲಿ, ಮೈಸೂರು ರಾಜಮನೆತನಕ್ಕೆ ಸಂಬಂಧಿಸಿದವರಾದ ಕವಿ ಲಿಂಗರಾಜ ಅರಸರನ್ನು ಬರಮಾಡಿಕೊಂಡಿದ್ದರು; ೧೯೩೮ರ ಸಮ್ಮೇಳನ ಕಾಲದಲ್ಲಿ ಸೊಂಡೂರು ಮಹಾರಾಜರನ್ನು ಉದ್ಘಾಟಕರನ್ನಾಗಿ ಬರಮಾಡಿಕೊಂಡು, ಆನೆಯ ಮೇಲಿನ ಅವರ ಮೆರವಣಿಗೆಯಿಂದ, ಸಮ್ಮೇಳನಕ್ಕೊಂದು ಶ್ರೀಮಂತಿಕೆಯ ಸೊಗಸನ್ನು ತಂದುಕೊಟ್ಟಿದ್ದರು. ಈಗ ಕೂಡ ನಮ್ಮ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರು ಸಮ್ಮೇಳನದ ಉದ್ಘಾಟಕರಾಗಿ ಬಳ್ಳಾರಿಗೆ ದಯೆಮಾಡಿಸಲಿರುವರು. ಅಲ್ಲಿಯ ನಾಗರಿಕರ ಅಭಿರುಚಿ-ಅಪೇಕ್ಷೆಗಳಿಗನುಸಾರವಾಗಿ, ರಾಜಸದೃಶ—ಗಜಾರೋಹಿತ—ಮೆರವಣಿಗೆಯ ಸಂರಭವೂ ನಡೆಯಲಿದೆ.

ಉದ್ಘಾಟಕರ ಆಯ್ಕೆಯ ಔಚಿತ್ಯ

ಉದ್ಘಾಟಕರ ಆಯ್ಕೆ, ಅವರ ವಿಜೃಂಭಣೆಯ ಮೆರವಣಿಗೆ ಇವುಗಳನ್ನು ವಿರೋಧಿಸಿ ಆಡಿದ, ಆಡುತ್ತಿರುವ ಮಾತುಗಳು ಅಲ್ಲಿ ಇಲ್ಲಿ ಕೇಳುತ್ತಿವೆ; ಆದರೆ ಈ ವಿರೋಧಭಾವ ಇಂದಿನ ಜೀವ್ಯ ರಾಜಕೀಯವಾದಿಗಳಿಗೆ ಮಾತ್ರ ಸಂಬಂಧಿಸಿದುದು. ಅವರು ಕೂಡ ಸ್ವಲ್ಪ ವಿವೇಕಬುದ್ಧಿಯಿಂದ ವಿಚಾರಮಾಡಿದರೆ, ಇಂತಹ ವಿರೋಧಕ್ಕೆ ಕಾರಣವೇನೂ ಇಲ್ಲವೆಂಬುದು ಗೊತ್ತಾಗುವುದು.

ಮಾನ್ಯ ಜಯಚಾಮರಾಜ ಒಡೆಯರನ್ನು ಮಹಾರಾಜರೆಂದೋ, ರಾಜ್ಯಪಾಲರೆಂದೋ—ಕೇವಲ ಅಧಿಕಾರ ದೃಷ್ಟಿಯಿಂದಲೇ ನಾವು ನೋಡಲಾಗದು. ಕನ್ನಡ ಸಾಹಿತ್ಯದ ಸಂವರ್ಧನೆಗಾಗಿ—ಇನ್ನಾರಿಂದಲೂ ಅಸಾಧ್ಯವಾದ—ಮಾಡಿದ ಮಹಾಕಾರ್ಯವನ್ನು ನಾವು ಚೆನ್ನಾಗಿ ಗಮನಿಸಬೇಕು. ಭಾರತದ ಯಾವ ಪ್ರಾದೇಶಿಕ ಭಾಷೆಯಲ್ಲಿಯೂ—ಮೊತ್ತದಲ್ಲಿ—ನೋಡಲು ಸಿಕ್ಕದಂತಹ ಪ್ರಾಚೀನ ಗ್ರಂಥಗಳನ್ನು ತಜ್ಞರಿಂದ ಭಾಷಾಂತರಿಸಿ ಪ್ರಕಟಿಸಿ, ಕನ್ನಡಗ್ರಂಥ ಭಾಂಡಾರದ ಸಿರಿವಂತಿಕೆಯನ್ನು ಇವರು ಹೆಚ್ಚಿಸಿದ್ದಾರೆ. ಇದಕ್ಕಾಗಿ ಕನ್ನಡಿಗರೆಲ್ಲರೂ ಶ್ರೀ ಜಯಚಾಮರಾಜ ಒಡೆಯರಿಗೆ ತಮ್ಮ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಬೇಕು. ಅದರಲ್ಲಿಯೂ ಸಂಸ್ಕೃತಿಯ ಉಪಾಸಕರಾದ ಕನ್ನಡ ಸಾರಸ್ವತಕುಲ, ತನ್ನ ಕೃತಜ್ಞತೆಯನ್ನು ಸಲ್ಲಿಸಲೇಬೇಕು. ಬಳ್ಳಾರಿಯ ಮಹಾಜನರು, ಈಗ ಶ್ರೀ ಜಯಚಾಮರಾಜ ಒಡೆಯರವರನ್ನು ಉದ್ಘಾಟಕರನ್ನಾಗಿ ಬರಮಾಡಿಕೊಂಡು, ಅಂತಹ ಕೃತಜ್ಞತೆಯ ಸಲುವಳಿಗೆ ಸುಯೋಗವನ್ನು ಒದಗಿಸಿಕೊಟ್ಟಿದು ತುಂಬ ಔಚಿತ್ಯಪೂರ್ಣವೆನಿಸುವ ಸಂಗತಿ. ಅವರ ಕರ್ತವ್ಯಜಾಗೃತಿಯನ್ನು ನಾವು ಮನವಾರೆ ಕೊಂಡಾಡುತ್ತೇವೆ.

ಕಾಲೋಚಿತವಾದ ಅಧ್ಯಕ್ಷರ ಆಯ್ಕೆ

ಶ್ರೀಮಾನ್ ವಿನಾಯಕ ಕೃಷ್ಣ ಗೋಕಾಕ ಅವರಂತಹವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ದುದು ಸಂತೋಷದ ಸಂಗತಿ. ಶ್ರೀ. ಗೋಕಾಕ ಅವರ ಸಾಹಿತ್ಯಾಭ್ಯಾಸ—ಲೋಕಾನುಭವಗಳು ಅಸಾಧಾರಣವಾದುವು; ಅಲ್ಲದೆ ಸ್ವತಃ ಸಹೃದಯಂವದ ಸಾಹಿತ್ಯಿಕರು, ಸೂಕ್ಷ್ಮ ವಿಮರ್ಶಕರು, ತತ್ತ್ವನಿಷ್ಠರು, ಸಂಯಮಮೂರ್ತಿಗಳು. ವ್ಯಕ್ತಿಯ ಮತ್ತು ಸಮಾಜದ ಗುರಿ ನಿರಿಗಳನ್ನು ಕುರಿತು, ವಾಸ್ತವ ಆದರ್ಶಗಳ ಎರಡೂ ದೃಷ್ಟಿಯಿಂದಲೂ ವಿಚಾರಮಾಡುವವರು. ಎಲ್ಲಿ ಹೋದಲ್ಲಿಯೂ ಕನ್ನಡದೇವಿಯ ವಿಜಯಧ್ವಜವನ್ನು ನಿಲ್ಲಿಸಿ ಬರುವ ಅಭಿಮಾನಿಗಳಾದ ಸೇನಾನಿಯಿವರು.

ಭಾರತದ ಸ್ವಾತಂತ್ರ್ಯದೊಂದಿಗೆ ನಾವೆಲ್ಲ—ಅನಿವಾರ್ಯವಾಗಿ—ನೂತನ ವಿಚಾರಪ್ರಪಂಚದಲ್ಲಿ ಜೀವಿಸಬೇಕಾಗಿದೆ. ಹಳೆಯ ವಿಚಾರಗಳನ್ನೇ ಮೈಗೂಡಿಸಿಕೊಂಡಿರುವ ಹಿರಿಯರು ನಮ್ಮ ಸಮಾಜದಲ್ಲಿ ಅಧಿಕಾರಸ್ಥಾನದಲ್ಲಿದ್ದಾರೆ. ಹೊಸ ವಿಚಾರಗಳಿಗೆ ಮನಸೋತು ಹಿರಿಯರ ವಿರುದ್ಧ ಬಂಡಾಯ ಹೂಡಬೇಕೆನ್ನುವ ಉತ್ಸಾಹಶಾಲಿಗಳಾದ ತರುಣರೂ ನಮ್ಮ ಸಮಾಜದಲ್ಲಿ ಇದ್ದಾರೆ. ಈ ಹಿರಿಯರ ಅಧಿಕಾರ, ತರುಣರ ಉತ್ಸಾಹ ಇವುಗಳ ಹಿಂದೆ ಸುದುಗಿರುವ ಅವಿವೇಕ ಅವಿಚಾರ, ಉಪಯುಕ್ತತೆ-ನಿರುಪಯುಕ್ತತೆ ಇವುಗಳನ್ನು ಕಂಡುಹಿಡಿಯಬೇಕೆನ್ನುವವರಿಗೆ ಒಂದು ಬಗೆಯ ಸಮನ್ವಯ ದೃಷ್ಟಿ ಬೇಕಾಗುತ್ತದೆ. ಶ್ರೀಮಾನ್ ಗೋಕಾಕ ಅವರು ತಮ್ಮ ಇದುವರೆಗಿನ ಜ್ಞಾನ ಕಲೆಗಳ ಉಪಾಸನೆಯಿಂದ, ಆ ಬಗೆಯ ಸಮನ್ವಯದೃಷ್ಟಿಯನ್ನು ಪಡೆದುಕೊಂಡವರಾಗಿದ್ದಾರೆ ಇವರ ಹಿರಿಯರ ಅಧಿಕಾರ, ತರುಣರ ಉತ್ಸಾಹ ಇವುಗಳಲ್ಲಿ ಸಾಮರಸ್ಯ ಸಾಧಕಾರಗಳನ್ನು ಉಂಟುಮಾಡಿಕೊಟ್ಟಾರೆ, ನಮ್ಮ ಸಾಹಿತ್ಯಪ್ರಪಂಚದಲ್ಲಿಯ ನೀರಸತೆ ನೈಷ್ಕರ್ಮ್ಯಗಳೂ, ಕಸುಕು-ಕುತಂತ್ರಗಳೂ, ಕಸ-ಕೊಳೆಗಳೂ ಎಷ್ಟೋ ಕಡಿಮೆಯಾದಾವು ಶ್ರೀಮಾನ್ ಗೋಕಾಕ ಅವರಿಗೆ ಹಿರಿಯರ ಅಧಿಕಾರವೂ ಇದೆ; ತರುಣರ ಉತ್ಸಾಹವೂ ಇದೆ. ಎರಡನ್ನೂ ಪದುಪಯೋಗ ಮಾಡುವ ಸಂಯಮಬುದ್ಧಿಯೂ ಇದೆ ಇವರ ಅಧ್ಯಕ್ಷತೆ, ನಮ್ಮ ಸಾಹಿತ್ಯದ ಶುಭಭವಿಷ್ಯಕ್ಕೆ ಕಾರಣವಾಗಲಿ!

ಜಯಂತಿಗೆ ಸಹಾಯಧನ

ತನ್ನ ಗಂಭೀರವಿಚಾರಧಾರೆಯ ಮೂಲಕ, ಜಯಂತಿ ಇದುವರೆಗೂ ಜನಸಾಮಾನ್ಯರ ಪೋಷಣೆಯಿಂದ ದೂರವಾಗಿಯೆ ಉಳಿದಿದೆ ಆದರಿಂದ 'ಜಯಂತಿ' ಯಾವಾಗಲೂ ಆರ್ಥಿಕ ಸಂಕಟ ಎದುರಿಸುತ್ತಲೇ ಮುಂದುವರಿಯಬೇಕಾಗಿದೆ ಜಯಂತಿಯು ಅಸ್ತಿತ್ವದ ಅಗತ್ಯವನ್ನರಿತ ಕೆಲವು ಮಹನೀಯರು, ಅಪೂರ್ವವಾಗಿ ಆಗಾಗ ಸಹಾಯಧನ ಸಲ್ಲಿಸುತ್ತಿರುತ್ತಾರೆ. ಅವರ ವಿಶ್ವಾಸ—ಔದಾರ್ಯಗಳಿಗಾಗಿ 'ಜಯಂತಿ' ತನ್ನ ಹೃತ್‌ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುವುದು.

ಸದ್ಯ ಸಹಾಯಧನ ಸಲ್ಲಿಸಿದವರು:

೧ ಶ್ರೀಮತ್ ಪರಮಪೂಜ್ಯ ಉಡುಪೀ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ್ವರತೀರ್ಥ ಶ್ರೀಪಾದಂಗಳವರು. ಎರಡನೆಯ ಸಲ ೫೫ ರೂ. ಗಳನ್ನು ಪ್ರಸಾದರೂಪವಾಗಿ ದಯಪಾಲಿಸಿದ್ದಾರೆ.

೨ ಡಾ ರಂ. ಶ್ರೀ. ಮುಗುಳಿ ಎಂ. ಎ, ಡಿ. ಲಿಟ್. ಅವರು, ಪ್ರತಿ ವರ್ಷದಂತೆ ಈ ಸಲವೂ ೧೦ ರೂಪಾಯಿಗಳನ್ನು ಕಳುಹಿಸಿದ್ದಾರೆ.

೩ ಪುಣೆಯಲ್ಲಿಯ ಜಯಂತಿಯ ಹಿತಚಿಂತಕರೊಬ್ಬರು, ಅಜ್ಞಾತರಾಗಿರಲು ಬಯಸಿ, ೫ ರೂ. ಗಳನ್ನು ಕಳುಹಿಸಿದ್ದಾರೆ.

—ಸಂಪಾದಕರು

ನಾಡನಡೆ

ಕನ್ನಡಕ್ಕೆ ಅಗತ್ಯವಿದ್ದವರು ಕಳಿಂಗಕ್ಕೆ ಹೊರಟರು.

ಧಾರವಾಡ ಆಕಾಶವಾಣಿ ಕೇಂದ್ರವು ಪ್ರಾರಂಭವಾದಂದಿನಿಂದಲೂ ಅದರ ಸಂಗೀತ ಶಾಖೆಯನ್ನು ಶ್ರೀಮಾನ್ ದೇಶಪಾಂಡೆ ಗುರುರಾಯರು ಹಿರಿಯರಾಗಿ ನೋಡಿಕೊಳ್ಳುತ್ತ ಬಂದಿರುವರು. ಮೊದಲಿನ ಕೆಲವು ವರ್ಷ ಅವರು ಆ ಶಾಖೆಯ ಹಿರಿಯ ಕಲಾವಿದರೆಂದು ಕೆಲಸ ಮಾಡಿದರು. ತೀರ್ಪೀಚೆಗಿನ ಹೊಸ ವ್ಯವಸ್ಥೆಯಲ್ಲಿ, ಸಂಗೀತ ಶಾಖೆಯ ನಿಯಂತ್ರಕರೆಂದು ಕೆಲಸ ಮಾಡುತ್ತಿದ್ದರು. ಆದರೆ ಅವರಿಗೀಗ ವರ್ಗವಾದುದರಿಂದ, ಕರ್ನಾಟಕವನ್ನು ಬಿಟ್ಟು ಕಳಿಂಗ—ಎಂದರೆ ಒಡಿಸಾ—ದೇಶದ ಕಟಕ ಆಕಾಶವಾಣಿ ಕೇಂದ್ರಕ್ಕೆ ಹೊರಟಿದ್ದಾರೆ.

ಸರಕಾರದ ನೌಕರರೆಂದ ಮೇಲೆ, ಶ್ರೀ. ದೇಶಪಾಂಡೆಯವರು ಸರಕಾರದ ಆಜ್ಞೆಯಂತೆ ನಡೆದುಕೊಳ್ಳಲೇಬೇಕು; ಆದರೆ ಸರಕಾರ ತನ್ನ ಯಾವ ಅನುಕೂಲಕ್ಕಾಗಿ ಅವರನ್ನು ಇಲ್ಲಿಂದ ವರ್ಗ ಮಾಡಿದೆಯೋ ಏನೋ! ಈ ಬದಲಿನಿಂದ ಸರಕಾರವು ಶ್ರೀಮಾನ್ ಗುರುರಾಯರಿಂದ, ಈಗಿಗಿಂತ ಹೆಚ್ಚಿನ ಪ್ರಯೋಜನವನ್ನೇನೂ ಪಡೆಯಲಾರದೆಂದು ನಮ್ಮ ಎಣಿಕೆ.

ಶ್ರೀಮಾನ್ ಗುರುರಾಯರು ಕನ್ನಡಿಗರು; ಉಡಿಯಾ ಭಾಷೆಯನ್ನು ಕಿವಿಯಿಂದ ಕೇಳಿಯೂ ಅರಿತಿರಲಾರರು. ಸಂಗೀತಕ್ಕೂ, ಭಾಷೆಗೂ ಏನು ಸಂಬಂಧವೆಂದು ಕೆಲವರು ಪ್ರಶ್ನಿಸಬಹುದು; ಆದರೆ ಶ್ರೀ. ಗುರುರಾಯರು ಧಾರವಾಡ ಕೇಂದ್ರದಲ್ಲಿ ಮಾಡಿದ ವಿವಿಧ ಮುಖದ ಕಾರ್ಯವನ್ನು ನೋಡಿದವರಿಗೆ, ಇಷ್ಟೊಂದು ಕಾರ್ಯವನ್ನು ಸರಭಾಷೆಯ ಕೇಂದ್ರದಲ್ಲಿ ಅವರು ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಯಾರೂ ಹೇಳಬಹುದು.

ಶ್ರೀ. ಗುರುರಾಯರು ಔತ್ತರೇಯ ಸಂಗೀತದಲ್ಲಿ ತಜ್ಞರೆಂತೂ ಅರಿಯೆ; ಆದರಂತೆ ಕರ್ನಾಟಕ ಸಂಗೀತ ಪದ್ಧತಿಯಲ್ಲಿಯೂ ಪ್ರೌಢಿಮಭಿರುಚಿಗಳುಳ್ಳವರು. ಅವರು ಬರಿಯೆ ಗಾಯಕರಷ್ಟೇ ಅಲ್ಲ; ಗಾಯನಶಾಸ್ತ್ರ ವಿಚಾರದಲ್ಲಿಯೂ ಪರಿಣತರು. ಅಲ್ಲದೆ ಕನ್ನಡ ಸಾಹಿತ್ಯವನ್ನೂ ಚೆನ್ನಾಗಿ ಪರಿಚಯ ಮಾಡಿಕೊಂಡವರು. ಆದುದರಿಂದಲೇ ನಾವು, ಧಾರವಾಡದ ಆಕಾಶವಾಣಿಯಿಂದ ಅವರ ಸಂಗೀತ ಕೇಳಿದ್ದೇವೆ; ಪ್ರಾಚೀನ ಕಾವ್ಯಗಳ ಗಮಕ ಕೇಳಿದ್ದೇವೆ; ಶರಣರ ವಚನ, ದಾಸರ ಕೀರ್ತನಗಳನ್ನು ಕೇಳಿದ್ದೇವೆ; ಸಂಗೀತ ಶಾಸ್ತ್ರ ವಿಷಯಕ ಭಾಷಣಗಳನ್ನು ಕೇಳಿದ್ದೇವೆ. ಸಂಗೀತ ಪಾಠಗಳನ್ನು ಕನ್ನಡ ಭಾಷೆಯಲ್ಲಿಯೆ ಆಲಿಸಿದ್ದೇವೆ; ಗೀತಮಾಲಾ ನಾಟಕಗಳನ್ನು ನಿರ್ಗ್ರಹಣ ಮಾಡಿದುದನ್ನೂ ಅರಿತಿದ್ದೇವೆ. ತನ್ನ ಭಾಷೆ ಬಾರದ ಈ ವಿದ್ವಾಂಸರಿಂದ—ಪಾಪ, ಕಟಕದ ಆಕಾಶವಾಣಿಕೇಂದ್ರವೂ ಒಡಿಸಾ ರಾಜ್ಯದ ಜನತೆಯೂ ಹೆಚ್ಚಿನ ಲಾಭವನ್ನು ಪಡೆಯಬಹುದೆ? ಸರಿ, ಅವರಿಗೆ ಹೆಚ್ಚಿನ ಲಾಭವಿಲ್ಲ; ಕನ್ನಡಿಗರಿಗೆ ಮಾತ್ರ ಇವರಿಂದ ಸಲ್ಲುತ್ತಿದ್ದ ವಿವಿಧ ಮುಖದ ಕಲಾಸೇವೆಯ ಭಾಗ್ಯ ತಪ್ಪಿಹೋಯಿತು. ಈ ಬಗೆಯ ಬದಲಾವಣೆಗಳಿಂದ ಸರಕಾರ, ಜನತೆಯ ಅನುಕೂಲಗಳನ್ನೇನು ನೋಡಿದಂತಾಯಿತು?

ಇನ್ನು ಮೇಲೆ ಧಾರವಾಡಕ್ಕೆ ಬರಲಿರುವ ಸಂಗೀತಶಾಖೆಯ ನಿಯಂತ್ರಕರು, ಶ್ರೀ. ಗುರುರಾಯರಂತೆಯೆ ಕನ್ನಡಭಾಷೆಯನ್ನು ಬಲ್ಲವರಿದ್ದು. ಅವರಂತೆಯೇ ವಿವಿಧಮುಖದಿಂದ ಜಾಣ್ಮೆ ತೋರಿಸಿ, ಕನ್ನಡಿಗರನ್ನು ತಣಿಸಬಲ್ಲವರಾಗಿದ್ದರೆ, ಅದು ಸಂತೋಷದ ವಿಷಯ. ಅದಿಲ್ಲದೆ 'ಇಲ್ಲಿ ಇವರ ಪ್ರಯೋಜನ ಕಡಮೆ, ಅಲ್ಲಿ ಅವರ ಪ್ರಯೋಜನ ಕಡಮೆ'—ಹೀಗಾದರೆ, ಸರಕಾರಕ್ಕೂ ಒಳ್ಳೆಯ ಹೆಸರು ಬಾರದು; ಜನತೆಯೂ ವೇಚಾಡಬೇಕಾಗುವುದು.

ಭಾರತರಾಷ್ಟ್ರಕ್ಕೆ ಅನ್ಯರ ಭಾಷೆ ರಾಷ್ಟ್ರಭಾಷೆಯೆ?

ಭಾರತದ ರಾಷ್ಟ್ರೀಯ ಭಾಷೆ ಹಿಂದಿಯೆ ಇರಬೇಕೆಂಬುದು ಈಗಾಗಲೇ ನಿರ್ಣಯವಾದ ಮಾತು. ಭಾರತದ ರಾಷ್ಟ್ರೀಯ ಮಹಾಸಭೆಯು ಎಂದೋ ಈ ಮಾತನ್ನು ಒಪ್ಪಿಕೊಂಡಿದೆಯಲ್ಲದೆ, ಸರ್ವಪಕ್ಷದ ಧುರೀಣರೂ ಕೂಡಿ ಸಿದ್ಧಪಡಿಸಿದ ಭಾರತದ ರಾಜ್ಯ ಘಟನೆಯೂ ಈ ಮಾತನ್ನು ಎತ್ತಿ ಹಿಡಿದಿದೆ. ಹಿಂದಿಯೆ ರಾಷ್ಟ್ರಭಾಷೆಯಾಗಬೇಕೆಂಬುದಾಗಿ ಹಿಂದೀ ಭಾಷಾಭಾಷಿಗಳೇನೂ ಒತ್ತಾಯ ಪಡಿಸಿಲ್ಲ. ಹಿಂದೀ ಭಾಷೆಯನ್ನಾಡುವ ಬಹುಸಂಖ್ಯಾತ ಜನರು ಬ್ರಿಟಿಷರ ಆಡಳಿತದಲ್ಲಿಯೇ ಅದಕ್ಕಿದ್ದ ಸ್ಥಾನ-ಮಾನಗಳು, ಆಂತರ ರಾಜ್ಯಗಳ ಪರಸ್ಪರ ಸಂಬಂಧಗಳನ್ನು ಹೊಂದಿಸಲೇಕಾದ ಭಾಷಾ ಮಾಧ್ಯಮ—ಇನ್ನೆಲ್ಲವುಗಳನ್ನೂ ವಿಚಾರ ಮಾಡಿ, ಮಹಾತ್ಮಾ ಗಾಂಧಿಯವರೇ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿಸಬೇಕೆಂದು ಹೇಳಿದರು. ಅವರ ಎಲ್ಲ ಉದಾದೇಶಗಳಂತೆ ಈ ವಿಷಯವನ್ನೂ ರಾಷ್ಟ್ರಭಕ್ತರಾದ ಭಾರತೀಯರೆಲ್ಲರು ಸ್ವೀಕರಿಸಿದರು. ಅದಕ್ಕನುಗುಣವಾಗಿ ರಾಷ್ಟ್ರ-ರಾಜ್ಯಗಳ ಪ್ರಾಥಮಿಕ-ಮಾಧ್ಯಮಿಕ ಶಿಕ್ಷಣದಲ್ಲಿ ಹಿಂದೀ ಭಾಷೆಯು ಶಿಕ್ಷಣಕ್ಕೆ ಉಚಿತವಾದ ಅವಕಾಶವೂ ದೊರೆತಿದೆ.

ಇಷ್ಟೆಲ್ಲವಾದರೂ, ಅಂತರಿಕವಾದ ಸಂಕುಚಿತದೃಷ್ಟಿಯನ್ನು ಇರಿಸಿಕೊಂಡಿರುವ ಕೆಲವು ಜನ ಅಧಿಕಾರ ಪದಾರೂಢರೂ, ಧುರೀಣರೂ ಬ್ರುವರೂ ಹಿಂದಿಯನ್ನು ಒಲ್ಲದವರಾಗಿರುವರು. ದಕ್ಷಿಣಭಾರತದ ನಾಲ್ಕು ರಾಜ್ಯಸರಕಾರಗಳ ಮುಖ್ಯಮಂತ್ರಿಗಳೂ 'ಹಿಂದಿ ಬೇಡ. ಇಂಗ್ಲೀಷೇ ಇರಲಿ' ಎಂದು ನಿರ್ಣಯಿಸಿ ಪ್ರಕಟನೆ ಹೊರಡಿಸಿರುವುದು ಆಶ್ಚರ್ಯ-ವಿಷಾದಗಳ ಸಂಗತಿಯಾಗಿದೆ. ಇದರಲ್ಲಿ ಉಪಯುಕ್ತತೆಯ ವಿವೇಕಕ್ಕಿಂತ, ಸಂಕುಚಿತದೃಷ್ಟಿಯ ಅವಿವೇಕವೇ ಇದೆಯೆಂದು ಹೇಳಬಹುದು. ಏಕೆಂದರೆ ಭಾರತದಂತಹ ಸಂಸ್ಕೃತಿ ಸಂಪನ್ನ ರಾಷ್ಟ್ರವು, ಆತ್ಮಾಭಿಮಾನವನ್ನು ಮರೆತು, ತನ್ನನ್ನು ಗುಲಾಮ ವೃತ್ತಿಗೆ ನೂಕಿದ ಭಾಷೆಯನ್ನು, ಈಗಲೂ ತಲೆಯ ಮೇಲೆ ಹೇರಿಕೊಳ್ಳುವುದು ತೀರ ಅರಾಷ್ಟ್ರೀಯ ವಿಚಾರ.

ಇಂಗ್ಲಿಷ್ ಭಾಷೆ ಪರಿಪೂರ್ಣ ಭಾಷೆಯಾಗಿರಬಹುದು; ಜಾಗತಿಕ ವ್ಯವಹಾರದಲ್ಲಿ ಅದಕ್ಕೆ ವಿಶಿಷ್ಟಸ್ಥಾನವಿರಬಹುದು. ಅದುದರಿಂದಲೇ ಭಾರತದಿಂದ ಇಂಗ್ಲಿಷ್ ಭಾಷೆಯನ್ನೂ ಸಂಪೂರ್ಣ

ಹಿಮ್ಮರಿಸಬೇಕೆಂದು ಯಾರೂ ಹೇಳುವುದಿಲ್ಲ. ಇಂದು ಭಾರತವು ಜಗತ್ತಿನ ಎಲ್ಲ ರಾಷ್ಟ್ರಗಳೊಂದಿಗೆ ಸಂಬಂಧವನ್ನು ಇರಿಸಿಕೊಳ್ಳ ೇಕಾಗುವುದರಿಂದ, ಆ ಆ ರಾಷ್ಟ್ರಗಳ ಭಾಷೆಗಳಿಲ್ಲವನ್ನೂ ಭಾರತೀ- ಎರು ಕಲಿಯಬೇಕಾಗುವುದು. ಆದುದರಿಂದ ಇಂಗ್ಲಿಷಿನ ಉಪ- ಯುಕ್ತತೆಯನ್ನು ಅರಿತು ಅದಕ್ಕೂ ಸ್ಥಾನವನ್ನು ಕೊಡಲೇಬೇಕು ಇಂಗ್ಲಿಷಿಗೆ ಇಂದು ಒಂದು ಮಹತ್ತ್ವದ ಸ್ಥಾನವಿರಬಹುದಾದರೂ, ಬೇರೆ ಯಾವ ರಾಷ್ಟ್ರವೂ ಸ್ವಾಭಿಮಾನ ಸ್ವಶಕ್ತ್ಯಭಿಮಾನಗಳನ್ನು ಮರೆತು ಇಂಗ್ಲಿಷನ್ನು ತನ್ನ ರಾಷ್ಟ್ರಭಾಷೆಯನ್ನಾಗಿ ಮಾಡಿಕೊಂಡಿಲ್ಲ. ರಷಿಯಾ ದೇಶವು ತನ್ನ ಭಾಷೆಯಿಂದಲೆ ಜ್ಞಾನ-ವಿಜ್ಞಾನಗಳನ್ನು ಪಡೆದು ಪ್ರಪಂಚದಲ್ಲಿ ಮೇಲ್ಮೆಯನ್ನು ಪಡೆದು ನಿಂತಿದೆ. ಚೀನ-ಜಪಾನಗಳೂ ತಮ್ಮ ರಾಷ್ಟ್ರಭಾಷೆಯನ್ನು ಬಿಟ್ಟಿಲ್ಲ. ಬ್ರಿಟಿಷರ ನೆರೆಯಲ್ಲಿಯೇ ಇರುವ ಸ್ವೀಡನ್, ನಾರ್ವೇ, ಹಾಲಂಡ್, ಪೋರ್ತುಗಲ್ ಮೊದ- ಲಾದ ಚಿಕ್ಕ ಪುಟ್ಟ ರಾಷ್ಟ್ರಗಳೂ ಇಂಗ್ಲಿಷನ್ನು ಸ್ವೀಕರಿಸಿ ತಮ್ಮ ಭಾಷೆಯನ್ನು ತ್ಯಜಿಸಿಲ್ಲ. ಹೀಗಿರುವಾಗ, ಇಂಗ್ಲಿಷರಿಂದ ಸಾಕಷ್ಟು ಏಟುಗಳನ್ನು ತಿಂದ—ಈಗಲೂ ತಿನ್ನುತ್ತಿರುವ ಭಾರತೀಯರು, ಹಿಂದಿ ಬಿಟ್ಟು ಇಂಗ್ಲಿಷ್ ಭಾಷೆ-ಸಂಸ್ಕೃತಿಗಳಿಗೆ ಗುಲಾಮರಾಗಬೇಕೆ?

ಹಿಂದಿಯು ಏಕೆ ಬೇಡ?

ಇಂಗ್ಲಿಷಿನಷ್ಟು ಪರಿಪೂರ್ಣವಾದ ಭಾಷೆ ಹಿಂದಿಯು ಇಲ್ಲ ವಾದುದರಿಂದ ಅದು ಬೇಡವೆಂಬ ವಾದವನ್ನು ಅಲ್ಲಲ್ಲಿ ಕೇಳುತ್ತೇನೆ. ಹಾಗಾದರೆ ಬ್ರಿಟಿಷರಷ್ಟು ಭಾರತೀಯರು ರಾಜಕಾರಣದಲ್ಲಿ ಪರಿ- ಪೂರ್ಣರಲ್ಲವೆಂಬುದೂ ಅಷ್ಟೇ ನಿಜವಾದುದರಿಂದ, ಇಂಗ್ಲಿಷ್‌ವಾದಿ ಧುರೀಣರು, ತಮಗೆ ದೊರೆತಿರುವ ಅಧಿಕಾರಪೀಠಗಳಿಂದ ಕೆಳಗಿಳಿದು ಬ್ರಿಟಿಷರನ್ನೇ ಅಲ್ಲಿ ಕುಳ್ಳಿರಿಸಲು ಏಕೆ ಸಮ್ಮತಿಸಬಾರದು? ಸ್ವತಂತ್ರ ಭಾರತದ ಅಧಿಕಾರಗಳು ಮಾತ್ರ ಬೇಕು; ಆದರೆ ಸ್ವಾತಂತ್ರ್ಯಕ್ಕೆ ಅವಶ್ಯಕವಾದ ಸರ್ವತೋಮುಖವಾದ ಸ್ವರಾಷ್ಟ್ರಾಭಿಮಾನವು ಬೇಕಿಲ್ಲ! ಇದೆಲ್ಲವನ್ನೂ ನೋಡಿದರೆ, ಈ ಇಂಗ್ಲಿಷ್‌ವಾದಿ ಧುರೀಣರು, ರಾಷ್ಟ್ರಾಭಿಮಾನಕ್ಕಿಂತಲೂ ವೈಯಕ್ತಿಕ ಅನುಕೂಲತೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವವರೆಂದು ಯಾರೂ ಹೇಳಬಹುದಾಗಿದೆ.

ತಾವೀಗ ಇಂಗ್ಲಿಷನ್ನು ಕಲಿತಿದ್ದಾರೆ; ಹಿಂದಿ ಬರುವುದಿಲ್ಲ ಅಧಿಕಾರಪದಗಳು ಸಿಕ್ಕಬೇಕಾದರೆ ಹಿಂದಿ ಬೇಕು. ಆದುದರಿಂದ ಹಿಂದಿ ಬೇಡ, ಇಂಗ್ಲಿಷ್ ಇರಲಿ—ಎಂಬ ವಾರ್ತಮಾನಿಕ ಸ್ವಾರ್ಥ- ಭೂತವೇ ಈ ಇಂಗ್ಲಿಷ್‌ವಾದಿಗಳನ್ನು ಹಿಡಿದುಕೊಂಡಿದೆ. ಆದರೆ ಈ ಭೂತ ಭಾರತದ ಭವಿಷ್ಯಕ್ಕೆ ಕಿಲುಬು ಹಚ್ಚುವಂತಹದೆಂಬುದನ್ನು ಅವರು ಭಾವಿಸುತ್ತಲೇ ಇಲ್ಲ. ತಮ್ಮದೇನೋ ಆಗುವುದು ಆಗಿ ಹೋಗಿದೆ; ತಮ್ಮ ಮುಂದಿನ ಸಂತಾನವಾದರೂ ಸ್ವಾಭಿಮಾನಿಗಳಾಗಿ —ಶುದ್ಧ ರಾಷ್ಟ್ರೀಯಭಾವದವರಾಗಿ ಬಾಳಿದರೆ, ಅದು ಭಾರತಕ್ಕೆ ಭೂಷಣವಲ್ಲವೆ?

ಹಿಂದೀ ಬೇಡವೆನ್ನುವ ಕೆಲವರ ಅಭಿಪ್ರಾಯದ ಹಿಂದೆ, ದ್ರಾವಿಡ ಕಳಗಮ್ಮಿನವರ ರಾಷ್ಟ್ರವಿಘಾತದ ದುರ್ಭಾವನೆಯೂ ಹುದುಗಿಕೊಂಡಿದೆ. ವಿಶೇಷವಾಗಿ ಮದ್ರಾಸಿನ ಇಂಗ್ಲಿಷ್‌ವಾದಿಗಳಲ್ಲಿ ಈ ಭಾವನೆಯೇ ಹೆಚ್ಚಾಗಿ ಕಾರ್ಯ ಮಾಡುತ್ತಿದೆಯೆಂದು ಹೇಳಿದರೆ ಅದು ತಪ್ಪಿಸಿಸದು. ಅವರ ಅಭಿಪ್ರಾಯವನ್ನು ಇಂದಿನ ತಮ್ಮ ಅನು- ಕೂಲಕ್ಕಾಗಿ ಕರ್ನಾಟಕ, ಆಂಧ್ರ, ಕೇರಳಗಳ ಇಂಗ್ಲಿಷ್‌ವಾದಿಗಳು ಎತ್ತಿ ಹಿಡಿಯುತ್ತಲಿದ್ದಾರೆ. ಇದಕ್ಕೆ ಪ್ರತ್ಯಕ್ಷ ಪ್ರಮಾಣವೆಂದರೆ ಕರ್ನಾಟಕ ಮತ್ತು ಕೇರಳಗಳ ಮುಖ್ಯಮಂತ್ರಿಗಳು, ಹಿಂದಿಯ ವಿಷಯದಲ್ಲಿ ಅಲ್ಲಲ್ಲಿ ಪ್ರಕಟಿಸಿರುವ ಅಭಿಪ್ರಾಯಗಳು. ಇವರಿಗೆ ಹಿಂದೀಭಾಷೆ ಭಾರತ ಸರಕಾರದ ಸಾಮಾನ್ಯಭಾಷೆಯೆಂಬುದು ಒಪ್ಪಿಗೆ; ಆದರೆ ತಮ್ಮ ಆಡಳಿತದಲ್ಲ—ಎಂದರೆ ಬೇಗನೆ—ಆಗಕೂಡ ದಂತೆ. ಇಂತಹ ಅಭಿಪ್ರಾಯದಲ್ಲಿ ಎಷ್ಟಾದರೂ ತತ್ತ್ವ-ತಥ್ಯಗಳು ಇವೆಯೆಂದು ಹೇಳಬಹುದೆ? ದೀರ್ಘದೃಷ್ಟಿಗಳಿವರು ಇಂದಿನ ತಮ್ಮ ವೈಯಕ್ತಿಕ ತೊಂದರೆಗಾಗಿ, ರಾಷ್ಟ್ರೀಯ ಆವಶ್ಯಕತೆಯನ್ನು ಮುಂದೆ ನೂಕಬೇಕೆನ್ನುವ ಸ್ವಾರ್ಥಿಗಳು. ಇಂತಹವರಿಂದ ರಾಷ್ಟ್ರವರ್ಧನೆಗಾ ಯಾವ ಧೈರ್ಯದ ಕಾರ್ಯಗಳಾದಾವು?

ಹಿಂದಿಯನ್ನು ಹಿಂದೆ ನೂಕಿ ಇಂಗ್ಲಿಷನ್ನೇ ಭಾರತೀಯರ ತಲೆಯ ಮೇಲೆ ಹೇರಬೇಕೆನ್ನುವವರು, ಎಷ್ಟೇ ದೊಡ್ಡವರೆನಿಸಿಕೊಂಡು ಬದುಕಿ ದ್ದರೂ, ಈಗ ಕಣ್ಣವರಾಗಿ ಮಾತನಾಡುತ್ತಿದ್ದಾರೆಂದು ಹೇಳುವಂತಿಲ್ಲ.

(ಕಳೆದ ಸಂಚಿಕೆಯ ಮುಂದುವರಿದ ಭಾಗ)

ಎಂದಾಡಿದಾಗ ಅತ "ಮಂಜೂ"—ಎಂದು ಕರೆದು ಬಿಸುಗು ಏನನ್ನೋ ಅಡಬಯಸಿದಾಗ, ಅಕೆ ಅತನ ಬಾಯನ್ನು ಯೋ ರೀತಿಯಲ್ಲಿ ಮುಚ್ಚಿಬಿಡುವುದೂ ಸಹಜಸುಂದರವಿದೆ. ಮುಂ ಅದೇ ರಾತ್ರಿ ಅತನು ಒರಗುತ್ತಿದ್ದಾಗ ಮಗ್ಗುಲಲ್ಲಿ ಇದ್ದ ಆಕೆ "ಎಷ್ ಶಾಂತವಾಗಿ ಮಗುವಿನ ಹಾಗೆ ಮಲಗಿದ್ದಾರೆ. ಇದೇ ನನ್ನ ಮಗ ವಲ್ಲವೇ?" ಎಂದಾತುವುದು ಆಳದಲ್ಲಿ ಹುದುಗಿದ್ದ—ಕತೆಯ ಹೃದಯ ವನ್ನು ಎತ್ತಿ ತೋರಿಸುತ್ತಿದೆ. ಬಹು ಮನೋಜ್ಞವಾದ ಭಾಗವಿದ ಉಪಸಂಹಾರದ ಮಧುರವಾದ ಸಾಗಿಗೆ ಎತ್ತಿ ತೋರಿದ ದೀ ದರ್ಶನವಿದು ಮುಂದೇನು—ಮಂಜುಳೆ ಸಂಕ್ರಮಣ ಕಾಲದ ತವರಿಗೆ ಕುಸುರಿಳ್ಳುಗಳನ್ನು ಕಳಿಸುವಾಗ—ತನ್ನ ತಾಯ್ತನದ ಸೂಚನೆಯನ್ನೂ ನಿಡಲು ಮರೆಯುಲಿಲ್ಲ. ವಿಚಾರವಂತ ರಂಗನಾ "ಮಂಜೂ ನಿಜವೇ?" ಎನ್ನುವುದು ಎದೆಯೊಳಗಿಂದ ಹೊರಡುವು ಸಾರಾದ ನೂರುಮಾತುಗಳ ಸಾರ!—

ತವರಿಗೆ ಹೋದ ಮಂಜುಳೆ ಮಗನೊಬ್ಬನನ್ನು ಹಡೆದ ಗಂತನಿಗೆ ಟ್ರಂಕ್‌ಕಾಲ್ ಮಾಡಿದಾಗ—ರಂಗನಾಥ ತಾನು ಕ್ಲಾರ್ಕ್ ಕಲಸದಿಂದ ಬಿಡುಗಡೆಯನ್ನೈದಿ, ಲೆಕ್ಚರರನಾದ ಬಗೆಯನ್ನು ಹೇಳ ವುದೂ—ಜತೆಜತೆಯಾಗಿ ಹೊಂದಿಸಿಲ್ಲುವ ಅನಂದದ ತನಿಯೊಗೆಗಳು

ಕಾಲ್-ನ ಕೊನೆಯಲ್ಲಾಕೆ "ಬಹಳ ಸಂತೋಷ. ಅಲ್ಲಿ ಕೊನೆಗೂ ನೀನೇ ಸೋತುಬಿಟ್ಟೆರಾ?" ಎಂದೆನ್ನುವಾಗ, ರಂಗನಾ "ಸರಿ ಸೋತದ್ದು ನಾವಿಬ್ಬರೂ! ಗೆದ್ದವನು ಅವನೇ ನಿನ್ನ ಸುಕು ಮಾರ" ಎಂದಾತುವ ಮಾತು - ಯಾರ ಗೆಲುವಿನ ಹೃದಯವನ್ನು ಬೆಳಗಿತೆಂದು ಹೇಳಲು ಅನಂದವಾಗುತ್ತಿದೆ!

ಅಂತೂ ಜಯಂತಿಯಲ್ಲಿ ಪ್ರಕಟಗೊಂಡ ಒಂದು ಉ ಕತೆಯಿದೆಂದೂ, ಮಾನಸಿಕ ವಿಶ್ಲೇಷಣ ಮೂಲವಾಗಿ ಹರಿದು ಬ ಒಂದು ಜೀವನದರ್ಶನವಿದೆಂದೂ—ಧಾರಾಳವಾಗಿ ಹೇಳಬಹುದು

ಸ್ವಾಗತವೀ ಕಥಾಕುಸುಮಕ್ಕೆ!

ವೈಭಿಚಾರ

(ಒಂದು ಸಣ್ಣಕತೆ)

ಶ್ರೀ. ರಾಘವೇಂದ್ರ ಖಾಸನೀಸ್, ಎಂ. ಎ, ಡಿಪ್. ಲಿಬ್.—ಎಚ್. ಪಿ. ಕಾಲೇಜು, ಪುಣೆ.

ಒಮ್ಮೊಮ್ಮೆ ಜೀವನದಲ್ಲಿಯ ವಾಸ್ತವ ಘಟನೆಗಳೇ ಅದ್ಭುತ ಕತೆಗಳಿಗಿಂತ ಅದ್ಭುತವಾಗಿರುವುವು. ಅಡ್ವೊಕೇಟ್ ಕೆ. ರಾಮನಾಥ ಅವರ ಮೇಲೆ ಬಂದ ದುರಾರೋಪನೆಂತಹದು! ಸ್ವಾಭಾವಿಕ ಸಾಕ್ಷ್ಯವು ಇಷ್ಟಿದೆ ಹೋಗಿದ್ದರೆ, ಖಂಡಿತವಾಗಿ ಅವರು ಸೆರೆಮನೆಯನ್ನು ಸೇರಬೇಕಾಗುತ್ತಿತ್ತು; ಆದರೆ ಅದು ತಪ್ಪಿತು.

ಮಳೆ ಇನ್ನೂ ಸುರಿಯುತ್ತಿತ್ತು. ಒಂದು ಬಗೆಯ ಜೊನ್ನು ವಾಸನೆ ಪ್ಲಾಟಫಾರ್ಮ್‌ನೆಲ್ಲ ತುಂಬಿತ್ತು. ಚರ್ಚ್‌ಗೇಟಿಗೆ ಹೋಗುವ ಲೋಕಲ್ ಗಾಡಿಯ ದಾರಿ ಕಾಯುತ್ತ, ಕ್ಷಣಕ್ಕೊಮ್ಮೆ ಪ್ಲಾಟಫಾರ್ಮಿನ ಮಧ್ಯದಲ್ಲಿ ತೂಗುಹಾಕಿದ ಗಡಿಯಾರದ ಕಡೆಗೆ ನೋಡುತ್ತ ಹೆಣ್ಣು ಗಂಡು—ಫ್ಲೋರೊಸೆಂಟ್ ಲೈಟಿನ ತಳದಲ್ಲಿ ನೆರೆದಿದ್ದರು. ರಾತ್ರಿ ಎಂಟೂಮುಕ್ಕಾಲು ಗಂಟೆಯಾದರೂ, ಎಂಟೂವರೆಯ ರೈಲಿನ ಸುಳಿವಿಲ್ಲ. ಹೊರಗೆ 'ಧೋ ಧೋ' ಎಂದು ಮಳೆ ಸುರಿಯುತ್ತಲೇ ಇದೆ; ಒಳಗೆ ಪ್ಲಾಟಫಾರ್ಮಿನ ಮೇಲೆಯೋ ಹೇಳತೀರದ ಸೆಖೆ! ಗಾಡಿ ಬರೀ ಹದಿನೈದು ನಿಮಿಷ ತಡವಾದದ್ದಕ್ಕೆ ಅಷ್ಟು ಜನ ಪ್ಲಾಟ್‌ಫಾರ್ಮನ್ನು ಬಿಗಿದು ತುಂಬಿದ್ದಾರೆ.

'ಧಡ, ಧಡಗ್, ಧಡ, ಧಡಗ್!'

ಒಂದೆಲ್ಲದಂತೆ ಮೂರು ಫಾಸ್ಟ್ ಟ್ರೇನುಗಳು, ಹೊರಗಿನ ಮಳೆ ಗಾಳಿಯ ದರಕಾರಿಲ್ಲದೆ, ಕಿಟಕಿ ಬಾಗಿಲುಗಳಿಗೆ ನೇತುಬಿದ್ದ ದುರ್ಭಿಲ ಪ್ಯಾಸಿಂಜರರ ಪರನೆ ಇಲ್ಲದೆ, ಭಯಾನಕವಾಗಿ ಕಿರುಚುತ್ತ ಅಲ್ಲೇ ಹಾಯ್ದುಹೋದುವು.

ಆದರೆ ಲೋಕಲ್ ಗಾಡಿ ಇನ್ನೂ ಇಲ್ಲ!

ಸಮಯವಾದಂತೆಲ್ಲ ಜನದಟ್ಟಣೆ ಹೆಚ್ಚತೊಡಗಿತ್ತು. ಗಂಡು ಹೆಣ್ಣು ಧಕ್ಕೆಮುಕ್ಕೆ ಹಾಕುತ್ತ, ಕೈಯಲ್ಲಿಯ ಛತ್ರಿಯನ್ನು ತಿವಿಯುತ್ತ, ಎಡವುತ್ತ, ನುಗಿಸುತ್ತ 'ಫೂಲು' ಇಳಿದು ಪ್ಲಾಟಫಾರ್ಮನ್ನು ತುಂಬತೊಡಗಿದ್ದರು. ಮೊದಲೇ ತೀರ ತೆಳ್ಳಗಿನ ಅರಿವೆಯನ್ನು ಅತಿ ವಿಳವಾಗಿ ಧರಿಸಿ, ವೈಯಾರ ಸಾಧಿಸುವ ಮುಂಬೈರಾಭೆಯರು, ಈಗ ಮಳೆಯಲ್ಲಿ ತಪ್ಪನೆ ತೊಯ್ದು ಆ ನಗರದ ಕಾಮುಕತೆಯ ಪ್ರತೀಕವಾಗಿ ನಿಂತಿದ್ದರು. ಇದೇ ಸಮಯವನ್ನು ಸಾಧಿಸಿ ಕಸುಬು ಕುದುರಿಸಲು ಹೊರಬಿದ್ದ ಕಸಬುಗಾರ್ತಿಯರಿಬ್ಬರು, ಕ್ಷಣಕ್ಷಣಕ್ಕೊಮ್ಮೆ ಎದೆಯ ಮೇಲಿನ ಸೆರಗನ್ನು ಜರಿಸುತ್ತ, ತಪ್ಪನೇತೊಯ್ದು ಹೋದ ಎದೆಯನ್ನು ಪ್ರದರ್ಶಿಸುತ್ತ, ಕಿಸಕಿಸಿ ನಗುತ್ತ ಪ್ಲಾಟಫಾರ್ಮಿನ ಮೇಲೆ ಚಕ್ಕರ್ ಹೊಡೆಯತೊಡಗಿದ್ದರು.

ಲೋಕಲ್‌ಗಾಡಿ ದೂರದಲ್ಲಿ ಬರತೊಡಗಿತ್ತು. ಅಷ್ಟರಲ್ಲಿ ಅವರಿಬ್ಬರ ದೃಷ್ಟಿ ತುಸುವೇ ದೂರ—ಏಕಾಕಿಯಾಗಿ ನಿಂತಿದ್ದ ತರುಣನ ಮೇಲೆ—ಬಿತ್ತು!

ಕಂಬಕ್ಕೆ ಆತುನಿಂತ ಅವನ ನಿಲುವು ಆಕರ್ಷಣೀಯವಾಗಿದ್ದರೂ, ಅವರನ್ನು ಮುಖ್ಯತಃ ಆಕರ್ಷಿಸಿದ್ದು ಅವನ ಮುಖ! ಆ ಮುಖವನ್ನು ನೋಡಿದ ಯಾರು ಬೇಕಾದವರೂ, ಅಲ್ಲಿ ಶ್ರೀಮಂತಿಕೆಯ ಕಳೆಯನ್ನು ಗುರುತಿಸಬಹುದಿತ್ತು. ಪ್ಲಾಟಫಾರ್ಮಿನ ಮೇಲೆ ಊಟ ಮಾಡುತ್ತ ಕುಳಿತವನನ್ನು ಎವೆಯಿಕ್ಕದೆ ನೋಡುತ್ತ—ಎಲ್ಲೇ ಎದುರಿನಲ್ಲಿ ಸತ್ತಾಡುವ ನಾಯಿಯಂತೆ ಅವನಿದಿರು ಅವರು ಹುತ್ತಾಡಿದರು. ಪಿಳುಗುಟ್ಟಿದರ, ನಕ್ಕರು, ಕೆಮ್ಮಿದರು! ಅವರನ್ನು ತಿರಸ್ಕರಿಸಿದ ದೃಷ್ಟಿಯಿಂದೊಮ್ಮೆ ನೋಡಿ — ಸಾಂಕೇತಿಕವಾಗಿಯೋ ಏನೋ ಎನುವಂತೆ—ಉಗುಳಿ, ಅವನು ಆಚೆಗೆ ಮುಖ ತಿರುವಿದ! ಅವರು ಬ್ಬರೂ ಸೋತರು; ಅವರಿಗೆ ಕೆನ್ನೆಯಮೇಲೆ ಬಿಗಿದಷ್ಟು ಅಪಮಾನವಾಗಬೇಕಿತ್ತು. ಆದರೆ ಸೂಳೆಗೆಲ್ಲಿಯ ಸೋಲು? ವೇಶ್ಯಾವೃತ್ತಿಗೆಲ್ಲಿ ನಾಚಿಕೆ?

ಅಷ್ಟರಲ್ಲಿ ಗಾಡಿಬಂತು. ಮತ್ತೆ ಬೇರೆ ಬೇಟೆಯನ್ನು ಹುಡುಕಲೆಂದು, ತೀರ ಕೆಳ್ಕಿರಿದು ತುಂಬಿದ್ದ ಒಂದು ಗಂಡುಸರ ಡಬ್ಬಿಯನ್ನು ಹತ್ತಿ ಅವರು ಹೋದರು.

ಅವನಿಗೂ ಆ ಗಾಡಿಯಿಂದಲೇ ಹೋಗಬೇಕಾಗಿತ್ತು; ಆದರೆ ಅವನ ಆಗಿನ ದೇಹಸ್ಥಿತಿ ಅದಕ್ಕೆ ತಡೆಯನ್ನು ತಂದಿತ್ತು. ತಡವಾದ್ದರಿಂದ ಗಾಡಿ ಕಿಕ್ಕಿರಿದು ತುಂಬಿ ಬಂದಿತ್ತು. ಸ್ಥಳ ದೊರೆಯದ್ದಕ್ಕೆ ಗಂಡುಸರು ಹೆಂಗುಸರ ಡಬ್ಬಿಯಲ್ಲಿ ಕೂಡ ಹೊಕ್ಕಿದ್ದರು. ಈ ನೂಕುನುಗ್ಗಲಲ್ಲಿ ತನಗೆಲ್ಲಿ ಸ್ಥಾನ?

ಅವನು ನಿಂತವ ನಿಂತೇ ಇದ್ದ. ಗಾಡಿ ಹೊರಟುಹೋಗಿ ಮುಕ್ಕಾಲು ಪಾಲು ಗದ್ದಲ ಕರಗಿಹೋಗಿತ್ತು. ಅದಾದ ನಂತರ ಬರುವ ಗಾಡಿ ಫಾಸ್ಟ್‌ಗಾಡಿಯಿದ್ದುದರಿಂದ, ಗದ್ದಲ ವಿಶೇಷವಿರಲಿಲ್ಲ. ಅದು ಬಾಂದ್ರಾಸ್ಟೇಶನ್‌ಬಿಟ್ಟರೆ, ಮರೀನ್‌ಲಾಯಿನ್ಸ್‌ನವರೆಗೆ ಎಲ್ಲಿಯೂ ನಿಲ್ಲುವಂತಿರಲಿಲ್ಲ. ಅರ್ಧಗಂಟೆಯ ಹಿಂದೆ ನಿಂತಂತೆ ಅವನು ಹಾಗೇ ನಿಂತಿದ್ದ. ತುಸುವೇ ಓರೆಮಾಡಿ ಹಾಕಿದ್ದ ಫೆಲ್ಟ್‌ಹ್ಯಾಟು ಮಳೆಯಿಂದ ತೊಯ್ದಿತ್ತು. ಕೈಗಳೆರಡನ್ನೂ ಕೋಟಿನ ಎರಡು ಕಿಸೆಗಳಲ್ಲಿ ಹಾಕಿ, ಮೇಲೆ ರೇನ್‌ಕೋಟು ಹೊದ್ದುಕೊಂಡು ಗಂಭೀರವಾಗಿ ಅವನು ನಿಂತಿದ್ದ. ಅರ್ಧಗಂಟೆಯಿಂದಲೂ ಅದೇ ಠೀವಿ, ಅದೇ ಭಂಗಿ! ಅವನು ಏನೋ ಯೋಚನೆಯಲ್ಲಿ ತೊಡಗಿದಂತಿತ್ತು,! ಫಾಸ್ಟ್‌ಟ್ರೇನು ಬಂದೆ ನಿಂತರೂ ಅವನಿಗೆ ಎಚ್ಚರವಿಲ್ಲ. "ಗಾಡಿ, ಬಾಂದ್ರಾದಿಂದ ಮರೀನ್ ಲಾಯಿನ್ಸ್‌ನ ವರೆಗೆ ಯಾವ ಸ್ಟೇಶನಿನಲ್ಲೂ ನಿಲ್ಲದೆ ಓಡುತ್ತದೆ" ಎಂದು ಲಾವುಡ್‌ಸ್ಪೀಕರ್ ಕೆರಚುತ್ತಿತ್ತು. ಒಮ್ಮೆಲೆ ಅವನಿಗೆ ಎಚ್ಚರವಾಯಿತು. ಫಾಸ್ಟ್‌ಗಾಡಿಯೆಂದ್ದುದರಿಂದ ಅಲ್ಲಿ ಏನೂ ಗದ್ದಲವಿರಲಿಲ್ಲ. ಅದರಲ್ಲೂ ಅವನದು ಫಸ್ಟ್‌ಕ್ಲಾಸ್ 'ಪಾಸು' ಇದ್ದುದರಿಂದ, ಎಳ್ಳಷ್ಟೂ ತೊಂದರೆಯಿರಲಿಲ್ಲ. ತನ್ನ ಇದಿರಿನಲ್ಲಿಯೇ ಇದ್ದ 'ಫಸ್ಟ್‌ಕ್ಲಾಸ್' ಕಂಪಾರ್ಟ್‌ಮೆಂಟನಲ್ಲಿ ಹೋಗಬೇಕೆಂದರೆ, ಹೊರಗೆ ಮಳೆ ಬೀಳುತ್ತಿದ್ದುದರಿಂದ ಅದರ ಬಾಗಿಲನ್ನು ಮುಂದೆ ಮಾಡಲಾಗಿತ್ತು. ಆ ಬಾಗಿಲನ್ನು ಸರಿಸಿ ಒಳಗೆ ಹೊಗಲಿಕ್ಕೆ ಕೂಡ ಆಗದ ತನ್ನ ದುಃಸ್ಥಿತಿಯನ್ನು ಕಂಡು ಮರುಗಿ, ಅವನು ಮಗ್ಗಲಿನ ಇನ್ನೊಂದು ಚಿಕ್ಕ ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟನ್ನು ಹೊಕ್ಕ. ಅಷ್ಟರಲ್ಲೇ ಗಾಡಿ ಬಿಟ್ಟಿತು.

ಕಂಪಾರ್ಟ್‌ಮೆಂಟು ಪೂರ್ತಿ ಖಾಲಿಯಿದ್ದಂತೆ ಕಾಣಿಸಿತು. ಕಿಟಕಿಯಿಂದ ಅವನು ಒಳಗೆ ಹೋಗಿ, ಕಾಜಿನ ಹಲಗೆಯಿಂದ ಬಂದು ಮಾಡಿದ ಕಿಟಕಿಗೆ ಹೊಂದಿ ಬೆಚ್ಚಗೆ ಕುಳಿತುಕೊಂಡ. ಕೈಗಳೆರಡೂ ಇನ್ನೂ — ಮುಂಚಿನಂತೆ–ಕೋಟಿನ ಕಿಸೆಗಳಲ್ಲಿಯೇ ಇದ್ದುವು. ಕಾಜಿಗೆ ಮುಖ ಹಚ್ಚಿ ಹೊರಗೆ ನೋಡಿದ: ಗಾಡಿ, ಬಾಂದ್ರಾ ತೀರಕಲನ್ನು ದಾಟುತ್ತಿತ್ತು. ಮಗ್ಗುಲಲ್ಲಿ ಇದ್ದ ಕಸಾಯಿಖಾನೆಯ ಹೊಲಸು ವಾಸನೆ ಗಾಡಿಯವರೆಗೂ ಹರಿದು ಬಂತು. ಮಳೆ ಇನ್ನೂ ಬರುತ್ತಿದ್ದುದರಿಂದ, ಹನಿಗಳು ಟಪಟಪನೆ ಕಾಜಿಗೆ ಬಡೆದು ನೀರು ಒಳಗೆ ಬರತೊಡಗಿತ್ತು. ಕಟ್ಟಗೆಯು ಇನ್ನೊಂದು ಹಲಗೆಯನ್ನು ಬಿಟ್ಟರೆ, ಕಿಟಕಿ ಬಂದಾಗಿ ನೀರು ಬರುವುದೂ ಕಡಿಮೆಯಾದೀತು.

ಅಷ್ಟರಲ್ಲಿ ಯಾರೋ ಕೆಮ್ಮಿದರು. ಅವನು ಕುಳಿತಲ್ಲಿಂದಲೇ ಗಕ್ಕನೇ ತಿರುಗಿದ. ತಿರುಗಿದ ರಭಸಕ್ಕೆ ರೇನ್‌ಕೋಟು ಸ್ವಲ್ಪ ಹಿಂದೆ ಸರಿದು ರೇಶ್ಮೆಯ ಶರ್ಟು ಹಾಗೂ ಉಲ್ಲನ್‌ಕೋಟು ಹೊರಗೆ ಕಾಣುವಂತಾದುವು. ಅಲ್ಲಿ ಕುಳಿತವರನ್ನು ನೋಡಿ ಅವನು ಹೌಹಾರಿದ.

ಉನ್ಮಾದಕಾರಿಯಾದ ಭಂಗಿಯಲ್ಲಿ ಕುಳಿತು ಅವನನ್ನು ನೋಡಿ ಪರಿಚಯಾತ್ಮಕ ಮುಗುಳ್ನಗೆ ನಕ್ಕ ಆ ಯುವತಿಗೆ ಸುಮಾರು ಇಪ್ಪತ್ತೊಂದರಷ್ಟು ವಯಸ್ಸಾಗಿರಬಹುದು. ಮುಖದಲ್ಲಿ ಸೌಂದರ್ಯ-ವಿರವಿದ್ದರೂ ಆಕರ್ಷಣೆಯಿತ್ತು. ಬಣ್ಣ ಬಡಿದಿದ್ದ ಮೂಲಕ ತುಟಿ ಕೆಂಪಗಾಗಿದ್ದುವು. ಪೌಡರ್ ಬಳಿದದ್ದರಿಂದ ಮುಖಕ್ಕೆ ಮೋಹಕತೆ ಬಂದಿತ್ತು. ಬಾಡೀಸ್‌ನಷ್ಟೇ ಚಿಕ್ಕದಾದ ರವಕೆಯನ್ನು ಅತೀ ಬಿಗಿಯಾಗಿ ತೊಟ್ಟು, ಟೊಂಕ ಕೊರಳು ಹಾಗೂ ಬೆನ್ನನ್ನು ಹಾಗೆಯೇ ಆಕರ್ಷಣೆಗಾಗಿ ಬಿಟ್ಟಿದ್ದಳು. ಉಟ್ಟ ಶುಭ್ರಬಣ್ಣದ ಸೀರೆ ಬಹಳ ತಿಳುವಾದ್ದರಿಂದ, ಒಳಗಿನ ಪರಕಾರದ ಮಡಿಕೆಗಳೂ ಸ್ಪಷ್ಟವಾಗಿ ಕಾಣುತ್ತಿದ್ದುವು. ಕಾಲಲ್ಲಿ ಶ್ಯೂಸ್, ಕೈಯಲ್ಲಿ Vanity Bag! ಆದರೆ ಅವಳ ಕಣ್ಣುಗಳು.....

ಎಷ್ಟು ಕಾಮುಕವಾಗಿದ್ದುವು ಅವು! ಏನೆಂಥ ಉನ್ಮತ್ತತೆಯಿತ್ತು ಅವುಗಳ ಭಾವದಲ್ಲಿ! ಆ ಕಣ್ಣುಗಳ ಸೆಳೆತದಿಂದ ಮೋಹಿತರಾಗದಿದ್ದವರು ಅಪರೂಪವಾಗಿರಬೇಕು. ಅವಳ ಆ ಮುಗುಳ್ನಗೆಯ ಜಾಲದಿಂದ ತಪ್ಪಿಸಿಕೊಂಡವರು ಬಹುಶಃ ಒಬ್ಬರೂ ಇರಲಿಕ್ಕಿಲ್ಲ!

ಅವಳು ಮತ್ತೆ ಅವನನ್ನು ಕಂಡು ಮುಗುಳ್ನಗೆ ನಕ್ಕಳು. ಆ ನಗೆ ಅವನನ್ನು ಸಹ ಅಧೀರನನ್ನಾಗಿ ಮಾಡಿತು. ಹಿಂದೆ ಎಂದೂ ನೋಡಿರದ ಇವಳು ಹೀಗೇಕೆ ಪರಿಚಯದ ನಟನೆ ಮಾಡುತ್ತಿದ್ದಾಳೆ? ಏನು, ನಿಜವಾಗಿಯೂ ಇವಳಿಗೆ ತನ್ನ ಪರಿಚಯವಿದೆಯೋ ಯಾರಿಗೆ ಗೊತ್ತು?

....ಮಳೆಯ ವೇಗ ಹೆಚ್ಚಿತ್ತು; ಗಾಳಿ ರೈಲನ್ನೇ ಹಾರಿಸುವ ರಭಸದಿಂದ ಬೀಸುತ್ತಿತ್ತು. ತತ್‌ಪರಿಣಾಮವಾಗಿ ಮಳೆಯ ನೀರು ಕಾಜಿನ ಹಲಗೆಯ ಸಂದಿನಿಂದ ಒಳಗೆ ನುಗ್ಗತೊಡಗಿತ್ತು. ಕಂಪಾರ್ಟ್‌ಮೆಂಟಿನ ತೆರೆದಿಟ್ಟ ಎರಡೂ ಬಾಗಿಲುಗಳಿಂದ ನೀರು, ಗಾಳಿ ಸುಯ್ಯೆಂದು ಒಳಗೆ ನುಗ್ಗತೊಡಗಿದ್ದುವು. ಗಾಡಿ ಇನ್ನೂ ಮಾಹಿಯನ್ನು ದಾಟುವುದರಲ್ಲಿತ್ತು.

ಅವಳು ಒಮ್ಮೆಲೆ ಎದ್ದು ಎರಡೂ ಬಾಗಿಲುಗಳನ್ನು ಹಾಕಿ ಬಂದಳು. ಎಲ್ಲ ಕಿಟಕಿಗಳನ್ನೂ ಪೂರ್ತಿಯಾಗಿ ಮುಚ್ಚಿದಳು. ಉಳಿದದ್ದು ಒಂದೇ ಒಂದು. ಅದಕ್ಕೆ ಕಾಜಿನ ಹಲಗೆ ಹಾಕಿಪ್ಪತ್ತಿತ್ತು. ಅವನು ದಿಙ್ಮೂಢನಾಗಿ ಅವಳ ಕಡೆಗೆ ನೋಡುತ್ತಿದ್ದಂತೆ, ಅವನ ಮೈಮೇಲಿಂದ ಬಾಗಿ, ಹೊದ್ದ ಸೆರಗನ್ನು ಪ್ರಯತ್ನಪೂರ್ವಕವಾಗಿ ಕಳಚಿ, ಕಿಟಕಿಯನ್ನು ಪೂರ್ತಿಯಾಗಿ ಮುಚ್ಚುವ ನಟನೆಗೆ ತೊಡಗಿದಳು.

ಕುಳಿತಲ್ಲೇ ಅವನ ಮೈ ಬೆವತಿತು. ಗಂಟಲು ಒಣಗಿ ಬಂತು. ಪೂರ್ತಿಯಾಗಿ ಮುಚ್ಚಿದ ಕಂಪಾರ್ಟ್‌ಮೆಂಟಿನಲ್ಲಿ ತಾವಿಬ್ಬರೇ ಇಬ್ಬರು. ಇನ್ನೂ ಅರ್ಧ ಗಂಟೆಯ ಪಯಣ.....ಅವಳಿಗೂ ತನಗೂ ಎರಡೇ ಅಂಗುಲದ ಅಂತರ.... ಕಿಟಕಿಯನ್ನು ಬಂದು ಮಾತಲು ವಾಲಿ ನಿಂತವಳು ಇನ್ನೂ ನಿಂತೇ ಇದ್ದಾಳೆ. ಬ್ಲೌಸಿನ ಮೂರು ಬಿರಡಿಗಳಲ್ಲಿ ಮಧ್ಯದ್ದು ಬಿಚ್ಚಿ, ಒಳಗಿನ ಹಾಲುಬಣ್ಣದ ಮಾಂಸಲಭಾಗ ಸ್ಪಷ್ಟವಾಗಿ ಕಾಣುತ್ತಿತ್ತು.

ಮನಸ್ಸು ಚಡಪಡಿಸಿತು. ಅಷ್ಟರಲ್ಲಿ ಕೋಟಿನ ಕಿಸೆಯಲ್ಲಿ ಇಟ್ಟುಕೊಂಡು ಕುಳಿತಿದ್ದ ಕೈಗಳ ನೆನಪಾಯಿತು. ಕೈ ಹೊರಗೆತೆಗೆಯಲುಯತ್ನಿಸಿದವ ಮತ್ತೆ ಕಿಸೆಯಲ್ಲಿ ಕೈ ಹಾಕಿಕೊಂಡು ನಿರಾಶೆಯಿಂದ ಅಧೋಮುಖನಾಗಿ ಕುಳಿತುಕೊಂಡ.

ಮನಸ್ಸು ಹಿಡಿತಕ್ಕೆ ಬಂತು. ಇಲ್ಲವಾದರೆ ಎಂತಹ ಪ್ರಮಾದ ಆಗಬಹುದಿತ್ತು! ನೀರು ಒಳಗೆ ಬಾರದಂತೆ ಕಿಟಕಿ ಬಂದು ಮಾಡಿದ್ದ. ಕ್ಷಣಾಗಿ ಅವಳನ್ನು ಅಭಿನಂದಿಸಿದ; ಅನಂತರ ತನಗೆ ಯಾವುದೂ ಸಂಬಂಧವಿಲ್ಲದ ರೀತಿಯಲ್ಲಿ ಮುಖ ತಿರುವಿ, ನಿರಾಸಕ್ತನಂತೆ ಕಿಟಕಿಗೆ ಆತು ಕುಳಿತುಕೊಂಡ. ಇದಾವುದನ್ನೂ ಲೆಕ್ಕಿಸದೆ ಫಾಸ್ಟ್‌ಗಾಡಿ ವೇಗವಾಗಿ ಓಡುತ್ತಿತ್ತು. ಮಾಟುಂಗಾ, ದಾದರ, ಎಲ್‌ಫಿನ್‌ಸ್ಟನ್ ರೋಡ್,—ಒಂದೊಂದಾಗಿ ಸ್ಟೇಶನ್ನುಗಳು ಹಿಂದುಳಿದು ಹೋದುವು ಗಾಡಿ ಓಡುತ್ತಲೇ ಇತ್ತು.

ಅವಳಿಗೆ ನಿರಾಶೆಯಾಯಿತು. ವೇಗವಾಗಿ ಓಡುವ ರೈಲಿನ ಹಾಗೂ ಅದಕ್ಕೂ ವೇಗವಾಗಿ ಓಡುವ ಸಮಯದ ನೆನಪು ಬಂತು. ಸಮಯ ಗತಿಸಿದರೆ, ಕೆಲಸ ಕೈಮೀರಿ, ಕೈಗೆ ಸಿಕ್ಕ ಹಕ್ಕಿ ಹಾರಿ ಹೋಗಬಹುದು!

ಕುಳಿತಲ್ಲೇ ಚಡಪಡಿಸಿದಳು. ಅವನಿಗೆ ಕೇಳಿಸುವಂತೆ ಮೈಮುರಿದು ಕೈಜಾಚಿ ಆಕಳಿಸಿದಳು. ಕೇಳಿಸಿಯೂ ಕೇಳಿಸದವನಂತೆ ಅವನು ಇನ್ನೂ ಸುಮ್ಮನೆ ಕುಳಿತಿದ್ದಾನೆ. ಈ ರಂಗದಲ್ಲಿ ಅವಳು ಪಳಗಿದ್ದರೂ ಇಂದೇ ಅವಳಿಗೆ ಈ ಮೊದಲ ವಿಚಿತ್ರ ಅನುಭವವಾಯಿತು. ತನ್ನ ತಾರುಣ್ಯಕ್ಕೆ ತನ್ನ ವನಪು-ವೈಯಾರಗಳಿಗೆ ವೈಸೋಲದ ವ್ಯಕ್ತಿಯೊಬ್ಬ ಇನ್ನೂ ಜಗತ್ತಿನಲ್ಲಿ ಇದ್ದಾನೆ.

ಈ ವಿಚಾರವೇ ಬಹಳ ಅಸಹನೀಯವಾಯಿತು. ಮನಸ್ಸು ಕುದಿಯಿತು. ನೇರವಾಗಿ ಹೋಗಿ ಅವನ ಮುಗ್ಗಿಲಲ್ಲೇ ಕುಳಿತು, "ಏ ಮಿಸ್ಟರ್, ನಿನ್ನ ಹತ್ತಿರ ಎಷ್ಟು ಹಣವಿದೆ? ತೆಗೆ!" ಎಂದು ಅಬ್ಬರಿಸಿದಳು. ತನ್ನ ರೂಪವು ಮಾತಿನ ಕೆಲಸವನ್ನು ಅವಳು ತನ್ನ ಹೆಣ್ತನದ ವರ್ಚಸ್ಸಿನ ಬಲದಿಂದ ಸಾಧಿಸುವವಳಿದ್ದಳು.

ಈಗ ಅವನಿಗೆ ಎಲ್ಲವೂ ಅರ್ಥವಾದಂತಾಯಿತು ಮತ್ತು ತಾನು ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿದ್ದೇನೆ ಎಂಬುದು ಖಚಿತವಾಯಿತು. ತಾವು ಇಬ್ಬರೇ ಇಬ್ಬರು ಕಂಪಾರ್ಟ್‌ಮೆಂಟಿನಲ್ಲಿ; ಅವಳು ಹೆಂಗುಸು. ಅವಳು ರೈಲುಇಳಿದನಂತರ ಬೇಕಾದ್ದನ್ನು ಸಾಧಿಸಬಹುದು. ತನ್ನ ಬಗೆಗೆ ಏನು ಬೇಕಾದ್ದನ್ನು ವರದಿ ಮಾಡಬಹುದು. ಅವಳು ಹೆಂಗುಸು! ಅಂತೇ ಅವಳು ಏನೆಂಥ ಸುಳ್ಳು ಹೇಳಿದರೂ ಸಮಾಜದಲ್ಲಿ ಅದಕ್ಕೆ ಬೆಲೆ ಇದೆ! ಎಲ್ಲರೂ ಅವಳನ್ನು ನಂಬುತ್ತಾರೆ. ತಾನು ಗಂಡುಸು; ತನ್ನನ್ನು ಯಾರು ನಂಬುತ್ತಾರೆ? ಸಮಾಜದ ಗಂಡುಸುಗೆ ಕೂಡ ಗಂಡಸಾದ ತನ್ನ ಮಾತಿನಲ್ಲಿ ವಿಶ್ವಾಸವಿಲ್ಲ! ಯಾರೂ ಹೆಚ್ಚು ವ್ಯರ್ಥ ಸಮಯ ಹೋಗಗೊಡುವಂತಿರಲಿಲ್ಲ. ಗಾಡಿಯು ಮುಂಬೈ ಸೆಂಟ್ರಲ್ ದಾಟುತ್ತು. ಇನ್ನು ಉಳಿದದ್ದು ಎಳೆಂಟೇ ನಿಮಿಷಗಳು. ಅಷ್ಟರಲ್ಲಿಯೇ ಅವರು ತಮ್ಮ ತಮ್ಮ ಕೆಲಸ ಸಾಧಿಸಬೇಕು.

ಅವಳು ಅತನ ತೀರ ಸಮೀಪಕ್ಕೆ ಸರಿದು ಆಕ್ರಮತೆಯಿಂದ ಹೇಳಿದಳು: "ಮಿಸ್ಟರ್, ತಡಮಾಡಬೇಡ! ನಿನ್ನ ಜೇಬಿನಲ್ಲಿ ಇದ್ದ ಹಣವನ್ನೆಲ್ಲ ತೆಗೆದುಕೊಡು! ನನಗೆ ಗೊತ್ತು, ನಿನ್ನ ಕೋಟಿನ ಎರಡೂ ಜೇಬಿನಲ್ಲಿ ಸಾಕಷ್ಟು ಹಣವಿದೆ. ಇನ್ನು ಅಷ್ಟು ಜಪ್ಪಿಸಿಕೊಡುವ ಕಾರಣವಿಲ್ಲ." ಅತನ ತಲೆಕಾಯ್ದು ಕೋಯಿತು; ಬುದ್ಧಿಯು ಮೇಲಿನ ಹಿಡಿತ ತಪ್ಪಿಹೋದಂತೆನಿಸಿತು, ಸಿಟ್ಟಿನಿಂದ ಚೀರಿದಃ "ಬದ್ಮಾಷ್, ಸಮೀಪಕ್ಕೆ ಬರಬೇಡ; ದೂರದಿಂದ ಬೇಕಾದ್ದು ಮಾಡು!"

ಅವಳು ವಿಕಟವಾಗಿ ನಕ್ಕಳು "ಬದ್ಮಾಷ್!!....ಹ ಹ ಹ.... ಹತ್ತೇ ನಿಮಿಷ ನಿಲ್ಲಿರಿ. ಮರೀನ್ ಲಾಯಿನ್ಸ್‌ನಲ್ಲಿ ತಾನೇ ತಿಳಿದು ಹೋಗುತ್ತದೆ—ಯಾರು ಬದ್ಮಾಷ್ ಎಂಬುದು!—ಬದ್ಮಾಷ್ ನಾನೋ ನೀನೋ ಎಂಬುದು! ...ಮಿಸ್ಟರ್ ಹಣ ಕೊಡಲಿಲ್ಲವಾದರೆ, ನೋಡು! ನೀನು ನನ್ನ ವೈನೇಲೆ ಏರಿ ಬಂದೆ ಎಂದು ಪೋಲೀಸಿಗೆ ವರದಿ ಮಾಡುತ್ತೇನೆ. ನನ್ನನ್ನು ಬಲಾತ್ಕಾರದಿಂದ ಅಪ್ಪಿಕೊಂಡೆ ಎಂಬುದನ್ನು ಸಿದ್ಧ ಮಾಡಿ ತೋರಿಸುತ್ತೇನೆ. ನಿನ್ನ ಮಾನ ಉಳಿಸಿಕೊಂಡು ರೈಲು ಇಳಿದು ಹೋಗುವುದಿದ್ದರೆ, ಎರಡೂ ಜೇಬಿನಲ್ಲಿದ್ದ ಹಣ ಕೊಟ್ಟು ಬಿಡು!"

ಅವನು ಕೋಪದಿಂದ ಉರಿದು ಹೋಗಿದ್ದರೂ ಕುಳಿತ ಸ್ಥಳ, ಕುಳಿತ ಭಂಗಿ ಸ್ವಲ್ಪವೂ ಬದಲಿಸಲಿಲ್ಲ, ಅವನ ಧೈರ್ಯವೂ ಕುಗ್ಗಿರಲಿಲ್ಲ. ಕೊನೆಯದಾಗಿ ಅವನು ಸ್ಥಿರಸ್ವರದಲ್ಲಿ ಹೇಳಿದ: "ನನ್ನ ಹತ್ತಿರ ಹಣವಿಲ್ಲ. ನೀನು ಬೇಕಾದ್ದನ್ನು ಮಾಡಿಕೋ ಹೋಗು!"

ಅವಳಿಗೆ ಅಷ್ಟೇ ಬೇಕಾಗಿತ್ತು. ಒಮ್ಮೆಲೆ ಎದ್ದು ಬ್ಯಾಗನ್ನು ಕೆಳಕ್ಕೆ ಬಿಸಾಕಿ, ತಲೆಯನ್ನು ಕೆದರಿಕೊಂಡಳು. ಸೀರೆಯನ್ನು ಅಸ್ತವ್ಯಸ್ತವಾಗಿ ಮಾಡಿಕೊಂಡು, ಬ್ಲೌಸಿನ ಎಲ್ಲ ಬಿರಡಿಗಳನ್ನು ಬಿಚ್ಚಿಬಿಸಾಕಿ, ಸೆರಗನ್ನು ಕೆಳಕ್ಕೆ ಬೀಳಿಸಿ ಉನ್ಮತ್ತಳಂತೆ ತಾಳಿ ನಿಂತಳು. ಅವನು ಇದಕ್ಕೆ ಎಷ್ಟೂ ಅಳುಕಲಿಲ್ಲ. ನಿಶ್ಚಿಂತನಾಗಿ ಕಿಟಕಿಗೆ ಆತು ಕುಳಿತುಕೊಂಡಿದ್ದ.

ಗಾಡಿ ಮರೀನ್‌ಲಾಯಿನ್ಸ್‌ನ್ನು ತಲುಪುವುದೇ ತಡ, ಫಸ್ಟ್‌ಕ್ಲಾಸಿನಿಂದ ಬಂದ ಕೂಗು ಪ್ಲಾಟ್‌ಫಾರ್ಮ್‌ನೆಲ್ಲ ತುಂಬಿತು. ಹೆಂಗುಸೊಬ್ಬಳು ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟಿನಿಂದ ಕಿರುಚಿಕೊಳ್ಳುತ್ತಿದ್ದಾಳೆ. ಗಾಡಿ ನಿಲ್ಲುವುದೇ ತಡ, ಜನರೆಲ್ಲ ಫಸ್ಟ್‌ಕ್ಲಾಸಿನೆಡೆಗೆ ಧಾವಿಸಿದರು. ಟಿಕೆಟ್ ಕಲೆಕ್ಟರ್, ಗಾರ್ಡ್, ಹಮಾಲ, ಪೋಲೀಸ, ಚಹದಂಗಡಿ ಮಾಣಿಗಳು, ಬೂಟ್-ಪಾಲೀಸ್ ಮಾಡುವ ಹುಡುಗರು—ಎಲ್ಲರೂ ನೆರೆದರು. ಅಲ್ಲೇ ಸ್ಟೇಶನ್ನಿನ ಪೋಲೀಸ್-ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಸಬ್ ಇನ್‌ಸ್ಪೆಕ್ಟರ್ ಡಿಕ್ರೂಜರೂ ಓಡಿ ಬಂದರು. ಇಬ್ಬರು ಪೋಲೀಸರೊಂದಿಗೆ ಜನರನ್ನು ಇಬ್ಬದಿ ಮಾಡುತ್ತ ಡಿಕ್ರೂಜ, ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟಿನವರೆಗೆ ನುಗ್ಗಿದರು. ಒಳಗೆ ಹೆಂಗುಸೊಬ್ಬಳು ವಿಕೃತ ರೂಪ ತಾಳಿ ನಿಂತಿದ್ದಾಳೆ; ಗಂಡುಸೊಬ್ಬ ನಿರ್ವಿಕಾರದಿಂದ ಕಿಟಕಿಗೆ ಒರಗಿ ಕುಳಿತಿದ್ದಾನೆ. ಡಿಕ್ರೂಜರಿಗೆ ಒಮ್ಮೆಲೆ ಹೆಂಗುಸಿನ ಗುರುತು ಹತ್ತಿಹೋಯಿತು. ಇಂತಹವೇ ಇನ್ನೆರಡು ಕೇಸುಗಳಲ್ಲಿ ಅವಳು ಇದ್ದಳು. ಅವರಿಗೆ ಆಶ್ಚರ್ಯವೆನಿಸಿತು. "ಮುಂಬೈಯಲ್ಲಿ ಎಲ್ಲ ಹೆಂಗುಸರೂ ಸತ್ತುಹೋದರೇನು? ಜನರು ಎಲ್ಲರನ್ನೂ ಬಿಟ್ಟು ಈ ಸಿಂಹಿಣಿಯನ್ನು ಏಕೆ ಬೆನ್ನು ಹತ್ತುತ್ತಾರೊ?" ಜನ ಹೊರಗೆ ಗುಜುಗುಟ್ಟುತ್ತಿದ್ದರು. ಅವನನ್ನು ಮನಬಂದಂತೆ ಬೈಯುತ್ತಿದ್ದರು. ಇವೆಲ್ಲವುಗಳನ್ನು ಕೇಳಿಯೂ ಕೇಳದವನಂತೆ ನಿರ್ವಿಕಾರಚಿತ್ತದಿಂದ ಕಿಟಕಿಗೆ

ಆತು ಕುಳಿತಿದ್ದನಾತ. ಡಿಕ್ರೂಜರ ಜತೆಗಿದ್ದ ಪೋಲೀಸ ಗುಡುಗಿದ: "ಏ, ಕೆಳಗಿಳಿ, ನಡೆ!"

"ನನಗೆ ಚರ್ಚ್‌ಗೇಟಿಗೆ ಇಳಿಯಬೇಕಾಗಿದೆ, ಮರೀನಲೈನ್ಸಿಗಲ್ಲ," ಎಷ್ಟು ಸೌಮ್ಯತೆಯಿತ್ತು ಆ ಉತ್ತರದಲ್ಲಿ! ಅವನ ಆ ಸೌಮ್ಯತೆಯನ್ನೂ ಮುಖದ ಮೇಲಿನ ಆ ಕಳೆಯನ್ನೂ ನೋಡಿ ಯಾರೂ ಹೇಳಬಹುದಿತ್ತು, ಅವನು ನಿರಪರಾಧಿ—ಎಂದು. ಆದರೆ ಕಾನೂನಿಗೆಲ್ಲಿ ವ್ಯಕ್ತಿತ್ವದ ತಿಳಿವಳಿಕೆ?

ಅವನ ಮುಖನೋಡಿ ಡಿಕ್ರೂಜರಿಗೂ ಒಂದು ಕ್ಷಣ ಎನಿಸಿತು: ಅವನು ನಿರಪರಾಧಿಯಿರಬೇಕೆಂದು; ಆದರೆ ಕಾನೂನಿನಿದಿರು ಅವರು ನಿಸ್ಸಹಾಯಕರಾಗಿದ್ದರು. ಸ್ವತಃ ಒಬ್ಬ ಹೆಂಗುಸೇ ಬಂದು ತಾನು ಅವಮಾನಿತೆಯಾಗಿದ್ದೇನೆಂದು ಹೇಳುತ್ತಿರುವಾಗ, ಹಾಗೂ ಸುತ್ತಲಿನ ವಾತಾವರಣವೂ ಅದಕ್ಕೆ ಪುಟಕೊಡುತ್ತಿರುವಾಗ, ಬೇರೆ ಅವನ ಮುಖವನ್ನೆಂತು ನಂಬುವುದು? ಆದರಲ್ಲೂ ಹೆಣ್ಣಿನ ವಿಷಯದಲ್ಲಿ ಎಂಥ ಒಳ್ಳೆಯ ಮನುಷ್ಯನೂ, ಹಲವಾರು ಸಮಯದಲ್ಲಿ ದಾರಿ ತಪ್ಪಬಹುದು!

ಅಷ್ಟರಲ್ಲಿ ಇನ್ನೊಬ್ಬ ಪೋಲೀಸ ಬಿಗುವಿನಿಂದ ಬೆದರಿಸಿದ: "ಏ, ಬದ್ಮಾಷ್, ಕೆಳಗಿಳಿ! ಮಾಡುವ ದಂಧೆ ಇಂಥದು! ಮೇಲೆ ಸಂಭಾವಿತತನದ ಸೋಗು ಬೇರೆ! ಇಳಿ ಕೆಳಕ್ಕೆ!" ಬದ್ಮಾಷ್! ತಾನು ಬದ್ಮಾಷ್!!

ಅವಳು ಹೇಳಿದ್ದು ನಿಜವಿತ್ತು. ಅಂತೂ ಕೊನೆಗೊಮ್ಮೆ ಅವಳು ತಾನು ಅಂದಂತೆ ಮಾಡಿ ತೋರಿಸಿದ್ದಳು! ಅವನಲ್ಲಿದ್ದ ಸಂಯಮ ಯಾವಾಗಲೋ ಹಾಳಾಗಿತ್ತು. ಅಷ್ಟರಲ್ಲಿ ತನ್ನ ರಟ್ಟೆ ಹಿಡಿದು ಎಳೆಯಬಂದಿದ್ದ ಪೋಲೀಸನನ್ನು ಹೆಗಲಿನಿಂದ ಬಲವಾಗಿ ನೂಕಿ, "shut up, idiot! ನೈಮುಟ್ಟಬೇಡ, ಎಲ್ಲಿ ಬರಬೇಕೋ ನಡೆ ಬರುತ್ತೇನೆ" ಎಂದು ಹೊರಬಿದ್ದ. ಇಳಿಯುವಾಗ ಇನ್‌ಸ್ಪೆಕ್ಟರನ್ನು ಕುರಿತು: "Excuse me, sir! ಜತೆಯಲ್ಲಿ ಅವಳನ್ನೂ ಇಳಿಸಬೇಕಾಗುತ್ತದೆ. ಕಂಪ್ಲೇಂಟು ದಾಖಲಾಗಲು ಅವಳದೂ ಅಗತ್ಯವಿದೆ" ಎಂದು ಹೇಳಿದ; ಜತೆಯಲ್ಲಿ ಅವಳೂ ಇಳಿದಳು. ತಡವಾದ್ದರಿಂದ ಗಾಡಿ ವೇಗವಾಗಿ ಹೊರಟುಹೋಯಿತು.

ಡಿಕ್ರೂಜ್, ಇಬ್ಬರನ್ನೂ ಕರೆದುಕೊಂಡು ತಮ್ಮ ಕ್ಯಾಬೀನನ್ನು ಹೊಕ್ಕರು. ಅಪರಾಧಿಗಳಿಬ್ಬರಿಗೂ ಕೂಡಲು ಕುರ್ಚಿಕೊಟ್ಟು, ವಿಚಾರಣೆಯನ್ನು ಆರಂಭಿಸಿದರು.

"ನಿಮ್ಮ ಹೆಸರೇನು?"

"ದಯವಿಟ್ಟು, ನನ್ನ ಕೋಟಿನ ಮೇಲಿನ ಕಿಸೆಯಿಂದ Visiting-card ತೆಗೆದುಕೊಳ್ಳುತ್ತೀರಾ?"

"ಅದನ್ನು ನೀನೇ ಏಕೆ ತೆಗೆದುಕೊಡಬಾರದು?"

"ನಾನು ತೆಗೆದುಕೊಡಲಾರೆ"

ಅವನ ಔದ್ಧತ್ಯ ಇನ್‌ಸ್ಪೆಕ್ಟರರನ್ನೂ ರೇಗಿಸಿತು. ಆದರೂ ಮರುಮಾತಾಡದೆ, ಅವರು ಹೊದ್ದಿದ್ದ ರೇನ್‌ಕೋಟನ್ನು ಸರಿಸಿ ಕೋಟಿನ ಮೇಲಿನ ಕಿಸೆಯಿಂದ ಕಾರ್ಡನ್ನು ತೆಗೆದರು. "K ರಾಮನಾಥ್, M. A, LL. B Advocate" ಎಂದಿತ್ತು.

ಸುದಾಮ ಚರಿತಂ

ಶ್ರೀ. ಸಾಲಿ ರಾಮಚಂದ್ರರಾಯ ವಿರಚಿತಂ

ಸಂಸ್ಕೃತ ನೂತನಕಾವ್ಯ — ಕ್ರಯ ೧ ರೂಪಾಯಿ

"ತುಂಬ ಆಶ್ಚರ್ಯವಾಯಿತು ಮನನೆಚ್ಚಿದೆ. ಬಹಳ ಚನ್ನಾಗಿದೆ. ಬಹಳ ಚಲೋದಾಗಿದೆ ತುಂಬ ಸರಲವೂ ಸರಸವೂ ಆಗಿದೆ, ಸಂಸ್ಕೃತ ಕಾವ್ಯಸಾಹಿತ್ಯದ ಉದ್ಧಾನು ಕವಿಗಳನ್ನು ಪದೇ ಪದೇ ನೆನವರಿಸುತ್ತಲೂ ಇದೆ. ಹಳಗಾಲದ ಸಂಸ್ಕೃತ ಸಾಹಿತ್ಯವನದಿಂದ ಎತ್ತಿಕೊಂಡು ಇಂದಿನ ಸಾಹಿತ್ಯವನದಲ್ಲಿ ಕಸಿ ಮಾಡಿದ ಬಳ್ಳಿಯು ಹಣ್ಣಿನಂತಿದೆ. ಕಸಿಯ ಹಣ್ಣು ರೂಪದಲ್ಲೂ ರುಚಿಯಲ್ಲೂ ತಾಯಿ ಹಣ್ಣನ್ನು ಬಿಟ್ಟುರಲಾರದಷ್ಟೆ."

ರಾಷ್ಟ್ರಕವಿ — **ಶ್ರೀ. ಎಂ. ಗೋವಿಂದ ಪೈ**

ಪ್ರತಿಗಳಿಗಾಗಿ:

ಆಕಳವಾಡಿ ಬುಕ್‌ಡಿಪೊ, ವಿಜಯರೋಡ್

ಧಾರವಾಡ.

ಸಂಸ್ಕೃತಿ ಪ್ರಕಾಶನ ಮಾಳನುಡ್ಡಿ, ಧಾರವಾಡ.

ಒಂದು ಕ್ಷಣ ಎಲ್ಲರೂ ಸ್ತಬ್ಧರಾದರು.

ರಾಮನಾಥ ಕೇಳಿದ: "ಕಂಪಾರ್ಟ್‌ಮೆಂಟಿನ ಎಲ್ಲ ವಿವರವನ್ನೆಂತು ನೀವು ಆಗಲೇ ಬರೆದುಕೊಂಡಿರಿ. ಇನ್ನು ಅವಳಿಂದ written-complaint ತೆಗೆದುಕೊಳ್ಳುವುದು ಅಗತ್ಯವಾಗಿದೆಯಲ್ಲವೆ?"

ಅವಳು ಹೆದರುತ್ತ ಹೆದರುತ್ತ ಕಂಪ್ಲೇಂಟು ಬರೆದುಕೊಟ್ಟಳು. ರಾಮನಾಥ ಮುಗುಳ್ನಗೆ ನಗುತ್ತ ಅವಳನ್ನು ಕೇಳಿದ: "ನಾನು ನಿರಪರಾಧಿ ಎಂದು ಸಿದ್ಧವಾದರೆ, ನಿಮ್ಮ ಪರಿಸ್ಥಿತಿ ಏನಾಗುವುದು, ಗೊತ್ತೇ?"

"ಏನಾಗುತ್ತದೆ?"

"ಕೇಸು ತಿರುಗುತ್ತದೆ. ನನ್ನ ಮೇಲೆ ವ್ಯರ್ಥ ಮಾನಹಾನಿಯ ಅಪಾದನೆ ಹಾಕಿದ್ದಕ್ಕೆ, ಅನಂತರ ನಾನು ನಿಮ್ಮನ್ನು ಜೇಲಿಗೆ ಎಳೆಯಬೇಕಾಗುತ್ತದೆ."

"ಮಿಸ್ಟರ್, ರಾಮನಾಥ, ನೀವು Advocate ಇದ್ದುದರ ಹೆದರಿಕೆ ತೋರಿಸಬೇಕಾಗಿಲ್ಲ. ವಕೀಲರು ವಸ್ತುಸ್ಥಿತಿಯನ್ನು ಮರೆ ಮಾಡಲು ಯತ್ನಿಸಿದರೂ ಅದೇನೂ ಸಾಧ್ಯವಾಗಲಿಕ್ಕಿಲ್ಲ."

"ಇದ್ದ ವಸ್ತುಸ್ಥಿತಿಯನ್ನು ನೀವಾದರೂ ಮರೆಯಬೇಡಿರಿ, ಮಿಸ್"

ಡಿಕ್ರೂಜರಿಗೆ ಇದೆಲ್ಲ ಗೊಳ್ಳುವಾದವೆನಿಸಿತು. ವ್ಯರ್ಥ ಸಮಯ ಕಳೆಯುತ್ತಿದ್ದುದಕ್ಕೆ ರಾಮನಾಥನ ಮೇಲೆ ಸಿಟ್ಟು ಕೂಡ ಬಂತು. ಎದುರುಗಿನ ಟೇಬಲ್ಲನ್ನು ರಭಸದಿಂದ ಗುದ್ದಿ ಹೇಳಿದರು: "ರಾಮನಾಥ, ವ್ಯರ್ಥ ತಲೆಹರಟೆ ಬೇಡ. ನೀವು ನಿರಪರಾಧಿ ಎನ್ನಲು ಸಾಕಷ್ಟು ಪುರಾವೆಗಳಿದ್ದರೆ ಸಿದ್ಧಮಾಡಿರಿ. ಇಲ್ಲವಾದರೆ...." ಮಾತು ಪೂರ್ಣ ಮುಗಿಸಿದ ಅವರು ಆಧ್ಯತೆಯಿಂದ ಪಕ್ಕಕ್ಕೆ ನಿಂತಿದ್ದ ಪೋಲೀಸನಿಗೆ ಕಣ್ಸನ್ನೆ ಮಾಡಿದರು. ಪೋಲೀಸ ಕೈಯಲ್ಲಿಯ ಬೇಡಿಗಳನ್ನು ಮುಂದೆ ಮಾಡಿ: "ಮಿಸ್ಟರ್, ಕೈಗಳನ್ನೆಲ್ಲಿಯವರೆಗೆ ಜಪ್ಪಿಸಿಕೊಂಡು ಕೂಡುವಿರಿ? ಕೈಗಳನ್ನು ಮುಂದೆ ಮಾಡಿರಿ!" ಎಂದ.

"ಇನ್ಸ್‌ಪೆಕ್ಟರ್, ನಾನು ನಿರಪರಾಧಿ ಎನ್ನುವುದಕ್ಕೆ ಇದೋ ಸಾಕ್ಷಿ!" ರೇನ್‌ಕೋಟನ್ನು ಕಳಚಿ, ಎರಡೂ ತೋಳುಗಳನ್ನು ಮೇಲೆತ್ತಿ ನಿಂತ ರಾಮನಾಥನನ್ನು ನೋಡಿ ಎಲ್ಲರೂ ಹೌಹಾರಿದರು. ಅವಳಂತೂ ಕುಳಿತಲ್ಲಿಯೇ ತತ್ತರಿಸಿಹೋದಳು. ಇದುವರೆಗೂ ನಿರ್ಲಕ್ಷಿಸಿದ ಮಹತ್ತ್ವದ ಸಂಗತಿಯೊಂದು ಆಗ ಎಲ್ಲರ ನಿದರ್ಶನಕ್ಕೆ ಬಂತು. ಅದೆಂದರೆ ರಾಮನಾಥನಿಗೆ ಎರಡೂ ಕೈಗಳೇ ಇಲ್ಲ!! ಅವು ಕತ್ತರಿಸಿ ಹೋಗಿದ್ದುವು!

ರಾಮನಾಥ ಕಂಪಿಸುವ ಧ್ವನಿಯಲ್ಲಿ ಹೇಳಿದ: "ನಾಲ್ಕು ವರ್ಷಗಳ ಹಿಂದೆ ಒಮ್ಮೆ ಸಬರ್ಬನ್ ರೈಲ್ವೆ ಅಪಘಾತದಲ್ಲಿ ನಾನು ಕೈಗಳನ್ನು ಕಳೆದುಕೊಂಡೆ. ನನ್ನ ಜೀವನವೇ ಅದರಿಂದ ಹಾಳಾಯಿತು—ಎಂದು ನಾನು ಭಾವಿಸಿದ್ದೆ, ಇನ್ಸ್‌ಪೆಕ್ಟರ್! ಆದರೆ ಇಂದು ಅವು ನನ್ನ ಜೀವನವನ್ನು—ಅದಕ್ಕೂ ಹೆಚ್ಚಿನದಾದ ನನ್ನ ಮಾನವನ್ನು ಉಳಿಸಿದುವು. ಕಳಚಿಹೋದ ಕೈಗಳ ಮೂಲಕ, ಇಂದು ಒಬ್ಬ ಕಡ್ಡೊಕೇಟಿನ ಮಾನ ಉಳಿಯಿತು, ಇನ್ಸ್‌ಪೆಕ್ಟರ್!" ಎಂದು ಹೇಳಿ ರಾಮನಾಥ ಆ ಹೆಂಗುಸಿನೆಡೆಗೆ ತಿರುಗಿ, "ಕ್ಷಮಿಸಿ, ಮಿಸ್ ಯಾವ ಕೈಗಳಿಂದ ನನ್ನ ಹ್ಯಾಟನ್ನು ಸರಿಯಾಗಿ ಹಿಡಿಯಲಾಗುವುದಿಲ್ಲವೋ ಆ ಮುರಿದುಹೋದ ಕೈಗಳು ನಿಮ್ಮ ಬ್ಲೌಸಿನ ಗುಂಡಿಗಳನ್ನೆಂತು ಬಿಚ್ಚಿದುವೋ ಆಶ್ಚರ್ಯ!" ಎಂದು ಮೂದಲಿಸಿದ. ಅವಳು ಮೆಲ್ಲನೆ ಸಾವಾಗುವ ಹಾಗೆ ರಾಮನಾಥನಿಗೆ ಮೊರೆಯಿಟ್ಟಳು: "ದಯವಿಟ್ಟು ನನ್ನನ್ನು ಕ್ಷಮಿಸಿ ರಾಮನಾಥ. ನನ್ನ ತಪ್ಪಾಯಿತು. ನಾನಿನ್ನು ಹೊರಡುತ್ತೇನೆ."

"ಇಷ್ಟು ಬೇಗ ಹೇಗೆ ಹೊರಡುವುದು, ಮಿಸ್? ಪೋಲೀಸನಿಗೆ ಬೇಡಿಹಾಕಲು ಕೈಗಳು ಬೇಕಾಗಿವೆಯಂತೆ. ಪಾಪ ನನಗಂತೂ ಕೈಗಳಿಲ್ಲ. ಅಂತೆಯೇ ಇನ್ನು ತಮ್ಮ ಪರದಿ...." ರಾಮನಾಥನ ಮಾತು ಮುಗಿದಿದ್ದಿಲ್ಲ, ಅಷ್ಟರಲ್ಲಿಯೇ ಇನ್ಸ್‌ಪೆಕ್ಟರರ ಆಜ್ಞೆಯಂತೆ ಪೋಲೀಸ ಅವಳೆಡೆಗೆ ಬೇಡಿಗಳನ್ನು ಮುಂದೆಮಾಡಿದ.

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

		ರೂ. ನ. ಪೈ.
ಜೈನಧರ್ಮ		೧೫—೦
	ಶ್ರೀ. ಮಿರ್ಜಿ ಅಣ್ಣಾರಾಯರು.	
ಭಾರತದ ಬೆಳಕು	,,	೧—೫೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೫೦
ಸಮಯಸಾರ	,,	೧—೫
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಮೌಲ್ಯಮಾಪಣ	,,	೦—೭೫
ಭರತೇಶನ ನಾಲ್ಕು ಚಿತ್ರಗಳು	,,	೧—೨೫
ಕೆನೆನೊಸರು (ಮಕ್ಕಳ ಕತೆ)	,,	೦—೨೫

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿಸೇವಾಸದನ, ಸೇಡಬಾಳ

ಪೋ. ಸೇಡಬಾಳ, (ಜಿಲ್ಲಾ ಬೆಳಗಾವಿ)

"ನನಗೆ ಅವುಗಳ ಅಗತ್ಯವಿಲ್ಲ. ನಡೆಯಿರಿ, ನಾನು ಬರುತ್ತೇನೆ" ಎಂದು ಅಕೆ ಎದ್ದುನಿಂತಳು. ಅವಳಿಗೆ ಗೊತ್ತಿಲ್ಲ, ತಾನು ಬೀಸಿದ ಜಾಲದಲ್ಲಿ ತಾನೇ ಕೊಡಕಿದವಳೆಂದು. ಲಂಚ-ರುಷವತ್ತು... ಇನ್ನು ಯಾವ ದಾರಿಯಿಂದಲೂ ಬಿಡುಗಡೆಯಿರಲಿಲ್ಲ!

ಇನ್ಸ್‌ಪೆಕ್ಟರ್ ಡಿಕ್ರೂಜರು ಒಮ್ಮೆಲೆ ಯೋಚನೆಯಿಂದ ಎಚ್ಚತ್ತು "ಇದು ನಿಮ್ಮ ಮೂರನೆಯ ಕೇಸು ಅಲ್ಲವೆ? ಇಂಥದೇ ಇನ್ನೆರಡು ಕೇಸುಗಳಲ್ಲಿ ನೀವಿದ್ದಿರಿ! ಅಂತೂ ಅವುಗಳಲ್ಲೂ ನಿಮ್ಮದೇ ಪಾಲು ಇದ್ದಿರಬೇಕು" ಎಂದರು. ಅವಳು ಪ್ರತಿಯಾಗಿ ಏನೂ ಮಾತನಾಡಲಿಲ್ಲ!

"ಒಳ್ಳೆದು, ಇನ್ಸ್‌ಪೆಕ್ಟರ್ ನಾನು ಬರುತ್ತೇನೆ ಇದು ನನ್ನ ವಿಳಾಸ ಕೇಸಿನ ವಿಚಾರಣೆ ನಡೆದಾಗ ಅಗತ್ಯ ಬರುತ್ತೇನೆ. ಗುಡ್ ನೈಟ್" ಎಂದು ಹೇಳಿ ರಾಮನಾಥ, ತನ್ನ ವಿಳಾಸಕೊಟ್ಟು ಹೊರಬಿದ್ದ.

ಅವನ ಕೈಗಳೆರಡೂ ಮತ್ತೆ ಜೇಬಿಗೆ ಹೋದುವು. ಪೋಲೀಸ ಕಾನ್‌ಸ್ಟೇಬಲ್ ಬಂದು, ಅವನಿಗೆ ರೇನ್‌ಕೋಟನ್ನು ತೊಡಿಸಿದ.

ರನ್ನನ ಚಕ್ರೇಶ್ವರ ಚರಿತೆ

(ಸಂಶೋಧನಾತ್ಮಕ ಊಹೆ)

ಶ್ರೀ. ವೆಂ. ಬಿ. ಲೋಕಾಪೂರ, ಬಿ. ಎ, ಬಿ. ಟಿ, ಡಿ. ಬಿ. ಇ. ಹುಬ್ಬಳ್ಳಿ

ಕರ್ನಾಟಕದಲ್ಲಿರುವ ಕನ್ನಡ ಪ್ರಾಚೀನಕೃತಿಗಳಲ್ಲಿ, ಮಹಾಕವಿ ರನ್ನನ ಕೃತಿರತ್ನಗಳೂ ಎರಡಿವೆ—'ಪರಶುರಾಮ ಚರಿತೆ' 'ಚಕ್ರೇಶ್ವರ ಚರಿತೆ'! ಹೆಸರಷ್ಟೇ ಗೊತ್ತಾಗಿರುವ ಈ ಕೃತಿಗಳ ವಿಚಾರದಲ್ಲಿ, ನಮ್ಮ ಸಂಶೋಧಕರು ಊಹಾಪೋಹಗಳನ್ನು ನಡೆಸಿಯೆ ಇದ್ದಾರೆ!

ಮಹಾಕವಿ ರನ್ನನು ತನ್ನ ಅಜಿತನಾಥ ಪುರಾಣದಲ್ಲಿ:

ಕರಮೆಸೆದುವು ರತ್ನತ್ರಯ
ಪರಿಕಲ್ಪದೆ ಪರಶುರಾಮ ಚರಿತಂ ಚಕ್ರೇ
ಶ್ವರ ಚರಿತಮಜಿತ ತೀರ್ಥೇ
ಶ್ವರ ಚರಿತಂ ರತ್ನನಿಂದೆ ಭುವನತ್ರಯದೊಳ್

(ಅಜಿತನಾಥ ಪುರಾಣ XII ೪೪)

ಎಂದು ಹೇಳಿದ್ದರಿಂದ, **ಪರಶುರಾಮಚರಿತೆ, ಚಕ್ರೇಶ್ವರ. ಚರಿತೆ** ಮತ್ತು ಅಜಿತನಾಥಪುರಾಣಗಳು ರನ್ನನ ದೃಷ್ಟಿಯಲ್ಲಿ ಜೈನಧರ್ಮದಲ್ಲಿಯ ರತ್ನತ್ರಯಗಳಾದ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರಗಳಂತೆ ಬಹಳ ಪವಿತ್ರವಾದುವುಗಳು. ಇವುಗಳಲ್ಲಿ ಅಜಿತನಾಥ ಪುರಾಣವೊಂದು ದೊರೆತು ಅಚ್ಚಾಗಿದೆ; ಉಳಿದುವುಗಳು ದೊರೆತೇ ಇಲ್ಲ. ಇವುಗಳಲ್ಲಿ ಪರಶುರಾಮಚರಿತೆಯನು, ರನ್ನನು ತಾನು ಚಾವುಂಡರಾಯನ ಆಶ್ರಯದಲ್ಲಿದ್ದಾಗ ಬರೆದಿರಬಹುದೆಂದೂ, ಚಾವುಂಡರಾಯನಿಗೆ 'ಸಮರೆಪರಶು' ಎಂಬ ಬಿರುದು ಇದ್ದುದರಿಂದ, ಅತನನ್ನೇ ಅದರ ನಾಯಕನನ್ನಾಗಿಸಿ ಒಂದು ವೀರರಸ ಪ್ರಧಾನವಾದ ಕಾವ್ಯವನ್ನು ಬರೆದಿರಬಹುದೆಂದೂ ವಿದ್ವಾಂಸರು ಊಹಿಸಿದ್ದಾರೆ. ಪರಶುರಾಮಚರಿತೆಯನು ರನ್ನನು ಚಾವುಂಡರಾಯನ ಕಾಲದಲ್ಲಿಯೇ, ಎಂದರೆ ಸುಮಾರು ಕ್ರಿ. ಶ ೯೭೮—೯೯೦ರಲ್ಲಿ ಬರೆದಿರಬಹುದು. ಈ ಕಾವ್ಯದಲ್ಲಿರಬಹುದಾದ ಕೆಲವು ಪದ್ಯಗಳು ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ನೋಡಲು ಸಿಗುವುವು. ಇದರ ನಂತರ ಬರೆಯಲ್ಪಟ್ಟ ಚಕ್ರೇಶ್ವರ ಚರಿತೆಯ ಬಗ್ಗೆ ಯಾವ ನಿರ್ದಿಷ್ಟ ಸಂಗತಿಗಳೂ ಗೊತ್ತಾಗಿಲ್ಲ. ಚಕ್ರೇಶ್ವರ ಚರಿತೆಯು ಗದಾಯುದ್ಧವೇ ಇರಬಹುದೆಂದು ಕೆಲವು ವಿದ್ವಾಂಸರು ಊಹಿಸಿದ್ದರು; ಆದರೆ, ಅದು ಗದಾಯುದ್ಧವಲ್ಲ—ಭರತೇಶ್ವರ ಚಕ್ರವರ್ತಿಯ ಕಥೆಯನ್ನು ಹೇಳುವಂತಹ ಒಂದು ಕಾವ್ಯವಾಗಿರಬೇಕೆಂದು, ಬೇರೆಯ ಕಡೆಗೆ ನಾನು ಹೇಳಿದ್ದೇನೆ. ಅಲ್ಲಿಯ ನನ್ನ ಹೇಳಿಕೆ ಕೆಳಗಿನಂತಿದೆ:

ಅಜಿತನಾಥ ಪುರಾಣದಲ್ಲಿ ರನ್ನ ಹೇಳಿದ ಚಕ್ರೇಶ್ವರಚರಿತೆ ಗದಾಯುದ್ಧವಲ್ಲ; ಯಾಕೆಂದರೆ ಅಜಿತಪುರಾಣದಲ್ಲಿ ಎರಡನೆಯ ಚಕ್ರವರ್ತಿ ಸಗರ ತನ್ನ ದಿಗ್ವಿಜಯವನ್ನು ತೀರಿಸಿಕೊಂಡು "ತೆಂಕಮೊಗದೆ ಬಂದುತ್ತರಭರತ ಮಧ್ಯಮಖಂಡ ಮಧ್ಯವರ್ತಿಯಪ್ಪ ವೃಷಭಾಚಲಮುಂ ಕಂಡು ಮನದೆಗೊಂಡು, ನಿಜವಿಜಯ ಪ್ರಶಸ್ತಿಯುಂ ಅಲ್ಲಿ ಬರೆಯಿಸಲೆಂದು ಪೋಗಿ, ಪುರಾತನ ಚಕ್ರವರ್ತಿಗಳ ದಿಗ್ವಿಜಯ ಕೀರ್ತಿಗಳಂ ಬಾಜಿಸೆ ಕೇಳ್ದು ಗಳಿತಗರ್ವನಾಗಿ, ಕರಿದೆತೆಯು ರತ್ನದಂಡದಿಂದೆ ತೊಡೆಯಿಸಿ ಕಳೆದು, ಭರತೇಶ್ವರಚಕ್ರವರ್ತಿಯ ಪ್ರಶಸ್ತಿಯುಂ ಕಾಕಿಣೀರತ್ನದೊಳ್ ಕವಿರತ್ನನಿಂ ಬರೆಯಿಸಿ ಗಂಗಾದ್ವಾರಕ್ಕೆ ಒಂದು ಗಂಗಾದೇವಿಯಿಂದೆ ಅಭಿಷಿಕ್ತನಾಗಿ ಸಿಂಹಾಸನಮಂ ಪಡೆದು....." ಎಂದು ಹೇಳಿದ್ದಾನೆ ರನ್ನ.

(ಅಜಿತನಾಥ ಪುರಾಣ IX. ೩೨ರ ನಂತರದ ವಚನ)

ಇಲ್ಲಿ ಎರಡನೆಯ ಚಕ್ರವರ್ತಿ ಸಗರನು ತನ್ನ ದಿಗ್ವಿಜಯವನ್ನು ತೀರಿಸಿಕೊಂಡು ದಕ್ಷಿಣಕ್ಕೆ ಬಂದ, ಕವಿರತ್ನ (ರನ್ನ)ನಿಂದ ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯನ್ನು ಬರೆಯಿಸಿದನೆಂದು ರನ್ನಕವಿ ಸ್ಪಷ್ಟವಾಗಿ ಹೇಳಿದ್ದಾನೆ. ಇನ್ನು ಈ ಎರಡನೆಯ ಚಕ್ರವರ್ತಿಯಾದ ಸಗರ ಮತ್ತು ಅತನ ದಿಗ್ವಿಜಯ ನನಗೆ ಇಮ್ಮಡಿ ತೈಲಪನನ್ನೂ ಮತ್ತು ಅತನ ದಿಗ್ವಿಜಯವನ್ನೂ ನೆನಪುಮಾಡಿಕೊಡುತ್ತವೆ. ರನ್ನ ಶ್ಲೇಷೆಯಿಂದ ಸಗರನ ದಿಗ್ವಿಜಯದಲ್ಲಿ ಇಮ್ಮಡಿ ತೈಲಪನ ದಿಗ್ವಿಜಯದ ವರ್ಣನೆಯನ್ನು ಹೊಗಳಿರಬಹುದೇ? ಸಗರನೇ ತೈಲಪನಿರಬಹುದೆಂದು ತೋರಿಸುವ ಒಂದು ಪದ್ಯವನ್ನು ರನ್ನ ಹೇಳಿಬಿಟ್ಟಿದ್ದಾನೆ:

ಎರಡನೆಯ ತೀರ್ಥನಾಥನ
ಚರಿತದೊಳೆರಡನೆಯ ಚಕ್ರನಾಥನ ಚರಿತಂ
ಬರೆ ಬಣ್ಣಿಸಲಜಿತ ಜಿನೇ
ಶ್ವರ ಭಕ್ತಂ ಸಗರ ಚಕ್ರವರ್ತಿಯೆ ತಕ್ಕಂ—

(ಅಜಿತನಾಥಪುರಾಣ IX. ೪).

ರನ್ನ ಎರಡನೆಯ ತೀರ್ಥಂಕರನಾದ ಅಜಿತನ ತಾಯಿಯಾದ ವಿಜಯಸೇನಾದೇವಿಯನ್ನು 'ಅತ್ತಿಮಬ್ಬೆ' ಎಂದೇ ಹೇಳಿ, ಅತ್ತಿಮಬ್ಬೆಗೂ ಅವಳಿಗೂ ಅಂತರವೇ ಇಲ್ಲವೆಂದು ಹೇಳಿದ್ದಾನೆ. ಇದರ

ಮೇಲಿಂದ ಅತ್ತಿಮಬ್ಬೆಯ ಮಗನಾದ ಪಡೆವಳ ತೈಲಪನಿಗೂ ವಿಜಯ ಸೇನಾದೇವಿಯ ಮಗ ಅಜಿತನಿಗೂ ಅಂತರವೇನೂ ಇದ್ದಂಕಾಗಲಿಲ್ಲ. ಅಜಿತನಾಥಪುರಾಣದಲ್ಲಿ—ಎಂದರೆ ಪಡೆವಳ ತೈಲನ ಗುಣಗಾನ ವಾಗುವುದರಲ್ಲಿ—ಎರಡನೆಯ ಚಕ್ರವರ್ತಿ ಸಗರ ಎಂದರೆ ಚಕ್ರವರ್ತಿ ಇಮ್ಮಡಿ ತೈಲಪ ಹೊಗಳಿಸಿಕೊಳ್ಳಲಿಕ್ಕೆ ಯೋಗ್ಯನು. ಆದ್ದರಿಂದ ಸಗರನೆಂದರೆ ಇಮ್ಮಡಿ ತೈಲಪನೆಂದೇ ನನ್ನ ಊಹೆ. ಎರಡನೆಯ ಸಗರನೂ ಚಕ್ರವರ್ತಿ, ಇಮ್ಮಡಿ ತೈಲಪನೂ ಚಕ್ರವರ್ತಿ; ಆದ್ದರಿಂದ, ಮೇಲೆ ಹೇಳಿದಂತೆ ಚಕ್ರವರ್ತಿ ಸಗರನು ಉತ್ತರದ ದಿಗ್ವಿಜಯ ತೀರಿಸಿಕೊಂಡು, ದಕ್ಷಿಣಕ್ಕೆ ಬಂದು ಕವಿರತ್ನನಿಂದೆ ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯನ್ನು ಬರೆಯಿಸಿದನು; ಎಂದರೆ, ಚಾಳುಕ್ಯ ಚಕ್ರವರ್ತಿ ಆಹವಮಲ್ಲ ಇಮ್ಮಡಿ ತೈಲಪನು ಉತ್ತರದ ದಿಗ್ವಿಜಯ ತೀರಿಸಿ, ದಕ್ಷಿಣಕ್ಕೆ ಬಂದು ರನ್ನಕವಿಯಿಂದ ಮೊದಲನೆಯ ಚಕ್ರವರ್ತಿಯಾದ ಭರತೇಶ್ವರನ ಚರಿತ್ರೆಯನ್ನು ಬರೆಯಿಸಿರಬಹುದು. ಇದೇ ರನ್ನನು ಅಜಿತನಾಥಪುರಾಣದಲ್ಲಿ ಹೇಳುವ 'ಚಕ್ರೇಶ್ವರಚರಿತೆ' ಆಗಿರಬಹುದು. (ಗದಾಯುದ್ಧದ ಕಾಲನಿರ್ಣಯ ಕ. ಸಾ ಪ ಪ. XXIV. ೨. ಪು. ೧೪೫–೪೭)

ಶ್ರೀಮಾನ್ ಗೋವಿಂದ ಪೈಯವರು ರನ್ನನ ಈ ಹೇಳಿಕೆಯನ್ನೇ ವಿವೇಚಿಸಿ, ಅತನ 'ಚಕ್ರೇಶ್ವರ ಚರಿತೆ' ಭರತೇಶ್ವರ ಚಕ್ರವರ್ತಿಯ ಚರಿತ್ರೆಯೇ ಇರಬೇಕೆಂದು ಊಹಿಸಿದ್ದಾರೆ (ಜಯ ಕರ್ನಾಟಕ I ೪-೬ ಮತ್ತು 'ಮೂರು ಉಪನ್ಯಾಸಗಳು.' ಪುಟ ೧೭)

ಆದರೆ ಅಜಿತನಾಥ ಪುರಾಣದ ಒಂಬತ್ತನೆಯ ಆಶ್ವಾಸದಲ್ಲಿ ೩೪ನೆಯ ಪದ್ಯದ ನಂತರದ ಗದ್ಯದಲ್ಲಿ, ಬೇರೊಂದು ಪಾಠಾಂತರವಿದೆ. ಅದುಕೆಳಗಿನಂತಿದೆ:

ಚಕ್ರವರ್ತಿ ಸಗರನು ತನ್ನ ಉತ್ತರದ ದಿಗ್ವಿಜಯ ತೀರಿಸಿ 'ತೆಂಕಣೊಗದೆ ಬಂದುತ್ತರ ಭರತ ಮಧ್ಯಮುಖಂಡ ಮಧ್ಯವರ್ತಿಯಪ್ಪ ವೃಷಭಾಚಲಮಂ ಕಂಡು ಮನದೆಗೊಂಡು ನಿಜವಿಜಯ ಪ್ರಶಸ್ತಿಯಂ ಅಲ್ಲಿ ಬರೆಯಿಸಲೆಂದು ಪೋಗಿ ಪುರಾತನ ಚಕ್ರವರ್ತಿಗಳ ದಿಗ್ವಿಜಯ ಕೀರ್ತಿಗಳಂ ಬಾಜಿಸೆ ಕೇಳ್ದು ಗಳಿತಗರ್ವನಾಗಿ ಕಿರಿದಿಡೆಯ ರತ್ನ ದಂಡದಿಂದೆ ತೊಡೆಯಿಸಿ ಕಳೆದು ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯ ಸನಿಹಾಪದೊಳ್ ನಿಜ ಪ್ರಶಸ್ತಿಯಂ ಕಾಕಿಣೀ ರತ್ನದೊಳ್ ಕವಿರತ್ನನಿಂ ಬರೆಯಿಸಿ ಗಂಗಾದ್ವಾರಕ್ಕೆ ಬಂದು ಗಂಗಾದೇವಿಯಿಂದಭಿಷಿಕ್ತನಾಗಿ .....'

ಈ ಪಾಠಾಂತರದ ಪ್ರಕಾರ ಸಗರನು ಉತ್ತರದ ದಿಗ್ವಿಜಯಗಳನ್ನು ತೀರಿಸಿಕೊಂಡು ವೃಷಭಾಚಲಕ್ಕೆ ಬಂದು, ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯ ಸಮೀಪದಲ್ಲಿ ತನ್ನ ಪ್ರಶಸ್ತಿಯನ್ನು ಕವಿರತ್ನನಿಂದ ಬರೆಸಿದನೆಂದು ಆಗುತ್ತದೆ. ಇಲ್ಲಿ ಚಕ್ರವರ್ತಿ ಸಗರನು ಚಾಳುಕ್ಯ ಚಕ್ರವರ್ತಿ ತೈಲಪನೇ ಇರಬಹುದೆಂದು ನಾನು ಊಹಿಸಿದ್ದರಿಂದ, ಅತನೇ ತನ್ನ ಉತ್ತರದ ದಿಗ್ವಿಜಯಗಳನ್ನು ತೀರಿಸಿಕೊಂಡು ಬಂದು, ಕವಿರನ್ನನಿಂದ ಸಗರನ ಪ್ರಶಸ್ತಿಯನ್ನು ಎಂದರೆ ಸಗರನ ದಿಗ್ವಿಜಯಗಳನ್ನು ವರ್ಣಿಸುವಂತಹ ಕಾವ್ಯವನ್ನು ಬರೆಯಿಸಿದನೆಂದು ಹೇಳಬಹುದು. ಆದುದರಿಂದ ರನ್ನನ ಚಕ್ರೇಶ್ವರ ಚರಿತೆಯು, ನಾನು ಈ ಹಿಂದೆ ಊಹಿಸಿದಂತೆ ಭರತೇಶ್ವರ ಚಕ್ರವರ್ತಿಯ ಕಥೆಯಾಗದೆ, ಅದು ಚಕ್ರವರ್ತಿ ಸಗರನ (ಚಾಳುಕ್ಯ ತೈಲಪನ) ದಿಗ್ವಿಜಯಗಳನ್ನು ವರ್ಣಿಸುವಂತಹ ಕಾವ್ಯವಾಗಿರಬೇಕು; ಮತ್ತು ಆ ಕಾವ್ಯಕ್ಕೆ ಈಶ್ವರ ಚಕ್ರವರ್ತಿ ಸಗರ (ತೈಲಪ)ನೇ ಆಗಿರಬೇಕು.

ಮೇಲೆ ಕಾಣಿಸಿದ ಪಾಠಾಂತರಗಳಲ್ಲಿ ಯಾವುದು ಸರಿ, ಯಾವುದು ತಪ್ಪು? ಎಂಬ ಪ್ರಶ್ನೆ ಏಳುತ್ತದೆ. ಮೊದಲನೆಯದರ ಮೇರೆಗೆ 'ಸಗರನು ರನ್ನನಿಂದ ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯನ್ನು ಬರೆಯಿಸಿದನೆಂದು ಆಗುತ್ತದೆ,' ಎರಡನೆಯದರ ಪ್ರಕಾರ 'ಸಗರನು ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯ ಸಮೀಪದಲ್ಲಿ ತನ್ನ ಪ್ರಶಸ್ತಿಯನ್ನು ಕವಿರನ್ನನಿಂದ ಬರೆಯಿಸಿದನೆಂದು ಆಗುತ್ತದೆ.' ಇದರಲ್ಲಿ ಯಾವುದು ಸರಿ—ಎಂಬುದನ್ನು ತಿಳಿದುಕೊಳ್ಳಬೇಕಾದರೆ, ಉಳಿದ ಜೈನಪುರಾಣಗಳಲ್ಲಿ ದಿಗ್ವಿಜಯಗಳ ಪ್ರಶಸ್ತಿಯನ್ನು ಬರೆಯಿಸುವ ರೂಢಿ ಹೇಗಿದೆ ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯ.

ಪಂಪನು ತನ್ನ ಆದಿಪುರಾಣದಲ್ಲಿ ಭರತ ಚಕ್ರವರ್ತಿಯು ಉತ್ತರದ ದಿಗ್ವಿಜಯಗಳನ್ನು ತೀರಿಸಿಕೊಂಡು ತೆಂಕನೊಗದೆ ಬಂದು ವೃಷಭಾಚಲಮಂ ಕಂಡನ್; ಆ ವೃಷಭಾದ್ರಿಮೇಖಲಾ—ಭಿತ್ತಿಯೊಳ್ ತನ್ನ ವಿಜಯ ಪ್ರಶಸ್ತಿಯನಲ್ಲಿಯೊಳ್ ಬರೆಯಿಸುವೆನೆಂದು ಪೋಗಿ ನೋಡುವನ್ನೆಗಂ—

ಅದಜೊಳನೇಕ ಕಲ್ಪಶತಕೋಟಿಗಳೊಳ್ ಸಲೆ ಸಂದ ಚಕ್ರಿವ್ರಂ।
ದದ ಚಲದಾಯು ದಾಯತಿಯು ಬೀರದ ಜಾಗದ ವಗಾತುಗಳ್ ಪೊದ॥
ಳ್ದೊದವಿರೆ ತತ್ಪ್ರಶಸ್ತಿಗಳೊಳಂತವನೊಯ್ಯನೆ ನೋಡಿ ನೋಡಿ ಸೋ
ರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರ ಚಕ್ರವರ್ತಿಯಾ

ಅಂತು ಗಳಿತಗರ್ವನಾಗಿ ಸಿಗ್ಗಾಗಿ ಪೂರ್ವಾವನಿವಾಳಪ್ರಶಸ್ತಿಯೊಳೊಂದಂ ದಂಡರತ್ನದಿಂ ಸೀಂಟೆ ಕಳೆದು, ನಿಜಪ್ರಶಸ್ತಿಗೆಡೆ ಮಾಡಿ ವಿತ್ಕೀಯ ವಿಜಯ ಪ್ರಶಸ್ತಿಯನಾವೃಭಗಿರಿಯೊಳ್ ಬರೆಯಿಸಿ..... ...ಎಂದು ಹೇಳಿದ್ದಾನೆ.

(ಆದಿಪುರಾಣ ಸಂಗ್ರಹ. ಭರತವಿಜಯಪ್ರಶಸ್ತಿ. ಪುಟ ೬೬–೬೭)

ಪೊನ್ನನು ತನ್ನ ಶಾಂತಿಪುರಾಣದಲ್ಲಿ, ಐದನೆಯ ಚಕ್ರವರ್ತಿಯಾದ ಶಾಂತೀಶ್ವರನು ಅನೇಕ ಚಕ್ರವರ್ತಿಗಳ ಹೆಸರುಗಳನ್ನು ಬರೆದ 'ನಿಬಂಧದ ಹೊತ್ತಗೆ'ಯೆಂಬಂತಿದ್ದ ವೃಷಭಾಚಲವನ್ನು ನೋಡಿ, ಆ ಪರ್ವತಕ್ಕೆ ತನ್ನ ಹೆಸರನ್ನು ಬರೆಯಿಸಬೇಕೆಂದು ಹೋಗಿ ನೋಡುವಷ್ಟರಲ್ಲಿ, ಹಿಂದಿನ ಚಕ್ರವರ್ತಿಗಳ ಪ್ರಶಸ್ತಿಗಳು ದಟ್ಟವಾಗಿ ಬರೆಯಲ್ಪಟ್ಟಿರುವುದನ್ನು ನೋಡಿ :

ಮುಂ ಬರೆದಭಿಧಾನಮನಳಿ।
ದಿಂ ಬರೆವಹೆಮಿಕೆಯ ಪೆಸರೊಳೇವಂದಪುದೇ
ನುಂ ಬೇಡಬನ್ನಿಮೆಂದಧಿ।
ಪಂ ಬೀಡಂ ಬಂದು ಪೊಕ್ಕು ಸುಖದಿಂದಿರ್ದಂ॥

(ಶಾಂತಿ ಪುರಾಣ XI. ೬೩)

ಆದರೂ ಮಂತ್ರಿಮುಖ್ಯರು ಪುರಾತನ ಚಕ್ರವರ್ತಿಪ್ರವರ್ತಿತ ಮಾರ್ಗವಿದೆಂದು, ಕಾಕಿಣಿರತ್ನದಿಂದ ಅಲ್ಲಿದ್ದ ಒಂದು ಪ್ರಶಸ್ತಿಯನ್ನು ತೊಡೆದು ಕಳೆದು, ಶಾಂತೀಶ್ವರನ ಪ್ರಶಸ್ತಿಯನ್ನು ಬರೆಯಿಸಿದರು.

ಪಂಪನು ಆದಿಪುರಾಣದಲ್ಲಿ, ಭರತಚಕ್ರವರ್ತಿಯು ತನ್ನ ಉತ್ತರ ದಿಗ್ವಿಜಯಗಳನ್ನು ತೀರಿಸಿಕೊಂಡು ವೃಷಭಾಚಲಕ್ಕೆ ಬಂದು ತನ್ನದೇ ಪ್ರಶಸ್ತಿಯನ್ನು ಬರೆಯಿಸಿದನೆಂದು ಹೇಳಿದ್ದಾನೆ. ಪೊನ್ನನ ಶಾಂತಿಪುರಾಣದಲ್ಲಿ, ಶಾಂತೀಶ್ವರನು ತನ್ನ ಉತ್ತರದಿಗ್ವಿಜಯುಗಳನ್ನು ತೀರಿಸಿಕೊಂಡು ವೃಷಭಾಚಲಕ್ಕೆ ಬಂದು ಹಿಂದಿನ ಚಕ್ರವರ್ತಿಗಳ ಪ್ರಶಸ್ತಿಗಳನ್ನು ನೋಡಿ, ಅಲ್ಲಿ ತನ್ನ ಪ್ರಶಸ್ತಿ ಬೇಡವೆಂದರೂ, ಅತನ ಮಂತ್ರಿಗಳು ಪುರಾತನ ಚಕ್ರವರ್ತಿಪ್ರವರ್ತಿತ ಮಾರ್ಗವಿದೆಂದು ಹೇಳಿ, ಶಾಂತೀಶ್ವರನ ಪ್ರಶಸ್ತಿಯನ್ನು ಬರೆಯಿಸಿದರು. ಇಲ್ಲಿ ಪುರಾತನ ಚಕ್ರವರ್ತಿಪ್ರವರ್ತಿತ ಮಾರ್ಗವೆಂದರೆ, ಹಿಂದಿನ ಚಕ್ರವರ್ತಿಗಳು ನಡೆಯಿಸಿಕೊಂಡು ಬಂದ ಕ್ರಮವೆಂದು ಹೇಳಬೇಕಾಗುವುದು. ಇದರ ಮೇಲಿಂದ ನೋಡಲಾಗಿ, ದಿಗ್ವಿಜಯ ಮಾಡಿದ ಚಕ್ರವರ್ತಿಗಳು ತಮ್ಮ ಪ್ರಶಸ್ತಿಯನ್ನೇ ಬರೆಯಿಸುತ್ತಿದ್ದರು ಹೊರತು ಎರಡನೆಯವರದಲ್ಲ—ಎಂದು ಕಂಡುಬರುತ್ತದೆ. ಮೇಲಾಗಿ ದಿಗ್ವಿಜಯ ಮಾಡಿದ ಚಕ್ರವರ್ತಿಗಳು, ತಮ್ಮ ಹೊರತಾಗಿ ಉಳಿದವರ ಪ್ರಶಸ್ತಿ ಬರೆಯಿಸಿದ್ದು ಯಾವ ಪುರಾಣಗಳಲ್ಲಿಯೂ ಕಂಡುಬಂದಿಲ್ಲ. ಆದುದರಿಂದ, ಮೊದಲನೆಯ ಪಾಠಾಂತರವು ಸರಿಯಾಗದೆ, ಎರಡನೆಯ ಪಾಠಾಂತರವೇ ಸರಿಯಾಗುವುದೆಂದು ಹೇಳಬೇಕಾಗುವುದು. ಸಗರನು ಕವಿರತ್ನನಿಂದ ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯನ್ನು ಬರೆಯಿಸದೆ, ತನ್ನ ಪ್ರಶಸ್ತಿಯನ್ನೇ ಬರೆಯಿಸಿದನೆಂದು ಹೇಳುವುದು ಸರಿಯಾಗುವುದು. ಸಗರನು ಚಾಳುಕ್ಯ ತೈಲಪನೇ ಇರಬೇಕೆಂದು ನಾನು ಈ ಮೊದಲೇ ಊಹಿಸಿದ್ದರಿಂದ, ಚಾಳುಕ್ಯ ತೈಲಪನೇ ತನ್ನ ಉತ್ತರದ ದಿಗ್ವಿಜಯ ಮಾಡಿದನಂತರ, ಕವಿರನ್ನನಿಂದ ಸಗರನ ದಿಗ್ವಿಜಯಗಳ ವರ್ಣನೆ ಮಾಡುವಂತಹ ಕಾವ್ಯವನ್ನು ಬರೆಯಿಸಿದನೆಂದು ಹೇಳಬಹುದು. ಆದುದರಿಂದ ರನ್ನನ ಚಕ್ರೇಶ್ವರಚರಿತೆಯು ಭರತಚಕ್ರವರ್ತಿಯ ಕಥೆಯಾಗದೆ ಚಕ್ರವರ್ತಿ ಸಗರ (ತೈಲಪ)ನನ್ನು ಹೊಗಳುವ ಕಾವ್ಯವಾಗಿರಬೇಕು.

ತಿನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಸೂತ್ರಗಳಿಗೆ ಲಕ್ಷ್ಯಗಳೆಂದು ಉಲ್ಲೇಖಿಸಲ್ಪಟ್ಟ ಕೆಲವು ಪದ್ಯಗಳು, ರನ್ನನ ಚಕ್ರೇಶ್ವರಚರಿತೆಯಲ್ಲಿರಬಹುದಾದುವುಗಳು—ನಿಂದು ತೋರುತ್ತದೆ. ಆ ಪದ್ಯಗಳನ್ನು ಕೆಳಗೆ ಕಾಣಿಸಿದ್ದೇನೆ:

" ಪದಿನೆಣ್ಬಾಸಿರ ಲೋಹವಕ್ಕರೆಯ ಜಾತ್ಯಶ್ವಂಗಳಿರ್ಭಾಸಿರಂ
ಮದಮಂ ಮುಕ್ಕುಳಿಸಿರ್ದ ದಂತಿಘಟೆಗಳ್ ಪತ್ತೆಂಟು ಲಕ್ಕಂ ರಣೋ
ನ್ಮದ ಪತ್ತಿವ್ರಜಮೆಂಬ ಸೈನ್ಯಮುದದಿಂ ಬಂದರ್ ಪಲರ್ ಕಾದಿಯೋ
ಡಿದೊಡೆಲ್ಬಟ್ಟೆದನಟ್ಟಿ ಮುಟ್ಟಿಪಿಡಿದಂ ಚಾಳುಕ್ಯ ಚಕ್ರೇಶ್ವರಂ ॥೭೭॥
ತೊರೆಗಲೆ ರಟ್ಟಹಳ್ಳಿ ನೆಗಳ್ದಾಜಿರಗೋಳಮೆನಿಪ್ಪಗುರ್ವೆತ್ತರಿಕೆಯ ಬೇಡವಟ್ಟುಗಳ ಬೂತುಗ ಬೀರುಗ ಗೋಯೆಯರ್ಕಳಾ ॥
ನೆರೆಯರಿನಿಪ್ಪೊಡಂ ಕಿಡಿಸಲಂಕದ ಮುನ್ನಿನ ಚಕ್ರವರ್ತಿಗಳ್
ಪೆರರಳವಲ್ತವಂ ಕಿಡಿಸಿತೊಟ್ಟಜೆ ತೈಲಸ ಚಕ್ರವರ್ತಿಯಾ ॥ (೨೧೩)

ತನಗಿಲ್ಲದ ಭಯಮಂ ತೈ-
ಲನಾಂತು ರಿಪುನೃಪರ್ಗೆ ಕುಡುವನವರ್ಗಿಲ್ಲದುದಂ
ವಿನುತಜಯಶ್ಲಾಘ್ಯಯಶೋ-
ಧನತುಂ ತಾನೀಳ್ದು ಕೊಳ್ವನೇನಚ್ಚರಿಯೋ ! ॥ (೨೨೭)

ರನ್ನನು ಚಕ್ರೇಶ್ವರಚರಿತೆಯನ್ನು ಅಜಿತನಾಥಪುರಾಣಕ್ಕಿಂತ ಮೊದಲು ಹಾಗೂ ಪರಶುರಾಮಚರಿತೆಯನಂತರ ಬರೆದಿದ್ದಾನೆ. ಅಜಿತನಾಥಪುರಾಣವನ್ನು ರನ್ನನು ಶಕೆ ೯೧೫ರ ವಿಜಯಸಂವತ್ಸರದಲ್ಲಿ ಎಂದರೆ ಕ್ರಿ. ಶ. ೯೯೩ರಲ್ಲಿ ಬರೆದಿದ್ದಾನೆ. ಪರಶುರಾಮಚರಿತೆಯನ್ನು ರನ್ನನು ಚಾವುಂಡರಾಯನ ಕಾಲದಲ್ಲಿ ಎಂದರೆ ಸುಮಾರು ಕ್ರಿ. ಶ. ೯೭೮–೯೦ರಲ್ಲಿ ಬರೆದಿರಬಹುದು. ಆದ್ದರಿಂದ ಚಕ್ರೇಶ್ವರಚರಿತೆಯು ಕ್ರಿ. ಶ. ೯೮೦ರಿಂದ ಕ್ರಿ. ಶ. ೯೯೩ರೊಳಗಾಗಿ ರನ್ನನಿಂದ ಬರೆಯಲ್ಪಟ್ಟಿರಬೇಕು. ದಿ. ರಾ ನರಸಿಂಹಾಚಾರ್ಯರವರು ಸಂಪಾದಿಸಿದ ಗದಾಯುದ್ಧದ ಕೊನೆಗೆ:

ಶಕನೃಪಸಮಗತಿ ಋತುಯುಗ ಶಶಿ
ನಿಕರಾಂಕಂ ಚಿತ್ರಭಾನು (ಸಂವತ್ಸರ) ಕಾ ।
ರ್ತಿಕ ಸಿತಸಪ್ತಮಿ ದಿನದೊಳ್
ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ ॥

ಎಂಬ ಪದ್ಯವಿದೆ. ಈ ಪದ್ಯವು ರನ್ನನ ಗದಾಯುದ್ಧದ ರಚನೆಯ ಕಾಲವನ್ನು ಹೇಳಲಾರದು. ಇದು ಅಲ್ಲಿ ಪ್ರಕ್ಷಿಪ್ತವಾಗಿರಬೇಕೆಂದೂ ರನ್ನನ ಗದಾಯುದ್ಧವು ಕ್ರಿ. ಶ. ೧೦೦೫ರಿಂದ ೧೦೮೯ರೊಳಗಾಗಿ ಬರೆಯಲ್ಪಟ್ಟಿರಬೇಕೆಂದೂ ನಾನು ಬೇರೆಡೆಗೆ ಹೇಳಿದ್ದೇನೆ. (ಗದಾಯುದ್ಧದ ಕಾಲನಿರ್ಣಯ. ಕ. ಸಾ. ಪ. ಪ XXIV. ೨. ಶಿಲಾಹಾರ ಅಪರಾಜಿತನು ನೂರ್ಮಡಿ ತೈಲಪನ ವಾಂತಲಿಕನಿದ್ದಿರಬಹುದೇ ? ಪ್ರಬುದ್ಧ. ಕ. XX. ೪. ಮತ್ತು ರನ್ನನ ಗದಾಯುದ್ಧದ ಕಾಲನಿರ್ಣಯ ಜಯಕರ್ನಾಟಕ XVIII. ೭.) ಈ ಪದ್ಯವಿದ್ದ ಕಾವ್ಯ ಶಕೆ ೯೦೪ರ ಚಿತ್ರಭಾನು ಸಂವತ್ಸರದಲ್ಲಿ ಎಂದರೆ ಕ್ರಿ. ಶ. ೯೮೨ರಲ್ಲಿ ರನ್ನನಿಂದ ಬರೆಯಲ್ಪಟ್ಟಿರಬೇಕು. ಈ ಪದ್ಯವು ರನ್ನನ ಚಕ್ರೇಶ್ವರಚರಿತೆಯ ರಚನೆಯ ಕಾಲವನ್ನೇ ತೋರಿಸುತ್ತದೆಂದು ನಿಃಸಂಶಯವಾಗಿ ಹೇಳಬಹುದು. ಆದ್ದರಿಂದ ರನ್ನನು, ಚಕ್ರೇಶ್ವರಚರಿತೆಯನ್ನು ಕ್ರಿ. ಶ. ೯೮೨ರಲ್ಲಿ ಬರೆದನೆಂದು ಹೇಳಬಹುದು.

ಒಟ್ಟಿನಲ್ಲಿ ಹೇಳಬೇಕಾದರೆ ರನ್ನನು ತನ್ನ ಚಕ್ರೇಶ್ವರಚರಿತೆಯನ್ನು ಕ್ರಿ ಶ. ೯೮೨ರಲ್ಲಿ ಬರೆದಿರಬೇಕು. ಅದು ಭರತ ಚಕ್ರವರ್ತಿಯ ಕಥೆಯಾಗಿರದೆ ಎರಡನೆಯ ಚಕ್ರವರ್ತಿಯಾದ ಸಗರನ ಕಥೆಯನ್ನು ಹೇಳುವಂತಹ ಕಾವ್ಯವಾಗಿರಬೇಕು. ಈ ಚಕ್ರೇಶ್ವರ ಚರಿತೆಯನ್ನು ತೈಲಪನು, ತನ್ನ ಉತ್ತರದ ದಿಗ್ವಿಜಯಗಳನ್ನು ತೀರಿಸಿಕೊಂಡು ಬಂದಮೇಲೆ, ಕವಿರನ್ನನಿಂದ ಬರೆಯಿಸಿ ನೋಡಿ ಆನಂದಬಟ್ಟು ಅತನಿಗೆ 'ಕವಿಚಕ್ರವರ್ತಿ' ಎಂಬ ಬಿರುದನ್ನು ಕೊಟ್ಟಿರಬೇಕು.

ಗೆಳತೀ ನೋಡ ಜಾತ್ರಿ!

ಶೀ. ಎಸ್. ವಿ. ಗಲಗಲಿ, ಧಾರವಾಡ

ಶಲಪಲ ಶಲಪಲ! ಜರಿನಾರಿ ಚಿಮ್ಮುವ
ಗೆಳತಿ ನೋಡ ಜಾತ್ರಿ!।
ಹ್ಯಾಂಗ! ನೆರೆದದ ಜನಜಾತ್ರಿ! ॥ ಪ ॥

ಕಂಕೆಯ ಹೊತ್ತಿಹ ಹೆಣ್ ಗಂಡೆಲ್ಲಾ!
ಗುಡೀಗೆ ಸಾಗೇದ।
ಮುಡಿಪನು! ಸಲ್ಲಿಸ ನಡದಽದ ॥
ಸೀರಿ ಕುಬಸ ರುಂಬಾಲ ಬಣ್ಣಗಳ
ಸಂತೆಯೆ ನೆರೆದಂದ।
ಕಾಮನ-! ಬಿಲ್ಲೀ ಮೂಡೇದ ॥ ೧

ಕಪ್ಪರ ಕಾಯೀ! ಮೇವು-ಮಿಠಾಯೀ!
ಬಳೆಗಳು ಬಂದಾವ!।
ಅಂಗಡಿ! ಬೀದಿಗೆ ಬಗದಾವ ॥
ಹೂಗಳು ಇಲ್ಲಿವೆ. ಹಣ್ಣುಗಳಲ್ಲಿವೆ.
ಗಂಧಾ ಬೀರ್ಯಾವ! ॥
ಮೂಗಿಗೆ ಮಬ್ಬನೆ ಹಿಡಿಸ್ಯಾವ! ೨

ಗಂಟೆಯ ಘಣಘಣ! ಝಾಂಗಟಿ ಢಂಢಣ!
ಗೆಜ್ಜೆಯ ಘಿಲಿಘಿಲಿತಾ!
ಕುಣಿತದ! ಥಕ ಧೈ ಥಕಧೈತಾ! ॥
ನಗಾರಿ ಭೇರಿ.ಬಜಂತ್ರಿಯ ಸಪ್ಪಳ!
ಮುಗಿಲನು ಮುಟ್ಟೀದ! ॥
ಜಾತಂ! ಡಂಗುರ ಹೊಡಿತಽದ ॥ ೩

ಲಗು ಲಗು! ನಡಿ ನಡಿ! ಜಾತರಿ ನೋಡುಣು!
ಹೊಸಬತಿ ನೀ ಮತ್ತ!
ಕೈಹಿಡಿ! ಬಿಡದಿರು; ಬಾ ಇತ್ತ. ॥
ಸೆರಗು ಸರಿಸು! ಇಲದಿದ್ದರ, ಸಿಂಗರ-
ಹಿರಿಹೊಳಿ ಹರಿದೀತೂ!
ಎಲ್ಲರ! ಮುಳುಗಿಸಿ ಬಿಟ್ಟೀತ! ॥ ೪

ಬಾರದು!

(ಜಾನಪದ ಶೈಲಿ)

ಶ್ರೀ. ರಂಗರಾವ ದೇಶಪಾಂಡೆ, ಅಲದಕಟ್ಟೆ

೧

ಕಳ್ಳಸುಳ್ಳರಿಗಾಸ್ಪದ ಕೊಡಬಾರದು। ಹೊಲದಾಗ್
ಮುಳ್ಳುಗಿಡ ಗೊಬ್ಬರಾ ಹಾಕಿ ಬೆಳ್ಸಬಾರದು! ॥

೨

ಕಳ್ಳೀಹಾಲು ಬೆಳ್ಳಂದಂತ ಕುಡೀಬಾರದು। ಹೆಣ್ಣಿನ್-
ಚೆಲ್ವನೋಡಿ ಗುಣಹೀನಳನ್ಯಾಡಬಾರದು! ॥

೩

ಸುಳ್ಳನ ಮಾತಾ ನಂಬಿ ವೋಸಹೋಗ್ ಬಾರದು। ಮತ್ತಽ-
ಎಲ್ಲಾ ಜನರು ಬ್ಯಾಡೆಂದ್ಮೆಲಸಾ ಮಾಡಬಾರದು! ॥

೪

ತಳ್ಳಕಾರರ ಸಂಗತಿ ಎಂದೂ ಮೆಚ್ಚಬಾರದು। ಒಣ-
ಹುಲ್ಲಿನೊಳಗ ಕೊಳ್ಳಿ ಎಂದೂ ಚುಚ್ಚಬಾರದು! ॥

೫

'ಇಲ್ಲಿಂದೇಳು' ಎಂಬಲ್ಹೋಗಿ ಕೂಡಬಾರದು। ಎಂದೂ-
ಬಲ್ಲಿದರ್‌ಕೂಡ ಕ್ಷುಲ್ಲಕಮಾತು ಬೆಳೆಸಬಾರದು! ॥

೬

ಹಲ್ಕಿಂದು-ಪರರಲ್ಹೋಗಿ-ಬೇಡಬಾರದು। ಮತ್ತಽ-
ಸಲ್ಲದ ಮಾತ್ನಾಡಿ-ಮಾನಾ ಕಳಕೋಬಾರದು! ॥

೭

ಎಲ್ಲರೊಳಗೂ ಬಲ್ಲವ ತಾನೆಂದ್ಹೇಳ್ ಬಾರದು। ಸುಮ್ನೆ-
ಕಲ್ಲಿನ್ಹಾಂಗ ಏನೂ ಮಾಡ್ದೇ ಕೂಡ್ ಬಾರದು! ॥

೮

ಒಳ್ಳೇ ಕಾರ್ಯಕ್ಕೆಂದೂ ಅಡ್ಡಾಲ ಒಡ್ಡಬಾರದು। ಪರ-
ನಲ್ಲೇಕೂಡ ಸರಸ ಸಲ್ಲಾಪಾಡ ಬಾರದು! ॥

೯

ಕಲ್ಲೇ-ದೇವ್ರಂತ ಕೈಮುಗಿಯ ಬಾರದು। ಭಕ್ತಿ-
ಇಲ್ಲದಿದ್ರ ಮುಕ್ತಿ ಎಂದೆಂದಿಗೂ ಬಾರದು! ॥

೧೦

ಕಳ್ಳಸುಳ್ಳರಿಗಾಸ್ಪದ ಕೊಡಬಾರದು—ಹೊಲದಾಗ್
ಮುಳ್ಳುಗಿಡ ಗೊಬ್ಬರಾ ಹಾಕಿ ಬೆಳಸಬಾರದು ॥

ತಾಮ್ರಪಟಗಳು

(ಪರಿಚಯಾತ್ಮಕ ಲೇಖನ)

ಶ್ರೀ. ಎ. ಎಂ. ಅಣ್ಣಿಗೇರಿ ಎಂ. ಎ. ಧಾರವಾಡ

ಕನ್ನಡನಾಡು, ಪ್ರಾಚೀನ ಕಾಲದ ತಾಮ್ರಶಾಸನಗಳಿಗೆ ಆಗರವಾಗಿದೆ. ನಮ್ಮ ಕಣ್ಮರೆಯಾದ ಇತಿಹಾಸ-ಸಂಸ್ಕೃತಿಗಳ ಬಹುಭಾಗವನ್ನು ಮತ್ತೆ ನಮಗೆ ಒದಗಿಸಿಕೊಟ್ಟವು ಈ ತಾಮ್ರ-ಶಾಸನಗಳೆ! ಇನ್ನೂ ಕತ್ತಲ ಕೋಣೆಯಲ್ಲಿ ಕಿಲುಬುಗಟ್ಟಿ ಬಿದ್ದ ತಾಮ್ರಶಾಸನಗಳು ನಮ್ಮಲ್ಲಿ ಎಷ್ಟಿವೆಯೋ ಏನೋ!

ಭಾರತೀಯರು ಭೂರ್ಜಪತ್ರ, ತಾಳೆಯೋಲೆ, ಕಾಗದ, ಕಟ್ಟಿಗೆ, ತೊಗಲು, ಅರಿವೆ, ಇಟ್ಟಂಗಿ, ಶಿಲೆ, ತಾಮ್ರ, ಬೆಳ್ಳಿ, ಬಂಗಾರ, ಹಿತ್ತಾಳೆ, ಕಂಚು, ಕಬ್ಬಿಣ ಇತ್ಯಾದಿಗಳನ್ನು ಬರೆಹದ ಸಾಧನಗಳನ್ನಾಗಿ ಬಳಸುತ್ತಿದ್ದುದು ಕಂಡುಬರುತ್ತದೆ. ಸುಲಭವಾಗಿ ಮತ್ತು ಹೆಚ್ಚು ಪ್ರಮಾಣದಲ್ಲಿ ದೊರೆಯುವ ಭೂರ್ಜಪತ್ರ, ಕಾಗದ, ತಾಳೆಯೋಲೆ ಇವುಗಳ ಮೇಲೆ ಸಾಹಿತ್ಯ ಮತ್ತು ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನೂ, ಕಾಗದ-ಪತ್ರ ಮುಂತಾದುವುಗಳನ್ನೂ ಬರೆದಿದ್ದಾರೆ. ಆದರೆ ಶಿಲಾ ಮತ್ತು ತಾಮ್ರ ಮೊದಲಾದ ಧಾತುಗಳ ಫಲಕಗಳನ್ನು, ಬರೆಹಗಳು ಬಹುಕಾಲ ಉಳಿಯಬೇಕೆಂಬ ಉದ್ದೇಶದಿಂದ ಉಪಯೋಗಿಸಿದ್ದಾರೆ. ಇವುಗಳ ಮೇಲೆ ಅಕ್ಷರಗಳನ್ನು ಕೊರೆಯಲು ವಿಶೇಷ ಶ್ರಮಪಡಬೇಕಾಗುತ್ತಿತ್ತು.

ಶಿಲಾಶಾಸನ, ನಾಣ್ಯ, ಪುರಾಣ, ಸಾಹಿತ್ಯಗ್ರಂಥ ಮುಂತಾದುವುಗಳಿಂದ ದೇಶದ ಐತಿಹಾಸಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ, ಮತ್ತು ಭಾಷೆಗಳ ಜ್ಞಾನವಾಗುವಂತೆ, ತಾಮ್ರಪಟಗಳ ಮೂಲಕವೂ ಆಗುತ್ತದೆ. ಸಾಮಾನ್ಯವಾಗಿ, ರಾಜರು ದತ್ತಿಗಳನ್ನು ವ್ಯಕ್ತಿಗಳಿಗೆ ಕೊಟ್ಟಾಗ, ತಾಮ್ರಪಟಗಳ ಮೇಲೆ ಆ ದತ್ತಿಗಳ ವಿವರಗಳನ್ನು ಬರೆಸಿ ಕೊಡುತ್ತಿದ್ದರು. ತಾಮ್ರಪಟಗಳ ಮೇಲೆ ಬರೆದುಕೊಟ್ಟ ದತ್ತಿಪತ್ರವನ್ನು ಸುರಕ್ಷಿತವಾಗಿ ಕಾಯ್ದಿಡಲಿಕ್ಕೂ ಮತ್ತು ಬೇರೆ ಕಡೆಗೆ ಸ್ಥಳಾಂತರಿಸಲಿಕ್ಕೂ ಅನುಕೂಲವಾಗುತ್ತಿತ್ತು. ಕೊಟ್ಟ ದತ್ತಿಗಳ ನಕಲನ್ನು ರಾಜರು ತಮ್ಮ ಕಡೆಗೆ ಆಧಾರಕ್ಕಾಗಿ ಇಟ್ಟುಕೊಳ್ಳುತ್ತಿದ್ದರು. ಹಲಸಿಗೆ ಮತ್ತು ತಾಣಾ ಮುಂತಾದ ರಾಜಧಾನಿಗಳಲ್ಲಿ ದೊರೆತ ತಾಮ್ರಪಟ್ಟಿಕೆಗಳು ಇಂಥವುಗಳಾಗಿರಬೇಕೆಂದು ಊಹಿಸಲಡ್ಡಿಯಿಲ್ಲ.

ತಾಮ್ರಪಟಗಳನ್ನು ಹೇಗೆ ಬರೆಯುತ್ತಿದ್ದರು, ಯಾರು ಬರೆಯುತ್ತಿದ್ದರು, ಅವುಗಳಲ್ಲಿ ಬರುವ ವಿಷಯವೇನು; ಅವುಗಳನ್ನು ಭದ್ರವಾಗಿ ಸಂರಕ್ಷಿಸುವ ಪದ್ಧತಿ ಹೇಗೆ ಇತ್ತು, ಮತ್ತು ಅವುಗಳ ಮಹತ್ತ್ವ ಎಂಥದು? – ಎಂಬುದನ್ನು ನೋಡುವಾ: ತಾಮ್ರಪಟಗಳ ಬಳಕೆ ಭಾರತದಲ್ಲಿ ಬುದ್ಧನ ಕಾಲದಲ್ಲಿ ಎಂದರೆ ಕ್ರಿ ಶ ಪೂ ೬ನೆಯ ಶತಮಾನದಲ್ಲಿ ಇತ್ತೆಂದು ಹೇಳಬಹುದು. ಕ್ರಿ. ಶ ೪೦೦ರ ಸುಮಾರಿಗೆ ಈ ದೇಶದಲ್ಲಿ ಸಂಚರಿಸಿದ ಫಾ-ಹ್ಯೆನ್ ಎಂಬ ಪ್ರವಾಸಿಯು, ಬೌದ್ಧವಿಹಾರಗಳಲ್ಲಿದ್ದ ಕೆಲವು ತಾಮ್ರಪಟಗಳನ್ನು ತಾನು ನೋಡಿದ್ದನ್ನೂ ಮತ್ತು ಅವು ಬುದ್ಧನ ಕಾಲದಲ್ಲಿ ಇದ್ದ ಸಂಗತಿಯನ್ನೂ ಉಲ್ಲೇಖಿಸಿದ್ದಾನೆ; ಆದರೆ ಇದುವರೆಗೆ ಅಷ್ಟು ಹಿಂದಿನ ಕಾಲದ ತಾಮ್ರಪಟಗಳೇನೂ ದೊರೆತಿಲ್ಲ.

ಮೌರ್ಯರ ಕಾಲವಾದ್ದಾಗಿರಬಹುದಾದ, ಸಹಸ್ರಾರ ತಾಮ್ರಶಾಸನದಿಂದ ಮತ್ತು ಹುಯಿತ್ಸಾಂಗನ ವರದಿಗಳಿಂದ, ತಾಮ್ರಶಾಸನಗಳನ್ನು ಬರೆಯುವ ಪದ್ಧತಿ, ಫಾ-ಹ್ಯೆನ್‌ನು ಹೇಳಿದಂತೆ ಬುದ್ಧನ ಕಾಲದಲ್ಲಿರಬೇಕೆಂದು ಗ್ರಹಿಸಬಹುದು ಮಹತ್ತ್ವದ ಗ್ರಂಥ ಅಥವಾ ದಾನಪತ್ರಗಳನ್ನು ತಾಮ್ರದ ತಗಡುಗಳ ಮೇಲೆ ಬರೆದು ಭದ್ರವಾಗಿ ಹೂಳಿಡುತ್ತಿದ್ದರು. ಕನಿಷ್ಕನು ಸೂತ್ರಪಿಟಕ, ವಿನಯಪಿಟಕ ಮತ್ತು ಅಭಿಧರ್ಮಪಿಟಕ ಇವುಗಳ ಮೇಲೆ ಟೀಕೆಯನ್ನು ತಾಮ್ರಪಟಗಳ ಮೇಲೆ ಬರೆಯಿಸಿ, ಅವುಗಳನ್ನು ಕಲ್ಲಿನ ಪೆಟ್ಟಿಗೆಯಲ್ಲಿ ಹಾಕಿ ಸ್ತೂಪಗಳಲ್ಲಿಡಿಸಿದನೆಂದು ಗೊತ್ತಾಗುತ್ತದೆ. ನಾಗಾರ್ಜುನರು ಬರೆದ ವೇದಭಾಷ್ಯವನ್ನು ಸಹ ಇದೇ ಪ್ರಕಾರ ಭದ್ರವಾಗಿಡಲಾಯಿತೆಂದು ಹೇಳುತ್ತಾರೆ. ಶಿಲಾಕಾರ ಗುಡ್ಡಾದಿತ್ಯನ ಒಂದು ತಾಮ್ರಶಾಸನವನ್ನು ಕಲ್ಲಿನ ಪೆಟ್ಟಿಗೆಯಲ್ಲಿ ಹಾಕಿ ಇಟ್ಟುದು, ಕೊಲ್ಹಾಪುರದಲ್ಲಿ ದೊರೆತಿದೆ. ಆ ಕಲ್ಲಿನ ಪೆಟ್ಟಿಗೆಯನ್ನು ಈಗಲೂ ಕೊಲ್ಹಾಪುರದ ವಸ್ತುಸಂಗ್ರಹಾಲಯದಲ್ಲಿ ನಾವು ನೋಡಬಹುದು. ಈ ಕಲ್ಲಿನ ಪೆಟ್ಟಿಗೆಗೆ ಎಳೆಮ ಸರಿಸುವಂತಹ ಒಂದು ಮುಚ್ಚಳವಿದೆ. ಇದರ ಆಕೃತಿ ೧ ಪೂ-೨೨ ಇಂಚು ಉದ್ದ, ೧೪ಪೂ-೮ರ್ಧ ಇಂಚು ಅಗಲ, ಮತ್ತು ೧೦ ಇಂಚು ಎತ್ತರ ಇರುತ್ತದೆ. ಒಳಬದಿಯನ್ನು ತಾಮ್ರಪಟಗಳು ಹಿಡಿಯುವಷ್ಟು ಮಾತ್ರ ಕಡೆಯಲಾಗಿದೆ. ತಾಮ್ರಪಟಗಳಿಗೆ ಹಾಕಿದ ಮುದ್ರೆಯನ್ನು ಇಡಲೂ ಬರುವಂತೆ

ಪ್ರತ್ಯೇಕ ಕೆತ್ತಿದ್ದಾರೆ. ಹಾಗೆಯೇ ನೋಡಿದರೆ ಈ ಪೆಟ್ಟಿಗೆಯು ಒಂದು ಕಲ್ಲಿನ ತುಂಡಿನಂತೆ ಭಾಸವಾಗುವುದು. ಇದರಿಂದ ನಮ್ಮ ಪೂರ್ವಜರು ತಾಮ್ರಶಾಸನಗಳನ್ನು ಸಂರಕ್ಷಿಸಿಡಲು ಎಷ್ಟು ವಿಶೇಷ ಗಮನಕೊಡುತ್ತಿದ್ದರೆಂಬುದು ತಿಳಿಯುವುದು. ಇದರಲ್ಲಿದ್ದ ತಾಮ್ರಶಾಸನದ ಕಾಲ ಕ್ರಿ. ಶ. ೧೧೬೬.

ತಾಮ್ರಪಟಗಳನ್ನು ತಯಾರಿಸುವ ವಿಧಾನ ಬೇರೆ ಬೇರೆ. ಯಾಗಿತ್ತು. ಸಹಗೌರ ತಾಮ್ರಪಟವನ್ನು ಉಸುಬಿನಲ್ಲಿ ಎರಕ ಹೊಯ್ದು ತಯಾರಿಸಿದ್ದಾರೆ. ಇದರ ಮೇಲಿನ ಅಕ್ಷರಗಳು ಮತ್ತು ಮುದ್ರೆಗಳು ಎದ್ದುಬಂದಿವೆ ಸಾಮಾನ್ಯವಾಗಿ ತಾಮ್ರದ ತಗಡುಗಳನ್ನು ಬಡಿದು ಬರೆಯಲು ಸಿದ್ಧವಾಗುತ್ತಿದ್ದರು. ಕೆಲವು ತಾಮ್ರಶಾಸನಗಳ ಮೇಲೆ ಬಡಿತದ ಗುರುತುಗಳೂ ದೊರೆತಿವೆ ತಾಮ್ರಪಟಗಳ ಆಕಾರ ಮತ್ತು ತೂಕ ಕಾಲಕಾಲಕ್ಕೆ ಬೇರೆ ಆಗಿವೆ. ಬಹಳ ಸಣ್ಣ ಮತ್ತು ತೆಳ್ಳನೆಯ ತುಂಡುಗಳನ್ನು ಹಿಡಿದು ದೊಡ್ಡ ಆಕಾರದ ಮತ್ತು ಭಾರವಾದ ತಗಡುಗಳ ವರೆಗೂ ತಾಮ್ರಶಾಸನಗಳನ್ನು ಬರೆಯಲು ಉಪಯೋಗಿಸಿದ್ದಾರೆ. ತಾಮ್ರಪಟಗಳ ಆಕಾರ, ದೊರೆಯುವ ತಾಮ್ರದ ಮೇಲೆ ಮತ್ತು ಬರೆಯುವ ವಿಷಯದ ಮೇಲೆ ಅವಲಂಬಿಸಿದೆ. ಮೊದಲಿನ ಶಾಸನಗಳಲ್ಲಿ ದಾನ ಕೊಡುವವರ ಮತ್ತು ಪಡೆಯುವವರ ಹೆಸರು, ದಾನಕೊಟ್ಟ ಕಾಲ ಮತ್ತು ದತ್ತಿಯ ವಿವರಣೆ ಇರುತ್ತಿತ್ತು. ಬರುಬರುತ್ತ ದೇಶದ ವರ್ಣನೆ ಅದನ್ನಾಳುತ್ತಿದ್ದ ರಾಜನ ಪರಂಪರೆ ಮತ್ತು ಪ್ರಶಂಸೆ, ಅವರ ಮಾಂಡಲಿಕರ ವರ್ಣನೆ, ದಾನಕೊಡುವ ವ್ಯಕ್ತಿಯ ವಂಶಾವಳಿಯ ಉಲ್ಲೇಖ, ಕಾಲ, ದಾನ ಸ್ವೀಕರಿಸುವವನ ಅರ್ಹತೆ, ದಾನದ ಉಲ್ಲೇಖ, ಅದರ ಮೇರೆ, ಅದಕ್ಕೆದ್ದ ಸಾಕ್ಷಿಗಳ ಪಟ್ಟಿ, ದಾನವನ್ನು ಕಾಯ್ದುವರಿಗೆ ಬರುವ ಪುಣ್ಯ, ಅಪಹರಿಸಿದರೆ ಬರುವ ಪಾಪ ಇತ್ಯಾದಿಗಳನ್ನು ಬರೆಯಹತ್ತಿದಂತೆ, ತಾಮ್ರಶಾಸನಗಳ ವಿಸ್ತಾರ, ಗಾತ್ರ ಬೆಳೆಯಹತ್ತಿದುವು.

ಇಲ್ಲಿಯವರೆಗೂ ದೊರೆತ ತಾಮ್ರಶಾಸನಗಳಲ್ಲಿ ಎಲ್ಲಕ್ಕೂ ದೊಡ್ಡ ದಾದುದು ಕರಂದಯಿ ತಾಮ್ರಶಾಸನವು. ಇದನ್ನು ಚೋಳರಾಜನ ಮಗನಾದ ೧ನೆಯ ರಾಜೇಂದ್ರನು ಪಟ್ಟವೇರಿದ ೮ನೆಯ ವರ್ಷದಲ್ಲಿ ನಿರ್ಮಿಸಲಾಗಿದೆ. ' ಇದರಲ್ಲಿ ಒಟ್ಟು ೫೫ ತಾಮ್ರದ ತಗಡುಗಳು ಮತ್ತು ಒಂದು ಮುದ್ರೆಯ ಬಳೆ ಇರುವುವು. ಪಟಗಳ ಉದ್ದ ೧೬೪ ಇಂಚು, ಅಗಲ ೯೪ ಇಂಚು ಇರುವುವು. ಮುದ್ರೆ ಸಹಿತ ಈ ಪಟಗಳ ತೂಕ ೨೩೫ ಪೌಂಡು ಆಗುವುದು. ಶಾಸನದಲ್ಲಿ ೨೫೦೦ ಕ್ಕೂ ಮೇಲ್ಪಟ್ಟು ಸಾಲುಗಳಿವೆ. ಮೊದಲಿನ ೧೩೦ ಸಾಲುಗಳಲ್ಲಿ, ೧ನೆಯ ರಾಜೇಂದ್ರನ ವರೆಗಿನ ಚೋಳವಂಶನೆತನದ ವಂಶಾವಳಿ ಮತ್ತು ಕೆಲವು ಬ್ರಾಹ್ಮಣರಿಗೆ ಒಂದು ಹಳ್ಳಿಯನ್ನು ದಾನ ಮಾಡಿದ್ದರ ಉಲ್ಲೇಖ ಬಂದಿದೆ. ಮುಂದಿನ ೧೦೪ ಸಾಲುಗಳಲ್ಲಿ ರಾಜನ ಪ್ರಶಂಸೆ, ದಾನ ಕೊಟ್ಟ ಹಳ್ಳಿಯ ಮೇರೆ ಮತ್ತು ದಾನಕ್ಕೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಇತರ ವ್ಯಕ್ತಿಗಳನ್ನು ಬರೆದಿವೆ. ಕೊನೆಯ ೧೩೬೭ ಸಾಲುಗಳಲ್ಲಿ ದಾನಸ್ವೀಕರಿಸಿದವರ ಗೋತ್ರ, ಸ್ಥಳ ಮುಂತಾದುವುಗಳ ವಿವರಗಳನ್ನು ಕಾಣಿಸಿದೆ. ಒಬ್ಬ ಕವಿ ರಾಜನ ಸ್ತುತಿಯನ್ನು ಮಾಡುವಾಗ, ರಾಜನು ಕೊಟ್ಟ ಅನೇಕ ದಾನಗಳಿಂದ ರಾಜ್ಯದಲ್ಲಿ ತಾಮ್ರದ ಅಭಾವವಾಯಿತೆಂದು ಹೇಳಿದ್ದಾನೆ. ಈ ಮಾತು ಅತಿಶಯೋಕ್ತಿ ಎನಿಸಿದರೂ, ಮೇಲೆ ಹೇಳಿದಂತಹ ತಾಮ್ರಪಟಗಳ ಮೂಲಕ ಕೆಲಮಟ್ಟಿಗೆ ತಾಮ್ರದ ಅಭಾವ ಆಗಿದ್ದರೂ ಆಗಿರಬಹುದು. ತಾಮ್ರಪಟಗಳು ಬಹುಶಃ ದಾನಪತ್ರಗಳಾಗಿರುವುವು. ಇಂತಹ ದಾನಪತ್ರಗಳನ್ನು ಬರೆಯಲು ರಾಜನ ಹತ್ತಿರ ಸಂಧಿವಿಗ್ರಹಿಯಂತಹ ಒಬ್ಬ ಅಧಿಕಾರಿ ಇರುತ್ತಿದ್ದನು. ಅವನು ತಯಾರಿಸಿದ ಲೇಖನವನ್ನು ಲೇಖಕನು ಶಿಲಾ, ತಾಮ್ರಪಟ, ಅರಿವೆ ಇತ್ಯಾದಿಗಳ ಮೇಲೆ ಬರೆಯುತ್ತಿದ್ದನು ತಾಮ್ರಪಟಗಳಿಗೆ ರಾಜಮುದ್ರೆ ಇರುತ್ತಿತ್ತು. ತಾಮ್ರಪಟಗಳನ್ನು ಬರೆಯುವಾಗ ಲೇಖಕನು ತುದಿಗೆ ಯೋಗ್ಯಸ್ಥಳ ಬಿಟ್ಟು, ಗೆರೆಗೆ ಹೊಂದಿ, ಸುಂದರವಾದ ಅಕ್ಷರಗಳನ್ನು, ತಾಮ್ರಪಟಗಳಿಗೆ ಬಳಿದ ಬಿಳಿಯ ಬಣ್ಣದಲ್ಲಿ ಲೇಖಕನು ಬರೆಯುತ್ತಿದ್ದನೆಂದು ತಿಳಿದು ಬರುತ್ತದೆ. ಅನಂತರ ಆ ತಗಡುಗಳ ಮೇಲೆ ಲಿಪಿಗಳನ್ನು ಕೆತ್ತುತ್ತಿದ್ದರು. ಲೇಖಕನು ಸೌಂದರ್ಯಪ್ರಿಯನಾಗಿದ್ದರೆ, ಅಕ್ಷರಗಳಿಗೆ ಸುಳಿವುಗಳನ್ನು ಜೋಡಿಸಿ, ಸುಂದರವಾಗಿ ಮಾಡುತ್ತಿದ್ದನು ಈ ಸಂಬಂಧವಾಗಿ ಗಂಗವಾರಸಿಂಹನ ಕುಡಲೂರು ತಾಮ್ರಪಟಗಳನ್ನು ನೋಡಬಹುದು.

ತಾಮ್ರಶಾಸನಗಳ ಮೊದಲಿನ ಮತ್ತು ಕೊನೆಯ ಪಟಗಳ ಹೊರಮಗ್ಗುಲಲ್ಲಿ ಏನನ್ನೂ ಬರೆಯುತ್ತಿದ್ದಿಲ್ಲ. ಒಳಗಿನ ಪಟಗಳ ಎರಡೂ ಮಗ್ಗುಲನ್ನು ಬರೆಯಲು ಉಪಯೋಗಿಸುತ್ತಿದ್ದರು. ತಾಮ್ರಪತ್ರಗಳ ತುದಿಗಳನ್ನು ಸ್ವಲ್ಪ ದಪ್ಪಮಾಡಿ, ಒಳಗಿನ ಬರೆಹವು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಒಬ್ಬ ಅಧಿಕಾರಿಯು ತಾಮ್ರಶಾಸನಗಳನ್ನು ಬರೆದು " ಸಿದ್ಧಂ " ಎಂದರೆ ಸಿದ್ಧವಾಗಿದೆ. ಎಂದು ಬರೆದ ಮೇಲೆ, ಯುವರಾಜನು ಅಥವಾ ಮತ್ತೊಬ್ಬ ಅಧಿಕಾರಿಯು " ದೃಷ್ಟಂ " ಎಂದರೆ ನೋಡಲ್ಪಟ್ಟಿದೆ—ಎಂದು ಉಲ್ಲೇಖಿಸುತ್ತಿದ್ದನು. ಇದರಿಂದ ಒಬ್ಬ ಅಧಿಕಾರಿ ಬರೆದನ್ನನ್ನು ಮತ್ತೊಬ್ಬ ಅಧಿಕಾರಿಯು ನೋಡಿ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿದನಂತರ, ರಾಜನು ಆ ರಾಜಾಜ್ಞೆಯು ಕೆಳಗೆ ತನ್ನ ಅಂಕಿತವನ್ನು ಹಾಕುವ ರೂಢಿಯಿತ್ತು. ಕ್ರಿ. ಶ. ೭ನೆಯ ಶತಮಾನದಲ್ಲಿ ಉತ್ತರಾಪಥೇಶ್ವರನೆಂದು ಬಿರುದುಪೆತ್ತ ಶ್ರೀಹರ್ಷಮಹಾರಾಜನು, ತನ್ನ ದತ್ತಿಯ ಕೆಳಗೆ ' ಸ್ವಹಸ್ತೋಯಮು ಮಹಾರಾಜ ಶ್ರೀಹರ್ಷಸ್ಯ ' ಎಂದು ಸಹಿ ಮಾಡಿದ್ದಾನೆ. ಅದೇ ಪ್ರಕಾರ ವಲ್ಲಭೀರಾಜನುನೆತನದ ಧರಸೇನನು ' ಸ್ವಹಸ್ತೋಯಮು ಶ್ರೀಧರಸೇನಸ್ಯ ' ಎಂದು ರುಜು ಹಾಕಿದ್ದಾನೆ.

ಕೆಲವೆಡೆಗೆ ರಾಜರು ತಮ್ಮ ಹೆಸರನ್ನು ಶಾಸನದ ಕೊನೆಗೆ ಹಾಕದೆ ತಮ್ಮ ಉಪಾಸ್ಯದೇವತೆಯ ನಾಮವನ್ನು ಬರೆಯುತ್ತಿದ್ದರು. ಈ ಕಾರಣದಿಂದಲೇ ಯಾದವ ಸಿಂಘಣನ ಹೊಲಗೂರು ತಾಮ್ರಪಟದ ಕೊನೆಗೆ' ಶಾರ್ಙ್ಗದೇವ ' ಎಂದು ಮತ್ತು ವಿಜಯನಗರದ ಕೆಲವು ತಾಮ್ರಪಟಗಳ ಕೊನೆಗೆ " ಶ್ರೀವಿರೂಪಾಕ್ಷ " ಎಂದು ಬಂದಿದೆ ವಿಜಯನಗರ ತಾಮ್ರಪಟಗಳು ಸಂಸ್ಕೃತಭಾಷೆ ಮತ್ತು ನಾಗರೀಲಿಪಿಯಲ್ಲಿ ರಚಿಸಲ್ಪಟ್ಟುವಾಗಿದ್ದರೂ, ಅವುಗಳ ಕಡೆಯಲ್ಲಿ 'ಶ್ರೀವಿರೂಪಾಕ್ಷ' ಎಂಬ

ಒಳ್ಳಣಿಕೆ ಕನ್ನಡಲಿಪಿಯಲ್ಲಿರುತ್ತದೆ. ಎರಡು ಅಥವಾ ಅದಕ್ಕೂ ಹೆಚ್ಚು ಪಟಗಳುಳ್ಳ ತಾಮ್ರಶಾಸನಗಳಿಗೆ ಒಂದು ಮುದ್ರೆ ಇರುತ್ತಿತ್ತು. ರಾಜರು ಮುದ್ರೆಗಳ ಮೇಲೆ ತಮ್ಮ ತಮ್ಮ ಅರಸು ಮನೆತನಗಳ ಚಿಹ್ನೆಗಳನ್ನು ಹಾಕಿಸುತ್ತಿದ್ದರು. ಗುಪ್ತ, ಚೇದಿ, ಪರಮಾರ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಗೋವಾಕದಂಬ, ಗಂಗ, ಹಾನಗಲ್ಲಕದಂಬ, ಕಲಚುರ್ಯ, ಯಾದವ, ಹೊಯ್ಸಳ, ವಿಜಯನಗರ, ಈ ಮನೆತನಗಳ ರಾಜಮುದ್ರೆ ಅನುಕ್ರಮವಾಗಿ ಗರುಡ, ಗಜಲಕ್ಷ್ಮೀ, ಗರುಡ' ಸಿಂಹ, ವರಾಹ, ಗರುಡ, ಸಿಂಹ, ಆನೆ ಸಿಂಹ, ನಂದಿ, ಗರುಡ, ಹುಲಿ' ವರಾಹ ಇವು ಆಗಿದ್ದುವು. ಮೇಲಿನ ಕೆಲವು ಚಿಹ್ನಗಳೊಡನೆ ಮುದ್ರೆಗಳ ಮೇಲೆ ರಾಜನ ಹೆಸರೂ ಇರುತ್ತದೆ. ಕೆಲವೆಡೆಗೆ ರಾಜನ ಹೆಸರು ಅಥವಾ ಬಿರುದು ಮಾತ್ರ ಇರುತ್ತದೆ. ಈ ಮುದ್ರೆಗಳನ್ನು ತಾಮ್ರಪಟಗಳಿಗೆ ಹಾಕಿದ ಬಳಿಕ ಬೆಸೆದು ಭದ್ರಮಾಡಿರುತ್ತಾರೆ.

ತಾಮ್ರಪಟಗಳನ್ನು ಬರೆಯುವಾಗ ಭಾರತದಲ್ಲಿ ಬ್ರಾಹ್ಮೀ, ನಾಗರಿ, ಹಳಗನ್ನಡ, ಹೊಸಗನ್ನಡ, ತೆಲುಗು, ಒಟ್ಟಿಳುತ್ತು, ಬಂಗಾಲಿ, ಶಾರದಾ ಮೊದಲಾದ ಲಿಪಿಗಳನ್ನು ಬಳಸಿದ್ದಾರೆ. ಅವುಗಳಲ್ಲಿ ಬಳಸಿದ ಭಾಷೆ ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಮಲೆಯಾಳು, ಮರಾಠಿ ಮುಂತಾದುವುಗಳು. ಭಾಷೆ ಭಿನ್ನಭಿನ್ನ ಕಾಲಗಳಲ್ಲಿ ಹೇಗೆ ರೂಪಾಂತರ ಹೊಂದಿದೆ?—ಎಂಬುದನ್ನು ಈ ತಾಮ್ರಶಾಸನಗಳಿಂದ ತಿಳಿಯಲು ಸಾಧ್ಯವಾಗುತ್ತದೆ. ಬಹುಶಃ ಎಲ್ಲ ತಾಮ್ರಪಟಗಳು ಎಡದಿಂದ ಬಲಕ್ಕೆ ಬರೆಯಲ್ಪಟ್ಟಿವೆ. ವಿರಾಮವನ್ನು ಸೂಚಿಸಲು ನಾಗರಿಯಲ್ಲಿ ಉದ್ದವಾದ ಒಂದು ದಂಡ (।)ವನ್ನು ತೋರಿಸುತ್ತಿದ್ದರು. ಬರೆಯುವಾಗ ಬರೆಹದ ಯಾವ ಭಾಗವಾದರೂ ಮರೆತುಹೋಗಿದ್ದರೆ, ಅದನ್ನು ಕಾಕಪಾದದಿಂದ ದೇರಿಡೆಗೆ ಬರೆದು ತೋರಿಸುತ್ತಿದ್ದರು. ಶಬ್ದವು ಅಪೂರ್ಣವಾಗಿ ದೇರೆ ಸಾಲಿನಲ್ಲಿ ಪ್ರಾರಂಭವಾಗುತ್ತಿದ್ದಾಗ, ಒಂದು ದಂಡ ಮತ್ತು ಅದಕ್ಕೆ ಹೊಂದಿ ಬಲಗಡೆಗೆ ಒಂದು ಅಡ್ಡ ರೇಖೆಹಾಕಿ ಮುಂದುವರೆಯುವ ಚಿಹ್ನವನ್ನು ತೋರಿಸುತ್ತಿದ್ದರು. ಸ್ವಸ್ತಿಕ, ದುಂಡನ್ನ ಸುಳಿ ಮುಂತಾದ ಗುರುತುಗಳನ್ನು 'ಓಂ' ಇತ್ಯಾದಿ ಶುಭ ಸೂಚನೆಗಳಿಗಾಗಿ ಬಳಸುತ್ತಿದ್ದರು. ಸಂಖ್ಯೆಗಳನ್ನು ಸಂಖ್ಯೆ ಅಥವಾ ಅಕ್ಷರಸಂಕೇತಗಳಿಂದ ಸೂಚಿಸಲಾಗುತ್ತಿತ್ತು.

ಕಾಲಗಣನೆಯನ್ನು ತಾಮ್ರಶಾಸನಗಳಲ್ಲಿ ಶಿಲಾಶಾಸನದಂತೆಯೇ ವಿಕ್ರಮಸಂವತ್, ಶಕವರ್ಷ, ಚೇದಿವರ್ಷ, ಕಲಿಯುಗ ವರ್ಷ ಈ ಪ್ರಕಾರವಾಗಿಯೂ, ರಾಜರು ತಮ್ಮ ಅಳಿಕೆಯಿಂದಲೇ ಪ್ರಾರಂಭ ಮಾಡಿದ ವರ್ಷಗಳಿಂದಲೂ ಸೂಚಿಸುವ ಪದ್ಧತಿಯಿತ್ತು. ಉದಾಹರಣೆಗಾಗಿ ಚಾಲುಕ್ಯ ವಿಕ್ರಮವರ್ಷ, ಚಾಲುಕ್ಯ ಭೂಲೋಕಮಲ್ಲ ಜನಿಯವರ್ಷ—ಇತ್ಯಾದಿ ನೋಡಬಹುದು.

ಇಲ್ಲಿಯವರೆಗೆ ತಾಮ್ರಪಟಗಳ ಸ್ಥೂಲ ಸ್ವರೂಪವನ್ನು ಪರಿಚಯ ಮಾಡಿಕೊಂತಲಾಯಿತು. ಇನ್ನು ತಾಮ್ರಪಟಗಳಿಂದ ನಮ್ಮ ಇತಿಹಾಸಕ್ಕೆ ಯಾವ ಪ್ರಕಾರದ ಸಹಾಯವಾಗಿದೆ?—ಎಂಬುದನ್ನು ನೋಡೋಣ. ಕಾರವಾರ ಮತ್ತು ಗೋವಾ ಭಾಗದಲ್ಲಿ ಭೋಜ ಮನೆತನದ ಅರಸರು ಆಳುತ್ತಿದ್ದರೆಂಬ ಸಂಗತಿಯು, ಅವರ ಮನೆತನಕ್ಕೆ ಸಂಬಂಧಿಸಿದ ಕೆಲವು ತಾಮ್ರಪಟಗಳಿಂದ ಮಾತ್ರ ಗೊತ್ತಾಗುತ್ತಿದೆ. ಆ ಮನೆತನದ ಶಿಲಾಲೇಖ ಮುಂತಾದ ಅನ್ಯ ಉಲ್ಲೇಖಗಳು ಇದುವರೆಗೂ ದೊರೆತಿಲ್ಲ. ನೆರೂರು ಮತ್ತು ಕೊಚ್ರೇಂ ಶಾಸನಗಳಿಂದ ಬಾದಾಮಿ ಚಾಲುಕ್ಯ ೧ನೆಯ ವಿಕ್ರಮಾದಿತ್ಯನ ಅಣ್ಣನಾದ ಚಂದ್ರಾದಿತ್ಯನು ರತ್ನಾಗಿರಿ ಮತ್ತು ಸಾವಂತವಾಡಿ ಭಾಗಗಳಲ್ಲಿ ಆಳುತ್ತಿದ್ದನೆಂದು ಗೊತ್ತಾಗುವುದು. ಅವನ ಹೆಂಡತಿ ವಿಜಯಭಟ್ಟಾರಿಕೆ ತರಕಾಗಾಕಾರ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನಿಗೆ ದತ್ತಿಯನ್ನು ಕೊಟ್ಟಿದ್ದಾಳೆ. ಚಂದ್ರಾದಿತ್ಯನಿಗೆ ಮಹಾರಾಜಾಧಿರಾಜನೆಂಬ ಬಿರುದಿದ್ದುದು ಕೋಚ್ರೇ ತಾಮ್ರಶಾಸನದಿಂದ ವಿದಿತವಾಗುವುದು ಚಿಪಳೂಣ ತಾಮ್ರಶಾಸನದಿಂದ ೨ನೆಯ ಪುಲಕೇಶಿಯ ಸೋದರ ಮಾವನು ಸೇಂದ್ರಕ ವಂಶದ ಶ್ರೀವಲ್ಲಭಸೇನಾನಂದನೆಂಬುದು ಗೊತ್ತಾಗುವುದು. ಈ ಶಾಸನದಿಂದ ಸೇಂದ್ರಕ ಮತ್ತು ಬಾದಾಮಿ ಚಾಲುಕ್ಯ ಮನೆತನಗಳ ಶರೀರಸಂಬಂಧ ವ್ಯಕ್ತವಾಗುತ್ತದೆ. ಕ್ರಿ. ಶ. ೭೫೦ರಲ್ಲಿ ರಚಿತವಾದ ಜನಳಿಯ ತಾಮ್ರಪಟಗಳಿಂದ ಮತ್ತು ಕ್ರಿ. ಶ. ೭೭೯ರಲ್ಲಿ ಬರೆಯಲಾದ ದೇವರಹಳ್ಳಿ ತಾಮ್ರಶಾಸನದಿಂದ ಗಂಗ ಶ್ರೀಪುರುಷನ ಅಳಿಕೆಯ ಪ್ರಾರಂಭ ಕ್ರಿ. ಶ. ೭೨೬ ಎಂದು ನಿರ್ಧಾರವಾಗುವುದು. ಅದೇ ಪ್ರಕಾರ ಗಂಗ ಭೂವಿಕ್ರಮನ ಬಿದರೂರು ತಾಮ್ರಶಾಸನವು ಗಂಗಮನೆತನದ ವಂಶಾವಳಿಯನ್ನು ನಿರ್ಧರಿಸಲು ಸಹಾಯ ಮಾಡುತ್ತದೆ. ಕಲ್ಯಾಣ ಚಾಲುಕ್ಯ ಇರಿವ ಬೆಡಂಗ ಸತ್ಯಾಶ್ರಯನ ಬೆಡಕೇಹಾಳ ತಾಮ್ರಪಟಗಳಿಂದ, ಶಪಥ ಮಾಡಿ ಸೂರ್ಯ ಮೂಡುವುದರೊಳಗಾಗಿ ಸಾಣನಾಯಕ ಮೊದಲಾದ ೧೩ ಜನರನ್ನು ಕೊಂದದ್ದಕ್ಕೆ ರೇವಣನೆಂಬವಗೆ ಐಹೊಳೆಯ ಏನೂರ್ವರು ಪೆಗೆಯು ಬೆಂಕೊಳ್ವ ಎಂಬ ಬಿರುದು ಕೊಟ್ಟುದು ಗೊತ್ತಾಗುವುದು. ಈ ಸಂಗತಿ ಬೇರೆ ಯಾವ ಆಧಾರದಿಂದಲೂ ತಿಳಿದುಬಂದಿಲ್ಲ.

ಈ ಪ್ರಕಾರ ತಾಮ್ರಶಾಸನಗಳು ನಮ್ಮ ದೇಶದ ಐತಿಹಾಸಿಕ ಸಂಗತಿಗಳನ್ನು ತಿಳಿದುಕೊಳ್ಳಲು ತುಂಬ ಸಹಾಯ ಮಾಡುತ್ತವೆ; ಆದುದರಿಂದ ಅವುಗಳ ಮಹತ್ತ್ವ ಎಷ್ಟಿದೆಯೆಂಬುದು ಗೊತ್ತಾಗುವುದು

ಲಕ್ಷ್ಯ

(ಒಂದು ಸಣ್ಣಕತೆ)

"ಹೇಮಂತರಾಜ", ಮೂಲಾಡ

ಇರಲಿಕ್ಕೆ ಮನೆಯೂ ದೊರೆಯದ ಇಂದಿನ ಕೃತ್ರಿಮ ನಾಗರಿಕ ಜೀವನ, ಅನಂತ-ವಾಸಂತಿಯರಂತಹ—ಎಷ್ಟು ಜನ-ಪ್ರಣಯಿಗಳ ಅಸ್ವಾಭಾವಿಕ ವಿಕಾಶನಕ್ಕೆ ಕಾರಣವಾಗಿದೆಯೋ ಏನೋ! ಇಂತಹ ಜೀವನಕ್ಕೆ ಪರಿಹಾರವೇನು?

ವಾಸಂತಿ ಕೈಗಡಿಯಾರವನ್ನು ನೋಡಿಕೊಂಡಾಗ ಮೂರಕ್ಕೆ ಇನ್ನೂ ಹದಿನೈದು ನಿಮಿಷಗಳಿದ್ದುವು.

"ಓ! ಇನ್ನೂ ಹದಿನೈದು ಮಿನಿಟುಗಳು" ಎಂದುಕೊಂಡಳಾಕೆ. ಅತ್ತರದ ಭಂಡಲ್ಲಿ ಅಷ್ಟು ಬೇಗ ಬಂದಿದ್ದಳು. ಅನಂತ ಅಫೀಸನ್ನು ಎರಡೂ ಮೂವತ್ತಕ್ಕೇ ಸರಿಯಾಗಿ ಬಿಟ್ಟಿದ್ದರೂ, ಆತ ಚರ್ಚ್‌ಗೇಟಿಗೆ ಬಂದು ಗಾಡಿ ಹಿಡಿದು ಚರ್ನಿರೋಡಿಗೆ ಬರಲು ಇಪ್ಪತ್ತು ನಿಮಿಷಗಳಾದರೂ ಬೇಕಿತ್ತು.

ಹೊರಗೆಲ್ಲೋ ಹೊರಟಿದ್ದ ವಸತಿಗೃಹದ ರಿಸೆಪ್ಷನಿಸ್ಟ್ ಸಿರೀನ್-ಬಾಯಿ, ವಾಸಂತಿ ಇನ್ನೂ ಇಲ್ಲಿಯೇ ನಿಂತುದನ್ನು ಕಂಡು ಕೇಳಿದಳು:

"ಓ, ಬೇಬಿ, ಇದೇನು? ಇನ್ನೂ ಇಲ್ಲಿಯೇ ನಿಂತಿರುವೆಯಲ್ಲ?" ಅವಳು ಹಾಸ್ಟೆಲಿನಲ್ಲಿಯವರನ್ನೆಲ್ಲ "ಬೇಬಿ" ಎಂದೇ ಕರೆಯುತ್ತಿದ್ದಳು. ಮೊದಮೊದಲು ವಾಸಂತಿಗೆ ಅದೊಂದು ತಮಾಷೆಯಾಗಿ ತೋರುತ್ತಿತ್ತು; ಆದರೆ ಸಿರೀನ್‌ಬಾಯಿ, ಅವರೆಲ್ಲ ತನ್ನ ಮಕ್ಕಳೇ ಎನ್ನುವಂತೆ ನೋಡಿಕೊಳ್ಳುತ್ತಿದ್ದಳು. ಸಮುದ್ರಕ್ಕೆದುರಾಗಿ ನಿಂತಿದ್ದ ಆ ನಾಲ್ಕು ಅಂತಸ್ತಿನ—ಹೆಣ್ಣುಮಕ್ಕಳ—ವಸತಿಗೃಹ ಸಿರೀನ್-ಬಾಯಿಯ ತ್ಯಾಗ-ನಿಷ್ಠೆಗಳ ದ್ಯೋತಕವಾಗಿ ನಿಂತಿರುವುದು. ಶಿಕ್ಷಣಕ್ಕಾಗಿಯೋ, (ಅನಿವಾರ್ಯವಾಗಿ) ನೌಕರಿಗಾಗಿಯೋ ಮುಂಬಯಿಗೆ ಬರುತ್ತಿದ್ದ ಹೆಣ್ಣುಮಕ್ಕಳಿಗಾಗಿ ಅದೊಂದು ಸುಖವಾದ, ಹಿತಕರವಾದ ಆಸರೆಯಾಗಿದ್ದಿತು. ಮುಂಬಯಿಯಲ್ಲಿ ಪರಿಚಯದವರಾರೂ ಇಲ್ಲದೆ, ತಂದೆ ತಾಯಿ ಬಂಧುಬಳಗವನ್ನು ಬಿಟ್ಟು ಬರಬೇಕಾದ ಹೆಣ್ಣುಮಕ್ಕಳು, ಹೊಸ ವಾತಾವರಣದಲ್ಲಿ ಮೊದಮೊದಲು ಹೌಹಾರಿದರೂ, ಅನಂತರ ಒಂದೆರಡು ವಾರಗಳಲ್ಲಿ ಅಲ್ಲಿಯ ವಾತಾವರಣದಲ್ಲಿ ಸಮರಸರಾಗಿ ಎಲ್ಲವನ್ನೂ ಮರೆಯುತ್ತಿದ್ದರು.

ತನ್ನ ಉತ್ತರಕ್ಕಾಗಿಯೇ ಕಾದು ನಿಂತಂತೆ ತೋರಿದ್ದರಿಂದ:

"ಇಲ್ಲ ಮ್ಯಾಡಮ್, ನನ್ನ ಫ್ರೆಂಡ್ ಬರಬೇಕಾಗಿತ್ತು. ನಾನು ದಾರಿ ಕಾಯ್ತಾ ಇದ್ದೇನೆ!" ಎಂದಳು.

"ಓಹ್!" ಎಂದು ಅವರು ಮತ್ತೆ ತಮ್ಮ ನಿತ್ಯದ ಅವಸರದಲ್ಲಿಯೆ ಹೊರಟುಹೋದರು.

ನಿಂತು ನಿಂತು ಬೇಸರಿಕೆಯಾದ್ದರಿಂದ ವಾಸಂತಿ, ಸ್ಟೇಶನ್ನಿಗೇ ಹೋದಂತಾಯಿತೆಂದು ಅಲ್ಲಿಂದ ನಡೆದಳು.

ಬಾಲಭವನದ ಹತ್ತಿರ ಬರುತ್ತಿದ್ದ ಅನಂತನನ್ನು ಕಂಡು ವಾಸಂತಿ, ತನ್ನ ನಡಿಗೆಯನ್ನು ನಿಧಾನ ಮಾಡಿದಳು. ಆದರೆ ಅವಳ ವಿಚಾರ ಮಾತ್ರ ವೇಗದ್ದಾಯಿತು. ಆಕೆ ಈ ಮೂರು ದಿನಗಳಿಂದ ಅದನ್ನೇ ಕುರಿತು ವಿಚಾರ ಮಾಡುತ್ತಿದ್ದಳು. ಹಿಂದಿನ ರಾತ್ರಿ ನಿರ್ಣಯವೂ ಆಗಿದ್ದಿತು. ಅನಂತ ಎದುರು ಬಂದಾಗ ಮಾತ್ರ "ಹೇಗೆ ಪ್ರಾರಂಭಮಾಡಿ ಹೇಗೆ ಮುಗಿಸಬೇಕು?" ಎನ್ನುವ ಹೊಸ ಸಮಸ್ಯೆ ಅವಳೆದುರು ನಿಂತಿತು. ಮೊದಲು ಆ ನಿರ್ಣಯಕ್ಕೆ ಬರಬೇಕಾದಾಗ "ಇದೇನು ಅಂತಹ ಬಿಕ್ಕಟ್ಟಿನ ಪ್ರಶ್ನೆಯಲ್ಲ; ಹೇಗೂ ಹೇಳಬಹುದು" ಎನಿಸಿತ್ತು. ಆದರೆ....!

ಆದರೆ ಈಗ ಅನಂತ ಎದುರು ಬಂದಾಗ ಮಾತ್ರ, ಹೇಳಲಿಕ್ಕೆ ಸಂಕೋಚವೆನಿಸುತ್ತಿತ್ತು. ಅನಂತ ಏನು ತಿಳಿದುಕೊಳ್ಳಬಹುದು—ಎಂದು ಭಯವಾಗಹತ್ತಿತ್ತು; ಆದರೂ ಹೇಳಲೇಬೇಕಾಗಿತ್ತು. ಅಷ್ಟಾಗಿ ಆಕೆ ಅವನ, ಅನಂತನನ್ನು ಬಿಟ್ಟು ಮತ್ತಾರಿಗೆ ಹೇಳಬೇಕು? ಒಂದು ಕ್ಷಣ ಆಕೆ ದೇವರನ್ನು ಬೇಡಿಕೊಂಡಳು:

"ಹೇಗಾದರೂ ಮಾಡಿ ಧೈರ್ಯವನ್ನು ಕೊಡು!" ಎಂದು. ವಿಚಾರದಲ್ಲಿ ಮಗ್ನಳಾಗಿದ್ದ ಅವಳು, ಅನಂತ ಬಂದು ಕೈ ಹಿಡಿದಾಗಲೇ ವಾಸ್ತವತೆಗೆ ಇಳಿದಳು

"ಇದೇನು? ಎದುರು ಬಂದರೂ ನೋಡದಷ್ಟು ಗಹನ ವಿಚಾರ?—" ಎಂದ ಅನಂತ ನಗುತ್ತ.

ಆಕೆ ಬಾ ನಕ್ಕಳು. ಅದರಲ್ಲೇನೂ ಅಂಥ ಅರ್ಥವಿಲ್ಲ—ಎಂಬಂತೆ. ಇಬ್ಬರೂ ಒಂದು ಕ್ಷಣ ಅಲ್ಲಿಯೇ ನಿಂತರು. ಅನಂತ ಕೇಳಿದ:

"ಇದೇನು? ಹೀಗೆ ಇಲ್ಲಿಯೇ ನಿಂತರೆ!—ಎಲ್ಲಿಗೆ ಹೋಗುವುದು?"

"ಎಲ್ಲಿಯಾದರೂ ಸೈ ಇಲ್ಲಿಯಂತೂ ನಿಲ್ಲಲು ಸಾಧ್ಯವಿಲ್ಲವಲ್ಲ?" ವಾಸಂತಿ ಅವನನ್ನೇ ಪ್ರಶ್ನಿಸಿದಳು. ಅನಂತ ಮತ್ತೊಮ್ಮೆ ಬರಿ ನಕ್ಕ:

"ಒಳ್ಳೆಯದು. ಮೊದಲು ಏನಾದರೂ ತೆಗೆದುಕೊಂಡು ಅನಂತರ ಶಾಂತರೀತಿಯಿಂದ ವಿಚಾರ ಮಾಡೋಣ!"

ವಾಸಂತಿ ಏನೂ ನುಡಿಯದೆ ಅವನನ್ನು ಹಿಂಬಾಲಿಸಿದಳು.

ಫ್ಯಾಮಿಲೀರೂಮಿನಲ್ಲಿ ಕುಳಿತನಂತರ ಅನಂತ ಕೇಳಿದ:

"ಹುಂ. ಏನು ಹೇಳಲಿ?" ಎಂದು.

"ಏನಾದರೂ ಸೈ!" ಎಂದಳು ವಾಸಂತಿ.

"ಹಾಗಲ್ಲ. ಏನಾದರೂ..... ಅಂದರೆ ತಂಪೋ ಅಥವಾ ಬಿಸಿಯಾದದ್ದೋ?"

"ಯಾವುದಾದರೂ ಅಷ್ಟೇ!"

ಈಗ ಮಾತ್ರ ಅನಂತನಿಗೆ ವಿಚಿತ್ರವೆನಿಸಿತು. ಹಿಂದೆಂದೂ ವಾಸಂತಿ ಹೀಗೆ ಉದಾಸೀನಳಾಗಿರಲಿಲ್ಲ. ಕಾರಣ ಹೊಳೆಯಲಿಲ್ಲ. ವಾದ್ದರಿಂದ :

" ಏಕೆ ವಾಸು, ತಲೆ ನೋವೆ? ಮೈಯಲ್ಲಿ ಸರಿಯಿಲ್ಲವೆ? " ಎಂದ.

ವಾಸಂತಿ ಸಾವರಿಸಿಕೊಳ್ಳುತ್ತ ನಿತ್ಯದಂತೆ ನಗಲು ಯತ್ನಿಸಿದಳು. " ವಾಸುಽ— " ಎಂದ ಅನಂತ, ಆರ್ದ್ರನಾಗಿ ಅವಳ ಹಣೆಯನ್ನು ಮುಟ್ಟುತ್ತ; ಆಕೆ ಅವನ ಕೈಯನ್ನು ಸರಿಸುತ್ತ ಹೇಳಿದಳು:— " ಏನಿಲ್ಲ. ಏನೂ ಆಗಿಲ್ಲ. ಆರಾಮಾಗಿದ್ದೇನೆ. "

ವೇಟರನ ತಲೆ ಹಣೆಯಿಕ್ಕಿತು. ವಾಸಂತಿ ಹೇಳಿದಳು :— " ದೋ ' ಸೀಚಮೆಲ್ಟಾ ' ಏಕ ' ವೇಫರ್ಸ್ ' " ಅನಂತನಿಗೆ ಸ್ವಲ್ಪ ಹಾಯೆನಿಸಿತು.

ಹಣವನ್ನು ತಟ್ಟೆಯಲ್ಲಿಟ್ಟು ಅನಂತ ವಾಸಂತಿಯನ್ನು ಹಿಂಬಾಲಿಸಿದ. ಒಂದು ಕ್ಷಣ ಅವರಿಬ್ಬರೂ ಅಂಗಡಿಯೆದುರು ನಿಂತು, ಎದುರಿಗಿನ ನೀಲಸಮುದ್ರವನ್ನು ನಿಟ್ಟಿಸಿದರು. ಸಮುದ್ರವೇಕೋ ನಿತ್ಯಕ್ಕಿಂತ ಶಾಂತವಾಗಿತ್ತು. ನಾಲ್ಕು ಗಂಟೆಯಾಗಲು ಬಂದದ್ದರಿಂದ ಬಿಸಿಲು ಇಳಿಮುಖವಾಗತೊಡಗಿತ್ತು. ಉದ್ವೇಗದ ಒಂದು ಕ್ಷಣವಿಳಿದು ಮನಸ್ಸೂ ಮೆಲ್ಲನೆ ಹದಕ್ಕೆ ಬರತೊಡಗಿತ್ತು.

ವಾಸಂತಿ ' P ' ರೂಟ್ ಬಸ್‌ಸ್ಟ್ಯಾಂಡಿನ ಕಡೆಗೆ ಹೊರಟಳು. ಅನಂತ ಸುಮ್ಮನೆ ಹಿಂಬಾಲಿಸಿದ. ಇಬ್ಬರೂ ಮೌನವಾಗಿದ್ದರು.

ದಾರಿಯಲ್ಲಿ ಡಾಕ್ಟರ್ ಕಾಮತರ ಫಾರ್ಮಸಿಯ ಎದುರು ಬಂದಾಗ ಅನಂತ:

" ಒಂದು ಮಿನಿಟು — ವಾಸು— ಮರೆತೇ ಬಿಟ್ಟಿದ್ದೆ " ಎಂದು ತುಂಡುತುಂಡಾಗಿ ಹೇಳಿ, ಒಳಕ್ಕೆ ಹೊಕ್ಕ. ವಾಸಂತಿಯ ಮೋರೆ ಅವಳಿಗರಿಯದಂತೆಯೇ ಇಳಿಯಿತು. ಒಂದು ಕ್ಷಣ ನಿಂತಿದ್ದ ವಿಚಾರಚಕ್ರ ಮತ್ತೆ ತಿರುಗಹತ್ತಿತು. " ತಾನು ಬೀಳುವೆನೇನೋ "ಎಂದು ಭಯವಾಗಿ, ವಾಸಂತಿ ಕಂಪೌಂಡಿನ ಗೋಡೆಯ ಆಸರೆಯನ್ನು ತೆಗೆದುಕೊಂಡಳು. ಯಾವುದೋ ಅದೃಶ್ಯಶಕ್ತಿ ಅವಳ ಹೃದಯವನ್ನು ಹಿಂಡಿದಂತಾಗಹತ್ತಿತ್ತು. ಅನಂತ ಬಂದನೇನೋ—ಎಂದು ನೋಡಲು ಒಳಕ್ಕೆ ಹಣೆಯಿಕ್ಕಿದಳು. ಅಲ್ಲಿ ಹೊಸತಾಗಿ ಒಂದು ಕಲ್ಲಿನ ಮೂರ್ತಿಯನ್ನು ನಿಲ್ಲಿಸುವ ಕೆಲಸವು ನಡೆದಿದ್ದಿತು.

" ವಿಶ್ವದಲ್ಲಿಯ ವಾತ್ಸಲ್ಯವೇ ಮೂರ್ತಿಮತ್ತಾಗಿರುವ ತಾಯಿ! ಸ್ವರ್ಗವನ್ನೇ ಸೂರೆಗೊಂಡ ಸಂಭ್ರಮದಿಂದ ಸ್ತನಪಾನ ಮಾಡುವ ಮಗು —"

ವಾಸಂತಿ ಅನಿಮಿಷನೇತ್ರಗಳಿಂದ ನಿಟ್ಟಿಸಿದಳು. ಅವಳ ಉದಾಸೀನತೆ ಎಷ್ಟೋ ಕಡಮೆಯಾಯಿತು. ತೃಪ್ತಿಯಿಂದ ಕಣ್ಣುಗಳು ತುಂಬಿಬಂದಂತಾದುವು.

ಆ ಭವ್ಯಭವನ, ಭಾರವನ್ನು ಎತ್ತುವಾಗ ಕೂಗುತ್ತಿದ್ದ ಕೂಲಿಯಾಳುಗಳು—ಎಲ್ಲವೂ ಮಸಕಾಗಿ, ಕೊನೆಗೆ ಬರಿ ತಾಯಿ-ಮಗುವಿನ ಪ್ರತಿಮೆ, ಅದರಲ್ಲಿಯ ವಾತ್ಸಲ್ಯ— ಸಂತಸ—ಸಂಭ್ರಮಗಳೇ ಉಕ್ಕಿ, ಜಗತ್ತನ್ನೆಲ್ಲ ಕೊಚ್ಚಿಕೊಂಡು ಹೋಗಹತ್ತಿದಂತೆ ಭಾಸವಾಯಿತು.

" ವಾಸಂತಿ,—ಇದೇನು ಇಷ್ಟು ತಲ್ಲೀನಳಾಗಿರುವೆ? " ಅನಂತ ಕೇಳಿದ.

ಅನಂತನ ಕೈಯಲ್ಲಿ, ಕಾಗದದಲ್ಲಿ ಚೆನ್ನಾಗಿ ಕಟ್ಟಿದ್ದ ರಟ್ಟಿನ ಪೆಟ್ಟಿಗೆಯೊಂದಿದ್ದಿತು. ಅದನ್ನು ಆಕೆ ಒಂದು ಕ್ಷಣ ನಿರಾಶೆಯಿಂದ ನೋಡಿದಳು ಅದರಲ್ಲೇನಿದೆ ಎನ್ನುವುದು ಅವಳಿಗೆ ಚೆನ್ನಾಗಿ ತಿಳಿದಿತ್ತು. ಅನಂತ ಎಂದಾದರೊಮ್ಮೆ ಅದನ್ನು ಕೊಂಡುಕೊಳ್ಳುವುದನ್ನು ಆಕೆ ನೋಡುತ್ತ ಬಂದಿದ್ದಳು. ಮೊದಮೊದಲು ಆಕೆ ಅದನ್ನು ನೋಡಿದಾಗ ಕಾರಣವಿಲ್ಲದೆಯೇ ನಾಚುತ್ತಿದ್ದಳು. ಬರುಬರುತ್ತ ಅಭ್ಯಾಸಬಲದಿಂದ ಅದರ ಬಗೆಗೆ ಅವಳಿಗೇನೂ ಎನಿಸುತ್ತಿರಲಿಲ್ಲ. ಅಲ್ಲದೆ ಅದರ ಅವಶ್ಯಕತೆ, ಪರಿಸ್ಥಿತಿಯ ಒತ್ತಡಗಳಿಂದ, ಅವಳು ಅನಿವಾರ್ಯವಾಗಿ ಸುಮ್ಮನಿರಬೇಕಾಗಿದ್ದಿತು. ಆದರೆ ಇಂದು ಒಂದು ತರದ ಅಸಹನೆಯಿಂದಲೇ ಹೇಳಿದಳು:

" ಇದೇನು ಆಸಹ್ಯ? ಕೈಯೆಲ್ಲಿ ಹಿಡಿದು ಜಗತ್ತಿಗೆಲ್ಲ ಪ್ರದರ್ಶನ ಮಾಡಬೇಕಾಗಿದೆಯೇ? ಕಿಸೆಯಲ್ಲಿಟ್ಟುಕೊಳ್ಳಿ! "

ಅನಂತನಿಗೆ ಆಕೆಯ ಮಾತಿನ ದಿಶೆ ತಿಳಿಯಲಿಲ್ಲ. ಒಂದು ಕ್ಷಣದ ನಂತರ ಏನೋ ಅರ್ಥವಾದಂತಾಗಿ, ಗಾಬರಿಯಿಂದ ಆತ ಪೆಟ್ಟಿಗೆಯನ್ನು ನೋಡಿಕೊಂಡ. ಆತನ ಗಾಬರಿಗೆ ಅರ್ಥವಿರಲಿಲ್ಲ. ಆ ದನ್ನು ಬಿಳಿಯ ಕಾಗದವೊಂದರಲ್ಲಿ ಚೆನ್ನಾಗಿಯೇ ಕಟ್ಟಿಕೊಟ್ಟಿದ್ದರು. ಆತನಿಗೆ ವಾಸಂತಿಯ ಅಸಹನೆಯ ಕಾರಣ ತಿಳಿಯಲಿಲ್ಲ.

" ಅದನ್ನು ಚೆನ್ನಾಗಿಯೇ pack ಮಾಡಿದ್ದಾರೆ " ಎಂದ.

" ಆದರೇನಾಯಿತು? ಕಿಸೆಯಲ್ಲಿ ಹಾಕಬಾರದೆ? " ಇನ್ನಷ್ಟು ಅಸಹನೆಯಿಂದ ವಾಸಂತಿ ಹೇಳಿದಳು. ಈ ಬಾರಿ ಧ್ವನಿಯು ಇನ್ನೂ ತೀವ್ರವಾಗಿದ್ದಿತು.

ಮುಂಜಾನೆ ಅವಳ ಫೋನು ಬಂದಾಗಿನಿಂದ ಇಲ್ಲಿಯವರೆಗೆಲ್ಲ ಅವಳ ವರ್ತನೆ ವಿಚಿತ್ರವೇ ಆಗಿದ್ದಿತು. ಅವಳ ಮಾತಿನಂತೆ ಅನಂತ ಮರುದಿನೆ ಶನಿವಾರ ಒಂದುದಿನ ರಜೆಗೆ ಬರೆದು ಹಾಕಿ, ಇಂದು ಮಧ್ಯಾಹ್ನ ಕೂಡ ಆಫೀಸನ್ನು ಎರಡೂ ಮೂವತ್ತಕ್ಕೇ ಬಿಟ್ಟು ಬಂದಿದ್ದ. ಅವಳು ಮುಂಜಾನೆ ಮಾತನಾಡಿದಾಗ ಏನೂ ಹೇಳಿರಲಿಲ್ಲ. ಇಲ್ಲಿಯ ವರೆಗೂ ಏನೂ ಹೇಳಲಿಲ್ಲ ಅನಂತನಿಗೆ ಒಳಗೊಳಗೆ ಗಾಬರಿಯಾಗಿದ್ದಿತು.

' P ' ರೂಟ್ ಬಸ್‌ಸ್ಟಾಪ್ ಬಂದಿತು. ವಾಸಂತಿ ನಿಲ್ಲಲಿಲ್ಲ. ಆಕೆ ಮರೆತಳೇನೋ ಎಂದುಕೊಂಡು ಅನಂತ, ಅವಳನ್ನು ಕೈ ಹಿಡಿದು ನಿಲ್ಲಿಸಿ ಕೇಳಿದ :

" ಮಲಬಾರ್ ಹಿಲ್ಲಿಗೆ ಬೇಡವೇ? "

ವಾಸಂತಿ ಈ ವೇಳೆಗಾಗಲೇ ಎಲ್ಲವನ್ನೂ ನಿರ್ಧರಿಸಿದಂತೆ ತೋರುತ್ತಿತ್ತು. " ಊಹೂಂ " ಎಂದಳು ಗೋಣಲ್ಲಾಡಿಸಿ.

" ಹಾಗಾದರೆ? "

ಆದರೆ ಅವಳು ನಿಜಕ್ಕೂ ಏನನ್ನೂ ನಿರ್ಧರಿಸಿಯೇ ಇರಲಿಲ್ಲ. "ಹಾಗಾದರೆ?" ಎಂದು ಆಕೆಯೂ ಪ್ರಶ್ನಿಸಿಕೊಂಡಳು. ಅನಂತನೇ ಹೇಳಿದ: "ನಾಳೆಯಿಂದ ಎರಡು ದಿನಕ್ಕಾಗಿ ನಾನು. ಜುಹೂದಲ್ಲಿ ಎರಡುಖೋಲಿ ರಿಝರ್ವ್ (Reserve) ಮಾಡಿಸಿರುವೆ. ಅಲ್ಲಿಗೇ ಹೋಗೋಣವಂತೆ. ಇವೊತ್ತೇ ಸಿಕ್ಕರೂ ಸಿಕ್ಕಬಹುದು. ನಿನ್ನ ಫೋನು ಬರುವುದು ಗೊತ್ತಿರಲಿಲ್ಲ. ಎಂದಿನಂತೆ ಎರಡು ದಿನಕ್ಕಾಗಿ ಮಾತ್ರ ಮಾಡಿಸಿದೆ. ವಾಸೂ, ಇಲ್ಲಿ ಹೊಸದಾಗಿಯೇ ಪ್ರಾರಂಭವಾಗಿದೆ ಆ ಹೋಟೇಲು, ಎಲ್ಲ ಅನುಕೂಲವಿದೆ. ಪ್ರಯತ್ನವನ್ನಂತೂ ಮಾಡೋಣವಂತೆ. ಸಿಕ್ಕಲಿಕ್ಕೆ ಸಾಕು" ಎಂದು.

"ಒಳ್ಳೆಯದು!" ಎಂದು ಮಾತ್ರ ನುಡಿದಳು ಆಕೆ.

ಆಗಲೇ ಗಾಡಿಗೆ ಸಾಕಷ್ಟು ಗದ್ದಲವಾಗಹತ್ತಿತ್ತು. ತಾನು ಹೆಣ್ಣುಮಕ್ಕಳ ಡಬ್ಬಿಯಲ್ಲಿ ಬರುವುದಾಗಿ ವಾಸಂತಿ ಹೇಳಿದಳು. "ಗದ್ದಲ ಆಷ್ಟೇನಿಲ್ಲ, ಇಲ್ಲಿಯೇ ನಡೆ, ಕೂಡಲಿಕ್ಕೆ ಜಾಗೆಯೂ ಸಿಕ್ಕಬಹುದು" ಎಂದು ಅನಂತ ಹೇಳಿದ.

ಅವಳಿಗೆ ಕೈಯಾಸರೆ ಕೊಟ್ಟು ಒಳಕ್ಕೆ ಕರೆದುಕೊಂಡ. ನಡುವೆ ಸ್ಥಳವೂ ಸಿಕ್ಕಿದ್ದಾಯಿತು. ಗಾಡಿ ತನ್ನಷ್ಟಕ್ಕೆ ತಾನು ಸಾಗಿತು. ಯಾವ ಸ್ಟೇಶನ್ ಬಂದರೂ ಜನ ಇಳಿಯುವುದಕ್ಕಿಂತ ಹೆಚ್ಚಾಗಿಯೇ ಏರುತ್ತಿದ್ದಿತು. ವಾಸಂತಿಯ ಲಕ್ಷ್ಯಮಾತ್ರ ಎಲ್ಲಿಯೋ ಅಲೆಯಹತ್ತಿದ್ದಿತು. ಅನಂತ ಒಂದೆರಡು ಬಾರಿ ಮಾತನಾಡಲು ಯತ್ನಿಸಿ, ಅವಳ ವಿಮನಸ್ಕತೆಯನ್ನರಿತು, ತನ್ನಷ್ಟಕ್ಕೆ ತಾನು ಸರ್ಕ್ಯುಲೇಶನ್ ಲೈಬ್ರರಿಯಿಂದ ತಂದ "ಬೇಡದ ಮಗು" ಕಾದಂಬರಿಯನ್ನು ಓದುತ್ತ ಕುಳಿತ.

ವಾಸಂತಿ ತೆರೆದ ಕಣ್ಣಿನಿಂದ ಕಿಟಕಿಯಲ್ಲಿ ನೋಡುತ್ತಿದ್ದಳು. ಬಾಂಬೆ ಸೆಂಟ್ರಲಿನ ಭವ್ಯನಿಲ್ದಾಣ, ಅನಂತರ ರೇಲ್ವೆ ವರ್ಕಶಾಪ್, ಪರೇಳದ ಮಿಲ್ಲು, ಒಂದೊಂದನ್ನಾಗಿ ಹಿಂದೆ ಸಾಕಿ, ಗಾಡಿ ಮುಂದೆ ಓಡಹತ್ತಿದ್ದಿತು; ಆದರೆ ಆಕೆಯ ಮನಸ್ಸು ಮಾತ್ರ ಹಿಂದೆ ಎರಡು ವರ್ಷಗಳ ಹಿಂದೆ ಓಡಹತ್ತಿದ್ದಿತು:

ಎರಡು ವರ್ಷಗಳ ಹಿಂದೊಮ್ಮೆ ವಾಸಂತಿ ಹೀಗೆಯೇ ಉದ್ವೇಗದಿಂದ ಫೋನು ಮಾಡಿದ್ದಳು.

"ಏನು ಕೆಲಸವಿದ್ದರೂ—ಹೇಗಿದ್ದರೂ—ಬಂದು ಕೂಡಲೆ ಭೆಟ್ಟಿಯಾಗು" ಎಂದು.

ಆಕೆಯ ಮಾತನ್ನು ತೆಗೆದು ಹಾಕಲಾರದೆ ಅನಂತ, ಮೈಯಲ್ಲಿ ಸರಿಯಿಲ್ಲವೆಂದು ಹೇಳಿ, ಆಫೀಸಿನಿಂದ ಕೂಡಲೆ ಹೊರಟು ಬಂದಿದ್ದ; ತುಂಬಾ ಗಾಬರಿಯಾಗಿ ಉದ್ವಿಗ್ನನಾಗಿ ಅವಳನ್ನು ಕೇಳಿದ್ದ:

"ವಾಸಂತಿ, ಮೈಯಲ್ಲಿ ಸರಿಯಿಲ್ಲವೇ? ಡಾಕ್ಟರರ ಕಡೆಗೆ ಹೋಗೋಣವೇ?" ಎಂದು.

ಆಕೆ ನಕ್ಕು ಹೇಳಿದಳು: "ಇಲ್ಲ ಸರಿಯಾಗಿಯೇ ಇದ್ದೇನೆ! ನನ್ನನ್ನು ನೋಡಿದರೆ ತಿಳಿಯುದೇ?" ಎಂದು ಕಣ್ಣಲ್ಲಿ ಕಣ್ಣಿಟ್ಟು ಕೇಳಿದಳು. ಅನಂತ ಪೆಚ್ಚಾಗಿ ನಕ್ಕ. ಆದರೆ ಮನಸ್ಸಿನಲ್ಲಿ ಮಾತ್ರ ಕಾರಣ ತಿಳಿಯದೆ ಗೊಂದಲವೆದ್ದಿದ್ದಿತು. ಇಬ್ಬರೂ ಕೂಡಿ ಮರಿನ್ ಲೈನ್ಸ್‌ಗುಂಟ ನಡೆದು ನರಿಮನ್ ಪಾಯಿಂಟಿಗೆ ಬಂದು ಕುಳಿತರು.

ಅನಂತ "ಮುಂದೇನು?" ಎನ್ನುವಂತೆ ಅವಳೆಡೆಗೆ ನೋಡಿದ; ಅದನ್ನು ತಿಳಿದು ಆಕೆ ಒಮ್ಮೆ ಮಧುರವಾಗಿ ನಕ್ಕು ಕೇಳಿದಳು:

"ಗಾಬರಿಯಾಯಿತೇ? ಹೀಗೇ ಸಮುದ್ರದ ದಂಡೆಗುಂಟ ತಿರುಗಾಡಬೇಕೆನಿಸಿತು—ಅದಕ್ಕೆ—"

"ಹಂ ಇಷ್ಟೆಯೇ?" ಎಂದ ಸಮಾಧಾನದ ಉಸಿರು ಬಿಡುತ್ತ.

"ಆದರೆ ಇದೇನು ಅಷ್ಟು ಹೆಗುರುವಿಚಾರ ಎಂದು ಎನಿಸಿತೇ? ನಾವು ಯಾವಾಗಲೂ ನಮ್ಮ ಭಾವನೆಗಳಿಗೆ ಸಾಕಷ್ಟು ಬೆಲೆ ಕೊಡಬೇಕು!" ಎಂದು ಮತ್ತೊಮ್ಮೆ ನಕ್ಕಳು.

ಅನಂತನೂ ನಕ್ಕ. ಆದರೆ ವಾಸಂತಿ ಕೂಡಲೇ ಗಂಭೀರಳಾದದ್ದನ್ನು ಆತ ನೋಡಿರಲಿಲ್ಲ. ಸ್ವಲ್ಪ ಹೊತ್ತು ಮೌನದಲ್ಲಿಯೇ ಕಳೆದುಹೋಯಿತು. ಕತ್ತಲೆಯೂ ಆಗುತ್ತ ಬಂತು—ಅನಂತ ಕೇಳಿದ: "ಒಳ್ಗೇದು ಹೊರಡೋಣವೇ?"

ಆದರೆ ವಾಸಂತಿ — ವಾಸಂತಿಗೆ ತಾನು ಹೇಳಬೇಕೆಂದುದನ್ನು ಇನ್ನೂ ಹೇಳಲು ಆಗಿರಲಿಲ್ಲ. ಹೇಗೆ ಹೇಳಬೇಕೆನ್ನುವುದೂ ತಿಳಿದಿರಲಿಲ್ಲ.

ಏಳುತ್ತಿದ್ದ ಅನಂತನ ಕೈಹಿಡಿದು ಕೆಳಗೆ ಎಳೆದು ಮಾಡಿ ಮೆಲ್ಲಗೆ ಕೇಳಿದಳು —

"ಅನಂತ, ನಾವಿನ್ನೂ ಹೀಗೆಯೇ ಎಷ್ಟು ದಿನ ಇರುವುದು?" ಅನಂತನಿಗೆ ಅವಳ ಮಾತಿನ ದಿಶೆ ಲಕ್ಷ್ಯಕ್ಕೆ ಬಂದಿದ್ದರೂ ಸುಮ್ಮನಿದ್ದ.

"ಅನಂತ, ನಿನಗೆ ಈ ಬಗೆಗೆ ಇನ್ನೂ ಏನೂ ಎನಿಸುವುದಿಲ್ಲವೇ? ಅದಷ್ಟು ಬೇಗ ಮುಗಿಸುವುದು ಒಳಿತು!" ವಾಸಂತಿಗೆ ಒಂದು ದೊಡ್ಡ ಭಾರ ಇಳಿದಂತಾಯಿತು. ಅನಂತ ಮಾತ್ರ ಗಂಭೀರನಾಗಿದ್ದ. ವಾಸಂತಿಗೆ ಮೌನ ಅಸಹ್ಯವಾಯಿತು. ಉತ್ಕಂಠೆಯಿಂದ ಅವನು ಹೇಳುವುದನ್ನೇ ನಿರೀಕ್ಷಿಸಹತ್ತಿದಳು.

ಭಾವನಾವಶನಾಗಿ ಆತ ಕೇಳಿದ: "ವಾಸೂ, ನಾನಿದನ್ನು ವಿಚಾರ ಮಾಡಿಲ್ಲವೆಂದುಕೊಂಡಿಯಾ? ಆದರೆ ಮುಂದೆ ಹೇಗೆ?—ಎನ್ನುವ ವಿಚಾರದಿಂದ ನಾನು ಸುಮ್ಮನಿದ್ದದ್ದು. ಲಗ್ನವಾದನಂತರ ನನಗೊಂದು ಮನೆ ಹೆಸರಿಗಾದರೂ ಬೇಡವೇ? ನಾನಾವರೂ ಅದೇ ಪ್ರಯತ್ನದಲ್ಲಿರುವೆನು. ಮನೆಸಿಕ್ಕಿ ಕೂಡಲೇ ಮದುವೆಯಾಗೋಣ. ಅಷ್ಟಾಗಿ ಈಗೇನಾಗಿದೆ? ಮದುವೆಯಾದರೆಯೇ ಗಂಡ-ಹೆಂಡಿರೇ? ಮದುವೆಯಾದ ನಂತರ ನಿನಗೆ ಈಗಿನಂತೆ ಹಾಸ್ಪೇಲಿನಲ್ಲಿ ಇರಲಿಕ್ಕೆ ಆಗುವುದೇ? ನೀನೇ ವಿಚಾರ ಮಾಡು!"

"ಯಾಕೆ ಆಗುವುದಿಲ್ಲ? ಮನೆ ಸಿಕ್ಕುವ ವರೆಗೆ ನಾನು ಹಾಸ್ಪೆಲಿನಲ್ಲಿಯೇ ಇರುವೆನು."

ಅನಂತ ವಿಚಾರದಲ್ಲಿ ಬಿದ್ದ. ಸ್ವಲ್ಪ ಹೊತ್ತಿನ ನಂತರ ಕೇಳಿದ: "ನನ್ನ ಮಾತಿನಲ್ಲಿ ನಿನಗೆ ವಿಶ್ವಾಸವಿಲ್ಲವೇ"

ವಾಸಂತಿ ಗೋಣಲ್ಲಾಡಿಸಿ ಹೇಳಿದಳು.

"ಅನಂತ ನೀನು ನನ್ನನ್ನು ತಿಳಿಯಲಿಲ್ಲ!"

"ಮತ್ತೇನು ವಾಸು! ಮತ್ತೇನು-ಹೇಳು" ಎಂದು ಉದ್ವಿಗ್ನನಾಗಿ ಕೇಳಿದ ಅನಂತ.

"ಏಕೆ ಎನ್ನುವುದನ್ನು ನಾನು ವ್ಯಕ್ತಪಡಿಸಲಾರೆ. ಆದರೆ ನಾನಿನ್ನು ಹೀಗೆಯೇ ಇರಲಾರೆ. ಏಕೆ ಎನ್ನುವುದು ನನಗೂ ತಿಳಿಯದು; ನಿನಗೂ ತಿಳಿಸಿ ಹೇಳಲಾರೆ! ನನ್ನನ್ನು ನಂಬು, ಇಷ್ಟು ಮಾತ್ರ ಹೇಳಬಲ್ಲೆ. ಇಲ್ಲಿ ಮನೆಯು ಸಿಕ್ಕುವುದು ಅಸಾಧ್ಯ; ಆದರೆ— ಆದರೆ ನಮ್ಮ ಸ್ಥಿತಿ ಮಾತ್ರ ಇಂದು ಅದಕ್ಕಾಗಿಯೇ ಫುಟ್‌ಪಾತಿನ ಮೇಲೆ ಸಂಸಾರ ಮಾಡಬೇಕಾದಷ್ಟು ಕಠಿನವಿಲ್ಲ. ಬರಿಯ ಮನೆಗಾಗಿಯೇ ನಾವು"— ಮುಂದೆ ಮಾತು ಬರಲಿಲ್ಲ.

ಅನಂತ ಅವಳನ್ನು ಕಡೆಯುತ್ತ ಹೇಳಿದ: "ಹೋಗಲಿ ಬಿಡು. ನಿನಗೆಷ್ಟು ಎನಿಸುತ್ತದೆಯೋ ಅಷ್ಟೇ ನನಗೂ ಆತುರ! ಒಳ್ಳೆಯದು. ಇಂದು ಶುಕ್ರವಾರ. ಸೋಮವಾರ ಬೆಳಗು ರಜಿಸ್ಟ್ರಾರ್ ಕಚೇರಿಗೆ ಹೋಗೋಣ!"

"ಏ ವಾಸಂತಿ ಏಳು, ಸ್ಟೇಶನ್ನು ಹೋಯಿತು. ಈಗಿನಿಂದಲೇ ಪ್ರಯತ್ನಪಟ್ಟರೆ ಸಾಂತಾಕ್ರೂಜಿಗೆ ತಳಿಯಬಹುದು. ಅನಂತನ ಮಾತಿನಿಂದ ಅವಳ ವಿಚಾರಚಕ್ರ ಮುರಿದು ಬಿದ್ದಿತು. ಆಕೆ ಅಪ್ರಯತ್ನಳಾಗಿ, ನಿಂತಿದ್ದ ಎರಡು ಹನಿ ಕಣ್ಣೀರನ್ನು ಅನಂತನಿಗೆ ಕಾಣದಂತೆ—ಅವಸರವಾಗಿ ಒರೆಸಿಕೊಂಡು, ಅವನ ಹಿಂದೆ ಸಾಗಿದಳು.

ಸ್ಟೇಶನ್ನಿನ ಹೊರಕ್ಕೆ ಬಂದರು.

"ಹೇಗೆ ಹೋಗುವುದು? ಬಸ್ಸಿನಿಂದಲೋ? ಏನು ನಡೆಯುತ್ತಲೋ" ಎಂದು ಕೇಳಿದಾಗ—

"ಬಸ್ಸು ಬೇಡ" ಎಂದಿಷ್ಟೇ ಹೇಳಿ ಅವಳು ಮುಂದೆ ಸಾಗಿದಳು. ಅನಂತನ ಮನಸ್ಸೂ ವಿಚಾರಕ್ಕೆ ಒಳಪಟ್ಟಿತ್ತು—ತನ್ನಿಂದಾಗಿ ಆಕೆಗೆ ಎಂತಹ ಹಿಂಸೆಯೆಂದು. ಲಗ್ನವಾಗಿ ಎರಡು ವರುಷಗಳಾದರೂ ಮನೆ ಸಿಕ್ಕಿರಲಿಲ್ಲ. ಆತ ಅದಕ್ಕಾಗಿ ಸರ್ವ ಪ್ರಯತ್ನವನ್ನೂ ಮಾಡಿದ್ದ. ಒಂದು ಬಾರಿ ಸಿಕ್ಕೆತೆನ್ನುವ ಸಂಭ್ರಮದಲ್ಲಿದ್ದಾಗಲೇ ಸರಕಾರದಿಂದ ಅದನ್ನು ಬಿಟ್ಟುಕೊಡಲು ನೋಟೀಸು ಬಂದಿತ್ತು. ಪ್ರತಿ ಬಾರಿ ಪ್ರಯತ್ನ ಮಾಡಿದಾಗಲೂ ಕಹಿ ಅನುಭವ ನಿರಾಶೆಗಳೇ ಹೆಚ್ಚು ತ್ತಿದ್ದುವು

ವಾಸಂತಿಯನ್ನು ಹಾಸ್ಪೆಲಿನಲ್ಲಿಟ್ಟು ತಾನು ದಾದರದಲ್ಲಿ ಏಳೆಂಟು ಜನ ಗೆಳೆಯರೊಡನೆ ಒಂದು ಕೋಣೆಯಲ್ಲಿದ್ದನು. ಅಲ್ಲಿದ್ದವರಲ್ಲಿ ಅನಂತನೊಬ್ಬನೇ ಮದುವೆಯಾಗಿದ್ದವ. ಅನಂತ ಮುಂಬೈಗೆ ಬಂದಾಗಿನಿಂದ ಅಲ್ಲೆಯೇ ಇದ್ದ. ಮೊದಲು ಅವನಿಗೆ ವಿಚಿತ್ರವೆನಿಸುತ್ತಿತ್ತು: 'ಇಷ್ಟು ಚಿಕ್ಕ ಕೋಣೆಯಲ್ಲಿ ಏಳೆಂಟು ಜನ ಹೇಗಿರುವುದು?' ಎಂದು ಅನಂತರ ಅದರ ಗುಟ್ಟು ತಿಳಿಯತೊಡಗಿತು. ಅವರಲ್ಲಿ ನಾಲ್ಕುಜನ, ನಿತ್ಯ ರಾತ್ರಿಯ ಕೆಲಸಕ್ಕೆ ಹೋಗುತ್ತಿದ್ದರು. ಇಬ್ಬರಿಂತೂ ಬಂದರೆ ಬಂದರು, ಇಲ್ಲವಾದರೆ ಇಲ್ಲ. ಹೀಗೆ ಬಹುತರ ನಾಲ್ಕಕ್ಕಿಂತ ಹೆಚ್ಚು ಜನ ಎಂದಿಗೂ ಒಟ್ಟಿಗೆ ಕೂಡಿರುತ್ತಿದ್ದಿಲ್ಲ. ಒಂದೇ ಕೋಣೆಯಲ್ಲಿದ್ದವ ಅವರಿಗೆ ತಿಂಗಳುಗಟ್ಟಲೆ ದರ್ಶನವಾಗುತ್ತಿರಲಿಲ್ಲ. ಬರುಬರುತ್ತ ಅದು ಒಗ್ಗಿಹೋಯಿತು. ಆದರೆ ಈಗ ಮಾತ್ರ ಹಾಗಿರಲು ಬರುವಂತಿರಲಿಲ್ಲ. ಏನಾದರೂ ಮಾಡಬೇಕಿದ್ದಿತು; ಆದರೆ



ಏನು ಮಾಡುವುದಕ್ಕೂ ಸಾಧ್ಯವಿರಲಿಲ್ಲ. ಅದಕ್ಕಾಗಿ ಯಾರನ್ನೂ ನಂಬುವಂತಿರಲಿಲ್ಲ ಫುಟ್‌ಪಾತಿನ ಮೇಲೆ ಮಲಗಿರುವ ಜನವನ್ನು ಕಂಡಾಗ, ವ್ಯರ್ಥಾ ಬಂಧನವಿರುವ ಸುಧ್ಯನುವರ್ಗದಲ್ಲಿದ್ದುಕೊಳ್ಳಬೇಕಾಗಿದ್ದುದ್ದಕ್ಕಾಗಿ, ಕೆಡುಕೆನಿಸುತ್ತಿತ್ತು. ಮೇಲಿನ ವರ್ಗದವರಂತೆ ಹಣ ತೂರಿ ಮನೆ ಹಿಡಿಯಲೂ ಸಾಧ್ಯವಿರಲಿಲ್ಲ; ಇಲ್ಲವೆ ಇವರೆಲ್ಲರಂತೆ ಫುಟ್‌ಪಾತಿನ ಮೇಲೆ ಹಾಯಾಗಿ ಮಲಗಿಕೊಳ್ಳಲೂ ಆಗುವಂತಿರಲಿಲ್ಲ ಮೊದಮೊದಲು "ಮಾಲಾಡದಲ್ಲಿಯೋ ಬೋರಿವಲಿಯಲ್ಲಿಯೋ ಮನೆಹಿಡಿದರೆ, ವಾಸಂತಿಗೆ ಎಳ್ಳಷ್ಟೂ ಸುಖ ದೊರೆಯದು; ತನಗೂ ಹಿತವಾಗದು. ಅಬ್ಬಾ! ನಿತ್ಯ ಮೂರು ತಾಸಿನ ಪ್ರವಾಸ, ಎಂಟು ತಾಸು ಆಫೀಸು. ಹೀಗಾದರೆ ಹಾಯಾಗಿ ನಾಲ್ಕು ಮಾತು ಆಡಲೂ ವೇಳೆ ಸಿಕ್ಕದು. ಏನೋ ಕಾರಣದಿಂದಾಗಿ ವೇಳೆ ದೊರೆತರೂ ದಣಿದ ದೇಹ. ಕೋತ ಮನಸ್ಸು ಅದಕ್ಕೆ ಅಶ್ಯದವೀಯದು" ಎಂದುಕೊಂಡಿದ್ದ. ಹೀಗೆಂದು ಮುಂಬೈಗೆ ಸಮೀಪವಾಗುವಂತೆ ಮನೆ ದೊರಿಕಿಸಬೇಕೆಂದು ಪ್ರಯತ್ನ ನಡೆಸಿದ್ದ. ಅಷ್ಟಾಗಿ ತಾನೊಬ್ಬನೇ ಆದರೆ ಹೇಗೂ ಸಾಗಬಹುದಿತ್ತು. ವಾಸಂತಿಯೊಡನೆ ಅಲ್ಲಿಯ 'ಆ×೧೦'ರ ಗವಿಯಂತಹ ಖೋಲಿಗಳಲ್ಲಿ ಹೇಗೆ ಸಂಸಾರ ಹೂಡಬೇಕು? ಇದೂ ಒಂದು ಸಮಸ್ಯೆಯಾಗಿದ್ದಿತು. ಮೊದಲ ಬಾರಿಯೇ ಮಾಲಾಡಕ್ಕೆ—ಸಹಜವಾಗಿ—ನೋಡಿ ಬರಲು ಎಂದು—ಗೆಳೆಯನ ಮನೆಗೆ ಹೋದಾಗ, ನೀರಿಗಾಗಿ ನಡೆದ ಬಡಿದಾಟ, ಅತನ ಗೆಳೆಯ ಚೇಷ್ಟೆ ಮಾಡಿದ ದುಡ್ಡಿಗೆರಡು ಬಕೇಟಿನ ನೀರು—ನೆನಪಾದಾಗ ಮನಸ್ಸು ಹಿಂಜರಿಯುತ್ತಿತ್ತು. ಅಷ್ಟಾಗಿ ಅಲಿ ಬರಿ ಅನಾನುಕೂಲತೆಗಳೇ ತುಂಬಿದ್ದುವು. ಈಗಿದ್ದಷ್ಟು ಸುಖವೂ ಅಲ್ಲಿ ಹೋದರೆ ಸಿಕ್ಕದು—ಎನ್ನುವ ಬಲವಾದ ಭಾವನೆಯೂ ಅವನಲ್ಲಿ ಮೂಡಿತ್ತು.

ಘೋಡಬಂದರ ರೋಡಿಗೆ ಬಂದಾಗ, ಅನಂತ ಲಾರಿಯೊಂದರ ಸಪ್ಪಳದಿಂದ ಎಚ್ಚತ್ತು ವಾಸಂತಿಯನ್ನು ಹಿಂದಕ್ಕೆಸೆಳೆದುಕೊಂಡ. ಮತ್ತೆ ಇಬ್ಬರೂ ಮಾತಿಲ್ಲದೆ ಸಾಗಿದರು. ದೂರದಿಂದಲೇ ಉಸುಕಿನ ಬಿಳಿ ಬಯಲು, ಎಲ್ಲಿಯೋ ಸಮುದ್ರ ಭೋರ್ಗರೆದ ಸಪ್ಪಳ, ಜುಹೂ ಬೀಚ್ ಸಮೀಪವಾದ ಸೂಚನೆಯನ್ನು ಕೊಟ್ಟುವು.

ಸೂರ್ಯ ಆಗಲೇ ಅಸ್ತನಾಗತೊಡಗಿದ್ದ. ಅನಂತ ವಾಸಂತಿಯನ್ನು "ಇಲ್ಲಿಯೇ ಕುಳಿತಿರು" ಎಂದು ಹೇಳಿ, ಅಲ್ಲಿಯ ಹಾಟೆಲಿನ ಒಳಕ್ಕೆ ತಾನು ರಿಝರ್ವ್ ಮಾಡಿಸಿದ ಪೋಲಿಯ ಬಗೆಗೆ ಕೇಳಲು ಹೊರಟುಹೋದ. ಅಷ್ಟಾಗಿ ವಾಸಂತಿಗೆ ಒಂದೈದು ನಿಮಿಷ ಏಕಾಂತದಲ್ಲಿ ವಿಚಾರಮಾಡಲು ಅವ್ಕಾಶ ಸಿಕ್ಕಲಿ—ಎನ್ನುವ ಉದ್ದೇಶವೂ ಅವನಿಗಿದ್ದಿತು.

ಅನಂತ ತಿರುಗಿ ಬಂದುದನ್ನು ಅವಳು ನೋಡಿರಲಿಲ್ಲ. ಅವಳ ಬೆನ್ನಮೇಲೆ ಕೈಯಿಟ್ಟು ಮೆಲ್ಲನೆ, "ವಾಸೂ—ಏನಾಗಿದೆ ನಿನಗೆ? ಹೇಳಬಾರದೇ? ಹೀಗೇಕಿದ್ದೀಯಾ?" ಎಂದ.

ಆಕೆ ಹೇಳಲು ಯತ್ನಿಸಿದಳು; ಆದರೆ ಬರಿ ಕಣ್ಣಿನಿಂದ ನೀರು ಮಾತ್ರ ಜಾರಿಬಿದ್ದುವು

ಅವಳ ಕಣ್ಣನ್ನು ಒರಸುತ್ತ ಕೈಯಲ್ಲಿ ಕೈಯನ್ನು ತೆಗೆದು. ಕೊಂಡು ಮತ್ತೆ ಕೇಳಿದ:

"ಹೇಳು ವಾಸಂತಿ! ಹೀಗೆ ಬರಿ ಸಮ್ಮನಿದ್ದರೆ ನಾನು ಹೇಗೆ ತಿಳಿದುಕೊಳ್ಳಲಿ?"

ವಾಸಂತಿ ಸುಮ್ಮನೆ ಇದ್ದಳು. ಹೇಳಬೇಕಾದದ್ದು ಬೇಕಾದಷ್ಟಿದ್ದಿತು; ಆದರೂ ಹೇಳಲಾಗದೆ ಸುಮ್ಮನಿದ್ದಳು. ಕೊನೆಗೆ ಏನೋ ನಿರ್ಧಾರ ಮಾಡಿದಂತೆ ಮೆಲ್ಲನೆ ಹೇಳಿದಳು:

"ಏನಿಲ್ಲ! ಅನಂತ, ನಾನು ಹಾಸ್ಟೆಲು ಬಿಡಬೇಕೆಂದಿದ್ದೇನೆ, ಒಂದನೆಯ ತಾರೀಖಿನಿಂದ!"

"ಆ!" ಎಂದ, ಅನಂತ ಗಾಬರಿಯಿಂದ.

"ನನಗೆ ಅಲ್ಲಿ ಏಕಾಕಿನಿಯಾದಂತೆ ಎನಿಸುವುದು. ನನಗಿನ್ನು ಅಲ್ಲಿರುವುದಕ್ಕೆ ಸಾಧ್ಯವಿಲ್ಲ."

"ಏಕೆ? ಯಾರದಾದರೂ ಸಂಗಡ ಜಗಳವಾಯಿತೇ? ನಿಮ್ಮ ಮೇಲಿನವರು ಏನಾದರೂ ಅಂದರೆ?"

ವಾಸಂತಿ ಎಷ್ಟೋ ಹೊತ್ತಿನ ತರುವಾಯ, ಈಗಿನ ಅನಂತನ ಪ್ರಶ್ನೆಗಾಗಿ ನಕ್ಕಳು:

"ಸದ್ಯ ಅಂತಹದೇನೂ ಆಗಲಿಲ್ಲ; ಆದರೆ ನಾನು ಇನ್ನು ಅಲ್ಲಿರುವುದಿಲ್ಲ."

"ಏಕೆ? ಆದದ್ದಾದರೂ ಏನು?"

ಅನಂತನ ಮಾತನ್ನು ಅಲಕ್ಷಿಸಿ:

"ನೀನು ರವೀಂದ್ರರ "ಕ್ರೀಸೆಂಟ್ ಮೂನ್" ಓದಿರುವೆಯಾ?" ಎಂದು ಕೇಳಿದಳು. ಅವಳ ಮಾತಿನ ಒಳಪನ್ನರಿಯದೆ ಅನಂತ:

"ಇಲ್ಲ" ಎಂದ.

"ಆದರೆ,....ಅದೇಕೆ ಬೇಕಾಗಿದೆ ಈಗ?"

"ಏಕಿಲ್ಲ, ಬಹಳ ಚೆನ್ನಾಗಿತ್ತು ಅದಕ್ಕೆ ಕೇಳಿದೆ."

ಸುದರ್ಶನ

'ಆನಂದಕಂದ'ರ ಸಾಮಾಜಿಕ ಕಾದಂಬರಿಯು
ಳನೆಯ ಆವೃತ್ತಿ ಮುದ್ರಿತವಾಗಿ ಹೊರಗೆ ಬಂದಿದೆ.
ಪುಟ ಸಂಖ್ಯೆ ೧೫೦. ಬೆಲೆ ೧-೮-೦.

ಓದಲು ಕೈಯಲ್ಲಿ ತೆಗೆದುಕೊಂಡವರಿಗೆ, ಮುಗಿಸದೆ
ಇದನ್ನು ಕೆಳಗಿಡಲಿಕ್ಕೆ ಮನಸ್ಸು ಒಪ್ಪಲಾರದು.

* * * *

ಈ ಕಾದಂಬರಿಯನ್ನು ನೂರು ನೂರು ಸಲ ಓದಿಯೂ
ಇನ್ನೂ ಓದಬೇಕೆನ್ನುವ ರಸಿಕರು ಹಲವು ಜನರು.

ಬೇಕಾದವರು ಕೂಡಲೆ ಪತ್ರ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

"ಆದಿನ, ಅಲ್ಲಿ ಉಪಕಿನ ಮನೆ ಮಾಡುವ ಹುಡುಗರಿಬ್ಬರೂ ಹೋಗಿದ್ದಾರೆ?" ಅವಳ ಮಾತಿನಲ್ಲಿಯು ವಿಷಂಗತಿಯನ್ನು ಲಕ್ಷ್ಯಿಸಿ

"ಮುಂದೇನು?" ಎನ್ನುವಂತೆ ಅವಳನ್ನು ನೋಡುತ್ತ "ಚೆನ್ನಾಗಿದ್ದಾರೆ" ಎಂದ.

"ಇಲ್ಲ. ಬಹಳ ಮುದ್ದಾಗಿದ್ದಾರೆ ಅಲ್ಲವೇ?" ಎಂದು ಕೇಳಿದಳು.

"ಇರಬಹುದು" ಎಂದ.

ಆಕೆ ಮತ್ತೆ ಮೊದಲಿನ ಮಾತಿಗೆ ಬಂದು ಹೇಳಿದಳು: "ನಾನು ಒಂದನೆಯ ತಾರೀಖಿಗೆ ಹಾಸ್ಟೆಲು ಬಿಡಲೇಬೇಕು."

ಅನಂತ ಸುಮ್ಮನಿದ್ದ. ವಾಸಂತಿ ಅವನೆದುರು ಚೆನ್ನಾಗಿ ಕುಳಿತುಕೊಂಡು ಹೇಳಹತ್ತಿದಳು:

"ಅನಂತ, ಮುಂದಿನ ತಿಂಗಳು ನನ್ನ ಲಗ್ನವಾಗಿ ಎರಡು ವರುಷಗಳಾಗುವುವು ಆದರೆ ಈ ಎರಡು ವರ್ಷ ನಾವು ಹೇಗೆ ಕಳೆದೆವು? ಎಲ್ಲೋ ಹೇಗೆಯೋ ಹೋದುವು! ನನಗೆ ಈ ಜೀವನ ಬೇಸರ ಬಂದಿದೆ. ಅನಂತ!"

ಅನಂತ ಬರೀ ಗೋಣಲ್ಲಾಡಿಸಿದ. "ಇಂತಹ ಜೀವನದಿಂದ ನಿಜಕ್ಕಾದರೂ ಸುಖವಿದೆಯೇ? ಇಬ್ಬರಿಗೂ ಬೇಡವಾದ ಇವನ್ನು ಒಮ್ಮೆ ಬಗೆಹರಿಸಬಾರದೇಕೆ?"

"ಅದಿಲ್ಲ ನಿಜ. ನಾನು ಆ ದಿಶೆಯಲ್ಲಿ ವಿಚಾರಮಾಡುವು. ದಿಲ್ಲ—ಪ್ರಯತ್ನವಿಲ್ಲ—ಎಂದುಕೊಂಡೆಯಾ? ಆದರೆ, ನೀನೇ ವಿಚಾರ ಮಾಡು. ಆ ೪×೧೦ ಚಿಕ್ಕಕೋಣೆ. ಕೊರತೆಗಳೇ ವ್ಯೆವಕ್ತು

ನಿಂತ ಆ ಜೀವನ. ಅದಕ್ಕಾಗಿಯೇ ಹೆಣಗಾಡಬೇಕಾದ ಸಂಸ್ಕೃತಿ—ಓ—ಅದೆಲ್ಲ ೮×೧೦ ಚಿಕ್ಕ ಕ್ಯಾಬಿನ್‌ನಲ್ಲಿಯೂ ಮರ್ಯಾದಿತವಾಗುವುದು. ಸುಂದರವಾದ ಪುಷ್ಪಪಾತ್ರೆಯೊಂದನ್ನು, ಭದ್ರತೆಗಾಗಿ ಕಬ್ಬಿಣದ ಪೆಟ್ಟಿಗೆಯಲ್ಲಿ ಹಾಕಿಡಬೇಕೆಂದಾಗ, ಹಿಡಿಯದುದಕ್ಕಾಗಿ ಕುಟ್ಟಿ ಪುಡಿಮಾಡಿ ತುರುಕಿದಂತಾಗುವುದು. ಅಲ್ಲಿ ಚೇತನ, ಸಂತೋಷ, ವಿಕಾಸ ಎಲ್ಲವನ್ನೂ ಆ '೮×೧೦' ಮರ್ಯಾದಿತ ಸ್ಥಳದಲ್ಲಿ ತುರುಕ ಬೇಕಾಗುವುದು. ಆಗ ನಮ್ಮ ಪಾಲಿಗೆ ಉದಾಸೀನತೆ, ನೋವು, ದಣಿವು ಮಾತ್ರ! ಬೇಡ, ವಾಸಂತಿ, ಅದನ್ನು ನೆನಸಿದರೆ—ಬಿಸಿಲಿನಲ್ಲಿ ನೂರಾರು ಬಕೇಟುಗಳ ಸಾಲಿನಲ್ಲಿ ಶರತಿಗಾಗಿ ಕಾಯುತ್ತ ಬಿಲ್ಲಿಗೆರಡು ಬಕೇಟು ನೀರನ್ನು ನೀನು ತರುವ ಚಿತ್ರ—ಎಷ್ಟು ಭಯಂಕರ—ವಾಸಂತಿ! ನನ್ನನ್ನು ನೀನು ತಿಳಿದುಕೊಳ್ಳಲಿಲ್ಲ" ಎಂದ.

ವಾಸಂತಿ ಒಂದು ಕ್ಷಣ ಸುಮ್ಮನಿದ್ದು ಮೆಲ್ಲನೆ ಎದ್ದು ಕಣ್ಣೀರು ಒರೆಸಿಕೊಂಡು, ಆ ಹುಡುಗರಾಡುತ್ತಿದ್ದ ಸ್ಥಳಕ್ಕೆ ಹೋದಳು. ಸ್ವಲ್ಪ ಹೊತ್ತಿನನಂತರ ಅವರೊಡನೆ ಆಟದಲ್ಲಿ ಅವಳೂ ಸೇರಿಕೊಂಡಳು. ಆಗಲೇ ಬೆಳುದಿಂಗಳು ಬೀಳಹತ್ತಿದ್ದಿತು. ಸಮುದ್ರದ ತೆರೆಗಳೂ ಬಿಳಿಯಾಗಿದ್ದುವು.

ಬಿಳಿಯ ಉಸುಕು, ಬಿಳಿಯನೀರು, ಬೆಳ್ಳಿಯ ತೆರೆಗಳು, ಬಿಳಿಯ ಸೀರೆ ಉಟ್ಟ ವಾಸಂತಿ, ಅಲ್ಲಿಯೇ ನಿಂತಿದ್ದ ಆ ಬಿಳಿಯ ಮಗು—ಎಲ್ಲೆಲ್ಲಿಯೂ ಧವಲಮಯವಾಗಿದ್ದಿತು. ಅನಂತನಿಗೆ ವಾಸಂತಿ ಇನ್ನೂ ಮೋಹಕವಾಗಿ ಕಂಡಳು. ಆಕೆ ಆ ಮಗುವಿನೊಡನೆ ನಗುತ್ತಿದ್ದುದನ್ನು ಕಂಡಾಗ, ಅನಂತನಿಗೂ ಏನೋ ಒಂದು ಸಂಭ್ರಮ ವಾಯಿತು. ಅದರ ಜೊತೆಗೆ ಮಿಂಚಿನಂತೆ ವಿಚಾರ ಹೊಳೆಯಿತು. ವಾಸಂತಿಯು ಒಗಟಿನ ನಡೆವಳಿಕೆಯ ಕಾರಣವೂ ತಿಳಿಯಿತು. ಮೆಲ್ಲನೆದ್ದು ತಾನೂ ಅಲ್ಲಿಗೆ ಹೋದನು.

"ವಾಸಂತಿ! ನನ್ನನ್ನು ಕ್ಷಮಿಸು. ನಾಳೆ ಮುಂಜಾನೆ ಹೋಗಿ ಮಾಲಾಡದಲ್ಲಿ ಮನೆ ಹಿಡಿಯುವಾ!" ಎಂದ ಗಂಭೀರವಾಗಿ.

ವಾಸಂತಿ ಚಕಿತಳಾಗಿ ಆವನ ಮೋರೆಯನ್ನು ನೋಡಹತ್ತಿದಳು.

"ನನಗೆ ಅರ್ಥವಾಗಿರಲಿಲ್ಲ ನಿನ್ನ ಕ್ರೀಸೆಂಟ್ ಮೂನ್! ಆದಿರಲಿ ವಾಸು! ನಿನಗೆ ಮಗು ಗಂಡು ಇಷ್ಟವೋ ಹೆಣ್ಣು ಇಷ್ಟವೋ?" ನಗುತ್ತ ಕೇಳಿದ. ವಾಸಂತಿ ನಾಚುತ್ತ ಹೇಳಿದಳು:

"ಅದನ್ನು ನಾನೇ ಹೇಳಲೆ? ನನ್ನ ದೇವರನ್ನು ಕೇಳಬೇಕು!" ವಾಸು—ಎಂದ, ಭಾವನಾವಶನಾಗಿ ಅವಳನ್ನು ನಿಟ್ಟಿಸುತ್ತ ಅನಂತ. ಆಕೆ ಮತ್ತೊಮ್ಮೆ ಬೆಳುದಿಂಗಳಿಗಿಂತ ಮೋಹಕವಾಗಿ ನಕ್ಕಳು.

ವಧೂವರರ ಜ್ಯೋತಿಷ್ಯ

ಕನ್ನಡದಲ್ಲಿಯೆ ಒಂದು ಹೊಸಪುಸ್ತಕ!
ಈಗಾಗಲೇ ಬೆಳಕಿಗೆ ಬಂದಿದೆ.

ಲೇಖಕರು:— ಜ್ಯೋತಿಷಿ ಎನ್. ಕೆ. ಜೋಗಳೇಕರ

ಮದುವೆಗೆ ಮೊದಲು ವಧೂ-ವರರ ಸಲುವಳಿಯನ್ನು ಕೂಡಿಸಿ ನೋಡುವುದಕ್ಕೆ ಬೇಕಾಗುವ ಜ್ಯೋತಿಷ್ಯದ ಪ್ರತಿಯೊಂದು ಸಂಗತಿಯನ್ನೂ ವಿವರ-ವಿವರವಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ಬೇಕಾದವರು ಕೂಡಲೆ ಬೇಡಿಕೆಗಳನ್ನು ಕಳುಹಿರಿ!

ಕ್ರೌ. ಆ. ೧೦೮ ಪುಟಗಳು. ಬೆಲೆ ೧ ರೂಪಾಯಿ

ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು ಕೊಡಲಾಗುವುದು.

ಜ್ಯೋತಿಷಿ ಎನ್. ಕೆ. ಜೋಗಳೇಕರ
ಶಿವಾಜಿ ರೋಡ್, ಮಂಗಳವಾರಪೇಟೆ, ಧಾರವಾಡ

"ಇನ್ನು ಹೊರಡೋಣವೇ?"—ಎಂದ ಅವಳ ಕೈ ಹಿಡಿಯುತ್ತ. "ಹುಂ" ಎಂದಳು.

ಅನಂತ ವಸ್ತ್ರಕ್ಕೆ ಹತ್ತಿದ ಉಸುಕನ್ನು ಜಾಡಿಸಿ ಕಿಸೆಯಲ್ಲಿಡುವಾಗ, ಕಿಸೆಯಲ್ಲಿಯ ರಟ್ಟಿನ ಪೆಟ್ಟಿಗೆ ಕೈಗೆ ತಾಕಿತು.

ಅವನಿಗರಿಯದಂತೆ ಆತ ನಕ್ಕ; ಅದನ್ನು ಕೈಯಲ್ಲಿ ಹಿಡಿದು ವಾಸಂತಿಗೆ ತೋರಿಸುತ್ತ ಕೇಳಿದ:

"ಇದು?"

ಅವಳು ಗಂಭೀರವಾಗಿ ಸಮುದ್ರವನ್ನು ತೋರಿಸಿದಳು ಅನಂತ ಬೀಸಿ ಅದನ್ನು ಒಗೆದ. ಒಳಕ್ಕೆ ಸೇರುತ್ತಿದ್ದ ತೆರೆಗಳ ಜೊತೆಗೆ, ಅದು ದೂರ ದೂರ ತೇಲುತ್ತಿತ್ತು ಅವರಿಬ್ಬರೂ ಎಂದೂ ಅನುಭವಿಸದ ಸಮಾಧಾನ-ಉಲ್ಲಾಸಗಳಿಂದ ಬೀಚ್ ಮೇಲಿನ ಹಾಟೆಲನ್ನು ಹೊಕ್ಕರು.

ರಾಯರ ಸೊಸೆ

(ಒಂದ ಹಳೆಯ ನಾಟಕದ ನೆನಪು)

ಶ್ರೀ. ಕೆ. ಜಿ. ಹಲಸಗಿ ಬ ಎ., ಬಿ. ಟಿ. ಧಾರವಾಡ

ಮಂಗಳೂರಿನ ಅಂಬಾಪ್ರಾಸಾದಿಕ ಕರ್ನಾಟಕ ಸಂಘದವರು ಆಡುತ್ತಿದ್ದ 'ರಾಯರ ಸೊಸೆ' ಎಂಬ ನಾಟಕ, ಒಂದು ಕಾಲದಲ್ಲಿ, ನಮ್ಮ ನಾಡಿನ ನಾಟಕರಸಿಕರನ್ನು ತುಂಬ ಮೆಚ್ಚಿಸಿತ್ತು; ಆದರೆ ಇಂದಿನ ತಲೆಮಾರಿನವರಿಗೆ ಅದು ಅಪರಿಚಿತ.

ಈ ಶತಮಾನದ ೩ನೆಯ ನಾಲ್ಕನೆಯ ದಶಕಗಳಲ್ಲಿ, ಕನ್ನಡ ರಂಗಭೂಮಿಯ ಮೇಲೆ ಬಂದು, ಕನ್ನಡ ರಸಿಕರ ಕಣ್ಮನಗಳನ್ನು ಕಣಸಿದ 'ರಾಯರ ಸೊಸೆ' ಎಂಬ ಸಾಮಾಜಿಕ ನಾಟಕದ ಸವಿನೆನಪುಗಳನ್ನು ಹೇಳುವವರು, ನಮ್ಮ ನಾಡಿನಲ್ಲಿ ಹಲವು ಜನರಿದ್ದಾರೆ. ಮಂಗಳೂರಿನ 'ಅಂಬಾ ಪ್ರಾಸಾದಿಕ ಕರ್ನಾಟಕ ಸಂಗೀತ ನಾಟಕ ಸಂಘ'ದವರು, ಈ ನಾಟಕವನ್ನು ತುಂಬ ಯಶಸ್ವಿಯಾಗಿ ಪ್ರದರ್ಶಿಸುತ್ತಿದ್ದರು. ಸಂಪೂರ್ಣ ಕರ್ನಾಟಕದ ನಗರ-ಪಟ್ಟಣಗಳಲ್ಲಿ ಅಲ್ಲದೆ, ಸಾಂಗಲಿ ಕೊಲ್ಹಾಪುರ, ಸೊಲ್ಲಾಪುರ ಮೊದಲಾದ ಉತ್ತರದ ಗಡಿಯ ನಗರಗಳಲ್ಲಿಯೂ ಈ ನಾಟಕವು ಪ್ರದರ್ಶಿತವಾಗಿ, ನಾಟಕ ರಸಿಕರ ಮೆಚ್ಚುಗೆಯನ್ನು ಪಡೆಯಿತು. ಈ ನಾಟಕದ ಕೀರ್ತಿಯನ್ನು ಕೇಳಿದ ಜಮಖಂಡಿ, ಕಾಗಲ, ಕೊಲ್ಹಾಪುರ, ಸಾಂಗಲಿ ಮೊದಲಾದ ರಾಜರ ಮನೆತನದವರೂ ಇದನ್ನು ನೋಡಿ, ಸಂತೋಷಪಟ್ಟು ತಮ್ಮ ಮನ್ನಣೆಯ ಉಪಹಾರವನ್ನು ಪಲ್ಲಿಸಿದ್ದಾರೆ.

ನಿಜವಾಗಿ ನೋಡಿದರೆ 'ರಾಯರ ಸೊಸೆ' ನಾಟಕವು, ಕನ್ನಡ ಸಾಹಿತ್ಯಿಕರ ಸ್ವತಂತ್ರ ರಚನೆಯಲ್ಲ. 'ಪಂತಾಂಚೀ ಸೂನ' ಎಂಬ ಹೆಸರಿನ ಮರಾಠೀ ನಾಟಕದ ಸಂಪೂರ್ಣ ಭಾಷಾಂತರ. ಮೂಲ ಮರಾಠೀ ನಾಟಕವನ್ನು ಬರೆದವರು, ಕುರಂದವಾಡದ ನಿವಾಸಿಗಳಾಗಿದ್ದ ದಿವಂಗತ ಗಣೇಶಶಾಸ್ತ್ರಿ ಘಾಟಳ ಎಂಬವರು. ಇವರು ಬರೆದ ಹಲವಾರು ನಾಟಕಗಳು, ಮಹಾರಾಷ್ಟ್ರ ರಂಗಭೂಮಿಯ ಮೇಲೆ ಬಂದು, ಲೋಕಪ್ರಿಯವೆನಿಸಿಕೊಂಡಿವೆ ಇವರ 'ಪಂತಾಂಚೀ ಸೂನ' ಎಂಬ ನಾಟಕವನ್ನು, ಅಂಬಾಪ್ರಾಸಾದಿಕ ನಾಟಕಮಂಡಲಿಯ ಒಡೆಯರಾದ ಶ್ರೀ. ಎಂ. ರಂಗನಾಥ ಭಟ್ಟರ ಅಪೇಕ್ಷೆಯಂತೆ, ಮಂಗಳೂರಿನವರಾದ ಶ್ರೀಮಾನ್ ಗುಂಡೇರಾವ ಎಂಬವರು ಕನ್ನಡಕ್ಕೆ ಭಾಷಾಂತರಿಸಿಕೊಟ್ಟಿದ್ದಾರೆ. ಅವಶ್ಯಕ ನಾಟ್ಯಗೀತಗಳನ್ನೂ ಅವರೇ ಹೆಣೆದಿದ್ದಾರೆ. ನಾಟಕದ ಸನ್ನಿವೇಶಗಳಲ್ಲಿ ಭಾಷಾಂತರಕಾರರು ಯಾವ ಮಾರ್ಪಾಡುಗಳನ್ನೂ ಮಾಡಿಲ್ಲವಾದರೂ, ಕನ್ನಡ ನಾಡಿಗೆ ಯೋಗ್ಯವೆನಿಸುವಂತೆ ಪಾತ್ರಗಳ ಹೆಸರುಗಳನ್ನು ಮಾತ್ರ ಬದಲಿಸಿದ್ದಾರೆ.

ಇಂದು ನಮ್ಮ ಜನತೆ, ಭಾಷಾಂತರಿತ—ಅನುವಾದಿತ—ನಾಟಕಗಳು ರಂಗಭೂಮಿಯಮೇಲೆ ಬಂದರೆ, ಅವುಗಳನ್ನು ಹೆಚ್ಚು ಆಕ್ಷೇಪಣೆಯಿಂದ ಕಾಣಲಾರದು; ಆದರೆ ಉತ್ತರಕರ್ನಾಟಕದಲ್ಲಿ ಹುಟ್ಟಿದ ನಾಟಕಕಂಪನಿಗಳವರು—ಪ್ರಾರಂಭದಲ್ಲಿ, ಮುಖ್ಯವಾಲು ಮೂರು . ಲು—ಮರಾಠೀ ನಾಟಕಗಳ ಭಾಷಾಂತರಗಳನ್ನಾಗಲಿ, ರೂಪಾಂತರಗಳನ್ನಾಗಲಿ—ಇವನ್ನೇ ಆಡುತ್ತಿದ್ದರು; ಜನರೂ ಯಾವುದೇ ಬಗೆಯ ಆನಾದರ-ಉಪೇಕ್ಷೆಗಳ ಭಾವವಿಲ್ಲದೆ, ಪ್ರೀತಿಯಿಂದ ನೋಡುತ್ತಿದ್ದರು. ಇದಕ್ಕೆ ಕಾರಣವೆಂದರೆ, ಹೊಸ ಮಾದರಿಯ ನಾಟಕಗಳ ಪರಿಚಯವಾದುದು—ನಮಗೆ—ಮಹಾರಾಷ್ಟ್ರದ ನಾಟಕಕಂಪನಿಗಳಿಂದಲೇ. ಆ ಬಗೆಯ ನಾಟಕಗಳನ್ನು ಬರೆಯುವ ಸ್ವತಂತ್ರ ಲೇಖಕರು ನಮ್ಮ ಪ್ರದೇಶದಲ್ಲಿ ಆಗ ಇರಲಿಲ್ಲ. ಆದುದರಿಂದ, ಮರಾಠೀ ಭಾಷೆಯನ್ನು ಬಲ್ಲ ಸಾಮಾನ್ಯ ಲೇಖಕರು, ಮೂಲ ಮರಾಠೀ ನಾಟಕಗಳನ್ನು ಕನ್ನಡ ಭಾಷೆಗೆ ಇಳಿಸಿಕೊಡುತ್ತಿದ್ದರು; ಅವುಗಳನ್ನು ನಮ್ಮ ನಾಟಕಕಂಪನಿಗಳವರು ಆಡುತ್ತಿದ್ದರು. ಮರಾಠೀ ಭಾಷೆಯನ್ನರಿಯದ ಕನ್ನಡ ಪ್ರೇಕ್ಷಕರು, ಇಂತಹ ಅನುವಾದಿತ ನಾಟಕಗಳನ್ನೇ ತಮ್ಮವೆಂದು ಕಂಡು ಆನಂದಿಸಿದ್ದರು. ಹೊಂದಬೇಕಾಗಿತ್ತು.

ಒಂದು ಆಶ್ಚರ್ಯದ ಸಂಗತಿಯೆಂದರೆ, ಮರಾಠೀ ರಂಗಭೂಮಿಯ ಮೇಲೆ ಪ್ರದರ್ಶಿತವಾಗುತ್ತಿದ್ದ 'ಪಂತಾಂಚೀ ಸೂನ' ನಾಟಕಕ್ಕಿಂತ ಕನ್ನಡ ರಂಗಭೂಮಿಯ ಮೇಲೆ ಪ್ರದರ್ಶಿತವಾಗುತ್ತಿದ್ದ 'ರಾಯರ ಸೊಸೆ' ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಇದಕ್ಕೆ ಮುಖ್ಯ ಕಾರಣವೆಂದರೆ, ಅಂಬಾಪ್ರಾಸಾದಿಕ ನಾಟಕಸಂಘದಲ್ಲಿದ್ದ—ನಟ ವರ್ಗದ—ಅಭಿನಯ ನೈಪುಣ್ಯ, ಮಿಕ್ಕ ನಾಟಕ ಕಂಪನಿಗಳಿಗಿಂತ ಈ ನಾಟಕಕಂಪನಿಯಲ್ಲಿಯ ನಟರು ಹೆಚ್ಚು ಸುಶಿಕ್ಷಿತರಾಗಿದ್ದರು. ಅಲ್ಲದೆ ಕಂಪನಿಯ ಒಡೆಯರಾದ ಎಂ. ರಂಗನಾಥಭಟ್ಟರಿಗೆ, ಪಾತ್ರೋಚಿತ ನಟರನ್ನು ಆಯ್ದುಕೊಳ್ಳುವಂತಹ ವಿಶಿಷ್ಟ ದೃಷ್ಟಿಯಿತ್ತು. ಅವರು ಸ್ವತಃ ಅತ್ಯುತ್ತಮ ನಟರು. ದಕ್ಷಿಣೋತ್ತರ ಸಂಗೀತಗಳೆರಡರ

ಪರಿಚಯವೂ ಇದ್ದವರು. ಕುಶಲರಾದ ಅಭಿನಯ ಶಿಕ್ಷಕರು. ಸುಸಂಸ್ಕೃತವಾದ ಮನಸ್ಸು-ಹೃದಯಗಳುಳ್ಳವರು. ಶಿಸ್ತಿನ ವ್ಯವಸ್ಥಾಪಕರು. ಎಂತಲೇ ಅವರು ತಮ್ಮ ನಾಟಕಗಳಿಗೆ ಒಪ್ಪುವಂತಹ ಪರದೆ, ಸಲಕರಣೆ ಇತ್ಯಾದಿಗಳನ್ನು ಒದವಿಸಿಕೊಂಡಿದ್ದರು. ಬೆಳಕಿಗಾಗಿ ಸ್ವಂತದ್ದೇ ಆದ ವಿದ್ಯುನ್ನಿರ್ಮಾಣ ಯಂತ್ರವನ್ನು ಇರಿಸಿಕೊಂಡಿದ್ದರು. ಅಚ್ಚುಕಟ್ಟು-ಔಚಿತ್ಯಗಳ ದೃಷ್ಟಿಯಿಂದ ಈ ನಾಟಕ ಸಂಘವು, ಅಂದಿನ ಒಳ್ಳೆಯ ನಾಟಕ ಸಂಘಗಳಲ್ಲಿ ಒಂದೆಂದು ಎಣಿಕೆಗೊಳ್ಳುತ್ತಿತ್ತು.

ಈ ನಾಟಕ ಸಂಘದವರು ಇನ್ನೂ ಕೆಲವು ನಾಟಕಗಳನ್ನು ಪ್ರದರ್ಶಿಸುತ್ತಿದ್ದರು; ಆದರೆ 'ರಾಯರ ಸೊಸೆ' ನಾಟಕವು, ಎಂ. ರಂಗನಾಥಭಟ್ಟರ ಹೆಸರನ್ನೂ ಅವರ ನಾಟಕಸಂಘದ ಹೆಸರನ್ನೂ ಕರ್ನಾಟಕದಲ್ಲೆಲ್ಲ ಮೊಳಗಿಸಿಬಿಟ್ಟಿತು. ಇದಕ್ಕೆ ಕಾರಣವೆಂದರೆ, ಈ ನಾಟಕದಲ್ಲಿಯ ಸಾಮಾಜಿಕ-ಕಥಾವಸ್ತು; ಅದನ್ನು ಅರಳಿಸಿ ತೋರಿಸುವುದಕ್ಕೆ ಮೂಲ ಲೇಖಕರು ಬಳಸಿದ ವಿಡಂಬಕ ರೀತಿ. ಮೂಲ ಲೇಖಕರು 'ಇದೊಂದು ಪ್ರಹಸನ' ಎಂದು ಹೇಳಿರುವಂತಾದರೂ, ಇದು ಪ್ರಹಸನ-ನಾಟಕ—ಇವುಗಳ ಸಮ್ಮಿಶ್ರಣವಾಗಿದೆ. ಈ ನಾಟಕವನ್ನು ನೋಡಿದವರು ಹೊಟೆ ಹಿಡಿಸಲಾರದಷ್ಟು ನಗಲೂಬಹುದು; ಬೇರೆ ಭಾವಗಳ ಅನುಭವದಿಂದ ಜೀವನದ ಆದರ್ಶವನ್ನೂ ಕಂಡುಕೊಳ್ಳಬಹುದು. ಇದರಲ್ಲಿಯ ನಾಯಕ ದಿವಾಕರ, ನಾಯಿಕೆ. ಇಂದಿರೆ, ಉಪನಾಯಕ ರಮೇಶ, ಉಪನಾಯಿಕೆ ಸರೋಜಿನಿ, ಆಳು ಹನುಮಂತ, ಇವರೆಲ್ಲ ಗಂಭೀರ ಪಾತ್ರಗಳೆ. ನಾಯಕನ ತಂದೆ ಶ್ರೀಪತಿರಾಯ, ತಾಯಿ ಭಾಗಮ್ಮ, ಅವರ ಮನೆಯ ಅಡಿಗೆಯ ಗುಂಡಮ್ಮ, ಗುಂಡಮ್ಮನ ಮಗ ಝಂಪೂ ಇವರೆಲ್ಲ ವಿಡಂಬಕ ಪಾತ್ರಗಳು. ಇಂದಿರೆಯ ತಂದೆ ದಾಮೋದರರಾಯರು—ದಾರಿದ್ರ್ಯದ ಮೂರ್ತಿಕ—ನಗೆಯ ಮುಖವನ್ನೇ ಅರಿಯದ ಒಂದು ದುರ್ದೈವಿ ವ್ಯಕ್ತಿ. ಹೀಗೆಲ್ಲ ವಿವಿಧ ಸ್ವಭಾವಗಳಿಂದ ಕೂಡಿರುವ ಈ ನಾಟಕವನ್ನು 'ಪ್ರಹಸನ' ಎಂದು ಹೇಳಲು ಬರುವಂತಿಲ್ಲ.

ಈ ನಾಟಕದಲ್ಲಿಯ ಕಥೆಯು ಬೆಳೆವಣಿಗೆ ಹೀಗಿದೆ: ಶ್ರೀಮಂತನಿದ್ದರೂ ಶ್ರೀಪತಿರಾಯ ತುಂಬ ದ್ರವ್ಯಲೋಭಿ—ಕವಡಿಚುಂಬಕ—ಹಣದ ಮುಂದೆ ಈತನಿಗೆ ಯಾವುದೂ ದೊಡ್ಡದಲ್ಲ. ಈತನ ಮಗನೇ ದಿವಾಕರ. ಇದೇ ಊರಲ್ಲಿಯ ದಾಮೋದರರಾಯನ ಮಗಳು ಇಂದಿರೆಯೊಂದಿಗೆ ಈತನ ಲಗ್ನವಾಗಿರುವುದು ವಧುವು ಗಂಡನ ಮನೆಗೆ ಬಂದಿರುವಳು. ಮದುವೆಯ ಕಾಲದಲ್ಲಿ ವಧುವಿನ ತಂದೆ ದಾಮೋದರರಾಯನಿಂದ ವರದಕ್ಷಿಣೆಯ ಹಣ ಪೂರ್ಣ ಸಂದಾಯವಾಗಿರುವುದಿಲ್ಲ. ಕೊಡಬೇಕಾದ ಹಣಕ್ಕಾಗಿ ಅವನು ಪ್ರಾಮಿಜರಿ ನೋಟನ್ನು ಬರೆದುಕೊಟ್ಟಿರುವನು. ಇದ್ದ ಒಬ್ಬಳೇ ಮಗಳ ಮದುವೆಗಾಗಿ ತನ್ನ ಎಲ್ಲ ಆಸ್ತಿಯನ್ನೂ ಅವನು ಕಳೆದುಕೊಂಡಿರುತ್ತಾನೆ. ದಿವಾಕರ-ಇಂದಿರೆಯಲ್ಲಿ ಅನನ್ಯಾದೃಶವಾದ ಪ್ರೇಮ. ಮದುವೆಯಾಗಿ ವರ್ಷ ಕಳೆದ ಮೇಲೆ ಒಂದು ದಿನ, ಶ್ರೀಪತಿರಾಯ ದಾಮೋದರರಾಯನನ್ನು ಹಣಕ್ಕಾಗಿ ಪೀಡಿಸುತ್ತಾನೆ. ಆತ ಇಲ್ಲವೆಂದು ಹೇಳಲು ಕ್ರೋಧಪರವಶನಾಗಿ ಮರಳಿಬಂದ ಶ್ರೀಪತಿರಾಯ, ಹೆಂಡತಿಯೊಂದಿಗೆ ಆಲೋಚನೆಮಾಡಿ, ಅದೇ ದಿನ — ರಾತ್ರಿಯೆಂದರೂ ಕೇಳದೆ— ಎಲ್ಲವನ್ನೂ ಕಿತ್ತುಕೊಂಡು, ಹಳೆಯ ಹರಕು ಸೀರೆಯನ್ನು ಉಡಲು, ಕೊಟ್ಟು, ಸೊಸೆಯನ್ನು ಅಳಿನೊಂದಿಗೆ ತವರುಮನೆಗೆ ಅಟ್ಟುವನು.

ಗುಂಡಮ್ಮ ಅಡಿಗೆಯವಳಾದರೂ ಅವಳಿಗೊಂದು ಮಹತ್ತ್ವಾಕಾಂಕ್ಷೆ. ದ್ರವ್ಯಲೋಭಿಯಾದ ಶ್ರೀಪತಿರಾಯನಿಗೆ ಮಗನ ವಿಷಯದಲ್ಲಿಯೂ ವಿಪರೀತ ಭಾವನೆಯನ್ನು ಹುಟ್ಟಿಸಿ, ಅತನನ್ನೂ ಹೊರಗೆ ಹಾಕಿಸಬೇಕು—ರಾಯರಿಗೆ ತನ್ನ ಮಗ ಝಂಪುವನ್ನು ದತ್ತಕ ಕೊಡಬೇಕು—ಎಂದು. ಇದಕ್ಕಾಗಿ ಅವಳು ಅನೇಕ ಕುಟಿಲ ತಂತ್ರಗಳನ್ನು ರಚಿಸುವಳು. ದಿವಾಕರನು ವೇಶ್ಯಾಗೃಹಗಾಮಿ, ಮದ್ಯಪಾಯಿ—ಎಂಬುದನ್ನು ಸಿದ್ಧಪಡಿಸಲು ಹೂಡಿದ ಅವಳ ತಂತ್ರಗಳು ಚಾಣಕ್ಯನನ್ನು ಮೀರಿಸುವಂತಹ ಕುತೂಹಲಕಾರಿಗಳು. ಆದರೆ ಮಗ ಝಂಪುವೆಂದರೆ ಮೂರ್ಖಶಿರೋಮಣಿ—ಮೆದುಳೇ ಇಲ್ಲದ ಮೊದ್ದುಜೀವ. ಸಾಮಾನ್ಯ ಪ್ರೇಕ್ಷಕರನ್ನು ನಗಿಸುವುದಕ್ಕೆಂದೇ ಈ ಪಾತ್ರದ ಪೃಷ್ಟಿಯಾದಂತಿದೆ.

ಡಾ. ರಮೇಶ, ಡಾ. ಸರೋಜಿನಿ ಇವರು ಆದರ್ಶ ದಂಪತಿಗಳು. ಮಾನವತೆಯ ಪ್ರತಿಮೆಗಳು. ಇಬ್ಬರೂ ಸಮಾಜ ಸುಧಾರಣೆಗಾಗಿ ಕಾರ್ಯಮಾಡುವವರು. ದಿವಾಕರ ರಮೇಶ ಇವರಲ್ಲಿ ತುಂಬ ಗೆಳೆತನ ದಿವಾಕರ-ಇಂದಿರೆಯರ ನಿರತಿಶಯವಾದ ಪ್ರೇಮವನ್ನು ರಮೇಶ ಸರೋಜಿನಿಯರು ಚೆನ್ನಾಗಿ ಬಲ್ಲರು. ಆದುದರಿಂದ ಅಗತಿಕರಾದ ಇಂದಿರೆ ಮತ್ತು ಆಕೆಯ ತಂದೆ ಇವರನ್ನು ತನ್ನ ಮನೆಯಲ್ಲಿಯೆ ಇರಿಸಿಕೊಳ್ಳುವರು; ಅಲ್ಲದೆ ದಿವಾಕರ ಮತ್ತು ಇಂದಿರೆಯರು ಆಪ್ತರಾಗಿ ಸಂಧಿಸುವುದಕ್ಕೆ ಅನುಕೂಲ ಕಲ್ಪಿಸಿಕೊಡುವರು.

ಡಾ. ರಮೇಶ-ಸರೋಜಿನಿಯರು, ದಿವಾಕರನಿಗೆ ಕೆಲವು ಹಂಚಿಕೆಗಳನ್ನು ಹೇಳಿ, ಶ್ರೀಪತಿರಾಯನನ್ನು ಬಲೆಯಲ್ಲಿ ಹಿಡಿದು, ಸೊಸೆಯನ್ನು ಮತ್ತೆ ಮನೆಗೆ ಕರೆಯಿಸಿಕೊಳ್ಳುವಂತೆ ಮಾಡಲು, ಅನೇಕ ಚಮತ್ಕಾರಗಳನ್ನು ಹೂಡುವ. ಕೊನೆಗೆ ನಾಲ್ಕು ತಿಂಗಳು ಊರುಬಿಟ್ಟುಹೋಗಿ, ಸಾಧುವಿನಂತೆ ವೇಷ ಬದಲಿಸಿಕೊಂಡು ಬಂದು, ಭವಿಷ್ಯ ಕೇಳಲು ಬಂದ ಶ್ರೀಪತಿರಾಯ, ಭಾಗಮ್ಮ ಇವರಿಗೆ—ಭೀಕರವೆನಿಸುವಂತೆ ಭವಿಷ್ಯಗಳನ್ನು ಹೇಳುವ ದುಡ್ಡೆಲ್ಲ ಹೋಗುವುದೆಂಬ ಭವಿಷ್ಯದಿಂದ ಹೆದರಿದ ರಾಯರು, ಸೊಸೆಯನ್ನು ಕರೆದುಕೊಂಡು ಬರಲು ತಾವೇ ಅವಳಿದ್ದಲ್ಲಿ ಹೋಗುವರು. ಅಷ್ಟರಲ್ಲಿಯೆ ಇಂದಿರೆ ಒಂದು ಮಗುವಿನ ತಾಯಿಯಾಗಿರುವಳು. ಶ್ರೀಪತಿರಾಯ ಭಾಗಮ್ಮ ಇವರಿಗೆ ನಿಜಸ್ಥಿತಿಯೆಲ್ಲ ತಿಳಿಯುವುದು. ಪಶ್ಚಾತ್ತಾಪಪಟ್ಟು ಅವರು ಸೊಸೆಯನ್ನು ಮನೆಗೆ ಕರೆದು ತರುವುದರಲ್ಲಿರುವರು.

ಅಡಿಗೆಯ ಗುಂಡಮ್ಮ, ರಾಯರು ಅವರ ಹೆಂಡತಿ—ಇಬ್ಬರೂ ಮನೆಯಲ್ಲಿಲ್ಲದಾಗ ಅವರ ಮನೆಯಲ್ಲಿ ಕಳವುಮಾಡುವಳು. ಅವಳ ದೌರ್ಜನ್ಯದ ಮೇಲೆ ಯಾವಾಗಲೂ ಕಣ್ಣು ಇಟ್ಟಿರುತ್ತಿದ್ದ ಆಳು ಹನುಮಂತ, ಅವಳನ್ನು ಹಿಡಿದು ಪೋಲೀಸರಿಗೆ ಒಪ್ಪಿಸುವನು. ದಿವಾಕರ, ಇಂದಿರೆ, ಶ್ರೀಪತಿರಾಯ, ಭಾಗಮ್ಮ ಇವರೆಲ್ಲರ ಸಂತೋಷದಲ್ಲಿ ನಾಟಕವು ಕೊನೆಗೊಳ್ಳುವುದು. ನಾಟಕದುದ್ದಕ್ಕೂ ಪ್ರೇಕ್ಷಕರ

ಮನಸ್ಸನ್ನು ಹಿಡಿದಿಡುವಂತಹ ಕುತೂಹಲಕಾರಕ—ಹಾಸ್ಯೋತ್ಪಾದಕ—ಸನ್ನಿವೇಶಗಳಿವೆ.

ನಾಟಕದ ಆಕರ್ಷಕಗುಣವನ್ನು ಚೆನ್ನಾಗಿ ಬೆಳೆಸಿಕೊಂಡು ಹೋಗುವಂತಹ ನಟವರ್ಗವಿದ್ದಿತು—ಈ ನಾಟಕಸಂಘದಲ್ಲಿ. ನಾಯಕ ವಿವಾಕರನ ಪಾತ್ರವನ್ನು ನಮ್ಮ ನಾಡಿನ ಒಬ್ಬ ಸಂಗೀತ ಕೋವಿದರಾದ ಶ್ರೀ ವೆಂಕಟರಾವ್ ರಾಮದುರ್ಗ ಎಂಬವರು ಮಾಡುತ್ತಿದ್ದರು. ಇವರ ಸಂಗೀತ, ಅಭಿನಯ ಎರಡೂ ಅಂದಿನ ಪ್ರೇಕ್ಷಕರಿಗೆ ತಂಬ ರುಚಿಸುತ್ತಿದ್ದುವು. ನಾಯಕಿ ಇಂದಿರೆಯ ಪಾತ್ರವನ್ನು ಶ್ರೀ. ಪಿ ಕಾಳಿಂಗರಾಯರು ಮಾಡುತ್ತಿದ್ದರು. ಇವರ ಸುಂದರವಾದ ಸ್ತ್ರೀವೇಷ, ಸಹಜವಾದ ಅಭಿನಯ, ಮಧುರಸಂಗೀತ ಇವು ಪ್ರೇಕ್ಷಕರನ್ನು ಮುಗ್ಧರನ್ನಾಗಿ ಮಾಡುತ್ತಿದ್ದುವು. ಡಾ. ರವೀಶನ ಪಾತ್ರವನ್ನು ಸ್ವತಃ ಶ್ರೀ. ಎಂ. ರಂಗನಾಥಭಟ್ಟರು ಅಭಿನಯಿಸುತ್ತಿದ್ದರು. ಡಾ. ಸರೋಜಿನಿಯ ಪಾತ್ರವನ್ನು ಶ್ರೀ. ಬಸರೂರು ರಾಮಕೃಷ್ಣ ಎಂಬ ತರುಣನಟನು ವಹಿಸುತ್ತಿದ್ದ. ಈತನು ಸುಶಿಕ್ಷಿತ ಮಹಿಳೆಯ ವೇಷತೊಟ್ಟು ರಂಗದ ಮೇಲೆ ಬಂದನೆಂದರೆ, 'ಇವಳು ನಟಿಯೇ?' ಎಂದು ಎಲ್ಲರೂ ಮಂಕುಬಡುತ್ತಿದ್ದರು ಅಂತಹ ಸುಂದರ ರೂಪ; ಅಷ್ಟೊಂದು ಸ್ವಾಭಾವಿಕವಾದ ಅಭಿನಯ.

ಶ್ರೀ. ಬಸರೂರು ಮಹಾಬಲರಾಯ ಎಂಬ ತರುಣ ಶ್ರೀಪತಿರಾಯನಾಗುತ್ತಿದ್ದ. ಈ ವಿಡಂಬಕ ಪಾತ್ರವನ್ನು ಅತನಷ್ಟು ಯಶಸ್ವಿಯಾಗಿ ಅಭಿನಯಿಸುವವರು ಇನ್ನೊಬ್ಬರು ಇದ್ದರೋ ಇಲ್ಲವೋ ಅಗಿನ ಕಾಲದಲ್ಲಿ. ಅಡಿಗೆಯ ಗುಂಡಮ್ಮನ ಪಾತ್ರವನ್ನು ಸಿದ್ಧರಾಜ ಅರಸು ಎಂಬವನು ವಹಿಸುತ್ತಿದ್ದ. ಆ ವಿಧವೆಯ ಖಲಸ್ವರೂಪವನ್ನು ತನ್ನ ನಟನಾನೈಪುಣ್ಯದಿಂದ ಚಿತ್ರಿಸಿ ತೋರಿಸುವುದರಲ್ಲಿ ಈತನು ಎತ್ತಿದ ಕೈ ಪ್ರೇಕ್ಷಕರೆಲ್ಲರೂ—ರಂಗದ ಮೇಲೆ ಈ ಪಾತ್ರ ಕೊನೆಯವರೆಗೂ ಇರಬೇಕೆಂದು ಅಪೇಕ್ಷಿಸುವಂತಹ ವಿಕಟ ಅಭಿನಯ ಗುಂಡಮ್ಮನದು. ಝುಂಪುವಿನ ಪಾತ್ರದ ಹುಚ್ಚಾಟವಂತೂ ಈ ನಾಟಕದ ಒಂದು ಜೀವಾಳ. ಈ ಪಾತ್ರವನ್ನು ಬೆಂಗಳೂರಿನ ಶ್ರೀನಿವಾಸರಾವ್ ಎಂಬ ನಟನು ತುಂಬ ಚಾತುರ್ಯದಿಂದ ಅಭಿನಯಿಸುತ್ತಿದ್ದನು ವಿಟರನ್ನು ಕಾಣದೆ ದೈನ್ಯಕ್ಕೆ ಗುರಿಯಾದ 'ಚಂದ್ರಾವತಿ' ಎಂಬ ಹೆಸರಿನ ವೇಶ್ಯೆಯೊಬ್ಬಳು ಈ ನಾಟಕದಲ್ಲಿ ಬರುವಳು. ಈ ಪಾತ್ರವನ್ನು ಶ್ರೀಮತಿ ಸೊನೂಬಾಯಿ ದೊಡ್ಡಮನಿ ಎಂಬವರು ವಹಿಸುತ್ತಿದ್ದರು.

ನಾಟಕವು ಸಾಮಾಜಿಕವಾದರೂ, ನಾಟಕದ ಭಾಷೆ ಬಳಕೆಯು ಗಿರಲಿಲ್ಲ. ಮಂಗಳೂರಿನವರು ಬರೆದವರು. ನಟರಲ್ಲಿಯು ಬಹು ಜನರು ಮಂಗಳೂರು ಜಿಲ್ಲೆಯವರು. ಅದುದರಿಂದ ಉತ್ತರ. ನಾಟಕದ ಜನರಿಗೆ ಪಾತ್ರಗಳ ಸಂಭಾಷಣೆ ಸಹಜವೆನಿಸುತ್ತಿರಲಿಲ್ಲ; ಹೆಚ್ಚು ನಾಟಕೀಯ ರೀತಿಯದೆನಿಸುತ್ತಿತ್ತು. ಆದರೆ ಪಾತ್ರಧಾರಿಗಳ ಅಭಿನಯ ಕೌಶಲ್ಯ ಅದರ ಕೃತ್ರಿಮತೆಯನ್ನು ಮರೆಯಿಸಿಬಿಡುತ್ತಿತ್ತು. ಗೀತಗಳೋ, ಅವು ಕೇವಲ ಮಾತಿನ ಮಾಲೆಗಳು. ಹಾಡುವವರು ಚೆನ್ನಾಗಿ ಹಾಡುತ್ತಿದ್ದರೆಂದು, ಅವರ ಸ್ವರ-ಲಯಗಳಲ್ಲಿ ಅವು ಗೀತಗಳಾಗಿ ರೂಪುಗೊಳ್ಳುತ್ತಿದ್ದುವಷ್ಟೇ! ಆದರೂ ಶ್ರೀ. ವೆಂಕಟರಾವ್ ರಾಮದುರ್ಗ ಅವರು ಹೇಳುತ್ತಿದ್ದ 'ಧನ್ಯಧನ್ಯ ಮಮ ಭಾಗ್ಯದೇವಿ' ಎಂಬ ಬಿಹಾಗ್‌ರಾಗದಲ್ಲಿಯು ಗೀತವೂ, 'ಪ್ರೇಮ ಸುಧಾಹೃದಯೇ ಸುಶೀಲೇ' ಎಂಬ ಮಾಂಡರಾಗದಲ್ಲಿಯು ಗೀತವೂ, 'ಶೋಕಿಪುದೇಕೆ ಕಾಂತೆ ಮನಶಾಂತೆ' ಎಂಬ ಗೀತವೂ ಅನೇಕ ಜನರ ನಾಲಗೆ ಕವಿಗಳಲ್ಲಿ ಆಡುತ್ತಿದ್ದುವು. ಅದರಂತೆಯೆ ಪಿ. ಕಾಳಿಂಗರಾಯರು ಇಂದಿರೆಯಾಗಿ ಹಾಡುತ್ತಿದ್ದ 'ವಿವಾಹವೇಕೇ ವಿಚಾರವೇಕೇ' ಎಂಬ ಪಹಾಡೀರಾಗದಲ್ಲಿಯು ಹಾಡೂ, 'ಭೂಷಣ ಸಂಸಾರಾ—ಸತಿಗೆ' ಎಂಬ ಭೀಮಪಲಾಸರಾಗದಲ್ಲಿಯು ಹಾಡೂ ಮಧುರವಾಗಿದ್ದು, ನಾಟಕರಸಿಕರ ಕವಿಗಳಲ್ಲಿ ಅನೇಕ ದಿನಗಳವರೆಗೂ ಗುಂಯ್‌ಗುಡುತ್ತಿದ್ದುವು ನಾಟಕದಲ್ಲಿಯ ಹಾಡುಗಳೆಲ್ಲವೂ ಬೇರೆ ಬೇರೆ ಮರಾಠೀ ನಾಟಕಗಳಲ್ಲಿಯ ಹಾಡುಗಳ ಧಾಟಿಯ ಅನುಕರಣಗಳೇ ಆಗಿದ್ದುವಲ್ಲದೆ, ಹೊಸತೆನಿಸುವಂತಹ ಯಾವ ಧಾಟಿಗಳೂ ಇರಲಿಲ್ಲ.

ಈ ನಾಟಕದ ವೈಶಿಷ್ಟ್ಯವೊಂದನ್ನು ಹೇಳಬೇಕೆಂದರೆ, ಅಂಬಾ ವ್ಯಾಸಾದಿಕ ನಾಟಕಸಂಘವು ಹುಬ್ಬಳ್ಳಿ ನಗರಕ್ಕೆ ೨-೩ ಸಲ ಬಂದಾಗಲೂ—ಒಂದೊಂದು ಸಲಕ್ಕೂ, ನೂರಕ್ಕಿಂತ ಹೆಚ್ಚು ಬಾರಿ ಈ ನಾಟಕವನ್ನು ಪ್ರದರ್ಶಿಸಿರುವುದು. ಇದರಂತೆಯೇ ಹೋದಕಡೆಗಳಲ್ಲೆಲ್ಲ 'ರಾಯರ ಸೊಸೆ' ನಾಟಕಕ್ಕೇ ಹೆಚ್ಚು ಸಂಖ್ಯೆಯ ವಿಜಯ ಸ್ಥಾನ. ಹುಬ್ಬಳ್ಳಿಯಲ್ಲಿದ್ದಾಗ ಈ ನಾಟಕಸಂಘ, ಮೂಲ ಮರಾಠೀ ನಾಟಕಕಾರರನ್ನು ಬರಮಾಡಿಸಿಕೊಂಡು ಅವರಿಗೆ ಕೃತಜ್ಞತೆಯಿಂದ ಧನ ಮಾನಗಳೆರಡನ್ನೂ ಸಮರ್ಪಿಸಿತು.

'ರಾಯರ ಸೊಸೆ' ನಾಟಕವನ್ನು ನೋಡಿದ ಹಿರಿಯರು, ಇಂದಿನವರೆದುರು ಅದರ ಗುಣ ವರ್ಣನೆಯನ್ನು ಮಾಡಿಯೇ ಮಾಡುತ್ತಾರೆ. ಅವರ ಮಾತುಗಳನ್ನು ಕೇಳಿದ ಹೊಸಬರಿಗೆ 'ಅಯ್ಯೋ, ಅದನ್ನು ನೋಡುವ ಭಾಗ್ಯ ನಮಗಿಲ್ಲವಲ್ಲಾ!' ಎನಿಸಿದರೆ ಅದೇನೂ ಅಸ್ವಾಭಾವಿಕವಲ್ಲ. ನೋಡುವ ಭಾಗ್ಯವಿಲ್ಲ—ಇಷ್ಟೇ ಏಕೆ? ಅದನ್ನು ಓದುವ ಭಾಗ್ಯವೂ ಇಲ್ಲ; ಏಕೆಂದರೆ, 'ರಾಯರ ಸೊಸೆ' ನಾಟಕವು ಅಚ್ಚಾಗಿಯೇ ಇಲ್ಲ. ಆದುದರಿಂದ ನೋಡಿದವರು ಅದನ್ನು ಮರೆಯಲಾರದ ನಾಟಕವೆಂದು ಹೇಳಿದರೂ, ನೋಡದವರಿಗೆ ಅದು ಮರೆಯಾದ ನಾಟಕವೇ ಆಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಜೋಗುಳ

(ಜಾನಪದ ಗೀತೆಗಳು)

ಶ್ರೀ. ಡಿ. ಮಹಾಲಿಂಗಭಟ್ಟ, 'ವಿದ್ವಾನ್' ಎಡನಾಡು (ದ.ಕ.)

ತೊಟ್ಟಿಲು ನಾಳಂಚು ಅಕ್ಕಿ-ಬತ್ತವ ತುಂಬಿ
ಮುತ್ತೈದೆಯರ್ಹೋದೊ ಭಜನೆಗೆ,—ಹೋದಂದು
ಮುತ್ತಿನಂಥ ಗರ್ಭ ಹೊರೆದಾವು ! ೧

ಹಾಲು ಕುಡಿಯಲೆ ತಟ್ಟಿ ನೀರು ಮೊಗೆವಲೆ ಗಿಂಡಿ
ಹೂಗು ಕೊಯ್ಯಲಿಕೆ ಹರಿವಾಣ—ತೆಕ್ಕೊಂಡು
ನಾರಿ ಅಂಗಳಕೆ ಇಳುದಾಳು. ೨

ಹಾಲ ದಾನವ ಮಾಡಿ ಬಾಲನ ಪಡೆದಳೆ !
ಬಾ ಬೆಳ್ಳಿ ಮುಂಜಿ ಉಡೆಯೋನೆ !—ಬಪ್ಪಾಗ
ಹಾಲಾರಿ ತುಪ್ಪ ಹನಃಧಾವು ! ೩

ಎಲ್ಲಿಯಾದರು ಒಂದು ನೆಲ್ಲಿ ಹಣ್ಣಾದಂತೆ—
ಇಲ್ಲದ್ದ ವಂಗೊಂದು ಶಿಶು ಹುಟ್ಟಿ,—ಬೆಳೆದರೆ
ಎಲ್ಲೊರಿಂಗಲ್ಲಿ ಅತಿಪ್ರೀತಿ ! ೪

ಹಲಗೆಯ ತೊಟ್ಲಿಂಗೆ ಹಲವು ಮಡಿಯನೆ ಹಾಸಿ
ಹೊಳೆ ನೀರು ಮಿಂದು ಸುಖನಿದ್ರೆ—ಬಾಲನ
ಎರಗಿ ನೋಡಿದಳೆ ಶ್ರೀದೇವಿ. ೫

ತೊಟ್ಟಿಲ ಬಾಲಂಗೆ ದೃಷ್ಟಿ ತಾಗಿತು ಎಂದು
ಉಪ್ಪು ಸಾಸಮೆಯ ಸುಳುದಿಕ್ಕಿ—ನಂದಗೋಲ
ತೊಟ್ಟಿಲೇರಿಸಿದೊ ಕುವರನ ! ೬

ದೇವಕಿ ಹೆತ್ತಿದ್ದೊ, ಗೋಪಿತಾ ಸಲಹಿದ್ದೊ
ಮಾಯದಲಿ ಕೃಷ್ಣ ಬೆಳೆದಿದ್ದ,—ನಂದಗೋಪಿ
ತೊಟ್ಟಿಲೇರಿಸಿದೊ ಕುವರನ ! ೭

ನಮ್ಮ ಈ ಬಾಲನ ಎನೆಂದು ದನಿಗೊಳ್ವೆ ?
ಹೊನ್ನೆಂಬೊ, ಹೊನ್ನ ಕದಿರೆಂಬೊ,—ಬಾಲ ನೀನು
ಹೊನ್ನ ತೊಟ್ಟಿಲ್ಲಿ ಒರಗೆಂದೊ ! ೮

ಮಕ್ಕಳ ತಂಡದಲಿ ಇಕೊ ನಮ್ಮ ಕಿರುಬಾಲ
ಮಕ್ಕಳೇ ! ಇವನ ಹಳಿಯುದೆ;—ಇದ್ದಶಿ
ಸಕ್ಕರೆ ಬೆರುಸಿ ತಿನಲೀವೆ ! ೯

ಹಾಲಿಲ್ಲದುಣ್ಣನು ಹಾಸಿಗಿಲ್ಲದೊರಗನು,
ಹಾಸಿಗ್ಹಚ್ಚಡವ ತರುಸುಗು—ನಿನ್ನ ಮಾವ
ಹಿಂಡೆಮ್ಮೆ ತಕ್ಕು ಕರೆವಲೆ— ೧೦

ಮುದ್ದು ನೀನಳದಿರು, ಮುಗುಳು ಬಾಯ್ ಬಿಡದಿರು
ಮುತ್ತ ನಿನ್ನಜ್ಜ ತರಹೋದ—ಅಂದಿಂಗೆ
ಮುಚ್ಚಾಲಾಡುವೆಯೊ ಹೊಡಿಯಾಟ. ೧೧

ಗೋವಿಂದರಾಟವು, ತೆಂಗಿನ ತೋಟವು.
ಕಂಗಿನ ಮರವು, ಸಮುದ್ರವು—ಕರೆಯಲ್ಲಿ
ಶಂಭುಮಾಬಲರ ಆರಮನೆ ! ೧೨

ಅಂಗಡಿ ಬೀದಿಯಲಿ ಕಂಡಿರೋ ನಮ್ಮಣ್ಣನ
ಮಂಡಟ್ಟೆ ಬಣ್ಣ ಹೊದೆದಿಕ್ಕು—ನಮ್ಮಣ್ಣನ
ಕಂಡೂವರಿತ್ತೆ ಬರಹೇಳಿ ! ೧೩

ಅಂದುಗು ಕುಂದುಗು ಕಂದನ ಹಡೆದಾಳೆ,
ಒಂದರ್ಯೂ ಹೆರದ ಬರಿಬಂಜೆ,—ಆದರೆ
ಕಂಬದಂತಿಕ್ಕು ಮನೆಯಲ್ಲಿ ೧೪

ಶಿಶುಮಕ್ಕಳಾಡದೆ ಕಸವಿಲ್ಲೆ ಮನೆಯಲ್ಲಿ
ಶಿಶುಮುದ್ದು ಬಾಲ ಹರಿದಾಡಿ,—ಬಪ್ಪಾಗ
ಎಸಳು ಕೇದಗೆಯ ಕಸವಕ್ಕು ! ೧೫

ಮಕ್ಕಳಿಲ್ಲದ ಮನೆ ಹೊಕ್ಕರೆ ಬಿನ್ನಂಗೆ
ಬರಿದ ಸೇಡ್ಯಳಿಯ, ಮಡಿ ಮಾಸ—ದೇವರೆ !
ಮಕ್ಕಳ ಕೊಡಿರೊ ಮನೆತುಂಬ ! ೧೬

ವಿಶೇಷ ಸಂಗತಿ :— ಉತ್ತರಕರ್ನಾಟಕದಲ್ಲಿ ರೂಢವಾಗಿರುವ ಜೋಗುಳಹಾಡುಗಳಲ್ಲಿ ಹುದುಗಿರುವ ಅರ್ಥ-ಭಾವಗಳಿಂದ ಇವು ಭಿನ್ನವಾಗಿಲ್ಲವಾದರೂ, ಪ್ರಾದೇಶಿಕ ಭಾಷಾವೈಶಿಷ್ಟ್ಯವನ್ನೂ ಸಂಪ್ರದಾಯ ವೈಶಿಷ್ಟ್ಯವನ್ನೂ ಈ ಹಾಡುಗಳಲ್ಲಿ ಕಾಣಬಹುದು. ಆದರಲ್ಲಿಯೂ ದಕ್ಷಿಣೋತ್ತರ ಕನ್ನಡಜಿಲ್ಲೆಗಳಲ್ಲಿ ನಾಸಿಸುವ ಹವ್ಯಕ ಬ್ರಾಹ್ಮಣರ ಇಂದಿನ ಆಡುನುಡಿಯಲ್ಲಿ, ಪಂಪನ ಕಾಲದ ದೇಸಿಸಂಪ್ರದಾಯವನ್ನು ಗುರುತಿಸಬಹುದು. ಭಾಷೆಯ ಅಭ್ಯಾಸಿಗಳಿಗೆ ಈ ಹಾಡುಗಳು ಕುತೂಹಲವನ್ನು ಉಂಟುಮಾಡುವಂತಹವಾಗಿರುವುವು.

—ಸಂ. ಜ. ಧಾ.

ಕನ್ನಡದಲ್ಲಿ ಸಣ್ಣಕತೆಗಳು

ಪ್ರೊ. ಸಿ. ಎಸ್. ಕುಲಕರ್ಣಿ ಎಮ್. ಎ ಜನತಾಕಾಲೇಜ, ಧಾರವಾಡ

ಲೇಖಾಂಕ ೨

ಬೆಳೆವಣಿಗೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

'ನವ್ಯತೆ' ಯ ಕಾಲಃ— 'ಇಂದು ಕನ್ನಡ ಸಾಹಿತ್ಯದಲ್ಲಿ ನವ್ಯತೆಯ ಕಾಲ ಪ್ರಾರಂಭವಾಗಿದೆ. ಈ ನವ್ಯತೆ ತೀರ ನವೀನವಾದದ್ದೇನೂ ಅಲ್ಲ; ಹಳೆಯದನ್ನೇ ಹೊಸರೀತಿಯಲ್ಲಿ ಹೇಳುವುದೇ ನವ್ಯತೆ — ಎಂದು ಹೇಳಬಹುದು. ಯಾಕೆಂದರೆ ಈ ಜಗತ್ತಿನಲ್ಲಿ ಯಾವುದೂ ಸಂಪೂರ್ಣವಾಗಿ ಹೊಸತಾದುದು ಇಲ್ಲವೇ ಇಲ್ಲ. ಈ ಮಾತಿಗೆ ಸಾಹಿತ್ಯವು ಅಪವಾದವಾಗಿಲ್ಲ. ಆದುದರಿಂದ ಈಗ ನಮ್ಮ ಸಾಹಿತ್ಯದಲ್ಲಿ ಕಾಣಬರುತ್ತಿರುವ ನವ್ಯತೆ ಪ್ರಾಚೀನತೆಯ ಹಂದರದ ಮೇಲೆ ಹಬ್ಬಿದ ಒಂದು ಹೊಸ ಲತೆ.

ಕನ್ನಡ ಸಾಹಿತ್ಯದಲ್ಲಿ ನವ್ಯತೆ ಮೊದಲು ಕಾಣಿಸಿಕೊಂಡದ್ದು ಕಾವ್ಯದಲ್ಲಿ. ಪ್ರೊ. ವಿ. ಕೃ. ಗೋಕಾಕ, ಶ್ರೀ. ಗೋಪಾಲ ಕೃಷ್ಣ ಅಡಿಗ ಮೊದಲಾದ ಮುಖನೀಯರು ಇಂಗ್ಲಿಷ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿ ನವ್ಯತೆಯನ್ನು ಕನ್ನಡ ಸಾಹಿತ್ಯದಲ್ಲಿ ತಂದರು. ಈ ನವ್ಯತೆ ಎಂದರೇನು? ಅದು ಹೇಗಿರಬೇಕು? ಅದಕ್ಕೆ ಇರುವ ಲಕ್ಷಣಗಳೇನು? ಇವೇ ಮೊದಲಾದ ವಿಷಯಗಳ ಬಗ್ಗೆ ಇನ್ನೂ ವಾದವಿವಾದಗಳು ಭರದಿಂದ ನಡೆದಿವೆ. ನಡೆಯುತ್ತಲಿವೆ.

ಈ ನವ್ಯತೆ ಈಗಾಗಲೇ ಹಲವು ಸಾಹಿತ್ಯಾಭ್ಯಾಸಿಗಳಲ್ಲಿ ವಿಚಾರದ ಗೊಂದಲವನ್ನುಂಟು ಮಾಡಿದೆ. ಇದರ ಬಗ್ಗೆ ಹಲವು ವಿಚಾರಸಂಕಿರಣಗಳು ಏರ್ಪಟ್ಟಿವೆ. ಇದೆಲ್ಲದರ ಪರಿಣಾಮವಾಗಿ ನವ್ಯತೆಯ ಬಗ್ಗೆ ಇಂದು ಓದುಗರಲ್ಲಿ ಒಂದು ಕುತೂಹಲ ಬೆಳೆದಿದೆ; ಸಾಹಿತಿಗಳಲ್ಲಿ ಒಂದು ಆಸೆ ಉಂಟಾಗಿದೆ. ಹೊಸ ರೀತಿ-ನೀತಿಗಳು ಬೇಕೆನಿಸಿದ ಈ ಕಾಲದಲ್ಲಿ ನವ್ಯತೆ ನಮ್ಮ ಸಾಹಿತ್ಯಕ್ಕೆ ಅನಿವಾರ್ಯವೆನಿಸಿದೆ. ಆದುದರಿಂದ 'ನವ್ಯತೆ'ಯ ಬಗೆ ಸ್ವಲ್ಪ ವಿವೇಚಿಸುವುದು ಇಲ್ಲಿ ಅಗತ್ಯವಾಗಿದೆ.

ಇಂದಿನ ಕನ್ನಡ ಸಾಹಿತ್ಯದಲ್ಲಿ 'ನವ್ಯತೆ' ಎನ್ನುವುದು ನವೀನವಾದರೂ ಅದು ಲಕ್ಷಣರಹಿತವಾಗಿಲ್ಲ. ಸಾಹಿತ್ಯದ ಉಳಿದ ಪ್ರಕಾರಗಳಿಗೆ ತಮ್ಮದೇ ಆದ ವಿಶಿಷ್ಟ ಲಕ್ಷಣಗಳಿರುವಂತೆ ನವ್ಯತೆಗೂ ಕೆಲವು ವಿಶಿಷ್ಟವಾದ ಲಕ್ಷಣಗಳಿವೆ. ಆದರೆ ಈ ಲಕ್ಷಣಗಳ ಬಗ್ಗೆ ನಮ್ಮ ನವ್ಯ ಸಾಹಿತಿಗಳಲ್ಲಿಯೇ ಇನ್ನೂ ಒಮ್ಮತವಿಲ್ಲ; ಮತ್ತು ನವ್ಯತೆ ನಮ್ಮ ಸಾಹಿತ್ಯದಲ್ಲಿ ಇನ್ನೂ ಸ್ಥಿರವಾಗಿ ಕಾಲೂರಿಲ್ಲ. ಆದಕ್ಕಾಗಿ ಅದರ ಲಕ್ಷಣಗಳ ಬಗ್ಗೆ ಇಲ್ಲಿ ಎಲ್ಲ ಮಾತುಗಳನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೂ ಕೆಲವು ಸ್ಥೂಲ ಲಕ್ಷಣಗಳನ್ನು ಹೇಳುವುದು ಅನಿವಾರ್ಯವೂ ಅಗತ್ಯವೂ ಎನಿಸಿದ್ದರಿಂದ, ಸಂಕ್ಷಿಪ್ತವಾಗಿ ಕೆಲವು ಮಾತುಗಳನ್ನು ಹೇಳಿ ಮುಂದೆ ಸಾಗುತ್ತೇನೆ.

ನವ್ಯತೆ ಒಂದು ತಂತ್ರವೇ ಹೊರತು ಸಾಹಿತ್ಯದ ಒಂದು ಹೊಸ ಮೂಲ್ಯವಲ್ಲ. ಈಗಾಗಲೇ ಇರುವ—ಶಾಶ್ವತವಾಗಿರುವ—ಸಾಹಿತ್ಯದ ಮೂಲ್ಯಗಳನ್ನು ಹೊಸ ರೀತಿಯಲ್ಲಿ ಅಭಿವ್ಯಕ್ತಗೊಳಿಸುವುದೇ ನವ್ಯತೆ. ಇದೊಂದು ಹೊಸ ಮಾರ್ಗವೇ ಹೊರತು ಹೊಸ ಸೃಷ್ಟಿಯಲ್ಲ. ಹೊಸ ಹೊಸತಾದ ವೈಜ್ಞಾನಿಕ ಶೋಧಗಳು, ಹೊಸ ರಾಜಕೀಯ ತತ್ತ್ವಪ್ರಣಾಲಿಗಳು, ಹೊಸತಾದ ಸಾಮಾಜಿಕ ವಿಚಾರಗಳು ಮತ್ತು ಹೊಸದೂ ಸಂಕೀರ್ಣವೂ ಆದ ಇಂದಿನ ಜೀವನ, ಅದರಿಂದ ಉದ್ಭವಿಸಿದ ವಿಶಿಷ್ಟ, ಸಮಸ್ಯೆಗಳು— ಇವೆಲ್ಲ ಒಟ್ಟಾಗಿ ಸಾಹಿತ್ಯದಲ್ಲಿ ನವ್ಯತೆಗೆ ಜನ್ಮ ಕೊಟ್ಟವು. ಅತ್ಯಾಧುನಿಕ ಜೀವನವನ್ನು ಅತ್ಯಾಧುನಿಕ ರೀತಿಯಲ್ಲಿ ಪ್ರತಿಬಿಂಬಿಸುವ ಸಾಹಿತ್ಯಪ್ರಕಾರವೇ ನವ್ಯತೆ. ಈ ನವ್ಯತೆ ಇಂದು ನಮಗೆ ನವ್ಯತೆಯಾದರೂ ಮುಂದಿನವರಿಗೆ ಹಳತೆನಿಸಬಹುದು; ಹಳತೆನಿಸುತ್ತಿದೆ.

ಬುದ್ಧಿಗಮ್ಯತೆಯೇ ನವ್ಯತೆಯ ಜೀವಾಳ ನವ್ಯತೆ—ವಿಜ್ಞಾನಯುಗದ ಸಾಹಿತ್ಯ ಪ್ರಕಾರ ವಿಜ್ಞಾನ ಬುದ್ಧಿ ಪ್ರಧಾನ ಆದುದರಿಂದ ನವ್ಯತೆಯು ಬುದ್ಧಿ ಪ್ರಧಾನವೇ ಆಗಿದೆ. ನವ್ಯತೆಯಲ್ಲಿ ಹೃದಯಕ್ಕೆ ಸ್ಥಾನವೇ ಇಲ್ಲವೆಂದಲ್ಲ, ಆದರೆ ಬುದ್ಧಿಯ ಮುಖಾಂತರ ಹೃದಯವನ್ನು ತಟ್ಟುವುದೇ ನವ್ಯತೆಯ ವೈಶಿಷ್ಟ್ಯವಾಗಿದೆ. ಶ್ರೀ. ವಿ ಕೃ ಗೋಕಾಕರ ಮಾತಿನಲ್ಲಿ ಹೇಳಬೇಕೆಂದರೆ ನವ್ಯತೆ ಎನ್ನುವುದು ನೆಲ್ಲಿಕಾಯಿಯನ್ನು ತಿಂದು ನೀರುಕುಡಿದಂತೆ, ಸಕ್ಕರೆಯು ಪಾಕಿನಂತೆಕ ಅದರ ಸವಿ ನೇರವಾಗಿ ತಿಳಿಯುವಂತಹದಲ್ಲ.

ಬುದ್ಧಿ ವಿಶ್ಲೇಷಣ ಪ್ರಧಾನ; ಹಾಗು ಸಂಕೇತಪ್ರಿಯ. ಅದುದರಿಂದ ಬುದ್ಧಿ ಗಮ್ಯವಾದ ಈ ತಂತ್ರದಲ್ಲಿ ವಿಶ್ಲೇಷಣೆ ಹಾಗೂ ಸಂಕೇತಗಳಿಗೆ ಬಹು ಮುಖ್ಯವಾದ ಸ್ಥಾನವಿದೆ.

ವಿಶ್ಲೇಷಣದಿಂದ ಅಂದು ನವ್ಯಸಾಹಿತ್ಯದಲ್ಲಿ ಮಾನವನ ಮನಸ್ಸಿನ ಅಂತಸ್ತರಗಳ ಚಿತ್ರಗಳು ಚಿತ್ರವಿಚಿತ್ರವಾಗಿ ಮೂತಕೊಡಗಿದೆ. ಮಾನವನ ಸುಪ್ತಚೇತನದಲ್ಲಿ ಅಡಗಿದ ಭಾವ. ಭಾವನೆಗಳು ವಿಶ್ಲೇಷಣೆಯಿಂದಾಗಿ ಹೊರಗೆಬಂದು ಸಾಹಿತ್ಯ ರೂಪತಾಳಿ ನಿಲ್ಲಿತೊಡಗಿದೆ. ಇದರಿಂದ ಮಾನವನ ಮುಖಕ್ಕೆ ರಾವುಗನ್ನಡಿ ಹಿಡಿದಂತಾಗಿದೆ. ತನ್ನ ಸುಪ್ತಚೇತನದ ಚಿತ್ರವನ್ನು ನೋಡಿ ಮಾನವನು ಕಳವಳ ಪಡಲಾರಂಭಿಸಿದ್ದಾನೆ. ಸುಪ್ತಚೇತನದಲ್ಲಿರುವ ಗೊಂದಲವು ಇದರ ಪಡಿನೆಳಲಾದ ನವ್ಯಸಾಹಿತ್ಯದಲ್ಲಿಯೂ ತೋರಿ, ಓದುಗನನ್ನು ಮಂಕುಗೊಳಿಸುತ್ತಲಿದೆ. ಸುಪ್ತಚೇತನದ ಸುಳುವು ಹೊಳವುಗಳನ್ನರಿತು ಕೊಂಡ ಓದುಗನಿಗೆ ಮಾತ್ರ ನವ್ಯತೆಯಲ್ಲಿ ಅರ್ಥ ಕಂಡುಬರುತ್ತಲಿದೆ

ಸಂಕೇತಪ್ರಿಯವಾದ ಬುದ್ಧಿಯು ವಿಸ್ತಾರವಾದ ವರ್ಣನೆಗಳನ್ನು ತಾಳ್ಮೆಯಿಂದ ಸಹಿಸಲಾರದು. ಆದುದರಿಂದ ಬುದ್ಧಿಗಮ್ಯವಾದ ನವ್ಯ ಸಾಹಿತ್ಯದಲ್ಲಿ ಸಂಕೇತಪ್ರಿಯತೆಯು ಪ್ರತಿಮೆಗಳ ರೂಪವನ್ನು ತಾಳಿದೆ. ಹತ್ತು ಮಾತುಗಳಿಂದ ವರ್ಣಿಸಿ ಹೇಳಬಹುದಾದ ಸಂಗತಿಯನ್ನು ಒಂದೇ ಒಂದು ಪ್ರತಿಮೆಯು ಪ್ರಭಾವಿಯಾಗಿ ಓದುಗನಿಗೆ ವ್ಯಕ್ತಗೊಳಿಸಬಹುದು. ಆದುದರಿಂದ ನವ್ಯತೆಯಲ್ಲಿ ಪ್ರತಿಮೆಗಳಿಗೆ ಬಹಳ ಮಹತ್ತ್ವದ ಸ್ಥಾನವಿದೆ.

ಒಟ್ಟಿನಲ್ಲಿ ಬುದ್ಧಿಗಮ್ಯತೆ, ಮನೋವಿಶ್ಲೇಷಣ ಹಾಗೂ ಪ್ರತಿಮೆ — ಇವು ನವ್ಯತೆಯ ವಿಶಿಷ್ಟ ಲಕ್ಷಣಗಳೆಂದು ಹೇಳಬಹುದು.

ಈ ರೀತಿಯ ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿರುವುದರಿಂದ ನವ್ಯಸಾಹಿತ್ಯವು ತನ್ನದೇ ಆದ ಒಂದು ಹೊಸ ಶೈಲಿಯನ್ನು ನಿರ್ಮಿಸಿಕೊಳ್ಳಬೇಕಾಯಿತು. ಮತ್ತು ತನ್ನದೇ ಆದ ನಿರೂಪಣೆಯ ಕ್ರಮವನ್ನು ಅಳವಡಿಸಿಕೊಳ್ಳಬೇಕಾಯಿತು. ಈ ಶೈಲಿ ಈ ನಿರೂಪಣೆಯ ಕ್ರಮಗಳು ತೀರ ಹೊಸತಾಗಿರುವುದರಿಂದಲೂ ಬುದ್ಧಿಗಮ್ಯತೆ ಹಾಗೂ ಸಂಕೇತಗಳನ್ನು ಒಳಗೊಂಡಿರುವುದರಿಂದಲೂ ನವ್ಯ ಸಾಹಿತ್ಯ ಶೈಲಿಯು ಅನಿವಾರ್ಯವಾಗಿ ಕ್ಲಿಷ್ಟವಾಗಿದೆ. ಈ ಕ್ಲಿಷ್ಟತೆಯಿಂದ ನವ್ಯ ಸಾಹಿತ್ಯವು ಹಲಸಿನ ಹಣ್ಣಿನಂತಾಗಿದೆ. ನವ್ಯ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವುದೆಂದರೆ ಒಂದು ಹಲಸಿನ ಹಣ್ಣನ್ನು ಬಿಚ್ಚಿ ಅದರಲ್ಲಿಯ ತೊಳೆಗಳನ್ನು ತೆಗೆದಂತೆಯೇ ಎಂದು ಹೇಳಬಹುದು.

ಇಷ್ಟು ಹಿನ್ನೆಲೆಯಿಲ್ಲದಿದ್ದರೆ ಕನ್ನಡದಲ್ಲಿಯ ನವ್ಯತೆಯ ಅರ್ಥವಾಗಲಾರದೆಂದು ಇಷ್ಟನ್ನು ಇಲ್ಲಿ ಹೇಳಲೇಬೇಕಾಯಿತು. ಈ ಹಿನ್ನೆಲೆಯಿಂದ ಕನ್ನಡದಲ್ಲಿಯ ಸಣ್ಣ ಕತೆಗಳಲ್ಲಿ ಕಂಡುಬರುವ ನವ್ಯತೆಯನ್ನು ಈಗ ವಿವೇಚಿಸಬಹುದು.

ನವ್ಯತೆ ಕನ್ನಡ ಸಣ್ಣಕತೆಗಳಿಗೆ ತೀರ ಹೊಸದು. ಅದುದರಿಂದ ಇದು ಇನ್ನೂ ಬಹಳಷ್ಟು ಕತೆಗಾರರಲ್ಲಿ ಕಂಡುಬರುತ್ತಲಿಲ್ಲ. ಮತ್ತು ಇದರ ಬಗ್ಗೆ ಇನ್ನೂ ಸಾಕಷ್ಟು ಚರ್ಚೆಯೂ ಆಗಿಲ್ಲ. ಈಗ ಅದ ಚರ್ಚೆಯೂ ತೀರ ಸ್ವಲ್ಪ. ಶ್ರೀ. ಗೋಪಾಲಕೃಷ್ಣ ಅಡಿಗ ಅವರು ಕನ್ನಡ ಸಣ್ಣಕತೆಯಲ್ಲಿಯ ನವ್ಯತೆಯ ಬಗ್ಗೆ ಹೀಗೆ ಹೇಳಿದ್ದಾರೆ. " ಈ ಬಗೆಯ ಆಧುನಿಕ ಪ್ರಜ್ಞೆ ಕನ್ನಡ ಕಾವ್ಯದಲ್ಲಿ ಮೊತ್ತಮೊದಲು ಕಂಡುಬಂದದ್ದು ಸಹಜ. ಏಕೆಂದರೆ ಕಾವ್ಯ ಸಾಹಿತ್ಯದ ಅತಿ ಸೂಕ್ಷ್ಮನೇದಿಷ್ಠವಾದ ಅಂಗ ಅವರಣದ ಅಲ್ಪ-ಸ್ವಲ್ಪ ವ್ಯತ್ಯಾಸವೂ ಈ ಸೂಕ್ಷ್ಮಗ್ರಾಹಿಯಲ್ಲಿ ಬಹು ಬೇಗ ಗುರುತು. ಗೊಳ್ಳುತ್ತದೆ ಅವರಿ ಈ ನವ್ಯಪ್ರಜ್ಞೆ ಕಾವ್ಯದಲ್ಲಿ ಅಭಿವ್ಯಕ್ತವಾದದ್ದು ಈಗ ಸಾಹಿತ್ಯದ ಇತರ ಪ್ರಕಾರಗಳಲ್ಲಿಯೂ ಅಭಿವ್ಯಕ್ತವಾಗುತ್ತಿರು. ವುದು ಸಹಜವೇ ಆದರೂ, ಬಹಳ ಗಮನಾರ್ಹವಾದ ವಿಷಯ. ಕಾವ್ಯದಲ್ಲಿ ಅದಮೇಲೆ ಈ ಪ್ರಜ್ಞೆ ಸಣ್ಣಕಥೆಗಳಲ್ಲಿ ಈಗ ಕಂಡು ಬರುತ್ತದೆ. ಗದ್ಯಸಾಹಿತ್ಯದಲ್ಲಿ ಸಣ್ಣಕಥೆ ಕಾವ್ಯಕ್ಕೆ ಬಹಳ ಹತ್ತಿರ. ವಾದದ್ದು. ಅಲ್ಲಿಯೂ ಈ ನವ್ಯತೆ ಕಂಡುಬರುತ್ತಿರುವುದು ಕಾಲ ಧರ್ಮ, ಸಹಜಧರ್ಮ, ಶಾನಿವಾರ್ಯ. ಕನ್ನಡ ಸಣ್ಣಕಥೆಗಳಲ್ಲಿ ಶ್ರೀ. ರಾಮಚಂದ್ರ ಶರ್ಮರ, ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಅವರ ಕಥೆಗಳಲ್ಲಿ—ಶ್ರೀ. ಪದಾತಿಯವರ ಒಂದೆರಡು ಕಥೆಗಳಲ್ಲಿ ಈ ನವ್ಯತೆ ಆಗಲೇ ಕಂಡುಬರುತ್ತಿದೆ.

ಶ್ರೀ. ಯು. ಆರ್. ಅನಂತಮೂರ್ತಿಯವರ ಈ 'ನವ್ಯಕಥೆಗಳು' ಕನ್ನಡ ಸಾಹಿತ್ಯಕ್ಕೆ ಬರುತ್ತಿರುವ ಹೊಸನೀರು!" [೧]

ಶ್ರೀ. ಕೆ. ನರಸಿಂಹಮೂರ್ತಿಯವರು 'ಸಣ್ಣಕತೆಯ ಬೆಳವಣಿಗೆ' ಎಂಬ ಸಂಬಂಧದಲ್ಲಿ ನವ್ಯಕತೆಯ ಬಗ್ಗೆ ಬರೆಯುತ್ತ "ನವ್ಯಕತೆಗಾರ ತನ್ನ ವೈಯಕ್ತಿಕ ದರ್ಶನಕ್ಕೆ ಹೆಚ್ಚು ಬೆಲೆಕೊಡುತ್ತಾನೆ. ಯಾವುದೇ ಸನ್ನಿವೇಶದ ಹಲವು ಮುಖಗಳ ಜಟಿಲತೆಯ ಮತ್ತು ನಿಗೂಢರಹಸ್ಯದ ಕಡೆಗೆ ಧ್ವನಿಪೂರ್ಣವಾಗಿ ಬೊಟ್ಟು ಮಾಡಿ ತೋರಿಸುತ್ತಾನೆ. ಹೊರಜೀವನದ ಅದ್ಭುತ ಪ್ರಸಂಗಗಳಿಗಿಂತ ಹೃದಯದ ಮೂಲಭಾವನೆಗಳ ಅವಿಷ್ಕಾರಕ್ಕೆ ಸಾಕಾದ ಸಾಮಾನ್ಯ ಆಗುಹೋಗುಗಳನ್ನು ಅವನು ಆಯ್ದುಕೊಳ್ಳುತ್ತಾನೆ. ವಸ್ತುವಿಗಿಂತಲೂ ಧ್ವನಿಗೆ ಹೆಚ್ಚು ಪುರಸ್ಕಾರ ಕೊಡುತ್ತಾನೆ." [೨]

ಎಂದು ನವ್ಯಕತೆಯ ಬಗ್ಗೆ ವಿವೇಚನೆ ಮಾಡಿ, 'ನಲ್ಲಿಯಲ್ಲಿ ನೀರು ಬಂತು' ಎಂಬ ಕಥೆಯನ್ನು ಈ ವಿವೇಚನೆಗೆ ಉದಾಹರಣೆಯಾಗಿ ವಿವರಿಸಿದ್ದಾರೆ ಶ್ರೀ. ವೆಂ. ಮು ಜೋಶಿಯವರು ತಮ್ಮ 'ನವ್ಯಕತೆ—ತಂತ್ರ ಮತ್ತು ಮಂತ್ರ' ವಿಕ್ಯಲೇಖನದಲ್ಲಿ 'ನವ್ಯಕತೆಗಾರ ಕ್ಷ. ಕಿಂಣಾಯಂತ್ರವಾಗಿ ನಿಂತಿದ್ದಾನೆ. ನವ್ಯಕತೆಗಳಲ್ಲಿ—ಪ್ರಸಂಗಕ್ಕಿಂತಲೂ ಸ್ವಭಾವಕ್ಕೆ, ಬಾಹ್ಯ ಚಲನವಲನಕ್ಕಿಂತಲೂ ಆಂತರಿಕ ಆಂದೋಲನಗಳಿಗೆ, ಜೀವನದಲ್ಲಿ ನಡೆವ ಅಕಸ್ಮಿಕ ಘಟನೆಗಳಿಗಿಂತಲೂ ಸುಪ್ತಾವಸ್ಥೆಯಲ್ಲಿಯು ಜಾಗ್ರತಿಗೆ ಈ ಕತೆಗಳಲ್ಲಿ ಪ್ರಾಮುಖ್ಯತೆ ಇದೆ' [೩]

ಎಂದು ನವ್ಯಕತೆಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ.

---

೧ 'ಎಂದೆಂದೂ ಮುಗಿಯದ ಕಥೆ' ಇದರ ಮುನ್ನುಡಿ.

೨ 'ಜಯಂತಿ ಫೆಬ್ರುವರಿ ೧೯೫೭ ಸಂಚಿಕೆ.

೩ 'ಜಯಂತಿ' ಫೆಬ್ರುವರಿ ೧೯೫೭ ಸಂಚಿಕೆ.

ಆದರೆ ಇದೆಲ್ಲ ಹೆಚ್ಚಾಗಿ ತಾತ್ತ್ವಿಕ ವಿವರಣೆಯಾಗಿದೆ. ಕನ್ನಡದಲ್ಲಿ ಈಗ ಬಂದ—ಬರುತ್ತಿರುವ—ನವ್ಯಕತೆಗಳೆಲ್ಲ ನಿಜವಾದ ನವ್ಯಕತೆಗಳೇ ಹೇಗೆ? ಮತ್ತು ಈಗ ಬಂದ ನವ್ಯಕತೆಗಳಲ್ಲಿ ಆದರ ಎಲ್ಲ ಲಕ್ಷಣಗಳು ಇರುವುವೋ ಹೇಗೆ?—ಎಂಬ ಪ್ರಶ್ನೆಗಳನ್ನು, ನನಗೆ ತಿಳಿದಮಟ್ಟಿಗೆ—ಯಾರೂ ಸರಿಯಾಗಿ ಚರ್ಚಿಸಿಲ್ಲ; ನಿರ್ದೇಶಿಸಿಲ್ಲ. ಈಗ ಅದು ತೀರ ಅವಶ್ಯವಾಗಿದೆ.

ಮೊದಲನೆಯದಾಗಿ ಇಂದು ನವ್ಯಕತೆಯ ಹೆಸರಿನಿಂದ ಬರುವ ಎಲ್ಲ ಕತೆಗಳೂ ನವ್ಯವಾಗಿಲ್ಲ. ಎರಡನೆಯದಾಗಿ ಲಲಿತ ಹಾಗೂ ಪ್ರಗತಿಶೀಲರ, ಸಂಕೀರ್ಣ ಹಾಗೂ ವಿಶಿಷ್ಟಕತೆಗಾರರ ಕೆಲವು ಕತೆಗಳು ನವ್ಯಕತೆಗಳೆನಿಸಿಕೊಳ್ಳಲು ಯೋಗ್ಯವಾಗಿವೆ. ಆದರೂ ಅವುಗಳು ನವ್ಯಕತೆಗಳೆಂದು ಎಣಿಸಲ್ಪಟ್ಟಿಲ್ಲ. ಇದಕ್ಕೆ ಕಾರಣವೆಂದರೆ, ಅವರು ನವ್ಯಕತೆಯ ವಿಶಿಷ್ಟವಾದ ಪ್ರಜ್ಞೆಯಿಂದ ಅವುಗಳನ್ನು ಬರೆಯಲಿಲ್ಲ. ಅಂದಾಪ್ಷಣಕ್ಕೆ ಅವುಗಳ ಯೋಗ್ಯತೆ ನವ್ಯಕತೆಗಳ ಮಟ್ಟಕ್ಕಿಂತ ಕೆಳಗಿದೆಯೆಂದು ಮಾತ್ರ ತಿಳಿಯಬಾರದು.

ಇಂದಿನ ನವ್ಯಕತೆಗಾರರಲ್ಲಿ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್, ಶ್ರೀ. ಯು. ಆರ್. ಅನಂತಮೂರ್ತಿ ಮತ್ತು ಶ್ರೀ. ವೆಂ. ಮು. ಜೋಶಿ ಈ ಮೂವರು ಒಂದೊಂದು ದೃಷ್ಟಿಯಿಂದ ವಿಚಾರಣೀಯರಾಗಿದ್ದಾರೆ. ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಅವರ 'ಸಂಗಮ' ಎಂಬ ಕಥಾಸಂಕಲನದಲ್ಲಿ ಬರುವ ಕಥೆಗಳು 'ನವ್ಯಕತೆ'ಯ ಜಾತಿಗೆ ಸೇರಿದುವು—ಎಂದು ಹೇಳಬಹುದು. ಅವರು ಕತೆಗೆ ಬಳಸಿದ ವಿಷಯಗಳಲ್ಲಿ ಬಹಳಷ್ಟು ನವ್ಯವಾಗಿಲ್ಲ; ಆದರೆ ಅವರು ಆ ವಿಷಯಗಳನ್ನು ವ್ಯಕ್ತಪಡಿಸಿದ ರೀತಿ ನವ್ಯವಾಗಿದೆ. ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಅವರು ತಮ್ಮ ನಿರೂಪಣೆಯಲ್ಲಿ, ಶೈಲಿಯಲ್ಲಿ, ಪ್ರತಿಮೆಗಳನ್ನು ಉಪಯೋಗಿಸಿದ್ದಾರೆ. ಇದರಿಂದಾಗಿ ಅವರ ಕತೆಗಳು ನವ್ಯವೆನಿಸಿವೆ. ಉದಾಹರಣೆಗೆ ಅವರ 'ಇಲ್ಲ ಇಲ್ಲ....' ಎಂಬ ಕತೆಯಲ್ಲಿ ಬರುವ ಈ ಪರಿಚ್ಛೇದವನ್ನು ನೋಡಬಹುದು:

"ಗಾಜಿನ ಪಾತ್ರೆಯಲ್ಲಿಟ್ಟಿದ್ದ ಹೂಗಳಿಂದ ಆಗಾಗ ರೇಖು ಕೆಳಗೆ ಬೀಳುತ್ತಿತ್ತು. ಹೂಗಳ ಕಣ್ಣಿರು ಕೂಡ ಚೆನ್ನ. ಮೇಜಿನ ಬಿಳಿ ಬಟ್ಟೆಯಮೇಲೆ ಒಂದು ಕಡೆ, ಅಗಲವಾದ ಕಾಫಿ ಕರೆ ಮೂಡಿತ್ತು. ವಿಚಿತ್ರ ಆಕಾರದ ಕರೆ. ಮಗುವಿನ ಅಳುಮುಖ. ತಟ್ಟೆಯಲ್ಲಿ ಲಿಂಡಿಗಳ ಅವಶೇಷ. ಬಟ್ಟಲುಗಳ ತಳದಲ್ಲಿ ಒಣಗುತ್ತಿದ್ದ ಕಾಫಿಗಸಿ. ಒಂದು ನೀರಿನ ಲೋಟದಲ್ಲಿ, ಸಣ್ಣ ಪತಂಗವೊಂದು ರೆಕ್ಕೆ ಬಡಿಯುತ್ತಿತ್ತು. ಹಾರಲು ಯತ್ನಿಸುತ್ತಿದ್ದ ಕಪ್ಪೆಚಿಪ್ಪು. ಆಷ್ಟ್ರೇಗಳ ತುಂಬ ಸಿಗರೇಟು ತುಣುಕು, ಬೆಂಕಿಕಡ್ಡಿ, ಬೂದಿ. ಬೂದು ಹಿನ್ನೆಲೆಯಮೇಲೆ ಬಿಳುಪು, ಕಪ್ಪು. ಉರಿ, ಹೊಗೆ ಎರಡನ್ನೂ ಕಳೆದುಕೊಂಡ ಸಿಗರೇಟ್ ತುಂಡುಗಳು; ಸೋತು ಮಲಗಿದ ಮುದುಕರು; 'ಇಷ್ಟ. ಇಲ್ಲ' ಏನೊಂದನ್ನೂ ಮಾಡಲಿಲ್ಲ ಇವನು, ತಿರಸ್ಕಾರದ ದೃಷ್ಟಿಗಳಿಂದ ಅವರನ್ನು ಮರೆಮಾಡಲು ತ್ವರೆಯಿಂದ ಎಳೆದ ಬೂದುಬಣ್ಣದ ತೆರೆ." *

ಕಥಾನಾಯಕಿಯ ಮನಸ್ಸಿನಲ್ಲಿ, ತನ್ನ ಗಂಡನ ಬಗ್ಗೆ ಮೂಡಿದ ತಿರಸ್ಕಾರ ಭಾವನೆಯನ್ನು ಇಲ್ಲಿ ಪ್ರತಿಮೆಗಳ ಮುಖಾಂತರ ವ್ಯಕ್ತಪಡಿಸಲಾಗಿದೆ.

ಇದೇ ರೀತಿ ಅವರ ಹಲವು ಕತೆಗಳಲ್ಲಿ ಪ್ರತಿಮಾಮಯವಾದ ಶೈಲಿ ಬಂದು, ಅವರ ಕತೆಗಳನ್ನು ನವ್ಯವಾಗಿ ಮಾಡಿವೆ.

ಶ್ರೀ. ಯು. ಆರ್. ಅನಂತಮೂರ್ತಿಯವರ 'ಎಂದೆಂದೂ ಮುಗಿಯದ ಕಥೆ' ಎಂಬ ಸಂಕಲನದಲ್ಲಿ ಬಂದ ಕತೆಗಳೂ ನವ್ಯಕತೆಗಳೇ! ಆದರೆ ಅವರ ಕತೆಗಳಲ್ಲಿ ಪ್ರತಿಮಾಮಯವಾದ ಶೈಲಿ ಇಲ್ಲ ಅವರ ಬದಲಾಗಿ ಕಾವ್ಯಮಯವಾದ ಶೈಲಿಯಿದೆ. ಅವರು ಆಯ್ದುಕೊಂಡ ವಿಷಯಗಳೂ ತೀರ ಹೊಸತಾದುವೇನೂ ಅಲ್ಲ; ಆದರೆ ಅವುಗಳನ್ನು ಹೇಳಿದ ರೀತಿ ಹೊಸತು. "ಇಲ್ಲಿನ ಕಥೆಗಳ ತಂತ್ರ ಹೊಚ್ಚ ಹೊಸದು; ಕನ್ನಡಕ್ಕೆ ನವ್ಯ ಎನ್ನುವಂಥದು. ಕಥಾವಸ್ತುವನ್ನು ಇವರು ಅರಗಿಸಿಕೊಳ್ಳುವ ರೀತಿಯೂ ಹಾಗೇ ಹೊಸತು." * ಎಂದು ಗೋಪಾಲಕೃಷ್ಣ ಅಡಿಗ ಅವರು, ಈ ಕಥೆಗಳ ಬಗ್ಗೆ ಪಟ್ಟ ಅಭಿಪ್ರಾಯ ಸರಿಯಾಗಿದೆ. ಶ್ರೀ. ಯು. ಆರ್. ಅನಂತಮೂರ್ತಿಗಳ ಕತೆಯಲ್ಲಿ ವಿಶ್ಲೇಷಣೆ ಇದೆ. ಹಿಂದಿನ ಸಂಗತಿಗಳ ನೆನಹುಗಳು ಇವೆ ಮನಸ್ಸಿನ ಹೋರಾಟವಿದೆ. ಆದರೆ ಇವೆಲ್ಲವೂ ಹೊಸವಲ್ಲ ಇವುಗಳನ್ನು ಹೇಳಿದ ರೀತಿ ಹೊಸತಾಗಿದೆ. ಎರಡು ಉದಾಹರಣೆಗಳನ್ನು ಇಲ್ಲಿ ನೋಡಬಹುದು:—

"ಅದೇ ಜೋಗುಳ! 'ಯಾಕಳುವೆ ಎಲೆ ರಂಗ ಬೇಕಾದ್ದ ನಿನಗೀವೆ....ನಾಳ್ಕೆಮ್ಮೆ ಕರಿದಾ ನೊರೆಹಾಲು ...'

ಆ ಜೋಗುಳಕ್ಕೆ ಕೊನೆಯೇ ಇಲ್ಲವೋ ಏನೋ! ಆ ತೊಟ್ಟಿಲಿನಲ್ಲೇ.... ಅವನೂ!....

ಅವನ ಮಗನೂ!....
ಮಗನ ಮಗನೂ!....
ಅವನ ಮಗನ ಮಗನ ಮಗನೂ!....
ಆ ತೊಟ್ಟಿಲು ಆಡದೇ ನಿಂತ ದಿನವೇ ಇಲ್ಲ!
ಆ ಜೋಗುಳ ಹಾಡದೇ ಇದ್ದ ದಿನವೂ ಇಲ್ಲ!
ಅವನ ಪಾಲಿಗೆ ಆ ಜೋಗುಳ ಎಷ್ಟು ಸತ್ಯ!

ಅವನ ವಂಶದಲ್ಲಿ ಹುಟ್ಟಿದ ಮಕ್ಕಳು ಯಾಕಾರು ಅಳಬೇಕು? ಬೇಕಾದ್ದು ಇದೆ ಮನೆಯಲ್ಲಿ! ನಾಳ್ಕೆಮ್ಮೆ ಯಾಕೆ? ಅರಿಮ್ಮೆ ಇದೆ! ವಂಶದಲ್ಲಿ ಜನ ತುಂಬಿದೆ ಅಂತ ಅವನ ಮಗ, ಮೊನ್ನೆ ತಾನೆ ಜಾತ್ರೆಗೆ ಹೋಗಿ ಮತ್ತೊಂದು ಎಮ್ಮೆ ತಂದಿದ್ದಾನೆ.

ಆ ನಾಲ್ಕು ಎಮ್ಮೆಯಂತೂ, ಅವನ ಮನೆಯಲ್ಲಿಯೇ ಹುಟ್ಟಿ ಬೆಳೆದುವು....ಅವುಗಳ ತಾಯಿಯ್ಯ, ತಾಯಿಯ್ಯ, ತಾಯಿಯ್ಯ, ಅಜ್ಜಿಯ ಹಾಲನ್ನೋ ಏನೋ—ಅವನು ಕುಡಿದು ಬೆಳೆದದ್ದು....."

---

* 'ಸಂಗಮ', ಪುಟ ೧೧೪.

* ಎಂದೆಂದೂ ಮುಗಿಯದ ಕಥೆ—ಮುನ್ನುಡಿ.

'ಎಂದೆಂದೂ ಮುಗಿಯದ ಕಥೆ'ಯಲ್ಲಿಯ ನಿರೂಪಣೆಯ ಒಂದು ರೀತಿ ಎಂದು.

ಇನ್ನೊಂದನ್ನು ನೋಡಿರಿ:—

ತೇಂಕೆ ತೇಂಕೆ ಸಿದ್ದ ಒದರಿದ.

"ಆಹ್! ಸೀ ...ನ. ಸಿಟ್ಟೇ!"

ಬಂಡೆಯ ಮೇಲಿನ ಜೀವ—ಜಂತು—. ಇಕ್ಕಿ! ಬದುಕೇ!!) ಸುರಿಯಂತೆ—(ಥೂ!) ಮಿಲುಕಾಡಿತು—('ಅಮ್ಮಾ! ನೋಡಶಾರಿನಮ್ಮ!!)

"ಅ....ಅ....ಬೆಬೆಬೇ!!....(ಬ್ಯಾ-ಬ್ಯಾ)...."

ಬತಜೀವಿಯ ಅಂಗ ಅಂಗವೂ ಪ್ರಾಣಭಿಕ್ಷೆ ಯಾಚಿಸಿತು.

("ಅಯ್ಯೋ! ಅಮ್ಮಾ!! ಅಮ್ಮಾ!....ಕುರಿ ಕಡಿಯು ಬೇ" ....."ಬ್ಯಾ....ಬ್ಯಾ .. ಅಯ್ಯೋ!")

ಕ್ಷಣದಲ್ಲೆ ಸಿದ್ದನಿಗೆ ಕಣ್ಣು ಕತ್ತಲೆ ಕಟ್ಟಿ ದೊಪ್ಪನೆ ಕುಳಿತು ಬಿಟ್ಟ.

'Darkness was on the Face of the Deep'

ಹೆಂಡತಿಯ ಜೀವ ಅಹುತಿಕೊಂಡ. ಕೈಯಲ್ಲಿದ್ದ ಕತ್ತಿ ಸಡಲಿ ("ನಮ್ಮ ಸಿದ್ದಂದು ಹೆಂಗರಳು ಅಕ್ಕಯ್ಯ!") ಮಬ್ಬು ಕತ್ತಲ ಮಳೆಯಲ್ಲಿ ಜಾರಿ ಪ್ರವಾಹ ಮಡುವಿನಲ್ಲಿ ಮುಳುಗಿತು!

"And the spirit of God moved upon the face of waters."

'ಹೆಂಗರಳು' ಮತ್ತೆ ಹುಟ್ಟಿಗೆ ಕೈಯಿಕ್ಕಿತು!

"And then God said Let there be light"
And there was LIGHT!"

ಇದು 'ಹುಲಿಯ ಹೆಂಗರಳು' ಎಂಬ ಕಥೆಯಲ್ಲಿಯ ಕೊನೆಯ ಭಾಗ ಇಲ್ಲಿ ಸಿದ್ದನ ಮನಸ್ಸಿನ ಹೋರಾಟದ ಕೊನೆಯನ್ನು ಈ ರೀತಿ ಚಿತ್ರಿಸಲಾಗಿದೆ. ಇಲ್ಲಿ ಬರುವ ಮನಸ್ಸಿನ ಹೋರಾಟ ಹೊಸದಲ್ಲ ಅದನ್ನು ಚಿತ್ರಿಸಿದ ರೀತಿ ಹೊಸದು.

ಹೀಗೆ ಶ್ರೀ. ಯು. ಆರ್. ಅನಂತಮೂರ್ತಿಯವರು ತಮ್ಮ ಅಭಿವ್ಯಕ್ತಿಯಿಂದ — ಶೈಲಿಯಿಂದ — ಕಥೆಗಳಲ್ಲಿ ನವ್ಯತೆಯನ್ನು ತಂದಿದ್ದಾರೆ.

ಶ್ರೀ. ವೆಂ. ಮು. ಜೋಶಿಯವರ ನವ್ಯಕಥೆಗಳಲ್ಲಿ ಮನೋವಿಶ್ಲೇಷಣೆಗೆ ಬಹಳ ಪ್ರಾಮುಖ್ಯತೆ ಇದೆ. ವೆಂ. ಮು. ಜೋಶಿಯವರ ಕಥೆಯ ವಸ್ತುಗಳಲ್ಲಿ ನವ್ಯತೆ ಇದೆ. ಅವರು ಆಯ್ದುಕೊಂಡ ವಿಷಯಗಳಲ್ಲಿ ಬಹಳಷ್ಟು ವಿಷಯಗಳು ಅತೃಪ್ತಕಾಮಕ್ಕೆ ಸಂಬಂಧಿಸಿದುವು ಇವೆ. ಈ ಅತೃಪ್ತ ಇಚ್ಛೆಗಳು ಸುಪ್ತ ಚೇತನದಿಂದ ಹೇಗೆ ಹೊರಗೆ ಬರಲು ಹವಣಿಸುತ್ತವೆ—ಅವುಗಳನ್ನು ತಡೆಯಲು ವಿವೇಕವು ಹೇಗೆ ಯತ್ನಿಸುತ್ತದೆ?—ಈಗ ಮನೋರಂಗದಲ್ಲಿ ಎಂಥ

ಎಂದೆಂದೂ ಮುಗಿಯದ ಕಥೆ.



ವಿಪ್ಲವ ನಡೆಯುತ್ತದೆ?—ಎಂಬುದನ್ನು ಅವರು ಬಹಳ ಮನೋವೇಧಕವಾಗಿ ಚಿತ್ರಿಸಿದ್ದಾರೆ. ಅವರು ಬರೆದ 'ಬಗೆಹರಿಯದ ಬಾಯಿಲೆಕ್ಕ' ಮತ್ತು 'ಕಡಲ ಕುಣಿತ' ಎಂಬ ಕತೆಗಳನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು. ಬಗೆಹರಿಯದ ಬಾಯಿಲೆಕ್ಕದಲ್ಲಿ ಮಗುವನ್ನು ಪಡೆಯುವ ಭಾಗ್ಯವಿಲ್ಲದ ತಾಯಿ, ಚೊಚ್ಚಿಲಬಸುರಿಯಾಗಿ ಮನೆಗೆ ಬಂದ ಮಲಮಗಳನ್ನು ನೋಡಿ ಅಂತರಂಗದಲ್ಲಿ ಪಡುವ ಯಾತನೆಯ ಚಿತ್ರವಿದೆ. ಇಲ್ಲಿ ಮಲತಾಯಿಯ ಮನೋವಿಶ್ಲೇಷಣೆ ಬಹಳ ಮರ್ಮಭೇದಿಯಾಗಿದೆ. 'ಕಡಲ ಕುಣಿತ'ದಲ್ಲಿ ಮದುವೆಯಾಗದ ಒಬ್ಬ ಪ್ರೌಢ ಕನ್ಯೆಯ ಮನಸ್ಸಿನಮೇಲೆ, ಅವಳ ತಾಯಿ ತಂದೆಗಳ ಕಾಮಜೀವನವು ಮಾಡುವ ಪರಿಣಾಮವನ್ನು—ಅಶ್ಲೀಲವೆನಿಸದೂ ನಿಷ್ಠುರವಾಸ್ತವತೆಯಲ್ಲಿ—ನವ್ಯವಾಗಿ ಚಿತ್ರಿಸಲಾಗಿದೆ. ಇವೆರಡರಲ್ಲೂ ಅತೃಪ್ತ ಕಾಮದ ಚಿತ್ರಣವಿದ್ದರೂ ಈ ನಳ್ಳು ಈ ಚಿತ್ರಣ ಕನ್ನಡ ಸಾಹಿತ್ಯಕ್ಕೆ ಹೊಸತು. ಹೀಗೆ ವೆಂ. ಮು. ಜೋಶಿಯವರು ಮನೋವಿಶ್ಲೇಷಣಾತ್ಮಕವಾದ ಕಥೆಗಳಿಂದ ಕನ್ನಡ ಕತೆಗಳಲ್ಲಿ ನವ್ಯತೆಯನ್ನು ತಂದಿದ್ದಾರೆ. ಇಲ್ಲಿ ಕ್ರಿಯೆಗೆ ಮಹತ್ತ್ವವಿಲ್ಲ ಹೃದಯಮಂಥನಕ್ಕೆ ಮಹತ್ತ್ವವಿದೆ.

ಈ ರೀತಿ ಕನ್ನಡಸಾಹಿತ್ಯದಲ್ಲಿ ಈಗ ನವ್ಯಕತೆಯ ಕಾಲ ಪ್ರಾರಂಭವಾಗಿದೆ. ಇನ್ನಾವರೆಗೆ ಎಷ್ಟು ಬರಬೇಕೋ ಅಷ್ಟು ನವ್ಯಕತೆಗಳು ಕನ್ನಡದಲ್ಲಿ ಬಂದಿಲ್ಲ ನವ್ಯತೆಯು ಹೆಸರಿನಲ್ಲಿ ಬಂದ ಎಲ್ಲವೂ ನವ್ಯವಾಗಿಲ್ಲ. ಈ ಮೂವರಲ್ಲದೇ ಇನ್ನೂ ಕೆಲವು ಕತೆಗಾರರು ಆಗಾಗ ಕೆಲವು ನವ್ಯಕತೆಗಳನ್ನು ಕೊಟ್ಟಿದ್ದಾರೆ ಅವುಗಳಲ್ಲಿ ಬಿ. ಸಿ. ರಾಮಚಂದ್ರ ಶರ್ಮರ 'ಬೆಳಗಾಯಿತು' ಡಿ ಎಸ್. ಕಾರ್ಯ ಗಾರರ 'ಸ್ವೈಕು' ಎಚ್. ವಿ. ಚಂದ್ರಶೇಖರ 'ಹೆಣ್ಣಾಗಿ ಕಾತಿಕ್ಕು ವಾಯೆ' ಎಂಬ ಕಥೆಗಳು ಗಮನಾರ್ಹವಾಗಿವೆ.

ಒಟ್ಟಿನಲ್ಲಿ ಇಂದು ಬಂದ ನವ್ಯತೆಯು ಕಾಲ ಇನ್ನೂ ಹುಲುಸಾಗಬೇಕಾಗಿದೆ. ಈ ನವ್ಯತೆ ಮುಂದೆ ಯಾವ ಭವ್ಯತೆಗೆ ಎಡೆಕೊಡುವುದೋ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

ಶಬ್ದ-ಶಕುಂತಲಾ

ಶೀ. ಅರವಿಂದ ನಾಡಕರ್ಣಿ, ಮುಂಬೈ.

ಬಿಡು ಈ ಕಾಗದ-ಮಸಿಗಳ ಸಂಸಾರ
ಮಾಯಾಜಾಲಪ್ರಸಾರ!
ಹೊಟ್ಟೆದುಡಿತಕಾಗಿ ತ್ರಾಣವಿಲ್ಲದಲ್ಲಿ
ಕತ್ತ್ವಸ್ಪ್ಫಲನದ ಹುಚ್ಚು ಕಾರಭಾರ!
ಇದ್ದ ಅಸುವೇ ಉಸಿರಿಗಾಗಿ ಒದ್ದಾಡುತಿರುವಲ್ಲಿ
ಈ ದರಿದ್ರ ಅನಾಥ ಸಂತಾನಭಾರ.
ಆದರಲ್ಲೇನಿದೆ ಮಹಾ?
ಆದೇನು ಗದ್ದೆ ಉಳುವಂತಾಯಿತೇ?
ಗಿರಣಿ-ಕಾಖಾ ರ್ನೆ ಚಲಿಸಿದಂತಾಯಿತೇ?
ಸ್ಫುಟ್ನಿಕ್ಕಿನಾಟದೆದುರು ಈ ಶಬ್ದಾರ್ಥ ಡೊಂಬರಾಟವೇ ಮರುಳಾ?
ಥಾಮ್‌ಥಾಮ್ ಎನ್ನುವಷ್ಟರಲ್ಲಿ
ಜನತೆ ತೊಲಗಿಹೋಯಿತು ನೋಡು.
ಕಷ್ಟ ಚಟಸಟಿಸಿ ಸಿಗುವಂತಹುದಾದರೂ ಏನು?
ಮನೆಯವರ ಬೈಗುಳೋ ಜನರ ತೊಂಗಲೋ?
ದೊಡ್ಡವರ ಸಿಹೋಕ್ತಿ ಮೌಕ್ತಿಕಗಳೋ?
ಎಲ್ಲವೂ ಸರಿಯೇ.
ಇನ್ನ ತಾನೇ ಕಿರೀಟ ಧರಿಸಿ ಗದ್ದುಗೆಯೇರಿ ಕುಳಿತೆ.
ಬಾ ಎಂದರೆ ಒಬ್ಬ ಚಪರಾಸಿಯೂ ಓಗೊಡುವವನಿಲ್ಲ!
ಹೈಮತುಂಬ ಹಾರಿಹಾರಿ ಹಕ್ಕಿಯೇನೊ ರತ್ನ ಹಕ್ಕಿತು–
ಗಡ ಮರ ಬಂಡೆ ಹಲ್ಲುಕಿಸಿದು ನಕ್ಕುವು.
ಹಕ್ಕೆ ಮಾತ್ರ ರಿಕಾಮಿಗೂಡು ಹೊಕ್ಕಿತು.
ಸಾಕಿನ್ನು ಈ ಮಾಯಾಜಾಲ;
ಇದು ಅನ್ನಾವತಾರಕಾಗಿ ನರ ನರನ ಹೊಸ್ತು ಕಾಲ.
ಇದ್ದ ಸಂತಾನವೇ ಗತಿಯಿಲ್ಲದಿರಲು
ಮತ್ತೆ ಹುಟ್ಟಿಸಿ ಪಾತಕಿಯಾಗುವೆಯೇನು?
ಈ ಮಿಥ್ಯಾಡಂಬರ ತೊರೆದು ಬಾ ವನದೆಡೆ,
'ಕರತಲ ಭಿಕ್ಷಾ ತರುತಲವಾಸಃ' ಎನ್ನು,
ಮತ್ತೆ ಕಾಷಾಯಾಂಬರ ಉಟ್ಟು ಬಾ!
ಅಹಾ ಮಹಾವೃಕ್ಷದಡಿ ಮುನಿ ಧ್ಯಾನಮಗ್ನ.
ಕುಟೀರಪದದಿಂದ ಪ್ರಾಸಾದಪದಕ್ಕೇರುವ ಸಾಹಸಯಜ್ಞ.
ಮಾಯಾಪಾಶದ ನೇಣತೊಡೆದು ನಿರಂತರ ನಿರ್ವಿಘ್ನ–
ಇನ್ನು ದಾರಿ ನೇರ.
ಸುದಾಮನಾಗುವ ಕುಬೇರ.
ಭೂಮಿಯೊಂದು ಸಾಲದೇ
ಬ್ರಹ್ಮಲೋಕಕ್ಕೆ ತೆರಳುವನು ಸ್ಫುಟ್ನಿಕ್ಕುವಾಹನನಾಗಿ.
'ಲೈಕಾ' ಎನೋ ಸತ್ತಿತು, ಇವನಿಗಿಲ್ಲ ಮರಣ
ಅದೋ, ಬ್ರಹ್ಮಾಂಡ ಬೆಳಗಿಸುವ ತೇಜ ನೋಡು.
ಕಣ್ಣೆರಡೂ ದಶದಿಕ್ಕುಗಳನರಸುತಿರಲು.
ಕೈಗಳೆರಡೂ ಚುಕ್ಕಿರತ್ನಗಳನೆಣಿಸುತಿರಲು
ಕಾಲ್ಗಳೆರಡೂ ಪಾತಾಳತಳ ಮೆಟ್ಟುತಿರಲು
ಮನ ಅಲಕೆಯನು ಕಟ್ಟುತಿರಲು
ಒಮ್ಮಿಂದೊಮ್ಮೆಲೇ ಇಳಿದಳೋ ಮೇನಕೆ
ಧ್ಯಾನಮಗ್ನನ ತಪೋವನಕೆ.
ಝಗ್ಗನೆ ನಿಂತಳು ವಿದ್ಯುಲ್ಲತೆಯಾಗಿ
ಪ್ರತಿಮಾಮೂರ್ತಿಯಾಗಿ.
ಇಂತಹ ಪ್ರಸಂಗ ನಾನೆಂದೂ ಕಂಡಿಲ್ಲವೋ!
ಮಾರುತ ಸೆಳೆಯುತಿದ್ದ ಸೀರೆಯ ಸೆರಗು,
ಬಹ್ಮಾಂಡವನ್ನುದ್ದೀಪಿಸಿರು ತೊಡೆ-ತೋಳುಗಳ ಕಾಂಚನಮೆರುಗು!
ಟೊಂಗೆ-ಟಿಸಿಲು ಒಸರಿಸಿದುವು ಹೂಬುರುಗು.
ಸಂಧ್ಯೆ ಹೊಡೆದಳು ಸಪ್ತವರ್ಣದ ಕಾರಂಜಿ
ತೃಣಹಾಸಿತು ಶತರಂಜಿ.
ಅಹಾ! ಥಕಥೈ ಥಕಥೈ ಥಕಥೈ ಥೈಥೈ.
ಜಾಲವ ಬೀಸಿತು ಕೇದಗೆಯಂಗೈ.
ಎದೆಯಲೆದ್ದಿತು ಅಲೆಯಲೆಯ ತುಫಾನ.
ನರನರ ಮಿಡಿಯುತಿವೆ ನಾದಲಯ ಸಮಾನ.
ಪ್ರಾಣವುಕ್ಕುಸಿದೆ ಬುಗ್ಗೆಯಾಗಿ
ಬಾಹು ತುರಿಸುತಿವೆ ಅಪ್ಪುಗೆಗಾಗಿ.
ತುಟಿ ಕಂಪಿಸುತಿವೆ ಹನಿಜೇನಿಗಾಗಿ.
ಒಂದೇ ನಿಮಿಷದಲಿ ನೆತ್ತರ ಕತ್ತಲಾಟ!
ಅದೋ, ಬ್ರಹ್ಮಾಂಡ ವಿಹರಿಸುವ ಮನವಳಿಯಿತೋ
ಬಾಹುಶಯ್ಯೆಯ ಗವಿಗೆ.
ಗುಡಿಯ ಕೆಂಡಿ ಕದ ಮುಚ್ಚಿದುವಾಗ.
ರಕ್ತ ಮಾಂಸಪಿಂಡದಲಿ ಬೆಳೆದ ಜೀವವೊಂದು
ಪ್ರಣವಾಲಾಪವನ್ನಳುತಿತ್ತು ಕಾಡಿನಲಿ.
ಅದೋ, ತೇಜಃಪುಂಜ ಶಬ್ದ-ಶಕುಂತಲಾ!
ಹಕ್ಕಿಯುಣಿಸುವಂತಾಯಿತೋ ಫಲರಸ.
ಎಂಥ ತೋಚಿನೀಯ ಪ್ರಸಂಗವಲ್ಲಾ?
ಅಮ್ಮ, ಅದಾಗಲೇ ಮಾಯ.
ಅಪ್ಪಾ, ಪುನಶ್ಚ ಧ್ಯಾನಮಗ್ನ, ಇಲ್ಲ ಸಮಯ.
ಅದೊಂದೇ ಒದ್ದಾಡುತಿದೆ ಬೆಳಕಿಗಾಗಿ, ಬದುಕಿಗಾಗಿ.
ಆ ಸೌಂದರ್ಯವಾಹಿನಿ ನಾದಲಯಮೋಹಿನಿ
ಪ್ರತಿಮಾಶಿಲ್ಪಕಾಮಿನಿ ಪ್ರತೀಕ ಸೌದಾಮಿನಿ-
ಆ ತೇಜವತಿ ಶಕುಂತಲಾ.
ಎಂದು ಸಿಗುವುದೇನೋ ಕಣ್ಮಕೈ.

ಕಣ್ಣಿಲ್ಲದಾಗ!

(ಸಣ್ಣಕತೆ)

ಲೇ. "ರಂಜನ"ಭಟ್ಟ, ನಾಗಪುರ

ನಾಗರಿಕತೆ ಬೆಳೆದು, ನಾಚಿಕೆಗೇಡು ಯಾವುದೆಂಬುದರ ತಿಳಿವು ಮೂಡಿ, ಮುನ್ನೂರಂಗಗಳನ್ನು ಮುಚ್ಚಿಕೊಳ್ಳುವ ಸಂಪ್ರದಾಯ ಬಂದರೂ, ಮಾನವಸ್ವಭಾವದಲ್ಲಿಯ ಕಾಮುಕುತೂಹಲ ಕಡಿಮೆಯಾಯಿತೆ? ತದ್ವಿಪರೀತವಾಗಿ ಆ ಕುತೂಹಲ ಮತ್ತಿಷ್ಟು ಬೆಳೆಯಿತು.

"ಹುಟ್ಟಿಸಿದವನಿಗೆ ಕಣ್ಣಿಲ್ಲ—ಕಣ್ಣಿರಬಾರದು—ಆ ದೇವದೇವ, ಸೃಷ್ಟಿಕರ್ತ ಕುರುಡ...." ಎಂದು, ನಮ್ಮೆಲ್ಲರಲ್ಲಿ "ಹರಟೆಮಲ್ಲ" ಎನಿಸಿದ ಗೆಳೆಯ ಮಲ್ಯನು, ನನ್ನ ಅರುತಿಂಗಳ ಏಕಮಾತ್ರ ಗಂಡುಮಗುವನ್ನು ವಿಧಾತ ಕಳಚಿದನಲ್ಲಾ—ಎಂದು ಕಣ್ಣೀರು ಬಿಡುತ್ತಿದ್ದ ನನಗೆ ಸಮಾಧಾನ ಹೇಳುತ್ತಿದ್ದ. ಆ ಮಾತಿನ ಸಮರ್ಥನೆಗೋ, ಅಥವಾ ನನ್ನ ದುಃಖವನ್ನು ಮರೆಸಲೋ, ಅವನು ತಾನೆಲ್ಲೋ ಕೇಳಿದ ಕತೆಯನ್ನೊಂದು ಹೇಳಿದ. ನನ್ನ ಗತಿಸಿದ ಮಗುವಿನ ನೆನಪಾದಾಗಲೆಲ್ಲ, ಯಾಕೋ ನನಗೆ ಆ ಕತೆಯು ನೆನಪಾಗುತ್ತದೆ. ಮಲ್ಯ—ಮೊದಲೇ ಹೇಳಿದ್ದೇನೆ, ಹರಟೆಮಲ್ಲನೆಂದು—ಕತೆ ಹೇಳುವುದರಲ್ಲಿ ಹುಶಾರಿ; ಅವನ ನೈಪುಣ್ಯ—ಕತೆ ಹೇಳುವುದರಲ್ಲಿ—ನನಗಿಲ್ಲವೆಂದುಕೊಂಡು, ಅವನು ಹೇಳಿದ ಕತೆಯನ್ನು ಕೇಳಿದಾಗ, ನನ್ನ ಕಣ್ಣಲ್ಲಿ ದುಃಖದ ತುಂಗೆ ಒಸರುತ್ತಿದ್ದುದರಿಂದ, —ಈಗಲೂ ಒಸರುತ್ತಿದೆ—ಅವನು ಹೇಳಿದ ಕತೆಯನ್ನು ನಾನು ಸರಿಯಾಗಿ ಗ್ರಹಿಸಿಲ್ಲವೆಂಬುದನ್ನು ಒಪ್ಪಿಕೊಂಡು, ನನ್ನ ಮಾತಿನಲ್ಲಿಯೇ ಅವನ ಕತೆಯನ್ನು ಇಳಿಸುತ್ತಿದ್ದೇನೆ.

ಆ ನಾಡಿನಲ್ಲಿ,—ಅದಾವ ನಾಡೋ ನಾನು ತಿಳಿಯೆ—ಯಾರೂ ವಸ್ತ್ರವನ್ನುಡುತ್ತಿದ್ದಿಲ್ಲ. ಅಡಿಯಿಂದ ಮುಡಿಯ ವರೆಗೆ ನಿಸರ್ಗ ನಗ್ನನಾಗಿರುವುದು ಅವರಿಗೆ ನಮ್ಮಂತೆ ನಾಚಿಕೆಯಾಗಿದ್ದಿಲ್ಲ; ಹುಟ್ಟಿನಿಂದಲೇ, ಗಂಡು-ಹೆಣ್ಣಿನ ರಹಸ್ಯ, ನಗ್ನತೆ ಮಾಯುವಾಡಿದ್ದರಿಂದ, ಹಾಡ ಹಗಲಿನಲ್ಲಿಯು "ಥೂ ನಾಚಿಕೆ ಇಶ್ಕೆ" ನಗ್ನದೇಹವನ್ನು ಮುಚ್ಚಲು ಅಲ್ಲಿಯು ಮನುಷ್ಯಜೀವಿಗಳು ತವಕಾಡುತ್ತಿದ್ದಿಲ್ಲ—ಇದು ಹೇಗೆ ಸಾಧ್ಯ?—ಎಂದು ಮೂಗುಮುರಿಯುವ ಬಾಧು-ಭಗಿನಿಯರು ನಮ್ಮ ಸುತ್ತುಮುತ್ತಿರುವ ಗಿಡ-ಬಳ್ಳಿಗಳನ್ನೋ ದನ-ಕರುಗಳನ್ನೋ ನೆನೆದುಕೊಳ್ಳಿ; ಆಗ ವೈಕಾಸ ಬಿಟ್ಟೀತು—ಹಾಗಾದರೋ? ಥೋಥೋ ಎಂದು ನಿಸರ್ಗ ಮಳೆಸುರಿದಾಗ, ಅಲ್ಲಿಯು ಜನರ ವೈ ಮುಳ್ಳುಮುಳ್ಳಾದಾಗ, ಶೀತವನ್ನುಂಡ ದೇಹ "ಬೆ-ಬೆ" ಎಂದು ಬಾಯಿಯನ್ನು ಅಲುಗಿಸಿದಾಗ, ಅಲ್ಲಿಯು ಜನಸ್ತೋಮ ಚಳಿಯಿಂದ ವೈಯನ್ನು ಮುರುಟುತ್ತಿದ್ದರು. "ಉಹುಹು" ಎಂದು ನಡುಗುತ್ತಿದ್ದರು ಅಬಲೆಯರಾದ—ಆ ನಾಡಿನಲ್ಲೂ ಸ್ತ್ರೀಯರು ಅಬಲೆಯರಾಗಿದ್ದರು—ಹೆಂಗುಸರು, ಮಕ್ಕಳು, ಮನೆಯ ಹತ್ತಿರದ ಗಿಡ-ಮರಗಳ ಎಲೆಗಳಿಂದಲೋ, ಚರ್ಮಗಳಿಂದಲೋ ವೈಯನ್ನು ಮುಚ್ಚಿಕೊಂಡು, ಮಕ್ಕಳನ್ನು ಹೊದಿಸಿ, ಚಳಿತಾಪನ ಗುಣಗಾನ ಮಾಡುತ್ತಿದ್ದರೆಂದು ಇಟ್ಟುಕೊಳ್ಳಿ.

ಹೀಗೆ ದಿನಗಳು ಸಾಗಿದಾಗ....ಆ ನಾಡಿನಲ್ಲಿ ಒಬ್ಬ ವಿಭೂತಿ-ಪುರುಷನ ಜನನವಾಯಿತು; ಎಲ್ಲ ವಿಭೂತಿಪುರುಷರ ಜೀವನದಲ್ಲಿಯು ಏನಾದರೊಂದು ಮಾಯೆ ಇದಂತೆ, ಆ ವಿಭೂತಿಪುರುಷನು, ವಸ್ತ್ರವನ್ನು ಕಂಡು ಕೇಳಿ ಹೊದ್ದರಿಯದ ಆ ನಾಡಿನಲ್ಲಿ, ಬಾಲ್ಯದಿನಲೇ "ಶೀತ ರೋಗಿ" ಎನ್ನಿಸಿಕೊಂಡು ಬೆಳೆದ;—ಅಲ್ಲಿಯೂ ಶೀತರೋಗಿಗಳು ಕೆಮ್ಮುತ್ತಿದ್ದರು. ಕೆಮ್ಮು ಬಹಳವಾದಾಗ ವೈ ಪುಸು ಕಾಯುತ್ತಿತ್ತು. ಮತ್ತೆ ತಲೆ ಪುಸು ನೋಯುತ್ತಿತ್ತು ಎನ್ನಿ—ಶೀತದಿಂದ ವೈ ಮುರುಟಿಸಿಕೊಂಡು ಬೆಳೆದ ಆ ಶಿಶುವಿಗೆ ಸಹಜವಾಗಿಯೇ, ಶೀತದತ್ತ ತಲೆಹರಿಯಿತು. ಅದಕ್ಕೆ ಕಾರಣ ಬೇರೆ ಹೇಳಬೇಕೆ?

ಶತ-ಶತಮಾನಗಳಿಂದ ಆ ವಿಭೂತಿಪುರ ಸಹ ತಾತ ಮುತ್ತಾಂದಿರು ಅಭಿಪ್ರಾಯವಸ್ತ್ರವಾಗಿ "ಶೀತೇನ ಸಹ ಜನನಂ; ಶೀತೇನೈ ಸಹ ಮರಣಾ" ಎನ್ನಿಸಿಕೊಂಡಿದ್ದರು. ವಸ್ತ್ರದ ಹೊದಿಕೆಯಿಲ್ಲದೆ, "ರರ್ರರ್ರಾ" ಎಂಬ ನಿಸರ್ಗದ—ಕ್ರೋಧಗೊಂಡ ನಿಸರ್ಗ-ಶೀತದ ಕೋಲಿನ ಬಡಿತಕ್ಕೆ "ಬೆಯ್ಯೋ ಬೆಯ್ಯೋ" ಎಂದು ಒರಚಿ, ಅರಚಿ ವಿಲವಿಲ ಒದ್ದಾಡಿದ್ದರು. ಇವೆಲ್ಲವನು ಆ ವಿಭೂತಿಪುರುಷ ತನ್ನ ಬಾಲ್ಯದಲ್ಲಿಯೇ ಸೂಕ್ಷ್ಮವಾಗಿ ಗ್ರಹಿಸಿದ ಹೀಗೆ ಗ್ರಹಿಸಿದ ಆ ಬಾಲ, ಶೀತದ ಬೇರನ್ನು ಕಂಡುಹಿಡಿಯಲು ನಿರ್ಧರಿಸಿದ.—ಮತ್ತೊಂದು ಮಾತನ್ನಿಲ್ಲಿ ಹೇಳಲೇಬೇಕು: ಶೀತದಲ್ಲಿಯು ಅಸಹಾಯತೆಯನ್ನು ಬಿಟ್ಟರೆ, ಆ ಜನಕ್ಕೆ, ಆ "ರಾಮರಾಜ್ಯ"ದಲ್ಲಿ

ಬೇರಾವ ಕೊರತೆಯೂ ಇದ್ದಿಲ್ಲ; ಹೀಗಿದ್ದಾಗ ಬೇರಾವುದರ ಬಗ್ಗೆ ಆ ದಿವ್ಯಾಂಶ ಲಕ್ಷ್ಯವಹಿಸಬೇಕು?—ಈ ಮನೋಭಾವದಲ್ಲೇ ಆ ಭವಿಷ್ಯತ್ತಿನ ವಿಭೂತಿಪುರುಷ ಒಂದು ದಿನ, ವಿಷಣ್ಣವದನನಾಗಿ ಕೆಮ್ಮುತ್ತ ತನ್ನೂರ ಬಳಿಯ ಹುಲ್ಲುಗಾವಲಿನ ಮಧ್ಯದ ಒಂದು ಬಂಡೆಗಲ್ಲಿನ ಮೇಲೆ ಕುಳಿತು, ಸುತ್ತೆಲ್ಲ ದೂರ ದೂರ ದಿಗಂತದತ್ತ ದೃಷ್ಟಿ ಹರಿಸಿದಾಗ.....

ಆದೇ ಆಗ, ಸೂರ್ಯ ಮೂಡಿ ಮೇಲೇರುತ್ತಿದ್ದ. ಮೂಡಲೆಲ್ಲ ಕೆಂಪುಕೆಂಪಾಗಿ, ಆಗಸವೆಲ್ಲ ಪುಟಗೊಂಡಿತ್ತು. ಅಲ್ಲೊಂದು ಹಕ್ಕಿ. ಇಲ್ಲೊಂದು ಹಕ್ಕಿ "ಟೀವ್-ಟೀವ್" ಎಂದು ನಭದಲ್ಲಿ ಹಾರುತ್ತಿದ್ದುವು. ಬಿಸಿಲೇರಿದಂತೆ, ಅಲ್ಲಿಯ ಹವೆ ಹಿತವಾಗಿತ್ತು. ಹಾಯಾಗಿ ಮೈ ಕಾಸಿಕೊಳ್ಳೋಣವೆಂದು, ಊರಿನ ಕೆಲ ಕನ್ನಿಕೆಯರೂ ಆ ಹುಲ್ಲುಗಾವಲ ಬಳಿಯಲ್ಲೇ ಬಂದಿದ್ದರು. ಹೀಗೆ ನಮ್ಮ ಕಥಾನಾಯಕ ಸೂರ್ಯನ ಕೃಪಾಭಕ್ತದಲ್ಲಿ, ಸುತ್ತಲಿನ ನಿಸರ್ಗರಮ್ಯತೆಯನ್ನು ಮನವಾರೆ ಕಂಡು ಮನದಲ್ಲಿಯೇ ನಲಿಯುತ್ತಿರಲು, ಮೈ ನವಿರುನವಿರಾಗಿರಲು.....

ಭೋರೆಂದು ಬೀಸಿತ್ತು ಬಿರುಗಾಳಿ! ಅಬ್ಬಬ್ಬಾ, ಏನು ತಂಪುಗಾಳಿ, ಏನು ಶೀತಲಗಾಳಿ! ವಿಭೂತಿ ಪುರುಷ ನೋಡುತ್ತಿದ್ದಂತೆಯೇ, ಅವನ ಮೈ ತಾನೇ ತಾನಾಗಿ ಮುಳ್ಳು-ಮುಳ್ಳಾಗಿರಲು, ಕನ್ನಿಕೆಯರೆಲ್ಲ ಹುಲ್ಲಿನಲ್ಲಿ ತಮ್ಮ ಮೈಯ ಎಚ್ಚ ಕೊಂಡರು. ವಿಭೂತಿಪುರುಷನೂ ಹಾಗೆಯೇ ಹುಲ್ಲಿನಲ್ಲಿ ತನ್ನ ಮೈಮುಚ್ಚಿಕೊಂಡ;—ಬೇರೆ ಉಪಾಯವೇನು? ಹೀಗೆ ಹುಲ್ಲಿನಲ್ಲಿ ಅವಿತುಕೊಂಡು ತನ್ನ ಅಸಹಾಯತೆಯನ್ನು—ಏಕೆ ತನ್ನವರ, ತನ್ನ ಬಾಳಿನ ಅಸಹಾಯತೆಯನ್ನು—ಎಣಿಸಿ, ಕಣ್ಣಲ್ಲಿ ನೀರುತಂದು ಮೇಲೆ ಮುಖವೆತ್ತಿದಾಗ....ಅದೋ ಬಾಂದಳದಲ್ಲಿ ಹೊಳೆಯುತ್ತಿದ್ದ ರವಿ, ಒಮ್ಮಿಂದೊಮ್ಮೆಲೆ ಮೋಡಗಳಲ್ಲೆ ಅದೃಶ್ಯನಾದನು. ಕೆಲಹೊತ್ತಿನಲ್ಲಿ ಮತ್ತೆ ರವಿ ತಲೆ ಕಾಣಿಸಿದಾಗ.....

"ಆನಂದ, ಆನಂದ, ಪೇರಾನಂದ..." ಎಂದು ಒಮ್ಮೆಲೆ ವಿಭೂತಿಪುರುಷ ಜಿಗಿದು ಹಾರಿದ; ಎಂದಿಲ್ಲದ ಅವನಲ್ಲಿಯ ನಲಿವು ಮೇರೆವೊಡೆದು ನೃತ್ಯದ ರೂಪವನ್ನು ತಾಳಿತ್ತು; ಈ ಸಚ್ಚಿದಾನಂದ ಚಿನ್ಮಯತೆಯಲ್ಲಿ ತಾನೇ ತಾನಾಗಿ ಮುಳುಗಿ ರಾರಾಜಿಸುತ್ತಿದ್ದ ಈ ಚಿದಂಶ ಸತ್-ಸ್ವರೂಪನನ್ನು, "ಏನು ವಿನೋ"ದ ಆ ದಿಙ್ಮೂಢರಾದ, ಅಲ್ಪಮತಿಗಳಾದ ಕನ್ನಿಕೆಯರು ಕೇಳಲು, "ತಿಳಿಯಿತು, ತಿಳಿಯಿತು, ನೋಡ! ಹ್ಹೆಹ್ಹ-ನೋಡ...." ಎಂದು ಕೆರುಚಿದ. ಇವನ ಭಾಷೆ-ವಿಚಾರ ಸಂತಸಗಳನ್ನರಿಯದ ಆ ಮುಗ್ಧಕನ್ನಿಕೆಯರು ಧಾವಿಸಿ ಬಂದು ಊರಲ್ಲಿ ಸುದ್ದಿ ಒಡೆದರು. ಆಗ ಊರ ಜನರೆಲ್ಲ ಅವನೆಡೆಗೆ ಧಾವಿಸಿ, ಅವನ ಸುತ್ತುವರಿದಾಗ, ಅವನು ಹೀಗೆ ಹೇಳುವಂತಹನಾದ:

"ಜೋರಾಗಿ ಗಾಳಿ ಬೀಸಿದಾಗ, ನಮ್ಮೆಲ್ಲರ ಮೈ ನಡುಗಿದಂತೆಯೇ, ಸೂರ್ಯನ ಮೈ ನಡುಗಿತು; ಆಗ ಸೂರ್ಯ ಏನು ಮಾಡಿದ ಗೊತ್ತೆ?—ಸನಿಯವಿದ್ದ ಮೋಡವನ್ನು ಸೇರಿದ; ಮತ್ತೆ, ಗಾಳಿ ಬೀಸುವುದು ನಿಂತಾಗ, ಶೀತವಿಲ್ಲವಾದಾಗ, ಸೂರ್ಯ. ಮೋಡದಿಂದ ಹೊರಗೆ ಬಂದ;...."ಅದ್ದರಿಂದ ತಿಳಿಯಿತು, ತಿಳಿಯಿತ ನನಗೆ ತಿಳಿಯಿತು; ನೋಡ, ನೋಡ...." ಅವನು ತಲೆತಿರುಗಿ ಕಣ್ಣು-ಕತ್ತಲೆ ಬಂದು ಮೂರ್ಛೆ ಹೊಂದಿದ; ಅವನ ಉನ್ಮಾದ ಅಸ್ವಾಗಿತ್ತು, ಮೈ ಎಚ್ಚರ ತಪ್ಪಿಸುವಷ್ಟು; ಸೇರಿದ ಜನ ತಣ್ಣೀರು ಬಡಿದು ಅವನನ್ನು ಎಚ್ಚರ ಬರಿಸಿದಾಗ ಅವನ ಉನ್ಮಾದ ಇಳಿದಿತ್ತು: ತನ್ನನ್ನು ಅವನು ಅರಿತಿದ್ದ. ಆಗ ಅವನು ತನಗೆ ತಿಳಿದುಬಂದ ರಹಸ್ಯವನ್ನು ಸುರಿದ:

"ಸೂರ್ಯನ ಸನಿಯ ನೋಡವಿರುವುದರಿಂದ, ಸೂರ್ಯನಿಗೆ ಶೀತವಾಗುವುದಿಲ್ಲ; ನಮಗೆ ಶೀತವಾಗುವುದು ನಮ್ಮ ಹತ್ತಿರ "ನೋಡ" ವಿಲ್ಲದುದರಿಂದ—"

ನೆರೆದ ಜನ ಕಣ್ಣರಳಿಸಿ ಕೇಳಿದರು. ಕವಿಯನ್ನು ಉದ್ದಮೂಡಿ ಕೇಳಿದರು; ಕೇಳಿ ಉಸ್ಸೆಂದು ಹಲ್ಲುಕಿರಿದರು. ಈ ಮಹಾಸಿದ್ಧಾಂತದ ಅರಿವಾದುದು ಆ ವಿಭೂತಿಪುರುಷನ ಬಾಳಿನಲ್ಲಿ ಚರಿತ್ರಾರ್ಹವಾದ ಸಂಗತಿ: ಹೀಗೆ ತಿಳಿವಾದ ಆತ, ಅಲ್ಲಿಂದ ಮುಂದೆ ತನ್ನ ಸಮಾಜವನ್ನು "ನೋಡ"ವನ್ನು ಹುಡುಕುವುದರಲ್ಲಿ, ತನ್ನವರನ್ನು ತಲೆತಲಾಂತರದಿಂದ ಬಂದು ತೀಗಿದ ಶೀತ-ಚಳಿಯನ್ನು ಹೋಗಲಾಡಿಸಲು, ಕಳೆದನೆಂದು ಬೇರೆ ಹೇಳಬೇಕಿಲ್ಲ. ಹಾಗೆ ನಿರ್ಧರಿಸಿದ ಆತ, ಅಲ್ಲಿಂದ ಮುಂದೆ ಸರಿಯಾಗಿ ಉಣ್ಣಲಿಲ್ಲ, ತಿನ್ನಲಿಲ್ಲ, ಕಾಡಿಯಲಿಲ್ಲ; ಮಾತನ್ನಂತೂ ಬಹುಕಡಿಮೆ ಮಾಡಿದ; ಯಾವಾಗಳೂ ಏನೋ ಒಂದು ತರದ ಮಂಕು-ಮರವೆಯಲ್ಲಿರುತ್ತಿದ್ದ. ಮನೆಯಲ್ಲಿರುವುದೂ ಅಪರೂಪ; ಯಾವಾಗ ನೋಡಿದರೂ ಆ ಹುಲ್ಲುಗಾವಲಿನಲ್ಲಿ ಊರ್ಧ್ವಮುಖಿಯಾಗಿರುತ್ತಿದ್ದ. ವರುಷಗಳು ಕಳೆದು, ವರುಷಗಳು ಮೂಡಿದುವು. ಹೀಗೆ ಆತ ಕಾಲಕಳೆಯುತ್ತಿರಲು—

ಅದೊಂದು ದಿನ; ಮುಂಜಾನೆಯ ನಿತ್ಯನೂತನತೆಯಿಂದ ಬುವಿ ಬೆಡಗುಗೊಂಡಿತ್ತು. ಆಗಸದಲ್ಲೆಲ್ಲಾ ಹಿಂಜಿದ ಹತ್ತಿಯಂತೆ ಮೋಡಗಳು ಚೆದರಿದ್ದವು; ಸೂರ್ಯನೇನೋ ಥಳಥಳಿಸುತ್ತಿದ್ದ. ಎಂದಿನಂತೆ ಊರ್ಧ್ವಮುಖಿಯಾಗಿ ಕುಳಿತಿರಲು, ವಿಭೂತಿಪುರುಷ .....ಮತ್ತೆ ಎಲ್ಲಿಲ್ಲದ ಬಿರುಗಾಳಿ ಬೀಸಿತು!!! ಮೈನವಿರುಗೊಳಿಸುವ ಶೀತಲ, ಶೀತಲತಮ ಗಾಳಿ! ಶೀತದ ಕಾರಣವನ್ನು ಕೆಣಕಿ ತಿಳಿದ "ಬುದ್ಧ" ಈ ಸಲ ಕದಲಲಿಲ್ಲ. ಅನಿಮಿಷನಾಗಿ ಆಗಸವನ್ನೇ ದಿಟ್ಟಿಸಿ ಕುಳಿತ. ಮೈ ಮುಳ್ಳಾಯಿತು; ನೆಟ್ಟೆದು ಸೊಟ್ಟಾಯಿತು; ಇಲ್ಲ, ಆತ ಚಲಿಸಲಿಲ್ಲ—ಏನಾಶ್ಚರ್ಯ, ನೋಡಿದಿರಾ! ಆಗಸದಲ್ಲಿ ಚೆದರಿದ ಮೋಡಗಳ ತುಣುಕುಗಳೆಲ್ಲ ಭರಭರನೆ ಒಂದೆ ಒಂದಾದುವು; ಸೂರ್ಯ ಸನಿಯ ಬಂದ; ಒಂದಾದ ಮೋಡದಲ್ಲಿ ಸೂರ್ಯ ಒಳಸೇರಿದ .....

ತಿಳಿವಿನ ಹುಳು ವಿಭೂತಿಪುರುಷನ ತಲೆಯನ್ನು ತಿರಿದಿತ್ತು; ತೂರಿಬಂದ ಗಾಳಿ, ಅವನೆದುರು ಯಾವುದೋ ಹತ್ತಿಯ ಗಿಡದ ಬಿರಿದ ಹತ್ತಿಯ ಕಾಯನ್ನು ಹಿಡಿದಿತ್ತು. ತಟ್ಟನೆ, ಅವನಿಗೆ, ಚೆದರಿದ ತುಣುಕುಮೋಡದ ನೆನಪಾಯಿತು; ಆಗಸದಲ್ಲಿಯ ತುಣುಕು ಮೋಡ, ಚೆದರಿದ ಮೋಡ, ಭೂಮಿಯಲ್ಲಿಯ ಬಿರಿದ ಹತ್ತಿಯ ಹಾಗೆ;

ಗಸದಲ್ಲಿಯು ತುಣುಕು ಮೋಡ, ಬೆದರಿದ ಮೋಡಗಳೆಲ್ಲ ಕೂಡಿ ಯಾದ ಮೋಡ....ಅಹುದು, ಅಹುದು, ಈ ಹತ್ತಿಯ ಕಾಯಿಗಳನ್ನು ಒಟ್ಟುಹಾಕಿ ಮನುಷ್ಯ ಹೊದೆಯುವ ಮೋಡ ತಯಾರಿಸಬೇಕು—ಶತ-ಶತಮಾನಗಳಿಂದ ಯಾರಿಗೂ ತಿಳಿಯದ ಅರಿಯದ ಗೂಢ, ವಿಭೂತಿಪುರುಷನಿಗೆ ಮಿಂಚಿನಂತೆ ಹೊಳೆದಿತ್ತು.

× × × ×

ಹುಲ್ಲುಗಾವಲಿನ ಬದಲು ಈಗ ಹತ್ತಿಯ ಹೊಲವೆದ್ದಿತು: ಹಗಲು- ರಾತ್ರಿಯೆನ್ನದೆ ವಿಭೂತಿಪುರುಷ "ಹತ್ತಿಯನ್ನು ಹೇಗೆ [illegible]ವುದು?" ಎಂದು ಚಿಂತಿಸುತ್ತಿದ್ದ. ಹಾಗೆಯೇ ಮುಂದು- [illegible]ವ ಮುದಲ್ಲಿ ನೂಲುವುದನ್ನೂ ನೇಯುವುದನ್ನೂ ಕಲಿತ: ಮನಸ್ಸಿದ್ದಲ್ಲಿ ಮಾರ್ಗವಿದೆ" ಎನ್ನುವರಲ್ಲಾ?

ಹೀಗೆ ತನ್ನ ವಯಸ್ಸಿನ ಮೂವತ್ತೈದರಲ್ಲಿ ಆ ವಿಭೂತಿಪುರುಷ ತನ್ನ ಬಾಲ್ಯದ ಕನಸನ್ನು ನನಸಾಗಿಸಿದ; ಮನುಷ್ಯರಿಗಾಗಿ ಅವನು "ಮೋಡ" (ನಮ್ಮ ಮಾತಿನಲ್ಲಿ. "ಬಟ್ಟೆ")ವನ್ನು ನಿರ್ಮಿಸಿದ.

ಆ ದಿನ ಎಂದಿನಂತೆ, ಮಗ್ಗದ ಮೇಲೆ ಮೊದಲ ವಸ್ತ್ರದ ಎಳೆ-ಎಳೆಯನ್ನು ನೇಯುತ್ತಿದ್ದ ಅದಾಗಲೇ ಸೊಂಟಕ್ಕೆ ಸುತ್ತುವಷ್ಟು ಗಲದ "ಮೋಡ" (ವಸ್ತ್ರ) ಸಿದ್ಧವಾಗಿತ್ತು. "ಮೋಡ" ನಿರ್ಮಾತೃ ಮತ್ತೂ ನೇಯುತ್ತಲೇ ಇದ್ದ: ಅಗ....ಅಗ....ಅಲ್ಲಿಗೆ ಐದಂದರು ಊರಿನ ಇಬ್ಬರು ತರಳೆಯರು. ತುಣುಕು "ಮೋಡ" ಮಗ್ಗದ ಮೇಲೆ ತಯಾರಾದಂದಿನಿಂದಲೂ, ಊರವರಿಗೆಲ್ಲಾ ಕುತೂ-ಹಲ ಕೆರಳಿತ್ತು. ಕೆರಳಿದ್ದೂ ಸಹಜವೇ! ಎಲ್ಲರಿಗೂ "ಮೋಡ" ವನ್ನು ಮುಚ್ಚುವ, ಹೊದೆಯುವ, ಚಪಲವೇ ಚಪಲ "ಮೋಡ" ತಯಾರಾಗಲಿ—ಎಂದು ಕಾದಿತ್ತು ಜನಸ್ತೋಮ. ಹಿರಿಯರಿಗಿಂತ ಕಿರಿಯರಿಗೆ ಚಪಲ ಹೆಚ್ಚಿರುವುದು ಸಹಜವೇ. ಅಂತೆಯೇ ಆ ತರ್ಕಳೆಯರು, ಬೆಳಗಾಗುವುದರೊಳಗೇ ಯಾರಿಗೂ ತಿಳಿಯದಂತೆ ಮಗ್ಗದ ಮನೆಯ ಬಾಗಿಲಲ್ಲಿದ್ದರು. "ಟಕ್-ಟಕ್-ಟಕ್", "ಮೋಡ"ದ ಬ್ರಹ್ಮ ಮಗ್ಗವನ್ನು ಸರಿದಾಡಿಸುತ್ತಲಿದ್ದ. ತರಳೆಯರು ತಡೆಯದ ಕುತೂಹಲಿಗಳಾಗಿ ಬಾಗಿಲನ್ನು ತಟ್ಟಿಯೇ ತಟ್ಟಿದರು ಎಂತಹ ಬ್ರಹ್ಮನ ಸಮಾಧಿಯನ್ನೂ ಭಂಗಗೊಳಿಸುವ ತರಳೆಯರ ತಾಕಲಾಟವದು; ಆದಾಗಲೇ "ಮೋಡ" (ವಸ್ತ್ರ) ಐದಾರು ಸ್ತೂಪು ಉದ್ದವಾಗಿತ್ತು. ಲಕಲಕನೆ ಹೊಳೆದು ಕಣ್ಣನ್ನು ಕುಕ್ಕಿತ್ತು ತನ್ನ ಕನಸು ನನಸಾದ ಪರಿತೋಷದಲ್ಲಿ, ಎಂದೆಂದಿನಿಂದಲೊ ಶೀತದ ಹೊಡೆತಕ್ಕೆ ಕುಗ್ಗಿದ ಮಾನವದೇಹವನ್ನು ಮುಚ್ಚುವ ಹಿಗ್ಗಿನಲ್ಲಿ, "ಮೋಡ"ದ ಬ್ರಹ್ಮ ಮಗ್ಗದ ಮನೆಯ ಬಾಗಿಲನ್ನು ತೆರೆದು ದೋಸೆಯನ್ನೂ ತಯಾರಾಗುವ ಮುನ್ನ "ಹಸಿ"ಯಾದರೂ ಅಡಿ ಇಲ್ಲ; ತಿನ್ನುವೆನೆಂಬ ಚಪಲ ಹುಡುಗರಿಗೆ; ಹೂ ಅರಳುವ ಮುನ್ ಮೊಗ್ಗೆಯನ್ನೇ ಹರಿದು ಮುಡಿಯುವ ಚಪಲ ಹುಡುಗಿಯರದು, ಈ ಇಬ್ಬರು ತರಳೆಯರೂ, ಆ ವಸ್ತ್ರವನ್ನು ಮಗ್ಗದಿಂದ ತೆಗೆದು, "ತನಗೆ ತೊಡಿಸು" "ತನಗೆ ತೊಡಿಸು" ಎಂದು ಕಾಡಿದಾಗ, ಮಾಡವು ದಾದರೂ ಏನು? ಬ್ರಹ್ಮನಿಗೂ ಮೊದಲ ಸೃಷ್ಟಿಯ ಬೆಡಗನ್ನು ತಿಳಿಯುವ ಸಂಭ್ರಮ! 'ವಸ್ತ್ರ' ತೆಗೆದದ್ದಾಯಿತು; ಒಬ್ಬಳ ಕುತೂಹಲವನ್ನು ಕೆಲಹೊತ್ತು ಒತ್ತಿ ಹಿಡಿಯಲು ಹೇಳಿ, ಇದ್ದೊಂದು ವಸ್ತ್ರವನ್ನು ಒಬ್ಬಳಿಗೆ ಉಡಿಸಿದ್ದಾಯಿತು: "ಬ್ರಹ್ಮ"ನ ಕೈ ನಡುಗುತ್ತಿತ್ತು: ತರಳೆಯ ಮೈ ನಡುಗುತ್ತಿತ್ತೆಂದು ಬೇರೆ ಹೇಳಬೇಕಿಲ್ಲ. ಸೊಂಟ-ದಿಂದ ಹೆಗಲವರೆಗೆ ಹರಡಿದ ಆ ವಸ್ತ್ರ, ಆ ತರಳೆಯನ್ನು ಇನ್ನೊಬ್ಬಳಿಂದ "ಬೇರೆ"ಯಾಗಿಸಿ ತೋರಿತ್ತು. ಬೇರಾರಿಗೂ ಇದುತನಕ ಇಲ್ಲದ "ಏನನ್ನೋ" ಹೊದೆದಿರುವೆನೆಂಬ ಹೆಣ್ಣಿನ ಸಹಜ ಬಿಗುಮಾನ ಬಂದು, ಆ ಕನ್ನೆಯ ಕೆನ್ನೆ ಕೆಂಪು-ಕೆಂಪಾಯಿತು; ತನ್ನನ್ನೇ ದುರು-ದುರುಸಿ ನೋಡುತ್ತಿರುವ ವಸ್ತ್ರ 'ಬ್ರಹ್ಮ"ನ—ಅಲ್ಲ, ಗಂಡಿನ—ಅರಿವಾಗಿ ಆ ತರಳೆ ನಾಚಿ, ತಲೆಕೆಳಗೆ ಹಾಕಿದಳು. ವಸ್ತ್ರ ವಿಹೀನೆಯ ಗರ್ವಭಂಗವಾಗಿ ಕತಕತನೆ ಕುದಿದಳು—ಅನ್ನಿ. ಬ್ರಹ್ಮನು ಮೊದಲ ಸೃಷ್ಟಿಯು ವೈವಿಧ್ಯ ಚೆಲುವನ್ನು ಮನವಾರೆ ಸವಿಯುತ್ತಿದ್ದ. "ವಸ್ತ್ರ ಶೋಭಿತೆ"ಯನ್ನು ಹತ್ತಿರ ಹತ್ತಿರ ಎಳೆದ; ಅವಳ ಸುತ್ತೆಲ್ಲ ಓಡಿದ; ಅವಳ ಮೈ ಮೋರೆಯ ಮೇಲೆ ಕೈಯಾಡಿತು; ಗಂಡುಹೆಣ್ಣಿನ ನೀತಿ-ನಿಯಮಗಳನ್ನರಿಯದ ಆ ತಿಳಿಯದ ತರಳೆಗಳು ಕಕ್ಕಾವಿಕ್ಕಿಯಾಗಿದ್ದುವು; ಮೂವತ್ತೈದು ವರ್ಷಗಳ ತನ್ನ ಬಾಳಿನಲ್ಲಿ ಹೆಣ್ಣಿನಲ್ಲಿ ಕಾಣದ ಚೆಲುವನ್ನು ಅವನು ಕಂಡಿದ್ದ; ಮುಚ್ಚಿದ ಅವನ ಕಣ್ಣು-ಗಳು ತೆರೆದಿದ್ದುವು; ಏನು ಮಾಡುತ್ತಿದ್ದೇನೆಂಬುದರ ಅರಿವಿಲ್ಲದೆಯೆ "ಬ್ರಹ್ಮ" ಹೆಣ್ಣನ್ನು ತನ್ನೆಡೆಗೆ ಬೆಳೆದು ತುಟಿಗೆ ತುಟಿಯಿಟ್ಟಿದ್ದ. ಆ ಹೆಣ್ಣಿನ ಚೀರಾಟ, ಹೋರಾಟದಲ್ಲಿ, "ವಸ್ತ್ರವಿಹೀನೆ" ಮಗ್ಗದ ಮನೆಯಿಂದ, ಭೀತಳಾಗಿ ವಸ್ತ್ರದ ಆಶೆಯನ್ನು ಬಿಟ್ಟು ಪಲಾಯನ ಹೇಳಿದ್ದಳು. ಊರಿನ ಹತ್ತುಸಮಸ್ತರು ಬಂದು, ಆ ಗಂಡಿನ ತೆಕ್ಕೆಯಿಂದ ಆ ತರಳೆಯನ್ನು ಬಿಡಿಸಿದರು ಎನ್ನಿ; ಅದು ಕತೆಗೆ ಮುಖ್ಯವಲ್ಲ. ಆಶ್ಚರ್ಯವೆಂದರೆ, ಆ ದಿನೆದಿಂದ ಆ "ಮೋಡ (ವಸ್ತ್ರ) ಬ್ರಹ್ಮ"ನ ಬುದ್ಧಿ ಸ್ಥಿಮಿತದಲ್ಲಿರಲಿಲ್ಲವಂತೆ. ಅಂದರೆ ಇಷ್ಟೇ; ಅವನಿಂದ "ವಸ್ತ್ರ"ವನ್ನು ಮಾಡುವುದನ್ನು ತಿಳಿದು ಆ ಊರಿನ ಜನರು ತಮ್ಮ ಮೈಯನ್ನು ವಸ್ತ್ರದಿಂದ ಮುಚ್ಚುವುದನೇನೊ ಕಲಿತರು; ಹಾಗೆ ಕಲಿತು, ವಸ್ತ್ರಭೂಷಿತರಾಗಿ, ಆ ಊರ ಜನರೂ ತಿರುಗಾಡಿ-ದವರಿನ್ನಿ. ಆದರೆ, ಹಾಗೆ ವಸ್ತ್ರಭೂಷಿತೆಯರಾಗಿರುವವರನ್ನು ಕಂಡಾಗಲೆಲ್ಲ, ಆ "ಮೋಡಬ್ರಹ್ಮ" ಹೌಹಾರಿ, ಅವರ ಸನಿಯ ಬಂದು ಅವರ ಮೈಯನ್ನೆಲ್ಲ ದುರುದುರುಸಿ ನೋಡಿ ಮುಗುಳುನಗೆ-ಯನ್ನು ಬೀರಿ, ಹತ್ತಿರ ಹತ್ತಿರ ತೀರ ಹತ್ತಿರ ಬಂದು, "ಮೋಡ, ಮೋಡ...." ಎಂದು ಅವರ ಮೈ ಮೋರೆಗೆ ಕೈಹಾಕಿ.....

ಉಂಟೇ, ಇಂತಹ ಬೀದಿಯ ಪೋಲಿಯನ್ನು ಜನ ಹೇಗೆ ಸೈರಿಸಿಯಾರು? ಪಾಪ, ವಸ್ತ್ರವನ್ನು ಕಂಡುಹಿಡಿದನೆಂದು ಸಮಾ-ಧಾನಪಟ್ಟರೆ, ಉಟ್ಟ ವಸ್ತ್ರಕ್ಕೆ—ಅದೂ ಹೆಂಗುಸರದು—ಕೈಹಾಕಿ-ದೆಂದರೆ! ಬೀದಿಯಲ್ಲಿ ಹೋಗುವಾಗ, ಯಾರ ಹೆಂಡತಿಯನ್ನೋ, ಮಗಳನ್ನೋ, ತಂಗಿಯನ್ನೋ ದುರುದುರುಸಿ ನೋಡುವುದೂ, ಮುಗುಳು ನಗುವುದೂ—ಅಂದರೆ ಏನು?

ಜಯಂತ

ಅವನಿಗೆ ಹುಚ್ಚೆನ್ನುವುದು ಸರ್ವವಿದಿತವಾದ ಮಾತು; ಆದರೆ, ಇದು ಬರೇ ಹುಚ್ಚಾಗಿದ್ದರೆ, ದೊಡ್ಡ ಮಾತಲ್ಲ:—ಅಂತಹ ಹುಚ್ಚರು ಎಷ್ಟೋ!—ಆದರೆ, ಇದು ಭೀಮಾರಿ ಹುಚ್ಚು, ಹೆಂಗಸರ ಹುಚ್ಚು!

ಕೊನೆಗೊಂದು ದಿನ, ಈ ಹುಚ್ಚು, ಹಾಡಹಗಲಿನಲ್ಲಿ ನಡು ಬೀದಿಯಲ್ಲಿ. ಆ ಊರಿನ ಒಬ್ಬಳ—ವಸ್ತ್ರವಿಭೂಷಿತೆಯ—ಮೈಮೇಲೆ ಬಿದ್ದನೆಂಬ ಆ ಪಾದನೆಯ ಮೇರೆಗೆ ಅತನನ್ನು ಊರ ಹತ್ತು ಸಮಸ್ತರ ಮುಂದೆ ತಂದು ನಿಲ್ಲಿಸಿದರು:— ಆಗ ಆ ಊರಿನಲ್ಲಿ ಹುಚ್ಚರನ್ನು ಹತೋಟಿಯಲ್ಲಿಡಲು ನಮ್ಮಂತೆ ಜೇಲುಮನೆಯಾಗಲೀ, ಹುಚ್ಚರಾಸ್ಪತ್ರೆಯಾಗಲೀ ಇರಲಿಲ್ಲ—ಊರಿನವರ ಮಾನ ಉಳಿಯಲು ಒಂದೇ ಮಾರ್ಗ ಅವರಿಗೆ ತೋಚಿತು. "ಯಾವ ಕಣ್ಣುಗಳಿಂದ ಅವನು ವಸ್ತ್ರ ತೊಟ್ಟವರನ್ನು ಕಾಣುತ್ತಿದ್ದನೋ ಆ ಕಣ್ಣುಗಳನ್ನೇ ಕಿತ್ತುಬಿಟ್ಟರಿ!—" ಎಲ್ಲರಗ ತಲೆಯಲ್ಲಾಡಿಸಿದರು. ಅವನ ಕಣ್ಣುಗಳನ್ನು ಕಿತ್ತುಬಿಸುಡಿದರು; ಅಂದಿನಿಂದ "ಬ್ರಹ್ಮನಿಗೆ ಕಣ್ಣಿಲ್ಲ; ಅಂದಿನಿಂದ, ಅವನಾರ ತಂಟೆಗೂ ಹೋಗಲಿಲ್ಲ. ಅಲ್ಲಿಂದ, ಸಾಯುವ ಪನಕವೂ "ಮೋಡ, ಮೋಡ" ಎಂದು ಅರಚುತ್ತಿದ್ದನಂತೆ—ಹೀಗೇನೋ ಆ ಕತೆ ಮುಗಿಯುತ್ತದೆ.

ಕಿರುಗತೆಗಳು

ಶ್ರೀ. ಎಚ್. ಡಿ. ಟಿ. ಇನಾಮದಾರ ಗುಲ್ಬರ್ಗಾ

"ಕರ್ಮಣ್ಯೇವಾಧಿಕಾರಸ್ತೇ"

ಕರುವನ್ನೊಮ್ಮೆ ಕರೆದಿದ್ದೆ.

ನಾನಿತ್ತ ಸವಿತಿನುಸುಗಳಾಶೆಯಿಂದ ಅದು ಓಡೋಡುತ್ತ ಬಂದಿತು.

ನನ್ನ ಮೈ ಕೈ ಶಿಕ್ಕತೊಡಗಿತು. ನನ್ನ ಸುತ್ತು ತಿರುಗತೊಡಗಿತು.

ತನ್ನ ಬಿಳಿಯ ಮೊಗವನ್ನೊಮ್ಮೆ ನನ್ನತ್ತ ತಿರುಗಿಸಿತು. ಮೂಕನುಡಿಯಿಂದದೇನೋ ಕೇಳಿತು. ಬುದ್ಧಿ ಅದನ್ನು ಗ್ರಹಿಸಲಿಲ್ಲ; ಹೃದಯ ಅಗಲೇ ತಿಳಿದಿತ್ತು.

ಸವಿತಿನುಸುಗಳನ್ನು ಮುಂದೆ ಹರಡಿದೆ.

ತಿಂದು ತಿಂದು ತೇಗಿತು.

ಕರುವನ್ನು ಕಳೆದುಕೊಂಡು ವ್ಯಾಕುಲಳಾದ ಅದರ ತಾಯಿ ಓಡೋಡುತ್ತ ಬಂದಿತು. ನಾನದನ್ನು ಕರೆದಿರಲೂ ಇಲ್ಲ; ಅದರ ಬರವನ್ನು ಇಚ್ಛೆಪಿಸಿಯೂ ಇರಲಿಲ್ಲ. ತಾಯಿ ನೇತ್ರಗಳಿಂದ ನನ್ನನ್ನು ಕೃತಜ್ಞತಾಪೂರ್ವಕ ನೋಡಿತು. ಅದರ ಕೆಚ್ಚಲಿಂದ ಧಾರೆ ಧಾರೆಯಾಗಿ ಅಮೃತವರ್ಷವಾಗತೊಡಗಿತು.

ಅದನ್ನು ಸೇವಿಸಿ 'ನಾನು' ತಣಿದೆ.

× × × ×

'ಫಲ'ವೆಂಬುದು ಆ ಕರುವಿನ ಕಾಯಿಯಂತೆ. ಕರುವನ್ನು ಕರೆದರಾಯಿತು. ತಾಯಿ ತಾನಾಗಿಯೇ ಬರುತ್ತಾಳೆ. 'ಕರ್ಮ' ವನ್ನಾಚರಿಸಿದರಾಯಿತು; ಆದರ ತಾಯಿ 'ಫಲ' ಬರದಿರುತ್ತದೆಯೇ?

"ಜೀವಹಂಸ"

ಹೊಂಡವೊಂದು ಹೊಂಡದಲ್ಲಿ ಈಜಲುದ್ಯುಕ್ತವಾಯಿತು, ಅದನ್ನೆ ಕ್ಷೀರ-ಸಾಗರವೆಂದು ಬಗೆದು. 'ಕ್ಷೀರ ಸಾಗರ' ಹೀಗಿರಬಹುದೆ? ಎಂಬುದನ್ನದು ವಿಚಾರಿಸಲೇ ಇಲ್ಲ

ಹೀಗಾಗಿ ಆದಕ್ಕೆ ಕ್ಷೀರಸಾಗರದಲ್ಲೀಜುವ ಭಾಗ್ಯ ಲಭಿಸಲಿಲ್ಲ. ನಂದನವನದ ಪುಷ್ಪ-ನಿಕರದ ಸುಖದ ಪರಿಮಳ ಅದಕ್ಕೆ ಲಭ್ಯವಾಗಲಿಲ್ಲ; ಅಪ್ಸರೆಯರ ಗಾನ ಹಾಗೂ ನೃತ್ಯ ಅದಕ್ಕೆ ಕನಸಿನ ಸಿಹಿ ಹಣ್ಣಿನಂತಾಯಿತು

ಅಲ್ಲಿಯ ಹೊಲಸು-ನೀರಿನಲ್ಲಿ. ಮತ್ತೆ ಮತ್ತೆ ಈಜಿತು. ತಿರು ತಿರುಗಿ ಬಂದಿತು.

ಜೊಂಡೆಹುಳುಗಳನ್ನೇ ತಿಂದು ತೇಗಿತು.

ದಂಡೆಯಲ್ಲಿ ಬೆಳೆದ ಹುಲ್ಲನ್ನೇ ನಂದನವನವೆಂದು ಭಾವಿಸಿತು.

ಅದಕ್ಕಿನ್ನಾವ ಚಿಂತೆಯೂ ಇರಲಿಲ್ಲ; ಸ್ವಚ್ಛಂದವಾಗಿ ಈಜುವುದು; ಹಸಿವಾದಾಗ ಜೊಂಡೆ-ಹುಳುಗಳನ್ನು ತಿನ್ನುವುದು, ನಿದ್ದೆ ಬಂದಾಗ ಹುಲ್ಲಿನಲ್ಲಿ ವಿಶ್ರಾಂತಿ ಪಡೆಯುವುದು—ಅದರ ದಿನಚರಿಯಾಯಿತು.

ಈಜುವ ಅವಸರದಲ್ಲಿ ಏನೇನೋ ಮಾಡಿತು!!

ಶ್ವೇತವರ್ಣವನ್ನು ಕಳೆದುಕೊಂಡಿತು.

ಹೇ! ಜೀವಿಯೇ ನೀನೂ ಹಾಗೆಯೇ ಅಲ್ಲವೆ? ಮತ್ತೆ ಮತ್ತೆ ಇಲ್ಲಿಗೆ ಬರುತ್ತಿರುವೆ ಅಲ್ಲವೆ? ಇದು ಕ್ಷೀರಸಾಗರವಲ್ಲ: ಹೊಂಡದ ಹೊಲಸು ನೀರು.

ನಿನ್ನ ಅಂತರ್ವೀಣೆಯನ್ನು ಮಿಡಿ ನಿನ್ನ 'ಉತ್ಕರ್ಷ'ದ್ಯೋತಕ ಅದು ಹಾಡುವದು: ವಿಶ್ಲೇಷಿಸುವ ಸಾಮರ್ಥ್ಯವನ್ನೊಮ್ಮೆ ಕೆರಳಿಸಿ, ದೃಷ್ಟಿಯನ್ನು ನಿನ್ನ ಹೃದಯದತ್ತ ತಿರುಗಿಸು!!

ಮಗುವೊನ್ನೆ ಆ ವಿರಾಟ್ ಸ್ವರೂಪದ ದರ್ಶನವಾದೀತು!

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಕೋರಿಕೊಂಡಂತೆ; '**ಯಾರ ಗೆಲವು?**' ಕಥೆಯನ್ನು ಕುರಿತು ೫ ಜನರಿಂದಲೂ, '**ಇದೂ ಪ್ರೇಮವೆ?**' ಕಥೆಯನ್ನು ಕುರಿತು ೫ ಜನರಿಂದಲೂ ವಿಮರ್ಶೆಗಳು ಬಂದಿವೆ. ವಿಮರ್ಶಕರ ವಿವರ ಹೀಗಿದೆ:—

'ಯಾರ ಗೆಲವು?'

೧ ಶ್ರೀ. ಕೆ. ಎಸ್. ನಾರ್ಣ, ಪೆರಡಾಲ, ೨ ಶ್ರೀ. ಆರ್ ಎನ್ ತಿಮ್ಮಾಪೂರ, ಯಾಳಗಿ. ೩ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೪ ಶ್ರೀ. ಜಿ. ವಿ. ಸುಬ್ಬರಾವ್, ತುಮಕೂರು. ೫ ಶ್ರೀ. ಜೆ. ಮಲ್ಲಾರಿಭಟ್ಟ, ಹೊಸಪೇಟೆ.

'ಇದೂ ಪ್ರೇಮವೆ?'

೧. ಶ್ರೀ. ಕೆ. ಎಸ್. ಕಟ್ಟಿ, ಧಾರವಾಡ. ೨ ಶ್ರೀ. ಪಂ. ಜೆ. ಮಲ್ಲಾರಿಭಟ್ಟ, ಹೊಸಪೇಟೆ. ೩ ಶ್ರೀ. ಎಚ್. ರಾಮರಾವ್, ಬಸವೇಶ್ವರ ಕಾಲೇಜ್, ಬಾಗಲಕೋಟಿ, ೪ ಶ್ರೀ. ಕೆ. ಪಿ. ತಿರುಮಲೇಶ, ಪನ್ನೆಪ್ಪಲು. ೫ ಶ್ರೀ. ಕೆ. ಎಸ್. ನಾರ್ಣ, ಪೆರಡಾಲ.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯವರೇ ನೋಡಿ, ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ:

"**ಯಾರ ಗೆಲವು?**" ಕಥೆಯ ವಿಮರ್ಶೆಗಳಲ್ಲಿ **ಶ್ರೀ. ಕೆ. ಎಸ್. ಶರ್ಮಾ,** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಜಿ. ವಿ. ಸುಬ್ಬರಾವ್ ಅವರದು ಚೆನ್ನಾಗಿದೆ. ಮಿಕ್ಕುವು ಸಾಮಾನ್ಯವಾಗಿವೆ.

'ಇದೂ ಪ್ರೇಮವೆ?' ಕಥೆಯ ವಿಮರ್ಶಕರಲ್ಲಿ ಶ್ರೀ. ಕೆ. ಎಸ್. ಕಟ್ಟಿಯವರ ವಿಮರ್ಶೆ ಅತ್ಯುತ್ತಮವಾಗಿವೆ. ಶ್ರೀ. ಕೆ. ಎಸ್. ನಾರ್ಣ, ಶ್ರೀ. ಕೆ. ವಿ ತಿರುಮಲೇಶ—ಇವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವು ಸಾಮಾನ್ಯವಾಗಿವೆ,

ಮುಂದಿನ ತಿಂಗಳ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ '**ವ್ಯಭಿಚಾರ**' ಎಂಬ ಕಥೆಯನ್ನಾಗಲಿ. '೪ × ೧೦' ಎಂಬ ಕಥೆಯನ್ನಾಗಲಿ, ವಿಮರ್ಶೆಗೆ ತೆಗೆದುಕೊಳ್ಳಬೇಕು.

—ಸಂಪಾದಕ

ಇದೂ ಪ್ರೇಮವೆ?

(ಸಣ್ಣಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಕಟ್ಟಿ, ಧಾರವಾಡ

'ಇದೂ ಪ್ರೇಮವೆ?....' ಕತೆಗಾರ—ಶ್ರೀ. ನಾ. ನರಸಿಂಹ. ಮೂರ್ತಿಯವರು ಒಂದು ಚಿಕ್ಕ, ಸರಳ ಪ್ರಶ್ನೆ ಹಾಕಿದ್ದಾರೆ! ಜೀವನದಲ್ಲಿ ಎಂದೆಂದಿಗೂ ನಡೆಯಬಹುದಾದ ಕೆಲವೊಂದು ದೃಶ್ಯಗಳನ್ನು ನಮ್ಮ ಕಣ್ಮುಂದೆ ಹೊಂದಿಸಿಟ್ಟು, ಹೇಳಬೇಕಾದುದನ್ನು ಚುಟುಕಾಗಿ ಹೇಳಿ ಮುಗಿಸಿ, 'ಇದೂ ಪ್ರೇಮವೇ....?' ಎಂದು ಕೇಳಬಿಟ್ಟು ಹಿಂದಕ್ಕೆ ಸರಿದಿದ್ದಾರೆ, ಮೂರ್ತಿಯವರು. ಕಥನಕಲೆಯಲ್ಲಿ ಇವರೊಳ್ಳೇ ಯಶಸ್ವಿಯಾಗಬಲ್ಲರೆಂಬುದನ್ನು ಈ ಮೂಲಕ ತೋರಿಸಿ ಕೊಟ್ಟ ಮೂರ್ತಿಯವರು, ಅಷ್ಟೇ ಮಾರ್ಮಿಕವಾಗಿ ತಲೆಬರಹವನ್ನಿತ್ತು ತಮ್ಮ ಜಾಣ್ಮೆಯನ್ನು ವ್ಯಕ್ತಗೊಳಿಸಿದ್ದಾರೆನ್ನಬಹುದು. 'ಪ್ರೇಮ' ಪದಕ್ಕೆ ಹೀಗೇಂತ ಕಟ್ಟುನಿಟ್ಟಾಗಿ ಒಂದು ವ್ಯಾಖ್ಯೆ ಕೊಡುವುದು ಸಾಧ್ಯವೆ? ಸಾಧ್ಯವಿದ್ದುದೇ ಆದರೆ, ಮೂರ್ತಿಯವರ ಪ್ರಶ್ನೆಗೂ ಉತ್ತರ ಕೊಟ್ಟೀವು! ಕೆಲವು ಶಬ್ದಗಳಿರುತ್ತವೆ. ಅವುಗಳ ಅರ್ಥ ಬುದ್ಧಿಗೋಚರ; ಇನ್ನು ಕೆಲವಿರುತ್ತವೆ: ಅವುಗಳ ಅರ್ಥ ಕೇವಲ ಹೃದಯವೇದ್ಯ! "ಪ್ರೇಮ" ಈ ಎರಡನೆಯ ಜಾತಿಗೇ ಸೇರಬಲ್ಲದೆಂದು ನನ್ನ ಅಭಿಪ್ರಾಯ. ಮೂರ್ತಿಯವರ ಈ ಕತೆ ಭಾವನಾ ಪ್ರಧಾನವಾದ ಒಂದು ಸಹಜ ಸುಂದರ ಸಣ್ಣಕತೆಯೆನ್ನಬಹುದು.

'ಪಣ್ಣಾಕತೆ' ಯ ತಂತ್ರಮಂತ್ರಗಳ ಚೌಕಟ್ಟಿನಲ್ಲಿ ಇದೊಳ್ಳೆಯ ಜೋಡಣೆಯೆನ್ನಲಡ್ಡಿಯಿಲ್ಲ.

ಕತೆಯು 'ಹಸಾಪಿ'ಗಾಗಿ ಈ ಕತೆಯನ್ನು ಓದುತ್ತೀನೆನ್ನುವಿರಾ? ಅದು ಕೂಡದು! ಏಕೆಂದರೆ ಓದಿದನಂತರ 'ಇದೂ ಪ್ರೇಮವೇ?' ಎಂಬುದು, 'ಇದೂ ಒಂದು ಕತೆಯೆ?' ಎಂದೆನಿಸಬಹುದು. ನನಗೆ ಮಾತ್ರ ಹಾಗೆನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ನೀನೇನು ಹತ್ತಾರು ಪಾತ್ರಗಳ ಬಗ್ಗೆಯೂ, ಅವುಗಳ ಹೆಸರುಗಳ ಬಗ್ಗೆಯೂ ಇಲ್ಲಿ ತಡಕಾಡಬೇಕಿಲ್ಲ. ಪ್ರೇಮಿ ರಾಘೂನ ಮನಸ್ಸನ್ನು ವಿಶ್ಲೇಷಿಸಿ ಸುಂದರವಾಗಿ, ಹಿತಮಿತವಾದ ತನ್ಮಯತೆಯ ಶೈಲಿಯಲ್ಲಿ ಚಿತ್ರಿಸಿ ತೋರಿಸಿರುವ ಶ್ರೀಯುಸ್ರು ನಿಜವಾಗಿಯೂ ಮೂರ್ತಿಯವರಿಗೆ ಸಲ್ಲಬೇಕು. ಲೇಖಕರಲೇಖನಿ ಜೀವಂತವಾದುದು. ಅದು ನನ್ನ ಮೇಲುಂಟು ಮಾಡಿದ ಪರಿಣಾಮವೇನು ಸಾಮಾನ್ಯವಾದುದೆ? ಕತೆಯನ್ನು ಓದಿದ ಪ್ರತಿಯೊಬ್ಬನ ಹೃದಯವೂ 'ಪ್ರೇಮಮಯ'ವಾಗುವುದೆಂಬ ನನ್ನ ಭಾವನೆ! ಅಂತೆಯೇ ಈ 'ಪ್ರೇಮ ಪ್ರಪಂಚ'ದಲ್ಲಿ ಕಂಡುಬರುವ ಅಸಂಖ್ಯಾತ 'ರಾಘು'ಗಳ ಪ್ರತೀಕವೇನೋ ಎನುವಂತೆ, ಮೂರ್ತಿಯವರ ಸಾಧನೆ ಇಲ್ಲಿ ಕೈಗೂಡಿದೆ, ಉದ್ದೇಶ ಸಫಲವಾಗಿದೆ.

ಪ್ರೇಮಿಗಳೂ ಹುಚ್ಚರೂ ಒಂದೇ ವರ್ಗದವರೆಂಬುದನ್ನು ಎಲ್ಲರೂ ಕೇಳಿ ಬಲ್ಲರು. ರಾಘೂ ಪ್ರೇಮದಿಂದ ಹುಚ್ಚಾಟ (ಕತೆಗೆ ಪೆಚ್ಚಾದನೆನ್ನೋಣವೆ?) ಒಂದು ಭಾವನಾಜೀವಿ ತಲೆಕುಂಬ ಯಾವ ಜಂಜಾಟಗಳನ್ನೂ ತುಂಬಿಕೊಳ್ಳದಿರುವ ತನಕ ಅವನು ಸುಪಾತ್ರವಾಗಿಯೇ—ಅದೇಕೆ—ಒಳ್ಳೇ ಯಶಸ್ವಿಯಾಗಿಯೇ ಬಿ. ಎಸ್ಸಿ ತರಗತಿಯ ವರೆಗೂ ಬಂದ! ಆದರೆ ಆ ವರ್ಷ ನಡೆದುದೇನು? ರಾಘೂ ಬಿ. ಎಸ್ಸಿ ವರ್ಗವನ್ನು ಪ್ರವೇಶಿಸಿದರೆ ರಾಧೆ ರಾಘುವಿನ 'ಮನೋವರ್ಗ'ವನ್ನು ಪ್ರವೇಶಿಸಿದಳು! ರಸಾಯನಶಾಸ್ತ್ರವೊ, ಭೌತಶಾಸ್ತ್ರವೊ ಅಥವಾ ಮತ್ತಿನ್ನಾವುದಾದರೊಂದು ವಿಷಯದಿಂದಲೋ ತುಂಬಬೇಕಾದ ರಾಘುವಿನ ತಲೆ, ರಾಧೆಯಿಂದ ಹೊರಡುವ ಅನ್ಯೋನ್ಯಗಾನ ಲಹರಿಗಳಿಂದ ತುಂಬತೊಡಗಿತು! ಎಲ್ಲೋ ಕಟ್ಟಿಕಿಯಾಜೆ ದೂರದಲ್ಲಿ ಕಾಣುವಾಗ ರಾಧೆಯ ಸುಮನೋಹರ ಮೂರ್ತಿ, ದಿನಗಳೆದಂತೆ ಕ್ರಮೇಣವಾಗಿ ರಾಘುವಿನ ಹೃದಯವನ್ನೆಲ್ಲ ಆಕ್ರಮಿಸತೊಡಗಿತು! ಒಮ್ಮೆ ಅಪ್ಪಳ್ಳವಾಗಿ ನೋಡಿದಾಗಲೇ—ಲೇಖಕರೇ ಹೇಳುವಂತೆ—ಅವಳ ಮುಖಾರವಿಂದವೆ ಪರಿಪೂರ್ಣ ಕಲ್ಪನೆಯನ್ನು ಮಿದುಳೆಂಬ ಕ್ಯಾಮೆರಾ ಅಷ್ಟಾಗಿ ಚಿತ್ರಿಸಿಕೊಳ್ಳದಿರುವಾಗಲೇ—ರಾಘುವಿನ ಎದೆಯ ಹೊಲದಲ್ಲಿ ಪ್ರೇಮದ ಬೀಜ ನೆಟ್ಟಿತು, ಪ್ರೇಮದ ಅಂಕುರ ಮೊದಲು ನೋಟವಲ್ಲಿಯೇ ಎಂಬುದು ಸತ್ಯವಾಯಿತು ಅಲ್ಲಿಂದ ಮುಂದಕ್ಕೆ ಮನಸ್ಸಿನ ತಾಕಲಾಟ. ಕರ್ತವ್ಯದ ವಿವೇಕ ಬುದ್ಧಿಗೂ, ಯೌವನದ ಕಾವಿಗೂ ಘರ್ಷಣೆ. ಅಪೂರ್ವವಾದ ಅನುಭವ ಪ್ರೌಢನನ್ನು ಅನುಭವಿಸುವೇ ತೀರಬೇಕೆಂಬ ಚಪಲ; ಜೊತೆಗೆ—ಹಸುಳೆಯ ನಿಷ್ಕಲ್ಮಷ, ಪವಿತ್ರತೆ, ತಾಚಿಕೊಳ್ಳುವ ಮನಸು ತುದಿಮುಟ್ಟುವ ಆತ್ಮ—ಇವೆಲ್ಲ ಶೈಲಿಯ ಸುಂದರ ಸಮುಚ್ಚಯದಲ್ಲಿ ಮೂರ್ತಿಯವರ ಕತೆ ಓಡುತ್ತದೆ....

ಮೂರ್ತಿಯವರ ಈ ಕತೆಯನ್ನು ವಿಮರ್ಶಿಸುವುದೆಂದರೆ ನಾವು ನಮ್ಮೀ ಜೀವನವನ್ನೇ ವಿಮರ್ಶಿಸಿದಂತೆ, ಅಷ್ಟು ಕಲಾತ್ಮಕವಾಗಿ ಅವರು ವಿಷಯವನ್ನಾಮ್ಮುದ್ದುಕೊಂಡಿದ್ದಾರೆ. ರಾಘು-ಅವನ ತಾಯಿ, ರಾಧೆ-ಅವಳ ತಾಯಿ, ಇವರ ಮಧ್ಯದಲ್ಲೆಲ್ಲಾ ಪ್ರೇಮವೆಂಬುದು ತಾನೇ ತಾನಾಗಿ ಹರಿಯುತ್ತಿದೆ ಎಂದು ಯಾರಾದರೂ ಊಹಿಸಬಹುದು ಅಷ್ಟೆಯೇ ಪ್ರೇಮದ ವಿಶಾಲಾರ್ಥವನ್ನು ನಾವಿಲ್ಲಿ ಕಂಡುಕೊಳ್ಳಬಹುದಾಗಿದೆ. ಗಂಡ ತೀರಿಕೊಂಡನಂತರ ಯಾವ ನ್ಯೂನತೆಯೂ ಕಲೆಯಿಟ್ಟಿರುವಂತೆ ಒಳ್ಳೆ ಕನುಷ್ಠ ವೇತನದಿಂದ, ಅಷ್ಟೇ ನಿಷ್ಕಲ್ಮಷ ಪ್ರೀತಿಯಿಂದ ರಾಘವನನ್ನು ಒಂದು ದಡಕ್ಕೆ ತಂದು ನಿಲ್ಲಿಸಿದ ತಾಯಿ. ಈ ಪ್ರೇಮವನ್ನು ಏನೆಂದು ಕರೆಯಬೇಕು? ಇಂಥ ಎಲೆ ಖುಲಿ ಬಿದ್ದ ಎಮರು ಮನೆಗೆ ಬಾಡಿಗೆ ಬರುತ್ತಲೂ ಅಲ್ಲಿ ಸುಖಾರ ಸಂಸಾರದ ಚಿತ್ರ ಹೊಸೆಯಲೊಂದಿಗೆ ಸಂಪರ್ಕ ಬೆಳೆಸಿಕೊಂಡು, ತನ್ಮೂಲಕ ತನ್ನಲ್ಲಿ ಸಹಜವಾದ ಭಾವನೆಯನ್ನು ತಳೆದುಕೊಂಡ ಆ ಹೆಂಗಳೆ. ಇದರ ಮನೋವೈಶಾಲ್ಯತೆಯ ಏನೆಂದು ಕರೆಯಬೇಕು? ರಾಘುವಿನ ತಾಯಿ. ಹಾಗೆಯೆ ರಾಧೆ ಕೆಲಸವಿಲ್ಲದಾಗಲೆಲ್ಲಾ ಕುಳಿತು, ಹಾಯಾಗಿ ಕುಳಿತು ಅಚ್ಚುಮೆಚ್ಚಾಗಿ ಏನೆಲ್ಲ ಯೋಚಿಸಿರಬಹುದು?—ಎಂಬುದನ್ನು ತಿಳಿದುಕೊಳ್ಳುವ ಕುತೂಹಲವನ್ನು ಹುಟ್ಟುಹಾಕುವಂತೆ, ಮೂರ್ತಿಯವರು ಆ ಎರಡು ವಿಭಿನ್ನ ಪಾತ್ರಗಳ ನೈಜಚಿತ್ರಣವನ್ನು ಬಿಂಬಿಸಿದ್ದಾರೆ ಹೀಗಾಗಿ ಜೀವನವನ್ನು ಒಳಹೊಕ್ಕು ಕುಟುಕಿ, ಬಗೆದು ನೋಡುವ, ನೋಡಿ ಅಲ್ಲಿದ್ದ ರತ್ನವನ್ನೆತ್ತುವ ಶಕ್ತಿ ಲೇಖಕರಿಗೆ ಧಾರಾಳವಾಗಿದೆಯೆನ್ನಬಹುದು.

ಹುಚ್ಚು ಹಿಡಿಸಬೇಕು—ಹಾಗಿದೆ ಮೂರ್ತಿಯವರ ಶೈಲಿ! ಇದರಲ್ಲೇನೂ ವಿಶೇಷವೆಂಬಂಥ ನಿರ್ದಿಷ್ಟವಾದ 'ಕಥಾವಸ್ತು'ವೇ ಇಂದಿಲ್ಲವಿರುವಾಗ ಓದುಗನನ್ನು ಎತ್ತರ ಬಲವಿಂದ ಅವರು ಎಳೆದುಕೊಯ್ಯಬಲ್ಲರು? ಅದೇ ಶೈಲಿ! ಉತ್ಕರ್ಷಕರ್ನಾಟಕದ, ಅದರಂತೆ ನೈಜರೂಪ ಭಾಷೆಯ, ಸುಂದರ ಸಮ್ಮಿಳನವನ್ನು ಲೇಖಕರಲ್ಲಿ ಕಾಣಬಹುದಾಗಿದೆ 'ಇಲ್ಲಾರೀ.... ಹೋಗಿ ಬರ್ತೀನಿ...' ಎಂದು ರಾಧೆ ಮುತ್ತು ಸುರಿಸುವಂತೆ ಬಾಯಿ ಬಿಡಿಸುವಲ್ಲಿ, ಕತೆಗಾರರು ತನ್ಮಯತೆಯನ್ನು ಪೂರೈಸಿಕೊಂಡಿದ್ದಾರೆ ಇಂತಹ ನುಡಿಯನ್ನು ರಾಧೆಯು ಬಾಯಿಯಿಂದ ಇನ್ನಷ್ಟು ಕೇಳಬೇಕೆಂಬ ಮೋಹ ಬರುವ ಹಾಗೆ ಅವಳ ವ್ಯಕ್ತಿತ್ವವನ್ನುಂಟು ಮಾಡಿದ್ದಾರೆ. ಇಲ್ಲಿ ಶುದ್ಧ ಕನ್ನಡತನ ಇಂಪನ್ನು ನಾವು ಕಾಣುತ್ತೇವೆ, 'ಜ್ಞಾಪಕ ಇಲ್ಲೇನ್ಮ್ಮ' 'ನಾವು ಹೋಗ್ಬಿಟ್ಟು ಬರ್ತೀವಿ....' ಎಂದು ರಾಧೆಯು ತಾಯಿ, ರಾಘೂನ ತಾಯಿಯನ್ನು ಬೀಳ್ಕೊಳ್ಳುವಲ್ಲಿ, ನಾವು ನೈಜಗಾರ ಮೃದುತನವನ್ನು ಕಾಣುತ್ತೇವೆ. ಇಲ್ಲಿಯೇ ಕತೆಯು ಮುಕ್ತಾಯವಿಸಿ, ಜೀವನವೆಂಬ ಪ್ರಯಾಣವಲ್ಲಿ ಹೇಗೋ ಬಂದು ಕೆಲಕಾಲ ಸಾಧಿಸಿ, ಮತ್ತೆ ಹೇಗೋ ಬೀಳ್ಕೊಂಡು ಕಣ್ಮರೆಯಾಗಿ, ತನ್ಮೂಲಕ ರಾಘುವಿನ, ರಾಘುವಿನಂತಹರ ಅಂತಃಕರಣವನ್ನು ಕಲಮಲಗೊಳಿಸುವ ಸನ್ನಿವೇಶವಲ್ಲಿ! ಕತೆಯು ಪ್ರಾರಂಭ-ಮುಕ್ತಾಯಗಳೆರಡೂ, ಕತೆಯು ಉಂಟು ಮಾಡುವ ಪರಿಣಾಮದ ದೃಷ್ಟಿಯಿಂದ ಬಹಳ ಮಹತ್ವ-

ಯಾರ ಗೆಲುವು?

(ಸಣ್ಣಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ವಾಣೀವಿಲಾಸ, ಕಾಸರಗೋಡು

"ದಾಂಪತ್ಯಜೀವನದಲ್ಲಿ ಕಡಿದೊಡೆಯದೆ ನಿರಂತರ ಪ್ರವಹಿಸುತ್ತಿರಬೇಕಾದ ಅಂತರಿಕವಾದ ಒಂದು ಬಗೆಯ ನಿಗೂಢಭಾವದ ಎರಕಕ್ಕೆ ಸಂತತಿಯೇ ನಿದಾನವೆಂಬುದನ್ನು ಒಪ್ಪಿಕೊಳ್ಳಬೇಕು. ಸಂತತಿ ತಲೆ ಕಾಣಿಸದಿದ್ದರೆ ಆ ಭಾವದೆರಕವು, ದಾಂಪತ್ಯ ಜೀವನದೇರು—ಒಡೆದುಹೋಗಬಹುದೆಂದಲ್ಲ ಈ ಮಾತಿನ ಅರ್ಥ! ದಾಂಪತ್ಯದಲ್ಲಿ ಮಾಧುರ್ಯವನ್ನು ತುಂಬಿ, ಅನ್ಯೋನ್ಯಾಯತ್ತವಾಗಿರಬೇಕಾದ 'ಏಕತೆಯ ನಿಲುವ'ನ್ನು ಸಾಧಿಸುತ್ತದೆಯೆಂದರಿತರೆ ಸರಿ! ಅದುದರಿಂದ ದಾಂಪತ್ಯದ ಸುಂದರಯೋಗವಲ್ಲಿ—ಉಭಯ ದೇಹಗಳಲ್ಲಿ ನೆಲೆನಿಂತ ಪ್ರೇಮಭಾವನವನ್ನು ಒಂದುಗೂಡಿಸಲು ಹಸನಾಗಿಸಲು, ಹಸುಳೆಯು ಮುಖಾವಲೋಕನಭಾಗ್ಯವು ಬೇಕೆಂದರಿಯಬೇಕು."—

ಈಯೊಂದು ವಿಚಾರವನ್ನಡಿಗಲ್ಲಾಗಿಸಿ, ಓರಣವಾಗಿ ಹೊಸೆದು ತೋರಿದೆ ಈ ಲಘುಕಥಾವಸ್ತು! ತಾತ್ಪರ್ಯಾನುಗುಣವಾಗಿ—ವಿಷಯ ಮಹತ್ತ್ವಕ್ಕೊಡನೆ ಕಥಾಕಾರರು ಹುಯೋಗ್ಯವಾದ ನೂತನಿಕ ವಿಶ್ಲೇಷಣ ಕೌಶಲ್ಯವನ್ನು ತೋರಿರುವುದು ಗಮನೀಯವಿದೆ.

ಜೀವನವೆಂದರೆ ನೂರಾರು ಸಮಸ್ಯೆಗಳಿಂದ ತುಂಬಿಕೊಂಡಿರುವ ಒಂದು ಪ್ರವಾಹ. ಈ ಪ್ರವಾಹದಲ್ಲಿ ನೋಲೆದ್ದು ತೋರುವ ತೆರೆಗಳು ಕೆಲವೆಂದರೆ, ಇನ್ನು ಕೆಲವು ಗುಪ್ತಗಾಮಿಗಳಾಗಿ ಜೀವನದ ಹೃದಯದಲ್ಲಿ ಸಾಗುತ್ತಿರುವುವು. ನಿರ್ಬಲ ಜೀವನವಾದರೆ ಕೆಲವು ನೇಳಗಳಲ್ಲಿ ಇವೆರಡೂ ಬಾಹ್ಯದಲ್ಲಿ ತಲೆತಾಡಿಸುವುವು; ಶಕ್ತಿಪೂರ್ಣ ಜೀವನವಾದರೆ ಸುಖ ದುಃಖಮಯವಾಗಿರುವ ಈ ಸಮಸ್ಯೆಗಳ ಪರಿಹಾರವನ್ನು ತನ್ನಲ್ಲೆ ಹೊಸೆದುಕೊಂಡು ತಾನಾಗಿ ಪಾಗುತ್ತಿರುವುದು. ಇದು ಜೀವನಸಮಸ್ಯೆಯ ಒಂದು ಸಾಮಾನ್ಯಪರಿಚಯ.

ಈ ಬಗೆಯ ಜೀವನಸಮಸ್ಯೆಯ ನಿಲುವನ್ನು ಚಿತ್ರಿಸುವ ಕಥಾಕಾರನು ಜೀವನದ ಪರಿಚಯವನ್ನು ಚೆನ್ನಾಗಿ ಸಾಧಿಸಿದವನಿರಬೇಕು. ಜೀವನಾನುಭವಗಳನ್ನು ಕಂಡವನಿರಬೇಕು ಅನುಭವ ಹೀನವಾದ, ಜೀವನದ ಶಕ್ತಿಯನ್ನೊರೆದೋರದ ಯಾವ ಕಥೆಯೂ ಸಾಫಲ್ಯಕ್ಕೆ ತಕ್ಕುದಾಗದು. ಅದುದರಿಂದ ಕಥಾಕಾರನು ತಾನೆತ್ತಿಕೊಂಡ ವಸ್ತುವಿನ, ಜೀವನದ ಪೂರ್ಣವಾದ ನಿಲುವನ್ನರಿತು, ತಾನು ಚಿತ್ರಿಸಲು ಕೊರಟ ಜೀವನದ ಪೂರ್ಣಭಾಗವನ್ನಾಗಲಿ, ಇಲ್ಲವೇ ಅವುದಾವರೊಂದು ಭಾಗವನ್ನಾಗಲಿ, ಬಹು ಜಾಗರೂಕತೆಯಿಂದ ಸಮೆದು, ಘಟನೆಗಳನ್ನು ವಿಶ್ಲೇಷಿಸಿ ತೋರಿ, ವಾಚಕನಲ್ಲಿ ಪರಿಣಾಮಕಾರಿಯಾಗುವಂತೆ ಚಿತ್ರಿಸಿ—ಕೃತಾರ್ಥನಾಗಬೇಕು. ಓದುವ ಕಾಲವು

ವಾದವುಗಳು. ಸಣ್ಣ ಹಸುಳೆಗಳ ಹುಚ್ಚುಕಚ್ಚಾಟದಲ್ಲಿ ಪ್ರಾರಂಭವಾಗುವ ಸನ್ನಿವೇಶ, ರಾಧೆಯನ್ನು ರಾಘವಿನ ಕಣ್ಣಿಗೆ ಬೀಳಿಸುವಲ್ಲಿ ಒಳ್ಳೇ ಸಹಾಯಕವಾಗಿದೆ, ಲೇಖಕರಿಗೆ. ಇವರ ಶೈಲಿಯಲ್ಲಿ ಕಂಡು ಬರುವ ಇನ್ನೊಂದು ಗಮನಾರ್ಹವಾದ ಅಂಶವೆಂದರೆ, ಚೊಕ್ಕಟವಾದ ಈ ಕತೆಯಲ್ಲಿ ಅನಾವಶ್ಯಕವಾದ ವಿವರಣೆ ಎಲ್ಲಿಯೂ ಬಂದಿಲ್ಲ. ಕತೆಗೆ ಪೂರಕವಾದುದನ್ನಷ್ಟೇ-ಎಷ್ಟು ಬೇಕೋ ಅಷ್ಟನ್ನೇ-ಕೊರೆದು ತೆಗೆದಂತೆ ಹೇಳಿ, ಲೇಖನಿಯ ಮೇಲೆ ತಮಗಿದ್ದ ಹಿಡಿತವನ್ನು ಪ್ರದರ್ಶಿಸಿದ್ದಾರೆ. ಸಣ್ಣ ಕತೆಗಾರರೆಲ್ಲರಲ್ಲಿಯೂ ಇರಬೇಕಾದ ಸಹಜಗುಣಗಳಲ್ಲಿ ಒಂದಿದು!

ರಾಘವಿನಂತಹ ಪ್ರೇಮಗ್ರಹ ಪೀಡಿತರು ನಮ್ಮ ಸಮಾಜದಲ್ಲಿ ಅದೆಷ್ಟು ಜನರೇನೋ!-ಎಂದು ವ್ಯಕ್ತಪಡಿಸಿದ ಅಭಿಪ್ರಾಯವು ಸೂರ್ಯ ಪ್ರಕಾಶದಷ್ಟು ಸತ್ಯವಾಗಿದೆ. ಬಿ. ಎಸ್ಸಿ. ಪರೀಕ್ಷೆಯಲ್ಲಿ ಅವನು ಅನುತ್ತೀರ್ಣನಾಗುವುದೇ ಇಂತಹ ಒಂದು ನಿರ್ಣಯಕ್ಕೆ ಬರಲು ಸಹಾಯಕವಾಗಿದೆ. ನಮ್ಮಲ್ಲಿ ಎಂದರೆ ನಮ್ಮ ವಿದ್ಯಾರ್ಥಿ ಸಮಾಜದಲ್ಲಿ, ಎಲ್ಲರೂ ಪರೀಕ್ಷೆ ಹತ್ತಿರ—ಹತ್ತಿರ ಎದೆಯ ಮೇಲೇರಿ ಬಂದಾಗಲೇ ಅಭ್ಯಾಸದ 'ಗೋಕು' ಪ್ರಾರಂಭಿಸುವುದು ಸಹಜನಾದ ಮಾತಾಗಿ ಬಿಟ್ಟಿದೆ. ಇಂಥ ಒಂದು ಅಯಕಟ್ಟಿನ, ಸಂದಿಗ್ಧ ಕಾಲದಲ್ಲಿ ಇಂತಹ ಏನಾದರೂ 'ಪ್ರೇಮಪ್ರಕರಣ' ವಾಗಿ ಬಿಟ್ಟರೆ ಸರಿ, ಅವನ ಫಲಿತಾಂಶಕ್ಕೆ ಧಕ್ಕೆ ಬಂದಿತೆಂಬುದೇ ಸರಿ! ಏಕೆಂದರೆ ಎಲ್ಲವನ್ನೂ ಎದುರಿಸಿ ಸಹಸೇನೆಂಬುದು ಬಹು ದೊಡ್ಡ ಮಾತಾದೀತು. ಅಂತಹ ಮನೋದಾರ್ಢ್ಯ ನಮ್ಮಲ್ಲಿ ಬರಲಾರದು. ಇದನ್ನು ರಾಘವಿನ ಅಪಯಶಸ್ಸಿನಿಂದ ಸೂಚ್ಯವಾಗಿ ಲೇಖಕರು ತಿಳಿಯಪಡಿಸಿದ್ದಾರೆ.

ರಾಘೂ.....ರಾಧೆ.....ಇವೇ ಎರಡು ಕತೆಗಾರರ ಜೀವಂತ ಸೃಷ್ಟಿಗಳು! ಎದೆಯಲ್ಲಿ ಪ್ರೇಮವಿಚಾರಗಳನ್ನು ತುಂಬಿಕೊಂಡ ರಾಘು, ಅಷ್ಟೇ ನಿರ್ಲಕ್ಷ್ಯವಾಗಿ ವರ್ತನೆ ಇಟ್ಟುರುವ ರಾಧೆ ಇವರ ಸಂಗಮ-ಸಾಮರಸ್ಯವನ್ನು ಎಲ್ಲಿಯೂ ತಾರದೆ, ಕತೆಯ ಘನತೆಯನ್ನು ಕಾಯ್ದುಕೊಂಡಿದ್ದಾರೆ, ಲೇಖಕರು. ಅವನು ಮಾತಾಡಿಕೊಂಡಿರುವುದೆಲ್ಲವೂ ಮನಸ್ಸಿನಲ್ಲಿ ಪ್ರತಿಷ್ಠಾಪಿತವಾದ ರಾಧೆಯೊಂದಿಗೆ; ವಿಹರಿಸಿರುವುದೆಲ್ಲವೂ ಕನಸಿನ ರಾಧೆಯೊಂದಿಗೆ! 'ಇಂಥ 'ರಾಘು' ಗಳೂ ಇರುವರೇ?—ಎಂಬ ಸಂದೇಹ ಹುಟ್ಟುತ್ತದೆ, ಅದುದರಿಂದಲೇ 'ಇದೂ ಪ್ರೇಮವೇ?' ಎಂಬುದು ಇನ್ನೊಂದು ಸಂದೇಹ!

ಹೀಗೆ ಕಣ್ಮುಂದಿದ್ದೂ ಅಪರಿಚಿತವಾಗಿರುವ ಕಥಾವಸ್ತುವೊಂದನ್ನು ಬಳಸಿಕೊಂಡು ಲೇಖಕರು, ಈ ಸಣ್ಣಕತೆಯನ್ನು ಹೆಣೆದಿದ್ದಾರೆ. ಅವರ ಶ್ರಮಸಾರ್ಥಕವಾದುದೆಂದೇ ಹೇಳಬೇಕು—ಏಕೆಂದರೆ ಮುಖ್ಯವಾಗಿ ತಮ್ಮ ಕತೆಗಾರಿಕೆಯಿಂದ ಓದುಗರ ಲಕ್ಷ್ಯವನ್ನು ಸೆಳೆದುಕೊಳ್ಳುವುದಿಷ್ಟೇ ಅಲ್ಲದೆ, ಅವರನ್ನು ವಿಚಾರಪರರಾಗುವಂತೆಯೂ ಮಾಡಹಚ್ಚುತ್ತಾರೆ. ಹೆಚ್ಚಿಗೇನು ಹೇಳುವುದು? 'ಸಣ್ಣಕತೆ'ಯು ವಿಮರ್ಶೆಯೇ ಒಂದು 'ದೊಡ್ಡಕತೆ' ಯಾಗಬಾರದಷ್ಟೇ! ಜೀವನದ ಅನಂತ, ವಿವಿಧಮುಖಗಳೆಲ್ಲವೂ ಅಕಾರ ತಳೆದು, ಮೂರ್ತಿಯವರಿಂದ ಸಾಹಿತ್ಯರೂಪದಲ್ಲಿ ಹೊರಬರಲೆಂದು ಹಾರೈಸೋಣ!

ಕೆರಿದಾಗಬಹುದಾದರೂ, ಹೃದಯವನ್ನು ಹೊಕ್ಕುವಿಂತ ಕಥಾವಸ್ತು ವಿನ ಜೀವಿತವು ಬಹುಕಾಲ ಓದುಗನ ಭಾವತಂತ್ರಿಯನ್ನು ವಿಾಟು ತ್ತಿರಬೇಕು. ಇದುವೆ ಇಂದಿನ ಜನತೆ—ಯಂತ್ರಯುಗದಲ್ಲಿ ಭರದಿಂದ ಸಾಗುವ ಬಿರುಸಾತಿದ ನೆಲೆಯುಳ್ಳಿರುವ ಜನತೆ—ಪಣ್ಣಕತೆಗಳಿಂದ ಬಯಸಬಹುದಾದ ಫಲ!

ಜೀವನದ ಹಿರಿತನವನ್ನೆಣಿಸಿ—ತನ್ನ ಪತಿಯ ಹೃದಯದಲ್ಲಿ ಒಳಗೊಳಗೇ ಕುದಿಯುತ್ತಿದ್ದ ಬೇನೆಯನ್ನು—ಪಿಪಾಸೆಯನ್ನು—ಶಾಂತ ಗೊಳಿಸಿ, ಸೋಲು—ಗೆಲುವಿನ ಮಧುರವಾದ ಸ್ಪಂದನದಲ್ಲಿ ಪುತ್ರ-ಮುಖ ಸಂದರ್ಶನವನ್ನು ಹೊಂದಿದವಳಾಗಿ ತಾಯ್ತನದ ಹಿರಿಮೆ ಯೊಡನೆ ಜೀವನವನ್ನು ನಿಟ್ಟಿಸಿದಳು!

ಕಥಾತಂತ್ರದ ಪ್ರಥಮ ವೇದಿಕೆ—

"ಸಪ್ಟಂಬರ್ ತಿಂಗಳ ಒಂದುದಿನ—ರಂಗನಾಥ ಮತ್ತು ಮಂಜುಳೆ ಬೊಂಬಾಯಿಯ ಉದ್ಯೋಗಜೀವನದಲ್ಲಿ ಹಾಸುಹೊಕ್ಕಾ ಗಿದ್ದ ಆ ದಂಪತಿಗಳು—ಆಫೀಸಿಗೆ ತೆರಳುವ ಮುನ್ನ "ದಿ ಬ್ಲೂ ವೆಲ್" ಚಿತ್ರವನ್ನು ನೋಡಲು ಸಮಯವನ್ನು ಗೊತ್ತುಹಚ್ಚಿ ಆಫೀಸುಗಳಿಗೆ ತೆರಳುವರು. ಇಬ್ಬರೂ ಆಫೀಸು ಕೆಲಸವನ್ನು ಮುಗಿಸಿ ಚಿತ್ರಮಂದಿರದಲ್ಲಿ ಕಲೆತು ಚಿತ್ರನೋಡಿ ಆನಂದಪಡುವರು—ಅವರಾ ದಾಂಪತ್ಯಜೀವನದಲ್ಲಿ ಮಾಧುರ್ಯವಿರುವ ಸಂದರ್ಭವೆಂದರೆ ಇಂತಹುದೇ ಅಲ್ಲದೆ ಬೇರೇನಿಲ್ಲ—ಎಂಬುದನ್ನು ಬಿಂಬಿಸು ದಕ್ಕಾಗಿ ಲೇಖಕರು, ಮೊದಲಾಗಿ ಈ ಅವತರಣವನ್ನು ಕಾಣಿಸಿದುದು, ನ ನೋ ವೆ ಚ್ಛಾನಿಕ ಕಥಾಪಣಿಯು ಭಾವಪ್ರಚೋದಕ ಪಥದೀಪಿಕೆಯಾಗಿದೆ ಯೆನ್ನಬೇಕು. ಈ ಭಾಗದಲ್ಲಿ ಕಾಣಿಸಿದ ದಂಪತಿಗಳ ಮಾತು ಕತೆ ಗಳು, ನಾನಸಿಕವಾದ ಕೌತುಕ ಆತುರತೆ ಇವುಗಳು ಇತರ ಜೀವನ ವಿಶಿಷ್ಟವಾಗಿದ್ದರೂ, ಒರೆಹೋರಿದ ಬಗೆಯಲ್ಲಿ ಚೆಲುವಾಗಿವೆಯೆನ್ನ ಬೇಕು "ಸಂತಾನನಿರೋಧ"ವನ್ನು ಒಂದು ನಿರ್ದಿಷ್ಟ ಕಾಲದ ಪರಿಮಿತಿಗೆರವಾಗಿಸಿದ ಆ ದಂಪತಿಗಳ ಮುಂದೆ—ತಜ್ಞೀವನ ಸಶಾನು ಭಾವಿಯಾಗಿ ತೆರೆದೋರಿದ "ದಿ ಬ್ಲೂ ವೆಲ್" ಪರಿಣಾಮಕಾರಿ ಯಾಗಿದೆಯೆನ್ನಬೇಕು!

ದ್ವಿತೀಯ ವೇದಿಕೆ: —

"ಹೆರರ ಮಕ್ಕಳನ್ನು ಸಾಕಿ—ಕೊನೆಗದೇ ಮಕ್ಕಳಿಂದಲೇ ಸಹಕಾರವನ್ನು ಹೊಂದಿ ಜೀವನದ ಕೊನೆಯನ್ನು ಕಾಡ ಹೆಂಗುಸೊ ಬ್ಬಳ ಜೀವನವನ್ನು" ಬಿಂಬಿಸಿದ ಆ ಚಿತ್ರವನ್ನು ನೋಡಿ ಹಿಂತಿರು ಗಿದ ದಂಪತಿಗಳು—ಮನೆಗೆ ಬರುವರು. ಮಂಜುಳಾ ಅಸೌಖ್ಯ ದಲ್ಲಿದ್ದ ತನ್ನ ತಾಯಿಯ ವಿಚಾರವನ್ನು ನೆನೆಸುವಳು ಮುಂದುವರೆ ಯುತ್ತ ಕೊನೆಗಾಕೆ—ಚಿಗುರಿಲೆಯು ವಿಂಡಾ ತಯಾರಿಸಿ ರಾತ್ರಿ ಗಂತಸಿಗೆ ಕೊಡುವಾಗ ತತ "ಮಾಜಾ, ಈ ಒಣ ವಿಂಡಾ ನಾನು ತಿಂದದ್ದು ಯಾವಾಗ?" ಎಂದೆನ್ನುವುದೂ, ಅದಕ್ಕಾಕೆ "ಒಂದು ಲವಾದರೂ ಮರೆತು ತೆಗೆದುಕೊಳ್ಳೀರಾ ಎಂದು ನೋಡಬೇಕೆಂದಿದ್ದೆ" ಎಂದಂದು. ಅದನ್ನು ಬಾಯಿಯಲ್ಲಿ ಹಾಕಿಕೊಂಡಾಗ, ರಂಗನಾಥನಿಂದ ತಿಳಿಮಕೊಳ್ಳಲ್ಪಡುವುದೂ ಗಮನೀಯವಿದೆ; ಸುಂದರವಿದೆ!—ಈ ಮಾತುಗಳ ಮುಂದೆ—ರಂಗನಾಥ ಆಕೆಯನ್ನು ತನ್ನವಳನ್ನಾಗಿಸಲು ಕರೆದಾಗ, ಆಕೆಯಾಡುವ ಮಾತುಗಳೂ, ರಂಗನಾಥನ ಪ್ರತ್ಯುತ್ತರ ಗಳೂ ಆ ರಾತ್ರಿಯ, ಆ ಏಕಾಂತದ ನಿಶ್ಶಬ್ದತೆಯನ್ನು ಕೊರೆಯಲು ಶಕ್ತವಾಗಿವೆಯೆನ್ನಲು ಆನಂದವಿದೆ. ಮುಖ್ಯವಾಗಿ ಈ ಸಂದರ್ಭ ದಲ್ಲಿ ರಂಗನಾಥನ "ಈ ವಯಸ್ಸಿನಲ್ಲಿ ಇಂಥ ನಿರ್ಧಾರಕ್ಕೆ ಜೋತು ಬೀಳುವುದೇ?" ಎಂಬೀ ಮಾತೂ, ಮಂಜುಳೆಯು ಅದೇ ಸಂದ-ರ್ಭದ ಮುಂದೆ ಅಡುವ "ಅಯ್ಯೊ, ನಿನುಗೆಷ್ಟು ಅತುರ ನನಗೂ ಅಷ್ಟೇ ಕಣ್ರೀ! ಆದರೆ ನಾವು ನಮ್ಮ ಜೀವನವನ್ನು ಈ ರೀತಿ ರೂಪಿಸಿ ಕೊಳ್ಳುವುದೆಂದು, ಮದುವೆಗೆ ಮೊದಲೇ ನಾವು ಮಾಡಿದ ಯೋಜನೆಗೆ ನೀವೇ ಅಡ್ಡ ಬಂದರೆ, ನಮ್ಮ ಬದುಕಿಗೆ ಗೊತ್ತುಗುರಿ ಒಂದೂ ಉಳಿಯ ಲಿದಿಲ್ಲ" ಎಂಬೀ ಮಾತು, ನುಸುಳಿ ಬಂದ ಮಾರ್ಮಿಕವಚನ-ನಿಚಯದ ಹೃದಯವನ್ನೆತ್ತಿ ತೋರಿದೆಯೆಂದಾಡಬೇಕಾಗಿದೆ.—ಕೊನೆಗಂತೂ ರಂಗನಾಥ ಸೋತೆದ್ದು "ನೀನೂ ಬೇಡ, ನಿನ್ನ ಸಾಧ ನೇನೂ ಬೇಡ; ತೊಲಗಾಚೆ" ಎಂದಂದು, ಆಕೆಯನ್ನು ತಳ್ಳಿಬಿಡುವುದು ಮಂಜುಳೆಯ ಹೃದಯವನ್ನೇ ಹಿಂಡಿತು. ಆದರೂ ಆಕೆ ಪತನ ಪಕ್ಕಕ್ಕೆ ಬಂದು, ಪತನ ಮಂಗುರುಳಲ್ಲಿ ಕೈಯಾಡಿಸಿ ತನ್ನ ತಪ್ಪನ್ನು ಒಪ್ಪಿಕೊಳ್ಳುವುದು—ಬಹು ಸುಂದರವಾಗಿದೆ. ಆದರೆ ರಂಗನಾಥ ಹಟವನ್ನು ಬಿಡಲಾರ. ಗಂಡೆದೆಯ ಉರಿಯನ್ನು, ಹತ್ತಿಕ್ಕಿದ ಭಾವವನ್ನು, ಹಟವನ್ನು—ಚೆನ್ನಾಗಿ ಚಿತ್ರಿಸಿದ ಲೇಖಕರು, ಆ ರಾತ್ರಿಯನ್ನು ಅವರಿಬ್ಬರ ಪಾಲಿಗೆ ಬೇರ್ಪಡಿಸಿಯೇ ತೋರಿದುದು ಬಹು ರುಚಿರವಾಗಿದೆ. ಆ ರಾತ್ರಿ, ತಾತ್ಕಾಲಿಕವಾದ ಒಂದು ವೈರಿತ್ವ ಪ್ರಸಂಗವನ್ನು ಒದಗಿಸಿತೇ ಹೊರತು, ಅವರಿಗದು ಶಾಶ್ವತ ವಾಗಿ ನೆಲೆನಿಲ್ಲಬಹುದಾದ ಕಹಿಯನ್ನುಣಿಸಲಿಲ್ಲ—ಮರುದಿನ ಬೆಳಗಾ ದೊಡನೆ ಶುಭ್ರವಸನಧಾರಿಣಿಯಾದ, ನಿರಾಭರಣ ಸುಂದರಿಯಾದ ಹೆಂಡತಿಯನ್ನು ನೋಡಿದ ಆತ,—ಪ್ರಸನ್ನಮುಖನಾಗಿಯೇ ಇದ್ದ. ಆತನ ಮುಖದಲ್ಲಿ ಹಿಂದಿನ ದಿನದ ಯಾವ ಅಸಂತೋಷ ಛಾಯೆಯೂ ಇರಲಿಲ್ಲ—ಅಂತೂ ಒಲವಿನಿಂದ ತುಂಬಿನಿಂತ ಅವರು 'ಸಂಡೇ ಫೀಸ್ಟ್'ನ ಏರ್ಪಾಡಿಗೆ ತೊಡಗುವರು. ಕೊನೆಗೆ ಊಟಕ್ಕಣಿಯಾಗುವರು. ಈಗಾಗಲೇ—ಮಂಜುಳೆಯ ತಾಯಿಗೆ ತೀವ್ರ ಅಸೌಖ್ಯ ವೆಂದು ತಾರು ಬರುವುದು ಉದ್ವಿಗ್ನಳಾದ ಮಂಜುಳೆಯು ಅಳ ತೊಡಗಲು ಆತ ಆಕೆಯನ್ನು ಶಾಂತಗೊಳಿಸಿ, ಪ್ರವಾಸಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಒದಗಿಸಿ—ಆಫೀಸ್ ಕೆಲಸದ ಭರದಿಂದ ತನ್ನಾಗಮನದ ಅಸಹಾಯಕತೆಯನ್ನು ತೂಚಿಸಿ—ಆಕೆಯನ್ನು ಮದ್ರಾಸ್ ಎಕ್ಸ್‌ಪ್ರೆಸ್ಸಿನಲ್ಲಿ ಕಳುಹಿಕೊಟ್ಟು—ಆಕೆತು ತವರಿಗೆ ತಾರನ್ನು ಬಿಟ್ಟನು. ಮಂಜುಳೆ ಸಾಗಿದಳು; ದುಃಖಭಾರದ ಹೃದಯ ದಿಂದ. ರಂಗನಾಥನೂ ತನ್ನ ಏಕಾಂತಜೀವನದ ಶೂನ್ಯತೆಯನ್ನು ಕಂಡ ಹಿಂದಿರುಳಿದನು. ಮಂಜುಳೆ ತವರಿಗೆ ಹೊಗುವ ಕಾಲದಲ್ಲಿ—ಅವರಿಬ್ಬರೊಳಗೆ ನಡೆದ—ಕಳೆದ ರಾತ್ರಿಯ ಅಪಮಾಧಾನಪೂರ್ಣ—ಅವಸ್ಥೆಯ—ಪುನರನುಸಂಧಾನವು ತನ್ನಿಮಿತ್ತವಾದ ಮಾರ್ಮಿಕ ಸಂಧಾಪನೆಯು,—ತವರಿಂದ ಹಿಂದೆ ಬರುವ, ತಾಯ್ತನದ ಹಿರಿಯ

ಬಾಳುವೆಯೊಡನೆ ಹಿಂತಿರುಗಲಿರುವ—ಮುಂಜುಳೆಯು ಹೊಸ ಜೀವನ-ವನ್ನು ಬಾಬಿಸಲು ನೆರವಾಗುವ ಒಂದು ಪ್ರಸ್ತಾವನೆಯೆಂದು ನೆನೆಯು ಬಹುದು! ಇಲ್ಲಿ ಕಾಣಿಸಿದ ಪ್ರತಿಯೊಂದು ವಾತೂ ಚೆಲುವಾಗಿದೆ; ಸಂದರ್ಭವನ್ನು ಬೆಳಗಿ ತೋರಿದೆ. ಲಘುಕಥಾ ಮಾರ್ಗದಲ್ಲಿ ಮೂಡಿ ಬರಬೇಕಾದ ರೀತಿಯನ್ನೇ ಲೇಖಕರು ಅನುಸರಿಸಿದ್ದಾರೆ.—

ತೃತೀಯ ವೇದಿಕೆ :—

ಈ ವೇದಿಕೆಯಲ್ಲಿ ರಂಗನಾಥನ ಜೀವನ, ಆತನ ವಿದ್ಯಾಭ್ಯಾಸ, ಆತನು ಮುಂಜುಳೆಯನ್ನು ವಿವಾಹವಾಗುವುದಾದ ಸಂದರ್ಭ, ವಿವಾಹದ ನಿಶ್ಚಯ—ಇವು ಓರಣವಾಗಿ ರೇಖಿಸಲ್ಪಟ್ಟಿವೆ. ಮುಂಜು-ಳೆಯು ಹೊರಟು ಹೋದ ಮೇಲೆ-ರಂಗನಾಥನು ತನ್ನ ಜೀವನವನ್ನು ನೆನೆಯುವ ಬಗೆಯಲ್ಲಿ ಈ ವೇದಿಕೆಯು ಅಲಂಕರಿಸಲ್ಪಟ್ಟಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ—ಮಂಗಳ ಥನು ಮುಂಜುಳೆಯನ್ನು ವಿವಾಹವಾಗುವುದಾದ ಬಗೆಯನ್ನು! ಮುಂಜುಳೆಯು ಹೃದಯವನ್ನರಿತ, ಅಕೆಯು ತಾಯಿ—ರಂಗನಾಥನ ಚಿಕ್ಕಮ್ಮನೊತನೆ ಮದುವೆಯು ಪ್ರಸ್ತಾಪವನ್ನಾಡುವಳು ಈ ಮೂಲ ವಾಗಿ ರಂಗನಾಥ ಮುಂಜುಳೆಯನ್ನು ನೋಡಹೋಗಿ, ಅಕೆಯು ಶೃಂಗಾರವನ್ನು ಕಾತು ಒಲ್ಲವೆ ಹಿಂದಿರುಗುವನು. ಇದನ್ನರಿತ ಮುಂಜುಳೆಯು ತಾಯಿ ತಂದೆಯರು ನಿರಾಶಿತರಾದರೂ, ವಿಧಿಯು ವಶ್ಯ ರಂಗನಾಥನ ಕೈಯಿಂದ ಮುಂಜುಳೆಯನ್ನು ಅಗಲಿಸಲಿಲ್ಲ ಒಂದು ದಿನ ಅಕಸ್ಮಾತ್ತಾಗಿ ವಿಕಾಂತದಲ್ಲಿ ಕಾಣಿಸಿಕ್ಕ ರಂಗನಾಥ ನೊತನೆ—ಮುಂಜುಳೆ—ಧೈರ್ಯದಿಂದ ತನ್ನನ್ನು ಮದುವೆಯಾಗ-ಬೇಕೆಂದು ಕೇಳಿಕೊಳ್ಳುವಳು. ಆದರೆ ರಂಗನಾಥ ತನ್ನ ಬಡತನವನ್ನು ಮುಂದಿಟ್ಟು -ಅಪಹಾಸ್ಯಕ್ಕೆಯನ್ನು ಅಕೆಯು ಶ್ರೀಮಂತ ಜೀವನದ ಮುಂದಿಟ್ಟು— "ತಾನು ವಿವಾಹವನ್ನು ನಿಷೇಧಿಸಲಿಲ್ಲ" ಎಂದಾಡಿ ವಿರಮಿಸಿದನು. ಅಲ್ಲಿಂದ ಮುಂದೆ ಹೃತ್ಪೂರ್ವಕವಾಗಿ ಮುಂಜುಳೆ ತನ್ನ ಹೃದಯದೊಳಿತನು ಮುಂದಿಟ್ಟು ಅಕೆಯ ವಾತುಗಳು, ರಂಗನಾಥನು ತನ್ನೆದೆಯವಾಕರಲ್ಲಿ ಕೆದುಗಿದ್ದ ಭಾವನೆಯ ಜೀವನದ ರೀತಿಯನ್ನು ಬಾಬಿಸಿ ಅಕೆಯ ವಾತುಗಳು, ರಂಗನಾಥನು ದಾಪತ್ಯಕ್ಕೆ —ವಿಕಲ್ಪಾವಬಂಧಕ್ಕೆ ಎಡವಾಗುವ ನಾಂದಿಯನ್ನು ಹೊತ್ತ ಶವಬ್ದಗಳ ಮುಂದೆ ಬೆಳಗುವ ಸುಂದರವಚನಗಳೆಂದು, ಧಾರಾಳವಾಗಿ ಹೇಳಬಹುದು! ಇಲ್ಲಿ ಕಾಣಿಸಿದ ಪ್ರತಿಯೊಂದು ವಾತೂ ಉದ್ದಗಣ ಯೋಗ್ಯವಾಗಿವೆಯಾದರೂ ಕೊನೆಯಲ್ಲುಳ್ಳವರು, ವಿವಾಹಾತ್ಪೂರ್ವ-ದಲ್ಲಿ—ಒಪ್ಪಂದಕ್ಕೆ ಬಾದ ಯೋಜನೆಯಲ್ಲಿ—ಅಕೆಯಾಡಿದ "ಅಷ್ಟೆಲ್ಲವೇ, ಮುನಿಸಿನಾವ ನೀಲಿ ಕನಸ್ಸ ಐದು ವರುಷಗಳವರೆಗೆ, ನಮಗೆ.... ಮುಳ್ಳು ಅಗದಹಾಗೆ....ನಾನಿಬ್ಬರೂ ನೋಡಿಕೊಳ್ಳಬೇಕು" ಎಂಬೀ ವಾತು ನಮ್ಮಲ್ಲಿಂದು ಬಗೆಯು ನಗುನೆಲ್ಲಿಂದು ಬದಲಿ—ಅಕೆಯಲ್ಲಿನ ನಾಚಿಕೆಯು ತೆರೆಯುರಳಿಸಿತು ಎನ್ನಬಹುದು! ಅಂತೂ ಅದೇ ಬಗೆಯಲ್ಲಿ ಎಂಗಿನಿಂತ ಅವರ ವಾತುಕತೆಯು —ವಿವಾಹ ನಿಶ್ಚಯದಲ್ಲಿ ಕೊನೆ. ಗೊಂಡಿತು ಅಂದಿನ ಮುಚ್ಚಂಜೆಯಲ್ಲಿ!

ಈ ಸಂದರ್ಭದಲ್ಲಿಂದು ವಾತನ್ನಾಡಲು ಮರೆಯಬಾರದು. ಇಂದಿನ ಪುರೋಗತಕಾಲಗಳಲ್ಲಿ ಜೀವನದ ಹೃದಯವು ಮುಂದೆ ಮುಂಜುಳೆ ಗಂಡುಬೀರಿಯಾಗಿ ತನ್ನ ವಿವಾಹದ ಕುರಿತು ತಾನೇ ಅಪರಿಚಿತನೆನಿಸಿದ ರಂಗನಾಥನ ಮುಂದೆ ಪ್ರಸ್ತಾಪಿಸುವುದು ತಪ್ಪಲ್ಲವಾದರೂ, ಸಂಸ್ಕಾರವುಳ್ಳ ಮುಟ್ಟಿನನ್ನು ಸುಳು ವೆಟ್ಟಿನಂತೆ ಕಾಣುತ್ತದೆ. ರಂಗನಾಥನನ್ನೇ ತನ್ನೆದೆಯ ಅಮೃತಕುಂಭವನ್ನಾಗಿ-ಸಲು ನೆನೆದ ಮುಂಜುಳೆ—ರಂಗನಾಥನನ್ನು ವಿಕಾಂತದಲ್ಲಿ ಕಂಡಾಗ ಮಾತಾಡ ಬಯಸಿದುದು, ವಿಕಾಂತನನ್ನು ತೋಂಕೆಹೊಟ್ಟು ಕರೆ ದೊಯ್ದು ಮಾತಾಡಿಸಿ, ಮಾತಾಡಿದುದು—ಅಕೆಯು ಅತ್ಯಾತುರ ಭರಿತವಾದ ಕಾಂಕ್ಷೆಯು ಮುಂದೆ ಸ್ವಾಭಾವಿಕವಿವೇಚನೆಯನ್ನು, ಅಕೆ ಗಂಡುಹೆಣ್ಣಿಯಲ್ಲಿ ಕಾಣಿದುದು—ಸ್ತ್ರೀಜೀವನದ ಮುಂದೆ ತುರು ಧಾರವಾದ ಹೊರೆಯನ್ನು ಹೇಗೆಂತಾಗುತ್ತಿದೆಯೆಂದು ಹೇಳಬೇಕಾ ಗುತ್ತದೆ. ಅಷ್ಟು ವಾತುಗಳನ್ನು ಅಕೆ ಆ ಒಂದೇ ಸಂದರ್ಭದಲ್ಲಿ ಚೆಲ್ಲಾಡಬೇಕಾದರೆ? -ಈ ರೀತಿ ವಾತಾಡುವ ಮುಂಚೆಯೂ ರ ಲಾರೆಯೆಂದಲ್ಲ —ಈ ವಾತಿನ ಅರ್ಥ. ಈ ಜೀವನಕ್ಕೆ ಇದು ತುರು ಹೆಜ್ಜೆಯಿತೆಂದು ವಾತ್ರ ಹೇಳಬೇಕು. ಏನೇ ಆಗಲಿ. ಸಂದರ್ಭ ವಿದು, ಈ ವೇದಿಕೆಯಲ್ಲಿ ಅರಳಿನಿಂತ ಜೀವನಪ್ರಸ್ತಾಪವಿದು—ಓದು ಗನನ್ನು ನಿರಾಕರಿಗೊಳಿಸದೆ ನೆರೆಹೊರೆದು ಸಾಗುತ್ತಿದೆಯೆಂದು ಧೈರ್ಯ ದಿಂದ ಹೇಳಬಹುದು!

ಅಂತೂ ಈ ಗತಕಾಲದ ಜೀವನವನ್ನು ರಂಗನಾಥನು ತೆಕ್ಕೆ ತೆಗೆದು ನೆನೆದು, ತನ್ನ ಮನೆಗೆ ಮುಂಜುಳೆಯು ವಿರಹದಿಂದ ಬಿನ್ನನಾಗಿ ಸಾಗುವನು.

ಚತುರ್ಥವೇದಿಕೆ—

ಇಲ್ಲಿ ಮುಂಜುಳೆಯು ತವರಿನ ಪ್ರಸ್ತಾಪವಿದೆ. ಮುಂಜುಳೆ ತಮ್ಮ ಊರಿಗೆ ಕೊಂಡ್ಲ ವಿರಹದಲ್ಲಿ ಅಕೆಯ. ತಾಯ್ತನದ ಕಂಡು ಪ್ರತಿಫಲ ವನ್ನು ವಿಚಾರಪೂರ್ಣ ಒಂದೊಂದಾಗಿ ಪ್ರೋಕ್ಷಿಸಲ್ಪಟ್ಟಿವೆ ಈ ಭಾಗದಲ್ಲಿ! ಕೊನೆಗಾಕೆ—ಸಂ ಸಹಪಾಠಿಯಿಂದು ಬಳಿಗ್ಯೆ ವಿವಾಗ—ಅಕೆಯೂ ಅಡಿದ ತಾಯ್ತನದ ಕುರಿತಿರುವ ವಾತುಗಳೂ, ತತ್ಸಾಮಾನ್ಯವಾದ ದೈಹಿಕ ವಿಚಾರದ ವಾತುಗಳನ್ನು ಕೇಳಿ ವಿಲಕ್ಷಣವಾದ ವಿಷ್ಣುವಕ್ಕೆ ಗುರಿಯಾಗುವುದನ್ನು —ರೇಖಿಸಲು ಯೋಗ್ಯವಾದ ರೀತಿಯಲ್ಲಿ ತೋರಿ ದ್ದಾರೆ ಸಹಪಾಠಿಯು ವಿಚಾರಿಸಿತ್ತ —ಅಕೆಯನ್ನು ಮುಂಜುಳೆಯು ಹೃದಯವು ಪುನರ್ಜನನಿಗೆ ಕಾರಣವನ್ನಾಗಿಸಿ, ಕೆಟಿಯನ್ನು ಉದಯಿಸುವಾ ರದ ಸ್ಪಷ್ಟವಸುಧಿಗೊಸ್ಕು ಬಗೆ ರೂಪಿಸಿದಾಗಿದೆ ಇಂತೂ ಗೆಳತಿಯು ವಾತಿನಿಂದ ಮುಂಜುಳೆಯು ಹೃದಯವು ತಾಯ್ತನವನ್ನಾಗಿ— ಸ್ಪಷ್ಟ ಜೀವನ ಕಾಂಕ್ಷೆಯು ಪೂರ್ಣತೆಗಾಗಿ ಹಾರೈಸಿ ಕಕ್ಕುಲಾತಿಯು. ಮುಂದೆ ಅಕೆ ತಾನಾಗಿಯೆ ಊರಿಗೆ ಹೊರಡಲೆಳಸಿ —ಕನ್ನಡಾಂಬೆಯಾಣೆ ಪೂಜೆ ಮುಗಿಸಿಕೊಂಡು ಊರಿಗೆ ಬರುವನ!—ಆ ಬಾವಿನ ರಾತ್ರಿ ಚಳಿಯಿತ್ತು! ಆ ರಾತ್ರಿ ಮುಂಜುಳೆ "ಎಷ್ಟೋ ಕಾಲ ನಿರಾಂಬ ಎಷ್ಟು ವಾತನಾಗಿದ್ದೆ! " ಎಂದಾಗ ಅಕೆ "....ಮತ್ತಾಗಲಿ ನಿನ್ನೆಯೆ ಧ್ಯಾನ" ಎಂದಾಡುವುದೂ ಒಕನೆ ಅಕೆ "ಸಾಧನೆಗಳನ್ನಿಟ್ಟಿವೀರಾ"

(ಪುಟ ೨೦೨ ನೋಡಿರಿ

ಸಾದರ ಸ್ವೀಕಾರ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಹಾರ್ಮೋನಿಯಂ, ರೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮೂಲ! ಹ್ಯಾಮಾಜೆಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು ಬಿ. ಜೆ. ಮುತ್ರಗಿ

ಲಜ ಅಣುವ್ರತ (ಹಿಂದೀ ಪಕ್ಷಪತ್ರಿಕೆಯ ನಿರ್ಮಾಣ ವಿಶೇಷಾಂಕ). ಸಂಚಾಲಕರು ಶ್ರೀಮಾನ್ ಪ್ರಕಾಶಸಿಂಗ ವೈದ, ಅಖಿಲಭಾರತ ಅಣುವ್ರತಸಮಿತಿ, ಪೋರ್ಟುಗೀಜ್ ಚರ್ಚ್‌ಸ್ಟ್ರೀಟ್, ಕಲಕತ್ತಾ. ಡಿ. ಅ ೨೯೪ ಪುಟಗಳು. ವಾರ್ಷಿಕ ಚಂದಾ ೬-೦-೦.

ಸಮಾಜದಲ್ಲಿ ಸೌಶೀಲ್ಯ, ಸದಾಚಾರ, ಕರ್ತವ್ಯಬುದ್ಧಿ ಮೊದಲಾದುವುಗಳು ಹಬ್ಬುಗೆಯಾಗಬೇಕೆಂಬ ಆದರ್ಶವನ್ನು ಇರಿಸಿಕೊಂಡು ಕಾರ್ಯಮಾಡುತ್ತಿರುವ ಪತ್ರಿಕೆಯಿದು. ಈ ಸಂಚಿಕೆಯಲ್ಲಿ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು, ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಮೊದಲಾಗಿ ಹಲವಾರು ಜನ ಸುಪ್ರಸಿದ್ಧ ನಾಯಕರ—ಸಾಹಿತ್ಯಿಕರ ವಿಚಾರವ್ಯಜೋದಕ ಲೇಖನಗಳಿವೆಯಲ್ಲದೆ, ಖಲೀಲ್‌ಗಿಬ್ರಾನ್, ಇಮರ್ಸನ್ ಮೊದಲಾದ ಪರದೇಶೀಯ ತಾತ್ತ್ವಿಕ ಸಾಹಿತ್ಯಿಕರ ಲೇಖನಗಳ ಅನುವಾದಗಳೂ ಇವೆ. ಸುಪ್ರಸಿದ್ಧ ಹಿಂದೀ ಕವಿಗಳ ಕೃತಿಗಳೂ ಇದರಲ್ಲಿ ಪ್ರಕಟವಾಗಿವೆ. ಭಾರತೀಯ ಸರಕಾರೀ ಕಚೇರಿಗಳಲ್ಲಿ ನೆಲೆಗೊಂಡಿರುವ ಲಂಚಗುಳಿತನವನ್ನು ಖಂಡಿಸುವ ವಿಡಂಬಕ ಚಿತ್ರಪುಟಗಳನ್ನೂ ಅಲ್ಲಲ್ಲಿ ನೋಡಬಹುದು. ಈ ಪತ್ರಿಕೆ ಇರಿಸಿಕೊಂಡಿರುವ ಉದ್ದೇಶ, ಅದನ್ನು ಸಾಧಿಸುವುದಕ್ಕಾಗಿ ನಡೆಸಿರುವ ವಿಧಾಯಕ ಪ್ರಯತ್ನ—ಇವು ಪ್ರಶಂಸನೀಯವಾಗಿವೆ

೮೬ ವೀರಹನುಮಂತ ದೇವರ ಗದ್ಯಪುರಾಣ (ಪ್ರಾಚೀನ ದೇವಾಲಯವೊಂದರ ಪರಿಚಯ). ಲೇಖಕರು ಮತ್ತು ಪ್ರಕಾಶಕರು ಶ್ರೀ. ಕೆ. ಎ. ಡಬ್ಲ್ಯು. ರಾವ್, ಕ್ಲಾರ್ಕ ಸಿವಿಲ್‌ಕೋರ್ಟ್, ಅಥಣಿ, ಜಿಲ್ಲಾ ಬೆಳಗಾಂವಿ. ಕ್ರೌ. ಅ. ೨೦ ಪುಟಗಳು. ಬೆಲೆ ೦-೬-೦.

ವಿಜಾಪುರ ಜಿಲ್ಲೆಯ ಬಾಗಿಲುಕೋಟೆ ತಾಲೂಕಿನಲ್ಲಿರುವ ಕುಳಗೇರಿ ಗ್ರಾಮದ ಶ್ರೀಹನುಮಂತ ದೇವಸ್ಥಾನವು ಐತಿಹಾಸಿಕ ಕಾಲದಿಂದಲೂ ಸುಪ್ರಸಿದ್ಧವಾದುದು. ಉತ್ತರ ಕರ್ನಾಟಕದ ಹಲವಾರು ಮನೆತನಗಳಲ್ಲಿ ಕುಲದೈವತದ ಸ್ಥಾನವನ್ನು ಪಡೆದು, ಇಲ್ಲಿಯ ಆಂಜನೇಯ ಪೂಜೆಗೊಳ್ಳುತ್ತಿದ್ದಾನೆ. ಈ ಆಂಜನೆಯ ದೇವಸ್ಥಾನಕ್ಕೆ ಸಂಬಂಧಿಸಿದ ಐತಿಹಾಸಿಕ ವಿಷಯಗಳನ್ನೂ ಜನರ ಬಾಯಲ್ಲಿರುವ ಪವಾಡದ ಕಥೆಗಳನ್ನೂ ಇದರಲ್ಲಿ ಸಂಗ್ರಹಿಸಿ ಬರೆಯಲಾಗಿದೆ. ಲೇಖಕರು ಕೇವಲ ಭಾವುಕರಾಗಿ ಇದನ್ನು ಬರೆದಿರುವರಲ್ಲದೆ, ಇತಿಹಾಸದ ವಾಸ್ತವದೃಷ್ಟಿಯ ಕಡೆಗೆ ಅಷ್ಟೊಂದು ಲಕ್ಷ್ಯಕೊಟ್ಟಂತಿಲ್ಲ. ಆದರೆ ಈ ಪುಸ್ತಕವನ್ನು ಪ್ರಕಟಿಸಿ ಲೇಖಕರು ಈ ಐತಿಹಾಸಿಕ ದೇವಸ್ಥಾನದ ಕಡೆಗೆ ಸಂಶೋಧಕರ ಲಕ್ಷ್ಯವನ್ನು ಎಳೆದಿದ್ದಾರೆ. ಇತಿಹಾಸ ಸಂಶೋಧಕರು ಈ ದೇವಸ್ಥಾನದ ಮೂಲವನ್ನು ಕಂಡು ಹಿಡಿಯಬೇಕು

೮೭ ಆಧುನಿಕ ಗದ್ಯಸಾಹಿತ್ಯ (ಸಂಕಲಿತ ಪುಸ್ತಕ) ಸಂಪಾದಕರು ಶ್ರೀಮಾನ್ ಕೆ ಗೋಪಾಲಕೃಷ್ಣರಾಯರು. ಕಾರ್ಯದರ್ಶಿ ಕರ್ನಾಟಕ ಸಾಹಿತ್ಯಪರಿಷತ್ತು ಬೆಂಗಳೂರು. ಪ್ರಕಾಶಕರು ಕರ್ನಾಟಕ ಸಾಹಿತ್ಯಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೨. ಕ್ರೌ. ಅ ೧೬೬+೨೪೮ ಪುಟಗಳು. ಬೆಲೆ ೨-೧೨-೦.

೮೮ JORNAL OF THE KARNATAK UNIVERSITY (೧ನೆಯ ಸಂಪುಟದ ೨ನೆಯ ಸಂಚಿಕೆ) ಪ್ರಧಾನ ಸಂಪಾದಕರು ಪ್ರೊ. ಜಿ ಎಸ್. ದೀಕ್ಷಿತ ಎಂ. ಎ ಅವರು., ಪ್ರಕಾಶಕರು. ಶ್ರೀ. ಎಸ್. ಎಸ್. ಒಡೆಯರ್, ರಿಜಿಸ್ಟ್ರಾರ್ ಕರ್ನಾಟಕ ಯುನಿವರ್ಸಿಟಿ, ಧಾರವಾಡ. ರೊಯಲ್ ಅ. ೨೦೮ ಪುಟಗಳು. ಬೆಲೆ ೨-೮-೦.

೮೯ ಭಾರತ ಸಾಹಿತ್ಯಸಂಘ ಮಲ್ಲೇಶ್ವರಂ, ಬೆಂಗಳೂರು (ಸಂಸ್ಥೆಯ ೧೧ ವರ್ಷಗಳ ಪರಿಚಯ) ಡೆ ಅ. ೧೨ ಪುಟಗಳು.

೯೦ ಕನ್ನಡ ಗಂಗಾಲಹರಿ (ಅನುವಾದಿತ ಕೃತಿ). ಮೂಲ ಸಂಸ್ಕೃತಕವಿ ಜಗನ್ನಾಥಪಂಡಿತನ 'ಗಂಗಾಲಹರಿ' ಎಂಬ ಕೃತಿಯನ್ನು, ಪಂಡಿತ ಗಲಗಲಿ ಪಂಥೂನಾಥಾಚಾರ್ಯರು ಕನ್ನಡಿಸಿದ್ದಾರೆ. ಪ್ರಕಾಶಕರು: ಸಂಪಾದಕರು 'ಮಧುರವಾಣಿ' ಸುಸ್ಥಿತಿ ಮಾಸಪತ್ರಿಕೆ, ಗದಗು. ಕ್ರೌ. ಅ. ೬ ಪುಟಗಳು ಬೆಲೆ ೧-೦-೦.

೯೧ ಅರಣ್ಯರೋದನ (ವ್ಯಂಗ್ಯಕವನ ಸಂಕಲನ) ಬರೆದವರು ಶ್ರೀಮಾನ್ ವಿ ಜಿ. ಭಟ್ಟರು, ಧಾರವಾಡ. ಪ್ರಕಾಶಕರು ಕೆನರಾ ವೆಲ್‌ಫೇರ್ ಟ್ರಸ್ಟಿನ ಜನತಾ ಪ್ರಕಾಶನ, ಅಂಕೋಲಾ (ಉ. ಕ ಜಿಲ್ಲಾ). ಕ್ರೌ. ಅ. ೭೬ ಪುಟಗಳು ಬೆಲೆ ೧-೮-೦.

ಕರ್ನಾಟಕದಲ್ಲಿ ಭಾವಗೀತ ಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ ?

ನಿಜವಲ್ಲವೆಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ :

ಮುದ್ದಣ ಮಾತು (ಶಿಶುಭಾವದ ಗೀತಗಳು)	..	....	೦—೧೫–೦
ಒಡಹಾಡಿ (ನಲ್ಮಾಡುಗಳು)	....	....	೧—೮—೦
ವಿರಹಿಣಿ (ಶೃಂಗಾರರೂಪಕ ಗೀತಗಳು)	....	....	೧—೪—೦
ತಾರಹುಣ್ಣಿವೆ (ವಿವಿಧ ಭಾವಗೀತಗಳು)	....	....	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ !

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar

ಸಂಪುಟ
೨೦

ಸಂಚಿಕೆ
೯

ಸಾಹಿತ್ಯಿಕನಾರು?

ಬಹುಜನರ ಮತಗಳಿಂದಾಯ್ದು ಸಿದ್ಧನಾಡಲು
ಸಾಹಿತ್ಯಿಕನೇನು ಶಾಸನಸಭೆಯ ಸದಸ್ಯನೇನಯ್ಯಾ!
ಪದವಿ–ಪ್ರಶಸ್ತಿಗಳನಿತ್ತು ನಿರ್ಮಿಸುವೆನೆಂದರೆ,
ಸಾಹಿತ್ಯಿಕನೇನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೇನಯ್ಯಾ!
ಧನಬಲ, ಸ್ನಾನಬಲ, ದೇಹಬಲಗಳಿಂದ ಅಕ್ಕಮಿನಿಲ್ಲಬಹುದೆಂದರೆ
ಸಾಹಿತ್ಯಿಕನ ಸ್ನಾನವೇನು ಜನಜಂಗುಳಿಯ ಮುಂದಾಳುತನವೇನಯ್ಯಾ!
ಬರೆದು–ಬಾವಲಿಗಳಿಂದ ಸಮಾಜದಲ್ಲಿ ಹಿರಿಮೆ ಮೆರೆದೀಶಲ್ಲದೆ
ಸರಸಸಾಹಿತ್ಯಿಕನ ಮನ್ನಣೆ ದೊರೆತೀತೇನಯ್ಯಾ!
ಇಂತಹ ಬರಡುಮಾನಿಸರೇ ಸಾಹಿತ್ಯಿಕರೆಂದು ಮೆರೆಯ ತೊಡಗಿದರೆ
ಆ ನಾಡು ನಾಡು—ಆ ನಾಡಿಗರೆ ಕೇಡಿಗರು ಕಾಣಯ್ಯಾ!

(೧೯೪೭ ಜೂನ್)

—ಸಾಮಾಜಿಕ

ಈ ಸಂಚಿಕೆಯಲ್ಲಿ

卐

ಜಯಂತಿಯ ಕಸ್ತೂರಿ-ಕೋಟೆಲೆಗಳ ಕಥೆ (ಸಂಪಾದಕೀಯ)
ಸಂಪಾದಕರು ೩೨೧

ನಾಡಸಜೆ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೩೨೩

ಕನ್ಯಾಸೆರೆ (ಒಂದು ಕಥೆ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೩೨೫

ಹಣದ ಎಣಿಕೆ (ಸಂಶೋಧನಾತ್ಮಕ)
ಶ್ರೀ. ಎ. ಎಂ. ಅಣ್ಣಿಗೇರಿ ಎಂ. ಎ. ಧಾರವಾಡ ೩೩೪

ನಮ್ಮ ಊರು (ಕವನ)
ಸೌ. ಶಾರದಾದೇವಿ ಗೋಕಾಕ, ಧಾರವಾಡ ೩೩೬

ಅಲೆದಾಟ (ಕವನ)
ಶ್ರೀ. ಅ. ರಾ. ಸೇ. ದಾವಣಗೆರೆ ೩೩೭

ಬೆಳಗು ಹರಿಯಲಿ ! (ಅನುವಾದಿತ ಕಥೆ)
ಶ್ರೀ. ಬಿ. ಜಯಾಚಾರ್ಯ ಬಿ. ಎಸ್ಸಿ., ಎಲ್‌ಎಲ್. ಬಿ ಬೆಂಗಳೂರು ೩೩೯

ನಿಕೋತಾ ಕೃಷ್ಣೇವ್ (ವ್ಯಕ್ತಿತ್ವ ಪರಿಚಯ)
ಶ್ರೀ. ವೆಂ. ಮು. ಜೋಶಿ, ಧಾರವಾಡ ೩೪೨

ಈ ಸಲದ ಕ. ಸಾ. ಸಮ್ಮೇಳನ (ವರದಿ)
'ವಿಹಂಗಮ' ೩೪೦

ಸಹೃದಯರಲ್ಲಿ ಅರಿಕೆ (ಜಯಂತಿಗಾಗಿ)
ಶ್ರೀ. ಸಗರ ಕೃಷ್ಣಾಚಾರ್ಯರು, ರಂಗಂಪೇಟೆ ೩೪೫

ಗಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಆರ್. ಜಿ. ಕುಲಕರ್ಣಿ ಬಿ. ಎ., (ಆನರ್ಸ್) ಧಾರವಾಡ ೩೪೭

ಸಾದರ ಸ್ವೀಕಾರ ಹೊದಿಕೆಯ ಒಳಪುಟದಲ್ಲಿ

ಜಯಂತಿ

ಸಂಪುಟ ೨೦ ಸಂಚಿಕೆ ೯

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವ
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಜಯಂತಿಯ ಕಷ್ಟ ಕೋಟಲೆಗಳ ಕಥೆ

ಜಯಂತಿ ತನ್ನ ವಾಚಕರಿಗೆ ಆಗಾಗ ತನ್ನ ಕಷ್ಟ-ನಷ್ಟಗಳನ್ನು ಹೇಳಿಕೊಳ್ಳುತ್ತಲೇ ಬಂದಿದೆ. ಕೇಳಿ ಕಿವಿಗೊಟ್ಟ ಕನ್ನಡಿಗರು ಕೈಬೆರಳೆಣಿಕೆಯವರು; ಕೇಳಿಯೂ ಕೇಳದಂತೆ ಅಸಡ್ಡೆಯಿಂದ ನಡೆದುಕೊಂಡವರೇ ಬಹು ಜನರು.

ಕನ್ನಡಪತ್ರಿಕೆ ಹಾಗಿರಬೇಕು ಹೀಗಿರಬೇಕು—ಎಂದು ಉಪನ್ಯಾಸನಡಾಡುವವರನ್ನು, ಹರಟೆ ಹೊಡೆಯುವವರನ್ನು—ನಾವು ಎಲ್ಲ ಕಡೆಗೂ ನೋಡುತ್ತೇವೆ; ಆದರೆ ಕೊಂಡು ಓದುವ ವಾಚಕರ ಸಂಖ್ಯೆ ಹೆಚ್ಚಿದಲ್ಲದೆ " ಹಾಗೆ....ಹೀಗೆ " ಪತ್ರಿಕೆಗಳು ಹೊರಹೊಮ್ಮಲಾರವೆಂಬುದನ್ನು ಯಾರೂ ಅರಿತುಕೊಂಡಂತಿಲ್ಲ.

ಕನ್ನಡ ನಾಡಿನ ಏಕೀಕರಣದ ಕನ್ನಡಿಯು ಗುರಿಯ ಆಶಯವನ್ನು ಇಟ್ಟುಕೊಂಡು, ಜಯಂತಿ ಇದುವರೆಗೂ ಅನೇಕ ಕಷ್ಟ-ಕೋಟಲೆಗಳ ಹೊರೆಹೊತ್ತು ಬದುಕಿಕೊಂಡು ಬಂದಿದೆ. ಆದರೆ ಅದರ ಆಶಯವಾಗಿ ನಿರಾಶೆಯಾಗಿ ಪರಿಣಮಿಸಿದುದು, ವಿಷಾದದ ಸಂಗತಿಯಾಗಿದೆ. ಹಿಂದಿನದಕ್ಕಿಂತ ಹೆಚ್ಚಿನ ಕಷ್ಟದ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡು ಜಯಂತಿ, ಜೀವನ-ಮರಣಗಳ ನಡುವೆ ಒದ್ದಾಡುತ್ತ ಇದೆ.

ಹಿಂದೆ ಹೈದರಾಬಾದ್ ಕರ್ನಾಟಕದ ಶಾಲೆಗಳಲ್ಲಿ ಜಯಂತಿಗೆ—ಅಲ್ಲಿಯ ಸರಕಾರ ಸ್ಥಾನವನ್ನು ಒದಗಿಸಿಕೊಟ್ಟಿತ್ತು. ಆದರೆ ಆ ಭಾಗ ಮೈಸೂರು ರಾಜ್ಯದಲ್ಲಿ ವಿಲೀನವಾದೊಡನೆ, ಜಯಂತಿಯ ಆ ಸ್ಥಾನ ತಪ್ಪಿಹೋಗಿದೆ; ತಪ್ಪಿದ್ದೇ ಅಲ್ಲ. ಹಿಂದೆ ಬೇರೆ ಬೇರೆ ಶಾಲೆಗಳಿಗೆ ಜಯಂತಿಯನ್ನು ಪೂರೈಸಿದ ಬಗ್ಗೆ ಬರಬೇಕಾದ ನೂರಾರು ರೂಪಾಯಿಗಳ ಹಣವೂ ಇದುವರೆಗೆ ನಮ್ಮ ಕೈಗೆ ಬಂದಿಲ್ಲ. ಅಧಿಕಾರಿಗಳಿಗೆ ವಿಷಯ ತಿಳಿಸಿ ಬಿನ್ನವಿಸಿಕೊಂಡರೆ, ಒಂದೂ ಉತ್ತರವಿಲ್ಲ.

ಜಾತೀಯ ದೃಷ್ಟಿಯಿಂದ ಜಯಂತಿಯನ್ನು ನೋಡಿ, ಅದನ್ನು ನಿಷ್ಕಾರಣವಾಗಿ ದ್ವೇಷಿಸುವ ಹೊಣೆಗಾರ ಅಧಿಕಾರಿಗಳು ಕೆಲವರಿಂದಲೂ ಜಯಂತಿಯ ಪ್ರಗತಿ ಕುಂಠಿತವಾಗಿದೆಯೆಂಬ ನಿಸ್ಸಂಶಯವನ್ನೂ, ಈಗ ಅನಿವಾರ್ಯವಾಗಿ ಹೇಳಬೇಕಾಗಿದೆ ಉತ್ತರಕರ್ನಾಟಕದ ವಿದ್ಯಾಖಾತೆಯ [redacted] ಅಧಿಕಾರಸ್ಥಾನದಲ್ಲಿದ್ದವರೊಬ್ಬರು. ತಾವು ಹೋದ ಕಡೆಗಳಲ್ಲೆಲ್ಲ-ಬರುತ್ತಿದ್ದ [redacted]—ಬಂದುಮಾಡಿಸಿ ಪುಣ್ಯಕಟ್ಟಿಕೊಂಡ ಪ್ರತ್ಯಕ್ಷ ನಿದರ್ಶನಗಳು ಬೇಕಾದಷ್ಟಿವೆ.

ಮೈಸೂರು ಸರಕಾರದ ವಿದ್ಯಾಇಲಾಖೆಯವರಿಗೆ, ಜಯಂತಿಯಂತಹ ಸಾಂಸ್ಕೃತಿಕ ಮಾಸಪತ್ರಿಕೆಯ ಪೋಷಣೆಗಾಗಿ ಅನೇಕ ಸಲ ಬರೆದುಕೊಂಡಾಯಿತು. ಕತೋರ ಮೌನದ ಹೊರತು ಅವರಿಂದ ಸಹಾನುಭೂತಿಯ ಉತ್ತರವೇ ಇಲ್ಲ.

ಮೈಸೂರು ಸರಕಾರ, ತನಗೆ ಬೇಕಾದ ಪತ್ರಿಕೆಗಳಿಗೆ ಜಾಹೀರಾತುಗಳನ್ನು ಕೊಟ್ಟು ಆರ್ಥಿಕ ಅನುಕೂಲತೆಗಳನ್ನು ಕಲ್ಪಿಸುತ್ತಿದೆ. ಅದಕ್ಕಾಗಿಯೂ ಸರಕಾರದ ಪ್ರಕಟನಾವಿಭಾಗದವರಿಗೆ ಬರೆದುಕೊಳ್ಳಲಾಯಿತು. ಅವರಿಂದಲೂ ಯಾವ ಉತ್ತರವೂ ಇಲ್ಲ. ಕನ್ನಡಿಗರ ಸರಕಾರವೇ ಕನ್ನಡಪತ್ರಿಕೆಗಳ ಜೀವನದ ವಿಚಾರ ಮಾಡದೆ ಹೋದರೆ, ಮಿಕ್ಕ ಸರಕಾರಗಳಿಂದ ಜಯಂತಿ ನೆರವನ್ನು ನಿರೀಕ್ಷಿಸಬೇಕಾದರೂ ಹೇಗೆ?

ಹುಟ್ಟಿದಂದಿನಿಂದಲೂ ಜಯಂತಿ ಕರ್ನಾಟಕ ಏಕೀಕರಣಕ್ಕಾಗಿ ದುಡಿಯಿತು. ಈಗ ಅದರ ಉದ್ದೇಶ ಸಿದ್ಧಿಯಾಗಿ, ಕರ್ನಾಟಕದ ಉದಯವಾಗಿರುವಾಗ ಜಯಂತಿ ತನ್ನ

ಅತ್ಯಮಯಕಾಲವನ್ನು ಕಂಡುಕೊಳ್ಳಬೇಕಾದ ಪರಿಸ್ಥಿತಿ ಬಂದು ಕುಳಿತಿದೆ. ಇದೊಂದು ಆಶ್ಚರ್ಯ-ಅಸಮಾಧಾನಗಳ ಮಾತು.

ಸಂಸ್ಕೃತಿಯೆಂಬುದನ್ನು ಬಾಳಿನಿಂದ ಬದಿಗೆ ಸರಿಸುತ್ತಿರುವ—ಕೇವಲ ಸಾಕ್ಷರತೆಯ ಪ್ರಚಾರವನ್ನು ನಡೆಸಿದ—ಇಂದಿನ ನಮ್ಮ ಶಿಕ್ಷಣಪದ್ಧತಿಯೂ ಜಯಂತಿಯಂತಹ ಸಾಂಸ್ಕೃತಿಕ ಮಾಸಪತ್ರಿಕೆಗಳ ಜೀವನಸ್ಥೈರ್ಯವನ್ನು ಅಲುಗಾಡಿಸಲು ಒಂದು ಮುಖ್ಯ ಕಾರಣವಾಗಿದೆ! ಇಂತಹ ಶಿಕ್ಷಣ ಪಡೆದು ಸುಶಿಕ್ಷಿತರೆನಿಸಿಕೊಳ್ಳುವವರಿಗೆ ಜಯಂತಿ ಬೇಕಾಗುತ್ತಿಲ್ಲ ಅದುದರಿಂದಲೇ ಜನಸಾಮಾನ್ಯರಲ್ಲಿ ಜಯಂತಿಯನ್ನು ಓದಿ ಅರಗಿಸಿಕೊಳ್ಳುವವರು ಅಪೂರ್ವವಾಗಿದ್ದಾರೆ. ಇನ್ನು ಜಯಂತಿಯಂತಹ ಪತ್ರಿಕೆಯ ಅಗತ್ಯವನ್ನರಿತ ಸುಶಿಕ್ಷಿತರು, ಪುಕ್ಕಟೆ ಓದಲು ಬಯಸುವರಲ್ಲದೆ, ಜೇಬಿನಿಂದ ಹಣವನ್ನು ಹೊರಗೆ ತೆಗೆಯಲು ಇಷ್ಟಪಡುವುದಿಲ್ಲ. ಇವರಿಂದ ಬಣ್ಣದ ಮಾತಿನ ಹೊಗಳಿಕೆಯನ್ನಲ್ಲದೆ, ಜಯಂತಿ ಇನ್ನಾವ ಸಹಾಯವನ್ನೂ ಪಡೆಯುವಂತಿಲ್ಲ.

ದೇಶದ ಆರ್ಥಿಕಪರಿಸ್ಥಿತಿಯ ಬಿಕ್ಕಟ್ಟು, ಜನರ ಕೈಯಲ್ಲಿ ಹಣವಿಲ್ಲದಂತೆ ಮಾಡಿ, ಅದರ ಪರಿಣಾಮ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಆಗಿದೆಯೆಂದೂ ಕೆಲವರು ಹೇಳುವುದುಂಟು. ಆದರೆ ಜನರ ಕೈಯಲ್ಲಿ ಹಣವಿಲ್ಲವೆಂಬುದರ ಸತ್ಯಾಸತ್ಯತೆಯು, ನಮ್ಮ ಚಲಚ್ಚಿತ್ರ ಮಂದಿರ, ಉಪಾಹಾರಗ್ರಹ, ಬೆಡಗಿನ ಅಂಗಡಿಗಳು—ಇವುಗಳ ವ್ಯವಹಾರವೃದ್ಧಿಯನ್ನು ನೋಡಿದರೆ ಪ್ರತ್ಯಕ್ಷವಾಗಿ ಕಂಡು ಬರುವುದು. ಇಂತಹವುಗಳಿಗೆ ಹಣದ ಹೊಳೆಯನ್ನು ನಿತ್ಯವೂ ಹರಿಸುತ್ತಿರುವವರು, ಸಾಂಸ್ಕೃತಿಕ ಪ್ರಚಾರದ ಚಟುವಟಿಕೆಯ ಪ್ರಸಂಗದಲ್ಲಿ ಬಡತನದ ಬವಣೆಯನ್ನು ತೋಡಿಕೊಳ್ಳುವುದು ಆಶ್ಚರ್ಯದ ಮಾತೇ ಅಲ್ಲವೆ?

ಇಂತಹ ವಿಷಮಪರಿಸ್ಥಿತಿಯಲ್ಲಿಯೂ ಜಯಂತಿಯು ಗುಣಕ್ಕಾಗಿ ಅದನ್ನು ಹೃತ್ಪೂರ್ವಕ ಪ್ರೀತಿಸುವ ಮಹನೀಯರು ಕೆಲವು ಜನರಿದ್ದಾರೆ. ಇವರು ಇಂತಹದೊಂದು ವಿಶಿಷ್ಟ ಜಾತಿಗೇ ಸೇರಿದವರೆಂದಲ್ಲ. ಎಲ್ಲ ಜಾತಿ-ಮತದವರೂ ಈ ವಾಚಕವರ್ಗದಲ್ಲಿದ್ದಾರೆ. ಇವರ ಪ್ರೇಮದ ಆಶ್ರಯದಿಂದಲೆ ಇದು ಇದುವರೆಗೆ ಮಾರ್ಗವನ್ನು ಕ್ರಮಿಸಿದೆ. ಆದರೆ ಈ ಅಲ್ಪಸಹಾಯ ಜಯಂತಿಯ ಜೀವನಕ್ಕೆ ಸಾಲದಂತಾಗಿದೆ. ಪ್ರತಿವರ್ಷವೂ ಸಂಪಾದಕರ ತಲೆಯಮೇಲೆ ನಷ್ಟದ ಹೊಣೆ ಹೆಚ್ಚುತ್ತ ನಡೆದಿದೆ. ಒಂದು ವ್ಯಕ್ತಿ ಇದರ ಭಾರವನ್ನು ಎಷ್ಟೆಂದು ಹೊರಬಲ್ಲದು? ಜನತೆ-ಸರಕಾರಗಳಿಂದಲೂ ಸಹಕಾರ ದೊರೆತರೆ, ಸಂಪಾದಕನೂ ಬಹುಕಾಲ ಬದುಕಬಹುದು; ಜಯಂತಿಯೂ ಬಹುಕಾಲ ಬದುಕೀತು.

ಒಂದು ವಿಚಿತ್ರ ವಿಷಯವೆಂದರೆ: ಜಯಂತಿಗೆ ಎಂದಿನಿಂದಲೂ ಚಂದಾದಾರರಾಗಿದ್ದುಕೊಂಡ ಅನೇಕ ಸರಕಾರೀ ಅಧಿಕಾರಿಗಳು ಈಗ ನಿವೃತ್ತರಾದುದರಿಂದ, ಅನಿವಾರ್ಯವಾಗಿ ಅವರು ಜಯಂತಿಯ ಕೈಯನ್ನು ಕ್ರಮವಾಗಿ ಬಿಡುತ್ತಲಿದ್ದಾರೆ. ಈ ಬಿಡುತ್ತಲಿರುವವರ ಪ್ರಮಾಣದಿಂದ ಹೊಸದಾಗಿ ಜಯಂತಿಯನ್ನು ಬರಮಾಡಿಕೊಳ್ಳುವ ಜನರ ಪ್ರಮಾಣ ಕಡಿಮೆಯಾಗಿದೆ. ಹೊಸಬರಲ್ಲಿ ವಾಚನಾಭಿರುಚಿಯೆ ಕಡಮೆಯೋ ಅಥವಾ ಜಯಂತಿಯಂತಹ "ಮನೆತನಕ್ಕ" ವಿಚಾರದ ಮಾಸಪತ್ರಿಕೆ ಅವರಿಗೆ ರುಚಿಸುವುದಿಲ್ಲವೊ!

ಅಹುದು, ಅನೇಕ ಜನರಿಗೆ ಜಯಂತಿ ರುಚಿಸುವುದಿಲ್ಲವೆಂಬುದೂ ನಮ್ಮ ಅನುಭವಕ್ಕೆ ಬಂದ ಮಾತಾಗಿದೆ. ಯಾವುದೇ ಹಳ್ಳಿಯ ವಾಚನಾಲಯದಲ್ಲಿ, ಜಯಂತಿಯನ್ನು ಏಕೆ ಬರಮಾಡಿಕೊಳ್ಳುವುದಿಲ್ಲವೆಂದು ನೀವು ಕೇಳಿ! ಅಲ್ಲಿಯ ಸಂಚಾಲಕರಿಂದ ಬರುವ ಉತ್ತರವಿದು:

"ಹೌದಪ್ಪಾ, ಜಯಂತಿ ಒಳ್ಳೆಯ ಪತ್ರಿಕೆ ಸರಿ! ಅದರೊಳಗಿನ ವಿಷಯನೂ ಉಚ್ಚ ತರಗತಿಯದ್ದು ಇರತಾವ. ಆದರೆ ಅದರೊಳಗ ಸಿನೇಮಾ ವಿಚಾರ, ಭವಿಷ್ಯ, ಲೈಂಗಿಕವಿಚಾರ ಇರೂದಿಲ್ಲ; ಅದಕ್ಕ ನಮ್ಮ ಮೆಂಬರ್ ಜನರು, ಅದನ್ನ ಬಿಟ್ಟು ಬ್ಯಾರೇ ಪತ್ರಿಕೀ ತರಿಸಲಿಕ್ಕೆ ಹೇಳತಾರ!"

ಇಂತಹ ಪತ್ರಿಕೆಕೆಗಳ ವಾಚಕರೇ ಬಹುಜನರಿರುವಲ್ಲಿ ಜಯಂತಿಯಂತಹ ಪತ್ರಿಕೆಗಳು ಬದುಕಬೇಕು ಹೇಗೆ? ಆದರೆ, ಇಂತಹ ವಾಚನದಿಂದ ಜನತೆಯಲ್ಲಿ ಜೀವನ ಸ್ವಾಸ್ಥ್ಯದ ಜ್ಞಾನ, ಸುಸಂಸ್ಕಾರಗಳ ಬೆಳೆವಣಿಗೆಯಾದೀತೇ? ನಮ್ಮ ಸಮಾಜಧುರೀಣರು ಇದರ ವಿಚಾರ ಮಾಡಬೇಕಲ್ಲವೆ? ನಮ್ಮ ಜನಸಾಮಾನ್ಯರಲ್ಲಿ ಬಹಳ ಜನರಿಗೆ ಓದುವ ಅವಶ್ಯಕತೆ ತಿಳಿದಿಲ್ಲ, ಓದವ ಬಹುಜನರಿಗೆ ಏನು ಓದಿದರೆ ಒಳ್ಳೆಯದೆಂಬುದು ತಿಳಿದಿಲ್ಲ.

ಜಯಂತಿ ಯಾವುದೇ ಒಂದು ರಾಜಕೀಯ ಪಕ್ಷದ ಪತ್ರಿಕೆಯಾಗಿಲ್ಲ. ಹಾಗೆ ಆಗಿದ್ದರೆ, ಆ ಪಕ್ಷದ ಧುರೀಣರನ್ನು ಕೊಂಡಾಡಿ, ವಿರೋಧಿಪಕ್ಷದ ಧುರೀಣರನ್ನು ಅಶ್ಲೀಲ ಶೈಲಿಯಲ್ಲಿ ಟೀಕಿಸಿ ಲಾಭ ಪಡೆಯಬಹುದಾಗಿತ್ತು. ಆದರೆ ಜಯಂತಿ ಸಾಂಸ್ಕೃತಿಕ ಸಮತಾವಾದದ ಧೋರಣೆಯನ್ನು ಇರಿಸಿಕೊಂಡು ಹೊಮ್ಮುದರಿಂದ, ಯಾವುದೇ ರಾಜಕೀಯ ಪಕ್ಷದ ಒಳ್ಳೆಯ ಕಾರ್ಯಕ್ರಮವನ್ನೂ ಎತ್ತಿ ಹಿಡಿಯುತ್ತದೆ, ಒಳ್ಳೆಯದಾಗಿ ಇರದುದನ್ನು ಸಪ್ರಮಾಣವಾಗಿ ಉಚ್ಚತರ್ಕಶೈಲಿಯಲ್ಲಿ ಟೀಕೆ ಮಾಡುತ್ತದೆ. ಆದುದರಿಂದಲೆ ಯಾವ ರಾಜಕೀಯ ಪಕ್ಷದ ಕೃಪೆಗೂ ಜಯಂತಿ ಪಾತ್ರವಾಗಿಲ್ಲ ಔದಾಸೀನ್ಯ ಉಪೇಕ್ಷೆಗಳಿಗೆ ಮಾತ್ರ ಸಾಕಷ್ಟು ಪಾತ್ರವಾಗಿದೆ ಏಕೆಂದರೆ ಜಯಂತಿ, ಅನ್ಯಾಯ ಯಾವ ಪಕ್ಷದ್ದೇ ಇರಲಿ, ಅದನ್ನು ನಿಷ್ಠುರ ಸತ್ಯದ ನುಡಿಗಳಿಂದ ಬಯಲಿಗೆ ತರುತ್ತದೆ

ಇನ್ನೆಲ್ಲ ಕಾರಣಗಳಿಂದ ಜಯಂತಿ ಬಲಗುಂದಿ ಕಂಗೆಟ್ಟು ಹೋಗಿದೆ. ಇನ್ನು ಮೂರು ತಿಂಗಳಿಗೆ ಜಯಂತಿ ತನ್ನ ೨೦ನೆಯ ವರ್ಷವನ್ನು ಮುಗಿಸುವುದು. ೨೦ ವರ್ಷ ವಯಸ್ಸಿನದಾದರೂ ಜಯಂತಿಯ ದೇಹ ರೋಗದ ಕೂಸುಗಳಂತೆ ಬಡಕಲಾಗಿಯೇ ಇದೆ. ಅದರ ಹೊಟ್ಟೆಗೆ ಸಾಕಷ್ಟು ಹಿಟ್ಟಿಲ್ಲ; ಮೈಗೆ ಸಾಲುವಷ್ಟು ಬಟ್ಟೆಯಿಲ್ಲ. ಕನ್ನಡ ಜನತೆ ಇದರ ವಿಚಾರವನ್ನೇನಾದರೂ ಮಾಡುವುದೆ?

—ಸಂಪಾದಕರು

ನಾಡನಡೆ

ಕನ್ನಡ ಸಾಹಿತ್ಯಸಮ್ಮೇಳನದ ಪ್ರತಿಧ್ವನಿ

ಭವಿಷ್ಯಕಾಲದ ಕುತೂಹಲವಾಗಿದ್ದ ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ವಿಷಯ, ಈಗ ಭೂತಕಾಲದ ನೆನಪಿನ ಸ್ವರೂಪವನ್ನು ಪಡೆದಿದೆ. ನಡೆದು ಹೋದ ಈ ಸಮಾರಂಭವನ್ನು ಕುರಿತು ಆಡುವ ಉತ್ಸಾಹದ ನುಡಿಗಳೂ ಅಲ್ಲಲ್ಲಿ ಕೇಳಬರುತ್ತಲಿವೆ; ನಿರಾಶೆಯ ನುಡಿಗಳೂ ಆಗಾಗ ಕಿವಿಗೆ ಬೀಳುತ್ತಲಿವೆ. ಸಮ್ಮೇಳನ ನಡೆಸಿದವರ ಪಕ್ಷಪಾತಿಗಳಾದ ಪತ್ರಿಕಾವ್ಯವಸಾಯಿಗಳು, ನಡೆದ ಕಾರ್ಯಕ್ರಮಗಳನ್ನೆಲ್ಲ ಮಿರುಗುನುಡಿಗಳಿಂದ ಬಣ್ಣಿಸಿದುವು. ವಿರೋಧಿಗಳಾದ ಪತ್ರಿಕಾ ವ್ಯವಸಾಯಿಗಳು ಕೆಣಕುನುಡಿಗಳಿಂದ ಟೀಕಿಸಿ ಪಕ್ಷ ದ್ವೇಷವನ್ನು ಸಾಧಿಸಿಕೊಂಡುವು. ಇಂದಿನ ಜೀವನದ ರೀತಿಯಲ್ಲಿ ಇವೆಲ್ಲ ನಡೆಯಬೇಕಾದುದೇ ಎನ್ನಿರಿ. ಆದರೆ ಪ್ರಗತಿಯ ದಾರಿಯಲ್ಲಿ ನಡೆಯಬೇಕಾಗಿರುವ ನಾವು, ನಡೆದ ಕಾರ್ಯಕ್ರಮಗಳಲ್ಲಿ—ಅದ್ದಾಶವಾಗಿಯೋ, ಅನಿವಾರ್ಯವಾಗಿಯೋ—ಆಗಿರುವ ಅಕ್ರಮ-ಗಳನ್ನು ಪ್ರಾಮಾಣಿಕಭಾವದಿಂದ ಒಪ್ಪಿಕೊಂಡು ಮುಂದೆ ಹೆಜ್ಜೆ ಯಿಡಬೇಕು.

ಮೊದಲನೆಯದಾಗಿ ಬಳ್ಳಾರಿಯ ಈ ಸಾಹಿತ್ಯಸಮ್ಮೇಳನವೂ ಈ ನೊದಲು ನಡೆದು ಬಂದ ಜಾತ್ರೆಯ ಪರಂಪರೆಯನ್ನೇ ಮುಂದು-ವರಿಸಿತು. ಸಮ್ಮೇಳನಕ್ಕಾಗಿ ಹೆಚ್ಚು ಜನರು ಸೇರುವಂಥೆ, ರಾಜ್ಯ-ಪಾಲರನ್ನು ಕರೆಸಿ ಮೆರವಣಿಗೆ ಮಾಡಿಸಿದುದು, ಜನರ ಜಂಗುಳಿಯನ್ನು ಕೂಡಿಸುವ ಒಂದು ಆಕರ್ಷಣೆಯ-ನಿಮಿತ್ತವೆ! ಇದರಿಂದ ಸಾಹಿತ್ಯ ಸಮ್ಮೇಳನದ ಕಾರ್ಯಕಲಾಪದಲ್ಲಿ ಕಾಲೋಚಿತವಾದ ಹೊಸತನ-ವನ್ನೇನೂ ತುಂಬಿದಂತಾಗಲಿಲ್ಲ. ಇಷ್ಟೇ ಅಲ್ಲ; ಮಹಾರಾಜರ ಮೆರವಣಿಗೆಯ ಕಾರ್ಯ ಮುಗಿದ ಮೇಲೆ, ಸಾಹಿತ್ಯ ಸಮ್ಮೇಳನದ ಕಾರ್ಯ ಮುಗಿಯಿತೆಂದು ಭಾವಿಸಿದವರೇ ಬಹುಜನರು.

ಸಾಹಿತ್ಯಸಮ್ಮೇಳನದ ಕಾಲದಲ್ಲಿ ಮೊದಲ ತರಗತಿಯ ಮಾನ-ಮನ್ನಣೆಗಳೆಲ್ಲ ನಿಯೋಜಿತ ಅಧ್ಯಕ್ಷರಿಗೇ ಸಲ್ಲಬೇಕಾದುದು ಯುಕ್ತಿ ಯುಕ್ತವಾದ ಮಾತು. ಹೀಗಿರುವಾಗ, ಅವರ ಮುಖವನ್ನು ಕೂಡ ಇನ್ನೊಬ್ಬರಿಗೆ ತೋರಿಸದಂತೆ ಮಾಡಿ, ಸಾಹಿತ್ಯ ಸಮ್ಮೇಳನದ ಮೆರೆ-ವಣಿಗೆಯನ್ನು ಸರಕಾರೀ ಅಧಿಕಾರಿಗಳ ಮೆರವಣಿಗೆಯ ಸ್ವರೂಪಕ್ಕೆ ತಿರುಗಿಸಿದುದು, ಸಮ್ಮೇಳನ ಸಂಚಾಲಕರ ಅಜಾಗರೂಕತೆಯೇ ಸರಿ!

ಯಾವುದೇ ಪರಿಷತ್ತು-ಸಮ್ಮೇಳನಗಳ ಸ್ವಾಗತ ಮಂಡಲಿಯ ಕಾರ್ಯಕರ್ತರು, ಕೇವಲ ಸೇವಾಬುದ್ಧಿಯಿಂದ ಕಾರ್ಯ ಮಾಡ-ಬೇಕಲ್ಲದೆ, ತಮ್ಮ ಮುಖವನ್ನೇ ಎಲ್ಲ ಕಡೆಗೂ ಮೆರೆಯಿಸಿಕೊಳ್ಳಲು ಆ ಸಂದರ್ಭವನ್ನು ಸಾಧನವನ್ನಾಗಿ ಮಾಡಿಕೊಳ್ಳಬಾರದು. ಸ್ವಾಗತ-ಮಂಡಲಿಯು ಹೊಣೆಗಾರ ಕಾರ್ಯಕರ್ತರ ವೈಯಕ್ತಿಕ ಸ್ವಾರ್ಥ ದೃಷ್ಟಿ-ಪಕ್ಷಪಾತ ಬುದ್ಧಿಗಳು ಇಂತಹ ಸಮ್ಮೇಳನ ಸಂದರ್ಭಗಳಲ್ಲಿ ತಲೆಯೆತ್ತಿ ನಿಂತರೆ, ಇಷ್ಟ ಪರಿಣಾಮಗಳನ್ನು ಸಾಧಿಸುವವರ ಬದಲು ಅನಿಷ್ಟದ ಭೂತ-ಪಿಶಾಚಿಗಳನ್ನು ಬಡಿದೆಬ್ಬಿಸಿದಂತಾಗುವುದು.

ಗೋಷ್ಠಿಗಳ ಗೊಂದಣಗುಣಿತ

ಬಳ್ಳಾರಿಯಲ್ಲಿ ಸಮ್ಮೇಳನ ದಿನಗಳಲ್ಲಿಯೆ ಆರೇಳು ಬೇರೆ ಬೇರೆ ಗೋಷ್ಠಿಗಳು ನಡೆದುವು ಆದರೆ ಇವೆಲ್ಲವುಗಳ ಪರಿಣಾಮ ಕೇವಲ ಸಂಚಾರಿಯಾಗಿ ಬಿಟ್ಟಿತಲ್ಲದೆ, ಸ್ಥಾಯಿಸ್ವರೂಪವನ್ನು ಪಡೆದುದು ಒಂದೂ ಇಲ್ಲ. ಉದ್ಘಾಟಕ-ಸ್ವಾಗತಾಧ್ಯಕ್ಷ-ಅಧ್ಯಕ್ಷರ ಉದ್ದುದ್ದ ಭಾಷಣಗಳಲ್ಲಿಯೆ ಗೋಷ್ಠಿಗಳ ಬಹಳ ವೇಳೆ ನಿಚ್ಚವಾಯಿತು. ಮಾತನಾಡಲು ಚರ್ಚೆಮಾಡಲು ಬಂದ ಸಾಹಿತ್ಯಾಭ್ಯಾಸಿಗಳಿಗೆ ಸಾಕಷ್ಟು ವೇಳೆಯೆ ದೊರೆಯಲಿಲ್ಲ. ಮಾತನಾಡಿದವರಲ್ಲಿ ಅನೇಕರು ಹಾಡಿದುದನ್ನೇ ಹಾಡಿದ ಕಿಸುವಾಯದಾಸರಿನಿಸಿಕೊಂಡಿದ್ದಾರಲ್ಲದೆ, ಹೊಸಮಾತ ಗಳನ್ನೇನೂ ಹೇಳಲ್ಲ. ಇಂತಹ ಗೋಷ್ಠಿಗಳಿಂದ ನಮ್ಮ ಸಾಹಿತ್ಯದ ಪ್ರಗತಿ-ಪ್ರಕರ್ಷಗಳಿಗೆ ಏನು ಪ್ರಯೋಜನವಾದೀತು?

ಗೋಷ್ಠಿಗಳ ಸ್ವರೂಪದ ಬದಲಾವಣೆಯಾಗುವುದು ಅತ್ಯಂತ ಅಗತ್ಯವಾಗಿದೆ. ಗೋಷ್ಠಿಗಳು ಜನಜಂಗುಳಿಯ ಕಾರ್ಯಕ್ರಮಗಳಿಂದ ಪ್ರತ್ಯೇಕವಾಗಿದ್ದು, ಆ ಆ ವಿಷಯಗಳ ತಜ್ಞರಿಂದಲೇ ತುಂಬಿರಬೇಕು. ಅಲ್ಲಿ ಆ ಆ ವಿಷಯಗಳ ಭೂತ-ವರ್ತಮಾನ-ಭವಿಷ್ಯತ್, ಕಾರ್ಯ-ಗಳ ಚರ್ಚೆ-ವಿಚರ್ಚೆ ನಡೆಯಬೇಕು. ಲಕ್ಷಣತಂತ್ರಗಳ ವಿಚಾರದಲ್ಲಿ ವಾದ-ವಿವಾದಗಳು ಸಾಗಬೇಕು. ಆ ವರ್ಷದ ಆ ವಿಭಾಗದ ನಿರ್ಮಿತಿಯಲ್ಲಿ ಅತ್ಯುತ್ಕೃಷ್ಟವೆಂದು ಪರಿಗಣಿತವಾದ ಸಾಹಿತ್ಯದ ವಾಚನ-ವಿಮರ್ಶೆಗಳು ನಡೆಯಬೇಕು. ಆ ಗೋಷ್ಠಿಯಲ್ಲಿ ಸರ್ವ ಮಾನ್ಯತೆಯನ್ನು ಪಡೆದ ಸಾಹಿತ್ಯಿಕನನ್ನು, ಸಮ್ಮೇಳನದ ಮುಖ್ಯ ಕಾರ್ಯಕ್ರಮದಲ್ಲಿ ಸತ್ಕರಿಸಿ ಜನತೆಗೆ ಅವನ ಕಾರ್ಯದ ಪರಿಚಯ ಮಾಡಿಕೊಡಬೇಕು.

ಬೇರೆ ಬೇರೆ ಗೋಷ್ಠಿಗಳು, ಒಂದೆ ಕಾಲದಲ್ಲಿಯೆ ಬೇರೆ ಬೇರೆ ಕಡೆಗೆ ನಡೆಯಬಹುದು. ಸಾಹಿತ್ಯಿಕರು ತಮಗೆ ಬೇಕಾದ ಗೋಷ್ಠಿ ಯಲ್ಲಿ ಭಾಗವಹಿಸಬಹುದು. ಇದರಿಂದ ವೇಳೆಯೂ ವ್ಯರ್ಥವಾಗದು, ಸಾಹಿತ್ಯದ ವಿವಿಧವಿಭಾಗಗಳ ವಿಚಾರ-ಚರ್ಚೆಯನ್ನು ಸಂಪೂರ್ಣ ರೀತಿಯಿಂದ ಮಾಡಿದಂತಾಗುವುದು. ಕೇವಲ ಉತ್ಸವಪ್ರಿಯರಾಗಿ ಬಂದ ಜನರಿಗಾಗಿ, ಮುಖ್ಯಸಭಾಭವನದಲ್ಲಿ ವಿದ್ವಾಂಸರ ಉಪನ್ಯಾಸ, ಗಮಕಿಗಳ ಕಾವ್ಯವಾಚನ, ಭಾವಗೀತಗಾಯನ, ವಿಶಾಂಕಗಳ ಪ್ರದರ್ಶನ, ವಿಚಾರಸಂಕಿರಣ ಇವುಗಳನ್ನು ನಡೆಸಬಹುದು. ಗೋಷ್ಠಿ ಗಳೂ ಮುಖ್ಯ ಕಾರ್ಯಕಲಾಪಗಳಲ್ಲಿ ಸೇರಿಕೊಂಡರೆ, ಅವುಗಳಲ್ಲಿಯ ಶಾಸ್ತ್ರೀಯ ತಾಂತ್ರಿಕ ಚರ್ಚೆಗಳು, ಜನಜಂಗುಳಿಗೆ ನೀರಸವೆನಿಸಿ ಗೊಂದಲವೇಳಬಹುದು. ಮುಂದಿನ ವರ್ಷದ ಸಮ್ಮೇಳನ ಸಂಚಾ-ಲಕರು, ಈ ಮಾತಿನ ಮಹತ್ತ್ವವನ್ನು ಲಕ್ಷ್ಯದಲ್ಲಿಟ್ಟುಕೊಂಡು ಗೋಷ್ಠಿಗಳನ್ನು ನಡೆಸುವುದು ಒಳ್ಳೆಯದು.

ಅಧ್ಯಕ್ಷೀಯ ಭಾಷಣಗಳು

ಕರ್ನಾಟಕದ ಜಾಗೃತಿಯನ್ನೂ ಮಾಡಿರದ ಕಾಲದಲ್ಲಿ, ಸಾಹಿತ್ಯ ಸಮ್ಮೇಳನ ತಾನು ಸೇರುವ ಕನ್ನಡ ಪ್ರದೇಶದಲ್ಲಿ, ಸಾಹಿತ್ಯದಪ್ರಾಥಮಿಕ ಚಯವನ್ನು ಮಾಡಿಕೊಡಬೇಕಾಗಿತ್ತು. ನಾಡು ನುಡಿಯ ಬಗೆಗೆ ಜನರಲ್ಲಿ ಅಭಿಮಾನವನ್ನು ಹುಟ್ಟಿಸಲು ಐತಿಹಾಸಿಕ ವೈಭವನೆನ್ನೆಲ್ಲ ಬಣ್ಣಿಸಿ ಹೇಳಬೇಕಾಗುತ್ತಿತ್ತು. ಅದುದರಿಂದ ಅಂದಿನ ಅಧ್ಯಕ್ಷರು 'ಹಳೆಯದೆಲ್ಲ ಹೊನ್ನು' ಎಂಬುದನ್ನು ಪ್ರಚಾರ ಮಾಡಲು, ಕನ್ನಡಿಗರ ಸಾಹಿತ್ಯೇತಿಹಾಸವನ್ನು 'ವೇದಕಾಲ' ದಿಂದ ಆರಂಭಿಸಿ ಸ್ಮೃತಿಕಾಲ, ಪುರಾಣ ಕಾಲದಲ್ಲಿ ಮುಂದುವರಿಸಿ, ಇತಿಹಾಸ ಕಾಲದಲ್ಲಿ ತಿರುಗಾಡಿ, ವರ್ತಮಾನಕಾಲಕ್ಕೆ ತಂದು ಹಚ್ಚುತ್ತಿದ್ದರು. ಇನ್ನೊಂದು ವಿಶೇಷವೆಂದರೆ ವರ್ತಮಾನವನ್ನು ಕುರಿತು ಹೇಳಲಿಕ್ಕೆ ಅವರಿಗೆ ವಿಷಯವೇ ಸಿಕ್ಕುತ್ತಿರಲಿಲ್ಲ; ಏಕೆಂದರೆ ಪಠ್ಯಪುಸ್ತಕಗಳ ಹೊರತು ವರ್ತಮಾನ ಸಾಹಿತ್ಯಗ್ರಂಥಗಳ ನಿರ್ಮಿತಿಯೇ ಹೆಚ್ಚಾಗಿರಲಿಲ್ಲ. ಅದು ಹೆಚ್ಚಾಗುವುದಕ್ಕಾಗಿಯೆ ಕನ್ನಡಿಗರ ಪ್ರಾಚೀನ ಸಾಹಿತ್ಯದ ವೈಭವವನ್ನವರು ಬೆಳೆಸಿ ಹೇಳಬೇಕಾಗುತ್ತಿತ್ತು.

ಇಂದು ಕಾಲ ಬದಲಾಗಿದೆ ವರ್ತಮಾನ ಕನ್ನಡದಲ್ಲಿ ಸಾಕಷ್ಟು ಸಾಹಿತ್ಯ ನಿರ್ಮಿತಿಯಾಗುತ್ತಲಿದೆ. ಅದುದರಿಂದ ಸಾಹಿತ್ಯಸಮ್ಮೇಳನ–ಗೋಷ್ಠಿಗಳ ಅಧ್ಯಕ್ಷರು, ಆ ವರ್ಷದ ನಿರ್ಮಿತಿಯ ವೈಶಿಷ್ಟ್ಯಗಳು, ಕುಂದು ಕೊರತೆಗಳು, ಆಗಬೇಕಾಗಿರುವ ಸಾಹಿತ್ಯ ಕಾರ್ಯ, ದೇಶ–ವಿದೇಶಗಳಲ್ಲಿ ನಡೆದಿರುವ ಹೊಸ ಹೊಸ ಸಾಹಿತ್ಯಿಕ ಸ್ವರೂಪ, ಅದಕ್ಕಾಗಿ ಸಾಗಿರುವ ಚಟುವಟಿಕೆ ಇವುಗಳನ್ನು ಕುರಿತು ಪ್ರಾರಂಭ ಭಾಷಣ ಮಾಡಬೇಕಲ್ಲದೆ, 'ಹಳೆಯ ಹಿಟ್ಟನ್ನೇ ಮತ್ತೆ ಬೀಸುವ ಕೆಲಸವನ್ನು ಮಾಡಬಾರದು. ಆ ದೃಷ್ಟಿಯಿಂದ ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ಭಾಷಣವೊಂದು ವರ್ತಮಾನ ವಿಚಾರಗಳಿಂದ ಕೂಡಿದೆ. ಕಲಾಗೋಷ್ಠಿಯು ಈ ಸಲ ಮೊದಲನೆಯದಾಗಿ ಕೂಡಿದುದರಿಂದ, ಅದರ ಅಧ್ಯಕ್ಷರ ಭಾಷಣವು ಶಂಶೋಧಕ ಸ್ವರೂಪದ್ದಿದ್ದು, ಕನ್ನಡಿಗರಲ್ಲಿ ಅಭಿಮಾನವನ್ನು ಹುಟ್ಟಿಸುವಂತಿರುವಾಗಿದೆ. ಮುಂದಿನ ಸಲದ ಅಧ್ಯಕ್ಷರೂ ಇದೇ ಬಗೆಯ ಮಾತುಗಳನ್ನು ಆಡುವುದಾದರೆ, ಅದನ್ನು ಮತ್ತೆ ನಾವೇಕೆ ಕೇಳಬೇಕು? ಒಂದೆರಡು ಗೋಷ್ಠಿಗಳನ್ನಂತೂ ಸ್ವಾಗತಾಧ್ಯಕ್ಷ-ಅಧ್ಯಕ್ಷರ ಭಾಷಣಗಳ. ಇದೇ ಅದೇ ಮಾತನ್ನು ಹೇಳಿದಂತಿವೆ. ಗೋಷ್ಠಿಗಳ ಅಧ್ಯಕ್ಷರಂತೂ ತಮ್ಮ ತಮ್ಮ ವಿಭಾಗದ ಹಳೆಯ ಹೊಸ ಕೃತಿಗಳನ್ನು ಸಂಪೂರ್ಣವಾಗಿ ಅಭ್ಯಾಸಿಸಿದವರಿರಬೇಕು. ಸಂತೆಯ ಹೊತ್ತಿಗೆ ಮೂರು ವೊಳ ನೀದಂತಹ ಔಪಚಾರಿಕ ಮಾತಿನ ಮಾಲೆಗಳಾಗಿರಬಾರದು, ಅವರ ಭಾಷಣ

ಪ್ರಾಚ್ಯಸಂಶೋಧನ ಕೇಂದ್ರದ ಕನ್ನಡ ಶಾಖೆ.

ಇದುವರೆಗೆ ಕರ್ನಾಟಕ ರಾಜ್ಯಕ್ಕೆ ಅಸ್ತಿತ್ವವಿರಲಿಲ್ಲ. ಆದುದರಿಂದ ಕರ್ನಾಟಕ ಸಾಹಿತ್ಯ–ಸಂಸ್ಕೃತಿ–ಇತಿಹಾಸಗಳ ಸಂಶೋಧನೆಯು ಕೆಲಸ ಎಲ್ಲಿಯೆಲ್ಲಿಯೋ ಹೇಗೋ ಹೇಗೋ ನಡೆಯುತ್ತಿತ್ತು. ಇನ್ನಾವ ರಾಜ್ಯಕ್ಕೂ ಕಡಮೆಯಿಲ್ಲದ–ಕೆಲವು ದೃಷ್ಟಿಗಳಿಂದ ಹೆಚ್ಚಿನ ದೆನಿಸುವ ಇತಿಹಾಸ—ಸಾಹಿತ್ಯ—ಸಂಸ್ಕೃತಿಗಳ ಪರಂಪರೆ ಕರ್ನಾಟಕಕ್ಕೆ ಇದೆಯೆಂಬುದನ್ನು ಯಾರೂ ಒಪ್ಪಬಹುದು. ಇದುವರೆಗೆ ಉತ್ತರಕರ್ನಾಟಕದಲ್ಲಿಯ ಪ್ರಾಚ್ಯಸಂಶೋಧನೆಯು ಕಾರ್ಯದ ಆಭಾಸ, ಪುಣೆಯ ಸಂಶೋಧನೆಕೇಂದ್ರದಿಂದ ನಡೆಯುತ್ತಿದ್ದಿತು. ದಕ್ಷಿಣಕರ್ನಾಟಕದ ಸಂಶೋಧನ ಕಾರ್ಯ ಮದ್ರಾಸಿನ ಕೇಂದ್ರ ಕಾರ್ಯಾಲಯದಿಂದ ನಡೆಯುತ್ತಿತ್ತು. ಹೈದರಾಬಾದ್ ಕನ್ನಡ ಪ್ರದೇಶದಲ್ಲಂತೂ ಸಂಶೋಧನೆಯ ಕಾರ್ಯ ನಡೆದೇ ಇಲ್ಲವೆಂದು ಹೇಳಬಹುದು. ಆದರೆ ಇತಿಹಾಸ ಸಂಸ್ಕೃತಿಯ ದೃಷ್ಟಿಯಿಂದ ಈ ಪ್ರದೇಶವು ತುಂಬ ಮಹತ್ವದ್ದಾಗಿದೆ. ಸಂಶೋಧನೆಯು ಕೆಲಸ ನಡೆದಿದೆಯೆಂದು ಸಮಾಧಾನಪಡಬಹುದಾದ ಕನ್ನಡ ಪ್ರದೇಶದಲ್ಲೂ, ಇನ್ನೂ ಸಂಶೋಧನೆಯಿಂದ ಕಂಡುಕೊಳ್ಳಬೇಕಾದ ವಿಷಯ ಸಾಕಷ್ಟು ಇರುವುದು.

ಈಗ ಇದೆಲ್ಲ ಸಂಶೋಧನೆಯ ಕಾರ್ಯವು ಕರ್ನಾಟಕ ಸ್ವತಂತ್ರ ಕೇಂದ್ರದಿಂದಲೇ ನಡೆಯಬೇಕಾದುದು ಅತ್ಯಗತ್ಯವಾಗಿದೆ. ಏಕೆಂದರೆ ಇದೊಂದು ಬಿಡಲಾರದ ಕರ್ತವ್ಯವೆಂಬ ಉಪೇಕ್ಷಾಭಾವನೆಯಿಂದ ಮಾಡುವ ಅನ್ಯ ಪ್ರಾಂತೀಯ ಸಂಶೋಧನಕೇಂದ್ರದ ಜನರಿಂದ, ಕರ್ನಾಟಕದಲ್ಲಿಯೆ ಸ್ಥಾಪಿತವಾದ—ಕನ್ನಡ ಸಂಶೋಧಕರನ್ನೇ ಒಳಗೊಂಡ–ಕೇಂದ್ರದಿಂದ ಹೆಚ್ಚಿನ ಕಾರ್ಯವಾಗುವುದು. ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಂತಹ ಸಂಶೋಧನ ಕೇಂದ್ರದ ಬೇಡಿಕೆಯ ಗೊತ್ತುವಳಿ ಪುರಸ್ಕೃತವಾದುದು ಯಥಾಯೋಗ್ಯವೂ ಪ್ರಶಂಶನೀಯವೂ ಆಗಿದೆ. ಕಲಾಗೋಷ್ಠಿಯ ಅಧ್ಯಕ್ಷರ ಮಾತಿನಲ್ಲಿ ಇಂದಿನ ಸಂಶೋಧಕಬ್ರುವರ ಅಸಮರ್ಥತೆ, ಹೊಣೆಗೇಡಿತನ ಇವುಗಳ ಸ್ಪಷ್ಟೀಕರಣ ಸಾಕಷ್ಟಿದೆ. ಇಂತಹ ಜನರು ಹೊರನಾಡುಗಳಲ್ಲಿದ್ದುಕೊಂಡು ಮಹತ್ವಪೂರ್ಣವಾದ ಕರ್ನಾಟಕ ಇತಿಹಾಸ ಸಂಸ್ಕೃತಿಗಳನ್ನು ಏನು ಕಂಡು ಹಿಡಿದಾರು? ನಮ್ಮ ಕೇಂದ್ರ ಸರಕಾರವು ಇದರ ವಿಚಾರವನ್ನು ಮನದಂದು, ಕರ್ನಾಟಕಕ್ಕೊಂದು ಪ್ರಾಚ್ಯಸಂಶೋಧನ ಶಾಖಾ ಕೇಂದ್ರವನ್ನು ಕೊಡಬೇಕೆಂದು ಆ ಗೊತ್ತುವಳಿಯನ್ನು ಎತ್ತಿ ಹಿಡಿಯುತ್ತೇವೆ.

———

ಕನ್ಯಾಸೆರೆ

(ಒಂದು ಕತೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗದ

ಮನುಷ್ಯನ ಹುಟ್ಟುಗುಣವೊ, ವೇಳೆಯಗುಣವೊ—ಕೆಲವರು ಹೊಟ್ಟೆಯ ಮಕ್ಕಳನ್ನು ಕೂಡ ಸ್ವಾರ್ಥಕ್ಕಾಗಿ ಪಾತಾಳಕ್ಕೆ ತಳ್ಳಲು ಹಿಂದೆ ಮುಂದೆ ನೋಡುವುದಿಲ್ಲ; ಅದರಂತೆಯೆ ಅದರ್ಶ ಗುಣವಿದ್ದ ಕೆಲವು ವ್ಯಕ್ತಿಗಳು, ಪತಿತರನ್ನು ಪಾವನಗೊಳಿಸಲು ಹೋರಾಡುತ್ತವೆ.

ಮುರುಗೇಶ ನನ್ನ ಸಹೋದ್ಯೋಗಿ ನಾನು ಅವನ ಕೈಕೆಳಗಿನ ನೌಕರನಾದರೂ, ಅವನು ನನ್ನನ್ನು ಗೆಳೆಯನಂತೆ ಕಾಣುತ್ತಿದ್ದ. ಪ್ರೈವೇಟ್ ಕಂಪೆನಿಯೊಂದರಲ್ಲಿ ನಾವಿಬ್ಬರೂ ಉದ್ಯೋಗಿಗಳು. ಮುರುಗೇಶ ನನ್ನನ್ನು ಅಕ್ಕರೆಯ ಅಣ್ಣನಂತೆ ನೋಡಿಕೊಳ್ಳುತ್ತಿದ್ದ. ನಾವು ಪ್ರಯಾಣ ಹೋದಾಗ, ನನ್ನ ಖರ್ಚು-ವೆಚ್ಚವನ್ನೆಲ್ಲಾ ತಾನೇ ವಹಿಸುತ್ತಿದ್ದ. ನಾನು ತಪ್ಪಿದಾಗ ತಿಳಿವುಕೊಡುತ್ತಿದ್ದ.

ಅದರೆ ,

ಅಮ್ಮನಿಗೆ ಅವನ ಮುಖವು ಏಕೆ ಅಷ್ಟು ಕೆಟ್ಟ ಅಭಿಪ್ರಾಯ ಮೂಡಿಸಿತೋ ನಾನು ತಿಳಿಯೆ. ಅವನಿಂದಾಗಿರುವ ಉಪಕಾರಗಳನ್ನು ವಿವರಿಸಿದರೂ ಅಮ್ಮನ ಮನ ಬದಲಿಸಲಿಲ್ಲ. ಹೇಳುವವರೆಗೂ ಕೇಳಿ,

"ನೀ ಏನೇ ಹೇಳು—ಅವನ ಸಂಗ ಒಳ್ಳೇದಲ್ಲ. ಅಷ್ಟು ನನಗೆ ಗೊತ್ತು. ಆಫೀಸ್ ಹೊತ್ತಿನಲ್ಲಿ ಅನಿವಾರ್ಯ—ಅವನ ಸಂಗಡ ಇರು. ಆದರೆ ಅನಂತರ ಅದಷ್ಟು ದೂರ ಇರು!"

ಅಮ್ಮ ನನ್ನನ್ನು ಆಕ್ಷೇಪಿಸುತ್ತಿದ್ದ ವಿಷಯಗಳು ಎರಡು—ಒಂದು ಮುರುಗೇಶನ ಸಹವಾಸ. ಎರಡನೆಯದು ನಾನು ಇನ್ನೂ ಯಾವ ಹೆಣ್ಣನ್ನೂ ಒಪ್ಪದಿರುವುದು.

ನಾ ಏನು ಮಾಡಲಿ? ನನಗೊಪ್ಪಿಗೆಯಾಗುವ ಹೆಣ್ಣು ಇನ್ನೂ ನನ್ನ ಕಣ್ಣಿಗೆ ಬಿದ್ದಿರಲಿಲ್ಲ. ನನಗೆ 'ಕೊಡಲು' ಕರೆತಂದ ನಾಲ್ಕಾರು ಹೆಣ್ಣುಗಳು—ಕಪ್ಪುಬಣ್ಣದ ದಪ್ಪ ತುಟಿಯ ಹೆಣ್ಣುಗಳು. ನಾನು 'ಒಲ್ಲೆ' ಎಂದೆ. ಆ ಹೆಣ್ಣುಗಳ ದೀನ ಮುಖವನ್ನೆ, ಆಶೆಯ ನೋಟ ನೋಡಿ ಮನದಲ್ಲೇ ನಗುತ್ತಿದ್ದೆ. ಇವರು ಎಂದಾದರೂ ಕನ್ನಡಿಯಲ್ಲಿ ನೋಡಿಕೊಂಡಿದ್ದಾರೆಯೇ, ನೋಡಿದ್ದಲ್ಲಿ ಇಷ್ಟು ಭರವಸೆ ಯಿಂದ ನನ್ನ ಮುಂದೆ ಪ್ರದರ್ಶಿಸಲು ಒಪ್ಪುತ್ತಿದ್ದರೇ?—ಎಂದು ಹಾಸ್ಯವಾಡುತ್ತಿದ್ದೆ. ಒಮ್ಮೊಮ್ಮೆ ಲಘುವಾಗಿ ಹೇಳುತ್ತಿದ್ದೆ:—ನನ್ನ ಮುಖದರ್ಶನ ಮಾಡಿಸಲು ಹಣ್ಣು ಕಷ್ಟಕ್ಕಾಗಿ ಇವರೆಲ್ಲರಿಗೂ ಒಂದೊಂದು ಕನ್ನಡಿಯನ್ನು ಬಹುಮಾನಿಸುವೆ—ಎಂದು.

ಇಲ್ಲ ಇಲ್ಲ. ನನಗೆ ಬಂದ ಹೆಣ್ಣುಗಳೆಲ್ಲ ಕಪ್ಪು ಕುರೂಪಿಗಳಲ್ಲ. ಕೈತೊಳೆದು ಮುಟ್ಟಬೇಕೆನ್ನುವಷ್ಟು ಲಕ್ಷಣವಾದ ಮುತ್ತಿನಂತಹ ಕನ್ಯೆಯರೂ ಬಂದಿದ್ದರು. ಆಗ ನಾನೂ ಅಸಮ್ಮತಿ ವ್ಯಕ್ತ ಪಡಿಸಿರಲಿಲ್ಲ.

ಆದರೆ.....ಆ ಸಂಬಂಧಗಳಾವುವೂ ಕುದುರಲಿಲ್ಲ ಕಾರಣ ಗೊತ್ತೇ ಇದೆಯಲ್ಲಾ—ನನ್ನ ಆರ್ಥಿಕಸ್ಥಿತಿ. ನಾನು ಹಣವಂತನಲ್ಲ, ಸುಭದ್ರ ವೃತ್ತಿಯಲ್ಲೂ ಇರಲಿಲ್ಲ. (ಹೆಣ್ಣಿಗೆ ರೂಪು, ಗಂಡಿಗೆ ವಿದ್ಯೆ ಭೂಷಣವಲ್ಲವೇ? ನನ್ನ ರೂಪು? ಛೀ, ಅದು ಅಮುಖ್ಯ. ನಾನು ಬಿ ಎ—ಅದೂ ಫಸ್ಟ್‌ಕ್ಲಾಸ್—ಎಂಬುದನ್ನು ನಾನು ವರ್ಣಿಸಲಿಲ್ಲ. ಕಾನ್‌ವೋಕೇಷನ್ ಡ್ರೆಸ್ಸಿನಲ್ಲಿ ತೆಗೆಸಿದ ನನ್ನ ಫೋಟೋನ ಕಾಣುವಂತೆ ತೂಗುಹಾಕಿದ್ದೆ.)

ಸುರೂಪಿ ಹೆಣ್ಣುಗಳಿಗೆ ಹೆಮ್ಮೆ ಹೆಚ್ಚು. ಅವರಿಗೆ ದೊಡ್ಡ ಶ್ರೀಮಂತ ಸಂಬಂಧ ದೊರೆಯುವ ಭರವಸೆ ಇರುವಾಗ, ವಿದ್ಯೆಗೆ ಬೆಲೆ ಕೊಟ್ಟು ನನ್ನಂತಹನನ್ನು ಒಪ್ಪಿಯಾರೇ?

ಮುರುಗೇಶ ಎತ್ತರವಾಗಿ ಸಣಕಲಾಗಿದ್ದ. ಮಾತು ಬಳಬಳ ಬತ್ತಿದ ಕೆನ್ನೆ, ಬಣ್ಣ ಕಪ್ಪು, ಆದರೆ ಬಹು ಬಲಿಷ್ಠ—ಕಬ್ಬಿಣದ ಸಲಾಕೆಯಂತಹ ಮನುಷ್ಯ. ಮುಖಭಾವ ಉಗ್ರ. ಮಾತಿನಲ್ಲೂ ಗಡುಸು; ದರ್ಪ ಹೆಚ್ಚು. ಆದರೆ ನಾನು ಮೆದು. ಅವನ ಸ್ವಭಾವ ಅರಿತು ಅವನ ಮರ್ಜಿ ಹಿಡಿದು ನಡೆಯುತ್ತಾ, ಅವನ ವಿಶ್ವಾಸಗಳಿಸಿದ್ದೆ.

ಒಮ್ಮೆ, ಕೆಲಸದ ಮೇಲೆ ನಾವಿಬ್ಬರೂ ಸಿಕಂದರಾಬಾದಿಗೆ ಹೋದೆವು. ನಮ್ಮ ಕಂಪೆನಿಗೆ ಅಗತ್ಯವಾದ ಸಾಮಾನು ಕೊಳ್ಳಲು ಅಲ್ಲಿಯ ವ್ಯಾಪಾರೀ ಸಂಸ್ಥೆಯೊಂದಿಗೆ ಮಾತುಕತೆಯಾಯಿತು ಮೂರು ದಿನಗಳ ಅವಿಶ್ರಾಂತ ದುಡಿಮೆಯ ಫಲವಾಗಿ, ನಮ್ಮ ಕಾರ್ಯ ಯಶಸ್ವಿಯಾಯಿತು. ನಮ್ಮ ಶ್ರಮ ಸಾರ್ಥಕವಾಯಿತೆಂದು ನಾವಿಬ್ಬರೂ ತುಂಬಾ ಹರ್ಷಿತರಾದೆವು.

ಅಲ್ಲಿಯ ಉತ್ತಮ ಹೋಟಲಿನಲ್ಲಿ ನಾವು ಬಿಡಾರ ಮಾಡಿದ್ದೆವು. ಅಲ್ಲೇ ರಾತ್ರಿಯೂಟ ಮುಗಿಸಿದೆವು.

"ವಿಶ್ವರ್ ನಟೇಶ್, ಮೂರು ದಿನದ ದುಡಿತ ತಲೆದೇಸರ ಬಡಿಸಿದೆ. ಈ ದಿನ ಏನಾದರೂ ಮನರಂಜನೆ ಬೇಕೇಬೇಕು!" ಎಂದ ಮುರುಗೇಶ.

"ನಿಜ. ಅದರಿ ಫರ್ಸ್ಟ್‌ಶೋ ಪ್ರಾರಂಭವಾಗಿದೆ—ಸೆಕೆಂಡ್‌ಶೋ ಸಿನಿಮಾಕ್ಕೆ ಹೋಗೋಣ."—ಎಂದೆ.

"ಸೆಕೆಂಡ್‌ಶೋನೇ? ಸರಿ....ಸರಿ...." ಎಂದು ವಿಚಿತ್ರವಾಗಿ ನಕ್ಕ.

ನನಗೆ ಅರ್ಥವಾಗಲಿಲ್ಲ. ನನ್ನ ಸಲಹೆ ಒಪ್ಪಿಗೆಯಾಗಲಿಲ್ಲವೆಂದು ಬಗೆದೆ. "ಹೊಂಗೆ ಹಾಲುಚೆಲ್ಲದಂತೆ ಬೆಳುದಿಂಗಳಿದೆ. ಬೇಕಾದಲ್ಲಿ ವಾಕಿಂಗ್ ಹೋಗಬಹುದು."—ಎಂದೆ.

"ಸರಿ. ಡ್ರೆಸ್‌ಮಾಡಿಕೊಂಡು ಹೊರಡಿ. ನನ್ನ ಹಿಂಬಾಲಿಸುವಿರಂತೆ."

ಅವನ ಗಂಭೀರತೆ ನೋಡಿ ಎದುರಾಡಲಿಲ್ಲ. ಹೊರಟೆ.

ಮುರುಗೇಶ ಥಿಯೇಟರ್ ಇದ್ದ ಕಡೆಗೆ ಹೋಗದೆ, ಪ್ರತಿದಿಕ್ಕಿನಲ್ಲಿ ನಡೆದ. "ಸೆಂಕೆಂಡ್‌ಶೋ ನೋಡಿ ಕಣ್ಣಿಗೇಕೆ ತ್ರಾಸ ಕೊಡುವುದು? ನಾ ಹೊಸರೀತಿಯ ಮನರಂಜನೆ ತೋರಿಸುತ್ತೇನೆ." ಎಂದು ನಕ್ಕ.

ಅವನ ಮಾತು, ಆಡಿದ ರೀತಿ ಕೇಳಿ ನನಗೆ ಅನುಮಾನವಾಯಿತು. ಆದರೂ ಅಡಿ ಇಂದಿಟ್ಟು ವಿರೋಧಿಸುವಂತಿರಲಿಲ್ಲ.

ಸ್ವಲ್ಪ ದೂರ ನಡೆದ ನಂತರ, ಮುರುಗೇಶ ಸಿಗರೇಟ್ ಪ್ಯಾಕನ್ನು ನನ್ನ ಮುಂದೆ ಹಿಡಿದ.

"ಒಂದು ತೆಗೆದುಕೊಳ್ಳಿ."

"ಥ್ಯಾಂಕ್ಸ್. ಬೇಡಿಸಾರ್,"

"ಪರವಾಗಿಲ್ಲ, ತೆಗೆದುಕೊಳ್ಳಿ."

ನನಗೆ ತಿಳ್ಯಾಸವಿರಲಿಲ್ಲ. ಆದರೂ 'ಒಲ್ಲೆ' ಎನ್ನುವ ಧೈರ್ಯವಿಲ್ಲದೆ ತೆಗೆದುಕೊಂಡೆ. ಅವನು ಹೊತ್ತಿಸಿಕೊಂಡು, ನನ್ನ ಕೈಲಿದ್ದ ದೀಪ್ತಿಯಂಕೆ ಸೋಂಕಿಸಲು ಮುಂದಾದ.

"ಬೇಡಿ, ಸಾರ್ ನನಗೆ ಅಭ್ಯಾಸವಿಲ್ಲ." ಎಂದು ಪಿಸುಗುಟ್ಟಿದೆ.

"ಓ, ಅವಶ್ಯ ಹೊತ್ತು! ಅಭ್ಯಾಸವಿಲ್ಲವಿದ್ದರೆ ಅಭ್ಯಾಸವಾಗುತ್ತೆ! ಒಮ್ಮೆ ಒದು ದಮ್ಮು ಎಳೆದು ನೋಡಿ!" ಎಂದು ಹೊತ್ತಿಸಿಯೇ ಬಿಟ್ಟ.

ನಾನು ದಾರಿ ಕಾಣದೆ ಒಮ್ಮೆ ಸೇದಿದೆ—ಅಬ್ಬಾ ಎಂತಹ ಕಮ್ಮಗಿನ! ಹೊಗೆ ನೆತ್ತಿಗೇರಿ ಕಣ್ಣು ಮೂಗಲ್ಲೆಲ್ಲಾ ನೀರು ಬಂದಿತು. ಕಮ್ಮಾಹತ್ತಿ, ಹಕ್ಕೆ ಹಿಡಿದುಕೊಂಡಂತಾಯಿತು. ಕಾಲು ಗಂಟೆ ಬೇಕಾಯಿತು ಸುಧಾರಿಸಿಕೊಳ್ಳಲು.

ನನ್ನ ಅವಸ್ಥೆ ನೋಡಿ ಮುರುಗೇಶ ನಕ್ಕ—"ನೀವಿನ್ನೂ ಮಗು—ಏನೂ ತಿಳಿಯದು!" ಎಂದು ನನ್ನ ಬೆನ್ನು ಚಪ್ಪರಿಸಿದ.

'ಮಗು'— ಎನ್ನುವಾಗ ಮೆಚ್ಚಿಗೆಯಿರಲಿಲ್ಲ. ತಿರಸ್ಕಾರ-ಮಿಶ್ರಿತ ಕನಿಕರವಿದ್ದಿತು.

ನಾನು ಪೆಚ್ಚಾಗಿ ತಲೆತಗ್ಗಿಸಿದೆ.

ಮುಂದೆ ಮುಂದೆ ಹೋದೆವು. ನಾನು ತಲೆತಗ್ಗಿಸಿ ನಡೆಯುತ್ತಿದ್ದೆ. ಮುರುಗೇಶ ಯಾರೊಡನೆಯೋ ಮಾತನಾಡುವುದನ್ನು ಕಂಡು ತಲೆ ಎತ್ತಿದೆ. ಆತ ನನಗೆ ಪೂರ್ಣ ಅಪರಿಚಿತ ವ್ಯಕ್ತಿಯೊಡನೆ ಅಸಕ್ತಿಯಿಂದ ಮಾತನಾಡುತ್ತಿದ್ದ. ನಾನು ಅನಾಸಕ್ತಿಯಿಂದ ನಾಲ್ಕು ಹೆಜ್ಜೆ ಮುಂದೆ ನಡೆದೆ ಮುರುಗೇಶ ಚಪ್ಪಾಳೆಯಿಕ್ಕಿ, ನನ್ನ ಕೂಗಿದ. ಹಿಂತಿರುಗಿ ಬಂದೆ.

ಅಪರಿಚಿತ ವ್ಯಕ್ತಿ ಪಕ್ಕದ ಗಲ್ಲಿಯಲ್ಲಿ ಹೋಗುತ್ತಿದ್ದ. ಮುರುಗೇಶ ಅವನನ್ನು ಹಿಂಬಾಲಿಸಿದ.

"ಯಾರು ಈತ, ನಿಮಗೆ ಗುರುತೇ?"

ನನ್ನ ಪ್ರಶ್ನೆ ಕೇಳಿ ಮುರುಗೇಶ ನಕ್ಕ.

'ಬೇಕಾದವರಿಗೆ ಗುರುತಾಗುತ್ತಾನೆ..... ಅವನೊಬ್ಬ 'ಸಿರ್-ಪಕ್ಕು'!" ಕೇಳಿ ಬೆಚ್ಚಿದೆ, ಬೆದರಿದೆ. ನಾನು ಸ್ವಭಾವತಃ ಒಳ್ಳೆಯವನು—ಅತ್ಯ ಪ್ರಶಂಸೆ ಎಂದಲ್ಲ; ಹೀನವೆಂದು ತಿಳಿದ ಕೆಲಸವನ್ನು ಬೇಕೆಂದೇ ಎಂದೂ ಮಾಡುತ್ತಿರಲಿಲ್ಲ.

ಮುರುಗೇಶ ನನ್ನನ್ನು ಎಲ್ಲಿಗೊಯ್ಯಲಿರುವನೆಂದು ನನಗೆ ಗೊತ್ತು. ಆದರೆ ವಿರೋಧಿಸಿ, ಅವನನ್ನೂ ಹೋಗದಂತೆ ತಡೆಯುವ ಮನೋವಾರ್ಢ್ಯ ನನ್ನಲ್ಲಿರಲಿಲ್ಲ.

ನಾನು ಅಂಜುತ್ತಾ ಅಳುಕುತ್ತಾ ಹೊಯ್ದಾಡುವ ಮನಸ್ಸಿನಿಂದ ಅವನ ಹಿಂದೆ ನಡೆದೆ. 'ಈ ಉದ್ಯೋಗಕ್ಕೆ ಸೇರದಿದ್ದರೇ ಚೆನ್ನಾಗಿರುತ್ತಿತ್ತು, ಇವನ ಗೆಳೆತನ ಬೆಳೆಯದಿದ್ದರೇ ಚೆನ್ನಾಗಿರುತ್ತಿತ್ತು, ತಾಯಿಯ ಎಚ್ಚರಿಕೆಗೆ ಕಿವಿಗೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ನಾನು ಪಶ್ಚಾತ್ತಾಪದಿಂದ ನೆಲುಗು ಹಾಕುತ್ತಿದ್ದಂತೆಯೇ, ಯಾವುದೋ ಮನೆಯ ಬಾಗಿಲಲ್ಲಿ ನಾವು ನಿಂತಿದ್ದೆವು! ಏನಾಗುತ್ತಿದೆ, ಎಲ್ಲಿದೇನೆ ಎಂಬುದನ್ನೇ ಮರೆತು ಭಯವಿವಶನಂತೆ ಮಿಕಿಮಿಕಿ ನೋಡಿದೆ.

ಹೌದು, ಅದೊಂದು ವೇಶ್ಯಾಗೃಹ!

ನನ್ನ ಮೈನಡುಗಿತು. ತಲೆ ಚಕ್ರಹೊಡೆಯಿತು ಬೆನರು ಬಸಿಯಿತು ಅವರೂ ಮಂತ್ರಮುಗ್ಧನಂತೆ ಮುರುಗೇಶನ ಹಿಂದೆ ಹೋದೆ ಅಲ್ಲಿದ್ದ ಇಳಿವಯಸ್ಸಿನ ಸ್ಥೂಲದೇಹಿಯಾದ ಹೆಂಗುಸೊಬ್ಬಳೊಡನೆ, ಮುರುಗೇಶ ನುರಿತ ಕಸುಬುದಾರನಂತೆ ಮಾತನಾಡಿದ ಅವಳು ಒಮ್ಮೆ ಚಪ್ಪಾಳೆ ಹಾಕಿದಳು. ಸುತ್ತಲಿನ ಕೋಣೆಗಳಿಂದ ನಾಲ್ಕಾರು ಮಂದಿ ಯುವತಿಯರು ಬಂದು ಸುತ್ತಿಕೊಂಡರು. ನನ್ನ ಎದೆ ಧಸಕ್ಕೆಂದಿತು. ಮುಖದಿಂದ ಬೆವರು ಬಸಿಯಿತು.

ಮುರುಗೇಶ ನನ್ನತ್ತ ನೋಡಿ ನಕ್ಕ—ನನ್ನ ಅವಸ್ಥೆ ಕಂಡು ಅವನ ಕಣ್ಣಿಗೆ ಹಬ್ಬವಾಗಿರಬೇಕು—

"ನಿಮಗಿಷ್ಟವಾಗಿರುವವಳನ್ನು ಆರಿಸಿಕೊಳ್ಳಬಹುದು" ಎಂದ

ನನಗೆ ಕತೆಯಿಂದ ಹೊಡೆದಂತಾಯಿತು.

"ಇಲ್ಲ ಸಾರ್, ನಾ ಬರ್ತೀನಿ." ಎಂದು ತೊದಲುತ್ತಾ ನೇಲೆಸ್ಸ ನನ್ನ ಕೈ ಕಾಲು ನನ್ನದಲ್ಲವೇನೋ ಎಂಬಂತೆ ಗಡಗಡ ನಡುಗುತ್ತಿತ್ತು.

"ಮೂರ್ಖನಂತಾಡ ಬೇಡ!"

ಅವನ ಧ್ವನಿಯಲ್ಲಿ ಆಕ್ಷೇಪವಿತ್ತು, ಆಜ್ಞೆಯಿತ್ತು. ದೃಷ್ಟಿಯಲ್ಲಿ ತೀಕ್ಷ್ಣತೆಯಿತ್ತು. ತಿರಸ್ಕಾರವಿತ್ತು. ಸತ್ತ್ವಹೋದವನಂತೆ ತಿಪ್ಪಗೆ ಕುಳಿತೆ.

ಅಂಜುತ್ತಂಜುತ್ತ ಕತ್ತೆತ್ತಿ ನೋಡಿದೆ—ಆ ಹುಡುಗಿಯರತ್ತ ನೋಡಿದೆ.

ನೋಡಿ ಚಕಿತನಾದೆ!

ಒಂದು ಮುಖ ನನಗೆ ತೀರ ಪರಿಚಿತ! ಯಾರು, ಎಲ್ಲಿ ಕಂಡಿದ್ದು?—ಎಂಬುದು ನೆನಪಾಗಲೊಲ್ಲದು. ಆದರೂ ಧಾರಾಳವಾಗಿ ಪರಿಚಿತ ಮುಖ. ಆ ಹುಡುಗಿಯತ್ತಲೇ ಮತ್ತೆ ಮತ್ತೆ ನೋಡಿದೆ

ಮುರುಗೇಶ ಆ ಹೆಂಗುಸಿಗೆ ಸಂಜ್ಞೆಮಾಡಿದ. ಆ ಹುಡುಗಿಯನ್ನು ಳೆದು ಉಳಿದವರು ಹೊರಟುಹೋದರು.

ಮುರುಗೇಶ ಮೇಲೆದ್ದ.

"ನಿಮ್ಮ ಆಯ್ಕೆ ಆಯಿತಷ್ಟೇ? ನಿಮಗೆ ಸುಖವಾಗಲಿ, ಆನಂತರ ನಿಮ್ಮನ್ನು ಇಲ್ಲೇ ಕಾಣುತ್ತೇನೆ" ಎಂದು ಹೊರಟ

ಅವನ ಕಣ್ಣಲ್ಲಿ ಯಾವುದೋ ಅಪಹಾಸ್ಯವಿತ್ತು—ಏಕೆಂದು ಬಹುದು?

ಬೆಪ್ಪುಹಿಡಿದವನಂತೆ ನಾನು ಒಮ್ಮೆ ಅವನತ್ತ, ಒಮ್ಮೆ ನನ್ನ 'ಆಯ್ಕೆ' ಎನಿಸಿಕೊಂಡ ಹುಡುಗಿಯತ್ತ ನೋಡಿದೆ.

ಓ, ಇವಳು ನನ್ನ 'ಆಯ್ಕೆ'ಯೇ? ಪರಿಚಿತ ಮುಖವೆಂದು ನಿಟ್ಟಿಸಿದ ಮಾತ್ರಕ್ಕೆ ನನ್ನ ಆಯ್ಕೆಯೇ?

ಅವಳ ಕಪ್ಪುಬಣ್ಣ—ಮುಖಕ್ಕೂ ಕೂದಲಿಗೂ ವ್ಯತ್ಯಾಸ ಕಾಣದಷ್ಟು ದಟ್ಟವಾದ ಕಪ್ಪುಬಣ್ಣ—ಮುಖದ ಕುರೂಪವನ್ನು ಮತ್ತೂ ಎದ್ದು ಕಾಣಿಸುವಂತೆ ಮಾಡಿದ್ದ ಅಸ್ತವ್ಯಸ್ತವಾಗಿ ಬಳೆದು ಕೊಂಡಿದ್ದ ಪೌಡರ್!

ಇವಳು ನನ್ನ 'ಆಯ್ಕೆ'ಯೇ? ಎಂದಿಗಾದರೂ? ಮುರುಗೇಶ ಹಾಗೆ ಅಪಹಾಸ್ಯವಾಗಿ ನಗಲು ಈ ಕುರೂಪವೇ ಕಾರಣವಿರಬಹುದು ನನ್ನ 'ಆಯ್ಕೆ'ಯ ಬಗ್ಗೆ ಆವಹೇಳನ ಮಾಡಿಕೊಂಡು ನಕ್ಕಿರಬಹುದು.

ಅವನಿಗೇನು ಗೊತ್ತು? 'ಬಾಳ ಗೆಳತಿ'ಯನ್ನು ಆರಿಸುವಾಗ ನಾನೆಷ್ಟು ಎಚ್ಚರಿಕೆಯಿಂದ 'ಆಯ್ಕೆ' ಮಾಡುತ್ತಿರುವೆನೆಂದು! ಪರಿಚಿತವೆಂಬ ನನ್ನ ಕುತೂಹಲವನ್ನೇ ಅವನು ತಪ್ಪು ತಿಳಿದಿದ್ದ.

ಆದರೆ, ಆ ತಪ್ಪನ್ನು ತಿದ್ದುವ ಕಾಲ ಕೈಮೀರಿತ್ತು.

ಭ್ರಮಿತನಂತೆ, ಅಸಹಾಯಕನಂತೆ ಆ ಹೆಣ್ಣಿನತ್ತ ನೋಡಿದೆ; ಅವಳು ನಸುನಕ್ಕು ತನ್ನ ಹಿಂದೆ ಬರುವಂತೆ ಸೂಚಿಸಿದಳು

ನಾನು ಸುಮ್ಮನೆ ಹಿಂಬಾಲಿಸಿದೆ ಅವಳು ಯಾರು, ನಾನು ಎಲ್ಲಿ ನೋಡಿರಬಹುದು? ಎಂಬುದನ್ನು ತಿಳಿಯುವ ತೀವ್ರ ಕುತೂಹಲದಿಂದಿದ್ದೆ

ಕೋಣೆಯಲ್ಲಿ ಕೆಂಪು ದೀಪದ ಪ್ರಕಾಶ ಹರಡಿತ್ತು. ಮಂಚದ ಮೇಲೆ ಹಾಸಿಗೆಯು ಪಕ್ಕದಲ್ಲೇ ಡ್ರೆಸಿಂಗ್‌ಟೇಬಲ್, ಒಂದು ಕುರ್ಚಿ. ಅವಳು ಹಾಸಿಗೆಯ ಮೇಲೆ ಕುಳಿತಳು. ನಾನು ಕುರ್ಚಿಯಲ್ಲಿ ಕುಳಿತೆ.

ನಾನು ಎನೆಯಿಳ್ಕದೆ ಅವಳನ್ನೇ ನೋಡಿದೆ. ಅವಳ ನೋಟು ತಗ್ಗಿ, ಕೆನ್ನೆ ಕೆಂಪೇರಿತು. ಅಲ್ಲ ಕೆನ್ನೆ ಕೆಂಪೇರಿತೆಂಬುದು ಸಮಂಜಸವಲ್ಲ ಏಕೆಂದರೆ ಆ ಗಟ್ಟಿ ಕಪ್ಪುಬಣ್ಣದಲ್ಲಿ ಕೆಂಪಿನ ಛಾಯೆ ಕಾಣಲಾರದು. ಅವಳ ಕೆನ್ನೆಯ ಕಪ್ಪು ಮತ್ತೂ ದಟ್ಟವಾಯಿತು. ಅದ್ದರಿಂದ ಕೆಂಪೇರಿತೆಂದು ಭಾವಿಸಿದೆ.

"ನಿಮ್ಮ ನಿನ್ನ .. ಹೆಸರೇನು?" ಎಂದು ತೊದಲಿದೆ

ನನ ತಾಯಿ ತಂಗಿಯನ್ನು ಬಿಟ್ಟು ಬೇರೆ ತರುಣಿಯನ್ನು ಹಾಗೆ ಏಕವಚನದಲ್ಲಿ ನಾನು ಕರೆದುದು ಅದೇ ಮೊದಲು.

"ಸೋನಾ! ನಿಮ್ಮ ಹೆಸರು ಕೇಳಬಹುದೆ?" ಎಂದಳು, ವಿನಯದಿಂದ. ನಿಜ, ಧ್ವನಿಯೂ ಪರಿಚಿತ.

ಅವಳ ಪ್ರಶ್ನೆಗೆ ತಕ್ಷಣ ಉತ್ತರಿಸಲಿಲ್ಲ. ನನ್ನ ಹೆಸರು ಹೇಳಬಹುದೇ? ನಾನು ಸಂಭಾವಿತ, ಯೋಗ್ಯ; ಇಂತಹ ಹೀನಸ್ಥಳಕ್ಕೆ ನಾ ಬಂದ ವಿಷಯ ಅನ್ಯರಿಗೆ ತಿಳಿದರೆ? ಮರುಕ್ಷಣ ಧೈರ್ಯಗೊಂಡೆ ಇಷ್ಟು ದೂರದ ಊರು, ನನ್ನ ಹೆಸರಿನ ಸಾವಿರಾರು ಜನ ಇದ್ದಾರೆಲ್ಲೋ ದಕ್ಕೆ. ಹೆಸರು ಹೇಳುವುದರಿಂದ ತೊಂದರೆ ಇಲ್ಲ. ಅಲ್ಲದೆ ಇಷ್ಟು ಅಲ್ಪ ಸ್ವಲ್ಪಕ್ಕೆಲ್ಲಾ ಸುಳ್ಳಿನ ಸಹಾಯ ಪಡೆಯುವ ಹವ್ಯಾಸವೂ ನನಗಿರಲಿಲ್ಲ.

"ನಟೇಶ"

ಆದರೆ, ನನ್ನ ಹೆಸರು ಕೇಳಿ ಅವಳಲ್ಲಾದ ಪ್ರತಿಕ್ರಿಯೆ ಕಂಡು ಚಕಿತನಾದೆ. ಅವಳು ನಿಜಕ್ಕೂ ದಿಟ್ಟದಳು. ಆಶ್ಚರ್ಯ, ಸಂತೋಷ, ದುಃಖ—ಆ ಕಣ್ಣುಗಳಲ್ಲಿ ಮಿಂಚಿಹೋದುವು.

"ನಿನ್ನ ಮುಖ ತೀರ ಪರಿಚಿತ. ಎಲ್ಲೋ ನೋಡಿದ ನೆನಪು. ಎಲ್ಲಿ --ಎಂದು ಮರೆತಿದೆ."

ಅವಳು ನಡುಗುವ ಧ್ವನಿಯಲ್ಲಿ ಕೇಳಿದಳು—

"ನೀವು....ಮೊನಳ್ಳಿಯಲ್ಲಿ ಇರಲಿಲ್ಲೇ?"

"ಹೌದೌದು! ನೀನೂ ಅಲ್ಲಿಯವಳಾ? ಇಲ್ಲಿಗೆ ಹೇಗೆ ಬಂದೆ?"—ನಾನು ಆತುರಾತುರವಾಗಿ ಕೇಳಿದೆ.

ಅವಳು ಮಾತನಾಡದೆ ಕ್ಷಣ ಶೂನ್ಯದೃಷ್ಟಿಯಿಂದ ಕಿಟಕಿಯಾಚೆಗೆ ನೋಡಿದಳು. ಬಹುಶಃ ತನ್ನ ಗತಕಾಲದ ಜೀವನಚಿತ್ರ ನೆನಪಿಸಿಕೊಂಡಳೇನೋ.

"ನಿನಗೆ ...ನಿನಗೆ. ಹೋಟೆಲ್ ನಾರಾಣಪ್ಪ ಗೊತ್ತೆ?"—ಎಂದಳು ಅನುಮಾನಿಸುತ್ತಾ.

ನನಗೆ ತಟ್ಟನೆ ಎಲ್ಲಾ ಹೊಳೆಯಿತು.

"ಗೊತ್ತು, ಗೊತ್ತು. ನೀನು ನಾರಣಪ್ಪನ ಮಗಳು ಲಲಿತಾ! ಅಲ್ಲವೇ?"

ಅವಳು ಮೌನವಾಗಿ ಗೋಣು ಹಾಕಿದಳು.

ನನಗೆ ಆಶ್ಚರ್ಯವಾಯಿತು, ವ್ಯಸನವಾಯಿತು. ನಾರಣಪ್ಪ ನಾವಿದ್ದ ಬಸ್ತಿಯಲ್ಲೇ ಇದ್ದರು. ಐದು ಜನ ಹೆಣ್ಮಕ್ಕಳು. ಮೂರು ಗಂಡುಮಕ್ಕಳು. ನಾರಣಪ್ಪ, ಅವನ ಹೆಂಡತಿ ಶಾಂತಮ್ಮ ಇಬ್ಬರೂ ಕಪ್ಪು. ಅವರ ಹೆಣ್ಮಕ್ಕಳು ಅವರಿಬ್ಬರ ಕಪ್ಪುಬಣ್ಣವನ್ನೂ ಬಿಟ್ಟ

ಬೆಳಗ್ಗೆ ಅಪ್ಪನೊಡನೆ ನಾನು ಹೊರಟೆ. (ರಂಗಪ್ಪ ರೇಲ್ವೇ ಸ್ಟೇಷನ್‌ಗೆ ಮೊದಲೇ ಹೋಗಿದ್ದ.) ಅಮ್ಮ ಬಾಗಿಲಲ್ಲಿ ನಿಂತು ನಾವು ಕಣ್ಮರೆಯಾಗುವವರೆಗೂ ನೋಡುತ್ತ ನಿಂತಿದ್ದಳು. ಅವಳ ಮುಖ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಹಿಗ್ಗು, ವಾತ್ಸಲ್ಯ, ಅಗಲಿಕೆಯ ದುಃಖ ಕಳವಳ–ಎಲ್ಲ ಭಾವಗಳೂ ತುಂಬಿದ ನೋಟ–ಕಣ್ಣೀರಿನ ಪರೆಯ ಹಿಂದಿನ ಆ ತುಂಬು ನೋಟ–

ಅದೇ ಕಡೆ–ಅದೇ ಕಡೆ. ಅಮ್ಮನನ್ನು ನಾನು ಕಂಡಿದ್ದು ಅದೇ ಕಡೆ!"

ಅವಳ ಧ್ವನಿ ಗದ್ಗದವಾಯಿತು ಮುಖ ವೇದನೆಯಿಂದ ಬಿಗಿದುಕೊಂಡಿತ್ತು. ನಾನು ಅರಿವಿಲ್ಲದೆ ನಿಡುಸುಯ್ದೆ.

"ಅಲ್ಲಿ ಟ್ರೇನ್ ಹತ್ತಿದವರು ನೇರ ಇಲ್ಲಿಗೆ ಬಂದಿಳಿದೆವು ಹೋಟಲಿನಲ್ಲಿ ತಳೆದುಕೊಂಡೆವು. ಅಪ್ಪ ಅಪ್ಪು ವಿಶ್ವಾಸದಿಂದ ನಗು-ಮುಖದಿಂದ ನನ್ನನ್ನು ಮಾತನಾಡಿಸಿದುದು ಅದೇ ಮೊದಲು. ನೀರಜಕ್ಷನಾವನಿಗೆ ಎಳ್ಳುರು ಸಿಕ್ಕಿದಂತಾಗಿ ಹರ್ಷವಾಯಿತೆ

ರಂಗಪ್ಪ ಇನ್ನೊಬ್ಬಾಕೆಯೊಡನೆ ನನ್ನ ನೋಡಲು ಬಂದ ಆಕೆ ಎಮೆಯುಕ್ಕಿಸಿ ನಿಟ್ಟಿಸುವುದನ್ನು ಕಂಡು ನಾಚಿ ತಲೆತಗ್ಗಿಸಿದೆ ನಂತರ ಅಪ್ಪ, ಅವಮ್ಮರೊಡನೆ ಹೊರಗೆ ಹೋಗಿ ಬಹಳ ಹೊತ್ತು ಮಾತನಾಡಿದ ಅಪ್ಪ ಮತ್ತೆ ಒಳಕ್ಕೆ ಬಂದಾಗ ಅವನ ಮುಖ ಪ್ರಸನ್ನವಾಗಿತ್ತು. ನನಗೂ ಹರ್ಷವಾಯಿತು. ಆಕೆಗೂ ಒಪ್ಪಿಗೆಯಾಗಿರಬೇಕು. ಬಹುಶಃ ನನ್ನ ಈತಿಯ ವರ್ಣನೆಯ ಅಥವಾ ಹಿತ್ತಾಳೆಯ ರುಜುವಾತಿಗೇ ಇರಬೇಕು—ಎಮುಕೊಂಡೆ ನಾನಾಗಿಯೇ ಹೇಗೆ ಅಪ್ಪನನ್ನು ಕೇಳಲಿ? ಮೊದಲೇ ಕಲಿಗೆಮಿಲ್ಲ. ಜೊತೆಗೆ ಸಂಕೋಚ ಬೇರೆ.

ಸಂಜೆ ರಂಗಪ್ಪ ಮತ್ತೆ ಬಂದ—ನನ್ನ ಕರೆದೊಯ್ಯಲು. ಎಲ್ಲಾ ಏರ್ಪಾಟಾಗಿದೆ. ಇವರ ಕಡೆಯ ಹೋಗಮ್ಮ ಕಾರು ತಂದಿದ್ದಾರೆ' ಅಂದ ಅಪ್ಪ, ಬಹಳ ನಯವಾಗಿ.

ಅಪ್ಪನ ನಯ ಈ ಹೊಸ ವಾತ್ಸಲ್ಯ ಕಂಡು ನನಗೆ ಕೃತಜ್ಞತೆ ತುಂಬಿಬಂದಿತು ಸಂತೋಷ, ಸಂಕೋಚ, ಭಯುಗಳಿಂದ ನಾನು. ಮಾನಿಸುತ್ತಾ,

'ನೀನು?' ಅಂದೆ.

'ನನಗೆ ಅಗತ್ಯದ ಕೆಲಸವಿದೆ ಯುಮ್ಮ ಊರಿಗೆ ಹೋಗಿ ನಿಮ್ಮಮ್ಮನ್ನ ಕರೆದುಕೊಂಡು ಬರ್ತೀನಿ. ಇವರ ಮನೇಲಿ ನಿನಗೆ ಯಾವುದಕ್ಕೂ ಕೊರತೆ ಇರುವುದಿಲ್ಲ. ಅವರ ಸಂಗಡ ಹೋಗಿರಮ್ಮ' ಅಂದ.

ನಾನು ಅವನ ಮಾತನ್ನು ನಂಬಿದೆ—ಅವರೂ ವರನನ್ನು ನೋಡಲೇ ಇಲ್ಲವಲ್ಲಾ—ಎಂದು ಸ್ವಲ್ಪ ಅಪನಾಧಾನವಾಯಿತು. ಹೊರಡುವಾಗ ಅಪ್ಪನ ಕಾಲಿಗೆ ಎರಗಿದೆ—ನನ್ನ ಕಣ್ಣಾಲಿ ನೀರು ತುಂಬಿಕೊಂಡಿತು.

ಅಪ್ಪ ಶಿಲಾವಿಗ್ರಹದಂತೆ ನಿಂತಿದ್ದ. ಅವನ ತುಟಿಯಲ್ಲಿ ವಿಚಿತ್ರ ಕೃಪ್ತಿಯ ಅಣಕುನಗೆಯಿದ್ದಿತು.

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

		ರೂ ನ. ಪೈ.
ಜೈನಧರ್ಮ		೧೫—೦

ಶ್ರೀ. ಪಂಡಿತ ಅಣ್ಣಾರಾಯರು.

ಭಾರತದ ಬೆಳಕು	,,	೧—೫೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೪೦
ಸಮಯಸಾರ	,,	೧—೧
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಸೌಲ್ಯಮಾಪಣ	,,	೦—೭೫
ಭರತೇಶನ ನಾಲ್ಕು ಚಿತ್ರಗಳು	,,	೧—೩೦
ಕೆನೆವೊಸರು (ಮಕ್ಕಳ ಕತೆ)	,,	೦—೪೫

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿಸೇವಾಸದನ, ಸೇಡಬಾಳ
ಪೋ. ಸೇಡಬಾಳ, (ಜಿಲ್ಲಾ ಬೆಳಗಾಂವಿ)

"ಅದೇ ಕಡೆ— ಅಪ್ಪನನ್ನು ನಾನು ನೋಡಿದ್ದು."

ಯಾವುದೋ ಭೀಕರ ದೃಶ್ಯ ನೆನಪಿಸಿಕೊಂಡಂತೆ, ಅವಳ ಮುಖ ವ್ಯಗ್ರವಾಯಿತು.

"ಅಪ್ಪನಲ್ಲ—ಕಟುಕ, ಕೊಲೆಗಾರ!

—ಸಿಡಿದು, ಕಟ್ಟನೆ, ಎದೆ ಹೆಪ್ಪುಗಟ್ಟಿಸುವ ಶೀತಲತೆಯಿಂದ ಹೇಳಿದಳು.

"ಅನಂತರ ನನಗೆ ಅಪ್ಪನ ವಿಚಿತ್ರನಗೆಯು ಅರ್ಥವಾಯಿತು ರಂಗಪ್ಪ ಸೀದಾ ಇಲ್ಲಿಗೆ ಕರೆತಂದ—ನನ್ನ ಭಾಷೆ ಬರುತ್ತಿದ್ದುದು ಅವನೊಬ್ಬನಿಗೇ—ಅವನಿಂದ ತಿಳೀತು—ಅಪ್ಪ ನನ್ನನ್ನು ಐದೂ ರೂಪಾಯಿಗೆ ವಾಪಾರಿಹೋಗಿರುವನೆಂದು–ಊರಲ್ಲೇ ಎಲ್ಲಾ ಒಪ್ಪಂದ ವಾಗಿತ್ತಂತೆ. ಈ ಸುದ್ದಿ ಕೇಳಿ ನನಗೆ ಹೇಗಾಗಿರಬೇಕು?—ಬಿಗ್ಗಿ ಬಿಟ್ಟಿದಿಂದ ಮುಳ್ಳು ಪೊದೆಯ ಕಂದಕಕ್ಕೆ ಉರುಳಿ ಬಿದ್ದಂತಾಯ್ತು ತಲೆಯಮೇಲೆ ಕಲ್ಲು ಬಿಸ್ಪಡಿ ಬಿದ್ದಂತಾಯ್ತು. ಅಕ್ಕು, ರಂ ಗೋಳಾಡಿಸಿ.... ಹೆಣ್ಣಿನ ಗೋಳಿಗೆ ಕಿವಿಗೊಡುವರಾರು, ಕರಗು ರಾರು? ನನ್ನೆದೆ, ನನ್ನ ಬಾಳು ಭಗ್ನವಾದುವು ನನ್ನ ಭಾವ ಜೀವನ ಸತ್ತುವು ಓ, ಲಲಿತಾ ಅಂದೇ ಸತ್ತಳು. ಈ ಸುಖಾ ವುದು ಈ ಪ್ರೇತ, ಈ ಸೋನಾ! ಬದುಕಿದ್ದ ಸತ್ಯಂತೆ, ಯಂತ್ರವ ನಾನೂ ಬಾಳು ನೂಕುತ್ತಿದ್ದೇನೆ....ಕೊನೆಗಾಣದ ಈ ಬಾಳ ಹಾದಿ ಸವೆಸುತ್ತಿದ್ದೇನೆ....ಆ ಮೋಸ, ಆ ವಂಚನೆ ಆ ಅನ್ಯಾಯ ನೆನೆ ನನ್ನೆದೆ ಕುದಿಯುತ್ತೆ. ನನ್ನ ಬುದ್ಧಿಯೇ ಸ್ವಾಧೀನ ತಪ್ಪಿದಂತಾಗುತ್ತೆ

ಅವಳ ಕರುಣಾಕತೆ ಕೇಳಿ ನನ್ನೆದೆಯೂ ಕುದಿಯಿತು. ಹೆತ್ತ ತಂದೆಯೇ ಮೋಸದಿಂದ ಈ ಕೂಪಕ್ಕೆ ನೂಕಿದನೆಂದು ತಿಳಿದಾಗ ಅವಳ ಮನೋವೇದನೆ ಎಷ್ಟು ತೀವ್ರವಾಗಿರಬಹುದು?

"ಲಲಿತಾ, ನಿನಗೆ ಎಂತಹ ಘೋರ ಅನಾಯ ಮಾಡಿದ್ದಾನೆ! ಅಬ್ಬಾ, ಇಂತಹ ಚಂಡಾಲ ಕೃತ್ಯ ಮಾಡಲು ನಾರಣಪ್ಪ ಹೇಗೆ ಒಪ್ಪಿದ? ಅವನಿಗೆ ಯಾವ ಶಿಕ್ಷೆ ಕೊಟ್ಟರೆ ತಾನೇ ತಕ್ಕ ಪ್ರಾಯಶ್ಚಿತ್ತ ವಾದೀತು?"

ನನ್ನ ಅನುಕಂಪದ ಮಾತು ಅವಳನ್ನು ಸಂತೈಸುವುದೆಂದು ಕೊಂಡಿದ್ದೆ. ಆದರೆ....ಅವಳು ಕೆರಳಿಬಿಟ್ಟಳು. ಅವಳ ಕಣ್ಣುಗಳು ತೀವ್ರ ಉದ್ವೇಗದಿಂದ ಜ್ವಲಿಸಿದುವು.

ಬೆಂಕಿಯ ಉಂಡೆಗಳಂತೆ ಮಾತುಗಳು ಸಿಡಿದು ಬಂದುವು!

"ಹೌದು. ಅವನು ಚಂಡಾಲ ಕೊಲೆಗಡುಕ. ಆದರೆ ಅವನ ಕೃತ್ಯಕ್ಕೆ ಪ್ರೇರಕ ನಿಮ್ಮ ಅಹಂಕಾರ! ಆ ಕೃತ್ಯದಲ್ಲಿ ನಿಮ್ಮ ಪಾಲೆ ಗಾರಿಕೆಯೂ ಉಂಟು. ಹೆಣ್ಣು ಕೆತ್ತವರು ನಿಮ್ಮ ಮನೆಯ ಬಾಗಿಲಿಗೆ ಬಂದರೆ ನಿಮಗೆಷ್ಟು ಹೆಮ್ಮೆ. ಎಷ್ಟು ತಿರಸ್ಕಾರ! ಅಪ್ಪ ನನ್ನನ್ನು ನಿಮ್ಮ ಮನೆಯ ಬಾಗಿಲಿಗೆ ಕರೆತಂದಾಗ, ನೀವು ಮಾಡಿದ ಟೀಕೆ ಏನು- 'ಅವಮಾನಾನ್ಯಯ ಅಭಿವಮಾನದೇವತೆ!' ಖರ್ಚಿಟ್ಟ ಲಗ್ನ ಮಾಡಲೇ ಕಷ್ಟ ಎಂದು ತಿಳಿದೂ ನನ್ನುದ್ದದ ಹಣವರಿಶಿ ಕೇಳಿದಿರಿ! ಆದರೆ ಈಗ? ...ಹಣ ಕೊಟ್ಟು ಈ ದೇಹ ಭೋಗಿಸಲು ಬಂದಿದೀರಿ ನನ್ನ ಕಷ್ಟ ಈಗ ಒಪ್ಪವಾಗಿದೆ! ಚಂಡಾಲಕೆಗೆ ನೀವು ಹೊರತೇ? ನಿಮಗೆ ಹೆಣ್ಣಿನ ದೇಹ ದೇಕು, ಭೋಗ ಬೇಕು—ಅವಳ ಹೊಣೆಗಾರಿಕೆ ದೇಡ! ಅವಳ ಭಾವನೆ, ಬಾಳು ನಿಮಗೆ ಕಾಲುಕಸ!"

ಮಾತನಾಡುತ್ತ ಹೋದಂತೆ ಅವಳ ಉದ್ರೇಕವೇರಿ, ವೈಯುರಿ ತಳು. ಮೇಜಿನಮೇಲಿದ್ದ ಕನ್ನಡಿಯನ್ನು ತಪ್ಪನೆ ನನ್ನ ಮುಂದೆ ಹಿಡಿದಳು.

"ನೋಡಿಕೊಳ್ಳಿ—ನನ್ನನ್ನು ಕಪ್ಪೆಂದು ಅಪಹಾಸ್ಯ ಮಾಡಿದ ನಿಮ್ಮ ಸುರೂಪವನ್ನು! ಎಷ್ಟು ಸುಸ್ಪಷ್ಟವಾಗಿ ಬಿಸುತ್ತಿದ್ದ ನಿಮ್ಮ ಸುಂದರ ಮುಖವನ್ನು!"

ನನ್ನೆದೆ ನಡುಗಿತು. ನಿಜಕ್ಕೂ ನಾನಷ್ಟು ಸುರೂಪಿಯೆ ಎಂದು, ಹಿಂದೆಂದೂ ನನಗೆ ಕಂಡಿರಲಿಲ್ಲ. ನನ್ನ ಮುಖದ ಮಡಿಬೆಗಳ ಕಪ್ಪು ಸಿಡುಬಿನ ಕಲೆಯ ಕಪ್ಪು, ಎಲ್ಲವನ್ನೂ ಮುಚ್ಚಿಬಿಟ್ಟಿತ್ತು ನನ್ನ ಚರ್ಮದ ಅಚ್ಚ ಕಪ್ಪು.

ನನ್ನದೇ ಸರ್ವ ಕಪ್ಪುಗಳೂ ಲಲಿತೆಯಂತಹ ಎಷ್ಟು ಮೃದು ಹೃದಯಿಯರನ್ನು ನೋಯಿಸಿದೆಯೋ ನನ್ನ ಕಟುಟೀಕೆಗಳು! ನನ್ನ ಎದೆಯಲ್ಲಿ ಪಶ್ಚಾತ್ತಾಪ ತಾನೇ ತಾನಾಯಿತು.

"ನನ್ನನ್ನು ಕ್ಷಮಿಸು, ಲಲಿತಾ ನನ್ನದೂ ತಪ್ಪು. ಅಜ್ಞಾನ, ಅಹಂಕಾರ ನನ್ನ ಕಣ್ಣಿಗೆ ತೆರೆ ಎಳೆದಿತ್ತು."

—ಎಂದೆ, ದೀನನಾಗಿ.

ಲಲಿತೆಯ ಸಿಟ್ಟು ಮಾಯವಾಯಿತು. ವ್ಯಸನದಿಂದ ನನ್ನತ್ತ ನೋಡಿ ಸುಯ್ದಳು.

ನಾನು ಲಲಿತೆಯನ್ನೇ ನಿಟ್ಟಿಸಿದೆ. ಒಮ್ಮೆ ಕಪ್ಪು ಕುರೂಪಿ ಯೆಂದು ನಾನು ಧಿಕ್ಕರಿಸಿದ್ದ ಲಲಿತೆ—ಈಗ ಕುರೂಪಿಯಾಗಿ ಕಾಣಲಿಲ್ಲ. ಅವಳ ಬಾಹ್ಯರೂಪದ ಹಿಂದಿದ್ದ ಸ್ತ್ರೀತ್ವವನ್ನು ಕಂಡು ಚಕಿತ ನಾದೆ. ಲಲಿತೆ ಈಗ ಕುರೂಪಿಯಾಗಿ ಕಾಣಲಿಲ್ಲ. ಕಳೆಕಳೆಯಾಗಿ ಕಂಡಳು. ಅವಳ ಕಪ್ಪುಕಣ್ಣು ಹೊನಿನಲ್ಲಿ ಸೆರೆಯಾದ ದುಂಬಿ ಯಂತೆ, ಅವಳ ಅತ್ಯ ಗಾಜಿನ ಕೊಳವೆಯಲ್ಲಿ ಸೆರೆಬಿದ್ದ ಪಾದರಸದಂತೆ ಕಂಡುವು. ಹೆಣ್ತನದ ಪವಿತ್ರ ಜೀವನವನ್ನು ಕಾಣಬಲ್ಲ ನನ್ನ ಬಗೆ ಗಣ್ಣು ತೆರೆದಂತಾಯಿತು.

ಅವಳ ಕರುಳಿರಿಯುವ ಕತೆ ನನ್ನ ಕುಪ್ತ ಮಾನವೀಯತೆಯ ನ್ನೆಲ್ಲ ಬಡಿದೆಬ್ಬಿಸಿತು. ನನ್ನ ಒಳ್ಳೆಯತನವೆಲ್ಲಾ ಕೇಂದ್ರೀಕೃತ ವಾಯಿತು. ನನ್ನ ತ್ಯಾಗಭಾವನೆ ಭುಗಿಲ್ಲನೆ ಮೇಲುಕ್ಕಿತು. ಅವಳ ಕಷ್ಟ ಕಳೆಯಲು ಯಾವ ಬಲಿದಾನಕ್ಕಾದರೂ ಸಿದ್ಧನಾದೆ.

"ನಿಜ, ಲಲಿತಾ! ನಾ ಒಲ್ಲೆ ಎನ್ನಲಿ ನಿನ್ನ ಕೈ ಹಿಡಿದಿದ್ದರೆ, ಈ ಅನಾಹುತ ಕಪ್ಪುತ್ತಿತ್ತು. ಆದರೆ ಈಗಲೂ ಕಾಲ ಮಿಂಚಿಲ್ಲ. ನಿನ್ನ ಕೈಹಿಡಿದು ಈ ಕೂಪವನ್ನು ಪಾರು ಮಾಡುತ್ತೇನೆ. ಖಂಡಿತ—ನಿನ್ನೇ ಲಗ್ನವಾಗ್ತೇನೆ."

ಈ ನಿರ್ಧಾರದ ಮಾತು ನನ್ನ ಬಾಯಿಂದ ಹೊರಬಂದ ರಭಸ ಕಂಡು - - ಳಿಗೆ ಮಾತ್ರವಲ್ಲ — ನನಗೂ ಆಶ್ಚರ್ಯವಾಯಿತು.

ಲಲಿತೆಯ ಬೆರಗುವಡೆದ ಮುಖ ಕಂಡು ಮುಕ್ತೋಜಿತ ನಾದೆ.

"ಲಲಿತಾ, ಯೋಚಿಸಬೇಡ. ನಿರಪರಾಧಿಯನ್ನು ನರಕಕ್ಕೆ ನೂಕಿದ ನಾನೆಲ್ಲಾ ಚಂಡಾಲರೇ! ಹೇಳು, ನಿನಗೆ ಒಪ್ಪಿಗೆಯೇ?"

ಲಲಿತೆ ಕಕ್ಕಾಬಿಕ್ಕಿಯಾದವಳಂತೆ ಹಾಸಿಗೆಯ ಮೇಲೆ ಕುಸಿದಳು. ಕ್ಷಣ ಅವಳ ಬಾಯಿಂದ ಮಾತೇ ಹೊರಡಲಿಲ್ಲ. ಅನಂತರ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಮಾರುಕದಿಂದ ನನ್ನ ವ್ಯಕ್ತಿತ್ವವೂ ಕರಗಿತು. ಕರುಣೆಯ ಕಣ್ಣಿನಿಂದ ಅವಳನ್ನೇ ನಿಟ್ಟಿಸಿದೆ.

ಲಲಿತೆ ನನ್ನತ್ತ ನೇರವಾಗಿ ನೋಡಿದಳು:

"ನನಗೆ ಅಮ್ಮನದೇ ಯೋಚನೆ! ನಾನು ಬಂದು ಐದು ವರ್ಷವಾಯ್ತು! ನೆನೆದರೆ ನನ್ನ ಕರುಳು ಕುದಿಯುತ್ತೆ—ಅಮ್ಮ ನನ್ನ ಲಗ್ನವಾಗಿದೆ ಎಂದುಕೊಂಡಿದ್ದಾಳೋ ನೋ-ಏನುತಾ ಹೇಗಿದ್ದಾಳೋ-ಅಪ್ಪ ಅವಳನ್ನೂ ಮಾರಿಕೊಂಡಿದ್ದಾನೋ ಏನೋ!"

ಕಡೆಯ ಮಾತು ಹೇಳುವಾಗ ಅವಳ ಮುಖದಲ್ಲಿ ಭೀತಿ ಬರೆದಂತಿತ್ತು.

ನನಗೂ ವಿನುತೆಯ ಬಗ್ಗೆ ಭಯವಾಯಿತು—

ಲಲಿತಾ ನನ್ನತ್ತ ಒಂದು ಹೆಜ್ಜೆ ಇಟ್ಟಳು.

"ನನ್ನ ಲಗ್ನ ಆಗ್ತೇನೆ ಅಂದಿರಿ, ಅಲ್ಲವೇ?"—ಗಂಭೀರವಾಗಿ ಕೇಳಿದಳು.

"ಹೌದು, ಹೌದು!"

"ನಾನು ನಿಮಗೆ ನೋವಾಗುವಂತೆ ಮಾಡಿದೆ, ಕ್ಷಮಿಸಿ! ನೀವು ತುಂಬಾ ಒಳ್ಳೆಯವರು!"

ಅವಳ ಹೊಗಳಿಕೆ ಮುಳ್ಳಿನಂತೆ ಚುಚ್ಚಿತು. ನನ್ನ ಅಲ್ಪತನಕ್ಕೆ ನಾಚಿದೆ

"ಹಳೆಯದನ್ನು ಮರೆ, ಲಲಿತಾ. ಮುಂದೆ ನೀನು ವ್ಯಥೆ ಪಡದಂತೆ ನಾನು ನೋಡಿಕೊಳ್ಳುತ್ತೇನೆ"

ಲಲಿತೆ ಎವೆಯಿಕ್ಕದೆ ನನ್ನ ಕಣ್ಣಲ್ಲಿ ನೋಟ ನೆಟ್ಟಳು. ನನ್ನ ಅಂತರಾತ್ಮನನ್ನೇ ಶೋಧಿಸುವಂತಹ ನೋಟ ಅದು.

ಇದ್ದಕ್ಕಿದ್ದಂತೆ ಅವಳ ಕಣ್ಣುಗಳಲ್ಲಿ ನೀರು ತುಂಬಿತು. ಆರ್ತಳಾಗಿ, "ಬೇಡ ನಟೇಶ್, ಬೇಡ! ನನ್ನ ಬಾಳು ಎಂದೋ ಹಾಳಾಯಿತು; ನನ್ನ ವರೆಸುಬಿಡಿ ಲಲಿತಾ ಶತ್ರುಳೆಂದು ಭಾವಿಸಿಬಿಡಿ.... ನನ್ನ ಆಶೆ ಒಂದೇ-ನನ್ನ ತಂಗಿಗೂ ನನಗೆ ವಸ್ಥೆ ಬರದಿರಲಿ ಅವಳಾದರೂ ಸುಖವಾಗಿ ಸಂಸಾರ ಮಾಡಿಕೊಂಡಿರಲಿ. ನಟೇಶ್, ನಿಮ್ಮನ್ನು ಕೈಮುಗಿದು ಕೇಳಿಕೊಳ್ತೇನೆ-ನನ್ನ ಮೇಲೆ ತೋರಬೇಕೆಂದಿರುವ ಕರುಣೆಯನ್ನ ಅವಳ ಮೇಲೆ ತೋರಿ. ಅವಳ ಕೈಹಿಡಿದ ಕಾರಣಕ್ಕಾಗಿ ಅವಳನ್ನು ಉದ್ಧಾರ ಮಾಡಿ. ಅವಳನ ಎದೆಯ ಬೆಂಗೇನ ಕಳೆದು ಬಿಡಿ. ಇದೋ, ನಿಮ್ಮ ಕಾಲು ಹಿಡಿದು ಬೇಡ್ತೇನೆ"

-ಎಂದವಳೇ ಮುಂದಿನಿಂದ ನನ್ನ ಕಾಲು ಹಿಡಿದಳು.

ಆ ದೀನ ನೋಟ, ಕರುಳ ಬೇಗೆ, ತ್ಯಾಗಭಾವ ಕಂಡು ಮೂಕನಾದೆ. ನನ್ನ ಕಣ್ಣಲ್ಲೂ ನೀರಾಡಿತು

"ಏಳು ಲಲಿತಾ, ನಿನ್ನಿಷ್ಟದಂತೆಯೇ ಆಗಲಿ. ನಾನೆ ವಿನುತೆಯನ್ನೇ ಲಗ್ನವಾಗ್ತೇನೆ."

ಓ, ಲಲಿತೆಯ ಕಣ್ಣುಗಳಲ್ಲಿ ಎಂತಹ ಕೃತಜ್ಞತಾಭಾವ ಪ್ರತಿಬಿಂಬಿಸಿತ್ತು!

ಅಲ್ಲೇ ಇದ್ದ ಹತ್ತರ ನೋಟನ್ನು ಕೊಡಲು ಹೋದೆ. ಲಲಿತೆ ಬೆಚ್ಚಿ ಹಿಂದೆ ಸರಿದಳು.

"ಬೇಡ, ಬೇಡ! ನಿಮ್ಮಿಂದ ಏನನ್ನೂ ಬೇಡ. ನನ್ನ ಮಾತನ್ನು ಉಳಿಸಿಕೊಳ್ಳಿ. ಅದೇ ನನಗೆ ಹಿರಿಯ ಕಾಣಿಕೆ"

ಲಲಿತಾ ಹಾಸಿಗೆಯ ಅಡಿಯಲ್ಲಿ ತಡಕಾಡಿ ಹತ್ತರ ಹತ್ತು ನೋಟುಗಳ ಕಂತೆಯೊಂದನ್ನು ನನ್ನ ಕೈಗಿತ್ತಳು.

"ಇದೇ ನನ್ನೆಲ್ಲ ಗಳಿಕೆ-ನಿಮ್ಮ ಕೈಗೆ ಹಾಕುತ್ತಿದ್ದೇನೆ. ಅಪ್ಪ ವರದಕ್ಷಿಣೆ ಕೊಡಲಾರ-ನಾನೇ ಕೊಡುತ್ತೇನೆ-ಇದಿಷ್ಟೇ ನನ್ನಿಂದ ಸಾಧ್ಯ. ದಯವಾಗಿ ಅವಳ ಕೈಹಿಡಿರಿ ಅವಳನ ದುಃಖ ಕರಿಸಿ!"

ಅವಳ ತ್ಯಾಗದ ಹಿರಿಮೆಗೆ ಬೆರಗಾದೆ. ಅವಳ ಹಣ ಕಸಿಯುವ ಹೇಡಿ ನಾನಾಗಬೇಕೆ? ಬೇಡವೆಂದು ತಲೆಯಾಡಿಸಿದೆ

"ಏಕೆ, ಇದು ಅಪವಿತ್ರ ಹಣ ಎಂದೇ?"

—ನೋವಿನಿಂದ, ಬಾಣಬಿಟ್ಟಂತೆ ನೇರವಾಗಿ, ಕೇಳಿದಳು.

ನನಗೆ ಕಸಿವಿಸಿಯಾಯಿತು. ಈ ನಿರಪರಾಧಿನಿಯು ಪವಿತ್ರ ಹೃದಯದ ಪ್ರೇಮದ ಕಾಣಿಕೆ ಅಪವಿತ್ರವೇ? ಯಾವ ಬಾಯಲ್ಲಿ ಹಾಗೆನ್ನಲಿ?

"ಇಲ್ಲವಮ್ಮ, ಹಾಗೆಂದ ಬಾಯಲ್ಲಿ ಹುಳು ಸುರಿದೀತು. ದರೋಡೆ. ಕಾರನಂತೆ ಹೇಗೆ ಎಲ್ಲವನ್ನೂ ಅಪಹರಿಸಲಿ? ನನಗೆ ಹಣದಾಸೆಯಿಲ್ಲ. ಹಣಕಾಸಿಗಾಗಿ ಹೆಣ್ಣನ್ನು ಬಲವಾಗುವುದೂ ವೇಶ್ಯಾವೃತ್ತಿಯೇ ನನ್ನ ರೂಢಿಯೋಚಿತವೂ ಇಂದು ತೊಲಗಿ ಹೋಯಿತು, ಲಲಿತಾ. ಆದರೆ....ನಿನ್ನ ಬಾಳು ಹೀಗೇ ನರಳವಾಗಿರಬೇಕೇ? ಇದಕ್ಕೆ ಪರಿಹಾರ ಇಲ್ಲವೇ?" ನಾನು ಖೇದದಿಂದ ಕೇಳಿದೆ.

ಲಲಿತಾ ವಿಷಾದದಿಂದ ನಕ್ಕಳು—

"ನನ್ನ ಚಿಂತೆ ಬಿಡಿ ಲಲಿತಾ ಇನ್ನಿಲ್ಲ ಲಲಿತಾ ಎಂದೋ ಸತ್ತಳು ...ಅವಳನ್ನಾದರೂ ಕಾಪಾಡಿ ನಿಮಗೆ ನಾನಿನ್ನೇನು ಕೊಡಲಿ? ಇದೋ. ನೀವು ಕಣಕೆಟ್ಟು ಕೊಂಡಿರುವ ವೇಶ್ಯಮಂಕ್ಯ—ಬೇಕಾದರೆ ಭೋಗಿಸಿ."

ವ್ಯಂಗ್ಯವಿಲ್ಲದೆ ಸರಳತೆಯಿಂದ ಆಡಿದರೂ ಆ ಮಾತು ನನಿದೆಯನ್ನಿರಿಯಿತು ನಾನಿಷ್ಟ ನಿರ್ಲಜ್ಜನೇ. ಖಲ್ಪನೇ? ನನ್ನ ಮಾನವತೆಯು ಒರತೆ ಇಷ್ಟ ಬತ್ತಿದೆಯೇ? ಪವಿತ್ರ ವಸ್ತುವಿನಂತೆ, ಅವಳ ಕೈಗಳನ್ನು ಕಣ್ಣಿಗ್ಗತ್ತಿಕೊಂಡೆ.

"ನನ್ನ ಕ್ಷಮಿಸಬೇಕಮ್ಮ. ಈ ದಿನ ನನ್ನ ಕಣ್ಣು ತೆರೆಸಿತು. ನನ್ನನ್ನು ಕ್ಷಮಿಸು. ಖಂಡಿತ ನಿನ್ನ ತಾಯಿಯು ವ್ಯಥೆ ಕಳೆಯುತ್ತೇನೆ ನಿನ್ನ ತಂಗಿಯ ಕೈಹಿಡಿಯುತ್ತೇನೆ"

ನಾನು ಹೊರಡಲು ಮೇಲೆದ್ದೆ. ಲಲಿತಳ ಆರ್ತ ಮುಖ ನೋಡಿ ನನಗೆ ವಿಚಿತ್ರ ಸುಖವಾಯಿತು. ಅಶ್ರುಪೂರ್ಣವಾಗಿ ನಿಡುಸುಯ್ದೆ.

ಲಲಿತಾ ನೆನಪಿಸಿಕೊಂಡವಳಂತೆ, ಕಟ್ಟನೆ ಹೇಳಿದಳು

"ಆದರೆ—ನಮ್ಮನಿಗೆ ನನ್ನ ಇಲ್ಲಿ ಕಾಡಿದ್ದು ಹೇಳಬೇಡಿ... ಅವಳೇಕೆ ಕುದಿಯಬೇಕು? ಸಾಗೂ ಬಂದರೆ 'ಲಲಿತೆ ಲಗ್ನವಾಗಿ ಸುಖವಾಗಿದ್ದಳು. ಕಾರಿಗೆ ಸಿಕ್ಕು ಪತ್ತುಹೋದಳು' ಎಂದುಬಿಡಿ"

ಕೇಳಿ, ಸ್ತಂಭಿತನಂತೆ ನಿಂತುಬಿಟ್ಟೆ. ನೋವುಂಡು, ನರಳುತ್ತಿದ್ದರೂ ತಾಯಿಯಿಂದ ಸ್ನೇಹ ಸಹಾನುಭೂತಿ ಅಪೇಕ್ಷಿಸುತ್ತಿಲ್ಲ—ತಾಯಿ ಸುಖವನ್ನೇ ಕೋರುತ್ತಿದ್ದಾಳೆ -ಇವಳ ಹೃದಯ ಎಷ್ಟು ವಿಶಾಲ, ತ್ಯಾಗ ಎಷ್ಟು ಹಿರಿದು!

"ಆಗಲಿ, ಲಲಿತಾ, ಬರ್ತೇನೆ."

"ಬೇಡಿ ಪುನಃ ಇಂತಹ ಎಡೆಗೆ ಕಾಲಿಡಬೇಡಿ. ಇನ್ನು ಲಲಿತೇನ ಮರೆಬಿಡಿ ಪಕ್ಕಕೆ ಸೊನಾಳನ್ನು ನೆನಪಿನಲ್ಲಿಡಿ" ಎಂದಳು ಗಂಭೀರವಾಗಿ.

'ಲಲಿತಳಲ್ಲಿ ಸೋತಾ (ಚಿನ್ನ) ಹೃದಯ ಕಂಡೆ' ಎಂದುಕೊಂಡೆ

ಮರುಗೇಶನ ಜೊತೆ ನಾಪಸ್ಸಾನೆ; ಆದರೆ ಅವನ ಸಹವಾಸ ಈಗ ಬೇಕಿರಲಿಲ್ಲ ತೀರ ಅಪಕಸೀಯು ಅವನ ಸೇಹ ಎನ್ನಿಸಿತು ಇಂತಹ ಪೋಷಕರೇ ಅಲ್ಲವೆ ಈ ವೃತ್ತಿಯ ವ್ಯಾಪ್ತಿಗೆ. ಏಳ್ಗೆಗೆ ಕಾರಣ ಎಂದು ವ್ಯಗ್ರನಾದೆ.

ಲಲಿತೆ ಕೊಟ್ಟ ಹಣ ನನ್ನ ಜೇಬಿನಲ್ಲಿತ್ತು—ನನ್ನ ಅಂತರಾತ್ಮವನ್ನು ಮಿಡಿಯುತ್ತಿತ್ತು. ಅವಳ ತ್ಯಾಗ—ಹತ್ತರ ಹತ್ತು ನೋಟುಗಳು—ಅವರಿ ಅವಳಿಗೆ ಸರಿ ದಿಲೆ ಕಟ್ಟಲು ಯಾರಿಗೆ ಸಾಧ್ಯ? ನನ್ನಂತಹ ಹತ್ತು ಜನ ಮನುಜರಿಗೆ ಜನ್ಮವೀಯುವ ಅರ್ಹತೆಯುಳ್ಳ

ತಾಯಿಯ ಬಲಿದಾನದ ಬೆಲೆ! ಕಣ್ಣೀರ ಕಾಣಿಕೆ, ಅಧಃಪತನದ ಪ್ರತಿಫಲ—ಹೆತ್ತರ ಹತ್ತು ನೋಟುಗಳು!

× × × ×

ಊರಿಗೆ ಬಂದ ಮರುದಿನವೇ ನಾರಣಪ್ಪನ ಮನೆಗೆ ಹೋದೆ. ವಿನುತೆ ನಲ್ಲಿಯಿಂದ ಒಳಕ್ಕೆ ನೀರು ತರುತ್ತಿದ್ದಳು. ಅವಳನ್ನು ಕಂಡು ಸಮಾಧಾನದಿಂದ ಉಸಿರೆಳೆದೆ—ಸದ್ಯ, ಲಲಿತೆ ಭಯಪಟ್ಟಂತೆ ಇವಳೂ ಮಾರಲ್ಪಟ್ಟಿಲ್ಲವಲ್ಲಾ—ಎಂದು. ವಿನುತೆಯ ಕಪ್ಪು ಬಣ್ಣ, ನೋಟುಕೂದಲು ನನ್ನ ಗಮನಕ್ಕೆ ಬರಲಿಲ್ಲ. ಅವಳ ಪವಿತ್ರ ಸ್ತ್ರೀತ್ವವನ್ನು ಗುರುತಿಸಿದೆ.

ಶಾಂತಮ್ಮ ನನ್ನ ಕಂಡು ಚಕಿತರಾದರು. ನಾನು ವಿನುತೆಯನ್ನು 'ಕೇಳಲು' ಬಂದೆನೆಂದು ಕೇಳಿ, ಆಕೆ ತಮ್ಮ ಕಿವಿಯನ್ನು ತಾವು ನಂಬದಾದರು.

"ಭಗವಂತ ನಿನ್ನ ಸಾವಿರ ವರ್ಷ ಸುಖವಾಗಿಟ್ಟಿರಲಪ್ಪಾ.... ಆದರೆ, ನೀನು ಹಾಸ್ಯಮಾಡ್ತಾ ಇಲ್ಲವಷ್ಟೇ? ಅಥವಾ 'ಇವರೇ'ನಾದರೂ ನಿನಗೆ ಹೇಳಿಕೊಟ್ಟಿದ್ದಾರೋ?—ಲಲಿತೆಯಂತೆ ಇವಳನ್ನೂ ಮಾರಲು ಮಸಲತ್ತು ಮಾಡಿಕೊಂಡು?"

ನನ್ನೆದೆ ಡವಗುಟ್ಟಿತು - ಹಾಗಾದರೆ ಲಲಿತೆಯ ವಿಷಯ ಈಕೆಗೆ ತಿಳಿದಿದೆಯೇ.

"ಏನಾಯ್ತು ಲಲಿತೆಗೆ?"

—ಏನೂ ತಿಳಿಯದವನಂತೆ ಕೇಳಿದೆ.

ಆಕೆ ಕಣ್ಣೀರಿಡುತ್ತಾ,

"ಅಯ್ಯೋ, ಅದೊಂದು ಕತೆ! ಹೆತ್ತವರೇ ಹೀಗೆ ಮಾಡುವುದು ಈ ಕಲಿಗಾಲದ ಮಹಿಮೆಯೋ ಏನೋ—ಲಲಿತೆಗೆ ಲಗ್ನಮಾಡ್ತೀನಿ ಅಂತ ಕರೆದುಕೊಂಡು ಹೋಗಿ, ಹೈದರಾಬಾದಿನಲ್ಲಿ ಅವಳನ್ನು ಮಾರಿ ಬಂದರಂತೆ. ಎರಡು ಮೂರು ವರ್ಷ ನನಗೆ ತಿಳಿದೇ ಇರಲಿಲ್ಲ. ಗಂಡನ ಮನೇಲಿ ಸುಖವಾಗಿದ್ದಾಳೆ-ಎಂದುಕೊಂಡಿದ್ದೆ. 'ಈ ಹುಡುಗಿಗೆ ಗಂಡು ನೋಡಿ, ಲಲಿತೇನ ಒಮ್ಮೆ ಕರೆಸಿ' ಎಂದು ನಾನು ತುಂಬಾ ಒತ್ತಾಯ ಮಾಡಿದೆ ಆಗ ಅವರು ತುಂಬಾ ಸಿಟ್ಟಾಗಿ ಎಲ್ಲಾ ಹೇಳಿದರು. ಆನ್ನ ನೀರು ಬಿಟ್ಟು ನಾಲ್ಕು ದಿನ ಗೋಳಾಡಿದೆ. ನನ್ನ ಬುದ್ಧಿಯೇ ವಿಕಲ್ಪ ಹೊಂದುತ್ತೇನೋ ಎಂಬಷ್ಟು ಸಂಕಟ ಆಯ್ತು....ಈ ಹುಡುಗಿಯ ಬಗ್ಗೆ ನನಗೆ ತುಂಬಾ ಭಯ ಎಲ್ಲಿ ರಾತ್ರಾನುರಾತ್ರಿ ಕದ್ದು ಕರೆದೊಯ್ದು ಮಾರಿಬಿಡ್ತಾರೋ ಎಂದು, ಎಷ್ಟೋ ದಿನ ನಿದ್ದೆಗೆಟ್ಟು ಸರ್ವಗಾವಲು ಕಾದೆ. ಈಗ ಇವಳನ್ನು ರಾತ್ರಿ ಕೋಣೇಲಿ ಕೂಡಿ ಬೀಗ ಹಾಕಿ, ಬೀಗದ ಕೈನ ಬಚ್ಚಿಟ್ಟಿರುತ್ತೇನೆ—ನಿದ್ದೆಗಣ್ಣಲ್ಲಿ ಏನಾದರೂ ಮರೆತುಬಿಟ್ಟೀನು ಅಂತ."

ಆಕೆಯ ಮುಖದಲ್ಲಿಯ ಭೀತಿ, ನೋವುಗಳನ್ನು ಕಂಡು ನನ್ನ ಕರುಳಲ್ಲಿ ಕತ್ತರಿಯಾಡಿದಂತಾಯಿತು. ಅಬ್ಬಾ! ಆ ತಾಯಿಯ ಹೃದಯ ಎಷ್ಟು ಪರಿತಾಪದಿಂದ, ಆತಂಕದಿಂದ ದಿನ ನೂಕುತ್ತಿರಬಹುದು!

ತಾರಕಂಬಗಳು

(ಲಲಿತಪ್ರಬಂಧಗಳ ಸಂಕಲನ)

ಲೇಖಕರು :

ಶ್ರೀ. ಬಿ. ಆರ್. ವಾಡಪ್ಪಿ, ಎಂ. ಎ.

ಇದೀಗ ಪ್ರಕಟವಾಗಿದೆ.

ಹಿರಿಯ ಕವಿಗಳಾದ ಶ್ರೀಮಾನ್ ಬೇಂದ್ರೆ ದತ್ತರಾಯರ ಮುನ್ನುಡಿಯೂ ಇದೆ.

ಬೆಲೆ ೧-೩.೨ ನ. ಪೈ. ಕ್ರೌ ೯೬ ಪುಟಗಳು.

ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

ಮತ್ತು

ಸಮಾಜ ಪುಸ್ತಕಾಲಯ, ಭಗತ್ ಸಿಂಗ ಬೀದಿ ಧಾರವಾಡ,

ಇಂತಹ ಒರ್ವ ತಾಯಿಯ ಸಂಕಟ ಕಳೆಯುವ ಶಕ್ತಿ ನನಗಿದೆ. ಯಲ್ಲಾ—ಎಂದು ಹರ್ಷಿಸಿದೆ.

"ಆನುಮಾನ ಬೇಡಿ. ನಾನು ಸ್ವಂತ ಪ್ರೇರೇಪಣೆಯ ಮೇಲೆ ಬಂದಿದ್ದೇನೆ. ಲಲಿತೆಯ ವಿಷಯದ ಗಾಳಿಸಮಾಚಾರ ಕೇಳಿದೆ. ಈ ಹುಡುಗಿಯ 'ಕನ್ಯಾಸೆರೆ' ಬಿಡಿಸಲು—ಇವರಿಂದ ನಾನೇ ಮುಂದಾದೆ—" ಎಂದೆ.

—'ಹೆಣ್ಣು ಕೇಳುವ' ರೂಢಿ ತಪ್ಪಿರುವ ಈ ಕಾಲದಲ್ಲಿ, ನನ್ನ ವರ್ತನೆಯ ಬಗ್ಗೆ ಸಂಶಯ ಬಾರದಂತಿರಲು, ಆಕೆಗೆ ವಿವರಣೆ ಕೊಡುವ ಅಗತ್ಯವಿತ್ತು.

× × × ×

ನನ್ನ—ವಿನುತೆಯ ವಿವಾಹ ನಿರಾಡಂಬರದಿಂದ ನಡೆಯಿತು. ವಿನುತೆಯನ್ನು ನಾನು ಒಪ್ಪಿದುದು ಎಲ್ಲರಿಗೂ ಅಚ್ಚರಿ. ನನ್ನ ತಾಯಿ-ತಂಗಿಯರಿಗೆ ಅದೊಂದು ಬಿಡಿಸಲಾರದ ಒಗಟು.

"ಕಾದು ಕಾದು, ಕಡೆಗೆ ಕರಿನೋರೆಯ ಕನ್ಯೆಯನ್ನೇ ಕೈಹಿಡಿದೆಯಲ್ಲಾ!" ಎಂದು ಹಾಸ್ಯಮಾಡಿದರು ನನ್ನ ಬಂಧುಗಳು.

"ಕನ್ಯಾಸೆರೆ ಬಿಡಿಸಲು ಲಗ್ನವಾದನಂತೆ" ಎಂದು ನಗೆಯಾಡಿದಳು ತಂಗಿ.

ನನ್ನೆದೆಯ ಗುಟ್ಟು, ನನ್ನ ಮನ ಕಲಕುವ ಸಮಸ್ಯೆ—ಅವರಿಗೆ ಹೇಗೆ ತಿಳಿಯುವೇಳು?

ಒರ್ವ ಕನ್ಯೆಯ ಸೆರೆಯೇನೋ ನನ್ನಿಂದ ಕೊನೆಗೊಂಡಿತು.

ಆದರೆ ನನ್ನ ಎದೆ ಕೊರೆಯುತ್ತಿದ್ದ ಪ್ರಶ್ನೆ ಇದು:—ಇನ್ನೊರ್ವ ಕನ್ಯೆಯ ಸೆರೆವಾಸಕ್ಕೆ ಎಂದಿಗೆ ಕೊನೆ? ಎಂದಿಗೆ ಕೊನೆ?

ಹಣದ ಎಣಿಕೆ

(ಸಂಶೋಧನಾತ್ಮಕ ಲೇಖನ)

ಶ್ರೀ. ಎ. ಎಂ. ಅಜ್ಜೆಗೇರಿ ಎಂ. ಎ., ಧಾರವಾಡ

ಭಾರತದ ಪ್ರಾಚೀನ ನಾಣ್ಯಗಳ ಶಾಸ್ತ್ರೀಯ ಅಭ್ಯಾಸ ನಡೆದು ಈಗ ಸುಮಾರು ೧೦೦ ವರ್ಷಗಳಾಗಿವೆ. ಆಗಾಗ ದೊರೆತ ನಾಣ್ಯ ಮತ್ತು ಅವುಗಳ ಬಗೆಗೆ ಇದ್ದ ಸಾಹಿತ್ಯಗ್ರಂಥ, ಶಾಸನ, ವರದಿ ಮುಂತಾದುವುಗಳಲ್ಲಿ ಇರುವ ಉಲ್ಲೇಖಗಳ ಸಹಾಯದಿಂದ ಈ ನಾಣ್ಯಗಳ ಅಭ್ಯಾಸ ಮುಂದುವರಿದಿದೆ. ಉತ್ಖನನಗಳಿಂದ ಹೊಸ-ದಾಗಿ ಪ್ರಾಚೀನನಾಣ್ಯಗಳು ಬೆಳಕಿಗೆ ಬಂದಿವೆ. ನಾಣ್ಯಗಳ ಹೆಸರು, ಬೆಲೆ ಇವುಗಳ ವಿವೇಚನೆಯಲ್ಲಿ, ಅಲ್ಲಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವೂ ಉಂಟು—ಎಂಬ ವಿಷಯ ಕಂಡು ಬರುವುದು.

ಭಾರತದಲ್ಲಿ ನಾಣ್ಯಗಳ ಬಳಕೆ ಎಂದಿನಿಂದ ಪ್ರಾರಂಭವಾಯಿ-ತೆಂದು ಹೇಳುವುದು ಕಠಿಣವಾದ ವಿಷಯವಾಗಿದೆ ಈಗ ಸಿಕ್ಕಿರುವ ಪುರಾವೆಗಳು ಸಾಕಷ್ಟು ಇರದಿರುವುದರಿಂದ ಅವು ವಾದ-ವಿವಾದಕ್ಕೆ ಅವಕಾಶವನ್ನುಂಟು ಮಾಡಿವೆ. ಈ ಕಾರಣವಾಗಿ ನಾಣ್ಯಶಾಸ್ತ್ರಜ್ಞರು ಭಿನ್ನ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ವಿಲ್ಸನ್ ಮತ್ತು ಪ್ರಿನ್ಸೆಪ್ ಅವರು, 'ಭಾರತದಲ್ಲಿ ನಾಣ್ಯಗಳು ಎಲ್ಲಕ್ಕೂ ಮೊದಲು ಬಳಕೆಯಲ್ಲಿ ಬಂದುದು, ಗ್ರೀಕರು ಭಾರತಕ್ಕೆ ಬಂದ ಕಾರಣವಾಯ್ತು' ಎನ್ನುತ್ತಾರೆ. ಅವರಿಗೆ ಮೊದಲು ಭಾರತೀಯರು ನಾಣ್ಯಗಳನ್ನು ಉಪಯೋಗಿಸದೆ ಬಂಗಾರ ಮತ್ತು ಬೆಳ್ಳಿಯ ಪುಡಿ ಅಥವಾ ಮುದ್ದೆ-ಗಳನ್ನು ವ್ಯವಹಾರದಲ್ಲಿ ಉಪಯೋಗಿಸುತ್ತಿದ್ದರೆಂದು ಅವರ ಅಭಿ-ಪ್ರಾಯ ಪ್ರಿನ್ಸೆಪ್ ಅವರು ತಮ್ಮ ಅಭಿಪ್ರಾಯವನ್ನು ಕೆಲಕಾಲದ ನಂತರ ಬದಲಿಸಿ, ಭಾರತಕ್ಕೆ ಗ್ರೀಕರು ಬರುವ ಮೊದಲೇ, ತಮ್ಮದೇ ಆದ ನಾಣ್ಯಪದ್ಧತಿಯನ್ನು ಭಾರತೀಯರು ಅನುಸರಿಸುತ್ತಿದ್ದರೆಂದು ಹೇಳಿ, 'ಅಚ್ಚಿನಲ್ಲಿ ತಯಾರಾದ ನಾಣ್ಯಗಳು ಮಾತ್ರ ಭಾರತದಲ್ಲಿ ಉಗಮಹೊಂದಿದ್ದು ಗ್ರೀಕರ ಪ್ರಭಾವದಿಂದ' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅಲನ್ ಎಂಬ ಮತ್ತೊಬ್ಬ ನಾಣ್ಯಶಾಸ್ತ್ರಜ್ಞರು ಗ್ರೀಕ ನಾಣ್ಯಪದ್ಧತಿಗೂ ಭಾರತದ ತೀರ ಪ್ರಾಚೀನ ನಾಣ್ಯಪದ್ಧತಿಗೂ ಏನೂ ಸಂಬಂಧವಿಲ್ಲ, ಅವು ಬೇರೆಬೇರೆಯಾಗಿ ಬೆಳೆದು ಬಂದಿವೆ—ಎಂದು ಹೇಳುತ್ತಾರೆ. ಇವರ ಅಭಿಪ್ರಾಯದ ಪ್ರಕಾರ, ಎಲ್ಲಕ್ಕೂ ಪ್ರಾಚೀನ ನಾಣ್ಯಗಳಾದ ಕಾರ್ಷಾಪಣಗಳು (Punch marked coin) ಕ್ರಿ. ಶ. ಪೂ ೪ನೆಯ ಶತಮಾನಕ್ಕೆ ಹೋಗುತ್ತವೆ. ಇವು ಅಲೆ-ಮೆನಿಡ್ ಪ್ರದೇಶದಲ್ಲಿ ಪ್ರಚಲಿತವಿದ್ದ ನಾಣ್ಯಗಳನ್ನು ಹೋಲುತ್ತವೆ—ಎಂದು ಅವರ ಅಭಿಪ್ರಾಯ ಕನ್ನಿಂಗ್‌ಹಾಮ್ ಎಂಬ ಮತ್ತೊಬ್ಬ ವಿದ್ವಾಂಸರ ಅಭಿಪ್ರಾಯದ ಪ್ರಕಾರ, ಕಾರ್ಷಾಪಣಗಳು ಕ್ರಿ. ಶ. ಪೂ ಬ್ಯಾಬಿ-ಲೋನಿಯಾ ರಾಷ್ಟ್ರದ ನಾಣ್ಯಗಳ ಸಂಬಂಧ ಬೆಳೆದು, ಬ್ಯಾಬಿ-ಲೋನಿಯಾ ರಾಷ್ಟ್ರದ ನಾಣ್ಯಗಳ ಪ್ರಭಾವದಿಂದ ಉಂಟಾಗಿವೆ—ಎಂದಿದೆ ಅವರೆ ಕುನಿಂಗ್‌ಹಾಮ್, ರ್ಯಾಪ್ಸನ್ ಮುಂತಾದ ಪರಕೀಯ ವಿದ್ವಾಂಸರು ಸಹ—ಭಾರತದ ನಾಣ್ಯಪದ್ಧತಿಯು ತನ್ನದೇ ಆದದ್ದೆಂದು ಮತವನ್ನು ವ್ಯಕ್ತ ಪಡಿಸಿದ್ದಾರೆ.

ಒಂದು ದೇಶದ ನಾಣ್ಯಪದ್ಧತಿಯನ್ನು ಮತ್ತೊಂದು ದೇಶವು ಅನುಕರಿಸಿದೆ ಎಂದು ಹೇಳುವಾಗ, ಆ ಆ ನಾಣ್ಯಗಳಲ್ಲಿ ಇರುವ ರಚನೆ, ತೂಕ ಇವುಗಳನ್ನು ಗಮನಿಸಬೇಕಾಗುತ್ತದೆ. ಈ ರೀತಿ ನೋಡಿದಾಗ, ಭಾರತದ ನಾಣ್ಯಪದ್ಧತಿ ಗ್ರೀಕ ಅಥವಾ ರೋಮನ್ ನಾಣ್ಯಪದ್ಧತಿ ಅಥವಾ ಬೇರಾವುದೇ ದೇಶದ ನಾಣ್ಯಪದ್ಧತಿಯನ್ನು ಅನುಸರಿಸಿಲ್ಲವೆಂದು ಗೊತ್ತಾಗುವುದು ಡಾ. ಭಾಂಡಾರಕರ, ಅಳತೇ-ಕರ, ಡಾ ಅಗ್ರವಾಲಾ ಮೊದಲಾದ ವಿದ್ವಾಂಸರು ಈ ಅಭಿಪ್ರಾಯ-ವನ್ನೇ ಸಾಧಾರಣವಾಗಿ ಸಮರ್ಥಿಸಿದ್ದಾರೆ. ಡಾ. ಭಾಂಡಾರಕರ ಅವರು, ಭಾರತದ ನಾಣ್ಯಗಳು ವೇದಕಾಲದಲ್ಲಿ (ಅಂದರೆ ಕ್ರಿ. ಶ. ಪೂ ೨೫೦೦ ರಿಂದ ಕ್ರಿ ಪೂ ೮೦೦ ಈ ಅವಧಿಯಲ್ಲಿ) ಇದ್ದವೆಂದು ಮಂಡಿಸಿದ್ದಾರೆ. ಆದರೆ ನನಗೆ ಉಪಲಬ್ಧವಿದ್ದ—ಈಗ ದೊರೆತ ಆಧಾರಗಳ ಮೇರೆಗೆ, ಭಾರತದ ಎಲ್ಲಕ್ಕೂ ಪ್ರಾಚೀನ ನಾಣ್ಯಗಳ ಕಾಲ ಕ್ರಿ. ಪೂ. ೬೦೦ ಎಂದು ಹೇಳಬಹುದು.

ಈಗ ನಾಣ್ಯಗಳೆಂದರೇನು, ಅವುಗಳ ಅವಶ್ಯಕತೆ ಹೇಗೆ ಉಂಟಾಯಿತು, ಭಾರತದ ನಾಣ್ಯಗಳು ಹೇಗೆ ಯಾವ ಯಾವ ಧಾತುವಿನಿಂದ ನಿರ್ಮಿತವಾಗಿವೆ, ಅವುಗಳಲ್ಲಿಯ ವೈವಿಧ್ಯ, ತುಲನಾತ್ಮಕ ಬೆಲೆಮೇನು ಇತ್ಯಾದಿ ವಿಷಯಗಳನ್ನು ಕುರಿತು ವಿಚಾರಿಸುವಾ.

ನಾಣ್ಯವು ಒಂದು ನಿರ್ದಿಷ್ಟ ತೂಕದ ಧಾತುವಿನ ತುಂಡು ಇದ್ದು, ಅದರ ಮೇಲೆ ಸರಕಾರದ ಅಥವಾ ಒಂದು ಸಂಸ್ಥೆಯ ಗುರುತು ಇರುವುದು. ಅದನ್ನು ಜನರು ಕೊಂಡುಕೊಳ್ಳುವ ವ್ಯವಹಾರದಲ್ಲಿ ಬಳಸುತ್ತಿದ್ದುದು ನಿಮಗೆಲ್ಲರಿಗೂ ಗೊತ್ತಿದ್ದ ವಿಷಯವಾಗಿದೆ ನಾಣ್ಯಗಳು ಅಸ್ತಿತ್ವದ್ದಕ್ಕೆ ಬರುವ ಮೊದಲು—ಬಂದ ಮೇಲೆ ಸಹ—ವಿನಿಮಯದ ಕೊಳ್ಳುವಿಕೆಗಾಗಿ ಧಾನ್ಯ, ಲೋಹದ ಮುದ್ದೆ ಇತ್ಯಾದಿ ಕೊಡುವ ಪದ್ಧತಿ ಭಾರತದಲ್ಲಿ ಇತ್ತು; ಈಗಲೂ ಇರುವುದು. ಹಳ್ಳಿಗಳಲ್ಲಿ ಕಾಳು ಹಾಕಿ ತಮಗೆ ಬೇಕಾದ ವಸ್ತುಗಳನ್ನು ಕೊಳ್ಳುತ್ತಾರೆ; ಕೂಲಿ ಕುಂಬಳಿ-ಯನ್ನು ಸಹ ಕಾಳಿನ ರೂಪದಲ್ಲಿ ಹಳ್ಳಿಗರು ಪಡೆಯುತ್ತಿದ್ದಾರೆ. ಹೀಗೆ ವಸ್ತುವಿನಿಂದ ವಸ್ತುವಿಗೆ ಅನನುಕೂಲತೆಗಳು ಕಂಡುಬಂದುವು. ಧಾನ್ಯ-ಗಳನ್ನು ಸ್ಥಳಾಂತರಿಸುವುದರಲ್ಲಿ ಮತ್ತು ಕಾದಿಡುವಲ್ಲಿ ಆಗುವ ತೊಂದರೆ

ಗಳನ್ನೆ ಕಪ್ಪು ಲು ನಾಣ್ಯಗಳನ್ನು ನಿರ್ಮಿಸಬೇಕಾಯಿತು. ಕ್ರಮೇಣ ಅವುಗಳ ಬಳಕೆ ಹೆಚ್ಚಾಯಿತು.

ಭಾರತದ ನಾಣ್ಯಗಳನ್ನು ಮುಖ್ಯವಾಗಿ ಮೂರು ಧಾತುಗಳಿಂದ ತಯಾರಿಸಿದ್ದಾರೆ. ಬಂಗಾರ, ತಾಮ್ರ ಮತ್ತು ಬೆಳ್ಳಿ—ಇವೇ ಆ ಧಾತುಗಳು. ಬಂಗಾರವು ಅಸಾಮ, ಹೈದರಾಬಾದ್, ನೈಸೂರು ಮತ್ತು ಮಲಬಾರ್ ಪ್ರಾಂತಗಳಲ್ಲಿಯು ಕಣಿಗಳಲ್ಲಿ ದೊರೆಯುತ್ತಿತ್ತು. ಇದಲ್ಲದೆ ಸಿಂಧು, ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳ ಪಾತ್ರ. ಗಳಲ್ಲಿಯೂ ಸಿಗುತ್ತಿತ್ತು. ಭಾರತೀಯರು ನಾಣ್ಯ ಮತ್ತು ಆಭರಣ. ಗಳಿಗೆ ಬೇಕಾಗುವಷ್ಟು ಬಂಗಾರ ತಾವೆ ದೊರೆಯುತ್ತಿದ್ದಿಲ್ಲವಾದ್ದ ರಿಂದ, ಅದನ್ನು ತಿಬೇಟ್ ಮತ್ತು ಪೂರ್ವ ಸೈಬೇರಿಯಾದಿಂದ ತರಿಸುತ್ತಿದ್ದರು. ಭಾರತದಲ್ಲಿ ಬಂಗಾರದ ನಾಣ್ಯಗಳು ಬಹಳ ಪ್ರಮಾಣದಲ್ಲಿ ದೊರೆತಿವೆ ತಾಮ್ರದ ಗಣಿಗಳು ರಾಜಸ್ಥಾನ ಮತ್ತು ಮದ್ರಾಸ ಪ್ರಾಂತದಲ್ಲಿ ಇದ್ದುವು. ಭಾರತದ ಜನರು ಪಶ್ಚಿಮ ರಾಷ್ಟ್ರಗಳಿಂದ ತಾಮ್ರವನ್ನು ತರಿಸುತ್ತಿದ್ದರೆಂದು Periplus of the Erythrean Sea ಎಂಬ ಕ್ರಿ ನೆಯ ಶತಮಾನದ ಗ್ರಂಥದಿಂದ ತಿಳಿದು ಬರುತ್ತದೆ. ಹೀಗೆ ದೊರೆತ ತಾಮ್ರದಿಂದ ಪ್ರಾಚೀನ ತಾಮ್ರದ ನಾಣ್ಯಗಳು ತಯಾರಾಗಿವೆ. ಬೆಳ್ಳಿಯ ಗಣಿಗಳು ಭಾರತದಲ್ಲಿ ಇದ್ದಿಲ್ಲ ಆದರೂ, ಅಫಘಾನಿಸ್ತಾನ್ ಮತ್ತು ರಷ್ಯಿಯ ವಶಿಯಾದಿಂದ ಅದನ್ನು ಆಮದು ಮಾಡಿಕೊಳ್ಳಬೇಕಾಗುತ್ತಿತ್ತು. ಆಮದುದಿಂದ ಬೆಳ್ಳಿಯು ನಾಣ್ಯಗಳ ಸಂಖ್ಯೆ ಕಡಿಮೆ. ಪರದೇಶದಿಂದ ಈ ಧಾತುಗಳನ್ನು ತರಿಸುತ್ತಿದ್ದ ಮೂಲಕ, ಆ ಧಾತುಗಳ ಅಪಾರತೆ ಮತ್ತು ಸುಲಭಲಬ್ಧತೆಯು ಮೇರೆಗೆ ನಾಣ್ಯಗಳ ಬೆಲೆ ಕಿಚ್ಚು ಕಡಿಮೆ ಆಗುತ್ತಿದ್ದುವು.

ಬಂಗಾರದ ನಾಣ್ಯಗಳ ಮೂಲ ಪ್ರಮಾಣ ಸುವರ್ಣವಾಗಿತ್ತು. ಅದರ ತೂಕ ೧೬ ವರಾಹ ಅಥವಾ 'ಲಂ ರತಿ' ಎಂದರೆ ೧೪೪ ಗ್ರೇನು. ಗುಪ್ತರ ರಾಜ್ಯವು ಪತನವಾದ ಮೇಲೆ ಬಂಗಾರದ ನಾಣ್ಯಗಳು ಉತ್ತರಭಾರತದಲ್ಲಿ ಕಡಮೆ ಆದುವು.

ಬೆಳ್ಳಿಯ ನಾಣ್ಯದ ಪ್ರಮಾಣ, ಪುರಾಣ, ಧರಣ ಅಥವಾ ಕಾರ್ಷಾಪಣ ಇದರ ನಿರ್ದಿಷ್ಟ ತೂಕ ಸಹ ೧೬ ವಾಪಗಳಾ. ಗಿದ್ದುವು. ಆದರೆ ಬೆಳ್ಳಿಯ ವಾಪದ ತೂಕ ೨ ರತಿ, ಬಂಗಾರದಂತೆ ೩ ರತಿ ಅಲ್ಲ. ಎಂದರೆ ಬೆಳ್ಳಿಯ ಪ್ರಮಾಣ ನಾಣ್ಯದ ತೂಕ ೩೨ರತಿ ಅಥವಾ ೫೭ ಗ್ರೇನು ಇತ್ತು.

ತಾಮ್ರದ ಪ್ರಮಾಣನಾಣ್ಯ 'ಪಣ' ಆಗಿತ್ತು. ಇದರ ತೂಕ ಮನುವಿನ ಮತದ ಪ್ರಕಾರ ೧೪೪ ಗ್ರೇನು ಅಥವಾ ೫ ರತಿಯು ೧೬ ವಾಪಗಳು.

ಬಂಗಾರ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳ ತುಲನಾತ್ಮಕ ಬೆಲೆ ಕಾಲಕಾಲದಲ್ಲಿ ಬೇರೆ ಆಗಿತ್ತೆಂದು, ನಾಣ್ಯಶಾಸ್ತ್ರದ ಅಭ್ಯಾಸದಿಂದ ತಿಳಿದು ಬಂದಿವೆ. ಕ್ರಿ. ಪೂ. ೩೦೦ರಲ್ಲಿ ಬಂಗಾರ ಬೆಳ್ಳಿ ೧೨:೧೦ ಪ್ರಮಾಣದಲ್ಲಿದ್ದು ತು. ಇದರಿಂದ ಬೆಳ್ಳಿ ಬಂಗಾರಕ್ಕಿಂತ ಹೆಚ್ಚು. ಮೌಲ್ಯವಾಗಿತ್ತೆಂದು ಗೊತ್ತಾಗುವುದು. ಕ್ರಿ. ಶ. ೨ನೆಯ ಶತಮಾನದಲ್ಲಿ ಬಂಗಾರ-ಬೆಳ್ಳಿಗಳ ಬೆಲೆಯು ಪ್ರಮಾಣ ೧೪ : ೧, ಗುಪ್ತಕಾಲದಲ್ಲಿ ೧೬ : ೧ ಹೀಗೆ ಇತ್ತು. ೧೯ನೆಯ ಶತಮಾನದಲ್ಲಿ ೧೬ ರೂಪಾಯಿಗಳಿಗೆ ೧ ತೊಲೆ ಬಂಗಾರ ದೊರೆಯುತ್ತಿತ್ತು.

ಬೆಳ್ಳಿ ಮತ್ತು ತಾಮ್ರಗಳ ತುಲನಾತ್ಮಕ ಬೆಲೆ ಹಾರೀತ ಧರ್ಮಶಾಸ್ತ್ರದಲ್ಲಿ ಕಂಡು ಬರುತ್ತದೆ. ೧ : ೬೪ ಈ ಪ್ರಮಾಣದಲ್ಲಿತ್ತು. ಕೌಟಿಲೀಯನಾದ ಗಂಧರ್ವ ರಚನೆಯ ಕಾಲದಲ್ಲಿ ೧ : ೮೦ ಇತ್ತು. ಅಕಬರನ ಕಾಲದಲ್ಲಿ ಬೆಳ್ಳಿ ತಾಮ್ರಗಳ ಪ್ರಮಾಣ ೧ : ೭೦ ಇತ್ತು. ಆದರೆ ಈ ಪ್ರಮಾಣವನ್ನು ಹೇಳುವಾಗ-ಆ ಆ ಧಾತುಗಳಲ್ಲಿಯ ಬೇರೆ ಧಾತುಗಳ ಮಿಶ್ರಣವನ್ನು ಗಣನೆಗೆ ತಾದುಕೊಂಡಿಲ್ಲ. ಔರಂಗ-ಜೇಬನ ಕಾಲದಲ್ಲಿ ಬೆಳ್ಳಿತಾಮ್ರಗಳ ಪ್ರಮಾಣ ೧ : ೪೮ ಆಗಿತ್ತು. ಇದರಿಂದ ಆಗ ತಾಮ್ರದ ಬೆಲೆ ಎಷ್ಟೆಂದು ಗೊತ್ತಾಗುವುದು.

ಬಂಗಾರ, ಬೆಳ್ಳಿ, ತಾಮ್ರದ ನಾಣ್ಯಗಳನ್ನು ವ್ಯವಹಾರದಲ್ಲಿ ತಕ್ಕಡಿಗೆ ಕಟ್ಟಿ ನೋಡಿ, ತೂಗಿ ಸ್ವೀಕರಿಸುತ್ತಿದ್ದರು. ಬರೀ ಎಣಿಸಿ ತೆಗೆದುಕೊಳ್ಳುತ್ತಿದ್ದಿಲ್ಲ.

ಇನ್ನು ನಾವು ಬಂಗಾರ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಯಾವ ಪ್ರಕಾರ ವಿಭಾಗಿಸುತ್ತಿದ್ದರೆಂದು ನೋಡುವಾ. ಅಂದರೆ ಆ ಆ ಧಾತವಿನ ನಾಣ್ಯಗಳ ಎಣಿಕೆಯ ಪದ್ಧತಿ ಹೇಗೆ ಇತ್ತೆಂದು ತಂಡು ಬರುವುದು

ಸುವರ್ಣವು ಬಂಗಾರದ ಪ್ರಮಾಣನಾಣ್ಯವಾಗಿತ್ತು. ಅದರ ತೂಕ ೧೦ ರತಿ ಎಂದರೆ ೧೪೪ ಗ್ರೇನು ಇತ್ತು. ಬೆಳ್ಳಿಯ ಮೂಲ ನಾಣ್ಯ ಕಾರ್ಷಾಪಣ; ಅದರ ತೂಕ ೩೨ ರತಿ ಅಥವಾ ೫೭ ಗ್ರೇನು. ಶತವಾನ ಎಂಬ ೧೦೦ ರತಿ ತೂಕದ್ದು ಳ್ಳಿ ನಾಣ್ಯದ ಉಲ್ಲೇಖ ಬ್ರಾಹ್ಮಣ ಮತ್ತು ಬೌದ್ಧಕೃತಿಗಳಲ್ಲಿ ಬರುತ್ತದೆ. ಈ ನಾಣ್ಯ ಕೆಲವು ಅಭಿಪ್ರಾಯ. ದಂತೆ ಬೆಳ್ಳಿಯದು; ಕೆಲವರ ಮತದಂತೆ ಬಂಗಾರದ್ದು ಇರುವುದು. ಆದರೆ ಈ ನಾಣ್ಯದ ವಿಭಾಗಪದ್ಧತಿ ದಶಾಂಶ ಪದ್ಧತಿಯನ್ನು ಅನುಸರಿಸುತ್ತದೆ.

ಶತಮಾನ ಕೋಷ್ಟಕ ಈ ಪ್ರಕಾರ ಅದೆ.

೧ ಶತಮಾನ =	೨ ಅರ್ಧ ಶತಮಾನ
(೧೦ ರತಿ)	(೧೬೦ ರತಿ)
೧ ಅರ್ಧ ಶತಮಾನ =	೨ ಪಾದ ಶತಮಾನ
(೫೦ ರತಿ)	(೮೦ ರತಿ)
೧ ಪಾದ ಶತಮಾನ =	ಅಷ್ಟಭಾಗ ಅಥವಾ ಶಾಣ
	(೪೦ ರತಿ)
೧ ಶಾಣ =	೨ ಅರ್ಧ ಶಾಣ
	(೨೦ ರತಿ)

ಈ ನಾಣ್ಯಗಳು ಮೈಸೂರ ಸಂಸ್ಥಾನದಲ್ಲಿ ಬಳಿಕೆಯಲ್ಲಿದ್ದುವು.

ತಾಮ್ರ:—

ಕಾಸು=೪ ದುಗ್ಗಾಣಿ=೧೨ ದುಡ್ಡು, ೨ ೪ ಮೂರು ಕಾಸು=೧೨ ಅಣೆ ದುಡ್ಡು=೪ ಅಣೆ ಅರ್ಧಾಣೆ

ಬೆಳ್ಳಿ

ದೊಡ್ಡ ಆಣೆ ೨ ಆಣೆ, ಪಾವಲಿ, ಅರ್ಧರೂಪಾಯಿ, ರೂಪಾಯಿ—ಮೂಪ (ನಾಣ್ಯ) ರೂಪ್ಯರೂಪವುಳ್ಳದ್ದು.

೧/೪ ಗು ೧ ವರಾಹ	೧/೮ ಗು ||| ಮುದ್ಧರಣ
೧/೫ ಗು || ಹೊನ್ನು, ಪ್ರತಾಪ	೧/೧೬ ಗು । ಧರಣ
೧/೬೪ ಗು = ಮುದ್ದುಗುಲ	೧/೩೨ ಗು = ಚವಲ
೧/೧೨೮ ಗು = ದುಗುಲ	೧/೨೪ ಗು ||| ಮೂರುಬೊಟ್ಟು
೧/೨೫೬ ಗು || ಎರಡು ಬೊಟ್ಟು	೧/೫೧೨ ಗು । ಬೊಟ್ಟು

೧ ಕಾರ್ಷ (೫೨.೬೦ ಗ್ರೇನಿನದು) ೧ ಅರ್ಧ ಸುವರ್ಣ (೬೨ ಗ್ರೇನಿನದು) ೧ ಸುವರ್ಣ (೧೪೪ ಗ್ರೇನಿನದು) ೧ ನಿಷ್ಕ, ಪಲ ಅಥವಾ ಶತಮಾನ (೫೭೬೦ ಗ್ರೇನಿನ ತೂಕದ್ದು); ಎಂಬಲ್ಲಿ ನಿಷ್ಕ ಅಥವಾ ಶತಮಾನಕ್ಕೆ ೪ ಸುವರ್ಣಗಳಾಗುತ್ತಿದ್ದುವು.

ಈ ಪದ್ಧತಿಯಿಂದ ೧/೨, ೧/೪, ೧/೮, ೧/೧೬ ಈ ಪ್ರಕಾರ ನಾಣ್ಯಗಣನೆ ಮಾಡುತ್ತಿದ್ದರೆಂದು ತಿಳಿಯುವುದು.

ಭಾಸ್ಕರಾಚಾರ್ಯರ ಲೀಲಾವತಿಯ ಪ್ರಕಾರ:

೧ ನಿಷ್ಕ = ೧೬ ದ್ರಮ್ಮು ೧ ದ್ರಮ್ಮು = ೧೬ ಪಣ ಎಂದು ತಿಳಿಯ ತಕ್ಕದ್ದು.

ತಾಮ್ರನಾಣ್ಯದ ಕೋಷ್ಟಕ

೫ ರತಿ = ೧/೬ ಪಣ = ೫ ಕವಡಿ
೧೦ ರತಿ = ೧/೩ ಪಣ = ೧೦ ಕವಡಿ
೨೦ ರತಿ = ೨/೩ ಪಣ = ಕಾಕಿಣಿ ಅಥವಾ ವೊಡಾ = ೨೦ ಕವಡಿ
೬೦ ರತಿ = ೨ ಪಣ = ೬೦ ಕವಡಿ
೯೦ ರತಿ = ೩ ಪಣ = ೯೦ ಕವಡಿ
೧೮೦ ರತಿ = ೬ ಪಣ = ೧೮೦ ಕವಡಿ

೩೬೦ ರತಿ = ೧ ಪಣ (ಅಥವಾ ಕಾರ್ಷಾಪಣ = ೩೬೦ ಕವಡಿ
೧೨೦ ರತಿ = ೧/೩ ಪಣ = ೧೨೦ ಕವಡಿ
೧೮೦ ರತಿ = ೧/೨ ಪಣ = ೧೮೦ ಕವಡಿ (ಶತಮಾನ)

ಇಂಡಿಯಾದಲ್ಲಿ ೧೫೫ ಗ್ರೇನು, ೧೨೦ ಗ್ರೇನು, ೧೪೪ ಗ್ರೇನು, ೫೨ ಗ್ರೇನು, ೫೭ ಗ್ರೇನು, ೬೭ ಗ್ರೇನು (ಡ್ರಾಮ್) ೩೩ ಗ್ರೇನು (ಗ್ರೀಕ) ಇತ್ಯಾದಿ ತೂಕದ ಮೂಲನಾಣ್ಯಗಳು ಇರುತ್ತಿದ್ದುವು. ಇವುಗಳಲ್ಲಿ ಕೆಲವು ಪರಕೀಯರ ಪ್ರಭಾವಕ್ಕೆ ಒಳಗಾದ ಗುಪ್ತರ ಬಂಗಾರದ ನಾಣ್ಯಗಳು ಮತ್ತು ಜೋಳರ ೬೨ ಗ್ರೇನಿನ ನಾಣ್ಯಗಳು ಇರುತ್ತವೆ. ಔರಂಗಜೇಬನ ಮೊದಲಿನ ದಾಮುಗಳ ತೂಕ ೨೧ ಮಾಷ, ಮತ್ತು ಹಿಂದುಗಡೆ ಬಂದುವುಗಳ ತೂಕ ೧೪ ಮಾಷ ಇತ್ತು. ನಮ್ಮ ಹಳೆಯ ನಾಣ್ಯಗಳಲ್ಲಿ ದಶಾಂಶ ಪದ್ಧತಿ ಅನುಸರಿಸಲ್ಪಡುತ್ತಿದ್ದಿತೆಂದು ಮೇಲಿನ ಕೋಷ್ಟಕದಿಂದ ವ್ಯಕ್ತವಾಗುವುದು. ಇಷ್ಟೇ ಅಲ್ಲದೆ ಕಾರ್ಷಾಪಣ, ಹೊನ್ನು, ಪಗೋಡಾ ಮುಂತಾದ ನಾಣ್ಯಗಣನೆಗಳೂ ಇಲ್ಲಿ ಪ್ರಚಾರದಲ್ಲಿದ್ದುವು. ಈ ಗಣನೆಗಳಲ್ಲಿ ಸಾಮಾನ್ಯವಾಗಿ ಬರುವ ವಿಭಾಗಗಳು ೧, ೧/೨, ೧/೪, ೧/೮, ೧/೧೬ ಎಂಬ ವಿಚಿತ್ರ ಗಣನೆಗಳೂ ಬರುತ್ತವೆ. ಅದನ್ನು ಇಲ್ಲಿ ವಿವರಿಸುವುದು ನೀರಸವಾದ ಕಾರ್ಯ. ಅದರೆ ಹೊನ್ನು ಎಂಬ ನಾಣ್ಯಗಣನೆ ಗಮನೀಯವಾಗಿದೆ. ಇದರಲ್ಲಿ ಹೊನ್, ಅರ್ಧಹೊನ್, ಪಾದ ಹೊನ್ ಎಂಬುದರ ಜೊತೆಗೆ ೧ ಹೊನ್ನಿಗೆ ೧೦ ಪಣಗಳಾಗುತ್ತಿದ್ದುವೆಂದೂ ಗೊತ್ತಾಗುವುದು. ಇಲ್ಲಿಯೂ ಸಹ ದಶಾಂಶ ಪದ್ಧತಿ ಇದ್ದಂತೆ ತೋರುವುದು. ಎಣಿಸಲು ಸುಲಭವಾದ, ಮತ್ತು ಭಾರತದಲ್ಲಿ ಮೊದಲು ಒಂದು ಕಾಲಕ್ಕೆ ಅಸ್ತಿತ್ವದಲ್ಲಿದ್ದ ದಶಾಂಶ ಪದ್ಧತಿಯನ್ನು ನಾವು ಮತ್ತೆ ಪ್ರಾರಂಭಿಸುತ್ತಿದ್ದುದು ಸಂತೋಷದ ವಿಷಯ.

ನಮ್ಮ ಇರುವು

ಸೌ. ಶಾರದಾದೇವಿ ಗೋಕಾಕ, ಧಾರವಾಡ

೧

ಕನಸಿನಾಗ ಕಡಲ ಕಂಡೆ
ಅದಕ್ಕ ಇತ್ತು ಒಂದು ದಂಡೆ—
ದಂಡೀ ಮ್ಯಾಲೆ ಒಂದು ಗೋಡೆ ಕಟ್ಟಿದ್ದೆವು;
ಗೋಡೀ ಮ್ಯಾಲೆ ಸಂಸಾರಾನ ಹೂಡಿದ್ದೆವು.

೨

ಮುಂದೆ ಇವರು ಹಿಂದೆ ನಾನು,
ನಮ್ಮ ಹಿಂದೆ ಮಕ್ಕಳ ಸಾಲು—
ಎಲ್ಲಾರೂನು ಕಡಲ್ ನೋಡ್ಕೋತ್ ಕುಳಿತಿದ್ದೆವು;
ಎಷ್ಟೋ ಹೊತ್ತು ನಮ್ಮನ್ ನಾವೇ ಮರೆತಿದ್ದೆವು.

೩

ಊಟವಿಲ್ಲಾ ಉಡಿಗೆ ಇಲ್ಲಾ,
ತೊಟ್ಟಿದ್ದೊಂದೇ ತೊಡಿಗೆ ಎಲ್ಲಾ—
ಎಲ್ಲಾ ಗೋಜು ಚಿಂತೆಗಳನು ಮರೆತಿದ್ದೆವು;
ಲೋಕದೊಡನೆ ಸಂಬಂಧಾನೆ ಬಿಟ್ಟಿದ್ದೆವು.

೪

ನಾನು ನಮ್ಮ ರಾಯರಿಗಂದೆ:
"ಉತ್ತರ ಹೇಳಿ, ಪ್ರಶ್ನೆಗೊಂದೆ
ಗೋಡೆಯ ಮ್ಯಾಲೆ ಕುಳಿತಿರೋದು ಬಾಳೋ ಹಾಳೋ?
ಎಲ್ಲಾರ್ಹ್ಯಾಂಗ ಮನೀ ಕಟ್ಟೀ ಇರುವಽ ಗೋಳೋ?"

೫

ಅದಕ್ಕ ನಮ್ಮ ರಾಯ್ರಂದ್ರು—
"ಇಲ್ಲಿ ಸುಖಾ ಕಂಡಿಲ್ಲೇನು?
ಮನೆ ಕಟ್ಟಿ ಮೆರೆಯವರಿದನ, ಉಂಡಾರೇನು?
ಬಯಲಿನಲ್ಲಿ ಮಂದಿರವನ್ನು ಕಂಡಾರೇನು?

೬

ಬಯಲು ಎಲ್ಲಾ ನಮ್ಮ ಆಸ್ತಿ,
ದೂರ ಇದ್ರೇ ಹಿಗ್ಗು ಜಾಸ್ತಿ,
ಸಂಸಾರದಾಗ ಇದ್ದು ಕೊಂಡು ಇಲ್ಲದ್ಹಾಂಗ ಇದ್ದೇವಿ;
ಸಾಗರಕಿಂತಾ ಹೆತ್ತು ಬಟ್ಟು ಮ್ಯಾಲಕಿದ್ದೇವಿ.

ಅಲೆದಾಟ

ಶ್ರೀ. ಅ. ರಾ. ಸೇ.

'ಚರೈವೇತಿ, ಚರೈವೇತಿ'
—ಐತರೇಯ ಬ್ರಾಹ್ಮಣ

೧

ಮಳೆಗಾಲದ ಹಗಲು ಮೊನ್ನೆ,
ತುಂಡು ಮೋಡವಿಲ್ಲ ಮೇಲೆ,
ಬಿಸಿಲು ಸೆಕೆ, ನಗರದೆಲ್ಲ ಬೀದಿ ಬರಿದು,
ಅಲೆಯುತಿದ್ದೆ.

ಮಧ್ಯಾಹ್ನದ ಮೌನ ಮುರಿದು
ದೂರದಿಂದ ಹಾರಿಬಂದ ಕೂಗು ಕಿವಿಯ ಚುಚ್ಚಿತು;
ಅನ್ಯಮನದ ನನ್ನ ನೆಳೆದು
ಓ ಮೂರ್ಖನೆ ಇದ ನೀ ನೋಡೆಂದು ಎಚ್ಚರಿಸಿತು.
ಗಂಟುಮುಖದ ಕೆಂಪು ಕಣ್ಣ
ಚಿಂದಿ ಚಿಂದಿ ಬಟ್ಟೆಯುಟ್ಟ
ಕುಂಟುಗಾಲ ತೊನ್ನು ಮೈಯ
ಭಿಕ್ಷುಕಿ ಹೊಟ್ಟೆಯ ತಟ್ಟುತ
'ಅನ್ನ' ಎಂದು ಒದರಿದಳು—
ಮಣ್ಣಿದ ಮೇಲೆ ಕುಳಿತ ಕಾಗೆ
ಚೀರುತೆದ್ದು ಹಾರಿದುವು.
ಭರದಿಂದ ಒಂದೊಂದು ಮೋಟಾರು ಮೇಲ್ಬಿದ್ದು
ಅವಳ ಜೀವವ ಹಿಸುಕಿ ಮುಂದೆ ಸರಿದಿತ್ತು—
ಉಳುವವರೆ ಇಲ್ಲ, ಸಂತೋಷಪಟ್ಟರು ಎಲ್ಲ,
ಅವಳ ಬಾಳಿನ ಗೋಳು ಕೊನೆಗೊಂಡಿತೆಂದು.

× × × ×

ಸಾಲು ಸಾಲು ದೀಪ ಮಂಕುಬೆಳಕ ತೂರಿ ನಿಂತಿವೆ;
ಮೇಲೆ ಮರದಿ ಹದ್ದು ಕಾಗೆ ಅರೆನಿದ್ರೆಯಲ್ಲೊರಗಿವೆ.
ಕಣ್ಣೆವೆಯಲಿ ನಿದ್ರೆಯಿಲ್ಲ, ದಾರಿಯುಲ್ಲಿ ಅಲೆಯುವೆ
ನನ್ನೊಲೆ ಈ ದಾರಿ ನರಳಿ ರಾತ್ರಿಯಲೆಚ್ಚೆತ್ತಿದೆ
'ನಿನ್ನ ನೋಡಿ ಕೊರಗಿ ನಾನು ಬಿನ್ನನಾಗಿ ನಿಂತಿರುವೆ
ಬನ್ನ ಬಡಿಪ ಬಾಳರೋಗ ಹುಟ್ಟುತೇಕೊ ಅರಿಯದೆ—

ರೋಗವಡಸಿ ದೇಹ ಸವೆಯೆ
ಲೋಕದೊಡನೆ ನಡೆವ ಬಯಕೆ
ಮನದ ಹುಚ್ಚು; ಏನ ಕಂಡು
ಯಾವ ಸುಖದ ಕನಸನುಂಡು
ಜೀವಿಸಿರುವುದೋ?
ದಿಂಡುದೇಹ ತುಂಡುಬಟ್ಟೆ
ಮುರುಕುಮನೆ—ಬರಿಯಹೊಟ್ಟೆ
ಪುರುಷಾರ್ಥವನೇನಗಳಿಸೆ
ಬಾಳುತಿರುವುದೋ.'

೨

ಈ ನಗರದ ದಾರಿಗಳಲಿ ಅಲೆಯಲಾರಿ ನಾನು—
ಏಕೋ ಮನವೆಳೆಯುತಿಹುದು ಹಳ್ಳಿಗಾಡಿಗೆಂದು.
'ಗ್ರಾಮಮಾರ್ಗ, ಕೈಯ ಬೀಸಿ ಕರೆಯುತಿರುವೆಯೇನು?
ಓ! ಏಕಾಂತದ ಗೆಳೆಯನೆ ನಿಸರ್ಗದ ಬಂಧು!
ಬೆಳೆದು ಕೊಯ್ಯಲಾದ ಹೊಲದ ಬದುವಿನಲ್ಲಿ ನಡೆಯುತಿಹೆ—
ಇಳೆಯಿದು ಸಂತೋಷದ ನೆಲೆ ಎನ್ನುತೊಮ್ಮೆ ಬಗೆಯುತಿಹೆ—
ಉತ್ಸಾಹದ ಗಾಳಿಬೀಸಿ ತಂಪಿನ ಮಳೆಗರೆದಿದೆ;
ಯಾವುದೊ ಹಾಡಿನ ಮಧುರತೆ ಸುತ್ತಲೆಲ್ಲ ಹಬ್ಬಿದೆ.
ಅಗಸ ಭೂಮಿಯನು ತಬ್ಬಿ ಅಲಿಂಗನ ಗೈದಿದೆ,
ಸೊಗದ ಸುಗ್ಗಿ ಬರಲು ಭೂಮಿಗಲಂಕಾರ ಮೆರೆದಿದೆ;
ತಿಳಿಗೊಳದಲಿ ಸುಳಿಗಾಳಿಗೆ ಅಲೆಗಳಾಟ ಸೊಗಸಿದೆ,
ಹಕ್ಕಿ ಪುಕ್ಕ ತೆರೆದು ಹಾರಿ ಏನೇನನೊ ಹೇಳಿದೆ.
ಬೆಳೆದ ಹೊಲದ ನಡುವೆ ಬಂದು ನಿಂದು ಮೈಯ ಮರೆತೆ,
ನವಚೇತನದುಸಿರನುಂಡು ಆನಂದದಿ ಬೆರೆತೆ.
ಅಗಸತಿಳಿನೀಲಿ, ನಡುವೆ ಬಿಳಿಯ ಮೋಡದಾಟ—
ಹಾರುತಲಿವೆ ನೂರು ಹಕ್ಕಿ ಏನು ಚೆಲುವು ನೋಟ?
ಮೇರೆಯಿರದ ಸಂತೋಷದ ನಡುಹಗಲಿನಲಾ ಹೊಲದಲಿ
ನನ್ನ ಕನಸಿನಧಿದೇವತೆ ಬಂದಳು ಮೈದಳೆದು.
ಓ ಸಖಿ, ಬಾ ನಾ ಸುಖಿ, ನೀನೆನ್ನನರಸಿ ಬಂದೆ—
ಅಲೆದಾಡುವ ಈ ಜೀವಕೆ ನೆಲೆಯನೊಂದ ತಂದೆ;
ರನ್ನೆ ನಿನ್ನ ಕೆನ್ನೆ ಗುಲಾಬಿಯನು ಹಳೆದು ನಗುತಿದೆ—
ನಿನ್ನ ಹಾವ ಭಾವನೆನಗೆ ವಿಸ್ಮೃತಿಯನು ತರುತಿದೆ.

ನಿನ್ನ ಅಧರರಾಗ ನಗು, ನಿನ್ನ ವದನ ಪೂರ್ಣವಿಧು—
ನಿನ್ನ ನಡೆಯ ನಿನ್ನ ನುಡಿಯೊಳಾಳುತಿರುವ ಪ್ರೇಮಮಧು!
ನಿನ್ನ ಕಣ್ಣಮಿಂಚಿನಿಂದ ಅಳಿದಿದೆ ಹೃದಯದ ಚಿಂತೆ,
ಎನ್ನವರಿಸು ಸೊಗವ ಸುರಿಸು ತೊಲಗಲಿ ದುಗುಡದ ಸಂತೆ.
ಬೆಳೆದ ಹೊಲದ ಬದಿಯಲಿದ್ದ ಪುಷ್ಪವೃಕ್ಷದಡಿಯಲಿ
ಕುಳಿತೆ ನಾನು ಬಳಿಯಲವಳು ದೃಶ್ಯಸ್ವರ್ಗವಿದಿರಲಿ!
ಏನಾಯಿತೊ ಮುಂದೆ, ಅರಿಯೆ ಬಹಳಕಾಲವಿದ್ದೆ—
ಆ ಗಾಳಿಯು ಬೀಸಿ ಬಂದು ಕವಿಯಿತೆನಗೆ ನಿದ್ದೆ
ಎಚ್ಚರ್ತೆನು ಕಣ್ಣಬಿಟ್ಟೆ
ಏನು? ಎಲ್ಲಿ? ಅಯ್ಯೊ ಕೆಟ್ಟೆ!
ದಿಟ್ಟಿಸಿದೆನು ಸುತ್ತಲೆಲ್ಲ ಅಯ್ಯೊ ಅಂಧಕಾರ—
ಮುಗಿಲು ಬಾಯಬಿಟ್ಟು ಅಳಟ ಉಗುಳುತಿಹುದು ನೀರ—
ಸೊಗದ ಸೂರ್ಯನಿಲ್ಲ, ನರಕ ನಗುವುದಯ್ಯೊ ಘೋರ!

೩

ಉಜ್ಜಯನಿ! ಉಜ್ಜಯನಿ!
ನಿರ್ಜರರಾಡಿದ ಅಂಗಣ—
ಅಲಕಾವತಿ, ಕೈಲಾಸಕೆ ಅಲ್ಲಿಂದಲೆ ದಾರಿ
ದೂರನಾಡ ಕಾಣಲೆಂದು ಹೋಗುವೆನಾಹಾರಿ.
ಪರ್ವಿಯುದಾ ಮರಳು ಕಾಡ ಕಾಣುತಿರುವುದೆನ್ನ ಮನ
ಉಮರನ ಫಿರ್‌ದೌಸಿಯೂ ಸಂದರ್ಶನ ಓಹೊ ಘೆನ!
ದಮಾಸ್ಕಸ್
ಬ್ಯಾಬಿಲಾನ್
ಬಾಗದಾದ್
ಹಿರೂಸಲೆಂ
ಹೆಲೆಸ್ಪಾಂಟ್ ದಾಟಿ ಹೋಗಿ
ಕಂಡೆನಯ್ಯ ಪಾರ್ಥೆನಾನ್—
ಒಲಿಂಪಸಿನ ಶಿಖರದಲ್ಲಿ ಸರ್ವಶಕ್ತ Zeus
(ಅವನ ಪುತ್ರ ಕಳ್ಳು ಕುಡಿದು ಕುಣಿವನೋಡಯೋನಿಸಿಸ್).
ಸಿಡಿಲಿನೊಡನೆ ಸರಸವೇಕೆ? ಬೆಂಕಿಯೊಡನೆ ಆಟ
ಬೇಡ, ಕಾಕಸಸಿನೊಳೆನಗೆ ಏಕಾಂತದ ಕೂಟ—
ಎಂದು, ತಿರುಗಿ ಹಿಂದಕೆ—
ನಡೆವೆ ನಾನು ಮುಂದಕೆ—
ಕಾದು ನಿಂತು ಝಳಹೊಯ್ಯುತಿರುವುವೋ ಸಾಲು ಸಾಲು ಬಂಡೆ—
ಕೆಂಪು ಬಣ್ಣದಾಗಸದಿ ಸೂರ್ಯನದೊ ಬಿಳಿಯ ಬೆಂಕಿಯುಂಡೆ—
ಹಾರುತಿರುವ ಹದ್ದುಗಳ ಗುಂಪು ಅಲ್ಲಿಂದ ಪಟದಲೆಲ್ಲ
ಮೇರೆಯಿರದ ಮೌನದಲಿ ಗಾಳಿಯಿದು ಕುದಿಯುತಿರುವುದಲ್ಲ!
ಏನು ಮೌನವಿದು ಎಂಥ ಮೌನವಿದು ಸದ್ದು ಸುಮ್ಮನಾಯ್ತೆ
ಏನು ಬಿಸಿಲು ಬಿಸಿಲಲ್ಲಿ ಉರಿಯ ಮಳೆ ನೆಲಲು ಇಂಗಿಹೋಯ್ತೆ!
ಯಾವ ತಾಪ ಮೃತ್ಯುವಿನ ಕೋಪಕೀದೇಶ ದಗ್ಧವಾಯ್ತೋ—
ಯಾವ ಶಾಪ ಪ್ರಕೃತಿ ಪ್ರಕೋಪಕೀನಾಡು ಗ್ರಾಸವಾಯ್ತೋ!

ಆ ಶಿಲಾಮಯ ಪ್ರಸ್ತರಾಗ್ರದಲಿ ಮುಗಿಲ ಜುಬ್ಬನೀಂತು
ಕೋಡುಗಲ್ಲು ಕಾಣುವುದು ಹೆಡೆಯ ಬಿಚ್ಚಿರುವ ಸರ್ಪದಂತು
ಗಾಳಿ ಕಾದು ದೆಂಡಾಗಿ ಬೆವತಿಹುದು ಆದರೆ ಸುತ್ತಮುತ್ತು
ಕೇಳುತಿಹುದು ಕಣ್ಮುಚ್ಚಿಗಳನು ಆ ನೋಟ, ಬವಳಿಬಂತು.
ಸರ್ಪ ಶಿಲೆಯ ತುದಿ ಮೆಟ್ಟಿಲಲ್ಲಿ ಬಿರುಬಿಸಿಲು ಕುಣಿಯುವಲ್ಲಿ
ಅರೊ ಮಲಗಿ ಹೊರಳುವರು ಬೆಂಕಿಯಲಿ ನೋವಿನುರುಳಿನಲ್ಲಿ
ಚೀರಿ ಸಂಕಟದಿ ಕೈಯನೆತ್ತಿ ಅತ್ತಿತ್ತ ನೆಟ್ಟಿಸುತ್ತ
ಘೋರ ದುಃಖದಲಿ ಬೆದರಿ ಕಲ್ಲಣಿಸಿ ಬಾಳನಲ್ಲೆನುತ್ತ—
" ಮಾನವನ ಮಿತ್ರ ನಾನೆಲೆ ಮನುಜ ಕೇಳು
(ಅರಿಯುಲರಿದೆನ್ನ ಗೋಳು)
ಲೋಕಕ್ಕೆ ಅಗ್ನಿದಾನವ ಮಾಡಿದ ನಾನು
ಯಾತನೆಗೆ ಸಿಕ್ಕಿ ಪ್ರೊಮೀಥಿಯಸನು
ಯಾವ ನೀಚನೀ ಬಾಳ ರೋಗವನು ಇಳೆಗೆ ತಂದನವನು
ಯಾವ ನಿಸ್ಕರುಣಿ ಮನುಜರೇಳ್ಗೆಯನು ಕಂಡು ಕಹಿಸನವನು;
ಯಾರು ಏತಕೋ ಎಲ್ಲ ಜನರ ಕಾಡಿಸುವನವನೆ ನನ್ನ
ಕಾಡಿಸಿವನು ಅವನಿಂದ ಬಿಳ್ಳಿತಕೆ ಬಂದಿತಂದು ಬನ್ನ.
ಕೊನೆಗೊಮ್ಮೆ ಪಡೆದೆನವನಿಂದೆ ಮುಕ್ತಿ
ಗೆಲವಾಯ್ತು ಪೌರುಷಕೆ ಅದೆ ನನ್ನ ಶಕ್ತಿ.
ಮನುಜ ಕುಲ ಹಿರಿದೆಂದು ನಾನು ನಂಬಿದ್ದೆ
ಅವನ ಯತ್ನವ ಕಂಡು ಹಿರಿಹಿಗ್ಗುತಿದ್ದೆ,
ಇಂದವರು ಮತ್ಸರದಿ ಹೋರುತಿಹರಯ್ಯೋ—
ಅಂಧರೋ ಕ್ರೂರರೋ ಕೀಟಸದೃರಯ್ಯೋ!
ಕ್ರೂರದೈವವ ಗೆದ್ದು ಮಾನವಗೆ ಸೋತೆ
ತಾಳಲಾರೆನೊ ನನಗೆ ಬಂದ ಈ ಬಾಧೆ
ದ್ರೋಹಿಯನು ಬೆಳೆಸಿ ಕರ್ಮಕ್ಕೆ ಶುತ್ತಾದೆ. "

× × × ×

ಉಪಸಂಹಾರ

ಮಧ್ಯಾಹ್ನದ ಬಿಸಿಲಿನಲ್ಲಿ
ಮೂರುದಾರಿ ಕೂಡುವಲ್ಲಿ
ಕುಳಿತುಮರದ ಕೆಳಗೆ ನೋಡುತಿರುವೆನು ತಿರಿಯ
ಏನು ಈ ಅಗಾಧ ಮೌನದೊಡಲಿನಿಂದ ಸಿಡಿದುಬರುವ
ಅರ್ಥನಾದವಾವುದು?
ಹಸಿರಿನೊಂದು ಗರಿಕೆಯಿಲ್ಲ,
ಕೆರೆಯು ಒಣಗಿ ತಾರಿರುವುದು.
ಹೃದಯವನ್ನು ಒಡೆದು ಅಳಲತರುವ
ವಾರ್ತೆಯಾವುದು?
ಕಟ್ಟೆಯುಡಿಗೆ ಮಾರುದಾರಿ
ಅಲ್ಲ ನೋಡು ನೂರುದಾರಿ
ದಿಕ್ಕು ದಿಕ್ಕಿಗೊಯ್ದು ಬಿಡಲು ಸಿದ್ಧವಾಗಿವೆ—

ಬೆಳಕು ಹರಿಯಲಿ

(ಒಂದು ಅಭಿನೂತನ ಕಥೆ)

ಶ್ರೀ. ಬಿ. ಜಯಾಚಾರ್ಯ ಬಿ. ಎಸ್ಸಿ., ಎಲ್‌ಎಲ್. ಬಿ. ಬೆಂಗಳೂರು

ದುಡಿಮೆಗಾರನೇ ಈ ಜಗತ್ತಿನ ಸೂತ್ರಸಂಚಾಲಕ. ಅವನ ದುಡಿಮೆಯೇ ಜನತೆಗೆ ಜೀವನದಾಯಿ. ಆದರೆ ದುಡಿಮೆಗಾರನ ಹೊಟ್ಟೆ ಬರಿದು; ಮನೆ ಬರಿದು; ಬದುಕು ಬರಿದು. ಕೈಹಿಡಿದ ಹೆಂಡತಿಯೂ ಆತನಿಗೆ ದೂರದವಳು. ಹಡೆದ ಮಕ್ಕಳ ಮುದ್ದನ್ನೂ ಅವನರಿಯ. ದುಡಿಮೆ, ದುಡಿಮೆ! ಹನ್ನೆರಡು ತಿಂಗಳೂ ಅವನು ಕರ್ಮಯೋಗಿ!

'ನನ್ನ ಲೇಖನಿ ಎಲ್ಲಿದೆ?'

'ನನ್ನ ಪ್ಯಾಡ್ ಎಲ್ಲಿದೆ?' ನಾನು ಬಡಬಡಿಸಿದೆ—

ನಾನು ಇಂದು ಕತೆ ಬರೆಯುವೆನು. ಒಂದು ಹುಡುಗಿಯ ಕತೆ—ಹೆಣ್ಣಿನ ಕತೆ—ಜುಬೇದಾಳ ಕತೆ! ಜುಬೇದಾ ಕತೆಯಲ್ಲ, ಒಂದು ವಾಸ್ತವತೆ, ಒಂದು ಸತ್ಯ; ಅಲ್ಲದೆ ಕೊನೆಗಾಣದ ಒಂದು ನೋವು! ನಾನು ಈ ನೋವನ್ನು ಎಷ್ಟೋ ದಿನಗಳಿಂದ ಅನುಭವಿಸುತ್ತಿದ್ದೇನೆ–ಮೊದಲನೆಯ ಸಾರಿ ಒಬ್ಬ ಯುವತಿಯನ್ನು ಕಂಡು ನನ್ನನ್ನು ನಾನೆ ಮರೆತಂದಿನಿಂದ—

ಆ ಯುವತಿ ಯಾರೆಂಬುದನ್ನರಿಯೆ. ಅವಳು ನನ್ನ ಮನೆಯ ಆಳಾಗಿರಬಹುದು,—ಕುಟುಂಬದ ಸಂಬಂಧಿಕಳೋ, ಅಥವಾ ಓಣಿಯ ತಿರುವಿನಲ್ಲಿ ಕುಳಿತು ತರಕಾರಿ ಮಾರುವವಳೋ!–ಆದರೆ ಅವಳೊಂದು ಹೆಣ್ಣೆಂಬುದು ಮಾತ್ರ ಗೊತ್ತು—ಹೆಣ್ಣು—ಯವ್ವನದಿಂದ ತುಂಬಿ ತುಳುಕುವ ಹೆಣ್ಣು!–ಆಕೆ ನನ್ನ ಮನಸ್ಸು, ನನ್ನ ಬುದ್ಧಿ ಮತ್ತು ನನ್ನ ವಿಚಾರಶಕ್ತಿಯನ್ನೆಲ್ಲ ತನ್ನೆಡೆಗೆ ಸೆಳೆದಿದ್ದಳು. ನಾನು ಮಾತ್ರ ನಿರ್ಜೀವ ಪ್ರತಿಮೆಯಂತೆ ಅವಳನ್ನು ನೋಡಲಾರಂಭಿಸಿದ್ದೆ.

ಇದೀಗ ಎರಡು ಮೂರು ನಿಮಿಷಗಳ ಮಾತಷ್ಟೆ!— ಆದರೆ ಆ ಎರಡು ನಿಮಿಷಗಳು ಇನ್ನೂ ನನ್ನ ಜ್ಞಾಪಕದಲ್ಲಿವೆ!! ಮತ್ತೆ ಜುಬೇದಾ! - ಜುಬೇದಾಳಿಗೆ ತೋರುವುದಕ್ಕಾಗಿಯೇ ಇದನ್ನು ಪುನಃ ಹೇಳಬೇಕಾಗಿದೆ–ಈಗ ಅವಳೊಂದು ಅತ್ಯವಶ್ಯವಿಲ್ಲದ ನೋವಾಗಿದ್ದಾಳೆ.

ಜುಬೇದಾ ಸರಿಯಾದ ಸಮಯಕ್ಕೆ ದೊರೆತಳು—ಎಂದರೆ ಯಾವಾಗ ತರುಣಿಯರಲ್ಲಿ ಸುಮ್ಮಸುಮ್ಮನೆ ಆಸಕ್ತಿ ಹುಟ್ಟುತ್ತದೆಯೋ, ಯಾವುದಾದರೂ ಮಾತನಾಡಲು ಮನಸ್ಸಾಗುತ್ತದೆಯೋ - ಮತ್ತೆ-ಮತ್ತೆ—

ಆದರೆ ಇರಲಿ ಬಿಡಿ ಈ 'ಮತ್ತೆ'

ಏಕೆಂದರೆ ಇದು ಕತೆಯನ್ನು ಬೆಳಸುತ್ತದೆ; ಮಾತನ್ನು ಉದ್ದ ಮಾಡುತ್ತದೆ. ಅರಿಯದ ಒಂದು ಎಳೆ ಆರಂಭವಾಗುತ್ತದೆ; ಅದೆಲ್ಲಿ ಹೋಗಿ ಮುಕ್ತಾಯವಾಗುತ್ತದೆಯೋ! ಆದರೆ ಕೇಳಿ—

ಜುಬೇದಾ ಬಹಳ ಸುಸಂಸ್ಕೃತ ಹುಡುಗಿ. ಜುಬೇದಾ ಸುಸಂಸ್ಕೃತ ಹೆಣ್ಣು. ಸಾಮಾನ್ಯವಾಗಿ ನಾನು ಎಷ್ಟೋ ಹೆಂಗುಸರನ್ನು ನೋಡಿದ್ದೇನೆ–ಸುಂದರವಾದ ಯುವತಿಯರನ್ನು, ಸಶಕ್ತ ಶರೀರವುಳ್ಳ ಹೆಂಗುಸರನ್ನು. ನಾಗರ ಹಾವಿನಂತೆ ಬಳುಕುವವರನ್ನು, ಚಿಕ್ಕದೊಂದು ಮುಲ್ಲಂಗಿಯಂತೆ ಮುದುಡಿರುವ ಹೆಂಗುಸರನ್ನು ಕಂಡಿದ್ದೇನೆ. ಯಾವ ಹೆಂಗುಸರನ್ನು ನೋಡಲು ಗಂಡುಸು ಹೆದರುತ್ತಾನೆಯೋ, ಅವನಿಗೆ ನರನಾಡಿಗಳ ಬಡಿತ ನಿಂತಂತೆ—ತನ್ನಷ್ಟಕ್ಕೆ ತಾನೆ ಉಸಿರು ನಿಂತು ಹೋದಂತೆ ಮತ್ತೆ ತಾನೊಂದು ವಾಯುಹೀನ ವಾತಾವರಣದಲ್ಲಿ ಮುಳುಗಿ ಹೋಗುತ್ತಿದ್ದಂತೆ ಭಾಸವಾಗುತ್ತದೆಯೋ, ಅಂತಹ ಹೆಂಗುಸನ್ನು ಕೂಡಾ ನಾನು ನೋಡಿದ್ದೇನೆ. ಇನ್ನು ಕೆಲವು ಹೆಂಗುಸರನ್ನು—ಯಾರನ್ನು ನೋಡಿದರೆ ಗಂಡಿನ ಮನಸ್ಸು ಮಂಗನಂತೆ ಕುಣಿಯುತ್ತದೆಯೋ—

ಅದನ್ನು ಏನು ಹೇಳಲಿ? ನೀವು ತಿಳಿದುಕೊಂಡಿರಬಹುದು. ಮುಖ್ಯವಾಗಿ ನಾನು ನಾನಾವಿಧವಾದ ಹೆಂಗುಸರನ್ನು ಕಂಡಿದ್ದೇನೆ. ಆದರೆ ಇಂದಿನವರೆಗೂ ಜುಬೇದಾಳಂತಹ ಹೆಣ್ಣನ್ನು ಕಾಣಲಿಲ್ಲ. ಜುಬೇದಾಗೂ ಇತರ ಹೆಂಗುಸರಿಗೂ ಇದ್ದ ವ್ಯತ್ಯಾಸವೆಂದರೆ, ಜುಬೇದಾಳನ್ನು ಪ್ರಯತ್ನ ಪಟ್ಟರೂ ಮರೆಯಲಾಗದು; ಆದರೆ ಬೇರೆಯವರನ್ನು ನೆನಪಿನಲ್ಲಿತಲಾಗದು. ಆದರೆ ಅವರಲ್ಲಿಯ ಕೆಲವು ಹೆಂಗುಸರನ್ನೂ ನಾನು ಮರೆಯುವಾರದಾಗಿತ್ತು. ಏಕೆಂದರೆ, ಎಷ್ಟೋ ಮಿನುಗುವ ರಾತ್ರಿಗಳನ್ನು ಅವರ ಜೊತೆಯಲ್ಲಿ ಕಳೆದಿದ್ದೇನೆ. ಅವರ ಹೃದಯದಲ್ಲಿ ಇನ್ನೂ ನನ್ನ ಜ್ಞಾಪಕವಿದೆಯೆಂದು, ನನ್ನ ಮಾತುಗಳು, ನನ್ನ ನಗುನಗೆ, ಅವರನ್ನು ವರ್ಣಿಸಿ ಹಾಡಿದ ನನ್ನ ಮಧುರ ಗೀತೆಗಳು—ಇವೆಯೆಂದು ನನಗೆ ತುಂಬಾ ವಿಶ್ವಾಸವಿದೆ.

ಆದರೆ ನನಗೇನೂ ಜ್ಞಾಪಕವಿಲ್ಲ. ಅವರ ಮುಖಗಳು ಕೂಡಾ ಸರಿಯಾಗಿ ನೆನಪಿಗೆ ಬಾರವು. ಏನೋ ಕೆಲವು ನೆರಳುಗಳಂತೆ, ಸ್ವಪ್ನದಲ್ಲಿ ಬಂದ ಹೆಣ್ಣೊಡನೆ ಮಾತು ಕತೆಯಾಗಿ ಕಣ್ಣು ತೆರೆದೊಡನೆ ಅದು ಮಾಯವಾದಂತೆ—ಅವರೂ ಸ್ವಪ್ನವಾಗಿದ್ದಾರೆ.

ಕೆಲವು ಸಲ ನಾನು, ಅಂತಹ ಸ್ವಪ್ನಗಳನ್ನು ಕಂಡಿದ್ದೇನೆಯೋ ಇಲ್ಲವೋ ಎಂದು ಸಂದೇಹವಾಗುತ್ತದೆ.

ಜುಬೇದಾಳ ಬೆಟ್ಟಿಯಾದಾಗಲೆಲ್ಲ ನನಗೊಂದು ಸ್ವಪ್ನ ಕಂಡಂತೆ, ಕನಸು ಮೂಡಿದಂತೆ ಭಾಸವಾಗುತ್ತದೆ. ಅಲ್ಲದೆ ಅವಳು ಹೋದ ಮೇಲೆ ಎಚ್ಚತ್ತಂತಾಗಿ ಸ್ವಪ್ನದಲ್ಲಿಯ ಪ್ರತಿಯೊಂದು ಮಾತು ನನ್ನ ಜ್ಞಾಪಕಕ್ಕೆ ಬರುತ್ತದೆ. ಸದಾ ಜುಬೇದಾಳು ಹೊರಟು ಹೋದ ನಂತರವೇ ಅವಳು ಇದ್ದಂತೆ ಭಾಸವಾಗುತ್ತದೆ. ಆದರೆ ಅವಳು ಎದುರಿಗೆ ಬಂದಾಗ ಅವಳನ್ನು ಕುರಿತು ವಿಚಾರ ಮಾಡಿಲ್ಲ. ಅದಕ್ಕೆ ಅಷ್ಟೊಂದು ಮಹತ್ತ್ವವನ್ನೂ ಕೊಡಲಿಲ್ಲ. ಅವಳ ಮಾತು ಅವಳ ನಗುನೆಲ್ಲವನ್ನೂ ನಾನು ಅನುಭವಿಸಿದ್ದುದು, ಅವಳು ನಕ್ಕ ಬಳಿಕ ಗಂಭೀರವಾಗಿ ಸುಮ್ಮನಾದ ಮೇಲೆ. ಜುಬೇದಾ ಒಂದು ಕೋಲ್-ಮಿಂಚಿನಂತೆ, ಮಿಂಚಿದ ನಂತರವೇ ಪರಿಣಾಮವನ್ನುಂಟು ಮಾಡುತ್ತಾಳೆ. ಕತ್ತಲೆಯಲ್ಲಿ ಮಿನುಗುವ ಮಿಣುಕುಹುಳು ಕ್ಷಣಮಾತ್ರ ಮಿನುಗಿ ತನ್ನ ಅರಿವನ್ನು ಮಾಡಿಕೊಟ್ಟಂತಾಗಿ— ಹುಡುಕುವವನು ಹುಡುಕುತ್ತಲೇ ಇರುತ್ತಾನೆ – ಮಿಣುಕುಹುಳು ಎಲ್ಲಿದೆ? ಕೋಲ್-ಮಿಂಚು ಎಲ್ಲಿದೆ? ಜುಬೇದಾ ಎಲ್ಲಿದ್ದಾಳೆ?—

ಜುಬೇದಾ ಇದ್ದಾಳೆ; ಇಲ್ಲಿಯೇ ಇದ್ದಾಳೆ, ನನ್ನ ಕೋಣೆಯಲ್ಲಿ ಇದ್ದಾಳೆ. ನನ್ನ ಕಣ್ಣೆದುರಿಗಿದ್ದಾಳೆ. ಮೆಲ್ಲಮೆಲ್ಲನೆ ನಸುನಗುತ್ತ ಇದ್ದಾಳೆ. ಅವಳ ನಯನಗಳಲ್ಲಿಯ ಅದೇ ತೇಜಸ್ಸು, 'ಏಕೆ, ಹೀಗೇಕೆ ನನ್ನನ್ನು ನೋಡುವೆ?' ಎಂದು ಕೇಳುವಂತಿದೆ.

ಜುಬೇದಾಳ ಭೆಟ್ಟಿಯಾಗಿ ಬಹಳ ದಿನಗಳಾದುವು. ಮತ್ತೆ ಯಾವಾಗ ಭೆಟ್ಟಿಯಾಗುವುದೋ ಕಾಣೆ. ಆದರೆ ಜೀವನದಲ್ಲಿ, ನಾನು ಅವಳನ್ನು, ಅವಳು ನನ್ನನ್ನು ಸಂಧಿಸುವ ಒಂದು ಸುದಿನ ಬಂದೇ ತೀರುವುದೆಂದು ನಂಬಿಕೆ ಇದೆ. ಆ ದಿನವು ನಾಳೆನದೇ ಆಗಬಹುದು; ಇಂದಿನದೇ ಇರಬಹುದು—ಇವೆಲ್ಲವೂ ಸಂಭವವಾಗುವ ಮಾತುಗಳಷ್ಟೆ! ಆದರೆ ನಾನು ಪ್ರತಿದಿನ, ಪ್ರತಿರಾತ್ರಿಯನ್ನು 'ಆ ದಿನ' ಬಂತೆಂಬ ಆಶೆಯಿಂದಲೇ ಕಳೆಯುತ್ತ ಬಂದಿದ್ದೇನೆ ಇಲ್ಲ, ಆ ದಿನವು ಬಹಳ ನಿರೀಕ್ಷಿಸಿದ ನಂತರ ಬರುವುದು! ನಾನು ಆ ನಿರೀಕ್ಷೆಯ ಸಮಯವನ್ನು ಮನಸ್ಸಿಗೆ ಅಲ್ಹಾದದಾಯಕವಾಗುವ ಅಭಿರುಚಿಗಳಿಂದ ಕಳೆಯಬೇಕೆನ್ನುತ್ತೇನೆ.

ಕಾಲ ಕಳೆಯುವುದಕ್ಕೆ ಇದೊಂದು ಒಳ್ಳೆಯ ಕ್ರಮವೆ; ಆದರೆ ಈ ಕ್ರಮದಿಂದ ಸ್ವಯಂ ನಾನು ಬಹಳ ನೋವಿಗೊಳಗಾಗುತ್ತೇನೆ. ಎಂದರೆ ಹೃದಯಕ್ಕೆ ಪಂತಸ ಕೊಡುವ ಈ ನನ್ನ ಅಭಿರುಚಿಯು ವಿಶ್ವಾಸದ ಸೀಮೆಯನ್ನು ಮುಟ್ಟುತ್ತದೆ. ಇದಾದ ಮೇಲೂ ಜುಬೇದಾಳು ಎದುರಿಗೆ ಬಾರದಿದ್ದರೆ, ನನ್ನನ್ನು ನಾನೆ ಹಳಿದುಕೊಳ್ಳುತ್ತೇನೆ. ಉದಾಹರಣೆಗಾಗಿ ಪ್ರತಿದಿನ ಬಹಳ ರಾತ್ರಿಯಾದ ಮೇಲೆ ಸಕಲ ಪ್ರಪಂಚವೂ ಮಲಗಿ ನಿದ್ರಿಸಿದಾಗ, ನಾನು ಬಹು ಸುಂದರವಾದ ವಿಚಾರಗಳನ್ನು ಹೊತ್ತು ನನ್ನ ಮನೆಯೆಡೆಗೆ ನಡೆಯುತ್ತೇನೆ. ನಾನು ವಿಚಾರಿಸುವುದೇನೆಂದರೆ—ನಾನು ಬಾಗಿಲನ್ನು ತಟ್ಟಿದಾಗ, ತನ್ನ ನಿದ್ರೆಯನ್ನು ಕೆಡಿಸಿಕೊಂಡು ಗೊಣಗುತ್ತ ನನ್ನ ಮುದಿತಾಯಿ ಒಂದೋ, ತಾರುಣ್ಯ ತುಂಬಿದ ಮತ್ತು ಎಷ್ಟೋ ಕಾಲದಿಂದ ತನ್ನ ಪತಿಯ ನಿರೀಕ್ಷಣೆ ಮಾಡುತ್ತಿದ್ದ ನನ್ನ ಸಹೋದರಿ ಒಂದೋ, ಅಥವಾ ನನ್ನ ಜೇಬಿನಲ್ಲಿ ಪ್ರಪಂಚದ ಸಕಲ ವಸ್ತುಗಳನ್ನೂ ಕೊಳ್ಳುವಷ್ಟು ಹಣ ಉಂಟೆಂದು ತಪ್ಪು ತಿಳಿದುಕೊಂಡಿದ್ದ ನನ್ನ ತಮ್ಮನು ಒಂದೋ, ಬಾಗಿಲನ್ನು ತೆರೆಯುವ ಬದಲು, ಅವರೆಲ್ಲರಿನ್ನೂ ಮಲಗಿರುವಾಗಲೇ ಯಾರೋ ಬಂದು ಸದ್ದಿಲ್ಲದೆ ಬಾಗಿಲನ್ನು ತೆರೆಯಲು—ಯಾರು ಬಾಗಿಲ ತೆರೆದರೆಂದು ನಾನು ಆಶ್ಚರ್ಯಗೊಂಡಾಗ, ಬಾಗಿಲ ಮರೆಯಲ್ಲಿ ಯಾರೋ ನಸುನಗುತ್ತ ನಿಂತಿರಬೇಕೆಂದು—

'ಯಾರು? ಜುಬೇದಾ ನೀನೇ?' ಎಂದು ನಾನು ಕೇಳಲು, ಜುಬೇದಾ ಉತ್ತರಿಸುವ ಬದಲು, ತನ್ನದೇ ಆದ ಒಂದು ರೀತಿಯಲ್ಲಿ "ಇನ್ನೂ ರಾತ್ರಿಯಲ್ಲಿ ಅಲೆದಾಡುವುದನ್ನು ಬಿಟ್ಟಿಲ್ಲ. 'ರಾತ್ರಿಯಲ್ಲಿ ಅಲೆದಾಡಬೇಡಿ' ಎಂದು ಎಷ್ಟೋ ಸಾರೆ ಹೇಳಿದ್ದೇನೆ. ಸ್ವಲ್ಪ ನಿಮ್ಮ ಪ್ರಕೃತಿಯನ್ನಾದರೂ ನೋಡಿಕೊಳ್ಳಿ — ಎಷ್ಟೋ ವರ್ಷಗಳಿಂದ ಕಾಯಿಲೆ ಬಿದ್ದಂತೆ ಕಾಣುತ್ತೀರಿ— ನಿಮಗೇನಾಗಿದೆಯೆಂದ್ರೇ –? ಎಂದು ಗದರಿಸಿದಾಗ, ನಾನು ಮುಗ್ಧ ಮಗುವಿನಂತೆ ಮೌನವಾಗಿ ನಿಂತುಕೊಳ್ಳಬೇಕು—

ಜುಬೇದಾ ನನ್ನನ್ನು ಹೀಗೆ ಗದರಿಸಬೇಕೆಂದು, ಮುನಿಸಿಕೊಳ್ಳಬೇಕೆಂದು, ನಾನು ಅವಳ ನುಡಿಗಳನ್ನು ಕೇಳುತ್ತಲೇ ಇರಬೇಕೆಂದು ಎನಿಸುತ್ತದೆ. ಆದರೆ ಅವಳ ನುಡಿಗಳನ್ನು ಕೇಳಿ ಎಷ್ಟೋ ಕಾಲವಾಯಿತು. ಅವುಗಳನ್ನು ಕೇಳಲು ನನ್ನ ಹೃದಯವೂ ಹಾತೊರೆಯುತ್ತಿದೆ. ಈ ನುಡಿಗಳಲ್ಲಿ ಸತ್ಯವಿದೆ, ಪ್ರೇಮವಿದೆ, ಒಲವಿದೆ. ಅವು ನನಗೆ ಧೈರ್ಯ ಕೊಡುತ್ತವೆ. ಅವು ನಾನು ಒಬ್ಬಂಟಿಗನಾಗಿದ್ದಾಗ, ಕರಾಳ ರಾತ್ರಿಯಲ್ಲಿ ಬೆಳಗುವ ದೀಪದಂತಿವೆ. ಆ ಸದ್ಯ ಈ ದೀಪವೂ ಆರಿಹೋಗಿದೆ. ಈಗ ಅದೇ ಕಾರ್ಯವನ್ನು ಮತ್ತೆ ಮೈನವಿರೇಳುವಂತಹ ಒಂಟಿತನ.

ವಾಸ್ತವವಾಗಿ ನಾನು, ಪ್ರಸ್ತುತ ಒಬ್ಬಂಟಿಗನಾಗಿದ್ದೇನೆ. ನಾನೆಷ್ಟು ದುಃಖಿಯಾಗಿದ್ದೇನೆಂದು ವಿಚಾರಿಸುತ್ತೀನೆ ಜುಬೇದಾ ಬಂದು ಒಂದು ಸಾರೆ-ಒಂದೇ ಸಾರೆ, "ನೀನು ಒಂಟಿಗನಲ್ಲ" ಎಂದು ಹೇಳಿದರೆ, ಬಹುಶಃ ಈ ಒಂಟಿಗತನವಿಷ್ಟೊಕಷ್ಟದಾಯಕವಾಗಲಾರದು ಇರಬಹುದು; ಮತ್ತೆ ನಾನು ನಗುನಗುತ್ತ ದಿನಗಳೆಯುವೆನು. ಆದರೆ ಜುಬೇದಾ!

ಜುಬೇದಾ ಬರುವುದಿಲ್ಲ. ಕಾಲತ್ರಯಕ್ಕೂ ಬರುವುದಿಲ್ಲ. ಜುಬೇದಾ ಬಂದೇಕಾದರೂ ಏಕೆ? ಒಂದು ವಿವಾಹಿತ ಹೆಣ್ಣು ಬರಬೇಕು? ಅವಳಿಗೆ ಪರಪುರುಷನೊಡನೆ ಏನು ಸಂಬಂಧ? ಮತ್ತೆ ನಾನು ವಿಚಾರಿಸುತ್ತೇನೆ—ಇದು ನನ್ನ ತಪ್ಪು— ವಿವಾಹಿತ ಸ್ತ್ರೀಯ ವಿಷಯವಾಗಿ ವಿಚಾರಿಸುವ ಅಧಿಕಾರ ನನಗಿಲ್ಲ. ಜುಬೇದಾಳೇಕೆ ನನ್ನ ಚಿತ್ತದಲ್ಲಿ ನೆಲಸಿದ್ದಾಳೆ? ಏಕೆ ನನ್ನ ಬೆಸೆದು ಪುನಃ ಪುನಃ ಸುಳಿಯುತ್ತಾಳೆ? ಏಕೆ ನನ್ನನ್ನು ಕೊಡವಿ ಎಚ್ಚರಿಸುತ್ತಾಳೆ? ಏಕೆ?—ಏಕೆ?—

ನಾನು 'ಹೋಗು' ಎಂದು ಹೇಳಿದಾಗ ಅವಳು ಹೋಗಲೇ-ೀಕು. ಆದರೆ ಅವಳು ಹೋಗುವುದಿಲ್ಲ. ಕೆಲವು ದಿನಗಳಿಂದ ನವೊಂದು ಹೊಸ ಮಾತನ್ನೇ ಹೇಳುತ್ತಿದ್ದಾಳೆ. ಕೆಲವು ದಿನಗಳಿಂದ ಕೆ, ಎಷ್ಟೋ ಕಾಲದಿಂದ ಜುಬೇದಾ ಈ ಮಾತನ್ನು ಹೇಳುತ್ತ ಂದಿದ್ದಾಳೆನ್ನಿಸುತ್ತದೆ. ನಾನು ಅದನ್ನು ತಿಳಿಯಲು ತಡವಾಡಿದುದು ೀರಿ ವಿಷಯ. ಈಗ ನಾನು ತಿಳಿದುಕೊಳ್ಳುತ್ತಿದ್ದೇನೆ—ಅವಳು ಟ್ಟಿಯಾದಾಗಲೆಲ್ಲ—ಅಲ್ಲ-ನನಗೆ ಬಿಡುವಾದಾಗ, ಅದು ಆಫೀಸಿನಲ್ಲಿ ಕ್ಕಿದರೂ ಕೂಡಾ—ಜುಬೇದಾ ನನ್ನ ಕಣ್ಣೆದುರಿಗೆ ಬಂದು ಹೇಳು-ತ್ತಾಳೆ: "ಒಂದು ಕತೆಯನ್ನು ಬರೆಯಿರಿ!" ಇದು ಜುಬೇದಾಳಲ್ಲ, ನನ್ನ ಮನಸ್ಸು ಹೇಳುತ್ತದೆ. ಈ ಕತೆ ಜುಬೇದಾಳ ಕತೆಯಲ್ಲ—ನನ್ನ....ಕೇವಲ ನನ್ನ ಕತೆ -

ಇಂದು ನಾನು ಕತೆ ಬರೆಯುವೆನು.

'ನನ್ನ ಲೇಖನಿ ಎಲ್ಲಿದೆ?'

'ನನ್ನ ಪ್ಯಾಡ್ ಎಲ್ಲಿದೆ?'

ನನ್ನ ವೃದ್ಧತಾಯಿ ಗಾಬರಿಗೊಂಡು ನನ್ನ ಕೋಣೆಯನ್ನು ಪ್ರವೇಶಿಸಿ, ಆಶ್ಚರ್ಯದಿಂದ ನೋಡುತ್ತ "ಏನಾಯ್ತು ಮಗು?" ಎಂದು ನನ್ನನ್ನು ಕೇಳಿದಳು

ನನ್ನ ತಾಯಿಯ ಈ ರೀತಿ ಬಳಲಿ ಹಳೆಯದು. ನನ್ನ ಸ್ವಲ್ಪ ಕೂಗಿನಿಂದ ಅಕೆ ಏಕೆ ಬೆಚ್ಚಿ ಬೀಳತ್ತಾಳೋ ಕಾಣೆ. ಎಲ್ಲ ಕೆಲಸವನ್ನೂ ಬಿಟ್ಟು ಕೋಣೆಯೆಡೆಗೆ ಧಾವಿಸುತ್ತಾಳೆ-ನನ ಮೇಲೆ ಯಾರಾದರೂ ಬಾಂಬು ಎಸೆದರೋ ಎಂದುಕೊಂಡು!-ಸ್ವಲ್ಪ ನೆಗಡಿಯಾಗಿದೆ. ಅದ-ಕ್ಕಾಗಿ ಅಕೆ ತನ್ನ ಸೆರಗೊಡ್ಡಿ, ಅಂಗಳದಲ್ಲಿ ನಿಂತು, ಆಕಾಶವನ್ನು ನೆಟ್ಟನೆ ನೋತ್ತಾ ದೇವರನ್ನು, ನನ್ನನ್ನು ಕಾಪಾಡುವ ಸಲುವಾಗಿ ಪ್ರಾರ್ಥಿ-ಸುತ್ತಾಳೆ-ನನಗೆ ನೆಗಡಿಯಲ್ಲು, ಟಾಯಿಫಾಯ್ಡ್ ಆಗಿ, ನಿಮೋನಿಯಾ ಆಗಿ ಡಾಕ್ಟರರಿಲ್ಲರೂ ಆಶೆ ಬಿಟ್ಟಿದ್ದಾರೆಯೋ ಎಂಬಂತೆ!—ತಾಯಿಯ ಗಾಬರಿ ನನ್ನಲ್ಲಿ ಪ್ರೀತಿ ಹುಟ್ಟಿಸಿತು.

"ಅಮ್ಮಾ ನೀನೇಕೆ ಬಂದೆ?—ತಂಗಿಯನ್ನು, ಕೂಗಿದೆ-ಒಂದು ಕಪ್ಪು ಚಹಾ ಬೇಕಾಗಿತ್ತು" 'ಕಳುಹುತ್ತೇನೆ.—ಕಳುಹುತ್ತೇನೆ-' ಂದು ಗೊಣಗುತ್ತ ತಾಯಿ ಕೋದಳು! ನಡುರಾತ್ರಿಯಲ್ಲಿ ಚಹಾ ೀಳುವುದೇಕೆಂಬುದು ಅಕೆಗೆ ಗೊತ್ತು—ಅದರ ಅರ್ಥವೆಂದರೆ-ತನ್ನ ುದ್ದಿನ ಕಂದ ಕತೆ ಬರೆಯುತ್ತಾನೆಂದು ಆಗ ತನ್ನ ಕಂದನ ಈ ರ್ತನೆಯನ್ನು ಅಕೆ ಆಕ್ಷೇಪಿಸಿ, "ಚಹಾ ಕುಡಿದು ಕುಡಿದು ಬಣ್ಣವೇ ಬದಲಾಯಿಸಿದೆ-ಕಪ್ಪಾಗಿ ಹೋಗಿದ್ದಿ—ನೀನು ಬರೆಯುವುದಾದರೂ ಏನು ಹೇಳು?" ಎನ್ನುತ್ತಾಳೆ.

"ಅಮ್ಮಾ, ನಾನು ಕತೆ ಬರೆಯುತ್ತೇನೆ"

"ಕತೆ!"

'ಹೌದಮ್ಮಾ—ಕತೆ: ಹೇಗೆಂದರೆ ಒಬ್ಬ ರಾಜನಿದ್ದನು; ಮತ್ತೆ ರಾಜನ ಮಗಳಿದ್ದಳು—ಕತೆ—ಅಮ್ಮಾ—ಕತೆ!—

"ಹೀ....ಹೀ...ಹೀ....ಹೀ—" ತಾಯಿ ತನ್ನಷ್ಟಕ್ಕೆ ತಾನೆ ನಗುತ್ತ ಹೋಗುತ್ತಾಳೆ. ನಾನೊಂದು ಬುದ್ಧಿಯಿಲ್ಲದ ಮಾತನಾಡಿ-ದೆನೆಂದು; ಅದಕ್ಕಾಗಿ ನಗುವುದಲ್ಲದೆ ಬೇರೆ ಏನೂ ಮಾಡಲಾಗ-ದೆಂಬಂತೆ. ಏಕೆಂದರೆ ಜ್ಞಾನಿಯಿಂದ ಇಂತಹ ಕೆಲಸವಾಗಲಾರದು. ಮತ್ತೆ, ಬಹಳ ಹೊತ್ತಿನವರೆಗೆ ರಾತ್ರಿಗಳಲ್ಲಿ ಎಚ್ಚತ್ತು ಕತೆಗಳನ್ನು ಬರೆಯೋಣವೇಕೆಂಬುದರ ಅರ್ಥ, ಬುದ್ಧಿಯುಳ್ಳವರಿಗೆ ತಿಳಿಯದು—ನಿದ್ದೆಗೆಟ್ಟು, ತನ್ನ ಸ್ವಾಸ್ಥ್ಯವನ್ನು ಕೆಡಿಸಿಕೊಳ್ಳುವ ವಿನಾ ಮತ್ತೇನು!-

ಕತೆಗಳ ನಿರ್ಮಾಣವೂ ಮನೋರಂಜನೆಗಾಗಿ. ಹೊತ್ತು ಕಳೆಯುವುದಕ್ಕೆಂದು ಅವು ನಿರ್ಮಿತವಾಗಿವೆ—ರಾತ್ರಿಯಲ್ಲಿ ಅಳುವ ಮಕ್ಕಳನ್ನು ತಟ್ಟಿ ಮಲಗಿಸುವ ಸಲುವಾಗಿ ಮಾಡಲಾಗಿವೆ—

ಆದರೆ ಆಫೀಸಿನ ಕರ್ತವ್ಯದಂತೆ, ಮುಖ್ಯವಾದ, ಮಹತ್ವದ ಮತ್ತು ಕೂಡಲೆ ಕಳುಹಿಸಲ್ಪಡುವ ಕಾಗದವನ್ನು ಬರೆಯುವಂತೆ, ವಿಚಾರ ಪರವಶನಾಗಿ ಬರೆಯುತ್ತಿರುವುದು, ನನ್ನ ತಾಯಿಗೆ ತಿಳಿಯ-ಲಾಗದುದು. ಇದರ ಬದಲಾಗಿ ನಾನು ಅಕೆಗೆ—ಶೆಟ್ಟಿ ಹಜಾರಮಲ್ಲರ ಲೆಕ್ಕಪತ್ರವನ್ನು ಸರಿಮಾಡುತ್ತೇನೆಂದು ಹೇಳಿದ್ದರೆ—ಅಕೆ ಏನಗೇನೂ ಅನ್ನುತ್ತಿರಲಿಲ್ಲ-ಏಕೆಂದರೆ, ಸ್ಪಷ್ಟವಾಗಿದೆ,-ಶೆಟ್ಟಿ ಹಜಾರಮಲ್ಲರಿಗೂ ನನಗೂ ಏನೂ ಸಂಬಂಧವಿಲ್ಲ; ಅದಲ್ಲದೆ ಅವನ ಲೆಕ್ಕಪತ್ರವನ್ನು ಸರಿಪಡಿಸಿದುದಕ್ಕೆ ಏನಾದರೂ ಬಹುಮಾನ ಅವಶ್ಯ ಸಿಕ್ಕುತ್ತದೆಂದು.-ಆದರೆ ಕತೆಗಳು?

'ಹೀ—ಹೀ—ಹೀ—ಹೀ—' ತಾಯಿ ನಗುತ್ತಾಳೆ-ಇಷ್ಟಾ-ದರೂ ನಾನೇಕೆ ಕತೆಗಳನ್ನು ಬರೆಯುತ್ತೇನೆಂಬುದನ್ನು ಅಕೆಗೆ ಹೇಗೆ ತಿಳುಹಲಿ?

ಚಹಾ ಕುಡಿದ ನಂತರ, ನಾನು ಸಿಗರೇಟನ್ನು ಹೊತ್ತಿಸಿ ಹೊಗೆ ಬಿಡುತ್ತ ಹೊರಗಡೆ ಇಟ್ಟೆ. ಮಂದವಾಗಿ ತಂಗಾಳಿ ಬೀಸುತ್ತಿತ್ತು. ಆಕಾಶವು ಯಾವುದೋ ಸುಂದರಿಯ ಚಿಕ್ಕೆಗಳಿಂದ ಯುಕ್ತವಾದ ದುಕೂಲದಂತೆ ಶುಭ್ರವಾಗಿದ್ದಿತು ಚಂದ್ರನ ಮಂದಪ್ರಕಾಶವೂ ಪೃಥ್ವಿಯ ಮೇಲೆ ಚೆಲ್ಲಾಟವಾಡುತ್ತಿತ್ತು ನಕ್ಷತ್ರಗಳು ಮಿನುಗಿ ಅರಿಯದ ಆನಂದವನ್ನು, ಸುಖವನ್ನು ಕೊಡುತ್ತಿದ್ದುವು ದೂರದಲ್ಲಿ ಭಾರತೀಯ ಚಲನಚಿತ್ರದ ತಾರೆಯೊಬ್ಬಳ ಹಿಂದೀ ಧ್ವನಿಮುದ್ರಿಕೆ ಯೊಂದನುಡಿಯುತ್ತಿತ್ತು:

"ಸಾಜನ ಆಓ—ಕಭಿ ಆಓ—ಕಭಿ ಆಓ—"

ನನಗೆ ಈ ಧ್ವನಿ ಪರದೆಯ ಮೇಲೆ ಹಾಡುವ ಸಿನಿಮಾ ತಾರೆಯದಲ್ಲದೆ, ಮನೆಯ ಸೆರೆಯಿಂದ ಹೊರಹೊಮ್ಮಿ ಬರುತ್ತಿದ್ದ ಜುಬೇದಾಳ ಕಂಠವೆನ್ನಿಸುತ್ತಿತ್ತು. ತನ್ನ ತವರು, ತನ್ನ ಅತ್ತೆಯಮನೆ, ತನ್ನ ವೃದ್ಧ ಪತಿಯ ವಿರುದ್ಧ ಏಳುತ್ತಿದ್ದ,—ನನ್ನನ್ನು ಜುಬೇದಾಳಿಂದ ಮತ್ತು ಜುಬೇದಾಳನ್ನು ನನ್ನಿಂದ ದೂರ ಮಾಡಿದ ಸಮಾಜದ ಕುರುಡು ಸಂಪ್ರದಾಯದ ವಿರುದ್ಧ ಏಳುತ್ತಿದ್ದ ಧ್ವನಿ—

ಆದರೆ ಹಾಡುತ್ತಿದ್ದವಳು ಜುಬೇದಾಳಲ್ಲವೆಂಬುದು ಕೂಡಲೆ ತಿಳಿಯಿತು ಧ್ವನಿಮುದ್ರಿಕೆಯೂ ಮುಗಿದಿದ್ದಿತು. ಅದರೆ ಜುಬೇದಾ!-

ಜುಬೇದಾ ಕೋಣೆಯಲ್ಲಿ ಮಲಗಿರಬಹುದು-ಸುಖನಿದ್ರೆಯಲ್ಲಿ-ಆದರೆ ನಾನು!

'ರಾತ್ರಿ ಎಷ್ಟು ಮನೋಹರವಾಗಿದೆ' ಎಂದು ವಿಚಾರಿಸಿದೆ—ಜುಬೇದಾಳೀಗ ಇದ್ದರೆ! ಜುಬೇದಾಳಿಗೆ ನಾನು, "ನಿನ್ನಂಥ ಹೆಣ್ಣಿಲ್ಲದ ಜೀವನ ಜೀವನವಲ್ಲ—ಬಾ—ನಾನು ನೀನು ಕೂಡಿ ಸ್ವಲ್ಪ ಹರಟೆ ಹೊಡೆಯೋಣ. ಇಂತಹ ಹೃದಯಾಕರ್ಷಕ ರಾತ್ರಿಗಳು ಮಲಗುವುದಕ್ಕಲ್ಲ—ಇಂತಹ ರಾತ್ರಿಗಳನ್ನು ಹಾಸಿಗೆಯಲ್ಲಿ ಕಳೆಯುವವರು ಶುದ್ಧ ಪಶುಗಳು—ಬಾ ಸ್ವಲ್ಪ ಪ್ರೇಮದ ಮಾತುಗಳನ್ನಾಡೋಣ" ಎಂದು ಹೇಳುತ್ತಿದ್ದೆ.—ಹೀಗೆ ವಿಚಾರಿಸುತ್ತ ನಾನು ಓಣಿಯ ತಿರುವಿಗೆ ಬಂದೆ. ಮತ್ತೆ ಸಿಗರೇಟಿನ ಹೊಗೆಯನ್ನೆಳೆಯುತ್ತ, ಜುಬೇದಾಳ ಕತೆಯನ್ನು ಹೇಗೆ ಆರಂಭಿಸಬೇಕೆಂದು ಯೋಚಿಸತೊಡಗಿದೆ—ಮಣ್ಣಿನ ರಸ್ತೆ ದೂರದಲ್ಲಿದ್ದ ಸಿಮೆಂಟಿನ ರಸ್ತೆಯಲ್ಲಿ ಮಾಯವಾಗಿತ್ತು. ಓಣಿಯೊಂದು ಕೊಳೆತು ನಾರುವ ಶವದಂತೆ ತೋರುತ್ತಿತ್ತು—ಕೆಲವು ನಾಯಿಗಳು ಅಲ್ಲಲ್ಲಿ ಕುಳಿತು ತೂಕಡಿಸುತ್ತಿದ್ದುವು—ಕೆಲವು ಬೊಗಳುತ್ತಿದ್ದುವು—ಅಳುತ್ತಿದ್ದುವು—ಉಳಿದ ಸಕಲ ಪದಾರ್ಥಗಳ ಮೇಲೆ ಮರಣಶಾಂತಿ ನೆಲಸಿದ್ದಿತು. ಮತ್ತು ಸರ್ವ ಜನರು ತಮ್ಮ ತಮ್ಮ ಮನೆಗಳಲ್ಲಿ ಸುಖವಾಗಿ ನಿದ್ರಿಸುತ್ತಿದ್ದರು.

ಆದರೆ ನಾನು ಕತೆಯನ್ನು ಹೇಗೆ ಆರಂಭಿಸಬೇಕೆಂದೆ ವಿಚಾರಿಸುತ್ತಿದ್ದೆ—ಎಷ್ಟೋ ವಿಚಾರಗಳು ಬಂದುವು—ಎಷ್ಟೋ ರೀತಿಗಳು, ಎಷ್ಟೋ ಶೈಲಿಗಳು ತಲೆದೋರಿದವು; ಆದರೆ ನಾನು ಹೊಸ ಶೈಲಿಯನ್ನೇ ಅಪೇಕ್ಷಿಸುತ್ತಿದ್ದೆ.—ಯೋಚಿಸುತ್ತಿದ್ದಂತೆ ನನ್ನ ದೃಷ್ಟಿ ಬಲಗಡೆಯಲ್ಲಿದ್ದ ಅಂಗಡಿಯ ಕಟ್ಟೆಯ ಮೇಲೆ ಬಿತ್ತು. ನಾನು ಆಶ್ಚರ್ಯಗೊಂಡೆ—ಹೇಗೆಂದರೆ—ಹೇಗೆಂದರೆ—

"ಯಾರಿರಬಹುದು?' ಎಂದು ನನ್ನನ್ನು ನಾನೇ ಪ್ರಶ್ನಿಸಿದೆ.

'ಅರೆ! ಯಾರದು?'

ಮರಳಿ ಉತ್ತರವಿಲ್ಲ.

ನಾನು ನಿಟ್ಟಿಸಿ ನೋಡಿದೆ. ಇವಕ್ಕು ಮೊದಲು ನಾನು ಅವನನ್ನು ಈ ಕಟ್ಟೆಯ ಮೇಲೆ ಕಂಡಿರಲಿಲ್ಲ. ಆದರೆ ಅವನನ್ನೆಲ್ಲಿಯೋ ನೋಡಿದಂತೆ ಜ್ಞಾಪಕವಿದೆ. ಇವನು—ಇವನು—ಇವನಾರಿರಬಹುದು!—

ತಕ್ಷಣ ಯಾರೋ ನನ್ನ ಕಿವಿಯಲ್ಲಿ ಉಸುರಿದರು:—'ಪೆಂಟಗಾ' ಹೌದು ನಿಜವಾಗಿ ಇವನೇ ಸಣ್ಣ ಪೆಂಟಗನು. ಪೆಂಟಗ ನಿದ್ರಿಸುತ್ತಿದ್ದನು—ತನ್ನ ಕೈಗಳೆರಡನ್ನೂ ಕಾಲ್ಗಳ ಮಧ್ಯದಲ್ಲಿ ಒತ್ತಿಟ್ಟುಕೊಂಡು ಶರೀರವೆಲ್ಲವನ್ನೂ ಮುದುಡಿಕೊಂಡು. ತಲೆಯ ಕೆಳಗೆ, ದಿಂಬಿನ ಬದಲು ಎಮ್ಮೆಯ ಚರ್ಮಗಳಿದ್ದುವು—ಮಗ್ಗುಲಲ್ಲಿ ಕೆಲವು ಒಣಗಿದ ತೊಗಲಿನ ತುಂಡುಗಳು; ಅಲ್ಲಿಂದ ಹರಕು ಮುರುಕಾಗಿದ್ದ ವೆಟ್ಟುಗಳಿದ್ದುವು ಅವುಗಳಿಂದ ದುರ್ಗಂಧ ಬರುತ್ತಿತ್ತು. ಪೆಂಟಗ ಮಲಗಿದ್ದನು; ಎಷ್ಟೋ ಕಾಲದಿಂದ ಅವನು ಇಲ್ಲಿಯೇ ಮಲಗುತ್ತಿದ್ದವನಂತೆ; ಈ ಕಟ್ಟೆಗೂ ಅವನಿಗೂ ಬಹಳ ಹಳೆಯ ಪರಿಚಯವಿದ್ದಿತಂತೆ. ಯಾವ ಮಾರ್ಪಾಡಿಲ್ಲ—ಹೊಸದಾವ ವಿಷಯ ನಡೆಯಲಿಲ್ಲ—ಅಲ್ಲದೆ ಪೆಂಟಗಾ ನಿದ್ರಿಸುತ್ತಿದ್ದನು—

ಆದರೆ ನನಗೆ ಗೊತ್ತಿದೆ; ಈ ಕಟ್ಟೆಗೆ ಗೊತ್ತಿದೆ. ಇಂದು ಮೊದಲನೆಯ ಸಾರಿ ಪೆಂಟಗಾ ಮಲಗಿದ್ದಾನೆ. ಇದು ಪೆಂಟಗನ ಮೊದಲನೆಯ ರಾತ್ರಿ. ಮೂರು ದಿನಗಳಿಂದ ಈ ಕಟ್ಟೆ ಬರಿದಾಗಿದ್ದಿತು. ಸಾವನ್ನೆದುರಿಸುವ ಮುದುಕಿಯಂತೆ ಈ ಅಂಗಡಿಯು ನರಳುತ್ತ ರಸ್ತೆಯನ್ನೇ ನೋಡುತ್ತಿರುತ್ತಿತ್ತು; ಯಾವುದೋ ಒಂದು ಕೊರತೆ ಇದ್ದಂತೆ—

ಆ ಕೊರತೆಯನ್ನು ನಾನು ಅನುಭವಿಸಿದೆ. ಈಗ ಆ ಕೊರತೆ ಪೂರ್ಣಗೊಂಡಿದೆ. ಪೆಂಟಗನು ಮತ್ತೆ ಜನ್ಮಿಸಿದ್ದಾನೆ. ನನಗೆ ಖೇದವಾಗಿದೆ—ಪೆಂಟಗನು ಶತ್ತಮೇಲೇಕೆ ಮತ್ತೆ ಜನ್ಮ ತಾಳಿದನೆಂದು. ಪ್ರಪಂಚದ ಯಾವ ವಸ್ತು ಅವನಿಗೆ ಹಂಬಲವನ್ನು ಹುಟ್ಟಿಸಿದೆ—ಪೆಂಟಗನ ಜೀವನದಲ್ಲಿ ಅಂತಹ ಬೆಲೆಯುಳ್ಳ ಅಥವಾ ಸೌಂದರ್ಯದ ವಸ್ತು ಇತ್ತೆಂಬುದನ್ನು—ಅದನ್ನು ಪಡೆಯುವುದಕ್ಕಾಗಿ ಅವನು ಪುನಃ ಜಗತ್ತಿಗೆ ಬಂದಿದ್ದಾನೆಂಬುದನ್ನು ನಾನರಿಯೆ—

ಪೆಂಟಗನು ಈ ಕಟ್ಟೆಯಿಂದ ತನ್ನ ಸಂಬಂಧವನ್ನು ಕಡಿದುಕೊಂಡ ಪಕ್ಷದಲ್ಲಿ, ಮತ್ತೆ ಅದನ್ನು ಜೋಡಿಸುವುದೇನವಶ್ಯವಿತ್ತು? ಈ ಕಟ್ಟೆಯೊಡನೆ ಅವನಿಗೇಕಿಷ್ಟು ಪ್ರೀತಿ ಇದೆ? ಈ ಕಟ್ಟೆ ಪೆಂಟಗನೊಡನೆ ಇಂತಹ ವರ್ತನೆಯನ್ನು ಮಾಡಲೇ ಇಲ್ಲವೆಂಬುದು ನನಗೆ ಗೊತ್ತಿದೆ—ಕಟ್ಟೆ ಹೊಸತಾಗಿ ಬಂದಿತ್ತು—ಅಮೇಲೆ ಕಟ್ಟೆಲಾಗಿತ್ತು—ಇದಕ್ಕೂ ಮೊದಲು ಇಲ್ಲಿ ಒಂದು ದೊಡ್ಡ ಆಲದ ಮರವಿತ್ತು—ಸುತ್ತುಮುತ್ತಲೂ ದೂರದೂರದಲ್ಲಿ ಹುಲ್ಲು ಬೆಳೆದಿತ್ತು; ಮತ್ತೆ ಮುಂದುಗಡೆ ವಿಶಾಲವಾದ ದೊಡ್ಡ ಬಯಲೊಂದಿತ್ತು. ಆ ಕಡೆಗೆ ಇಪ್ಪತ್ತು ಇಪ್ಪತ್ತೈದು ಮನೆಗಳಿದ್ದುವು. ಅವುಗಳಲ್ಲಿ ನನ್ನ ಮನೆಯೂ ಇದೆ. ನನ್ನ ಮನೆಯ ಆಯುಷ್ಯ ಬಹಳವಿದೆ. ಪೆಂಟಗನ ವಯಸ್ಸಿಗಿಂತಲೂ ಹೆಚ್ಚು. ಆಗಿನ ಮಾತು ನನಗೆ ಚೆನ್ನಾಗಿ ಜ್ಞಾಪಕವಿದೆ—ನಾನು ಚಿಕ್ಕವನಾಗಿದ್ದಾಗ ಅಡುತ್ತ ಅಡುತ್ತ, ಓಣಿಯ ತಿರುವಿಗೆ ಬಂದಾಗ, ಪೆಂಟಗನ ಮೇಲೆ ನನ್ನ ದೃಷ್ಟಿ ಬೀಳುತ್ತಿತ್ತು—ಪೆಂಟಗ ನಾಗ ಆಲದಗಿಡದಡಿಯಲ್ಲಿ ಕೂಡುತ್ತಿದ್ದ—ಸುತ್ತುಮುತ್ತೆಲ್ಲ ಪಾದರಕ್ಷೆಗಳನ್ನು ಹರಡಿಕೊಂಡು, ದೃಷ್ಟಿಯನ್ನು ಕೆಳಗೆವಗಿತಿ, ಕೈಯಲ್ಲಿ ಟಾಚಣಿಯನ್ನು ಹಿಡಿದು, ಹಳೆಯ ಚಪ್ಪಲಿಯೊಂದನ್ನು ಹೊಲಿಯುತ್ತ, ಅಥವಾ ಒಣಗಿದ ತೊಗಲಿನ ತುಂಡುಗಳನ್ನು ನೀರಿನಲ್ಲಿ ನೆನೆಯಿಸಿ ಅವನ್ನು ಸರಿಯಾಗಿ ಒಂದರಮೇಲೊಂದು ಚಪ್ಪಲಿಗಳ ಕೆಳಭಾಗ ಕ್ಕಿಟ್ಟು ಮೊಳೆಗಳನ್ನು ಹೊಡೆಯುತ್ತ; ಇಲ್ಲವಾದರೆ ಯಾವುದಾದರೊಂದು ಬೂಟಿಗೆ ಪಾಲಿಷ್ ಹಾಕುತ್ತ....ಮುಖ್ಯ ಪೆಂಟಗನು ಏನಾದರೊಂದು ಕೆಲಸದಲ್ಲಿರುತ್ತಿದ್ದನು. ಅವನಿರುವುದರಿಂದ ಇಲ್ಲಿಯ ಜನರಿಗೆ ಬಹಳ ಅನುಕೂಲವಿತ್ತು. ಯಾವಾಗ ಚಪ್ಪಲಿಗಳು ಹರಿಯುತ್ತಿದ್ದುವೊ, ಯಾವಾಗ ಬೂಟಿನ ಕೆಳದೊಗಲು ಕಿತ್ತುಹೋಗುವುದೋ; ಆಗ ನೇರವಾಗಿ ಪೆಂಟಗನ ಹತ್ತಿರಕ್ಕೆ ಬಂದು, ಅಧಿಕಾರವಾಣಿಯಿಂದ, "ಏ ಪೆಂಟಗಾ, ಇದನ್ನು ಸ್ವಲ್ಪ ಸರಿಮಾಡು!" ಎಂದು, ಆಮೇಲೆ ಅವನೆದುರು ನಾಲ್ಕು ಕಾಸುಗಳನ್ನು ಬಿಸಾಡಿ, ತಮ್ಮ ಹಾದಿ ಹಿಡಿದವರೆಷ್ಟೋ ಜನ.

'ಸಾಹೇಬರಿ, ಈ ದುಡ್ಡು ಕಡಿಮೆ ಇದೆ; ಅಥವಾ ಹೆಚ್ಚಿಗಿದೆ' ಎಂದು ಪೆಂಟಗನು ಹೇಳುತ್ತಿರಲಿಲ್ಲ.

"ಬಾಬುಜಿ, ನೀವು ನೆಪ್ಪಲ್ಲಿಯೇ ನಿಮ್ಮ ಚಪ್ಪಲಿಗಳನ್ನು ಸರಿ ಮಾಡಿಸಿಕೊಳ್ಳಿ, ದೇರೆ ಯಾರಲ್ಲಿಯೂ ಹೋಗಬೇಡಿ" ಎಂದು ಕೂಡ ಅವನು ಹೇಳುತ್ತಿರಲಿಲ್ಲ. ಪೆಂಟಗನು ಸದಾ ಮೌನವಾಗಿದ್ದುದನ್ನೆ ನಾನು ಕಂಡಿದ್ದೇನೆ-ತತ್ತ್ವಜ್ಞಾನಿಯಂತೆ ಏನಾದರೊಂದು ಯೋಚಿಸುತ್ತಿದುದನ್ನು; ಬೆಳಗಿನಿಂದ ದೈಗಿನವರೆಗೆ ಕೆಲಸ ಮಾಡುತ್ತಿದ್ದುದನ್ನು. ಆಗ ಪೆಂಟಗನು ತರುಣನಾಗಿದ್ದನು; ಆದರೆ ಯಾವ ಹೆಂಗುಸಿಗೆ; ಕೀಟಲೆ ಕೊಟ್ಟದ್ದನ್ನು ಅಥವಾ ಗೇಲಿ ಮಾಡಿದುದನ್ನು ನಾನು ನೋಡಿಲ್ಲ— ಯಾವ ಹಾಡನ್ನೂ ಗೊಣಗುಟ್ಟುತ್ತಿದ್ದುದನ್ನು ಕಂಡಿಲ್ಲ- ಪೆಂಟಗನು ಹಿಮದ ಗಡ್ಡೆಯಂತೆ, ಅಡಿಯಿಂದ ಮುಡಿಯವರೆಗೂ ಹಿಮದಂತೆ— ತಣ್ಣಗೆ—ಸಪ್ಪಗೆ—

ಅವನು ವರ್ಷದಲ್ಲೊಮ್ಮೆ ಹೋಳಿಯ ಹುಣ್ಣಿಮೆಯ ದಿನ ಮನೆಗೆ ಹೋಗುತ್ತಿದ್ದನು. ಆದೊಂದು ಹಳ್ಳಿಯಲ್ಲಿತ್ತು. ಹೋಗುವಾಗ ಅವನ ಮುಖದಲ್ಲಿ ಸ್ವಲ್ಪ ನಸುನಗೆ ಕಾಣಿಸಿಕೊಳ್ಳುತ್ತಿತ್ತು. ಅಲ್ಲಿ ಅವನ ಹೆಂಡತಿ ಇದ್ದಳೆಂದು ನಾನು ಕೇಳಿ ಬಲ್ಲೆ. ಈ ವಿಷಯದಲ್ಲಿ ಅವನನ್ನು ಎಷ್ಟೋ ಜನರು ಪ್ರಶ್ನಿಸಿದ್ದರು ಕೂಡ :—

"ನೀನು ಏಕೆ ಹೆಂಡತಿಯನ್ನು ಜೊತೆಯಲ್ಲಿಟ್ಟುಕೊಳ್ಳುವುದಿಲ್ಲ?"

ಆದರೆ ಅವನು ನಕ್ಕು ಬಿಡುತ್ತಿದ್ದ. ಮುಖ್ಯವಾಗಿ ಅವನ ಆದಾಯ ಕಡಿಮೆ ಇದ್ದುದೇ ಇದಕ್ಕೆ ಕಾರಣ-ಹೆಂಡತಿಯನ್ನು ಜೊತೆಯಲ್ಲಿಟ್ಟುಕೊಂಡರೆ ಒಂದು ಕೋಣೆಯಾದರೂ ಬೇಕು. ಕೋಣೆಯನ್ನು ಬಾಡಿಗೆಗೆ ತೆಗೆದುಕೊಳ್ಳುವಷ್ಟು ಹಣ ಅವನಲ್ಲಿರಲಿಲ್ಲ ಆಕೆಯನ್ನು ತನ್ನ ಜೊತೆಯಲ್ಲಿ ಕಟ್ಟೆಯ ಮೇಲೆ ಮಲಗಿಸಲಾಗುತ್ತಿರಲಿಲ್ಲ! ಅದಕ್ಕಾಗಿಯೇ ಅವನಿಗೆ ಒಬ್ಬನೇ ಮಗನಿದ್ದನು. ಆ ಮಗನು ಜನ್ಮ ತಾಳಿದ್ದು ಕೂಡ ತಾಯಿಯ ಪ್ರಾಣವನ್ನು ತಕ್ಕೊಂಡೆ. ಹಳ್ಳಿಯಲ್ಲಿ ಪೆಂಟಗನಂತಹವನ ಹೆಂಡತಿಯನ್ನು ಯಾರು ಬಲ್ಲರು! ಡಾಕ್ಟರ್ ಮತ್ತು ನರ್ಸ್‌ಗಳಿಗೆ ಪೆಂಟಗನ ಮೇಲೆ ಕರುಣೆ ಬರುವುದಾದರೂ ಹೇಗೆ!! ಸರಕಾರೀ ಆಸ್ಪತ್ರೆ ಅದರೇನಂತೆ— ಪೆಂಟಗನಂತಹ ಮನುಷ್ಯನಿಗಾಗಿ ತೆರೆಯಲಾಗಿತ್ತೆ !!!

ಮುಖ್ಯ ಅವನು ತನ್ನ ಹೆಂಡತಿಯನ್ನು ಚಿತೆಗೆ ಅಹುತಿ ಕೊಟ್ಟು, ಮಗನನ್ನು ಅಜ್ಜಿಯ ಹತ್ತಿರ ಬಿಟ್ಟು ಬಂದಿದ್ದನು. ಆಗ ಮಾತ್ರ ಮೂರು ದಿನಗಳವರೆಗೆ ಕಟ್ಟೆ ಖಾಲಿಯಾಗಿದ್ದಿತು. ನಾಲ್ಕನೆಯ ದಿನ ಪೆಂಟಗನು ಮತ್ತೆ ಹಾಜರಾಗಿದ್ದನು—ಒಂದು ಕೈಯಲ್ಲಿ ಹರಕು ಚಪ್ಪಲಿ, ಮತ್ತೊಂದರಲ್ಲಿ ಟಾಚಣಿಯನ್ನು ಹಿಡಿದು! ಇದಾದ ಮೇಲೆ ಪೆಂಟಗನು ಊರಿಗೆ ಹೋಗಲೇ ಇಲ್ಲ. ಆಗಾಗ ಮಗನನ್ನೂ ಇಲ್ಲಿಗೆ ಕರೆಯಿಸಿಕೊಂಡು ನೋಡುವುದುಂಟು. ಆದರೆ ಅವನು ತನ್ನ ಸ್ಥಾನವನ್ನು ಮಾತ್ರ ಬಿಟ್ಟರಲಿಲ್ಲ—ಇದುವರೆಗೆ ಅವನು ಇಲ್ಲಿಯೇ ಕುಳಿತಿರುತ್ತಿದ್ದನು.

ಈ ಸಮಯದಲ್ಲಿ ಪ್ರಪಂಚವೆಲ್ಲವೂ ಬದಲಾಯಿಸಿತ್ತು-ಅಲದ ಮರವನ್ನು ಕಡಿದು ಕಿತ್ತು ಬಿಸಾಡಲಾಗಿತ್ತು; ಅದರ ಸ್ಥಳದಲ್ಲಿ ಎಷ್ಟೋ ಮಳಿಗೆಗಳನ್ನು ಕಟ್ಟಲಾಗಿತ್ತು. ಎದುರಿಗಿದ್ದ ಬಯಲಿನಲ್ಲಿ ಮನೆಗಳೆದ್ದುವು, ಮತ್ತು ಕಚ್ಚಾ ರಸ್ತೆ ಪಕ್ಕಾ ರಸ್ತೆಯಲ್ಲಿ ಮಾರ್ಪಟ್ಟಿತ್ತು— ಯುದ್ಧವಾಯಿತು—ಗೋದಿ ಅಕ್ಕಿಯ ಬೆಲೆ ಹೆಚ್ಚಾಗಿತ್ತು—ಅಗಸ್ಟ್ ಗಣನೆಯ ದಿನ ಕೂಡಾ ಬಂದಿತ್ತು—ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತ್ತು —ಅಮೇಲೆ ಒಂದನೆಯ ಜನೆವರಿ ದಿನ ಸ್ವತಂತ್ರದೇಶಾದ್ಯಂತವೆಲ್ಲ ಉತ್ಸವಗಳಾದುವು—ಆದರೆ ಪೆಂಟಗ ಅಲ್ಲಿಯೇ ಕುಳಿತಿದ್ದ—ಅವನಿಗೆ ಯಾವ ಕೋಣೆಯೂ ಸಿಕ್ಕಿರಲಿಲ್ಲ—ಇಷ್ಟು ದೊಡ್ಡ ಪೃಥ್ವಿಯಮೇಲೆ ಅವನಿಗೆ ಯಾವ ಸ್ಥಳವೂ ಸಿಕ್ಕಲಿಲ್ಲ, ಮತ್ತು ಸ್ವತಂತ್ರ ದೇಶದಲ್ಲಿ ಅವನಿಗೆ ಈ ಕಟ್ಟೆಯನ್ನುಳಿದು ಯಾವ ಸ್ಥಾನವಿರಲಿಲ್ಲ—ಅವನು ಅಲ್ಲಿಯೇ ಜನ್ಮಿಸುತ್ತಾನೆ, ಮೃತನಾಗುತ್ತಾನೆ! ಪುನಃ ಜನ್ಮಿಸುತ್ತಾನೆ !!

ಒಂದುದಿನ ಚಿಕ್ಕಮಗುವೊಂದು ಅವನ ಜೊತೆಯಲ್ಲಿದ್ದುದನ್ನು ಕಂಡು, "ಅರೆ! ಇವನಾರೊ?" ಎಂದು ನಾನು ಕೇಳಿದೆ.

"ನನ್ನ ಮಗ ಬಾಬುಜೀ—ಹೀ—ಹೀ—ಹೀ—" ಎಂದು ಪೆಂಟಗ ನಕ್ಕನು. ಅದರಲ್ಲಿ ನಗುವಂಥಾದೇನಿದೆ? ನಾಚಿಕೆ ಬರುವಂತಹ ಮಾತು—ಮಗುವನ್ನು ಅದರಲ್ಲಿಯೂ ನೀತಿಬದ್ಧವಾಗಿ ಮಗುವನ್ನು ಹೆತ್ತ ಮಾತ್ರಕ್ಕೆ ತಪ್ಪೆನಿದೆ? ಆದರೆ ಪೆಂಟಗನೇಕೆ ನಗುತ್ತಿದ್ದನೊ! ನಾನು ಆ ಕಪ್ಪಾದ ಚಿಕ್ಕ ಮಗುವಿನ ಕೆನ್ನೆಗಳನ್ನು ತಟ್ಟಿ, ಇವನ ಹೆಸರೇನು? " ಎಂದು ಕೇಳಿದೆ.

"ಪೆಂಟಗ"

"ಅರೆ! ಇದೆಂಥಾ ಹೆಸರು? ನೀನು ಪೆಂಟಗ, ಇವನೂ ಪೆಂಟಗ!"

"ನಾನು ದೊಡ್ಡ ಪೆಂಟಗ, ಇವನು ಸಣ್ಣ ಪೆಂಟಗ - ಹೀ—ಹೀ—ಹೀ—" ಪೆಂಟಗನ ಧ್ವನಿ ಈಗಲೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ನಾನು ಕಟ್ಟೆಯಕಡೆ ದೃಷ್ಟಿ ಬೀರಿದೆ. ಚಂದ್ರನ ಮಂದಪ್ರಕಾಶವು ಸಣ್ಣ ಪೆಂಟಗನ ಮುಗ್ಧಮುಖದ ಮೇಲೆ ಬಿದ್ದಿತ್ತು. ಅವನು ಪ್ರಪಂಚದ ಅರಿವಿಲ್ಲದೆ ನಿದ್ರಿಸುತ್ತಿದ್ದನು— ಸುಖವಾದ ನಿದ್ರೆ! ಬೆಳಗಿನಿಂದ ದುಡಿದಮೇಲೆ ಬರುವ ಮಧುರ ನಿದ್ರೆ!

ಅರ್ಧರಾತ್ರಿಯಾದ ಮೇಲೆ ಮನುಷ್ಯನೊಬ್ಬನು ಸವಿಾಪದಲ್ಲಿ ನಿಂತು ತನ್ನ ವಿಷಯದಲ್ಲಿ ವಿಚಾರವಾಡುತ್ತಿದ್ದಾನೆಂಬುದನ್ನು ಆತ ಅರಿಯನು ಚಂದ್ರನು ಮೇಘಗಳಲ್ಲಿ ಅಡಗುತ್ತಿದ್ದಾನೆಂಬುದರ, ಮಿನುಗುವ ತಾರೆಗಳು ತನ್ನು ಕೊನೆಯ ಶ್ವಾಸವನ್ನೆಳೆಯುತ್ತಿದ್ದುದರ—ಬೀಸುವ ತಂಗಾಳಿ ಮತ್ತು ತಂಪನ್ನು ಹುಟ್ಟಿಸುವ ಚಳಿಯು- ಇದಾವುದರಿವೂ ಅವನಿಗಿಲ್ಲ-ಈಗ ಮಳಿಯಾಗಲಿರುವುದನ್ನು ಮಿಂಚು ಹೊಳೆಯುತ್ತಿದ್ದುದನ್ನು ಅವನು ಅರಿಯನು.

ಆದರೆ ಇಂತಹ ನಿದ್ದೆ ಕೂಡ ಚೆನ್ನಾದುದಲ್ಲ—ಎಂದು ಯೋಚಿಸಿದೆ—ಅವನನ್ನು ಎಚ್ಚರಿಸಿ,

"ಇಲ್ಲಿ ಏತಕ್ಕೆ ಮಲಗಿದ್ದೆ? ನಿನಗೆ ಚಳಿಯಾಗುವುದಿಲ್ಲವೆ? ನಿನಗೆ ನೆಗಡಿ ಬರುವುದಿಲ್ಲವೆ? ನೀನು ಮನುಷ್ಯನಲ್ಲವೆ?—ಹೇಳು ಪೆಂಟಗಾ" ಎಂದೇನೇನೋ ಕೇಳಬೇಕೆಂದುಕೊಂಡೆ—

ಅಮೇಲೆ, ನಾನೆಂತಹ ಹುಚ್ಚನಂತೆ ವಿಚಾರಿಸುತ್ತಿದ್ದೇನೆಂಬುದನ್ನರಿತೆ. ನನಗೆ ಕತೆ ಬರೆಯುವುದಿದೆ. ನಾನು ಅನವಶ್ಯಕವಾದ ವಿಷಯು

ಗಳಲ್ಲಿ ತೊಳಲಾಡುತ್ತಿದ್ದೇನೆ. ಇದಾದಮೇಲೆ ನಾನು ಜುಬೇದಾಳ ವಿಷಯವಾಗಿ ವಿಚಾರಿಸಲಾರಂಭಿಸಿದೆ. ಆದರೆ ಜುಬೇದಾ! ಎಲ್ಲಿಯೂ ಜುಬೇದಾಳ ಸುಳಿವಿರಲಿಲ್ಲ. ಜುಬೇದಾ ನನ್ನ ಸ್ವಪ್ನ ಮತ್ತು ವಿಚಾರಲೋಕದಿಂದ ಎಲ್ಲಿಯೋ ದೂರ ಹೋಗಿದ್ದಳು. ಪೆಂಟಗನೇನೂ ಅಂದಿರಲಿಲ್ಲ—ಹಾಗಾದರೆ ಅವಳೇಕೆ ಓಡಿಹೋದಳು? —ಏಕೆ?—

ಜುಬೇದಾಳ ವಿಷಯವಾಗಿ ಯೋಚಿಸುತ್ತಿದ್ದೇನೆ — ಆದರೆ ಜುಬೇದಾ ಚಿತ್ತದಲ್ಲಿ ಸುಳಿಯುಳು –ಎಷ್ಟೋ ವರ್ಷಗಳಿಂದ ನನ್ನ ಚಿತ್ತದ ಮೇಲೆ ಮೂಡಿದ ಜುಬೇದಾ, ಇಂದು ಪೆಂಟಗನ ಛಾಯೆಯನ್ನು ಕಂಡೊಡನೆ ಮಾಯವಾದಳು— ಏಕಿರಬಹುದು? ಆದರೆ ನನಗೆ ಕತೆ ಬರೆಯುವುದಿದೆ. ಏಕೆಂದರೆ ನಾನು ನಿಮಗೆ ಮಾತು ಕೊಟ್ಟಿದ್ದೇನೆ. ನಾನು ಕತೆ ಬರೆಯುವೆನು –ಅವಶ್ಯ ಬರೆಯುವೆನು.

ಈ ಕತೆ ಸ್ವಾರಸ್ಯವಾಗಿರಲಾರದೆಂಬುದಕ್ಕೆ ನನಗೆ ಖೇದವಾಗುತ್ತಿದೆ. ನಿಮಗೆ ನಾನೊಂದು ಕಾಮಪ್ರಚೋದಕ ಕತೆಯನ್ನು ಹೇಳಲಾಗದಿದ್ದುದಕ್ಕೆ ಕ್ಷಮಿಸಿ. ನನ್ನ ಮಾತುಗಳಿಂದ ನಿಮಗೆ ವಿಷಾದವೆನಿಸುವುದೇನೋ ನಿಜ; ಆದರೆ—ನೀನು ಮಾಡಲಿ? ನಾನು ನನ್ನ ಕರ್ತವ್ಯದಿಂದ ಬಹಿರ್ಮುಖನಾಗಲಾರೆ ಕರ್ತವ್ಯವು ಸೂಚಿಸುತ್ತಿರುವುದು—ಕತೆ ಬರೆಯುವುದಾದರೆ ನೀನು ಪೆಂಟಗನ ಕತೆಯನ್ನು ಬರೆ, ಅವನ ಸುಖ-ದುಃಖದ ಕತೆಯನ್ನು—ಅವನ ಹೆಂಡತಿ ಮಕ್ಕಳ ಕತೆಯನ್ನು, ಅವನ ಜೀವನದಲ್ಲಾದ ಕಣ್ಣು ಪುಟ್ಟ ಬದಲಾವಣೆಗಳು; ಯಾವುದರ ಮೇಲೆ, ಅವನ ಜೀವನ ಮರಣವು ಅವಲಂಬಿಸಿರುವುದೋ—ಅಂತಹ ಕತೆಯನ್ನು ಬರೆ —

ಈಗ ನಾನು ಆ ಮನುಷ್ಯನ ಕತೆಯನ್ನು ಬರೆಯುತ್ತಿದ್ದೇನೆ. ಇದೊಂದು ಹಳೆಯ ಕತೆ ಸ್ವಾದುವಿಲ್ಲದ, ಸ್ವಾರಸ್ಯವಿಲ್ಲದ ಕತೆಯಾಗುವುದು. ಅದಕ್ಕಾಗಿ, ತಮಗೆ ಮೊದಲೇ ತಿಳಿಸುವುದು, ನನ್ನ ಕರ್ತವ್ಯವೆಂದು ಭಾವಿಸಿದೆ—ಏಕೆಂದರೆ, ಓದಿದನಂತರ ತಾವು ನನ್ನನ್ನು ಬೈಯಕೂಡದು—

ಹಾಗಾದರೆ ಕೇಳಿ:—

ಆದರೆ ಇನ್ನೊಂದು ವಿಷಯ. ನೀವು ನನ್ನಲ್ಲಿ ವಿಶ್ವಾಸವನ್ನಿಡಿ—ನಿಮಗೆ ವಿಶ್ವಾಸವಿಡಲೇಬೇಕಾಗುವುದು. ಏಕೆಂದರೆ ಅದರ ವಿನಾ ನನಗೇನೂ ಹೇಳಲಾಗದು. ಪೆಂಟಗನೇನೂ ಹೇಳಿಕೊಂಡಿಲ್ಲ—ಒಂದು ಮಾತನ್ನೂ ಹೇಳಿಲ್ಲ—ಅವನು ಜೀವನಾಂತ್ಯಂತ ಮೌನವಾಗಿದ್ದನು. ಅವನಿಗೆ ನಾನು ಕತೆಗಳನ್ನು ಬರೆಯುತ್ತಿನೆಂಬುದು ಗೊತ್ತಿತ್ತು. ಬೇಕಾದರೆ ಒತ್ತಾಯವಾಗಿ ನನ್ನಿಂದ ಕತೆಯನ್ನು ಬರೆಯಿಸಬಹುದಾಗಿತ್ತು—ಆದರೆ ಅವನೆಂದಿಗೂ ಬಾಯಿಬಿಡಲಿಲ್ಲ ಜೀವನವೆಲ್ಲ ಮೌನವಾಗಿದ್ದು ಕೊನೆಗೂ ಮೌನ ತಾಳಿದನು. ಬಹುಶಃ ಅವನಿಗೆ, "ನಾನೇ ಏಕೆ ಅವನ ವಿಷಯವಾಗಿ ವಿಚಾರ ಮಾಡಬಾರದು, ಅವನ ಕೊರತೆಗಳನ್ನೇಕೆ ತಿಳಿದುಕೊಳ್ಳಬಾರದು!" ಎಂಬುದಾಗಿ, ನನಗೆ ತನ್ನ ಮೌನದಿಂದಲೇ ಸೂಚಿಸಬೇಕೆಂದಿರಬಹುದು. ಅವನ ಮೌನವಾದ ಮೃತ್ಯು ಕೂಡ ನನ್ನ ಮೇಲೆ ಪರಿಣಾಮ ಮಾಡಲಿಲ್ಲ. ಪ್ರತಿದಿನ ಪೆಂಟಗನಂಥವರು ಸಾಯುತ್ತಾರೆ—ಪೆಂಟಗನಂಥವರು ಹುಟ್ಟುತ್ತಾರೆ. ಯಾವ ಪೆಂಟಗನ ವಿಷಯ ಬರೆಯಲಿ?—ಪೆಂಟಗ ಮೃತನಾದ ನಾಲ್ಕು ದಿವಸಗಳವರೆಗೆ ಕಟ್ಟೆ ಪಾಲಿಯಾಗಿತ್ತು—ನಾಲ್ಕನೆಯ ದಿನ ಪೆಂಟಗನು ಚಿತೆಯಿಂದೇಳುವ ಅಗ್ನಿಯ ಅಲೆಗಳಿಂದ ಪಾರಾಗಿ ಬಂದಿದ್ದ—ಇದಾದರೂ ಮಹತ್ತ್ವದ ಘಟನೆಯಲ್ಲವೆಂದು ಕೊಂಡು, ನಾನು ಜುಬೇದಾಳನ್ನು ಜ್ಞಾಪಿಸಿಕೊಂಡಾಗ, ದೊಡ್ಡ ಪೆಂಟಗ, ನಮ್ಮ ಓಣಿಯ ಹಳೆಯ ವೊಚ್ಚೆಗಾರ,—ನನ್ನೆದುರಿಗೆ ನಿಂತಿದ್ದಾನೆ!—

ನಾನು ದಿಙ್ಮೂಢನಾಗಿ ನೋಡಲಾರಂಭಿಸಿದೆ! ಸಣ್ಣ ಪೆಂಟಗ ಇದ್ದಂತೆ ಕಟ್ಟೆಯಮೇಲೆ ನಿದ್ರಿಸುತ್ತಿದ್ದ. ಚಂದ್ರನು ಕತ್ತಲೆಯಲ್ಲಿ ಮಾಯವಾದನು. ತಾರೆಗಳ ಮಂದಪ್ರಕಾಶದಲ್ಲಿ ರಸ್ತೆ ಚೆನ್ನಾಗಿ ಕಾಣಿಸುತ್ತಿರಲಿಲ್ಲ. ಮತ್ತೆ ವಾತಾವರಣವೂ ಸ್ವಲ್ಪ ತಂಪಾಗಿಯೇ ಇತ್ತು. ಮೇಘಗಳು ಗಗನವಮಂಡಲದಲ್ಲಲ್ಲದೆ, ನನ್ನ ಎದೆಯಮೇಲೆ ಹಾರಾಡುವಂತಿದ್ದುವು— ಅಲ್ಲದೆ ದೊಡ್ಡ ಪೆಂಟಗನು ನನ್ನೆದುರಿಗೆ ನಿಂತಿದ್ದನು. ಕಡೆಗೆ ಇದರ ಅರ್ಥವಾದರೂ ಏನೆಂದು ನಾನು ವಿಚಾರಿಸಿದೆ—ಇದೇನಂತಹ ಮಹತ್ತ್ವದ ಮಾತಲ್ಲ—

ಒಂದು ಬೆಚ್ಚಿಬೀಳುವಂತಹ ಶಬ್ದ ಕೇಳಿಸಿತು. ನನ್ನ ಮೈ ನಡುಗಿತು—ನಾನು ಕೈಗಳಿರಡನ್ನೂ ಕಟ್ಟಿಕೊಂಡು, ಎದುರಿಗೆ ದೃಷ್ಟಿ ಬೀರಿದೆ—ದೊಡ್ಡ ಪೆಂಟಗನ ಕಣ್ಣುಗಳು ಕೆಂಪಾಗಿದ್ದುವು. ಹುಬ್ಬುಗಳು ಸೆಟೆದಿದ್ದುವು— ನನ್ನನ್ನುದ್ದೇಶಿಸಿ ಮಾತನಾಡುತ್ತಿದ್ದ:—

"ನನ್ನ ಜನ್ಮನೇನು ಆಶ್ಚರ್ಯದ ಮಾತಲ್ಲ—ನನ್ನ ಮೃತ್ಯುವೇನು ಮಹಾ ಘಟನೆಯಲ್ಲ—ನನ್ನ ನಸುನಗೆಗೆ ಏನೂ ಪದಾರ್ಥವಲ್ಲ—ನನ್ನ ಕಣ್ಣೀರೂ ಏನಲ್ಲ—ನನ್ನ ದುಡಿಮೆ ದುಡಿಮೆಯೆಲ್ಲ —ನನ್ನ ಬೆವರು ಬೆವರಲ್ಲ —ಮತ್ತೆ ನನ್ನ ಬದುಕು ಬದುಕಲ್ಲ —ಆದರೆ, ನಾನೇ ಪ್ರಪಂಚದ ದಿಕ್ಕುದಿಕ್ಕಿನಲ್ಲೂ ಹರಡಿನ್ನೇನೆ—ನಾನೇ ಪೃಥ್ವಿಯ ಹೃದಯವನ್ನು ಸೀಳಿ ಧಾನ್ಯ ಬೆಳೆಯುತ್ತೇನೆ—ಬೆಳಗಿನಿಂದ ಬೆವರು ಸುರಿಸಿದರೆ ಪ್ರತಿಫಲವಾಗಿ ಕಣ್ಣೀರು ಸಿಕ್ಕುತ್ತವೆ—ನಾನು ಕಣ್ಣೀರು ಹಾಕುತ್ತಲೇ ಇರುತ್ತೇನೆ—ಎಷ್ಟೋ ಯುಗಗಳಿಂದ ಕಣ್ಣೀರು ಹಾಕುತ್ತ ಬಂದಿದ್ದೇನೆ. ನಾನೂ ನನ್ನ ಹೆಂಡತಿಯ ತುಟಿಗಳಲ್ಲಿ ನಸುನಗೆಯನ್ನು ನೋಡಬಯಸುತ್ತೇನೆ —ಮತ್ತೆ ಆಗಾಗ ಅವಳ ಕಂಗಳಲ್ಲಿ ತೇಜಸ್ಸನ್ನು ಕಾಣಬೇಕೆನ್ನುತ್ತೇನೆ—ಅವಳ ಶರೀರದ ಮೇಲೆ ಶುಭ್ರವಾದ ಸೀರೆಯನ್ನು ಕಾಣಬೇಕೆಂದು, ನನ್ನ ಮಗುವನ್ನು ಶಾಲೆಗೆ ಕಳುಹಿಸಿ ಓದಿಸಬೇಕೆಂದು, ಒಂದು ಅಚ್ಚುಕಟ್ಟಾದ ಮನೆ ಮಾಡಬೇಕೆಂದು— ಬಯಸುತ್ತೇನೆ. ಆದರೆ ನನಗೆ "ನಿನ್ನ ಅದೃಷ್ಟವೇ ಹೀಗಿದೆ!" ಎಂದು ಹೇಳುತ್ತಾರೆ.

ಅದೃಷ್ಟದ ಈ ಮಾತು ಇಂದಿನಿಂದಲ್ಲ; ಎಷ್ಟೋ ಕಾಲದಿಂದ ಉಪಯೋಗಿಸಲ್ಪಡುತ್ತ ಬಂದುದಾಗಿದೆ. ನನ್ನ ಶರೀರ, ನನ್ನ ಆತ್ಮವನ್ನು ಯುಗ-ಯುಗಗಳಿಂದ ತುಳಿಯುತ್ತ ಬಂದಿದ್ದಾರೆ. ಆದರೆ ನಾನು ತುಳಿದಷ್ಟು ಪುಟಿದುಬೀಳುತ್ತೇನೆ. ಪುಟಿದುಬೀಳುವುದು ನನ್ನ ಪ್ರಕೃತಿಧರ್ಮ—ನಾನೆಂದಿಗೂ ಅಪಯಶಸ್ಸಿಗೆ ಗುರಿಯಾಗಲಿಲ್ಲ—

ಏಕೆಂದರೆ ನನಗೆ ನನ್ನಲ್ಲಿ ವಿಶ್ವಾಸವಿದೆ; ನನ್ನ ಈ ತುಂಬಿದ ತೋಳು-ಗಳ ಮೇಲೆ ವಿಶ್ವಾಸವಿದೆ, ನನ್ನ ಸತ್ಯದ ಮೇಲೆ ವಿಶ್ವಾಸವಿದೆ—

ಇದೇ ಕಾರಣ ನಾನು ಇದುವರೆಗೂ ಮೃತನಾಗಿಲ್ಲ—ಏಕೆಂದರೆ ಸತ್ಯಕ್ಕೆ ಸಾವಿಲ್ಲ. ನಾನೊಂದು ಸಜೀವ ಸತ್ಯವಾಗಿದ್ದೇನೆ—ಇದ-ರೊಂದಿಗೆ ನಾನು ಆಶ್ಚರ್ಯದಾಯಕನಾಗಿದ್ದೇನೆ. ನಾನೇನು ಸಮಸ್ಯೆಯಲ್ಲ—ತತ್ತ್ವಜ್ಞಾನವಲ್ಲ — ಒಗಟುವಲ್ಲ — ಬಿಕ್ಕಟ್ಟಲ್ಲ —ಒಂದು ಸರಳವಾಗಿ ತಿಳಿದುಕೊಳ್ಳುವಂತಹ ಮಾತಾಗಿದ್ದೇನೆ–ಆದರೂ ಆಶ್ಚರ್ಯ-ದಾಯಕವಾಗಿದ್ದೇನೆ.

ಇದೇನು ಆಶ್ಚರ್ಯದ ಮಾತಲ್ಲವೆ? ನಾನು ಮೊಚ್ಚೈಗಾರ-ನಾಗಿಯೂ ಬರಿಗಾಲಿನಿಂದ ತಿರುಗಾಡುತ್ತೇನೆ–ಆದರೆ ನಾನು ಮಾಡಿದ ಬೂಟು, ಚಪ್ಪಲಿಗಳನ್ನು 'ಬಾಟಾ' "ಫೋಕೇಸ್" ನಲ್ಲಿ ಸಾಲಾಗಿ ಇಡಲಾಗಿದೆ—ನಾನು ಧಾನ್ಯ ಬೆಳೆಸುತ್ತೇನೆ; ಆದರೂ ಹಸಿದಿದ್ದೇನೆ. ಇನ್ನ ಹೆಂಡತಿ, ನನ್ನ ಮುಗ್ಧ ಮಗು ಎಲ್ಲರೂ ಹಸಿದಿದ್ದೇವೆ—ನಾನು ಬಟ್ಟೆ ತಯಾರಿಸುತ್ತೇನೆ, ಸಾವಿರಾರು 'ಮಿಲ್' ಗಳು ನನ್ನಿಂದಲೇ ನಡೆಯುತ್ತವೆ—ಆದರೆ ನಾನೂ ನನ್ನ ಕುಟುಂಬವೆಲ್ಲವೂ ವಸ್ತ್ರಹೀನ ವಾಗಿದ್ದೇವೆ – ನಾನು ನೋಡುತ್ತಿದ್ದಂತೆ, ಗಗನ ಚುಂಬಿತ,-ಸುಂದರ ಕಟ್ಟಡಗಳನ್ನು ಈ ಭೂಮಿಯ ಮೇಲೆ ನಿಲ್ಲಿಸುತ್ತೇನೆ –ಆದರೆ ನನಗೆ ಮನೆ ಇಲ್ಲ—ನಾನು ದೊಡ್ಡ ಮಷಿನ್‌ಗಳನ್ನು ನಡೆಯಿಸುತ್ತೇನೆ, ಆಗಲಾರದುದನ್ನು ಮಾಡುತ್ತೇನೆ—ವರ್ಷಗಳಲ್ಲಾಗ ುವುದನ್ನು ಕ್ಷಣ-ಗಳಲ್ಲಿ ಮಾಡುತ್ತೇನೆ.

ನಾನು ಪೆಂಟಿಗ. ನಾನು ಮೊಚ್ಚೈಗಾರ, ನಾನು ರೈತ, ನಾನು ನೇಕಾರ, ನಾನು ಕಾರ್ಮಿಕ, ನಾನು ಡ್ರಾಯ್-ವರ್ ನಾನು ಕಂಡಕ್ಟರ್, ನಾನು ಗುಮಾಸ್ತ, ನಾನು ಮೆಕ್ಯಾನಿಕ್, ನಾನು ಕಲಾಕಾರ, ನಾನು ವಿದ್ಯಾರ್ಥಿ, ನಾನು ಪ್ರೊಫೆಸರ್, ನಾನು ಉಪಾಧ್ಯಾಯ—ಇವೆಲ್ಲಕ್ಕೂ ಮಿಗಿಲಾಗಿ ನಾನೊಬ್ಬ ಮನುಷ್ಯನಾಗಿ-ದ್ದೇನೆ. ಆದರೆ ನಾನು ಆಶ್ಚರ್ಯದಾಯಕನಾಗಿದ್ದೇನೆ—

ಆದರೆ ಈಗ ಈ ಆಶ್ಚರ್ಯ, ಈ ಬೆರಗು ಎಲ್ಲವೂ ಮಾಯ-ವಾಗುತ್ತಿವೆ. ಏಕೆಂದರೆ ಸತ್ಯವು ಬಹಳ ದಿನಗಳವರೆಗೆ ಕತ್ತಲಲ್ಲಿ ಇರಲಾರದು ಅದು ಪ್ರಕಟವಾದಾಗ ಕತ್ತಲು ಓಡಿ ಹೋಗುತ್ತದೆ-ರಷ್ಯಾ ಪ್ರಪಂಚದ ನಕಾಶದಲ್ಲಿ ಹೊಸರೀತಿಯಿಂದ ಕಾಣಿಸಿಕೊಳ್ಳುತ್ತ-ಲಿದೆ. ನವಚೀನಾ ಜನ್ಮವೆತ್ತುತ್ತಲಿದೆ—ಪ್ರತಿಯೊಂದು ಪದಾರ್ಥ-ವೆನ್ನಾಗಿ ಬಯಲಿಗೆ ಬರುತ್ತಲಿದೆ–ನೀವು ನೋಡುವಿರಿ–ಈ ಪ್ರಪಂಚವು ನೋಡುವುದು—ಆದರೆ ಸ್ವಲ್ಪ ಬೆಳಕು ಹರಿಯಲಿ!

ನನ್ನ ಮಗು ಈ ಕಣ್ಣೀರಿನ ಬೆಲೆ ಕೇಳುವನು, ಕೊನೆಗೆ ಪ್ರತಿ-ಯೊಬ್ಬ ಮಾನವನ ಹುಟ್ಟುಹಕ್ಕಾದ, ಶಾಂತಿಯುತ, ಸಮೃದ್ಧ ಜೀವನವನ್ನು ಬೇಡುವನು—

ಹೀಗಾಗದಿದ್ದರೆ ಏನಾಗುವುದು ಗೊತ್ತೆ?"

"ಏನಾಗುವುದು?" ಎಂದು ನಾನು ಕೂಡಲೆ ಕೇಳಿದೆ.

"ಬಹುಶಃ ನಿಮಗೆ ಕೇಳುವುದಕ್ಕಾಗದು"

"ಇಲ್ಲ-ಇಲ್ಲ-ಹೇಳು ಕೇಳುತ್ತೇನೆ" ಎಂದು ನಾನು ಬೇಡಿದೆ-ಆದರೆ ಪೆಂಟಿಗ ನನ್ನ ಕಣ್ಣೆದುರಿಗಿರಲಿಲ್ಲ. ಮುಂದಿರಲಿಲ್ಲ-ಹಿಂದಿರಲಿಲ್ಲ-ಪೆಂಟಿಗ ಎಲ್ಲಿಯೂ ಇರಲಿಲ್ಲ—ಬಹುಶಃ! ಅವನ ಮಗ ಚಳಿಯಲ್ಲಿ ನಡುಗುತ್ತ ಕಟ್ಟೆಯ ಮೇಲೆ ಮಲಗಿದ್ದ. ಚಂದ್ರ ಕಿರಣಗಳು ಅವನ ಹಣೆಯನ್ನು ಚುಂಬಿಸುತ್ತಿದ್ದುವು. ನನಗೂ—ಅವನ ಮಿನುಗುವ ಹಣೆಗೆ ಮುತ್ತಿಟ್ಟು "ಹೆದರಬೇಡ ನನ್ನ ಚಿಕ್ಕ ಗೆಳೆಯಾ, ಬೆಳಕು ಹರಿಯಲಿದೆ—" ಎಂದು ಹೇಳಬೇಕೆನ್ನಿಸಿತು. ಆದರೆ ಅವನ ನಿದ್ದೆ ಕೆಡುವುದೆಂದರಿತು ಸುಮ್ಮನಾದೆ; ಮತ್ತೆ ಎಷ್ಟೋ ಹೊತ್ತಿನವರೆಗೆ ಅವನನ್ನೇ ನೋಡುತ್ತ ಅಲ್ಲಿಯೇ ನಿಂತುಕೊಂಡೆ.

ಈಗ ನಾನು ನನ್ನ ಮನೆಯಲ್ಲಿದ್ದೇನೆ. ಪೆಂಟಿಗನ ಕತೆ ಹೇಗೆ ಆರಂಭಿಸಬೇಕೆಂದು ವಿಚಾರಿಸುತ್ತಿದ್ದೇನೆ. ನಾನು ಎಷ್ಟೋ ಸಿಗರೇಟು ಗಳನ್ನು ಸೇದಿ ಬೀಸಾಡಿದೆ. ಆದರೆ ಏನೂ ಹೊಳೆಯಲಿಲ್ಲ—ಯಾವ ರೀತಿ ಎಂಬುದು ತಿಳಿಯಲೊಲ್ಲದು. ಬಹುಶಃ ನನಗೆ ಕತೆ ಬರೆಯು-ಲಾಗದು. ಬಹುಶಃ ಏಕೆ, ವಾಸ್ತವವಾಗಿ ನನಗೆ ಕತೆ ಬರೆಯಲಾಗದು. ಏಕೆಂದರೆ ಪೆಂಟಿಗನು ಸ್ವಯಂ ಒಂದು ಪೂರ್ಣ ಕತೆಯಾಗಿದ್ದಾನೆ; ನೀವೇ ಹೇಳಿ, ನಾನೇನು ಕತೆ ಬರೆಯಲಿ? ನನ್ನ ಮಾತು ನಡೆಯಿಸಲು ಆಗದಿದ್ದುದಕ್ಕೆ ನನಗೆ ವಿಷಾದವೆನಿಸುತ್ತದೆ. ನಿಮ್ಮ ಇಷ್ಟೊಂದು ಸಮಯ ತೆಗೆದುಕೊಂಡ ಮೇಲೆ, ನಿಮಗೆ ಇನ್ನೊಂದು ಮಾತನ್ನು ಹೇಳ ಬಯಸುತ್ತೇನೆ. ನೀವು ನನ್ನಂತಹ ಕತೆಗಾರನಿಂದ ಕತೆ ಕೇಳುವ ಬದಲು, ನೀನೇ ಪೆಂಟಿಗನನ್ನೇಕೆ ಬೆಟ್ಟಿಯಾಗುವುದಿಲ್ಲ? ಪೆಂಟಿಗನ ಕತೆಯನ್ನು ಪೆಂಟಿಗನಿಂದೇಕೆ ಕೇಳುವುದಿಲ್ಲ?—

ಪೆಂಟಿಗನ ಕತೆಯನ್ನು ಅವನ ಕಣ್ಣುಗಳಲ್ಲಿ, ಅವನ ಬಾಡಿದ ಮುಖದಲ್ಲಿ ಏಕೆ ನೋಡುವುದಿಲ್ಲ?—ಪೆಂಟಿಗನ ಹೊಡತಿಯ ಬಿಕ್ಕು-ಗಳಲ್ಲಿ, ಅವನ ಮಕ್ಕಳ ರೋದನದಲ್ಲಿ ಏಕೆ ಕೇಳುವುದಿಲ್ಲ? ಪೆಂಟಿಗ-ನನ್ನು ಬೆಟ್ಟಿಯಾಗಿ, ಅವನ ಹೆಂಡತಿಯನ್ನು ನೋಡಿ ಅವರೆಲ್ಲರಿಂದ ಕತೆಯನ್ನು ಕೇಳಿ! ಅಂತಹ ಕತೆ ನೂರಕ್ಕೆ ನೂರು ಭಾಗ ಸತ್ಯ-ವಾದದ್ದು. ಅವನ ಕತೆಯನ್ನು ಕೇಳಲು ನೀವು ನನ್ನಲ್ಲಿಗೆ ಬರಬೇಕಾ-ಗಿಲ್ಲ. ಏಕೆಂದರೆ ಪೆಂಟಿಗನನ್ನು ಒಂಟಿಯ ಕಟ್ಟೆಯಲ್ಲಿಯೇ ಇರುವು-ದಿಲ್ಲ. ಪೆಂಟಿಗ ಈ ಪಟ್ಟಣದಲ್ಲಿ ಈ ದೇಶದಲ್ಲಿ—ಈ ರಾಷ್ಟ್ರದ ಪ್ರತಿಯೊಂದು ಭಾಗದಲ್ಲಿಯೂ ಇದ್ದಾನೆ. ಪೆಂಟಿಗನನ್ನು ನೀವು ಹಗಲಿನಲ್ಲಿ ಅಗಲಿ, ರಾತ್ರಿಯಲ್ಲಿ ಅಗಲಿ, ಯಾವುದಾದರೊಂದ ಓಣಿಯಲ್ಲಿ, ರಸ್ತೆಯಲ್ಲಿ ಅಥವಾ "ಫುಟಪಾಥ್"ನಲ್ಲಿ ಕಾಣಬಹುದು.

ನಿಕಿತಾ ಕ್ರುಶ್ಚೇವ್

(ವ್ಯಕ್ತಿತ್ವ ಪರಿಚಯ)

ಶ್ರೀ. ವೆಂ. ಮು. ಜೋಶಿ, ಧಾರವಾಡ

(ವ್ಹಿಕ್ಟರ ಅಲೆಕ್ಸಾಂಡ್ರಾವ್ಸ್ ಇವರ ಕ್ರುಶ್ಚೇವ್ಹ ಅಫ್ ದಿ ಯುಕ್ರೇನ್—ಎ ಬಾಯೋಗ್ರಾಫಿ" ಎಂಬ ಗ್ರಂಥದ ಅಧಾರದಿಂದ, ಪ್ರಾ. ಪಾರೀಖರು ಮುರಾರಿಯಲ್ಲಿ 'ನವಭಾರತ' ಮಾಸಿಕದ ನೊವ್ಹೆಂಬರ್ ೫೭ರಲ್ಲಿ ಬರೆದ ಲೇಖನದ ಅಧಾರದಿಂದ, ಪ್ರಸ್ತುತ ಲೇಖನವನ್ನು ಸಿದ್ಧಪಡಿಸಲಾಗಿದೆ. —ಲೇಖಕ)

ಪೂರ್ವಜೀವನ

ನಿಕಿತಾ ತನ್ನ ಬಾಲ್ಯವನ್ನು ಯುಕ್ರೇನಿನ ಕ್ರುಸ್ಕ್ ಜಿಲ್ಲೆಯ 'ಕಾಲಿನೋವ್ಹಾಕಾ' ಎಂಬ ಸಣ್ಣ ಹಳ್ಳಿಯಲ್ಲಿ ಕಳೆದನು. ಇವನ ತಂದೆಯ ಹೆಸರು ಸರ್ಜಿಕೃಶ್ಚ್ ಎಂದು. ಈ ಕೃಶ್ಚ್ ಮನೆತನ ರುಸ್ಸೋರೋಗ್ ಕೊಸಾಕ್‌ನಲ್ಲಿದ್ದಿತು. ೧೭ನೆಯ ಶತಮಾನದಲ್ಲಿ ಯುಕ್ರೇನಿನಲ್ಲಿ ಹದ್ದುಪಾರು ಮಾಡಿದಂದಿನಿಂದ, ಈ ಮನೆತನ ಯುಕ್ರೇನಿನಲ್ಲಿ ಬಂದು ನೆಲಸಿತು ೧೯ನೆಯ ಶತಮಾನದಲ್ಲಿ ಮೊದಲನೆಯ ನಿಕೋಲಸನ ಕಾಲದಲ್ಲಿ, ಈ ಮನೆತನದವರು ತಮ್ಮ ಅಡ್ಡ ಹೆಸರಿನ ಮುಂದೆ "ಈವ್ಹ್" ಪ್ರತ್ಯಯವನ್ನು ಜೋಡಿಸಿ, ಅದಕ್ಕೆ ರಶಿಯನ್ ರೂಪವನ್ನು ಕೊಟ್ಟರು. ಆಗ ಈ ಮನೆತನದ ಜನರೆಲ್ಲ ರಶಿಯನ್ ಭಾಷೆಯನ್ನು ಆಡುತ್ತಿದ್ದರಾದರೂ, ಮಾತಿನ ಉಚ್ಚಾರ, ರೀತಿ, ಧಾಟಿ ಎಲ್ಲವೂ ಯುಕ್ರೇನೀ ಮಾದರಿಯದಾಗಿತ್ತು. ಉತ್ತಮ ಆಹಾರ, ಯಥೇಚ್ಛ ಮದ್ಯಪಾನ ಇವುಗಳಿಗೂ ಈ ಮನೆತನವು ಹೆಸರು ಪಡೆದಿತ್ತು. ತನ್ನ ಮನೆತನಕ್ಕೆ ಒಪ್ಪುವಂತೆ ಇದ್ದಾನೆ ನಿಕಿತಾ.

ಈತನ ತಂದೆ ಸರ್ಜಿಯ ಸಂಸಾರ ದೊಡ್ಡದು ಅವನು, ಅವನ ಹೆಂಡತಿ ಮತ್ತು ಹತ್ತು ಮಕ್ಕಳು. ಸಂಪತ್ತು ಅಷ್ಟಕ್ಕಷ್ಟೆ. ಪಿತ್ರಾರ್ಜಿತವಾದ ಸ್ವಲ್ಪ ಜಮೀನು, ೨ ಆಕಳು, ೨ ಆಡು, ಕೆಲವು ಹಂದಿಗಳು ಇಷ್ಟೇ. ಹೊಲದ ಕೆಲಸವನ್ನು ಹೆಂಡತಿ ಮಕ್ಕಳು ನೋಡಿಕೊಳ್ಳುತ್ತಿದ್ದರು. ಪಾರ್ಕೋವ್ಹಾನ ಕಡೆಗೆ ಹೋಗುವ ಹಾದಿಯಲ್ಲಿಯೇ ಇವರ ದೊಂದು ಕಮ್ಮಾರಿಕೆಯು ಭಟ್ಟು ಇದ್ದಿತು. (ಕಮ್ಮಾರ ಸಾಲೆ) ನಿಕಿತಾಗೆ ಮೊದಲಿನಿಂದಲೂ ಹೊಲದ ಕೆಲಸ ಪ್ರಿಯವಾಗಿತ್ತು. ಆದರೆ ತನ್ನ ೧೧ನೆಯ ವಯಸ್ಸಿನಲ್ಲಿಯೇ ಅತ ಕಮ್ಮಾರ ಸಾಲೆಯಲ್ಲಿ ಕೆಲಸಕ್ಕೆ ನಿಲ್ಲಬೇಕಾಯಿತು ಅದಕ್ಕೆ ಕಾರಣವೆಂದರೆ, ತಂದೆಯ ಶಿಸ್ತು. ಮೇಳೆ ಸಿಕ್ಕಾಗಲೆಲ್ಲ ನಿಕಿತಾ, ಅಪಿಯಲ್ಲಿ ಅಡ್ಡಾಡುತ್ತಿದ್ದ, ಮೀನು ಹಿಡಿಯುತ್ತಿದ್ದ, ನದಿಗಳ ಬೇಟೆಯನ್ನಾಡುತ್ತಿದ್ದ ಅಥವಾ ಗೆಳೆಯರ ಗುಂಪನ್ನು ಕೂಡಿಸಿ, ಯುಕ್ರೇನೀ ಲೋಕಗೀತೆಗಳನ್ನು ಹಾಡಿ, ಅವರ ಮನರಂಜಿಸುತ್ತಿದ್ದ ಶಾಲೆಗೆ ಅತ ಹೆಚ್ಚಾಗಿ ಹೋಗಲೇ ಇಲ್ಲ.

ಆ ಹಳ್ಳಿಯ ಶಾಲೆ ಎಂದರೆ ಎಂತಹದು? ಚರ್ಚಿನ ಪಾದ್ರಿಯು ನಡೆಸುತ್ತಿದ್ದ ಶಾಲೆ ಅದು. ಓದುವುದು, ಬರೆಯುವುದು, ಮಾಮೂಲಿ ಗಣಿತ, ಬಾಯ್‌ಬಲ್ಲಿನ ಹಳೆಯ ಮತ್ತು ಹೊಸ ಕರಾರುಗಳ ಮೇಲೆ ಅಧರಿಸಿ ಬರೆದ ಪವಿತ್ರ ಇತಿಹಾಸ—ಇವೇ ಅಲ್ಲಿಯ ಶಿಕ್ಷಣ ವಿಷಯ. ನಿಕಿತಾ ಇವುಗಳ ಮೂಲಕ, ಅಡಮುಟ್ಟಾಗಿಯೇ ಉಳಿದುಕೊಂಡನು. ತರುಣ ವಯಸ್ಸಿನಲ್ಲಿ ಕಾಲಿರಿಸಿದ ಮೇಲೆ ಮಾತ್ರ—ಅತ ಊರಲ್ಲಿಯ ತರುಣ ಹುಡುಗಿಯರತ್ತ ವಿಶೇಷ ಗಮನವನ್ನು ಪೂರಯಿಸತೊಡಗಿದ. ಆ ತರುಣ ಹುಡುಗಿಯರಿಗೂ ನಿಕಿತಾ ಸೇರುತ್ತಿದ್ದ.

ಸರ್ಜಿಯ ಕಮ್ಮಾರಸಾಲೆ ಭರಭರಾಟಿಯಿಂದ ನಡೆಯತೊಡಗಿತು. ಸ್ವಲ್ಪ ದಿನಗಳಲ್ಲಿಯೇ ಅದು ಸಣ್ಣ ಕಾರಖಾನೆಯೇ ಆಯಿತು. ಮುಂದೆ ತಂದೆಯ ಬೇನೆಯ ಮೂಲಕ, ಆ ಕಾರಖಾನೆಯ ಸಂಪೂರ್ಣ ಜವಾಬುದಾರಿ ನಿಕಿತನ ಮೈನೇಲೆಯೇ ಬಿದ್ದಿತು. ಹಳ್ಳಿಯಲ್ಲಿಯ ಕೆಲ ಜನರು ಕೀಳುತರಗತಿಯ ಪುಸ್ತಕಗಳನ್ನು ಕೊಂಡು ಓದುತ್ತಿದ್ದರು. ನಿಕಿತಾ ಅವುಗಳನ್ನು ಕೈಯಿಂದಲೂ ಮುಟ್ಟುತ್ತಿರಲಿಲ್ಲ. ಒಂದು ವೇಳೆ ಯಾವುದಾದರೊಂದು ಪುಸ್ತಕವನ್ನು ಅತ ಕೈಯಲ್ಲಿ ತೆಗೆದು ಕೊಂಡರೆ, ಎರಡು ಮೂರು ಪುಟಗಳ ಮುಂದೆ ಸಾಗುತ್ತಿರಲಿಲ್ಲ ಅವನ ಓದು. ಇಂತಹ ನಿಕಿತಾ ಒಂದು ಸಲ ವಾಚನದಲ್ಲಿ ತಲ್ಲೀನನಾದುದು ಕಾಣಿಸಿತು. ರುಖಾಕೆನ್‌ನ ನಿಸರ್ಗದ ಇತಿಹಾಸ ಮತ್ತು ಭೂಗರ್ಭ ಶಾಸ್ತ್ರದ ಪುಸ್ತಕವಿದ್ದಿತು ಅದು. ಇಂತಹ ಅಭ್ಯಾಸದ ಹವ್ಯಾಸ ಆ ಚಿಕ್ಕಹಳ್ಳಿಯಲ್ಲಿ ಪೂರ್ತಿಯಾಗುವುದೆಂತು?

ಕಾದಿಟ್ಟ ಕೆರೆಯಲ್ಲಿ ಮೀನು ಹಿಡಿಯುತ್ತಿದ್ದಾಗ, ನಿಕಿತಾನನ್ನು ರುಸಾರನ ಕಾನಲುಗಾರರು ಒಂದು ಸಲ ಹಿಡಿದು ಹೊಡೆದು, ಪೋಲೀಸರಿಗೆ ಒಪ್ಪಿಸಿದರು. ಪೋಲೀಸರು ಅತನನ್ನು ಹಂಚರಿನಿಂದ ಹೊಡೆದು ಬಿಟ್ಟರು. ಅತನ ಡೋಣಿ-ಜಾಳಿಗೆಗಳನ್ನು ಜಪ್ತು ಮಾಡಿದರು. ಸಾಮಾಜಿಕ ಅನ್ಯಾಯದ ಮೊದಲನೆಯ ಏಟನ್ನು ನಿಕಿತಾ ತಿಂದುದು ಇಲ್ಲಿಯೇ. ಹಳ್ಳಿಯಲ್ಲಿ ಎಲ್ಲರಿಗೂ ಈ ಸುದ್ದಿ ತಿಳಿಯಿತು. ಈ ಅವಮಾನದಿಂದ ನಿಕಿತಾ ಕಾಣದಂತಾದ. ಪೋಲೀಸರ ಹಂಟರನ ಹೊಡೆತದಿಂದ ಅವಮಾನಿತನಾದ ನಿಕಿತಾ, ರುಸಾರನ ರುಟೆಂಗ್ ತಾಹೀತನವನ್ನು ನಾಶಮಾಡುವ ಕನಸನ್ನು ಕಾಣತೊಡಗಿದ. ತಂದೆಯ

ನಂತರ, ಅತನು ಕಮ್ಮಾರ ಶಾಲೆಯನ್ನು ಮುಂದುವರಿಸಬೇಕೆಂದು ನಿಕಿತಾನ ತಾಯಿಯ ಇಚ್ಛೆ ಇದ್ದಿತು; ಆದರೆ ಹಳ್ಳಿಯಲ್ಲಿ ಫೈಜಾಸ್ಪದ ಜೀವನಕ್ಕೆ ಬೇಸತ್ತ ನಿಕಿತಾ, ತಾಯಿಯ ಮಾತನ್ನು ಕೇಳದೆ, ನೌಕರಿಯ ನಿಮಿತ್ತದಿಂದ ಖಾರ್ಕೋವ್ಹಕ್ಕೆ ಹೊರಟುಹೋದ.

ಖಾರ್ಕೋವ್ಹನಲ್ಲಿ ಅತನಿಗೆ 'ಟರ್ನರ್' ಕೆಲಸ ಸಿಕ್ಕಿತು. ಅಲ್ಲಿ ಅತ ತನ್ನ ಬಳಗದವರಲ್ಲಿರುತ್ತಿದ್ದ. ಅತನ ಕಕ್ಷನ ಮಕ್ಕಳು ರೀಲ್ವೆ ವರ್ಕಶಾಪಿನಲ್ಲಿ ದುಡಿಯುತ್ತಿದ್ದರು. ಅವರೆಲ್ಲರೂ ಕೂಲಿಕಾರ ಚಳವಳಿಯಲ್ಲಿ ಭಾಗವಹಿಸುತ್ತಿದ್ದರು. ಪಾಪ್ಯುಲಿಸ್ಟ್ ಮತ್ತು ಮಾರ್ಕ್ಸ್ ವಾದಿಗಳಲ್ಲಿ ಆಗ ಸ್ಪರ್ಧೆಯೇ ನಡೆದಿತ್ತು. ಇಲ್ಲಿಯೇ ನಿಕಿತಾನಿಗೆ ಓದುವ ಅಭ್ಯಾಸವಾಗತೊಡಗಿತು. ಗಲ್ಲುಶಿಕ್ಷೆ ಪಡೆದವರ ಸಹಾನುಭೂತಿಗಾಗಿ ಕೂಡಿದ ಕೂಲಿಕಾರ ಸಭೆಯೊಂದರಲ್ಲಿ ನಿಕೀತಾ ಮಾತನಾಡಿದುದರ ಮೂಲಕವಾಗಿ, ಅತ ಪೋಲೀಸರ ದೃಷ್ಟಿಗೆ ಪಾತ್ರನಾದ. ಈ ಕಾರಣವಾಗಿ ಅತನಿಗೆ ಖಾರ್ಕೋವ್ಹನ್ನು ಬಿಟ್ಟು ಕರೇನಿಗೆ ಹೋಗಬೇಕಾಯಿತು ಮುಂದೆ ಅಲ್ಲಿಂದಲೂ ತಪ್ಪಿಸಿಕೊಂಡು ಜಾರಬೇಕಾಯಿತು. ಆಗ ಮರಿಯಾಪೋಲ್, ಯಾಸಿನೋವ್ಹತಾಯಾ ಮುಂತಾದ ಊರುಗಳಲ್ಲಿಯು ವರ್ಕಶಾಪ್‌ಗಳಲ್ಲಿ ಕೆಲಸ ಮಾಡಿದನು. ಇದೇ ಕಾಲದಲ್ಲಿ, ಜ್ಯೂ ಜನರ ಮೇಲೆ ಕೆಲವರು ದಾಳಿ ನಡೆಸಿದಾಗ, ನಿಕಿತಾ ತನ್ನ ಸಹೋದ್ಯೋಗಿಗಳ ಸಹಕಾರದಿಂದ ಆ ದಾಳಿಗಾರರ ತಂಡವನ್ನು ಓಡಿಸಿಬಿಟ್ಟ ಕತೆ ಪ್ರಸಿದ್ಧವಿದೆ. ಮೊದಲನೆಯ ಮಹಾಯುದ್ಧದ ಪ್ರಾರಂಭದಲ್ಲಿ ನಿಕಿತಾ ಸನಾಜವಾದಿಯಾದ. ಆ ಕಾಲದಲ್ಲಿ ಸೋಶಾಲಿಸ್ಟ್ ಪಕ್ಷ 'ಬೇಕಾಯಿದೇಶೀರ್' ಎಂದು ಸಾರಲಾಗಿತ್ತು. ಈ ಸಂಸ್ಥೆಯ ನೈಧ್ಯಿಗಾಗಿ, ಕೂಲಿಕಾರರು ನಿಧಿಸಂಗ್ರಹ ಕಾರ್ಯ ನಡೆಸಿದರು ನಿಕಿತಾನ ಕಕ್ಷನ ಮಗ 'ವ್ಲಸಿಯಾ ಕೃಶೇವ್ಹ' ಈ ನಿಧಿಯ ಕಾರ್ಯದರ್ಶಿಯಾಗಿದ್ದ; ಮತ್ತು ನಿಕಿತಾ ಅತನ ಸಹಾಯಕನೆಂದು ಅರಿಸಲಾಗಿದ್ದ. ಮಹಾಯುದ್ಧದ ಪ್ರಾರಂಭದಲ್ಲಿ ನಿಕಿತಾ ಕೂಲಿಕಾರ ಚಳವಳಿಯಲ್ಲಿ ಮುಂದಾಗಿರುತ್ತಿದ್ದ. ೧೯೧೭ರಲ್ಲಾದ ಕ್ರಾಂತಿಯ ಸಮಯದಲ್ಲಿ ನಿಕಿತಾ, ಲುಗಾನ್‌ಸ್ಕ್ ಸೋವಿಯೆಟಿನ ಸಭಾಸದನೆಂದು ಅರಿಸಲ್ಪಟ್ಟನು. ಅನಂತರ ಖಾರ್ಕೋವ್ಹನಲ್ಲಿ ಜರ್ಮನ್ ಸೈನ್ಯವನ್ನು ಈತನು ಹೊಡೆದೋಡಿಸಿದ ಕತೆ ಪ್ರಸಿದ್ಧವಿದೆ. ಇದೇ ಕಾಲದಲ್ಲಿ ಅತನಿಗೆ ಹತ್ತದ ಜಾಡ್ಯವೆಂದರೆ ಉತ್ತಮ ಆಹಾರ, ಕಡಿತ, ಮತ್ತು ತರುಣಿಯರ ಜತೆಯಲ್ಲಿ ಓಡಾಡುವುದು ಇವೇ. ಈ ಜಂಜಾಟದಲ್ಲಿ ಅತ ಕ್ರಾಂತಿಕಾರ್ಯದಲ್ಲಿ ಎಷ್ಟರ ಮಟ್ಟಿಗೆ ಭಾಗವಹಿಸುವನೆಂಬುದರ ಬಗೆಗೆ ಸಂದೇಹವೇ ಇದ್ದಿತು. ಆದರೆ ಈ ಸಂಶಯನಿವಾರಣೆಯಾಯಿತು. ೧೯೧೮ರ ಎಪ್ರಿಲಿನಲ್ಲಿ ಬೊಲ್ಶೆವ್ವಿಕ್ ಪಕ್ಷದ ಸಭಾಸದತ್ವಕ್ಕಾಗಿ ಅರ್ಜಿಯನ್ನು ಸಲ್ಲಿಸಿ, ಆ ಪಕ್ಷದಲ್ಲಿ ಪ್ರವೇಶವನ್ನು ಪಡೆದನ.

ಪಕ್ಷದಲ್ಲಿಯ ರಾಜಕೀಯಜೀವನಕ್ಕೆ ಪ್ರಾರಂಭ

ಡಾನೆಟ್ಸ್‌ನಲ್ಲಿಯ ಕೂಲಿಕಾರಸೈನ್ಯದ ಪ್ರಮುಖನೆಂದು ನಿಕಿತಾನು ರುಮಾನಿಯಾದ ಸರಹದ್ದಿಗೆ ಮೇಲೆ ಹೋಗಬೇಕಾಯಿತು. ಈ ಕೆಲಸ ರುಚಿಸದುದರಿಂದ, ಅತ ತನ್ನನ್ನು ಕೃಷಿವಿದ್ಯೆಯನ್ನು ಕಲಿಯುವುದಕ್ಕೋಸ್ಕರ ಮಾಸ್ಕೋಕ್ಕೆ ಕಳಿಸಬೇಕೆಂದು ಪ್ರಾರ್ಥಿಸಿಕೊಂಡನು ಆದರೆ ಆ ರೀತಿ ಸಮ್ಮತಿ ಕೊಡುವುದರ ಬದಲು, ನಿಕಿತಾನನ್ನು ಕುರ್ಸ್ಕ್‌ನ ಕೃಷಿವಿಭಾಗದ ಪ್ರಮುಖನೆಂದು ನಿಯಮಿಸುಲಾಯಿತು. ಈ ಕೆಲಸವನ್ನು ತುಂಬ ಉತ್ಕೃಷ್ಟರೀತಿಯಿಂದ ಮಾಡಿದುದರಿಂದ, ವರಿಷ್ಠ ಅಧಿಕಾರಿಗಳು ಅತನನ್ನು ಬಹಳ ಮೆಚ್ಚಿದರು ಈ ವಿಭಾಗದ ವಾರ್ಷಿಕವರದಿಯನ್ನು ಒಪ್ಪಿಸುವುದರ ಸಲುವಾಗಿ ಅತ ಮಾಸ್ಕೋಕ್ಕೆ ಹೋದಾಗ, ಲೆನಿನ್‌ನನ್ನು ಪ್ರತ್ಯಕ್ಷ ಸಂಧಿಸಿದನು. ಆಗ ಯಾದವೀ ಕಲಹಗಳ ಕಾಲವಿದ್ದುದರಿಂದ, ನಿಕಿತಾನಿಗೆ ಲಷ್ಕರೀ ಕೆಲಸದ ನಿಮಿತ್ತ ಖಾರ್ಕೋವ್ಹಕ್ಕೆ ಹೋಗಬೇಕಾಯಿತು. ಅಲ್ಲಿ ತನ್ನ ಕೆಲಸವನ್ನು ಯಶಸ್ವೀ ರೀತಿಯಿಂದ ಪಾರುಗಾಣಿಸಿದ್ದರಿಂದ, ಅತ ಮುಂದೆ ಬಂದನು. ಕೆಂಪು ಸೈನ್ಯದ ಪ್ರಮುಖನಾದ ಟ್ರಾಟಸ್ಕಿಯು ಸ್ವತಃ ನಿಕಿತಾನಿಗೆ ಚಿನ್ನದ ಪದಕವನ್ನು ಕೊಟ್ಟು ಗೌರವಿಸಿದನು.

ಹೆಚ್ಚು ಕಲಿಯಬೇಕೆನ್ನುವ ಇಚ್ಛೆಯಿಂದ ನಿಕಿತಾ ಖಾರ್ಕೋವ್ಹನಲ್ಲಿಯ ಕೃಷಿವಿದ್ಯಾಲಯದಲ್ಲಿ ಸೇರಿಕೊಂಡನು. ಇಲ್ಲಿಯೇ ಕಲಿಯುತ್ತಿದ್ದ ಸುರಕೋವ್ಹ ಎಂಬ ಹುಡುಗಿಯ ಜತೆಯಲ್ಲಿ ೧೯೨೨ರಲ್ಲಿ ಅತನ ಲಗ್ನವಾಯಿತು. ಲಗ್ನದಿಂದ ನಿಕಿತಾನ ಓದು ನಿಲ್ಲಲಿಲ್ಲ. ಜಾಣ ವಿದ್ಯಾರ್ಥಿಗಳಲ್ಲಿ ನಿಕಿತಾ ಗಣಿಸಲ್ಪಟ್ಟನು. ರಾಜಕೀಯ ಕಲಹದಲ್ಲಿ ಬೀಳದೆ ಹೋಗಿದ್ದರೆ ನಿಕೀತಾ, ಕೃಷಿತಜ್ಞನಾಗಬಹುದಿತ್ತು. ಆದರೆ ಇದೇ ಸಮಯದಲ್ಲಿ ಟ್ರಾಟಸ್ಕಿ ಮತ್ತು ಸ್ಟಾಲಿನ್ ಇವರಲ್ಲಿ ಅಧಿಕಾರಪ್ರಾಪ್ತಿಗಾಗಿ ಕಲಹ ಪ್ರಾರಂಭವಾಯಿತು. ಸ್ವಾಭಾವಿಕವಾಗಿಯೇ ಎಲ್ಲ ವಿದ್ಯಾರ್ಥಿಗಳ ಗಮನ ಆ ಕಲಹದತ್ತ ಹೊರಳಿತು. ಎಲ್ಲ ವಿದ್ಯಾರ್ಥಿಗಳೂ ಟ್ರಾಟಸ್ಕಿಗೆ ಬೆಂಬಲ ಕೊಡುತ್ತಿದ್ದರು. ಅದಕ್ಕೆ ಅಪವಾದವೆಂದರೆ ನಿಕಿತಾ ಕ್ರುಶ್ಚೆವ್ಹ್. ವಿದ್ಯಾರ್ಥಿಗಳ ಒಂದು ಸಭೆಯಲ್ಲಿ ಸ್ಟಾಲಿನ್ ಧೋರಣೆಗೆ ಬೆಂಬಲ ಕೊಡುವ ಗೊತ್ತುವಳಿಯನ್ನು ನಿಕೀತಾ ಮಂಡಿಸಿ, ವಿರೋಧಕರ ವಿರೋಧವನ್ನು ಲೆಕ್ಕಿಸದೆ ಭಾಷಣವನ್ನು ಮಾಡಿದನು. ನಿಕಿತಾನ ಅಂದಿನ ಭಾಷಣ ಪ್ರಭಾವಿಯಾಗಿತ್ತು; ಆ ಭಾಷಣದ ಪರಿಣಾಮವಾಗಿ ಎಷ್ಟೋ ವಿದ್ಯಾರ್ಥಿಗಳು ಸ್ಟಾಲಿನ್ನನಿಗೆ ಅನುಕೂಲ ಮತವನ್ನಿತ್ತರು. ಈ ಕಾರಣದಿಂದ ನಿಕೀತಾ ಪಕ್ಷದ ಮಧ್ಯವರ್ತಿ ಕಮೀಟಿಯ ಪ್ರಚಾರಕನೆಂದು ನಿಯಮಿಸಲ್ಪಟ್ಟನು

ಪ್ರಭಾವೀ ಪ್ರಚಾರಕ

ನಿಕಿತಾ ಪ್ರಚಾರ ಕಾರ್ಯವನ್ನು ಅತ್ಯಂತ ಪರಿಣಾಮಕಾರಿಯಾಗುವಂತೆ— ಕುಶಲತೆಯಿಂದ— ಮಾಡುತ್ತಿದ್ದ. ಕೂಲಿಕಾರರ ಸಭೆಯೇ ಇರಲಿ, ಪಂಡಿತರ ಸಮ್ಮೇಲನವೇ ಇರಲಿ, ನಿಕಿತಾ ಪ್ರಚಾರ ಕಾರ್ಯದಲ್ಲಿ ಮೇಲುಗೈಯವನಾಗಿ ನಿಲ್ಲುತ್ತಿದ್ದ. " ನಾನು ಡೊನೆಟ್ಸ್‌ನ ಒಬ್ಬ ಕೆಲಸಗಾರನಿದ್ದೇನೆ " ಎಂಬುದಾಗಿ ಅತನ ಭಾಷಣ ಪ್ರಾರಂಭವಾಗುತ್ತಿತ್ತು. ಆ ಮೇಲೆ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಅವರ ಲೇಖನಗಳ ಆಧಾರದಿಂದಲೂ, ತನ್ನ ವಾಗ್‌ಧಾರೆಯಿಂದಲೂ, ದೇಶದಲ್ಲಿ ಸಮಾಜವಾದವನ್ನು ಪ್ರಸ್ತಾಪಿಸುವ ವಿಷಯವನ್ನು, ಶ್ರೋತೃವರ ಮನಮುಟ್ಟುವಂತೆ ಪ್ರಸ್ತಾಪಿಸುತ್ತಿದ್ದನು. ಈ ರೀತಿಯಿಂದ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಲೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ಪ್ರಚಾರ ಭಾಷಣ ಮಾಡುತ್ತ, ಯಶಸ್ಸನ್ನು ಸಂಪಾದಿಸುತ್ತ ಹಲವಾರು ಜನರ ರಾಜಕೀಯ ಭೂಮಿಕೆಯನ್ನೇ ಬದಲು ಮಾಡಿದ. ಸ್ವಲ್ಪ ದಿನಗಳಲ್ಲಿಯೇ ಮಧ್ಯವರ್ತಿ ಸಮಿತಿಯ ಪ್ರಚಾರ ವಿಭಾಗದ ತನೆಯ ವರ್ಗದ ಪ್ರಮುಖನೆಂದು ನಿಕಿತಾನ ನೇಮಕವಾಯಿತು.

ಆದರೆ ಈ ಸುಮಾರಿಗೆ ಪರಿಸ್ಥಿತಿ ಬದಲಾಗತೊಡಗಿತ್ತು. ಕಗೊನೋವಿಚ್‌ನನ್ನು ಯುಕ್ರೇನಿನಿಂದ ಮಾಸ್ಕೋಕ್ಕೆ ಕರೆಸಿಕೊಳ್ಳಲಾಯಿತು. ಅವನ ಸ್ಥಳದಲ್ಲಿ 'ಸ್ಪ್ರಿಕ್‌ನಿಕ್' ಬಂದನು. ಈ ಹೊಸ ಮುಖ್ಯ ಕಾರ್ಯದರ್ಶಿಯು "ಯುಕ್ರೇನೀಕರಣ"ದ ತೀಕ್ಷ್ಣ ಪುರಸ್ಕರ್ತೃವಿದ್ದನು. ಯುಕ್ರೇನಿನಲ್ಲಿಯ ವಿಶೇಷತಃ ಕುರ್ಸ್ಕ್‌ನಲ್ಲಿಯ ಆಡಳಿತದ ವಿಭಾಗದಲ್ಲಿಯ ಜನ, ಯುಕ್ರೇನೀ ಭಾಷೆಯನ್ನು ಮಾತಾಡುತ್ತಿರಲಿಲ್ಲ. ಆನಂತಾಡುವ ಭಾಷೆ ರಶಿಯನ್ ಮತ್ತು ಯುಕ್ರೇನೀ ಭಾಷೆಗಳ ಸಂಮಿಶ್ರಣದಂತಹ ವಿಚಿತ್ರ ಭಾಷೆಯಾಗಿದ್ದಿತು. ನಿಕಿತಾನು ಕೂಡ ರಶಿಯನ್ ಭಾಷೆಯನ್ನು ಚೆನ್ನಾಗಿ ಮಾತನಾಡುತ್ತಿದ್ದನು. ಆಶ್ಚರ್ಯದ ಮಾತೆಂದರೆ, ಅತನಿಗೆ ಯುಕ್ರೇನೀ ಭಾಷೆಯೇ ಸರಿಯಾಗಿ ಬರುತ್ತಿರಲಿಲ್ಲ. ಒಂದು ಸಲ 'ಸ್ಪ್ರಿಕ್‌ನಿಕ್' ಪ್ರಚಾರವಿಭಾಗಕ್ಕೆ ಭೆಟ್ಟಿಕೊಟ್ಟು, ನಿಕಿತಾನಿಗೆ ಯುಕ್ರೇನೀಭಾಷೆಯಲ್ಲಿ ನಿವೇದನೆಯನ್ನು ಕೊಟ್ಟನು. ನಿಕಿತಾ ರಶಿಯನ್ ಭಾಷೆಯಲ್ಲಿಯೇ ಉತ್ತರಿಸಿದನು. ಆಗ 'ಸ್ಪ್ರಿಕ್‌ನಿಕ್' — ಪ್ರಚಾರವಿಭಾಗದಲ್ಲಿಯ ಮನುಷ್ಯನಿಗೆ ಯುಕ್ರೇನೀ ಭಾಷೆ ಬಾರದೇ ಇರುವುದೆಂದರೆ ಲಜ್ಜಾಸ್ಪದವೆಂದು ನಿಕಿತಾನನ್ನು ತೆಗಳಿದನು. 'ನಿಕಿತಾ ಎಂದರೆ ರಶಿಯದ ಬಾಡಿಗೆಯ ವಕೀಲ' ಎಂದೂ ಹೀಯಾಳಿಸಿದನು. ನಿಕಿತಾ ಮುಂದೆ ೧೯೩೪ರಲ್ಲಿ ಇದರ ಸೇಡನ್ನು ತೀರಿಸಿದನು: "ಸ್ಪ್ರಿಕ್‌ನಿಕ್" ಈತ ಪೋಲಂಡಿನ ಏಜಂಟನಿರುವನೆಂದು ಪ್ರಸಿದ್ಧಪಡಿಸಿ, ಅತನನ್ನು ಮಧ್ಯವರ್ತಿ ಕಮೀಟಿಯಿಂದ ಹೊರಗೆ ಹಾಕಿಸಿಬಿಟ್ಟನು.

೧೯೨೯ರ ಕೊನೆಯಲ್ಲಿ ತನ್ನ ಪಕ್ಷದ ಒಪ್ಪಿಗೆಯನ್ನು ಪಡೆದು, ನಿಕಿತಾ ಮಾಸ್ಕೋದಲ್ಲಿಯ ಔದ್ಯೋಗಿಕ ವಿದ್ಯಾಪೀಠವನ್ನು ಸೇರಿದನು.

ಪಂಗಡದಲ್ಲಿಯ ಅಧಿಕಾರಕಲಹ

ಔದ್ಯೋಗಿಕ ವಿದ್ಯಾಪೀಠವನ್ನು ಸೇರುವ ಮೊದಲು ನಿಕಿತಾ ಕಗೋನೋವಿಚ್‌ನನ್ನು ಭೆಟ್ಟಿಯಾದನು. ಟ್ರಾಟಸ್ಕಿಯ ಜತೆಯಲ್ಲಿಯ ಕಲಹವೀಗ ಕೊನೆಗೊಂಡಿತ್ತಾದರೂ, ರಾಯಕೋವ್ಸ್ಕಿ, ಬುಖಾರಿನ್, ಟಾಮಸ್ಕಿ, ಪಾಯಟ್‌ಕಾವ್ಸ್ಕಿ, ಸೋಕೋಲ್‌ನಿಕಾವ್ಸ್ಕಿ ಇತ್ಯಾದಿ ಬಲಪಕ್ಷದ ಮುಖಂಡರ ವಿರುದ್ಧ ಹೋರಾಟ ಪ್ರಾರಂಭವಾಗಿತ್ತು. ಈ ಹೋರಾಟದಲ್ಲಿ ಮಾರ್ಕ್ಸ್‌ವಾದದ ತಾತ್ತ್ವಿಕವಾದವನ್ನು ಮಂಡನ ಮಾಡುವ ಉತ್ತಮ ವಕ್ತಾರನಾದ ನಿಕಿತಾನಂತಹ ವ್ಯಕ್ತಿಗಳ ಅವಶ್ಯಕತೆ, ಕಾಗೋನೋವಿಚ್‌ನಿಗೆ ತುಂಬಾ ಇದ್ದಿತು. ಈ ಕಾರಣದ ಮೂಲಕ, ಮಾಸ್ಕೋದ ಔದ್ಯೋಗಿಕ ವಿದ್ಯಾಪೀಠದ ಪಕ್ಷಶಾಖೆಯ ಕಾರ್ಯದರ್ಶಿಯೆಂದು ನಿಕಿತಾನ ನೇಮಣೂಕಿಯಾಯಿತು. ಸ್ಟಾಲಿನ್‌ನ ವಿಷಯದಲ್ಲಿ ನಿಕಿತಾನಿಗೆ ತುಂಬಾ ಪೂಜ್ಯಭಾವನೆ ಇದ್ದಿತು ನಿಕಿತಾನ ಪ್ರತಿ ಭಾಷಣದಲ್ಲಿ ಈ ಭಾವನೆಯು ವ್ಯಕ್ತವಾಗುತ್ತಿತ್ತು. ಕಾಗೋನೋವಿಚ್ ನಿಕಿತಾನನ್ನು ಮುಂದೆ ತರಲು ಪ್ರಯತ್ನಿಸುತ್ತಿದ್ದ. ಪಕ್ಷದ ಅಧಿಕಾರಾರೂಢ ಮುಖಂಡರಿಗೆ ನಿಕಿತಾನ ಪರಿಚಯ ಮಾಡಿಕೊಡುತ್ತಲಿದ್ದ. ಕುಬಿಶೇವ್ಸ್ಕಿ, ಮೊರ್‌ಜಾನ್‌ಕಿಝ್, ಮಿಕೋಯನ್, ಕಾಲಿನಿನ್, ಕಿರಾವ್ಸ್ಕಿ, ವ್ಲೊರೊಶಿಲಾವ್ಸ್ಕಿ — ಇತ್ಯಾದಿ ಮುಖಂಡರ ಪರಿಚಯ ನಿಕಿತಾನಿಗೆ ಆಯಿತು. ಈ ಪರಿಚಯದ ಮೂಲಕ ಸ್ವಲ್ಪ ದಿನಗಳಲ್ಲಿಯೇ ನಿಕಿತಾ, ಮಾಸ್ಕೋದ ಒಂದು ವಿಭಾಗದ ಕಾರ್ಯದರ್ಶಿಯಾದನು. ಇವನ ನೇತೃತ್ವದಲ್ಲಿ ಪಕ್ಷದ ಶುದ್ಧೀಕರಣ ಕಾರ್ಯವು ಪ್ರಾರಂಭವಾಯಿತು. ಈ ಶುದ್ಧೀಕರಣದ ಪರಿಣಾಮವಾಗಿ, ಪಕ್ಷದ ಸುಮಾರು ೫೦ ಸಭಾಸದರನ್ನು ಗುಪ್ತ ಪೋಲೀಸರ ವಶಕ್ಕೆ ಕೊಡಲಾಯಿತು. ಯಥಾವಕಾಶವಾಗಿ ಅವರನ್ನು ಸಮಾಪ್ತಿಗೊಳಿಸಲಾಯಿತು. ಈ ಕೃತಿಯ ಭಾವೀ ಹತ್ಯಾಕಾಂಡದ ನಾಂದಿಯಂತಿತ್ತು. ಸ್ಟಾಲಿನನ ಹೆಂಡತಿ 'ನದ್‌ಯೇಝ್ದಾ' ಇವಳು, ೧೯೩೧ರಲ್ಲಿ ಉದ್ವೇಗದಿಂದ ಆತ್ಮಹತ್ಯೆಯನ್ನು ಮಾಡಿಕೊಂಡಳು. ಆದರೆ ಇವಳ ಮರಣದಿಂದ ಈ ಹತ್ಯಾಕಾಂಡ ನಿಲ್ಲಲಿಲ್ಲ. ೧೯೩೪ರಲ್ಲಿ ಸ್ಟಾಲಿನ್, ಕಗೋನೋವಿಚ್‌ನ ತಂಗಿಯಾದ ರೋಝಾಳ ಜೊತೆಯಲ್ಲಿ ಲಗ್ನವಾದನು.

ರೋಝಾ ಅತ್ಯಂತ ಜಾಣಳೂ ಸುಂದರಳೂ ಆಗಿದ್ದಳಲ್ಲದೆ, ಗೆಳೆಯರ ಗುಂಪನ್ನು ಕೂಡಿಸಿ ಆನಂದದಿಂದ ಕಾಲಹರಣ ಮಾಡುವುದು ಅವಳಿಗೆ ಹೆಚ್ಚು ಸೇರುತ್ತಿತ್ತು. ಇವಳ ಮೂಲಕ ಸ್ಟಾಲಿನ್ನನ ಸ್ವಭಾವದಲ್ಲಿಯೂ ಮಾರ್ಪಾಡಾಗತೊಡಗಿತು. ಮಾಸ್ಕೋದ ಬಳಿಯಲ್ಲಿದ್ದ ಅತನ ಹಳ್ಳಿಯ ಮನೆಯಲ್ಲಿ ಅತನ ನಿಕಟವರ್ತಿ ಗೆಳೆಯರ ಬಳಗ — ವಾರದಲ್ಲೊಂದು ದಿನ ಕೂಡತೊಡಗಿತು. ಈ ಗುಂಪಿನಲ್ಲಿ ನಿಕಿತಾನೂ ಕಾಣಿಸಿಕೊಳ್ಳತೊಡಗಿದನು. ರೋಝಾಳ ಸಲುವಾಗಿಯೇ ಆತ ಕುಣಿಯು ತೊಡಗಿದ, ಹಾಡತೊಡಗಿದ, ಕತೆ ಹೇಳತೊಡಗಿದ. ಇವನು ಸ್ಟಾಲಿನ್‌ನನ್ನು ಕೂಡ ನಗಿಸಿಬಿಡುತ್ತಿದ್ದ.

೧೯೩೪ರಲ್ಲಿ ನಿಕಿತಾ, ಮಾಸ್ಕೋ ಪಕ್ಷದ ದ್ವಿತೀಯ ಕಾರ್ಯದರ್ಶಿಯೆಂದು ನೇಮಕಗೊಂಡನು. ಅದೇ ವರುಷ ಡಿಸೆಂಬರ

೧೯೨೬ರ ತಾರಿಖಿನ ದಿನ. 'ಕೀವ್ಹ್'ನ ಕೊಲೆಯಾಯಿತು. ಕೊಲೆಯು ಕಾರಣವು ಖಾಸಗೀ ಇದ್ದಿತಾದರೂ, ಈ ಘಟನೆಯಿಂದ, ರಾಯಕಾವ್ಹ್, ಬುಖಾರಿನ್ ಟಾಮಸ್ಕಿ ಮುಂತಾದವರ ಮೇಲೆ ದಾಳಿ ಮಾಡಲು ಸ್ಟಾಲಿನ್ನನಿಗೆ ಸುಸಂಧಿ ದೊರೆಕಿದಂತಾಯಿತು. ಆದರೆ ಪಾಲಿಟ್ ಬ್ಯೂರೋಕ್ಕೆ ಇದು ಇಷ್ಟವೆನಿಸಲಿಲ್ಲ. ಸೊಲೊಟೊವ್ಹ್ ಮತ್ತು ಕಗೋನೋವ್ಹಿಚ್ ಇವರಿಬ್ಬರನ್ನು ಬಿಟ್ಟರೆ. ಉಳಿದವರಂತೂ ಸ್ಟಾಲಿನ್ನನ ಈ ಮಾತಿಗೆ ಬೆಂಬಲವನ್ನು ಕೊಡಲಿಲ್ಲ. ತನಗೆ ಬೆಂಬಲ ಸಿಗುವ ಉದ್ದೇಶದಿಂದ ಮತ್ತೆ ಕೆಲವರನ್ನು ಪಾಲಿಟ್‌ಬ್ಯೂರೋದಲ್ಲಿ ಪ್ರವೇಶ ಸಿಗುವುದರ ಬಗೆಗೆ ಪ್ರಯತ್ನ ಮಾತಲಾಯಿತು ಈ ಪಟ್ಟಿಯಲ್ಲಿ ಮೆಲಿನ್‌ಕಾವ್ಹ್, ಕೃಶ್ಚೆವ್ಹ್, ಬೇರಿಯಾ ಈ ಹೆಸರುಗಳು ಅಗ್ರಭಾಗದಲ್ಲಿ ಕಾಣಿಸಿಕೊಂಡುವು.

"ಪಾಲಿಟ್‌ಬ್ಯೂರೋ"ದಲ್ಲಿ ಪ್ರವೇಶ

೧೯೩೫ ಡಿಸೆಂಬರ್ ತಿಂಗಳಲ್ಲಿ ನಿಕಿತಾ, ಮಾಸ್ಕೋಪಕ್ಷದ ಪ್ರಥಮ ಕಾರ್ಯದರ್ಶಿಯಾಗಿಯೂ, ಪ್ರಾದೇಶಿಕ ಪಕ್ಷದ ದ್ವಿತೀಯ ಕಾರ್ಯದರ್ಶಿಯಾಗಿಯೂ ನೇಮಕಗೊಂಡನು. ಈ ರೀತಿಯಾಗಿ ಅತನು ಸ್ಟಾಲಿನ್‌ನ ಭಾವನಾತ ಕಗೋನೋವ್ಹಿಚ್‌ನ ಸಹಾಯಕನಾದನು. ಮಾಸ್ಕೋ ಪಟ್ಟಣದಲ್ಲಿ ಭೂಗತ ರೈಲು ಹಾಕುವ ಯೋಜನೆಯತ್ತ ಅತ ವಿಶೇಷ ಮನವನ್ನು ಕೊಡಲಾರಂಭಿಸಿದನು. ಜನತೆಗೆ ಅವಶ್ಯಕನೆನಿಸುವಂತಹ ಯೋಜನೆಗಳಿಗೆ ಹೆಚ್ಚು ಗಮನ ಕೊಡಬೇಕೇ ವಿನಾ, ಸದ್ಯದ ವೃಷ್ಟಿಯಿಂದ ಅನಾವಶ್ಯಕವಾದಂತಹ ಭೂಗತ ರೈಲಿಗಾಗಿ ಹಣ ವೆಚ್ಚ ಮಾತುವುದು ಒಳಿತಲ್ಲವೆಂದು ಅಕ್ಷೇಪವೆದ್ದಿತು. ಆದರೆ ಜನರ ಈ ಅಕ್ಷೇಪಣೆಯನ್ನು ಸ್ಟಾಲಿನ್ ಮೂಲೆಗೊತ್ತಿದನು. ಮಾಸ್ಕೋದ ಮುಕಾಪೌಷ್ಠಾನದಲ್ಲಿದ್ದ ಬುಲ್ಗಾನಿನ ಪರಿಚಯು ನಿಕಿತಾನಿಗೆ ಇದೇ ಸಮಯದಲ್ಲಾಯಿತು. ಇಬ್ಬರೂ ಕುಶಲರು. ಸಮಾನಶೀಲ-ವ್ಯಸನೇಷು ಸಖ್ಯಂ ಎಂಬಂತೆ, ಇಬ್ಬರಲ್ಲಿ ಗೆಳೆತನ ಬಹುಬೇಗ ಮೂಡಿತು. ಬುಲ್ಗಾನಿನ್‌ನ ತಂಗಿ ನಾದ್ಯಾಳು ರೋಝಾ ಕಗೋನೊವ್ಹಿಚ್‌ಳ ಜೀವದ ಗೆಳತಿಯಾಗಿದ್ದಳು. ಈ ನಾದ್ಯಾಳತ್ತ ನಿಕಿತಾ ತನ್ನ ಸಂಪೂರ್ಣ ಗಮನವನ್ನು ಕೊಡತೊಡಗಿದ. ೧೯೩೭ರಲ್ಲಿ ನಡೆದ ದೊಡ್ಡ ಹತ್ಯಾಕಾಂಡದ ಸಮಯದಲ್ಲಿಯೇ ಸ್ಟಾಲಿನ್‌ನ ಸೂಚನೆಯ ಮೇರೆಗೆ, ನಿಕಿತಾ ಪಾಲಿಟ್‌ಬ್ಯೂರೋದ ಎರಡನೆಯ ವರ್ಗದ ಸಭಾಸದನೆಂದು ಆರಿಸಲ್ಪಟ್ಟನು.

ಉತ್ತರ ಕಾಕೇಶಸ್‌ನಲ್ಲಿಯ ವಿರೋಧಕರನ್ನು ಬಗ್ಗುಬಡಿಯುವುದಕ್ಕೋಸ್ಕರ ನಿಕಿತಾನನ್ನು ಕಳಿಸಲಾಯಿತು. ನಿಕಿತಾ ಈ ಕೆಲಸವನ್ನು ಅತ್ಯಂತ ಯಶಸ್ವೀ ರೀತಿಯಲ್ಲಿ ಪಾರುಗಾಣಿಸಿದನು.

ಯುಕ್ರೇನಿನಲ್ಲಿಯ ಹತ್ಯಾಕಾಂಡ

೧೯೩೮ರಲ್ಲಿ "ಸ್ಟಿಕ್‌ನಿಕ್"ನು ಆತ್ಮಹತ್ಯೆ ಮಾಡಿಕೊಂಡನು. ಯುಕ್ರೇನಿನ ಅಭಿಮಾನಿ ಸ್ಟಿಕ್‌ನಿಕ್‌ನ ಮರಣದಿಂದ, ಯುಕ್ರೇನ್ ಜನತೆ ಕ್ಷೋಭೆಗೊಂಡು ಗಲಭೆಯನ್ನೆಬ್ಬಿಸಿತು. ಆದರೆ ಈ ಗಲಭೆಗಳನ್ನು ಅಗಾಗಲೇ ಬಗ್ಗು ಬಡಿಯಲಾಗುತ್ತಿದ್ದಿತು. ೧೯೩೭ರಲ್ಲಿ ಈ ವಿರೋಧಕರನ್ನು ಸಂಪೂರ್ಣವಾಗಿ ನಿರ್ನಾಮ ಮಾಡಬೇಕೆಂದು ಸ್ಟಾಲಿನ್ ಲೆಕ್ಕ ಹಾಕಿದನು. ಹಕ್ಷದಲ್ಲಿ ಸಂಪೂರ್ಣ ಬಹುಮತದ ಬೆಂಬಲಪಡೆದುಕೊಂಡೇ ಈ ಕೆಲಸ ಮಾಡುವಂತಹ ಮನುಷ್ಯನ ಅವಶ್ಯಕತೆ ಸ್ಟಾಲಿನ್‌ನಿಗಿದ್ದಿತು. ಇದಕ್ಕಾಗಿ ಕಗೋನೋವ್ಹಿಚ್ ಮೊದಲಿಗೆ ಆರಿಸಲ್ಪಟ್ಟನು. ಆದರೆ ಕಗೊನೋವ್ಹಿಚ್ ತಪ್ಪಿಸಿಕೊಂಡ ಹೀಗಾಗಿ ಈ ಕೆಲಸವನ್ನು ನಿಕಿತಾನಿಗೆ ಒಪ್ಪಿಸಲಾಯಿತು. "ನಿಕಿತಾ ಯುಕ್ರೇನಿನವನೇ ಇದ್ದಾನೆ ರಶಿಯನ್ ಮತ್ತು ಜ್ಯೂ ಜನರು ನಮ್ಮ ಕೊಲೆ ಮಾಡಿದರೆಂದು ಅಲ್ಲಿಯ ಜನ ತಿಳಿಕೊಳ್ಳಲು ಅವ್ಕಾಶ ಸಿಗದಂತೆ ಮಾತಬೇಕಾದರೆ ನಿಕಿತಾನನ್ನೇ ಅಲ್ಲಿಗೆ ಕಳಿಸತಕ್ಕದ್ದು" ಎಂಬ ಮಾತು, ಸ್ಟಾಲಿನ್‌ನ ಮೇಲೆ ಪರಿಣಾಮ ಮಾಡಿತು. ಈ ಕಾರಣದಿಂದ ನಿಕಿತಾ ಕೇವಲ ೯ ವರ ಷಗಳ ಅವಧಿಯಲ್ಲಿಯೇ ಪಕ್ಷದ ಮುಖ್ಯ ಕಾರ್ಯದರ್ಶಿಯೆಂದು ನೇಮಕಗೊಂಡು 'ಕೀವ್ಹ್'ಕ್ಕೆ ಮರಳಿ ಬಂದನು.

ಯುಕ್ರೇನಿಗೆ ಬಂದಕೂಡಲೇ ನಿಕಿತಾ —ಅಲ್ಲಿಯ ಕೌನ್ಸಿಲ್ ಅಧ್ಯಕ್ಷ ಲುಬಿಶೆಕೋನನ್ನು ಕೈದುಮಾಡುವ ಬಲೆಯನ್ನು ಹೂಡಿದನು ಆದರೆ ಇದು ತಿಳಿದಾಗ್ನಣ ಲುಬಿಶೇಕೋ ಆತ್ಮಹತ್ಯೆಯನ್ನು ಮಾಡಿಕೊಂಡನು. ಮುಂದೆ ಎಲ್ಲ ವಿರೋಧಕರನ್ನೂ ಸೆರೆಹಿಡಿದು ದಂಡಿಸುವ ಕಾಯಿದೆಯನ್ನು ಪಾಸುಮಾಡಿಕೊಂಡು, ಅಂಥವರ ಗಾದಿಯನ್ನು ಸಿದ್ಧಪಡಿಸಿ, ನಿಕಿತಾ ಅವರನ್ನು ಪೋಲೀಸ್ ಖಾತೆಗೆ ಒಪ್ಪಿಸಿದನು. ಬಂಧನದ ಸತ್ರವೇ ನಡೆಯಿತು. ೧೯೩೯ರಲ್ಲಿ ಬೇರಿಯಾನನ್ನು ಕೊನೆಗಾಣಿಸುವಾಗ, ನಿಕಿತಾ ಇದೇ ತಂತ್ರವನ್ನು ಬಳಸಿದನು ಲುಬಿಶೆಕೋನ ಮರಣದ ನಂತರ ಒಂದು ವಾರದಲ್ಲಿಯೇ ಪಕ್ಷದ ಸಾಧಾರಣ ಸಭೆಯು ಕೂಡಿತು. ಈ ಸಭೆಯು ನಿಕಿತಾ ನಡೆಸಿದ ಬಂಧನಸತ್ರವನ್ನು ಮಾನ್ಯಮಾಡಿತು.

ಈ ಸಮಯದಲ್ಲಿ ಯುಕ್ರೇನಿನ ಪ್ರಶ್ನೆ ಬಹಳ ನಾಜೂಕಿನ ದಾಗಿತ್ತು. ಅತ್ತ ನಾಝಿ ಜರ್ಮನಿಯು ಸಾಮರ್ಥ್ಯ ಬೆಳೆಯುತ್ತಿತ್ತು. ಯುಕ್ರೇನಿನಲ್ಲಿ ಅಸಂತೋಷದ ಜತೆಯಲ್ಲಿ ರಾಷ್ಟ್ರೀಯ ಭಾವನೆ ಬಲಗೊಳ್ಳುವುದು ಪ್ರಯಾಸದಾಯಕನೆನಿಸುತ್ತಿತ್ತು. ಒಂದು ಬದಿಯಲ್ಲಿ ನಿರೋಧಕರನ್ನು ದಂಡಿಸುತ್ತಿದ್ದ ನಿಕಿತಾ, ಯುಕ್ರೇನಿನಲ್ಲಿಯ ರಾಷ್ಟ್ರೀಯಭಾವನೆ ಬೆಳೆಸುತ್ತಿರುವ ತಂಡದವರ ಜತೆಯಲ್ಲಿ ಅನುಕೂಲ ಧೋರಣವನ್ನಿಟ್ಟಂತೆ ನಟಿಸಿದನು ಇವರ ಪರಿಣಾಮವಾಗಿ ಯುಕ್ರೇನೀ ಲೇಖಕರ ಗ್ರಂಥಗಳ ಮುದ್ರಣ ಪ್ರಾರಂಭವಾಯಿತು. ಯುಕ್ರೇನ್ ಸಂಗೀತ ಮತ್ತು ನೃತ್ಯಗಳಲ್ಲಿ ನಿಕಿತಾ ಭಾಗವಹಿಸತೊಡಗಿದ.

ರುಸೋ-ಜರ್ಮನ್ ಕಾಳಗಕ್ಕೆ ನಿಕಿತಾ ಅನುಕೂಲ ಮನವನ್ನಿತ್ತಿದ್ದ. ಮೊದಲನೆಯ ಮಹಾಯುದ್ಧದಲ್ಲಿ ಕಳೆದುಕೊಂಡ ಯುಕ್ರೇನಿನ ಕೆಲವು ಭಾಗವನ್ನು ಮರಳಿ ಜರ್ಮನಿಯು ಸಹಾಯದಿಂದ ಪಡೆಯಬೇಕೆಂದು ನಿಕಿತಾ ಲೆಕ್ಕಹಾಕಿದ್ದನು. (ಸಶೇಷ)

ಈ ಸಲದ ಕನ್ನಡ ಸಾಹಿತ್ಯ ಸಮ್ಮೇಲನ

('ವಿಹಂಗಮ'ನ ವರದಿ)

೧೯೩೮ನೆಯ ವರುಷ ಬಳ್ಳಾರಿಯಲ್ಲಿ ನಡೆದ ೨೩ನೆಯ ಸಾಹಿತ್ಯ ಸಮ್ಮೇಲನದ ಬಗ್ಗೆ ಕೇಳಿದ್ದೆ. ಆ ಸಮ್ಮೇಳನ ಸಮಾರಂಭದ ವಿವರಿಯುನ್ನೆಲ್ಲ ಕೇಳಿ ಆನಂದಿಸಿದ್ದೆ. ಬಳ್ಳಾರಿ ಹಣವಂತರ ನಗರ; ಕನ್ನಡ ರಾಜ್ಯಕ್ಕೆ ಸೇರಿದಂದಿನಿಂದ ಅಲ್ಲಿಯ ಜನರ ಹುರುಪು ಹುಮ್ಮಸ ಹೆಚ್ಚಾಗಿರಬೇಕು. ಎಂದಮೇಲೆ ಈ ಸಲದ ಸಮ್ಮೇಳನ ಇನ್ನೂ ವಿಜೃಂಭಣೆಯಿಂದ ನಡೆಯುವುದೆಂದು ನಿರೀಕ್ಷಿಸಿದ್ದೆ.

ಧಾರವಾಡದಿಂದ ರಾತ್ರಿಯ ಗಾಡಿಗೆ ನಾವೆಲ್ಲ ಹೊರಟಿವು. ನಾವೆಲ್ಲ ಸಾಹಿತ್ಯಯಾತ್ರಿಕರು ಒಂದೆಡೆ ಸೇರಿದ್ದೆವು. ಹುಬ್ಬಳ್ಳಿಯಿಂದಲೇ ಮಲಗಲು ವ್ಯವಸ್ಥೆಯನ್ನು—ಪ್ರಯತ್ನಪೂರ್ವಕವಾಗಿ—ಮಾಡಿಕೊಂಡು, ಬಳ್ಳಾರಿಯನ್ನು ಬೆಳಗಿನ ೬ ಗಂಟೆಗೆ ಸೇರಿದೆವು. ಇಳಿದ ಎಲ್ಲರ ಗಂಟು-ಕೈಚೀಲ-ಟ್ರಂಕುಗಳನ್ನು, ಸ್ವಯಂಸೇವಕರು ಎತ್ತಿ ನಿಲ್ದಾಣದ ಹೊರಭಾಗಕ್ಕೆ ಒಯ್ದರು. ಸ್ವಯಂಸೇವಕರ ಸಂಖ್ಯೆಯನ್ನು ನೋಡಿದರೆ, ಒಂದು ಕೈಚೀಲವನ್ನು ಇಬ್ಬರು ಹೊರಬೇಕಾಗುತ್ತಿತ್ತು! ಅವರ ಶಿಸ್ತು ಮತ್ತು ಸರಳತೆಯನ್ನು ಕಂಡಾಗ ನಮಗೆಲ್ಲರಿಗೂ ಸಂತೋಷವಾಯಿತು. ಒಂದು ಚಿಕ್ಕ ಬಸ್ಸು ಬಂದು ನಮ್ಮನ್ನೆಲ್ಲ ಊರಲ್ಲಿ ಕರೆದೊಯ್ದಿತು. ಬೇರೆ ಬೇರೆ ಭಾಗದವರಿಗೆ ಒಂದೊಂದು ಹೈಸ್ಕೂಲಿನಲ್ಲಿ ಇಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಿದ್ದರು. ಪತ್ರಿಕಾ ಪ್ರತಿನಿಧಿಗಳಿಗೆ ಮಾತ್ರ ಮೈಸೂರು ಬ್ಯಾಂಕಿನ ಮೇಲಂತಸ್ತಿನಲ್ಲಿದ್ದ ಕೋ-ಆಪರೇಟಿವ್ ಸ್ಟೋರ್ಸ್‌ನಲ್ಲಿ ವ್ಯವಸ್ಥೆ ಮಾಡಿದ್ದರು. ಅಲ್ಲಿ ಇಪ್ಪತ್ತಕ್ಕೆ ಮೇಲ್ಪಟ್ಟು ಪತ್ರಿಕಾ ಪ್ರತಿನಿಧಿಗಳು ಬಂದಿದ್ದರು. ಅಲ್ಲಿಯೇ ಸಾಹಿತ್ಯ ಪರಿಷತ್ತಿನ ಕೆಲ ಪ್ರತಿಷ್ಠಿತ ಜನರೂ ಆಮಂತ್ರಿತ ಹಿರಿಯರೂ ಇದ್ದರು.

ಎಂಟು ಗಂಟೆಗೆ ಬ್ರೆಕ್‌ಫಾಸ್ಟ್ ಮುಗಿಸಿ, ಬಳ್ಳಾರಿಯ ಸೊಬಗನ್ನು ನೋಡುವ ಕುತೂಹಲದಿಂದ, ಟಾರ್‌ರೋಡಿನಲ್ಲಿ ಅಡ್ಡಾಡಿದೆವು. ದೂರದ ಗುಡ್ಡದ ಮೇಲಿನ ಕೋಟೆಯನ್ನು ತೋರಿಸಿ ಅದು 'ಟೀಪ್ಪು' ಕಟ್ಟಿಸಿದ ಕೋಟೆಯೆಂದು ಅಲ್ಲಿಯ ಜನ ಹೇಳಿದರು. ಬಹಳ ದೂರ ಇದ್ದುದರಿಂದ ಅದರ ಪೂರ್ಣ ಕಲ್ಪನೆ ನಮಗೆ ಬರಲಿಲ್ಲ.

ಕೆಲಸವಿಲ್ಲದ ಮೇಲೆ ಊಟದೆಡೆಗೆ ಲಕ್ಷ್ಯ ತೆರಳುವುದು ಸಹಜ. ಅದರ ದಾರಿಯನ್ನೇ ಕಾಯುತ್ತಿದ್ದ ನಾವು ಮೊದಲನೆಯ ಪಂಕ್ತಿಗೇ ಊಟ ಮಾಡಿದೆವು ಬರೀ ಅನ್ನವಾದುದರಿಂದ ನಮಗೆ ಬೇಸರ ಬಂದಿತು; ಆದರೆ ಇಲ್ಲಿಯ ಅಕ್ಕಿ ಮೇಲ್ತರಗತಿಯದು. ಜೊತೆಗೆ ಉಪ್ಪಿನಕಾಯಿ, ಹಪ್ಪಳ ಮೊದಲಾದ ವ್ಯಂಜನಗಳಿದ್ದುದರಿಂದ, ಅಡ್ಡಿ ಇಲ್ಲ—ಎಂದುಕೊಂಡೆವು.

ಮಧ್ಯಾಹ್ನದಲ್ಲಿ ಶ್ರೀ. ದೇವುಡು ನರಸಿಂಹಶಾಸ್ತ್ರಿಗಳನ್ನು ಭೆಟ್ಟಿ ಆಗಿದ್ದೆವು. ನನ್ನ ಜೊತೆಗಿದ್ದ ಮಿತ್ರ 'ರಾಜ'ರೆಂದರು:—'ನಿನ್ನ ಮಹಾಬ್ರಾಹ್ಮಣ ಓದಿದ್ದೇನೆ,' ಶ್ರೇಷ್ಠವಾದ ಕೃತಿ'— ಅದಕ್ಕೆ ಶಾಸ್ತ್ರಿಗಳು 'ಹೀಗೋ'; ಎಂದು ನಕ್ಕರು. 'ನಾನು ಆದರ ಬಗ್ಗೆ ಬರೆಯಬೇಕೆಂದಿದ್ದೇನೆ' ಎನ್ನಲು ಶಾಸ್ತ್ರಿಗಳು—'ಅಧಿಕಾರದಲ್ಲಿದ್ದವರ ಬಗ್ಗೆ ಬರೆದರೆ ನಿಮಗೆ ಮುಂದೆ ನೌಕರಿಯಾದರೂ ದೊರೆತೀತು. ನನ್ನ ಕೃತಿಯ ಬಗ್ಗೆ ಬರೆಯುವ ಶ್ರಮ ವಹಿಸಬೇಡಿ. ಅದನ್ನು ಓದಿದರೆ ಆತ್ಮೋದ್ಧಾರಕ್ಕೆ ಉಪಯೋಗಿಸಿಕೊಳ್ಳಿ' ಎಂದರು. ಇದು ಅಪ್ರಿಯ. ವಾಗಿದ್ದರೂ ಸತ್ಯವಾಗಿತ್ತು. ಯಾವ ಅಧಿಕಾರವೂ ಇಲ್ಲದ, ಜನರ ಭಾವಪೂರ್ಣ ಬೆಂಬಲವಿಲ್ಲದ—ಅತ್ಯುತ್ತಮ ವರ್ಗದ—ಕೆಲ ಸಾಹಿತಿಗಳು ಕನ್ನಡದಲ್ಲಿದ್ದಾರೆ; ಅವರಿಗೆ ಸಲ್ಲಬೇಕಾದ ಗೌರವ ನಾವು ಸಲ್ಲಿಸಿಲ್ಲ. ಆ ಜನ ಕೀರ್ತಿಯನ್ನೋ ಶ್ರೇಯಸ್ಸನ್ನೋ ಬಗೆದಿಲ್ಲ. ಸ್ಪರ್ಶಮಣಿಯಂತೆ ತಮ್ಮ ಹತ್ತಿರ ಬಂದವರನ್ನೆಲ್ಲ ಬಂಗಾರವಾಗಿಸಿ—ಯಾರಿಗೂ ಗೊತ್ತಾಗದಂತೆ—ಪ್ರಚಾರವಿಲ್ಲದೆಯೆ ತಮ್ಮ ಜೀವನದ ಸಾಧನೆಯ ತತ್ತ್ವದಲ್ಲಿ ಮಗ್ನರಾಗಿದ್ದಾರೆ! 'ಇಂತಹ ಕೆಲ ಪುಣ್ಯ ಪುರುಷರ ಋಣವನ್ನು ಕನ್ನಡ ತರುಣರು ತೀರಿಸುವ ಕಾಲವು—ಎಚ್ಚರವು—ಬರುವುದೇ!' ಎಂದುಕೊಂಡೆ.

ಇಂದು ಮಧ್ಯಾಹ್ನ ನಡೆದ ಮೆರವಣಿಗೆ ಕಾರುಗಳ ಮೆರವಣಿಗೆ ಆಗಿತ್ತು. ಜನಸಂದಣಿಯ ಮಧ್ಯದಲ್ಲಿ ಪಾರಾಗಿ ಮೆರವಣಿಗೆಯನ್ನು ನೋಡುವುದು ಸಾಹಸದ ಮಾತಾಗಿತ್ತು. ಕೊನೆಗೆ ಇದ್ದ ಒಂದು ಮೋಟಾರಿನಲ್ಲಿ—ಅಧ್ಯಕ್ಷರು ಕುಳಿತಿರುವುದನ್ನು ಕಂಡೆನು. ಆದರೆ ಹಿಂದಿನ ಸಲದ ಮೆರವಣಿಗೆಯನ್ನು ನೆನೆದುಕೊಂಡಾಗ, ಇದು ತೃಪ್ತಿಕರವೆಂದೆನಿಸಲಿಲ್ಲ.

೪—೦ಕ್ಕೆ ಸಮ್ಮೇಲನ ಪ್ರಾರಂಭವಾಗಬೇಕಾಗಿತ್ತು: ಆದರೆ ಮಹಾರಾಜರು ಬರಲು ವಿಲಂಬವಾದುದರಿಂದ, ಅರ್ಧ ತಾಸು ತಡ ಆಯಿತು. ಜನಜಂಗುಳಿಯ ಗೊಂದಲವನ್ನು ಕಂಡಾಗ ನನಗೆ ಬನಶಂಕರೀ ಜಾತ್ರೆಯ ನೆನಪಾಯಿತು. ಬಳ್ಳಾರಿಯ ಬಿ. ಡಿ. ಎ. ವೈದಾನಿನಲ್ಲಿ ವಿಜಯನಗರ ಮಂಟಪವು ಸಿದ್ಧವಾಗಿತ್ತು. ರಸ್ತೆಗೆ ಒಂದು ಮಂಟಪವನ್ನು ಕಟ್ಟಿದಂತೆ ಮಾಡಿ, ಶ್ರೀವಿರೂಪಾಕ್ಷ ದೇವಾಲಯದ ಚಿತ್ರ ಬರೆಸಿದ್ದರು. ದೂರದಿಂದ ನೋಡುವವರಿಗೆ ಮಂದಿರದಂತೆ ಅದು ಭಾಸವಾಗುತ್ತಿತ್ತು. ೪—೩೦ಕ್ಕೆ ಮೊದಲೇ ನಾವೆಲ್ಲ ಒಳಗೆ ಕಾದಿದ್ದೆವು. ಬಳ್ಳಾರಿಯ ಬಿಸಿಲು ನಮ್ಮ ಪ್ರತ್ಯೇಂದ್ರಿಯಕ್ಕೆ ಬುದ್ಧಿ ಕಲಿಸುತ್ತಿತ್ತು. ವೈದಾನಿನ ನಡುವೆ ಒಂದು ದೊಡ್ಡ ಹಂದರವನ್ನು

ಹಾಕಿದ್ದರು. ಮೇಲೆ ಹೊದಿಕೆಯನ್ನು ಹಾಕಿದ್ದರಾದರೂ, ಎಡಬಲಕ್ಕೆ ಯಾವ ಚಾಟೂ ಇಲ್ಲದ್ದರಿಂದ, ಕುಳಿತವರಿಗೆ ಬಿಸಿಲಿನ ತೊಂದರೆ ಯಾಗುತ್ತಿತ್ತು. ಎಲ್ಲ ಪ್ರತಿನಿಧಿಗಳೂ ನೆಲದ ಮೇಲೆಯೇ ಕೂಡ ಬೇಕಾಗುತ್ತಿತ್ತು. ಅಲ್ಲಿ ಹುಲ್ಲು ಕೂಡ ಸಾಕಷ್ಟು ಬೆಳೆದಿರಲಿಲ್ಲ. ಹೀಗಾಗಿ ನಿಲ್ಲುವ ಜನ ಬಹಳವಾಯಿತು. ಮರುದಿನ ಕೆಲವು ಚಾಪೆಗಳನ್ನು ಹಾಸಿ ಅನುಕೂಲತೆ ಮಾಡಲು ಪ್ರಯತ್ನಿಸಿದ್ದರು. ತುಂಗಭದ್ರಾನದಿಯ ಆಣೆಕಟ್ಟಿನಲ್ಲಿ ಕೆಳಗೆ ನೀರು ದುಮ್ಮಿಕ್ಕಿ ಬರುವಂತೆ, ಜನ ಎರಡು ಮೂರು ಬಾಗಿಲುಗಳಿಂದ ಒಳಗೆ ನುಗ್ಗಿ ಬರುತ್ತಿದ್ದರು. ಜನರ ಅಂದಾಜು ಕಟ್ಟುವುದು ಸಾಧ್ಯವಾಗಲಿಲ್ಲ. ಕೆಲವರು ೨೦ ಸಾವಿರ ಎಂದರೆ ಕೆಲವರು ಮೂವತ್ತು ಸಾವಿರವೆಂದರು. 'ಸಾಹಿತ್ಯ ಸಮ್ಮೇಲನದಲ್ಲಿ ಜನರಿಗೆ ಇಷ್ಟು ಆಸ್ಥೆಯೇ ?'ಎಂದು ನಾನು ಬೆರಗಾದೆ !

ಪ್ರಾರ್ಥನಾಗೀತ ಹಾಗೂ ಸ್ವಾಗತ ಗೀತಗಳಾದುವು. ಗಮಕ ಕಲಾನಿಧಿಗಳ ಧ್ವನಿಯು ಗಾಂಭೀರ್ಯ ಸಭಿಕರ ಗೊಂದಲವನ್ನು ಕಡಿಮೆ ಮಾಡಿತು. ಸಿದ್ಧ ವೇದಿಕೆಯ ಮೇಲೆ ನೂರಾರು ಪ್ರತಿಷ್ಠಿತ ಜನ ಕುಳಿತಿದ್ದರು. ಸ್ವಾಗತಾಧ್ಯಕ್ಷರಾದ ಶ್ರೀ. ವೈ. ನಾಗೇಶಶಾಸ್ತ್ರಿ-ಗಳು ತಮ್ಮ ಭಾಷಣವನ್ನು ಓದಿದರು. ರಾಜ್ಯಪಾಲರ, ಅಧ್ಯಕ್ಷರ, ಹಾಗೂ ಸಾಹಿತ್ಯ ಪರಿಷತ್ತಿನ ಪರಿಚಯ ಮಾಡಿಕೊಟ್ಟು, ಈ ಸಲದ ಸಮ್ಮೇಲನದ ಬಗ್ಗೆ, ಬಳ್ಳಾರಿ ಪ್ರಾಂತದ ಬಗ್ಗೆ ಹೇಳಿದರು. ಬಳ್ಳಾರಿ ಪಟ್ಟಣದ ಇತಿಹಾಸವನ್ನು ಹೇಳಿ—" ಈಗ ಕನ್ನಡದ ಪ್ರಾಂತವು ಒಂದುಗೂಡಿದಂತೆ ಕನ್ನಡಿಗರ ಮನವೂ ಒಂದುಗೂಡಬೇಕಾಗಿದೆ. ಸುಸಂಸ್ಕೃತ ಮನಸ್ಸುಗಳಲ್ಲಿ ಒಂಮಗೂಡುವ ಉದಾರ ಭಾವವಿರುವು-ದೆಂದು ನಾವು ನಂಬಬಹುದಾದರೆ, ಆ ಸುಸಂಸ್ಕೃತಿಯ ಮಾತೃಸ್ಥಾನವೇ ಸಾಹಿತ್ಯವೆಂಬುದನ್ನು ಮರೆಯಬಾರದು " ಎಂದು ಹೇಳಿದರು. ನಂತರ ಸಂದೇಶ ವಾಚನಾದಿಗಳು, ರಾಜ್ಯಪಾಲರಿಗೆ ವಿನ್ನವತ್ತಳೆ.

ಸಮ್ಮೇಳನದ ಉದ್ಘಾಟನಾ ಸಮಾರಂಭದ ಭಾಷಣವನ್ನು ರಾಜ್ಯಪಾಲರು ಓದಿದರು. ಸಾಹಿತ್ಯಪರಿಷತ್ತು ಕನ್ನಡನಾಡಿನ, ಭಾಷೆಯ ಮತ್ತು ಸಾಹಿತ್ಯದ ಪುರೋಭಿವೃದ್ಧಿಗೆ ಸಹಾಯಕಾರಿಯಾಗಿ ಮಾಡಿದ ಕೆಲಸವನ್ನು ಶ್ಲಾಘಿಸಿದರು. 'ಹೃದಯಗಳ ಏಕೀಕರಣ ಹುರುಪಿನಿಂದ ಸಾಗಲಿ' ಎಂದು ಹಾರೈಸಿದರು.

ಸಮ್ಮೇಳನಾಧ್ಯಕ್ಷರ ಆಯ್ಕೆಯ ಕಾರ್ಯ ನಡೆಯಿತು. ಹಿಂದಿನ ಸಮ್ಮೇಳನಾಧ್ಯಕ್ಷರಾದ ಶ್ರೀ ಕುವೆಂಪು ಅವರು ಬಾರದ್ದರಿಂದ, ಅವರು ಬರೆದ ಪತ್ರವನ್ನು ಶ್ರೀ. ಕೋ. ಚೆನ್ನಬಸಪ್ಪನವರು ಓದಿದರು ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಮೊದಲಾದವರು ಅನು-ಮೋದಿಸಿದರು.

ಅಧ್ಯಕ್ಷರಾದ ಶ್ರೀ ವಿನಾಯಕ ಕೃಷ್ಣ. ಗೋಕಾಕರು ತಮ್ಮ ಭಾಷಣವನ್ನು ಓದಿದರು. ಭಾಷಣದಲ್ಲಿ ಏಳು ಭಾಗಗಳನ್ನು ಮಾಡಿ ದರು. ವಿಶ್ವಮಾತೆಯನ್ನು, ಭಾರತ ಮಾತೆಯನ್ನು ಹಾಗೂ ಕನ್ನಡ ಮಾತೆಯನ್ನು ವಂದಿಸಿ—ಬರೆದ ಮೂರು ಪದ್ಯಗಳನ್ನು ಓದಿ, ಅನಂತರ ಮೊದಲನೆಯ ಭಾಗವಾದ ನಿವೇದನೆಯನ್ನು ಓದಿದರು. ಗಾಳಿ ತೂರಿದ ಬೀಜದಂತೆ ಚೆಲ್ಲಾಪಿಲ್ಲಿಯಾದ ತಮ್ಮ ಬಾಳಿನ ರೀತಿ-



ಯನ್ನು ವಿವರಿಸುತ್ತ, ಪುಣೆ ಸಾಂಗಲಿ ಕೊಲ್ಲಾಪುರದಲ್ಲಿ ಸುಮಾರಾಷ್ಟ್ರೀಯನಾಗಿ, ಹೈದರಾಬಾದದಲ್ಲಿ ಆಂಧ್ರನಾಗಿ, ಗುಜರಾತಿನಲ್ಲಿ ಗುಜರಾತಿಯಾಗಿ ವಿವಿಧ ಭಾಷೆಗಳ ಸಾಹಿತ್ಯ ಸಂಸ್ಕೃತಿಗಳ ಸಂಪರ್ಕ ದಲ್ಲಿ ಬೆಳೆದ ಬಗ್ಗೆ ಹೇಳಿದರು. ತಮ್ಮ ವಿಕಾಸ ಸಂಚಿಕೆಯ ವಿವಿಧ ಲೇಖನಗಳಲ್ಲಿ ಕಂಡಿದ್ದಾರೆ. ಸೌಂದರ್ಯ, ಕಲ್ಯಾಣ, ಸತ್ಯ, ಪ್ರಕಾಶ ಮತ್ತು ಶಕ್ತಿಗಳು—" ಊರ್ಧ್ವಮೂಲಃ ಅಧಃ ಶಾಖೀ " ಆದ ಸನಾತನ ಅಶ್ವತ್ಥವೃಕ್ಷದ ಬೇರುಗಳಂತೆ ಕಂಡಿದ್ದಾರೆ.

೨) ಇಂದಿನ ಮಾನವಧರ್ಮ ಎಂಬ ಭಾಗದಲ್ಲಿ—" ಸ್ಪುಟ್‌ನಿಕ್-ಯುಗ ಬಂದು ನಾಶದ ಭಯವನ್ನು ಹುಟ್ಟಿಸಿದೆ; ಆದರೆ ತಪ ವನ್ನಾಚರಿಸಿದವರು ಹೊಸ ಜಗದ ಭರವಸೆಯನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಅನ್ನಮಯದ ಹಾಗೂ ಪ್ರಾಣಮಯದ ಪ್ರಶ್ನೆಗಳು ಉದ್ಭವ ವಾಗಿ ಧಾರ್ಮಿಕದೃಷ್ಟಿ ಮಂಕಾಗಿದೆ. ಸಚ್ಚಿದಾನಂದವು ಚತು-ರ್ಮುಖ ಬ್ರಹ್ಮನಂತಿದೆ. ೧) ಸಮಾಜದ ಸಾಮರಸ್ಯ ೨) ನಿಸ-ರ್ಗದ ಗೂಢತತ್ವಗಳ ಪರಿಶೋಧನ ಹಾಗೂ ಪರಿಚಿಂತನ ೩) ಪರಾಪ್ಪರ ಶಕ್ತಿಯ ಧ್ಯಾನ, ಮನನ ೪) ಚೈತ್ಯ ಪುರುಷನ ವಿಕಾಸ. ಇದರ ಸಮನ್ವಯ ದೃಷ್ಟಿ ಮಾನವನಿಗೆ ಬರಬೇಕು" ಎಂದಿದ್ದಾರೆ

೩) ಆಧುನಿಕ ಭಾರತೀಯ ಸಂಸ್ಕೃತಿ ಎಂಬ ಭಾಗದಲ್ಲಿ—ಭಾರತೀಯತೆ ಎಂದರೇನೆಂಬ ಪ್ರಶ್ನೆ—ವಿವಿಧ ಧರ್ಮಗಳ ಸಮನ್ವಯ, ವಿವಿಧ ಭಾಷೆಗಳ ದರ್ಶನಗಳ ಸಮನ್ವಯ ಭಾರತದಲ್ಲಿದೆ. ಪೂರ್ವಾ-ರ್ಜಿತ ಆಸ್ತಿಯಾಗಿ ಬಂದ ದರ್ಶನ-ಸಿದ್ಧಾಂತಗಳ ಉಪಯೋಗವಿಷ್ಟೇ; ವ್ಯಕ್ತಿಯ ಜೀವನದಲ್ಲಿ ವ್ಯಕ್ತಿಗತ ಒಲವುಗಳಂತೆ ಅವುಗಳಿಗೆ ಸ್ಥಾನ. ವಿನಃ, ರಾಜಕೀಯ-ಸಾಮಾಜಿಕ ಜೀವನದಲ್ಲಿ ಅವುಗಳಿಗೆ ಸ್ಥಾನವಿಲ್ಲ. ವ್ಯಕ್ತಿಯ ಮುಕ್ತಿ-ವಿಮುಕ್ತಿಗಾಗಿ ಅಲ್ಲ—ಸಮಷ್ಟಿಯ ಮುಕ್ತಿಗಾಗಿ; ವಿಶ್ವದ ವಿಕಾಸಕ್ಕಾಗಿ. ಪೂರ್ಣ ದೃಷ್ಟಿಯನ್ನು ಪಡೆಯಲು ಪತ-ವಣದ ನೆರವೂ ಬಲುಮೆಯ ಸಾನ್ನಿಧ್ಯವೂ ಅಗತ್ಯವಾದುವು.

೪) ಕನ್ನಡಿಗನಾರು ? ಎಂಬ ಭಾಗದಲ್ಲಿ—ಕನ್ನಡಿಗನು—ತೆಲುಗನಲ್ಲ, ತಮಿಳನಲ್ಲವೆಂದು 'ನೇತಿ'ಯ ಹಾದಿಯ ಉತ್ತರ ಹೇಳ ಬೇಕಾಗುವುದು. ಕನ್ನಡಕ್ಕೆ ದುಡಿದವರಲ್ಲಿ ಅನೇಕರ ಮೂಲ

ಭಾಷೆ ಬೇರೆಯಾಗಿದೆ. ಭಾಷಾವ್ಯತ್ಯಾಸದಿಂದ ಆಯುದು ಕನ್ನಡಿಗ, ಉಂಟು ಕನ್ನಡಿಗ, ಹೌಂದು ಕನ್ನಡಿಗ, ಹೌದು ಕನ್ನಡಿಗರು ಉಚ್ಚವಿಸಿದ್ದು; ಇದಲ್ಲದೆ ಉದರಗನ್ನಡಿಗ, ತಲೆಗನ್ನಡಿಗ, ಕ್ರಿಸ್ತ, ಶೈವ, ವೈಷ್ಣವಗನ್ನಡಿಗರೂ ಉಂಟು. ಕನ್ನಡಕಬ್ಬ ಸಪ್ತವರ್ಣದ ಇಂದ್ರಧನುವಿನಂತಿದೆ. ಒಂದೇ ಬಣ್ಣದಲ್ಲಿ ವಿಜ್ಞಾನಿ ಏಳುಬಣ್ಣ ಕಾಣುತ್ತಾನೆ.

(೫) ಕನ್ನಡದ ಕೊರತೆಗಳು–೧) ಸಮ್ಮೇಲನವು ಒಂದು ಉತ್ಸವ. ಸಮ್ಮೇಲನದ ಅಧ್ಯಕ್ಷ ಒಂದು ಉತ್ಸವಮೂರ್ತಿಯಾಗಿ ಉಳಿಯಬಾರದು. ಸಾಹಿತ್ಯ ಸಂಸ್ಕೃತಿಗೆ ಸಹಾಯಕಾರಿಯಾಗುವ ಗೋಷ್ಠಿ, ಅಭ್ಯಾಸಮಂಡಲ ಏರ್ಪಡಿಸುವ ಬಗ್ಗೆ ಪರಿಷತ್ತು ವಿಚಾರಿಸಬೇಕು. ೨) ಬೇರೆ ಸಾಹಿತ್ಯ ಸಮ್ಮೇಲನಗಳಿಗೆ ಪ್ರತಿನಿಧಿಗಳನ್ನು ಕಳಿಸಬೇಕು. ೩) ಅಂತರ್ ಪ್ರಾಂತೀಯ ಸಾಹಿತ್ಯಸಮ್ಮೆಲನ ಕರೆಯಬೇಕು. ೪) ಸಾಹಿತಿಗಳ ಸಂಕೂಟ (ಸೆಮಿನಾರ್) ಕರೆಯಬೇಕು. ೫) ಪ್ರಾತಿನಿಧಿಕ ಪುಸ್ತಕಭಾಂಡಾರವಾಗಬೇಕು. ೬) ಒಳ್ಳೆಯ ಅಜ್ಞಾತ ಕೃತಿಗಳ ಪ್ರಕಾಶನ ೭) ಹೊರನಾಡ ಕನ್ನಡಿಗರು ಕನ್ನಡ ಭಾಷೆಯ ಜೀವಂತ ಸಂಪರ್ಕ ಇಡಬೇಕು. ೮) ಅಂತರ್ ಪ್ರಾಂತೀಯ ಪ್ರಾತಿನಿಧ್ಯ ಪಡೆಯಲು Short-hand ಹಾಗೂ Type ಅಗತ್ಯ. ವಿಶ್ವಕೋಶ ಆಗಬೇಕು. ಕನ್ನಡ ಅಭ್ಯಾಸದೊತನೆ ಆಂಗ್ಲ ವಿಜ್ಞಾನ ಶಾಸ್ತ್ರವನ್ನಿಡಬೇಕು. ವಿವಿಧ ಸಾಹಿತ್ಯಪ್ರಕಾರಗಳ ಇತಿಹಾಸ ಸಮಾಲೋಚನೆಯಾಗಬೇಕು.

ಕನ್ನಡದಲ್ಲಿಯ ಕೊರತೆಗಳನ್ನು ವಿವರಿಸಿ, ಭಾಷಣದ ಕೊನೆಗೆ–ಕನ್ನಡ ನಾಡಿನಲ್ಲಿ ಸಂಚರಿಸುತ್ತಿರುವ ವಿಶ್ವಮಾನವ ಶ್ರೀ ವಿನೋಬಾ ಅವರ ಬಗ್ಗೆ ಹೇಳಿ ಮುಗಿಸಿದ್ದಾರೆ. ಇದು ೪೬ ಪುಟಗಳ ದೊಡ್ಡ ಭಾಷಣ. ಇದರಲ್ಲಿಯ ಕೆಲವು ಭಾಗಗಳನ್ನು ಓದಿ ಕೆಲವು ಭಾಗದ ಸಾರಾಂಶವನ್ನು ಬಾಯಿಂದಲೇ ಹೇಳಿ ಪುಟಗಳನ್ನು ಹಾರಿಸಿದರು. ಸಮಯದ ನಿರ್ಬಂಧದ ಮೂಲಕ ಅಧ್ಯಕ್ಷರು ೨–೩ ಸಲ ವಾಚು ನೋಡಿಕೊಂಡರು. ಮೂವತ್ತು ನಿಮಿಷಗಳಲ್ಲಿಯೇ ತಮ್ಮ ಭಾಷಣ ಮುಗಿಸಿದರು. ಭಾಷಣದಿಂದಾದ ಪರಿಣಾಮದ ಬಗ್ಗೆ ಹೇಳಬೇಕೆಂದರೆ, ಬಳ್ಳಾರಿಯ ಸುಶಿಕ್ಷಿತ ವೃದ್ಧರೊಬ್ಬರು–'Masterly written and masterly summarised !' ಎಂಬ ಉದ್ಗಾರ ತೆಗೆದರು.

ಇನ್ನೂ ಪೂರ್ಣ ಕತ್ತಲೆಯಾಗಿರಲಿಲ್ಲ ಸಮ್ಮೇಳನದ ಅಂದಿನ ಕಾರ್ಯಕ್ರಮ ಮುಗಿಯಿತು. ಜನಜಂಗುಳಿಯ ಗದ್ದಲ ವಿಪರೀತವಾಗಿತ್ತು. ಅಧ್ಯಕ್ಷರ ಭಾಷಣದ ಪ್ರತಿಗಳಿಗಾಗಿ ವೇದಿಕೆಗೆ ನೂರಾರು ಜನ ದಾಳಿ ಇಟ್ಟರು. ಎಷ್ಟು ಜನ ಸ್ವಯಂಸೇವಕರು ಪ್ರತಿಗಳನ್ನು ಕಾಸಾಡಿದರೂ—ಸಾಧ್ಯವಾಗಲಿಲ್ಲ. ಗದ್ದಲದಲ್ಲಿ ಮಾತೇ ಕೇಳುತ್ತಿರಲಿಲ್ಲ. ವಿಷಯ ನಿಯಾನಾಕರಮಿತಿಯ ರಚನೆಯ ಬಗ್ಗೆ ಎಷ್ಟು ಸಲ ಕೂಗಿದರೂ ಜನತೆಯ ಗೊಂದಲ ಕಡಮೆಯಾಗಲಿಲ್ಲ.

× × × ×

ದಿನಾಂಕ ೧೯–ಭಾನುವಾರ ಬೆಳಿಗಿನ ೮–೩೦ಕ್ಕೆ ಗ್ರಂಥ ಪ್ರದರ್ಶನ ಪ್ರಾರಂಭೋತ್ಸವ ನಡೆಯಿತು. ಶ್ರೀ. ವೃಷಭೇಂದ್ರ ಸ್ವಾಮಿಗಳು ಈ ಪ್ರದರ್ಶನದ ಬಗ್ಗೆ ಮಾತನಾಡಿದರು. ಮಾನ್ಯ ಮಂತ್ರಿ ಎಚ್. ಕೆ. ವೀರಣ್ಣಗೌಡರು ಉದ್ಘಾಟನೆ ಮಾಡಿದರು. ಉತ್ತಮ ಪುಸ್ತಕಗಳು ಅಗ್ಗ ದರದಲ್ಲಿ ದೊರೆಯುವಂತೆ ಸರಕಾರದವರು ಕ್ರಮ ಕೈಕೊಳ್ಳಬೇಕೆಂದೂ, ಅಚ್ಚಾಗದ ಕೈಬರೆಹದ ಪ್ರತಿಗಳನ್ನು ಮುದ್ರಿಸಬೇಕೆಂದೂ ಅವರು ಹೇಳಿದರು. ಮಕ್ಕಳಿಗಾಗಿ ಬಣ್ಣಗಳಿಂದ ಕೂಡಿದ ಪುಸ್ತಕಗಳು ಪ್ರಕಟವಾಗಬೇಕು; ಒಬ್ಬ ಉಪಾಧ್ಯಾಯ ನೂರಿಂದ ಸಾವಿರ ವಿದ್ಯಾರ್ಥಿಗಳಿಗೆ ಕಲಿಸಬಹುದು; ಅದರೆ ಒಂದು ಗ್ರಂಥ ಲಕ್ಷಾವಧಿ ಜನರಿಗೆ ಕಲಿಸಬಲ್ಲದು—ಎಂದು ಮುಂತಾಗಿ ಹೇಳಿದರು. ಈ ಪ್ರದರ್ಶನ ಬಳ್ಳಾರಿಯ ವಾಚನಾಲಯದಲ್ಲಿತ್ತು. ಅಲ್ಲಿ ಮೈಸೂರು ವಯಸ್ಕರ ಶಿಕ್ಷಣಸಮಿತಿಯವರು ಪ್ರಕಟಿಸಿದ ೧೨೬ ಪುಸ್ತಕಗಳಿದ್ದುವು. ಅರಮನೆಯ ಪ್ರಕಟನೆಗಳು, ಅನೇಕ ಕೈಬರೆಹದ ಗ್ರಂಥಗಳು, ಚಿತ್ರಗಳು ಅಲ್ಲಿದ್ದುವು. ಕುಮುದೇಂದು ವಿರಚಿತ "ಜಯ ಭಗವದ್ಗೀತಾ" ಗ್ರಂಥದ ೧೦ ಪುಟಗಳಿದ್ದುವು. ಅದನ್ನು ಸಂಪಾದಿಸಿದ ಶ್ರೀಕಂಠಯ್ಯನವರು, ಅದನ್ನು ಓದಿ ತೋರಿಸುತ್ತಿದ್ದರು. ಅದರಲ್ಲಿ ಗೀತೆಯ ೭೭೦ ಶ್ಲೋಕಗಳನ್ನು ಬಳಸಿದ್ದಾರಂತೆ. ಅದು ಕನ್ನಡದಲ್ಲಿದೆ. ಅಲ್ಲಿ ಸೂಚಿಸಿದ ರೀತಿಯಲ್ಲಿ ಬೇರೆ ಬೇರೆ ದಿಕ್ಕಿನಿಂದ ಓದಿದಾಗ, ಬೇರೆ ಭಾಷೆಗಳಲ್ಲಿ ಅದನ್ನು ಓದಬಹುದಾಗಿದೆ ಸಂಸ್ಕೃತ, ಪಾಲಿ, ಅಪಭ್ರಂಶ, ತೆಲುಗು, ಮುಂತಾದ ಕೆಲ ಭಾಷೆಗಳಲ್ಲಿ ಸಂಪಾದಕರು ಓದಿ ತೋರಿಸಿದರು ಇದೊಂದು ಅಲ್ಲಿಯ ಆಶ್ಚರ್ಯದ ವಿಷಯವಾಗಿತ್ತು. ನೂರಾರು ಭಾಷೆಯಲ್ಲಿ ಅದನ್ನು ಓದಲು ಬರುವುದೆಂದು ಅವರು ಹೇಳುತ್ತಿದ್ದರು.

೯–೩೦ಕ್ಕೆ ಸಣ್ಣ ಕತೆಗಾರರ ಗೋಷ್ಠಿ ನಡೆಯಿತು. ಶ್ರೀ ವೆಂಕಟೇಶಯ್ಯನವರು ಸ್ವಾಗತ ಭಾಷಣಮಾಡಿದರು ಅನೇಕ ಆಮಂತ್ರಿತ ಕತೆಗಾರರು ವಿವಿಧ ವಿಷಯಗಳನ್ನೆತ್ತಿ ಮಾತನಾಡಿದರು. ಶ್ರೀ ವರದರಾಜ ಹುಯಿಲಗೋಳರು "ಸಣ್ಣ ಕತೆಯ ಕತೆ"ಯ ಬಗ್ಗೆ ಮಾತನಾಡುತ್ತ—ಈ ಪ್ರಕಾರವು ಪಾಶ್ಚಿಮಾತ್ಯ ಸಾಹಿತ್ಯದಿಂದ ಬಂದಿದೆಯೆಂದು ಹೇಳಿ, ಕನ್ನಡದಲ್ಲಿ ೧೯೦೦–೨೦ ಆರಂಭಕಾಲ, ೨೦೦೦ದಿಂದ ೩೫ ಉತ್ಕರ್ಷಕಾಲ, ೩೫ರಿಂದ ನಂತರ ಅವನತಿಯ ಕಾಲ ಎಂದು ಹೇಳಿದರು ಹೊಸ ಕಾಲದ ಬಗ್ಗೆ ಹೇಳುತ್ತ ನವ್ಯ ಹಾಗೂ ಹೊಸ ಬಗೆಯ ಕತೆಗಳು ಬರುತ್ತಿವೆಯೆಂದರು. ೧೯೨೦ರಿಂದ ಬಂದ ಕಾಲಕ್ಕೆ ಅನಕೃ ಅವರು ಸುವರ್ಣಯುಗವೆಂದು ಕರೆದಿರುವರೆಂದು ಹೇಳಿ, ಈ ಸನುಯದಲ್ಲಿ "ಕೃಷ್ಣ"ತ್ರಯರು ನೂಡಿದ ಕಾರ್ಯವನ್ನು ಸೂಚಿಸಿದರು. ಅನಂತರ ಶ್ರೀ. ಲ ನ. ರಾಯರು "ನನ್ನ ಕತೆಗಳು" ಎಂಬ ವಿಷಯ ಮತ್ತು ಶ್ರೀಕೃಷ್ಣಕುಮಾರ ಕಲ್ಲೂರರು "ಗುಜರಾತಿನಲ್ಲಿ ಸಣ್ಣ ಕತೆ" ಎಂಬ ವಿಷಯ ಕುರಿತು ಓದಿದರು ಶ್ರೀ. ವೆ. ಮು. ಜೋಶಿಯವರು "ಕತೆಯಲ್ಲಿ ಹೊಸತನ"ವೆಂಬ ವಿಷಯವನ್ನೆತ್ತಿ, ನವ್ಯ ಕತೆಗಳ ಪ್ರಸ್ತಾಪನೆಯನ್ನೆತ್ತಿ ಮಾತನಾಡಿದರು. ಶ್ರೀ ಸದಾಶಿವರ "ನಲ್ಲಿಯಲ್ಲಿ ನೀರು ಬಂತು" ಎಂಬ ನವ್ಯ ಕತೆಯನ್ನು ಉದ್ಧರಿಸಿದರು. "ಇಂದಿನ ನವ್ಯ ಕತೆಗಳ ಧಾಟಿ ಬೇರೆಯಾಗಿದೆ,

ಬುದ್ಧಿಗಮ್ಯವಾದ ನವ್ಯಸಾಹಿತ್ಯದಲ್ಲಿ ಸಂಕೇತಪ್ರಿಯತೆ ನವ್ಯರೂಪವನ್ನು ತಾಳಿದೆ."ಎಂದರು. ಅನಂತರ ಶ್ರೀ. ಎಸ್. ಅನಂತನಾರಾಯಣರು "ಪಾಶ್ಚಾತ್ಯ ಕತೆಗಳ ಪ್ರಭಾವ" ಎಂಬ ವಿಷಯವನ್ನೆತ್ತಿ— "ಗಲಿವರ್‌ನಲ್ಲಿ ಕೇಳ್ಸಪಿಯರನ" ಟಿಂಪೆಸ್ಟ್ ನಾಟಕದ ಕತೆಯ ಎಳೆ ಪುಟದಲ್ಲಿ "ಚಂಡಮಾರುತ" ಎಂಬ ಹೆಸರಿನಲ್ಲಿ ಪ್ರಕಟವಾದುದು ಬಹುಶಃ ಮೊದಲನೆಯ ಕತೆಯೆಂದರು. ಮೊಪಾಸಾ, ಚೆಕಾವ್, ಗಾರ್ಕಿ ಮೊದಲಾದವರ ಕತೆಗಳ ಪ್ರಭಾವವನ್ನು ವಿವರಿಸಿದರು. ಶ್ರೀ. ಎಚ್. ವಿ. ಚಂದ್ರಶೇಖರರು "ಕಣ್ಣ ಕತೆಗಳ ವಿಮರ್ಶನದೃಷ್ಟಿ" ಎಂಬ ವಿಷಯ ಹೇಳುತ್ತ, ವಿಮರ್ಶಕನು ಓದುಗ ಮತ್ತು ಲೇಖಕನ ನಡುವೆ ಸೇತುವೆ ಕಟ್ಟುವ ಇಂಜಿನಿಯರನಾಗಬೇಕು, ಅವರಲ್ಲಿದ್ದ ಜಾಡ್ಯವನ್ನು ಹೊಡೆದೋಡಿಸುವ ಡಾಕ್ಟರನಾಗಬೇಕು, ಯೋಗ್ಯವಾದ ತೀರ್ಪುಕೊಡುವ ನ್ಯಾಯಾಧೀಶನಾಗಬೇಕು. ವಿಮರ್ಶಕ ಈ ಗುಣಗಳ ತ್ರಿವೇಣಿ ಸಂಗಮವಾಗಬೇಕು. ಎಂಬ ಸುಂದರ ವಿಚಾರ ಹೇಳಿ, ಮುಂದೆ ನವ್ಯಕತೆಯನ್ನು ಬಲವಾಗಿ ವಿರೋಧಿಸಿದರು. ಆದರೆ ನವ್ಯಕತೆ ತಂತ್ರವಿಶೇಷವೆಂಬುದು ಅವರಿಗೆ ಗೊತ್ತಿರಲಿಲ್ಲ "ಕತೆಗಳಲ್ಲಿ ಜನಜೀವನ"ದ ಬಗ್ಗೆ ಭಾರತೀಯರು, ಕನ್ನಡ ಕತೆಗಾರ್ತಿಯರ ಬಗ್ಗೆ ಶ್ರೀಮತಿ ಎನ್. ಎಸ್ ಸರಸ್ವತಿಯವರೂ ಕತೆಗಳಲ್ಲಿಯ ದಾರ್ಶನಿಕ ದೃಷ್ಟಿಯ ಬಗ್ಗೆ ಕೋ. ಚೆನ್ನಬಸಪ್ಪನವರೂ ಹೇಳಿದರು.

ಅಧ್ಯಕ್ಷಿಣಿಯರಾದ ಶ್ರೀಮತಿ ಸರೋಜಿನಿ ಮಹಿಷಿಯವರು ತಮ್ಮ ಪ್ರಕಟಿತ ಭಾಷಣವನ್ನು ಬದಿಗಿಟ್ಟು ಮಾತನಾಡಿದರು. ಬಿಸಿಲು, ಹಾಗೂ ಕನುಯದ ಮೂಲಕ ಕೆಲವರಿಗೆ ಬೇಸರ ಬಂದರೂ, ಭಾಷಣವು ನಿರರ್ಗಳವಾಗಿ ಸಾಗಿದ್ದರಿಂದ, ಕೇಳುವವರ ಕುತೂಹಲ ಕಡಿಮೆಯಾಗಿರಲಿಲ್ಲ 'ಸ್ವಭಾವಸಹಜವಾಗಿ ಮೂಡಿಬಂದ ಮಾನವನ ವಿವಿಧ ಪ್ರವೃತ್ತಿಗಳಲ್ಲಯೇ ವಿವಿಧ ಕಲೆಯು ಉಗಮವಿವೆ. ಪ್ರೇಕ್ಷಣೀಯತೆ, ವಾಚನೀಯತೆಗಳು, ನಾಟಕ ಹಾಗೂ ಕಾದಂಬರಿಯ ಒರೆಗಲ್ಲು; ಹಾಗೆ ಶ್ರಾವಣೀಯತೆ ಸಣ್ಣಕತೆಗೆ ಒರೆಗಲ್ಲು 'ಪಂಡಿತರುಂ ವಿವಿಧ ಕಳಾಮಂಡಿತರುಂ' ಎಂಬ ಮಧುರಕವಿ ಹೇಳಿದ ಕಾಲ ಈಗಿಲ್ಲ. ಇಂದು ಶಿಷ್ಟರಿಗೂ ಬೀರನ ಕತೆ ಹೇಳುವ ಅನಕಾಶವಿದೆ – ಅಭ್ಯಾಸ ಮಾಡಿದೆ ತಂತ್ರ ಕರಗತವಾಗದು. ಕನ್ನಡದಲ್ಲಿ 'ಪೊಡ್ಡಾ-ರಾಧನೆಯ'ನ್ನು ಬಿಟ್ಟರೆ ಕತೆಗಳೆಲ್ಲ ಪದ್ಯವಲ್ಲಿನೆ –ಎಂದು ಹೇಳುತ್ತ ಇಂದಿನ ಸಣ್ಣ ಕತೆ ಹಾಗೂ ತಂತ್ರದ ಬಗ್ಗೆ ಹೇಳಿದರು

ಸಂಜೆಯ ೪–೪೦ಕ್ಕೆ ಕವಿಗೋಷ್ಠಿಯು ಶ್ರೀ ಪು ತಿ. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ. ಜೋಳದರಾಶಿ ದೊಡ್ಡನಗೌಡರು ಸ್ವಾಗತಭಾಷಣ ಓದಿದರು.— ಸತ್‌ಕಾವ್ಯ ದೊರೆಯುವುದು ನಾವು ಬಯಸಿದಷ್ಟು ಸುಲಭವಾಗಿಲ್ಲ. ಸತ್‌ಕವಿಯಿಂದ ಸತ್‌ಕಾವ್ಯ. ಕವಿ ಯೋಗಿ, ಭಕ್ತ, ಸಂತರಷ್ಟೇ ದುರ್ಲಭ ಕಾವ್ಯರಚನೆಯಲ್ಲಿ ಪ್ರಯತ್ನ ಬಹಳ, ಸಿದ್ಧಿ ವಿರಳ—" ವ್ಯರ್ಥಂವಿನಾ ರಸಮಹೋಗಹನಂ ಕವಿತ್ವಂ" ಎಂದು ಸಂಸ್ಕೃತ ಕವಿಯೊಬ್ಬ ನುಡಿದಿದ್ದಾನೆ. 'ರಸ'ವೆಂಬ ಶಬ್ದ 'ಅತ್ಯದಷ್ಟೆ ಗಹನವಾದುದು.... ರಸಸ್ತರದ ಅನುಭವ ಭವಸ್ತರಕ್ಕಿಂತ ಭಿನ್ನವಾದುದು..... ...ಕವಿ ಶ್ರೀಗುಣಾತೀತ ಸ್ತರಕ್ಕೆ ಏರಿದಾಗ ಮಾತ್ರ ಅವನ ಕೃತಿ ನಲ್ ಕಳೆಯಿಂದ ಮೆರೆಯುತ್ತದೆ....ಆತನು ಓಂ ಎಂದು ಒಂದಕ್ಷರದಲ್ಲೇ ಬ್ರಹ್ಮಾಂಡವನ್ನು ಹಿಡಿದಿಡಬಲ್ಲ. ಆತ ಕಣ್ಬೆಳಕು ಚೆಲ್ಲಿದ ಕಾವು ಶೃಂಗಾರವಾಗುತ್ತದೆ, ಶೋಕ ಕರುಣೆಯಾಗುತ್ತದೆ, ಕೋಪ ರೌದ್ರವಾಗುತ್ತದೆ..... ... '

ಭಾರತೀಯ ಕವಿಪರಂಪರೆಯ ಬಗ್ಗೆ ಒಂದೆರಡು ಮಾತು ಹೇಳಿ, ರಸಗಾರನಾದ ಕತೆಗಾರನ ಬಗ್ಗೆ ಬರೆದ ಒಂದು ಕವನ ಓದಿದರು. ಅನಂತರ ಆಮಂತ್ರಿತ ಕವಿಗಳು ತಮ್ಮ ತಮ್ಮ ಕವನ ಓದಿದರು. ಸರ್ವಶ್ರೀ. ತಿರುಮಲಾಚಾರ್ಯ, ರೈ, ಶ್ರೀಧರ, ಕೋಚೆ, ಅಡಿಗ, ಕಣವಿ, ಕಾವ್ಯಾನಂದ, ಶಿವರುದ್ರಪ್ಪ. ಅಕ್ಕಬರಅಲಿ ಮುಂತಾದ ಆಮಂತ್ರಿತರು,—ಕೀರ್ತಿನಾಥ, ಆರ್. ಸಿ ಹಿರೇಮಠ, ಅನಂತನಾರಾಯಣರು, ಮತ್ತು ಸಮ್ಮೇಲನಾಧ್ಯಕ್ಷ ವಿನಾಯಕರು, ದ ರಾ. ಬೇಂದ್ರೆಯವರೂ ಕವಿತೆಗಳನ್ನು ಓದಿದರು. ವಿದ್ಯಾರ್ಥಿಗಳಿಗೂ ಸ್ಥಾನವನ್ನು ಕಲ್ಪಿಸಿದ್ದರು. ಜೀ. ವಿ. ಕುಲಕರ್ಣಿ, ಅನಿಲ ಗೋಕಾಕ ಹಾಗೂ ಹೈಸ್ಕೂಲ ಬಾಲಕ ಕೆ. ಆರ್. ನಾಗರಾಜ—ಕವನಗಳನ್ನು ಓದಿದರು. ಶ್ರೀ. ಬಳವರಾಜ ಕಟ್ಟೀಮನಿಯವರು 'ಎಲ್ಲರಂತವಳಲ್ಲ ನನ್ನಾಕಿ' ಎಂಬ ನೋಜಿನ ಕವನ ಓದಿದರು. ಕವಿಸಮ್ಮೇಲನಕ್ಕೆ ಅಪೇಕ್ಷೆಯಂತೆ ಹೆಚ್ಚು ಜನ ಬಂದಿದ್ದರು.

ರಾತ್ರಿ ಮನರಂಜನೆಯ ಕಾರ್ಯಕ್ರಮಗಳು ನಡೆದುವು. ವೈಷ್ಣವರು ವಿದ್ಯಾರ್ಥಿಗಳು ಅಭಿನಯಿಸಿದ 'ಪರ್ವತವಾಣಿಯವರ' ನಾಟಕ ಚೆನ್ನಾಗಿತ್ತು.

ದಿನಾಂಕ ೨೦ರಂದು ಮುಂಜಾನೆ ೮–೩೦ಕ್ಕೆ ಶ್ರೀ. ದ. ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಭಾಷಾಬಾಂಧವ್ಯ ಗೋಷ್ಠಿ ನಡೆಯಿತು ಆಮಂತ್ರಿತರಾದ ವಿದ್ವಾಂಸರು—" ಇಂದಿನ ಪರಿಸ್ಥಿತಿಯಲ್ಲಿ ಕನ್ನಡ-ಹಿಂದಿ-ಇಂಗ್ಲೀಷಿನ ಸ್ಥಾನ "ಎಂಬ ವಿಷಯದ ಬಗ್ಗೆ ಮಾತನಾಡಿದರು. ಕನ್ನಡ ಬೆಳೆಯಬೇಕು, ಸಮೃದ್ಧವಾಗಬೇಕು –ಎಂಬುದರಲ್ಲಿ ಭಿನ್ನಾಪ್ರಿಯಗಳಿಲ್ಲದಿದ್ದರೂ, ಹಿಂದೀ ಭಾಷೆಯ ಬಗ್ಗೆ ಅವು ಕಂಡುಬಂದುವು ಹಿಂದಿಯನ್ನು ರಾಷ್ಟ್ರಭಾಷೆಯೆಂದು ಸ್ವೀಕರಿಸಲು ಯೋಗ್ಯವಾಗುವಷ್ಟು ಅದು ಸಂಪನ್ನವಾಗಬೇಕೆಂಬುದು ಕೆಲವರ ಮತವಾಗಿತ್ತು. ಇಷ್ಟಕ್ಕೆ ಅದನ್ನು ರಾಷ್ಟ್ರಭಾಷೆಯೆಂದು ತರುವ ಅವಧಿಯನ್ನು ಮುಂದೆ ಹಾಕಬೇಕೆಂದು ಕೆಲವರು ಹೇಳಿದರು. ಹೆಚ್ಚಿನ ವ್ಯವಹಾರಕ್ಕಾಗಿ, ಜಗತ್ತಿನ ಭಾಷೆಯೆಂದು ಇಂಗ್ಲಿಷ್, ಭಾರತೀಯರಿಗೆ ಒಂದೇ ಭಾಷೆ ಬೇಕೆಂದು ಹಿಂದಿ, ನಮ್ಮ ಭಾಷೆಯಾದ ಕನ್ನಡ ಮಾತನ್ನು ನಾವು ಸ್ವಾಗತಿಸಬೇಕು—ಎಂಬುದು ಬಹುಮತವಾದಂತೆ ತೋರಿತು ಶ್ರೀ. ಬೇಂದ್ರೆಯವರು " ಮೊದಲು ನಾವು ಬದುಕೋಣ. ಕನ್ನಡ ಬದುಕಲಿ. ಜಗತ್ತು ಬದುಕಿದ್ದು ನೋಡಲು ನಾವು ಬದುಕಬೇಕು. ನಮ್ಮೊಡನೆ ಅಂತರ್‌ಪ್ರಾಂತೀಯ ಭಾಷೆ ಹಿಂದೀ ಬದುಕಲಿ ಜಗತ್ತಿನ ಭಾಷೆಯಾದ ಇಂಗ್ಲಿಷ್ ಬದುಕಲಿ. ಇವೆಲ್ಲವುಗಳನ್ನೂ ಬದುಕಿಸಿಗೊಳ್ಳೋಣ ಎಂಬ ಪ್ರಜ್ಞೆ ಬದುಕಲಿ–" ಎಂದರು.

೧೦–೩೦ಕ್ಕೆ ನಡೆದ ಕಲಾಗೋಷ್ಠಿಯು ಅಧ್ಯಕ್ಷಸ್ಥಾನವನ್ನು

ಡಾ. ಎಸ್. ಶ್ರೀಕಂಠಶಾಸ್ತ್ರಿಗಳು ವಹಿಸಿದ್ದರು. ಶ್ರೀ. ಪಿ. ರಾಮರಾವ್ ಅವರು ಸ್ವಾಗತ ಭಾಷಣ ಓದಿದರು. ಅನಂತರ ಗೋಷ್ಠಿಯ ಅಧ್ಯಕ್ಷರು ಹದಿನಾರು ಪುಟದ ತಮ್ಮ ಮುದ್ರಿತ ಭಾಷಣವನ್ನೋದಿದರು. ವಾಸ್ತುಶಿಲ್ಪ, ಚಿತ್ರಕಲೆ, ಸಂಗೀತ, ಗಮಕಕಲೆ, ನಾಟಕ, ಭರತ ನಾಟ್ಯ ಮತ್ತು ಚಲನಚಿತ್ರ-ರೇಡಿಯೊ ಪ್ರಸಾರಣಗಳೆಂಬ ಏಳು ಕಲೆಗಳ ಬಗ್ಗೆ ಚರ್ಚಿಸಿದರು ವಾಸ್ತುಶಿಲ್ಪ ಕನ್ನಡದಲ್ಲಿ ಎರಡು ಸಾವಿರ ವರುಷಗಳಿಂದ ಬೆಳೆದುಬಂದಿದೆಯೆಂದೂ—ತಮಿಳರಲ್ಲಿ ಏಳನೆಯ ಶತಾಬ್ದಿಯ ವರೆಗೆ ಪ್ರತ್ಯೇಕ ದೇವಾಲಯಗಳಿರಲಿಲ್ಲವೆಂದೂ ಗುಪ್ತರ ಕಾಲದಲ್ಲಿಯೇ ಪ್ರತ್ಯೇಕ ದೇವಾಲಯ ಉತ್ತರ ಭಾರತದಲ್ಲಿ ನಿರ್ಮಾಣವಾದ ಬಗೆಗೂ ಹೇಳಿದರು ಬೌದ್ಧಶಿಲ್ಪವೆಂದು ಕರೆಯುವ ಸ್ತೂಪ, ಸಂಘಾರಾಮ, ಚೈತ್ಯ, ಸ್ತಂಭ ಮುಂತಾದುವುಗಳೆಲ್ಲ ವೇದಯುಗದಿಂದ ಬಂದಿವೆಯೆಂದೂ ಅವು ಕೇವಲ ಬೌದ್ಧರಿಂದ ನಿರ್ಮಿತವಾದುವೆಂಬುದು ತಪ್ಪೆಂದೂ ಹೇಳಿದರು. ಚಾಳುಕ್ಯಶಿಲ್ಪದ ಪ್ರಭಾವ ಮಧ್ಯಕಾಲೀನ ಭಾರತದಲ್ಲಿ ಕಾಣುಬಂದ ಬಗೆಯನ್ನು ಹೇಳಿ, ಹೊಯ್ಸಳರ ವಾಸ್ತುಶಿಲ್ಪದಲ್ಲಿದ್ದ ಕನ್ನಡಿಗರ ಕೈವಾಡವನ್ನು ಸೂಚಿಸಿದರು. ಚಿತ್ರಕಲೆಯ ಬಗ್ಗೆ ಹೇಳುತ್ತ ಕ್ರಿ. ಪೂ. ಎರಡನೆಯ ಶತಮಾನದಿಂದ ಎಂಟನೆಯ ಶತಮಾನದ ವರೆಗೆ ಬರೆದ ಕರ್ನಾಟಕದ ಅಜಂತಾರೀತಿಯ ಚಿತ್ರ, ಭಾರತೀಯ ಚಿತ್ರಕಲೆಯ ಇತಿಹಾಸದಲ್ಲಿ ಮುಖ್ಯವಾದುದೆಂದರು. ಕರ್ನಾಟಕದಲ್ಲಿ ಚಿತ್ರಕಲೆ ವಿಶೇಷವಾಗಿ ಬೆಳೆಯುವುದಕ್ಕೆ ಸಾಹಿತ್ಯದ ಆಧಾರಗಳಿವೆ –ಎಂದು ದೇವಾಲಯದಲ್ಲೂ, ಗುಹೆಯಲ್ಲೂ ಅಡಗಿಕೊಂಡಿರುವ ಚಿತ್ರ ಬೆಳಕಿಗೆ ತರಬೇಕಾಗಿದೆಯೆಂದರು ಕನ್ನಡದ ಅಧುನಿಕ ಪ್ರಸಿದ್ಧ ಚಿತ್ರಕಾರರ ಹೆಸರು ಉಲ್ಲೇಖಿಸಿ–ಭಾರತೀಯ ಚಿತ್ರಕಲೆ ನಿಷ್ಫಲವಾದ ಕಾಮಪ್ರವೃತ್ತಿಯ ಅಭಿವ್ಯಂಜನವೆಂದು ಹೇಳಿದ ಆರ್ಚರನ ವಾದವನ್ನು ಖಂಡಿಸಿದರು. ನಗ್ನಚಿತ್ರಗಳಲ್ಲೂ ಉದಾತ್ತ ಭಾವನೆಯಿರುವುದನ್ನು ಹೇಳಿ—ಗೊಮ್ಮಟೇಶ್ವರ, ಭೈರವ-ಭೈರವೀ ಇತ್ಯಾದಿ ನಗ್ನವಿಗ್ರಹಗಳಲ್ಲಿ ಕಾಮಪ್ರಚೋದನೆಯೆಲ್ಲಿ?—ಎಂದು ಪ್ರಶ್ನಿಸಿದರು. ಕಲಾವಿದರಿಗೆ ನಿಯಮಿತ ರೀತಿಯಲ್ಲಿ ತರಬೇತು ಕೊಡುವ ಕೇಂದ್ರಸಂಸ್ಥೆಗಳು ಏರ್ಪಾಡಾಗಬೇಕೆಂದರು. ಸಂಗೀತದಲ್ಲಿ, ಕರ್ನಾಟಕ ಸಂಗೀತವು ವೇದಯುಗದಿಂದ ಬಂದಿದೆಯೆಂಬುದನ್ನು ಸೂಚಿಸಿ, ಹದಿಮೂರನೆಯ ಶತಾಬ್ದಿಯಲ್ಲಿ ದಾಕ್ಷಿಣಾತ್ಯ ಸಂಗೀತಕ್ಕೆ ಕರ್ನಾಟಕ ಸಂಗೀತವೆಂಬ ಹೆಸರು ಬಂದುದು ಹರಿವಾಲನ ಗ್ರಂಥವಿಂದ ತಿಳಿಯುತ್ತದೆಯೆಂದರು ಭಾರತೀಯ ಸಂಗೀತಕ್ಕೆ ಪ್ರಮಾಣಭೂತವಾದ ಗ್ರಂಥಗಳಲ್ಲಿ ಮುಕ್ಕಾಲು ಪಾಲು ಕನ್ನಡಿಗರವೆಂದು ಹೇಳಿದರು. ಕರ್ನಾಟಕ ಸಂಗೀತದ ಪ್ರಭಾವ ತಮಿಳು, ತೆಲುಗು, ಮಹಾರಾಷ್ಟ್ರ, ಕೇರಳದೇಶದ ಮೇಲೆ ಅದುದನ್ನು ತಿಳುಹಿದರು.

ಆಮಂತ್ರಿತ ಕಲಾವಿದರು ಕಲೆಯ ಬೇರೆ ಬೇರೆ ಅಂಗಗಳನ್ನಾಯ್ದು ಮಾತನಾಡಿದರು.

ಮಧ್ಯಾಹ್ನ ನಡೆದ ಸಾಹಿತ್ಯ ಬಾಂಧವ್ಯಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ. ಸದಾಶಿವಯ್ಯನವರು ವಹಿಸಿದ್ದರು. ತಮ್ಮ ವಿದ್ವತ್ತಾಪೂರ್ಣ ಭಾಷಣವನ್ನು ಒಂದೂವರೆ ಗಂಟೆಕಾಲ ಓದಿದರು. ಈ ಕಾರಣದಿಂದ, ತರುವಾಯ ಮಾತನಾಡಿದ ಭಾಷಣಕಾರರು ಕೇವಲ ಐದು ನಿಮಿಷಗಳಲ್ಲಿ ತಮ್ಮ ಭಾಷಣಗಳನ್ನು ಮುಗಿಸಬೇಕಾಯಿತು. ಅವರು ತಮ್ಮ ಪೀಠಿಕೆಯನ್ನು ಪ್ರಾರಂಭಿಸುವಾಗಲೇ ಗಂಟೆಯಾಗುತ್ತಿತ್ತು. ಐದು ನಿಮಿಷಗಳಲ್ಲಿ ಮುಗಿಸದಿರಲು, ಸಂಯೋಜಕರು ಒಂದೇ ಸವನೆ ಗಂಟೆ ಬಾರಿಸುತ್ತಿದ್ದರು. ಒಮ್ಮೆಯಂತೂ ಆ ಗಂಟೆಯನ್ನು ಸಭಿಕರಿಗೆ ಕೇಳುವಂತೆ 'ಮೈಕ್'ನ ಎದುರೇ ಹಿಡಿದುಬಿಟ್ಟರು.

ಅಧ್ಯಕ್ಷರು ಕನ್ನಡ ಹಾಗೂ ತೆಲುಗು ಸಾಹಿತ್ಯದಲ್ಲಿ ಪ್ರಭುತ್ವ ಪಡೆದವರಾಗಿದ್ದರು. ಈ ರೀತಿಯ ಸಾಹಿತ್ಯಬಾಂಧವ್ಯಗೋಷ್ಠಿ ಇದೇ ಮೊದಲನೆಯದೆಂದೂ, ಹೋದವರುಷ ಆಂಧ್ರಸಾಹಿತ್ಯ ಸಮ್ಮೇಲನವನ್ನು ಉದ್ಘಾಟಿಸಿದಾಗ ಇಂತಹ ಬಾಂಧವ್ಯಗೋಷ್ಠಿಯಾಗಬೇಕೆಂಬ ಮಾತನ್ನು ಅಲ್ಲಿ ಆಡಿದ ಬಗೆಗೂ ಅವರು ಹೇಳಿದರು. ಶ್ರೀ. ನಂಜುಂಡಾರಾಧ್ಯರು ಸಂಸ್ಕೃತ-ಕನ್ನಡದ ಸಂಬಂಧದ ಬಗ್ಗೆ, ಅನಂತರಂಗಾಚಾರ್ಯರು ತಮಿಳು-ಕನ್ನಡದ ಬಗ್ಗೆ, ಪಂಡಿತ ಅನಂತ್ ಕರರು ಮರಾಠಿ-ಕನ್ನಡದ ಬಗ್ಗೆ, ಪ್ರೊ. ಇನಾಂದಾರರು ಇಂಗ್ಲೀಷ-ಕನ್ನಡದ ಬಗ್ಗೆ ಮಾತನಾಡಿದರು. ಇನ್ನು ಕೆಲವು ವಿದ್ವಾಂಸರು ತೆಲುಗು-ಕನ್ನಡ' ಹಿಂದೀ-ಕನ್ನಡಗಳ ಸಂಬಂಧದ ಬಗ್ಗೆ ಮಾತನಾಡಿದರು.

ಸಂಜೆಗೆ ಸೇರಿದ ಬಹಿರಂಗ ಅಧಿವೇಶನದಲ್ಲಿ ಹದಿನೇಳು ಗೊತ್ತುವಳಿಗಳು ಪಾಸಾದುವು ಮುಖ್ಯವಾದ ಗೊತ್ತುವಳಿಗಳೆಂದರೆ–ಕೇಂದ್ರ ಅಕ್ಯಾಡೆಮಿಯವರು ಕೊಡುವ ಪಾರಿತೋಷಕ ಈ ಸಲ ಕನ್ನಡಕ್ಕೆ ದೊರೆಯುದಿದ್ದುದು, ಮುಂದೆ ನಿಲ್ಲದಂತೆ ನೋಡಿಕೊಳ್ಳುವುದು, ಸಾಹಿತ್ಯ ಅಕ್ಯಾಡೆಮಿಯ ಕನ್ನಡ ಸಲಹಾಸಮಿತಿಯನ್ನು ಪುನರ್‌ರಚಿಸುವುದು, ತೆಲುಗು ಕನ್ನಡಲಿಪಿಗಳನ್ನು ಒಂದೇ ವರ್ಣಮಾಲೆಯ ಬಗ್ಗೆ ತಜ್ಞರ ಸಮಿತಿಯನ್ನು ನಿಯಮಿಸಬೇಕೆಂಬುದು ಕರ್ನಾಟಕವಲ್ಲಿ ಒಂದು ಪ್ರಾಚ್ಯ ಸಂಶೋಧನ ಕೇಂದ್ರದ ನಿರ್ಮಾಣ ಆಗಬೇಕೆಂಬುದು, ಕನ್ನಡನಾಡು, ಜನಾಂಗ, ಸಂಸ್ಕೃತಿಯ ದ್ಯೋತಕವಾದ 'ಕರ್ನಾಟಕ' ಹೆಸರನ್ನು ನಮ್ಮ ರಾಜ್ಯಕ್ಕೆಡಲು ಒತ್ತಾಯಪಡಿಸಿದ್ದು, ಕನ್ನಡವನ್ನು ರಾಜ್ಯಸರಕಾರದವರು ಬೇಗನೇ ಅಧಿಕೃತಭಾಷೆ ಹಾಗೂ ನ್ಯಾಯಾಲಯದ ಭಾಷೆಯನ್ನು ಮಾಡಬೇಕೆಂಬುದು, ಕರ್ನಾಟಕಕ್ಕೆ ಪ್ರತ್ಯೇಕ ಅಂಚೆ-ತಂತಿ ಮಂಡಲವನ್ನು ನಿರ್ಮಿಸುವುದು— ಇವು ಮುಖ್ಯವಾಗಿವೆ.

ಈ ಸಮ್ಮೇಲನದಲ್ಲಿ ತೆಲುಗರು-ಕನ್ನಡಿಗರು ತಮ್ಮ ಭಾಷಾ ಭೇದವನ್ನು ಎಣಿಸದೆ, ಹೆಗಲಿಗೆ ಹೆಗಲು ಹಚ್ಚಿ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡುವುದರಲ್ಲಿ ಹೆಣಾಗಿದರು. ಅವರ ಈ ರೀತಿಯು ಶ್ಲಾಘನೀಯವಾದುದು. ಈ ಸಲದ ಸಮ್ಮೇಳನ ಸಾಮಾನ್ಯ ಜನಜಾಗೃತಿಯ ಪ್ರಚಾರದ ದೃಷ್ಟಿಯಿಂದ ಯಶಸ್ವಿಯಾಯಿತೆಂದೇ ಹೇಳಬಹುದು.

ಸಹೃದಯರಲ್ಲಿ ಸವಿನಯ ಅರಿಕೆ!

(ಒಂದು ಪತ್ರವ್ಯವಹಾರದ ಪ್ರತಿಧ್ವನಿ)

ಕನ್ನಡದ ಕುಲರತ್ನಿಕರಿ,

ನಾನೀ ವಿಜ್ಞಾಪನೆಯನ್ನು ತಮ್ಮ ಸನ್ನಿಧಿಯಲ್ಲಿ ಮಾಡಿಕೊಳ್ಳುವ ಸಮಯ ಬರಲೇ ಬಾರದಾಗಿತ್ತು. ಆದರೆ, ಜಯಂತಿಯ ಸಂಪಾದಕರು ನಿರುತ್ಸಾಹದಿಂದ ನನಗೆ ಬರೆದ ಪತ್ರವನ್ನು ಕಂಡು, ಅತ್ಯಂತ ವ್ಯಾಕುಲನಾಗಿ ಈ ಕೆಳಗಿನ ನಾಲ್ಕು ಸಾಲುಗಳನ್ನು ತಮ್ಮ ಸವ್ಯ ಅವಗಾಹನೆಯಲ್ಲಿ ತರುವ ಗೌರವವನ್ನು ಪಡೆಯುತ್ತಲಿದ್ದೇನೆ. ಕನ್ನಡನಾಡಿನ ಸಹೃದಯರಿಲ್ಲರೂ ಇದನ್ನು ತಪ್ಪದೆ ಅವಲೋಕಿಸಿ, ಶ್ರೀ. ಬೆಟಗೇರಿ ಕೃಷ್ಣಶರ್ಮರಿಗೆ ಅಭಯಪ್ರದ ಪತ್ರಗಳನ್ನು ಬರೆವುದಷ್ಟೆ, ಸಕ್ರಿಯ ಸಹಾನುಭೂತಿಯನ್ನೂ ತೋರಿ, ಅವರ ಜೀವನಾನದ ವರೆಗೆ, 'ಜಯಂತಿ' ಅವರ ಕೈ ಬಿಟ್ಟು ಹೋಗದಂತೆ (ವಿಧಿವಶದಿಂದ ಅವರ ಧರ್ಮಪತ್ನಿಯವರು ನಡುನೀರಿನಲ್ಲಿಯೇ ಅವರ ಕೈ ಬಿಟ್ಟು ಹೋಗಿದ್ದಾರೆ.) ನೋಡಿಕೊಂಡರೆ, ತಮ್ಮ ಪಾಲಿನ ಕರ್ತವ್ಯವನ್ನು ತಾವು ಪೂರ್ತಿಗೊಳಿಸಿದಂತಾಗುವುದಷ್ಟೇ ಅಲ್ಲದೆ, ನಾಡುಮಡಿಯ ಬಗೆಗೆ ತಾವು ಸಲ್ಲಿಸಬೇಕಾದ ಋಣವನ್ನೂ ತೀರಿಸಿದಂತಾಗುತ್ತದೆ. ಮೊದಲು ನಾನವರ ಪತ್ರವನ್ನು ಇದ್ದಕ್ಕಿದ್ದಂತೆ ಇಲ್ಲಿ ಕೊಡುತ್ತೇನೆ. ಅದರಿಂದ ತಮ್ಮೆಲ್ಲರಿಗೂ ಅವರ ಮನಸ್ಸಿನ 'ಒಳನುಡಿ'ಯ ಅರಿವು ಆಗುವುದು. ಆ ಪತ್ರ ಹೀಗಿದೆ:

ತಾ. ೨೪—೧—೧೯೫೮ 'ಜಯಂತಿ' ಕಾರ್ಯಾಲಯ, ಧಾರವಾಡ

ಪ್ರಿಯ ಕೃಷ್ಣಾಚಾರ್ಯರಿಗೆ,

.....ನಾಳೆಯ ಮೇ ತಿಂಗಳಿಗೆ ಜಯಂತಿ ತನ್ನ ೨೦ ವರ್ಷಗಳನ್ನು ಮುಗಿಸುವುದು. ಈ ಅವಧಿಯಲ್ಲಿ ಜಯಂತಿ ನನ್ನ ತಲೆಯ ಮೇಲೆ ಹೊರಿಸಿರುವ ಆರ್ಥಿಕ ಹೊಣೆಯಿಂದ ನಾನು ನಿತ್ರಾಣನಾಗಿದ್ದೇನೆ—ನಿರುತ್ಸಾಹಿಯಾಗಿದ್ದೇನೆ ಅದುದರಿಂದ, ಮುಂದೆ ಹೇಗಾದರೂ ಆಗಲಿ— ಜಯಂತಿಯಿಂದ ನಾನು ನಿವೃತ್ತನಾಗಬೇಕೆಂದು ನಿರ್ಣಯಿಸಿದ್ದೇನೆ. ಯಾರಾದರೂ ಹೊಸ ಉತ್ಸಾಹಿಗಳು ಮುಂದೆ ಬಂದು ಜಯಂತಿಯನ್ನು ಮುಂದುವರಿಸಿದರೆ, ಒಳ್ಳೆಯದು. ಇಲ್ಲವಾದರೆ, ಜಯಂತಿಯು ಅನತಾರ ಕಾರ್ಯದ ಮುಗಿಯಬಹುದು.

ಜಯಂತಿಯಂತಹ ಪತ್ರಿಕೆಯ ಅಸ್ತಿತ್ವದ ಅವಶ್ಯಕತೆ ಜನತೆಗೆ ಇಲ್ಲ ದೈನ್ಯಭಾವದ ಯಾಚಕವೃತ್ತಿ ನನ್ನ ಸ್ವಭಾವಕ್ಕೆ ಒಗ್ಗುವುದಿಲ್ಲ. ಇನ್ನೇನು ಮಾಡಬೇಕು?

ಆತ್ಮೀಯರಾದ ತಮಗೆ ಈ ಒಳನುಡಿ ತಿಳುಹಿದ್ದೇನೆ.

ತಮ್ಮ ವಿಶ್ವಾಸದ
ಬೆಟಗೇರಿ ಕೃಷ್ಣಶರ್ಮ"

ಈ ಪತ್ರವನ್ನು ಓದಿದ ಕೂಡಲೆ ನನ್ನ ಕಣ್ಣುಗಳಲ್ಲಿ ನೀರೂರಿದುವು. ಸುಮಾರು ೨೦ ವರ್ಷಗಳಿಂದ ಕನ್ನಡದ ಒಳ್ಳೆಯ ಮಾಸಪತ್ರಿಕೆಗಳಲ್ಲಿ ಅಗ್ರಸ್ಥಾನವನ್ನು ಪಡೆದ ಈ ಪತ್ರಿಕೆಯು ಅವಸ್ಥೆ ಈ ರೀತಿಯದಾಗಬೇಕೆ? ಕನ್ನಡದ ಜನತೆಯಲ್ಲಿ ಕನ್ನಡತನ ಮಾಯವಾಯಿತೇ?—ಎಂಬ ಅನೇಕ ಪ್ರಶ್ನೆಗಳು ನನ್ನ ತಲೆಯಲ್ಲಿ ಸುಳಿದಾಡಿದುವು. ನಾಡು ಒಂದುಗೂಡಿದ ಮೇಲಂತೂ ಇಂತಹ ಪತ್ರಿಕೆಗಳನ್ನು ಜನತೆ ತಲೆಯ ಮೇಲಿಟ್ಟುಕೊಂಡು ಕುಣಿದಾಡಬೇಕಾಗಿತ್ತು! ಹಾಗಾಗದಿದ್ದುದು ತುಂಬ ಶೋಚನೀಯ! ಈ ಪತ್ರಿಕೆ ಈಗ ೨೦ ವರ್ಷಗಳ ಯೌವನದ ಬಾಳನ್ನು ಬಾಳಿದೆ. ಇನ್ನೂ ಇದರ ಹರಯ ಹೆಚ್ಚುವಂತೆ, ಸೌಂದರ್ಯ ಎಲ್ಲರನ್ನೂ ಮುಗ್ಧಗೊಳಿಸುವಂತೆ, ಇದನ್ನು ಸರ್ವಾಂಗ ಸುಂದರವಾಗಿ ಕಾಪಾಡಿಕೊಂಡು ಬರುವ ಭಾರ ನಮ್ಮದಾಗಿದೆ. ಆದರೆ ಕನ್ನಡದ ಜನತೆ ಈ ದಿಶೆಯಲ್ಲಿ ಉತ್ಸಾಹ ತೋರದಿರುವುದು ಪ್ರಗತಿಯ ದ್ಯೋತಕವಲ್ಲ!

ಯುದ್ಧದ ಬೇಗೆಯಿಂದ ಬೆಂಡಾದ ಅನೇಕ ಪತ್ರಿಕೆಗಳು ತಮ್ಮ ಚಂದಾಹಣವನ್ನು ಎರಡರಷ್ಟು ಮೂರರಷ್ಟು ಏರಿಸಿದುವು. ಪುಟಗಳ ಸಂಖ್ಯೆಯನ್ನೂ ಕಡಮೆ ಮಾಡಿದುವು. ಆದರೆ, 'ಜಯಂತಿ' ತನ್ನ ಚಂದಾಹಣವನ್ನು ಹೆಚ್ಚಾಗಿ ಏರಿಸದೆ, ಪುಟಗಳನ್ನೂ ಕಡಮೆ ಮಾಡದೆ—ತನ್ನ ಬಾಹ್ಯಸೌಂದರ್ಯವನ್ನು ಅಲ್ಪ ಸ್ವಲ್ಪ ಕಳೆದುಕೊಂಡರೂ— ಅಂತರಿಕ ಅಂದ-ಚೆಂದಗಳೆಲ್ಲವನ್ನೂ ಎಂದಿನಂತೆ ಕಾಪಾಡಿಕೊಂಡು, ಇಂದಿಗೂ ತನ್ನ ಎಳೆಹರೆಯದ ಆಕರ್ಷಕತೆಯಿಂದ ನಮ್ಮ ಮನಸ್ಸನ್ನು ಸೆಳೆದಿದೆ. ಯಾಕೆಂದರೆ, ಅದಕ್ಕೊಂದು ಉಜ್ವಲ ಪರಂಪರೆಯಿದೆ. ತನ್ನದೇ ಆದ ಧ್ಯೇಯ—ಧೋರಣೆಗಳಿವೆ. ಆದರ್ಶದೆಡೆಗೆ ಕರೆದೊಯ್ಯುವ ಜಾಣ್ಮೆ ಅದಕ್ಕಿದೆ. ಅಂತೆಯೇ ಎಂತಹ ಕಷ್ಟಕಾಲದಲ್ಲೂ ಅದು ಸಹೃದಯ ಕನ್ನಡಿಗರ ಕರಿಕೆನೀರಿನಿಂದ ಜೀವ ಹಿಡಿದುಕೊಂಡು ಈ ವರೆಗೂ ಬಾಳುವ, ಬಾಳಿ ಜನತೆಯ ಬಾಳನ್ನು ಬೆಳಗುವ ಉದಾತ್ತ ಕಾರ್ಯವನ್ನು ಸಾಧಿಸಿತು; ಮುಂದೆಯೂ ಸಾಧಿಸಬೇಕೆಂಬ ಹಿರಿಯಾಸೆ ಇಟ್ಟುಕೊಂಡಿದೆ. ಆದರೆ ಅದರ ಪೋಷಣೆಯ ಭಾರವನ್ನು ಹೊತ್ತವರೇ ಈಗ ಕೈಬಿಡುವಂತಾದರೆ 'ದೇಸಿಗ'ನ ಹಾಗೆ ಅದು ಯಾರ ಮುಖವನ್ನು ನೋಡಬೇಕು? ಇದನ್ನು ಅಚ್ಚಗನ್ನಡಿಗರಾದ ನಾವು ಆಲೋಚಿಸಬೇಕಾಗಿದೆ. ಅನ್ಯರನ್ನೂ ನಮ್ಮವರೆಂದು ತಿಳಿದು ಪೋಷಿಸಿದ ನಮ್ಮ ಹಿಂದಿನ ಹಿರಿಯರ ಬಾಳನ್ನು ನಾವಿನ್ನೂ ಮರೆತಿಲ್ಲವೆಂದು ನಾನು ತಿಳಿಯುತ್ತೇನೆ.

ಶ್ರೀ. ಬೆಟಗೇರಿ ಕೃಷ್ಣಶರ್ಮರಿಗೆ ಈಗ ವಯಸ್ಸಾಗಿದ್ದರೂ ಜಯಂತಿಯನ್ನು ನಡೆಸಿಕೊಂಡು ಬರುವ ಉತ್ಸಾಹವೇನು ಕುಗ್ಗಿಲ್ಲ.

ಅರ್ಥಿಕ ಭದ್ರತೆ ಅವರ ಉತ್ಸಾಹವನ್ನು ಇಮ್ಮಡಿಸಲೂ ಬಹುದು ಅವರೇನು ಹೆಚ್ಚಿಗೆ ಬಯಸುವುದಿಲ್ಲ ಪತ್ರಿಕೆಯು ವೆಚ್ಚ ಅವರ ತಲೆಯ ಮೇಲೆ ಬೀಳದೆ ಹೋದರೆ ಸಾಕು; ಅವರಿಗೆ ಸಾಕಷ್ಟು ತೃಪ್ತಿ. ತಮ್ಮ ಹೊಟ್ಟೆಪಾಡಿಗಾಗಿ ಅವರು, ಗ್ರಂಥಗಳನ್ನು ಬರೆದೋ, ರೂಪಕಗಳನ್ನು ರಚಿಸಿ, ಬಾನುಲಿಕಟ್ಟೆಯಲ್ಲಿ ಮಾರಿಯೋ, ಇನ್ನೂ ಏನೇನೋ ಮಾಡಿ, ಈ ವರೆಗೂ ಉಪಜೀವನ ಸಾಗಿಸಿದ್ದಾಯಿತು. ಈಗ ಮುಪ್ಪು ಅವರನ್ನು ಅವರಿಸಿದೆ. ಮೊದಲಿನ ಶಕ್ತಿ ಉಳಿದಿಲ್ಲ ಈ ವರೆಗೂ 'ಜಯಂತಿ' ಏನಾದರೂ ಹುಟ್ಟಿಸಿಕೊಡಬಹುದೆಂದು ಆಲೋಚಿಸಿದ್ದರು; ಅದಂತೂ ಸಾಧ್ಯವಾಗಲಿಲ್ಲ. ತಮ್ಮ ಜೀವನವೊಂದನ್ನೇ ನಿರ್ವಹಿಸಿಕೊಳ್ಳುವ ಸಾಮರ್ಥ್ಯವಿಲ್ಲದಾಗ, ಜಯಂತಿಯ ಋಣಭಾರವನ್ನು ಅವರು ಹೊತ್ತುಕೊಳ್ಳಲು ಹೇಗೆ ಸಾಧ್ಯವಾದೀತು? ಬೇಸತ್ತು ಅವರು ಪತ್ರಿಕೆಯನ್ನು ನಿಲ್ಲಿಸಿಬಿಡಬಹುದು! ಅದರಿಂದ ಅವರು ಈ ವರೆಗೂ ಗಳಿಸಿದ ಖ್ಯಾತಿಗೇನೂ ಕುಂದಿಲ್ಲ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಅದು ಉಜ್ವಲವಾಗಿ ಬೆಳಗಿದೆ. ಆದರೆ ಅದರಿಂದ ಯಾರಿಗೆ ನಷ್ಟ?—ಎಂಬ ಪ್ರಶ್ನೆ ನಮ್ಮ ಮುಂದೆ ಕರಾಳ ರೂಪ ಧರಿಸಿ ನಿಲ್ಲುತ್ತದೆ. ಅದಕ್ಕೆ ನಮ್ಮ ಉತ್ತರ ಯಾವುದು?

ಕನ್ನಡದ ಜನತಾ ಜನಾರ್ದನರೇ,

ಈ ಪ್ರಶ್ನೆ ನಮ್ಮ ಸಾವು-ಜೀವನದ ಪ್ರಶ್ನೆಯಂತಿದೆ. ಈ ವರೆಗೂ ಬದುಕಿಸಿಕೊಂಡು ಬಂದ— ಅದೂ ಕಷ್ಟಕಾಲದಲ್ಲಿ ಬದುಕಿಸಿಕೊಂಡು ಬಂದ— ಒಳ್ಳೆಯ ಪತ್ರಿಕೆಯ ಕತ್ತನ್ನು, ಇಂತಹ ಉತ್ಕೃಷ್ಟ ಕಾಲದಲ್ಲಿ ಹಿಸುಕಿ ಹಾಕಿದರೆ ಹೇಗೆ?—ಎಂಬುದು ಪ್ರತಿಯೊಬ್ಬ ಕನ್ನಡಿಗನೂ ಆಲೋಚಿಸಬೇಕಾದ ವಿಷಯವಾಗಿದೆ. ಮೇಲಿನ ಅವರ ಪತ್ರವಂತೂ ಈ ಆಲೋಚನೆಗೆ ಆಹ್ವಾನವನ್ನೇ ಇತ್ತಿದೆ. ಇನ್ನೂ ಐದು ವರ್ಷಗಳು ದಾಟಿದರೆ 'ಜಯಂತಿ' ರೌಪ್ಯಮಹೋತ್ಸವವನ್ನು ಕಾಣುತ್ತದೆ. ಆ ವರೆಗೂ ಜಯಂತಿಯನ್ನು ಶ್ರೀ. ಕೃಷ್ಣಶರ್ಮರ ಸಂಪಾದಕತ್ವದಲ್ಲಿಯೇ ನಡೆಸುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಎಚ್ಚೆತ್ತ ಕನ್ನಡಿಗನ ಆದ್ಯಕರ್ತವ್ಯವಾಗಿದೆ. ಆ ತಯವಾಯ ಬೇಕಾದರೆ, ಶ್ರೀ. ಕೃಷ್ಣಶರ್ಮರೇ ಅಭಿಪ್ರಾಯಪಟ್ಟಂತೆ, 'ಯಾರಾದರೂ ಹೊಸ ಉತ್ಸಾಹಿಗಳು ಮುಂದೆ ಬಂದು ಜಯಂತಿಯನ್ನು ಮುಂದುವರಿಸಿದರೆ ಒಳ್ಳೆಯದು!' ಆ ವರೆಗಂತೂ ಜಯಂತಿಯನ್ನು ಯಾವ ವಿಧದಿಂದಲಾದರೂ ಉಳಿಸಿಕೊಳ್ಳಲೇ ಬೇಕು; ಅಷ್ಟೇ ಅಲ್ಲ, ಬೆಳೆಸಲೂ ಬೇಕು.

ನಾವು ದಿನಾಲು ಎಷ್ಟೋ ಹಣ ನಮಗರಿಯದಂತೆ ಖರ್ಚು ಮಾಡುತ್ತೇವೆ. ಅದರಲ್ಲಿಯ ಅಲ್ಪಭಾಗವನ್ನಾದರೂ ಬದಿಗಿರಿಸಿ ವರ್ಷಕ್ಕೆ ೫ ರೂ. ಜಯಂತಿಗಾಗಿ ಮುಡಿಪು,—ಎಂದುಕೊಂಡರೆ, ಜಯಂತಿ ನಿಜವಾಗಿಯೂ ಬಾಳುತ್ತದೆ ಕರ್ನಾಟಕದಲ್ಲಿದ್ದ ಎಲ್ಲ ಸಂಘ ಸಂಸ್ಥೆಗಳೂ, ಶಾಲೆ-ಕಾಲೇಜುಗಳೂ, ವಾಚನಾಲಯ-ಗ್ರಂಥಾಲಯಗಳೂ, ಧರ್ಮಪೀಠಗಳೂ, ರಾಜಕೀಯ ವರ್ತುಳಗಳೂ, ಅಹಮಹಮ್ಮಿನ್ಯರೂ, ಸಾಮಾನ್ಯರೂ ಕೇವಲ ಚಂದಾದಾರರಾಗಿ ನೆರವಿತ್ತರೂ ಸಾಕು; ಜಯಂತಿ ಜೀವ ಪಡೆದುಕೊಂಡಿರುತ್ತದೆ. ಉದಾರಿಗಳು ಅದಕ್ಕೊಂದು 'ಶಾಶ್ವತ ನಿಧಿ' ಯನ್ನು ಸಹ ಮಾಡಿಕೊಡಬಹುದು! ಹನಿ ಹನಿ ಕೂಡಿದರೆ ಹಳ್ಳವಾಗುವ ಹಾಗೆ, ಎಲ್ಲರೂ ಕೈಕೂಡಿಸಿದರಂತೂ ಅದರ ಬಾಯಿ ತಾನಾಗಿಯೇ ತುಂಬುತ್ತದೆ.

ಕರ್ನಾಟಕದಲ್ಲಿ ಸುಮಾರು ಎರಡು ಕೋಟಿ ಜನರು ವಾಸಿಸುತ್ತಾರೆ. ಹೊರನಾಡುಗಳಲ್ಲೂ ಕನ್ನಡಿಗರು ಸಾಕಷ್ಟು ಸಂಖ್ಯೆಯಲ್ಲಿ ವಾಸಿಸಿದ್ದಾರೆ. ಶ್ರೀ ಗೋಕಾಕರು ಅಪ್ಪಣೆ ಕೊಡಿಸಿದಂತೆ, ವಿಶ್ವಮಾನವನಾಗಬೇಕಾದ ಕನ್ನಡಿಗ, ಕನ್ನಡದ ಕನ್ನಡಿಗನೂ ಆಗದೆ ಹೋದರೆ, ಉಳಿದ ಕನಸುಗಳೆಲ್ಲ ಹೇಗೆ ನನಸಾದಾವು? ಆದಕಾರಣ ಆ ಎರಡು ಕೋಟಿ ಕನ್ನಡಿಗರಲ್ಲಿ ಕೇವಲ ಒಂದು ಲಕ್ಷ ಕನ್ನಡಿಗರಾದರೂ ಇತ್ತ ಕಡೆಗೆ ಲಕ್ಷ್ಯ ಕೊಟ್ಟಲ್ಲಿ, ಯಾವ ಕಾರ್ಯ ತಾನೇ ಅಸಾಧ್ಯ! ಅವರು ಮನಸ್ಸು ಮಾಡಿ, ತಲೆಗೊಂದರಂತೆ ರೂಪಾಯಿಯನ್ನು ಜಯಂತಿಯ 'ಶಾಶ್ವತ ನಿಧಿ' ಗಾಗಿ ಅರ್ಪಿಸಿದರೆ ಎಂತಹ ಅದ್ಭುತ ಕಾರ್ಯ ಸಾಧಿಸಿದಂತಾಗುವುದು? ಅಲ್ಲದೆ ಒಂದು ಸಾವಿರ ಜನರು ಆಜನ್ಮ ಚಂದಾದಾರರಾಗುವ ಔದಾರ್ಯವನ್ನು ತೋರಿದರಂತೂ ಇನ್ನೇನು ಬೇಕು? ಈ ಸದ್ಬುದ್ಧಿ ಕನ್ನಡಿಗರಲ್ಲಿದೆಯೆಂದು ನಾನು ಬೇರೆ ಹೇಳಬೇಕಾಗಿಲ್ಲ. ತಮ್ಮ ಗತವೈಭವವೇ ಅದನ್ನು ಘಂಟಾಘೋಷವಾಗಿ ಸಾರುತ್ತಲಿದೆ

ಈಗಲೂ ಕೆಲವರು ಚಂದಾಹಣದ ಎಂಡರಷ್ಟಾಗಲಿ, ಮೂರರಷ್ಟಾಗಲಿ ಪ್ರತಿವರ್ಷವೂ ತೆತ್ತು, ಜಯಂತಿಯನ್ನು ಬದುಕಿಸಿಕೊಂಡು ಬಂದಿದ್ದಾರೆ. ಶ್ರೀ ಶ್ರೀ ಪೇಜಾವರದ ಮಠಾಧೀಶರಂತೂ ಧರ್ಮಸಂಸ್ಥೆಗಳ ಅಧಿಪತಿಗಳಿಗೆ ಮಾದರಿಯಾಗುವಂತೆ, ಈಗ ಎರಡು ವರ್ಷಗಳಿಂದಲೂ ೨೫ ರೂಪಾಯಿಗಳನ್ನು ಸಲ್ಲಿಸಿ ಆಶೀರ್ವದಿಸುತ್ತಿದ್ದಾರೆ ಇಂಥ ಉದಾರಿಗಳ ಸಂಖ್ಯೆಯೂ ದಿನೇ ದಿನೇ ಬೆಳೆಯುತ್ತ ಹೋಗಬೇಕು. ಅಂದರೆ ಕನ್ನಡದ ಇದೊಂದೇ ಪತ್ರಿಕೆಯಲ್ಲ, ಎಲ್ಲ ಪತ್ರಿಕೆಗಳೂ ಬಾಳಿ ಬದುಕುತ್ತವೆ; ನಮ್ಮನ್ನೂ ಬದುಕಿಸುತ್ತವೆ.

ನನ್ನೀ ಅಲ್ಪ ಮಾತುಗಳಿಗೆ ತಾವು ಬೆಲೆ ಕೊಡದೆ ಹೋದರೂ, ಸಂಪಾದಕರ ಕಳಕಳಿಯ ಪತ್ರಕ್ಕಾದರೂ ಬೆಲೆಗೊಟ್ಟು, ಅವರ ದೀರ್ಘ ತಪಸ್ಸಿಗೆ ತಕ್ಕ ಗೌರವವನ್ನೀಯುವ ಹೃದಯ ವೈಶಾಲ್ಯವನ್ನು ಅಭಿವ್ಯಕ್ತಗೊಳಿಸಿದರೆ, ನಿಮ್ಮೊಡನೆ ನಾನು ಧನ್ಯನೆಂದು ಬಗೆಯುತ್ತೇನೆ.

ರಂಗಂಪೇಟೆ
೨೯-೧೧-೧೯೫೮

ಕನ್ನಡದ ಕುಲಕಸಿಕರ ಆಡಿಯಾಳು
ಸಗರ ಕೃಷ್ಣ

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ವ್ಯಭಿಚಾರ' ಎಂಬ ಕಥೆಯ ವಿಮರ್ಶೆಗಳು ೬ ಜನರಿಂದಲೂ '೪×೧೦ ಕಥೆಯ ವಿಮರ್ಶೆಗಳು ಇಬ್ಬರಿಂದಲೂ ಬಂದಿವೆ.

'ವ್ಯಭಿಚಾರ' ಕಥೆಯ ವಿಮರ್ಶಕರು :

೧. "ಇಂದಿರಾಪ್ರಿಯ" ಸಾಧನಕೇರಿ, ಧಾರವಾಡ. ೨. ಶ್ರೀ. ಆರ್. ಜಿ. ಕುಲಕರ್ಣಿ ಬಿ. ಎ (ಆನರ್ಸ್) ಧಾರವಾಡ. ೩. ಶ್ರೀ. ಕೆ. ವಿ. ತಿರುಮಲೇಶ್ವರಭಟ್ಟ, ಎಂ ಎಸ್. ಎಂ. ಕಾಲೇಜ್, ನೀರ್ಚಾಲ. ೪. 'ಮುಕರಂದ' ಬೆಂಗಳೂರು. ೫ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೬. ಶ್ರೀ. ವಿ. ಎಸ್. ನಾರಾಯಣರಾವ್, ಅನಂತಪುರ.

'೪×೧೦' ಕಥೆಯ ವಿಮರ್ಶಕರು :

೧ ಶ್ರೀ. ಮುದವೀಡು ನೋಕಸನಮೂರ್ತಿ, ಮಾಳಮಡ್ಡಿ—ಧಾರವಾಡ. ೨ ಶ್ರೀ. ಕೆ. ಎಸ್. ನಾರ್ಣ, ಪೆರಡಾಲ.

ಎಲ್ಲ ವಿಮರ್ಶೆಗಳನ್ನೂ ಜಯಂತಿಯ ಸಂಪಾದಕಮಂಡಲಿಯವರು ನೋಡಿ, ತಮ್ಮ ತೀರ್ಮಾನವನ್ನು ಹೀಗೆ ಕೊಟ್ಟಿರುವರು:

' ಒಂದೆರಡನ್ನು ಬಿಟ್ಟರೆ, ಈ ಸಲ ಬಂದ ವಿಮರ್ಶೆಗಳೆಲ್ಲವೂ ಮೇಲಿನ ಶರಗತಿಯವಿವೆ—ಎಂದು ತಿಳುಹಲು ನಮಗೆ ಆನಂದವಾಗುತ್ತದೆ

' ವ್ಯಭಿಚಾರ ' ಕಥೆಯ ವಿಮರ್ಶೆಗಳಲ್ಲಿ ಶ್ರೀ. ಆರ್. ಜಿ. ಕುಲಕರ್ಣಿ ಮತ್ತು ' ಮುಕರಂದ ' ಬೆಂಗಳೂರು' ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಕೆ. ಎಸ್. ಶರ್ಮಾ ಮತ್ತು ಶ್ರೀ. ಕೆ. ವಿ. ತಿರುಮಲೇಶ್ವರಭಟ್ಟ ಇವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವೆರಡೂ ಸಾಮಾನ್ಯವಾಗಿವೆ.

' ೪×೧೦ ' ಕಥೆಯ ವಿಮರ್ಶೆಗಳೂ ಚೆನ್ನಾಗಿದ್ದು, ಶ್ರೀ. ಕೆ. ಎಸ್. ನಾರ್ಣ ಅವರ ವಿಮರ್ಶೆ ಹೆಚ್ಚು ಒಳ್ಳೆಯದಾಗಿದೆ.

ಜಯಂತಿಯಲ್ಲಿ ಪ್ರಕಟವಾಗುವ ಕಥೆಗಳು ಕಲಾದೃಷ್ಟಿಯಿಂದಲೂ ತಂತ್ರದ ದೃಷ್ಟಿಯಿಂದಲೂ ಹೊಸ ಹೊಸ ಮಾದರಿಯವಾಗಿರುವುವು. ಇವುಗಳನ್ನು ಓದಿ ವಿಚಾರಮಾಡುವುದೂ ವಿಮರ್ಶೆ ಮಾಡುವುದೂ ಸಾಹಿತ್ಯಾಭ್ಯಾಸಿಗಳ ಬುದ್ಧಿ—ಹೃದಯಗಳ ಸಂಸ್ಕಾರವನ್ನು ಬೆಳೆಸುವಂತಹದಾಗಿರುವುದು. ಹೆಚ್ಚು ಜನರು ಈ ಮೇಲಾಟದಲ್ಲಿ ಭಾಗವಹಿಸಬೇಕು !"

ಮುಂದಿನ ತಿಂಗಳ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ ' ಕನ್ನಾಸೆರೆ ' ಎಂಬ ಕಥೆಯನ್ನು ಕುರಿತಾಗಲಿ, ' ಬೆಳಕು ಹರಿಯಲಿ ' ಎಂಬ ಕಥೆಯನ್ನು ಕುರಿತಾಗಲಿ—ವಿಮರ್ಶೆಯನ್ನು ಬರೆದು ಕಳುಹಬೇಕು.

—ಸಂಪಾದಕರು

ವ್ಯಭಿಚಾರ

(ಸಣ್ಣಕತೆಯ ವಿಮರ್ಶೆ)

ಆರ್. ಜಿ. ಕುಲಕರ್ಣಿ ಬಿ. ಎ. (ಆನರ್ಸ್) ಧಾರವಾಡ

ಶ್ರೀ. ರಾಘವೇಂದ್ರ ಖಾಸನೀಸರ ಸುಕುಮಾರ ಜೀವ, ಮುಂಬಯಿ ರಂಭೆಯರು ಹಗಲು ಹಾಡೇ ನಡಿಸುವ ವ್ಯಭಿಚಾರದ ದರೋಡೆಯನ್ನು ಕಂಡು ಜುಗುಪ್ಸೆಯಿಂದ ಉರಿದೆದ್ದಿದೆ. ಕುಲಟೆ ಕುಟಿಲೆಯಾಗಿ ನಾಗರಿಕತೆಯ ಮುಖವಾಡವೆತ್ತಿನಿಂತಿರುವುದು, ಮುಂಬೈ ಹೆಣ್ಣಿನ ಒಂದು ವಿಕೃತ ಮುಖ. ಅಲ್ಲಿ ಗಂಡು ಹೆಣ್ಣಿಗೆ ಮರುಳಾಗುವುದು ಹೊಸತಲ್ಲ; ಆದರೆ ಹೆಣ್ಣು ಗಂಡಿನ ಮೇಲೆ ದಾಳಿ ಮಾಡುವ 'ಧಂಧೆ'ಯನ್ನು ಪ್ರಾರಂಭಿಸಿದೆ. 'ಅಬಲೆಯ'ಸೋಗುಹಾಕಿದ ದರೋಡೆಕಾರ್ತಿಯರಾಗಿ ಈ ಕುಲಟೆಯರು ಮುಂಬಯಿ ಬೀದಿಗಳಲ್ಲಿ—ರೇಲ್ವೆ ಪ್ಲಾಟ್‌ಫಾರ್ಮಗಳಲ್ಲಿ—ಗಾಡಿಯ ಕಂಪಾರ್ಟ್‌ಮೆಂಟುಗಳಲ್ಲಿ

ಹೆಣ್ಣು ಹೃದಯದ ಗಂಡುಸರನ್ನು ಬಲಿಹಾಕುತ್ತಾರೆ. ಗಂಡು ಕಾಮುಕರಿದರಂತೂ ಸರಿಯೆ. ಇಲ್ಲವಾದರೆ ಈ ಕುಲಟೆಯರು ಆ 'ಸಾತ್ವಿಕ ಸಬಲ'ರನ್ನು ಪೋಲೀಸರ ಬೆಂಬಲದಿಂದ ಜೈಲಿಗೆ ಕಳಿಸುತ್ತಾರೆ. ಅವಳ ಬೆಂಬಲಕ್ಕೆ ಹೆಣ್ಣಿನ 'ಅಬಲೆತನ' ಕಂಡು ಮರುಗುವ ಜನ. ಜಂಗುಳಿಯಿದೆ. ಅವಳು ಮಾಡಿದ ಅನ್ಯಾಯವನ್ನು ನ್ಯಾಯವೆಂದು ಎತ್ತಿ ಹಿಡಿವ ಕೋರ್ಟು ಇದೆ. ಇದರಿಂದ ಸುಸಂಸ್ಕೃತ ಗಂಡಿಗೆ ಬಿಡುಗಡೆಯೆಲ್ಲಿ? ಶ್ರೀ. ಖಾಸನೀಸರು 'ವ್ಯಭಿಚಾರ'ವೆಂಬ ತಮ್ಮ ಕತೆಯಲ್ಲಿ ಈ ಸಮಸ್ಯೆಯನ್ನು ಎತ್ತಿದ್ದಾರೆ. ಸಮಸ್ಯೆಯ ಶಾಶ್ವತ ಪರಿಹಾರ ಅವರಿಗೆ ಕಂಡಿಲ್ಲ ಆದರೆ ಅಕಸ್ಮಿಕ ದೈವೀ ಅಪಘಾತದಲ್ಲಿ ಇದರಿಂದ ಪಾರಾಗುವ ಒಂದು ಹಾದಿಯನ್ನು ಕಂಡಿದ್ದಾರೆ. ಇಂಥದೊಂದು ಬಗೆಯಿಂದ ತನ್ನ ಮಾನಕಾಯ್ದುಕೊಂಡವನು — ಕೆ. ರಾಮನಾಥ್ ಎಮ್. ಎ., ಎಲ್‌ಎಲ್. ಬಿ. ಅಡ್ವೋಕೇಟ್.

ಬಾಂದ್ರಾ ಪ್ಲಾಟ್‌ಫಾರ್ಮಿನಲ್ಲಿ ಧೋ ಧೋ ಮಳೆಸುರಿಯುತ್ತಿದೆ. ಒಂದು ಬಗೆಯ ಜೊನ್ನುವಾಸನೆ ಅಲ್ಲಿ ತುಂಬಿದೆ. ಮುಂಬಯಿಸೆಕೆ ಒಳಗೆ, ಮುಗಿಲಿನ ಧೋ ಧೋ ಮಳೆ ಹೊರಗೆ. ಒಬ್ಬರಿಗೊಬ್ಬರು ಸಂಬಂಧವಿಲ್ಲದ ಸಾವಿರ ಜನ ಮುಕುರಿದೆ. ಅದರಲ್ಲಿ ತಮ್ಮ ಧಂದೆ ಮುಂದುವರಿಸಬಂದ ರಂಭೆಯರು—ಅವರ ಕಣ್ಣು ಈ ರಾಮನಾಥನ ಮೇಲೆ ಬಿದ್ದಿದೆ. ಅತ ಒಂದು ಕಂಬಕ್ಕೆ ಆತುಕೊಂಡು ದೂರ—ವಿಕಾಕಿಯಾಗಿ ನಿಂತಿದ್ದಾನೆ. ಅತನ ಸಿರಿವಂತಿಕೆಯ ಕಳೆ ಆ ಸೂಳೆಯರನ್ನು ನಾಯಿಗಳನ್ನಾಗಿಸಿ ಅತನೆದುರು ಸುಳಿದಾಡಹಚ್ಚಿದೆ. ಅತ ಹೇಸಿಕೊಂಡು ಉಗುಳಿದ— ಇವರ ಮೋರೆಯ ಮೇಲೆ ಅಲ್ಲವಾದರೂ ಆ ಅರ್ಥದಲ್ಲಿ—ಎನ್ನಬಹುದು "ಅದರಿ ಸೂಳೆಗೆಲ್ಲಿಯ ಸೋಲು? ವೇಶ್ಯಾವೃತ್ತಿಗೆಲ್ಲಿಯ ನಾಚಿಕೆ?" ಅವರಿಗೆ ಮಳೆಬಂದುದೊಂದು ಹಿಗ್ಗು. ಮೈ ತೊಯ್ದು ಕಾಮುಕತೆಯ ಪ್ರತೀಕರಾಗಿ, ಎದೆಯ ಸೆರೆಗು ಹಾರಿಸಿ, ಪ್ಲಾಟ್‌ಫಾರ್ಮಿನ ಮೇಲೆ ಚಕ್ಕರ ಹೊಡೆಯುತ್ತಾರೆ. ರಾಮನಾಥನು ಈ ಕುಲಟೆಯರ ಕೈಯಿಂದ ಪಾರಾಗಿ, ಬಾಂದ್ರಾದಿಂದ ಮರೀನ್‌ಲೈನಿನ ವರೆಗೆ ಹೋಗುವ 'ಫಾಸ್ಟ್‌ಟ್ರೇನು' ಹತ್ತಿದ. ಅತ ಹತ್ತಿದುದು ಫರ್ಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟು. ಅದು ಪೂರ್ತಿ ಖಾಲಿಯಿದ್ದಂತೆ ಕಂಡಿತು.

ಮೂಕನಾಗಿ ಕಿಟಕಿಯ ಬಳಿಗೆ ಹೋಗಿ ಕುಳಿತುಕೊಂಡ. ಅವನ ಮೂಕದೃಷ್ಟಿ, ಮೌನದ ನೆಲವು ಕಂಡರೆ, ಏನೋ ಒಂದು ಮೂಕಸಂಕಟ ಅವನಲ್ಲಿ ತುಂಬಿರುವಂತೆ ಕಾಣುತ್ತಿದೆ. ಉಲನ್ ಸೂಟು, ರೇಶ್ಮೆಯ ಶರಟು, ಮೇಲೆ ರೇನ್‌ಕೋಟು. ಅವನ ಕೈಗಳೆರಡೂ ಕಿಸೆಯಲ್ಲಿ ಅವೇಕೆ ಒಮ್ಮೆಯೂ ಹೊರಗೆ ಬರುವುದಿಲ್ಲ? ಕಿಟಕಿಯಿಂದ ಮಳೆಹನಿ ಸಿಡಿಯುತ್ತಿರಬಹುದು ಅದರೂ ಕೈಗಳೇಕೆ ಹೊರಬಂದು ಕಿಟಕಿಯನ್ನು ಮುಚ್ಚುವುದಿಲ್ಲ? ಆ ಕೆಲಸವನ್ನು ಮಾಡಲು ಒಬ್ಬ ರಂಭೆ ಅಲ್ಲ ಕುಳಿತಿದ್ದಳು. ಅವಳ ಕಡೆಗೆ ಇನ್ನೂ ರಾಮನಾಥನ ಲಕ್ಷ್ಯ ಹೋಗಿಲ್ಲ ಗಾಡಿ ಬಾಂದ್ರಾ ಪ್ಲಾಟ್‌ಫಾರ್ಮ್ ದಾಟಿ, ಮುಂದಿನ ಕೊರಕಲಿನಲ್ಲಿ ಹಾಯ್ದು ಮುಂದುವರೆದಾಗ, ಕಸಾಯಿಖಾನೆಯ ಹೊಲಸು ವಾಸನೆ ಗಾಡಿಯ ತುಂಬ ಇಡುಗಿತು.

ಸ್ವಾತಂತ್ರ್ಯದಿನೋತ್ಸವದ ನಿಮಿತ್ತ

ಒಲವಿನ ಕಾಣಿಕೆ!

ನಮ್ಮ ಕೋಟ್ಯವಧಿ ಗ್ರಾಹಕರಿಗೆ, ಸಹಸ್ರಾವಧಿ ಕೋಕ-ವ್ಯಾಪಾರಿಗಳಿಗೆ ಮತ್ತು ಕಿರುಕೋಳ ವ್ಯಾಪಾರಿಗಳಿಗೆ

ಎಸ್ತೇಲಾ ನಿರ್ಮಾಪಕರಿಂದ

ಬೆಲೆಬಾಳುವ ಟಾರ್ಚುಗಳು, ಸೆಲ್ಲುಗಳು. ಬ್ಯಾಟರಿಗಳು!

ಆದರೆ ಆ ಹೊಲಸುವಾಸನೆ, ಅಲ್ಲಿಯೇ ಧಂದೆಗೆ ಬಂದ ರಂಭೆಯ ವ್ಯಭಿಚಾರದ್ದಿರಬಾರದೇಕೆ? ಅವಳ ಹೊಲಸುವಾಸನೆ ಇನ್ನೂ ರಾಮನಾಥನಿಗೆ ಬಡಿದಿರಲಿಲ್ಲ ಅದು ಅವಳಿಗೆ ಹೇಗೆ ಸಹಜವಾಗಬೇಕು? ಅವಳು ಕೆಮ್ಮಿದಳು. ರಾಮನಾಥ ಹೌಹಾರಿ ತಿರುಗಿ ನೋಡಿದ. ಹೆಣ್ಣು ಉನ್ಮಾದಕಾರಿಯಾದ ಭಂಗಿಯಲ್ಲಿ, ಬ್ಲೌಜಿನ ಬಿರಡೆ ಬಿಚ್ಚಿ, ಎಳೆಯು ವಯಸ್ಸಿನ ಹಾಲುಬಣ್ಣದ ಮಾಂಸಲ ಭಾಗ ತೆರೆದು ನಿಂತಿದ್ದಾಳೆ ತೆಳುವಾದ ಶುಭ್ರಸೀರೆ ಅವಳ ವಿಕೃತ ವ್ಯಕ್ತಿತ್ವವನ್ನು ತೆರೆದು ತೋರುವಷ್ಟು ತೆಳುವಾಗಿದೆ ಪೌಡರ್ ಬಳಿದುಕೊಂಡ ಮುಖಕ್ಕೆ, ಬಣ್ಣಬಳಿದ ತುಟಿಗೆ, ನಾಗರಿಕತೆಯ ಮೆರುಗುಮೆತ್ತಿದೆ. ಅದೇನು ಮಾಯಾಜಾಲ! ಮುಗುಳ್ನಗೆಯ ಬಲೆ! ರಾಮನಾಥ ತತ್ತರಿಸಿದ. ಆದರೆ ಪುನಃ ಆ ಗೂಢ ಕೈಗಳ ನೆನಪು. ಅತ ಸಾವರಿಸಿಕೊಂಡ: ಆ ರಂಭೆಗೆ ನಿರಾಶೆಯಾಯಿತು. ಈ ಗಂಡು ಬಲಿಬೀಳಲಿಲ್ಲ. ಸರಿ! ದಾಳ ಮಾಡಿದಳು: "ಹಣ ಕೊಡು... ಇಲ್ಲವಾದರೆ ಹೆಣ್ಣಿನ ಮೇಲೆ ಕೈಮಾಡಿದೆಯೆಂದು ಜೇಲುಕಾಣುವೆ!...." ರಾಮನಾಥ ಉರಿದೆದ್ದ. ಆದರೆ ರಂಭೆ ಪಕ್ಕಾ ಕುಲಟೆ. ಧಂದೆಯಲ್ಲಿ ಪಳಗಿದವಳು. ರಾಮನಾಥ ವಾದನಿಲ್ಲಿಸಿ, ಅಸಹ್ಯಭಾವದಿಂದ ಅವಳನ್ನು ಧಿಃಕರಿಸಿ ಮೌನತಾಳಿದನು. ಆದರೆ ಮರೀನ್‌ರೇಲ್ವೆ ನಿಲ್ದಾಣದಲ್ಲಿ ಜನಜಂಗುಳಿಯೆದುರು ಆ ಕುಲಟೆ ಕೂಗಿದಳು. ಪೋಲೀಸರನ್ನು ಕರೆದಳು. ರಾಮನಾಥನನ್ನು ಬೆಂಬಲಿಸುವವರಿಲ್ಲ. ಜನ ಅತನನ್ನು ಮನಬಂದಂತೆ ಬೈದಿತು. ಸಬ್ ಇನ್‌ಸ್ಪೆಕ್ಟರ್ ಡಿಕ್ರೂಜ್ ರಾಮನಾಥನನ್ನು ಪೋಲೀಸ ಸ್ಟೇಶನ್‌ಗೆ ಕರೆದೊಯ್ದ. ಆದರೆ ರಾಮನಾಥನು ಆ

ಕುಲಟೆಯನ್ನು ತನ್ನೊಡನೆ ಕರೆದುಕೊಂಡೊಯ್ದ. ಅವಳಿಂದ ಲೇಪಿಯಾಗಿ ದೂರನ್ನು ಕೊಡಿಸಿದ. ಪೋಲೀಸರಿಗೆ ಈ ಅಪರಾಧಿಯ ಪ್ರಶಾಂತಮನೋವೃತ್ತಿಯ ಅರ್ಥವಾಗಲಿಲ್ಲ. ಅವನ ವಿಳಾಸ ಕೇಳಿದಾಗಲೂ ಇನ್‌ಸ್ಪೆಕ್ಟರಿಗೇ ತನ್ನ ಜೇಬಿನಿಂದ ವಿಳಾಸದ ಕಾರ್ಡನ್ನು ತೆಗೆದು ನೋಡಲಿಕ್ಕೆ ಹೇಳಿದಾಗ, ಈ ಔದ್ಧತ್ಯ ಅರ್ಥವಾಗಲಿಲ್ಲ. ಆದರೆ ಆಗ ಈ ಅಪರಾಧಿಯು "ಅಡ್ವೋಕೇಟ್" ಅಂದಾಗ, ಅವರು ವಿಸ್ಮಿತರಾದರು. ಏನಾದರೇನು? ಅವನ ಅಪರಾಧಕ್ಕೆ ಶಿಕ್ಷೆಯಾಗಲೇಬೇಕು. ಅವನ ಕೈಗೆ ಬೇಡಿ ಹಾಕಲೇಬೇಕು. ಮತ್ತ ಆ ನಿಗೂಢ ಕೈಗಳು! ಪೋಲೀಸನು ಬೇಡಿಗಳನ್ನು ತಂದು "ಮಿಸ್ಟರ್, ಕೈಗಳನ್ನೆಲ್ಲಿಯವರೆಗೆ ಜಪ್ತಿಸಿಕೊಂಡು ಕೂಡುವಿರಿ? ಕೈಗಳನ್ನು ಮುಂದೆ ಮಾಡಿರಿ!" ಎಂದು ನುಡಿದಾಗ, ರಾಮನಾಥ ಆ ನಿಗೂಢ ಕೈಗಳನ್ನು ತೋರಿಸಲು ಕೋಟನ್ನು ತೆಗೆದೊಗೆದ! ಆದರಿ ಅದೇನದು? ಕೈಗಳೇ ಇಲ್ಲ! ಇಲ್ಲದ ಕೈಗಳಿಂದ ರಾಮನಾಥನು ಆ ರಂಭೆಯನ್ನು ಅಪ್ಪಿದ್ದೆಂತು? ಈಗ ಬೇಡಿ ಯಾರಿಗೆ? ರಾಮನಾಥನ ನಿಗೂಢ ಕೈಗಳಿಗಾಗಿ ಮುಂದೆ ಬಂದ ಬೇಡಿಗಳು ರಂಭೆಯ ಕೈಗೆ ಬಂದುವು! ಆದೊಂದು ರೇಲ್ವೆ ಅಪಘಾತದಲ್ಲಿ ಕಳೆದುಹೋದ ಕೈಗಳು, ಇಂದು ತನ್ನ ಒಡೆಯನ ಮಾನವುಳಿಸಿದುವು! ಪುನಃ ಕೋಟಿನ ಜೇಬುಸೇರಿ ಆ ನಿಗೂಢಕೈಗಳು ಮರೆಯಾದುವು. ಹಳೆಯ ಅಪಘಾತವು ಹೊಸ ಅಪಘಾತವನ್ನು ತಪ್ಪಿಸಿದುದೆಂದು ಹಿಗ್ಗಬೇಕೆ? ಅಥವಾ ರಾಮನಾಥನ ಜೀವನದಲ್ಲಿ ಕೈಗಳಿಲ್ಲದ ಕೊರಗನ್ನು ಕಳೆಯಲು ಈ ರಂಭೆಯ ಪ್ರಸಂಗ ಬಂದಿತೆಂದು ಅತ ಹಿಗ್ಗಬೇಕೆ? ಇದೊಂದು ದೈವೀಕರುಣೆಯೆಂದು ಲೇಖಕರ ಸೂಚನೆಯೆ? ಅನೆಲ್ಲ ತರ್ಕ, ಊಹೆ! ಕತೆಗಾರರೂ ಊಹೆ ಮಾಡುತ್ತಾರೆ. ಈ ಅಕಸ್ಮಿಕ ಪರಿಹಾರದಲ್ಲಿ ಕೌತುಕ ಕಂಡಿದ್ದಾರೆ. ಆದರೆ ಆ ಎಲ್ಲ ಕೌತುಕದ ಪರಿಹಾರದಲ್ಲಿ ಮೂಲಸಮಸ್ಯೆಯು ತನ್ನ ವಿಕೃತಮುಖವನ್ನು ಮರೆಮಾಚಿಲ್ಲ. ಅದು ಕರಾಳವಾಗಿ ಕತೆಗಾರರ ಓದುಗರ ಮುಂದೆ ಅಚ್ಚಳಿಯದೆ ನಿಂತು ಹಲ್ಲು ಕಿರಿಯುತ್ತದೆ. ಅದರ ಚಿತ್ರಣದಲ್ಲಿ, ಅದರ ಬಗೆಗಿದ್ದ ತಮ್ಮ ಅಸಹ್ಯಜುಗುಪ್ಸೆಯನ್ನು ವ್ಯಕ್ತಗೊಳಿಸುವಲ್ಲಿ, ಕತೆಗಾರರು ಅದ್ಭುತ ಯಶಸ್ಸನ್ನು ಪಡೆದಿದ್ದಾರೆ.

ಈ ಯಶಸ್ಸಿನ ಗುಟ್ಟು ಏನು? ಮುಂಬಯಿ ಜೀವನದ ಗಡಬಿಡಿಯ ಗದ್ದಲ—ನಿರ್ಜೀವ ಯಾಂತ್ರಿಕ ಗಜಬಿಜಿಗಳ ಹಿನ್ನೆಲೆಯಲ್ಲಿತ್ತಿರುವುದು ಈ ಯಶಸ್ಸಿನ ಒಂದು ಕಾರಣವಾಗಿದೆ. ಈ ಯಾಂತ್ರಿಕ ಗಜಬಿಜಿಯಲ್ಲಿಯ ಮಾನವೀಯ ವಿಕೃತಿ, ಕಾಮುಕ ಪಾಶವೀಯತೆ—ನಾಗರಿಕ ಕುಟಿಲತೆಗಳನ್ನು ಎತ್ತಿ ತೋರಿಸುವಲ್ಲಿ ಪ್ರಕೃತಿಯು ಜಟಿಜಟಿ ಮಳೆಯು ಶಕ್ತಿಯುತವಾದ ಹಿನ್ನೆಲೆಯನ್ನು ಒದಗಿಸಿದೆ ಆ ಗಜಬಿಜಿ, ಆ ಯಾಂತ್ರಿಕತೆ, ಆ ವಿಕೃತಿ, ಆ ಪಾಶವೀಯತೆ, ಆ ಜಟಿಜಟಿಯಲ್ಲಿ ಜೊಮ್ಮು ವಾಸನೆ! ಕಸಾಯಿಖಾನೆಯ ಕೊಳಕು ವಾಸನೆ! ಜುಗುಪ್ಸೆಗೆ ಏನು ಬೇಕೋ ಎಲ್ಲವೂ ಸಿದ್ಧವಾಗಿದೆ. ಈ ಹಿನ್ನೆಲೆಗೆ ಪ್ರಖರವಾದ ಧ್ವನಿಶಕ್ತಿಯನ್ನು ತರುವ ಶಬ್ದಶಕ್ತಿ! ಜುಗುಪ್ಸೆಯು ಸಾಕ್ಷಾತ್ ಮೂರ್ತಿಗಳಂತಿದ್ದ ಪ್ರತಿಮೆಗಳು ಅತ್ಯಂತ ಪ್ರಭಾವಯುತವಾಗಿ ಕತೆಗಾರರ ಮನೋಭಾವವನ್ನು ಓದುಗರಿಗೆ ತೀವ್ರತರವಾಗಿ

ಸುದಾಮ ಚರಿತ

ಶ್ರೀ. ಸಾಲಿ ರಾಮಚಂದ್ರರಾಯ ವಿರಚಿತಂ

ಸಂಸ್ಕೃತ ನೂತನಕಾವ್ಯ — ಕ್ರಯ ೧ ರೂಪಾಯಿ

"ತುಂಬ ಆಶ್ಚರ್ಯವಾಯಿತು ಮನಮೆಚ್ಚಿದೆ ಬಹಳ ಚನ್ನಾಗಿದೆ. ಬಹಳ ಚಲೋದಾಗಿದೆ ತುಂಬ ಸರಲವೂ ಸರಸವೂ ಆಗಿದೆ, ಸಂಸ್ಕೃತ ಕಾವ್ಯಸಾಹಿತ್ಯದ ಉದ್ದಾನು ಕವಿಗಳನ್ನು ಪದೇ ಪದೇ ನೆನವರಿಸುತ್ತಲೂ ಇದೆ. ಹಳಗಾಲದ ಸಂಸ್ಕೃತ ಸಾಹಿತ್ಯವನದಿಂದ ಎತ್ತಿಕೊಂಡು ಇಂದಿನ ಸಾಹಿತ್ಯವನದಲ್ಲಿ ಕಸಿ ಮಾಡಿದ ಬಳ್ಳಿಯು ಹಣ್ಣಿನಂತಿದೆ. ಕಸಿಯ ಹಣ್ಣು ರೂಪದಲ್ಲೂ ರುಚಿಯಲ್ಲೂ ತಾಯಿಹಣ್ಣನ್ನು ಬಿಟ್ಟುರಲಾರದಷ್ಟೆ."

ರಾಷ್ಟ್ರಕವಿ — ಶ್ರೀ. ಎಂ. ಗೋವಿಂದ ಪೈ

ಪ್ರತಿಗಳಿಗಾಗಿ:

ಆಕಳವಾಡಿ ಬುಕ್‌ಡಿಪೊ, ವಿಜಯವಿಠೋಡ್

ಧಾರವಾಡ.

ಸಂಸ್ಕೃತಿ ಪ್ರಕಾಶನ ಮಾಳಮಡ್ಡಿ

ನಿವೇದಿಸುತ್ತಾನೆ. ಅವರು ಆ ರಂಭೆಯರನ್ನು 'ಸುತ್ತಾಡುವನಾಯಿ'ಗಳೆಂದು ಕರೆವಾಗ, ರಾಮನಾಥನಿಂದ ಸಾಂಕೇತಿಕವಾಗಿ ಉಗುಳಿಸುವಾಗ, ಮಳೆಯಲ್ಲಿ ತೊಯ್ದು ಮೈಯು, ನೆರಗು ಹಾರಿಸಿದ ಕಸಬುಗಾರಿಯರನ್ನು ವರ್ಣಿಸಿದಾಗ ಜುಗುಪ್ಸೆಯು ಪ್ರಚಂಡ ಪರಿಣಾಮವನ್ನಾಗಿಸುತ್ತದೆ. ಅವರ ಲಜ್ಜೆಗೇಡಿತನವನ್ನು ವರ್ಣಿಸುವಾಗ ಅಶ್ಲೀಲವೆನ್ನುವಂತೆ ವರ್ಣಿಸಿದರೂ ಅದರಲ್ಲಿ ಓದುಗರಲ್ಲಿ ವಿಕೃತವಾಸನೆಯನ್ನುಂಟು ಮಾಡುವುದಿಲ್ಲ ಇದನ್ನೇ ನಾವು ಕಲಾವಿದನ ಸಂಸ್ಕೃತಿಯ ಫಲವೆಂದು ಕರೆಯಬಹುದೆ? ಹಾಗೆ ಕರೆಯುವುದರಲ್ಲಿ ತಪ್ಪೇನೂ ಕಾಣುವುದಿಲ್ಲ.

ವರ್ಣನಾಶಕ್ತಿ, ಶಬ್ದಶಕ್ತಿಗಳಲ್ಲಿ ಇಂತಹ ವ್ಯಂಜಕತೆ ಇದ್ದರೆ, ಪಾತ್ರ ಸೃಷ್ಟಿಯಲ್ಲಿ. ಕತೆಯ ಓಟದಲ್ಲಿ ವಿಲಕ್ಷಣ ಮಿಂಚಿನ ಸೆಳಕಿದೆ. ಕತೆಯ ಓಟವಂತೂ ರಾಮನಾಥನು ಕುಳಿತ ಫಾಸ್ಟ್ ಟ್ರೇನಿನ ವೇಗದಂತೆಯೇ ಇದೆ ಬಾಂದ್ರಾ ಬಟ್ಟಮೇಲೆ ಒಮ್ಮೆಲೇ ಮರೀನ್‌ಲೈನಿಗೆ ಬಂದ ಮೇಲೆಯೇ ಗಾಡಿ ನಿಲ್ಲುತ್ತದೆ ಕತೆಯೂ ಹಾಗೆಯೇ ಬಾಂದ್ರಾ ನಿಲ್ದಾಣೆಯ 'ಧೋ ಧೋ' ಮಳೆಯ ಗಿಜಿಗಿಜಿಯಲ್ಲಿ ಹುಟ್ಟಿ, ಬಿಡುಗಾಳಿಯಂತೆ ಧಾವಿಸುತ್ತ ನಡೆದು ಮರೀನ್‌ಲಾಯಿನ್ಸ್ ಪೋಲೀಸ್ ಕ್ಯಾಬಿನ್‌ನಲ್ಲಿ ಕೊನೆಗೊಳ್ಳುತ್ತದೆ. ಈ ಓಟ, ಆ ವಿಲಕ್ಷಣ ಕೊನೆಗಳಲ್ಲಿ ಅದ್ಭುತ ಪರಿಣಾಮ ಶಕ್ತಿಯಿದೆ. ಪಣ್ಣಕತೆಯ ಸಂಕ್ಷಿಪ್ತತೆಯು ಬಿರುಗಾಳಿಯ ರಭಸವನ್ನು ಪಡೆದಿದೆ ಈ ರಭಸದಲ್ಲಿ ರೂಪುಗೊಂಡು ಪ್ರತಿಯೊಂದು ಪಾತ್ರವೂ ಮಿಂಚಿನಂತೆ ಶಕ್ತಿನೆ ಹೊಳೆದು, ತನ್ನ ನೈಜ



ರೂಪದಲ್ಲಿ ಕಣ್ಮುಂದೆ ಸುಳಿಯುತ್ತದೆ. ರೇಲ್ವೆಯ ಪ್ಲಾಟ್‌ಫಾರ್ಮಿನ ಮೇಲಿನ ಕಸಬುಗಾರ್ತಿಯರಿರಲಿ, ಪೋಲೀಸ್ ಇನಸ್ಪೆಕ್ಟರ್‌ನಿರಲಿ, ಅವನ ಕೈಕೆಳಗಿನ ಪೋಲೀಸನಿರಲಿ, ಎಲ್ಲರೂ ತಮ್ಮ ಮಿಂಚಿನ ಜೀವನೆತ್ತಿ ಬರುತ್ತಾರೆ. ಅಲ್ಲಿಯ ಇನಸ್ಪೆಕ್ಟರನು ರಾಮನಾಥನಿಗೆ ಗಂಟುಬಿದ್ದ ರಂಭೆಯನ್ನು ತಟ್ಟನೆ ಗುರುತಿಸಿ "ಮುಂಬಯಿಯಲ್ಲಿ ಎಲ್ಲ ಹೆಂಗಸರೂ ಸತ್ತುಹೋದರೇನು? ಜನರು ಎಲ್ಲರನ್ನೂ ಬಿಟ್ಟು ಈ ಸಿಂಹಿಣಿಯನ್ನು ಏಕೆ ಬೆನ್ನು ಹತ್ತುತ್ತಾರೋ?—" ಎಂದು ಅನ್ನುವುದನ್ನು ಗಮನಿಸಬೇಕು. ಅದನ್ನು ಓದಿದಾಗ, ಮುಂಬಯಿ ಪೋಲೀಸರಿಗೆ ರಂಭೆಯರ ಕಸಬು ಹೇಗೆ ಪರಿಚಿತನಾಟಕವೆಂಬುದೂ ಪ್ರಸ್ತುತ ಕತೆಯಲ್ಲಿಯು ಇನಸ್ಪೆಕ್ಟರನ ಸಹೃದಯತೆಯೂ ಪರಿಸ್ಫುಟವಾಗಿ ನಿಲ್ಲುತ್ತವೆ. ಈ ಎಲ್ಲ ವ್ಯಕ್ತಿಗಳ ಜೀವಂತ ಮಿಂಚಿನಲ್ಲಿ ರಾಮನಾಥನಿಗೆ ಗಂಟುಬಿದ್ದ ರಂಭೆಯ ಅಮಾವಾಸ್ಯೆಯಂತಹ ವ್ಯಕ್ತಿತ್ವ ಎದ್ದುಕಾಣುತ್ತದೆ. ಅವಳ ಲಜ್ಜೆಗೇಡಿತನ, ಅವಳ ಕಾಮುಕ ವಿಲಾಸ, ಕೊನೆಯಲ್ಲಿಯ ಅವಳ ಹತಾಶಭಾವದ ಕೋಪ, ನೀರವಾದ ದರೋಡೆ ಪೋರತನದ ಕುಟಿಲ ದಿಟ್ಟತನಗಳು—ದಿಗ್ಭ್ರಮೆ ಹುಟ್ಟಿಸುವಂತಹ ಅಸಹ್ಯ ವ್ಯಕ್ತಿತ್ವವನ್ನು ಪ್ರಭಾವಯುತವಾಗಿ ಚಿತ್ರಿಸುತ್ತವೆ.

ಈ ವಿಕೃತಿಯ ಹಿನ್ನೆಲೆಯಲ್ಲಿ ರಾಮನಾಥನ— ಸುಕುಮಾರ ದೃಢವಾದ – ವ್ಯಕ್ತಿತ್ವವು ಪ್ರಕಾಶಗೊಳ್ಳುತ್ತದೆ. ನಾಗರಿಕತೆಯ ಓರಣ, ಸಿರಿವಂತಿಕೆಯ ಕಾಂತಿ, ಅವನ ಸುಸಂಸ್ಕೃತ ಚೇತನಕ್ಕೆ ಒಂದು ತರದ ಮೆರುಗು ತಂದಿವೆ. ಆ ಮೆರುಗನ್ನು ಹೆಚ್ಚಿಸುವ ಅವನ ಉಚ್ಚ ಶಿಕ್ಷಣ, ಅದರಲ್ಲಿಯೂ ಆಡ್ರೋಕೇಟಾಗಿರುವುದು ಆ ಪ್ರಸಂಗದಲ್ಲಿ ಒಂದು ಶಕ್ತಿಯನ್ನು ಅವನಿಗೆ ತಂದುಕೊಟ್ಟಿವೆ. ಮುಂಬಯಿ ಕುಟಿಲತೆಯ ಒಳಹೊರಗನ್ನು ಅರಿತ ಅವನ ಕಾಯ್ದೇ ಪಾಂಡಿತ್ಯ, ಆ ಸಿರಿವಂತಿಕೆ, ಆ ನಾಗರಿಕತೆಯ ಕಳೆಯ ಹಿಂದೆ, ಕೈ ಕಳೆದು ಹೋದ ಮೂಕಸಂಕಟ, ನೀರವತೆಯ ರೂಪವೆತ್ತಿ ಅವನನ್ನು ಅವರಿಸಿ ನಿಂತಿದೆ. ಬಹುಶಃ ಮುಂಬಯಿಯ ವಿಕೃತ ದೌರ್ಜನ್ಯಕ್ಕೆ ಉತ್ತರರೂಪವಾಗಿ ಅತ ನಿಂತಿದ್ದಾನೆನ್ನಬಹುದು. ಅವನ ಜೀವನದಲ್ಲಿಯ ಅಪಘಾತ ಹಾಗೂ ಅದು ಪ್ರಸ್ತುತ ಪ್ರಸಂಗದಲ್ಲಿ ಸಹಾಯಕವಾದ ರೀತಿಗಳನ್ನು ನೆನೆದರೆ, ಮುಂಬಯಿ ಬುದ್ಧಿಶಕ್ತಿಯು ತನ್ನ ಸುತ್ತುಮುತ್ತಿನ ವಿಕೃತಿಯ ನಿವಾರಣೆಗಾಗಿ, ತನ್ನ ಮೀರಿದ ದೈವೀಕರುಣೆಯತ್ತ ಮೂಕವಾಗಿ ನಿಟ್ಟಿಸುತ್ತಿರುವಂತೆ ಕಾಣಿಸುತ್ತದೆ. ಅದು ಕತೆಯ ಕೊನೆಯ ಮೂಕಧ್ವನಿ.—ಕತೆಗಾರರ ಅವ್ಯಕ್ತ ಪ್ರಾರ್ಥನೆ ಎಂದರೆ, ವಿಮರ್ಶಕನು ತನ್ನ ಆಳವು ಮೀರಿ ಹೋದಂತೆ ಆಗಬಹುದೆ? ಏನಾದರಾಗಲಿ, ಆ ಸಂಶಯ ಅವನಲ್ಲಿ ಸುಳಿಯುತ್ತದೆ.

ಕೊನೆಯಲ್ಲಿ ತಲೆಬರೆಹದ ಬಗೆಗೆ ಒಂದು ಮಾತನ್ನು ಹೇಳಬೇಕು. ಇಷ್ಟೊಂದು ಶೀವ್ರತರ ಪರಿಣಾಮಕಾರಿಯಾದ ಕತೆಗೆ, ಆದರ ಆದ್ಭುತ ರಭಸದ ವ್ಯಂಜಕತೆಗೆ 'ವ್ಯಭಿಚಾರ' ಎಂಬ ನೇರ–ಸರಳ ತಲೆಬರೆಹ ಅಷ್ಟೊಂದು ಧ್ವನಿಯುಕ್ತವಲ್ಲವೆನ್ನಿಸುವುದು; ಅದರಿ ಬಹುಶಃ ಅದಕ್ಕೂ ಒಂದು ಕಾರಣವಿರುವಂತೆ ಕಾಣುತ್ತದೆ. ಲೇಖಕರಿಗೆ, ಮುಂಬಯಿಯ ಹೆಣ್ಣಿನ ವಿಪರೀತ ವಿಕೃತಿಯನ್ನು ಮುಚ್ಚಿಟ್ಟು ಧ್ವನಿತಗೊಳಿಸುವಷ್ಟು ತಾಳ್ಮೆಯಿರುವಂತೆ ಕಾಣುವುದಿಲ್ಲ. ಅದರಿಂದ ಕತೆಯ ಪರಿಣಾಮದ ವಿಷಯದಲ್ಲಿ ವ್ಯಂಜಕತೆಯನ್ನು ಬಳಸಿದಂತೆ, ತಲೆಬರೆಹದ ಬಗೆಗೆ ಅದನ್ನು ಬಳಸಿರಲಿಕ್ಕಿಲ್ಲವೆನ್ನಿಸುತ್ತದೆ. ಅದೇನೇ ಇರಲಿ. ಈ ಒಂದು ಸಣ್ಣ ಅಂಶದಿಂದ ಕತೆಯ ಒಟ್ಟು ಕಲಾಪರಿಣಾಮಕ್ಕೆ ಯಾವ ಬಾಧೆಯೂ ಇಲ್ಲ. ಆ ಪರಿಣಾಮದ ಅದ್ಭುತ ವ್ಯಂಜಕತೆಗಾಗಿ ಶ್ರೀ. ರಾಘವೇಂದ್ರ ಪಾಸನೀಸರು ಹಾರ್ದಿಕ ಅಭಿನಂದನೆಗೆ ಪಾತ್ರರಾಗಿದ್ದಾರೆ. ಅವರ ಈ ವ್ಯಂಜಕಶಕ್ತಿ ಮುಂಬಯಿಜೀವನದ ಇಂದಿನ ಸಮಸ್ಯೆಗೆ ಶಾಶ್ವತ ಪರಿಣಾಮ ಕಾಣುವ, ಆ ಕಾಣ್ಕೆಯನ್ನು ಯಶಸ್ವಿಯಾಗಿ ಚಿತ್ರಿಸುವ ಸಾಮರ್ಥ್ಯನನ್ನು ಪಡೆಯುವಂತೆ ಓದುಗರು ಹಾರೈಸಿದರೆ ಹೆಚ್ಚಲ್ಲ!!

— —

ವಧೂವರರ ಜ್ಯೋತಿಷ್ಯ

ಕನ್ನಡದಲ್ಲಿಯೆ ಒಂದು ಹೊಸಪುಸ್ತಕ!
ಈಗಾಗಲೇ ಬೆಳಕಿಗೆ ಬಂದಿದೆ.

ಲೇಖಕರು:— ಜ್ಯೋತಿಷಿ ಎನ್. ಕೆ. ಜೋಗಳೇಕರ

ಮದುವೆಗೆ ಮೊದಲು ವಧೂ–ವರರ ಸಲುವಳಿಯನ್ನು ಕೂಡಿಸಿ ನೋಡುವುದಕ್ಕೆ ಬೇಕಾಗುವ ಜ್ಯೋತಿಷ್ಯದ ಪ್ರತಿಯೊಂದು ಸಂಗತಿಯನ್ನೂ ವಿವರ-ವಿವರವಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ಬೇಕಾದವರು ಕೂಡಲೆ ಬೇಡಿಕೆಗಳನ್ನು ಕಳುಹಿರಿ!
ಕ್ರೌ. ಆ. ೧೦೦ ಪುಟಗಳು. ಬೆಲೆ : ೧ ರೂಪಾಯಿ
ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು ಕೊಡಲಾಗುವುದು.

ಜ್ಯೋತಿಷಿ ಎನ್. ಕೆ. ಜೋಗಳೇಕರ
ಶಿವಾಜಿ ರೋಡ್, ಮಂಗಳವಾರಪೇಟೆ, ಧಾರವಾಡ

ಸಾದರ ಸ್ವೀಕಾರ

೯೨ **ಶಿಲಾಮುಖ** (ಸಣ್ಣಕತೆಗಳ ಸಂಗ್ರಹ) ಬರೆದವರು : ಶ್ರೀಮಾನ್ ಗೋವಿಂದಮೂರ್ತಿ ದೇಸಾಯಿ ಅವರು. ಪ್ರಕಾಶಕರು : ಶ್ರೀ. ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ಅ. ೧೧೬ ಪುಟಗಳು. ಬೆಲೆ ೧-೫೫.

೯೩ **ಏಕಾಂಕ ನಾಟಕಗಳು** (ಸಂಕಲನ). ಸಂಪಾದಕರು, ಶ್ರೀಯುತರುಗಳಾದ ಶ್ರೀರಂಗರು, ಶ್ರೀ. ನಾ. ಕಸ್ತೂರಿಯವರು ಬೇರೆ ಬೇರೆ ನಾಟಕಕಾರರು ಬರೆದ ೧೧ ಏಕಾಂಕಗಳು. ಪ್ರಕಾಶಕರು, ಭರತ್ ವಿಜ್ಞಾನೀಜ್, ಬಸವನ ಗುಡಿ— ಬೆಂಗಳೂರು ೪. ಕ್ರಾ. ಅ. ೨೪೮ ಪುಟಗಳು. ಬೆಲೆ ೨-೦೦.

೯೪ **ಸಂದರ್ಶನ** (ಕಥಾಸಂಕಲನ) ಬರೆದವರು, ಶ್ರೀಮಾನ್ ಋಶಭಂತ ಚಿತ್ತಾಳ, ಮುಂಬಯಿ ಅವರು. ಪ್ರಕಾಶಕರು, ಜನತಾ ಪ್ರಕಾಶನ, ಅಂಕೋಲಾ, ಉ. ಕ. ಜಿಲ್ಲಾ. ಕ್ರಾ. ಅ. ೧೨೪ ಪುಟಗಳು. ಬೆಲೆ ೧-೫೦.

೯೫ **ಜೀವನ ಶಿಕ್ಷಣ** (ಮಾಸಪತ್ರಿಕೆಯ ಶತಮಾನೋತ್ಸವ ವಿಶೇಷ ಸಂಚಿಕೆ) ಪ್ರಧಾನ ಸಂಪಾದಕರು, ಶ್ರೀಮಾನ್ ಎಸ್. ಪಿ. ಪಾಟೀಲ, ಪ್ರಿನ್ಸಿಪಾಲ್ ಗಂ. ಮು. ಟ್ರೇನಿಂಗ್ ಕಾಲೇಜು, ಧಾರವಾಡ. ಕ್ರಾ. ೪ ದ ೧೦೦ ಪುಟಗಳು. ಬೆಲೆ ೧-೫೦.

೯೬ **ಬೆನ್ನುಹಿಂದಿನ ಕಣ್ಣು** (ಕಥಾಸಂಕಲನ) ಲೇಖಕರು ಶ್ರೀಮಾನ್ ದು. ನಿ. ಬೆಳಗಲಿ, ಬನಹಟ್ಟಿ. ಪ್ರಕಾಶಕರು, ಶಾಂತಿ ಸೇವಾಸದನ, ಶೇಡಬಾಳ, ಜಿ. ಬೆಳಗಾವಿ. ಕ್ರಾ. ಅ. ೮೦ ಪುಟಗಳು. ಬೆಲೆ ಸಾದಾ ಪ್ರತಿಗೆ ೦-೧೨-೦, ಉತ್ತಮ ಪ್ರತಿಗೆ ೧-೦-೦.

೯೭ **ಶ್ರೀ. ರಾಜಪುರೋಹಿತರು** (ವ್ಯಕ್ತಿ ಮತ್ತು ಕಾರ್ಯಗಳ ಪರಿಚಯ) ಬರೆದವರು, ಶ್ರೀಮಾನ್ ಶ್ರೀನಿವಾಸ ಹಾವನೂರ. ಪ್ರಕಾಶಕರು, ಪರಾಗ ಪ್ರಕಾಶನ, ಧಾರವಾಡ. ಕ್ರಾ. ೪.೮೮ ಪುಟಗಳು. ಬೆಲೆ ೧-೦-೦.

೯೮ **ಶ್ರೀ ಪುರಂದರದಾಸರ ಜೀವನಚರಿತ್ರೆ** (ಐತಿಹಾಸಿಕ ಮತ್ತು ಆಧ್ಯಾತ್ಮಿಕ). ಲೇಖಕರು, ಶ್ರೀ. ವಿದ್ಯಾರತ್ನ ರಾಘವೇಂದ್ರಾಚಾರ್ಯ ಪಂಚಮುಖಿ ಎಂ. ಎ. ಅವರು ಪ್ರಕಾಶಕರು, ಶ್ರೀಪುರಂದರದಾಸ ಸೇವಾಮಂಡಲ, ಹೊಸಪೇಟೆ, ಜಿ. ಬಳ್ಳಾರಿ. ಕ್ರಾ. ಅ. ೧೦೦ ಪುಟಗಳು. ಬೆಲೆ ೧-೫೦.

೯೯ **ಕಂದ** (ಚಿಕ್ಕಮಕ್ಕಳ ಮಾಸಪತ್ರಿಕೆಯ ಪೌರನೀತಿ ಸಂಚಿಕೆ) ಸಂಪಾದಕ ಮಂಡಲಿಯ ಅಧ್ಯಕ್ಷರು ಶ್ರೀಮಾನ್ ಕೆ. ಸು. ರಾಮರಾಯರು. ಪ್ರಕಾಶಕರು, ಶಿಶು ಸಾಹಿತ್ಯ ಸಂಘ, ಜಯನಗರ, ಮೈಸೂರು. ಕ್ರಾ. ೪ ದ ೩೪ ಪುಟಗಳು— ಸಚಿತ್ರ.

೧೦೦ **ರಾಯಭಾರಿ** (ವಾರಪತ್ರಿಕೆಯ ಪರ್ಯಾಯ ಸಂಚಿಕೆ) ವಿವಿಧ ಲೇಖಕರ ಒಳ್ಳೆಯ ಲೇಖನಗಳಿಂದ ಕೂಡಿದೆ. ಕ್ರಾ. ೪ ದ ೧೧೨ ಪುಟಗಳು. ಪ್ರಕಾಶನ ಸ್ಥಳ: ಉಡುಪಿ (ದ. ಕ.). ಬೆಲೆ ೦-೮-೦.

೧೦೧ **ಜಾನಪದ ಪ್ರೇಮಗೀತೆಗಳು** (ಜಾನಪದ ಸಾಹಿತ್ಯ ಸಂಕಲನ) ಸಂಕಲನಕಾರರು, ಶ್ರೀಮಾನ್ ಕ. ರಾ. ಕೃ. ಅವರು. ಪ್ರಕಾಶಕರು, ಕಾವ್ಯೋದಯ ಪ್ರಕಾಶನ, ವಿದ್ಯಾಶ್ರಮ, ಸರಸ್ವತೀಪುರಂ, ಮೈಸೂರು. ಕ್ರಾ. ಅ. ೬೪ ಪುಟಗಳು. ಬೆಲೆ ೦-೧೨-೦.

೧೦೨ **ಅಂಬಿಗರ ಗೆಂಗೆ** (ಜಾನಪದ ಕಥನಕವನಗಳು) ಸಂಕಲನಕಾರರು, ಪ್ರಕಾಶಕರು ಮೇಲೆ ಬರೆದಿರುವವರೇ. ಕ್ರಾ. ಅ. ೧೦೪ ಪುಟಗಳು. ಬೆಲೆ ೧-೦೦.

೧೦೩ **ಕನ್ನಡಿಗ** (ಹೈದರಾಬಾದಿನ ನೈಜಾಮ ಕಾಲೇಜಿನ ವಾರ್ಷಿಕ ಪತ್ರಿಕೆ). ಸಂಪಾದಕರು, ಸರ್ವಶ್ರೀ. ಶಶಿಕಾಂತ ಗಣಮುಖಿ ಬಿ. ಎ. (ಜೂ); ಸೀತಾರಾಮರಾವ್ ಎಸ್. ಜೆ, ಬಿ. ಎ. (ಸೀ) ಮತ್ತು ಶ್ರೀಮತಿ ಪ್ರಭಾ ಅಯ್ಯಂಗಾರ್ ಬಿ. ಎಸ್ಸಿ. (ಸೀ) ರೊಯಲ್ ಅ. ೬೨ ಪುಟಗಳು.

೧೦೪ **ಕತೆಗಾರ** (ಮಾಸಪತ್ರಿಕೆಯ ವಾರ್ಷಿಕ ವಿಶೇಷ ಸಂಚಿಕೆ). ಸಂಪಾದಕರು, ಶ್ರೀಮಾನ್ ಜಿ. ಎ. ನರಸಿಂಹಮೂರ್ತಿಯವರು. ಪ್ರಕಾಶಕರು, ಜೆ. ಟಿ. ಶ್ರೀಕಂಠಯ್ಯ, ಕತೆಗಾರ ಕಾರ್ಯಾಲಯ, ಚಿಕ್ಕಪೇಟೆ, ಬೆಂಗಳೂರು. ಡೆ. ಅ. ೧೦೬ ಪುಟಗಳು. ಬೆಲೆ ೦-೬೫.

೧೦೫ **Indian Literature** (ಇಂಗ್ಲಿಷ್ ತ್ರೈಮಾಸಿಕ) ಸಂಪಾದಕರು, ಸರ್ವಶ್ರೀ. ಎಸ್. ರಾಧಾಕೃಷ್ಣನ್, ಹುಮಾಯುನ ಕಬೀರ್, ಮತ್ತು ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಅವರು. ಪ್ರಕಾಶಕರು, ಸಾಹಿತ್ಯ ಅಕೆಡೆಮಿ, ನ್ಯೂ ದಿಲ್ಲಿ. ಡೆ. ಅ. ೧೬೦ ಪುಟಗಳು. ವಾರ್ಷಿಕ ಚಂದಾ ಅಂ. ವೆ. ಸೇರಿ ೨—೮—೦; ಬಿಡಿಸಂಚಿಕೆಗೆ ಒಂದು ರೂ. ಅಂ. ವೆ. ಬೇರೆ.

೧೯೫೪ನೆಯ ಇಸ್ವಿಯಲ್ಲಿ ನಡೆದ ಧಾರವಾಡದ ಎಲ್ಲ ಪ್ರಮುಖ ಭಾಷೆಗಳ ಸಾಹಿತ್ಯದ ಚಟುವಟಿಕೆಗಳ ಪರಿಚಯವನ್ನು ಮಾಡಿಕೊಡಬಲ್ಲ ಸಂಕಲನ ಪತ್ರಿಕೆಯಿದು. ಆ ಆ ಭಾಷೆಯ ತಜ್ಞರು ಇದರಲ್ಲಿಯ ಪರಿಚಯಾತ್ಮಕ ಲೇಖನಗಳನ್ನು ಬರೆದಿದ್ದಾರೆ.

೧೦೬ **ಹಳಗನ್ನಡ-ನಡುಗನ್ನಡದ ಕಾವ್ಯಸಂಗ್ರಹ** (ಆಯ್ದ ಕೃತಿಭಾಗಗಳ ಸಂಕಲನ). ಸಂಗ್ರಹಿಸಿದವರು, ಶ್ರೀಮಾನ್ ಎಂ. ಮರಿಯಪ್ಪ ಭಟ್ಟರು ಎಂ. ಎ., ಮದರಾಸ್. ಪ್ರಕಾಶಕರು, ಧಾರವಾಡದ ಸಮಾಜ ಪುಸ್ತಕಾಲಯ, ಭಗತ್‌ಸಿಂಗ ಬೀದಿ, ಧಾರವಾಡ. ಕ್ರಾ. ಅ. ೨೦೦ ಪುಟಗಳು. ಬೆಲೆ ೧-೫೦. (ಕ್ರಮಾಂಕ ೯೩ ಮತ್ತು ಕ್ರಮಾಂಕ ೧೦೬ ಪುಸ್ತಕಗಳು ದಕ್ಷಿಣ ಭಾರತ ಗ್ರಂಥ ಪ್ರಕಾಶನ ಸಂಸ್ಥೆಯ ನೆರವಿನಲ್ಲಿ ಪ್ರಕಟವಾಗಿವೆ.)

ಕರ್ನಾಟಕದಲ್ಲಿ ಭಾವಗೀತ ಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ:

ಮುದ್ದನ ಮಾತು (ಶಿಶುಭಾವದ ಗೀತೆಗಳು)	...	....	೦—೧೨—೦
ಒಡನಾಡಿ (ನಲ್ಮಾಡುಗಳು)	....	....	೧—೦—೦
ವಿರಹಿಣಿ (ತತ್ತ್ವರೂಪಕ ಗೀತೆಗಳು)	....	....	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	....	....	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar



ಂಪುಟ
೨೦

ಸಂಚಿಕೆ
೧೦

ಎಲ್ಲರೂ ಕವಿಗಳಾಗಬಲ್ಲರೆ?

ಚರ್ಮಕಾರನೆ ಚರ್ಮವ ಹದಗೊಳಿಸಬಲ್ಲ,
ಕುಂಬಾರನೆ ಕೊಡ-ಮುದಕೆಗಳ ಮಾಡಬಲ್ಲ;
ತೇಟಿಗನೆ ಮಣಿಗಳನು ಸಾಣೆ ಹಿಡಿಯಲು ಬಲ್ಲ,
ಸೊನ್ನಗಾರನೆ ಕುಂದಣಕೆಚ್ಚುವ ಕೆಲಸ ಮಾಡಬಲ್ಲ.

ಒಬ್ಬರ ಕಜ್ಜವನು ಇನ್ನೊಬ್ಬರು ಗೆಯ್ಮಲಾಟಿಸಿದರೆ—
ವಸ್ತು-ವಿತ್ತಗಳ ಹಾನಿ, ಶಕ್ತಿ-ಸಮಯಗಳ ಹಾನಿ!
ಹುಟ್ಟಿದವರೆಲ್ಲ ಕವನವ ಕಟ್ಟಲು ಹೊರಟರೆ,
ಕುಟ್ಟಿಕೊಂಡು ಅಳುವಳೈಯಾ ನಮ್ಮ ವಾಗೀಶ್ವರಿ!

—ಸಾಮಾಜಿಕ

ಮಾರ್ಚ್

JAYANTI

ಈ ಸಂಚಿಕೆಯಲ್ಲಿ :

ಮತ್ತೆ ಜಯಂತಿಯ ನೂತನ-ಕತೆ (ಸಂಪಾದಕೀಯ)
ಸಂಪಾದಕರು ೩೬೧
ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೩೬೩
ಗಡಿತಂಟೆ (ಸಣ್ಣಕತೆ)
ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ ೩೬೫
ರಾಜಧರ್ಮ (ವಿ. ಪ್ರ. ಪ್ರಬಂಧ)
ಶ್ರೀ. ಕೆ. ವೆಂಕಟರಾಯಾಚಾರ್ಯ, ಸುರತಕಲ್ಲು ೩೬೯
ಸುಸಂಸ್ಕೃತ ಹೃದಯ (ಕವನ)
ಶ್ರೀ. ವಿರೂಪಾಕ್ಷ ಬಿ. ಕಾಮ್. (ಸೀ). ಹುಬ್ಬಳ್ಳಿ ೩೭೨
ಈ ಪರಿಯ ಸೋಗು (ಸಣ್ಣಕಥೆ)
ಶ್ರೀ. 'ಸ. ಬಿ. ಕು'. ಮುಂಬಯಿ, ... ೩೭೩
ನಿಕಿತಾ ಕ್ರುಶ್ಚೇವ (ವ್ಯಕ್ತಿತ್ವ ಪರಿಚಯ)
ಶ್ರೀ. ವೆಂ. ಮು. ಜೋಶಿ, ಧಾರವಾಡ ೩೭೬
ಓ, ದೇವ! (ಕವನ)
ಶ್ರೀ. ಬಾ. ಸದಾಶಿವ ಕುಂಚೂರ, ಹುಬ್ಬಳ್ಳಿ ೩೮೦
ಜೋಗವಾಹಿನಿ (ಕವನ)
ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್‌ಎಲ್. ಬಿ. ಮುಂಬಯಿ ೩೮೧
ನಾನು ಬರೆದ ದೊಡ್ಡ ಪತ್ರ (ಹರಟೆ)
ಶ್ರೀ. ಸಂಜೀವ ಲಕ್ಷ್ಮೇಶ್ವರ ಬಿ. ಎ. ಮುಂಬಯಿ ೩೮೯
ಗುಂಡೂನ ಗಂಡಾಂತರ (ಜೀವನಚಿತ್ರ)
'ಮಕರಂದ' ಬೆಂಗಳೂರು ೩೯೪
ಭೃಗು-ವರುಣ ಸಂವಾದ (ಔಪನಿಷದಿಕ ವಿಚಾರ)
ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ., ಎಲ್‌ಎಲ್. ಬಿ. ಧಾರವಾಡ ೩೯೬
ಕಂಕಣ (ಒಂದು ಕಾದಂಬರಿಯ ವಿಮರ್ಶೆ)
ವಿದ್ವಾನ್ ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಮ್, ಕಾಸರಗೋಡು ೩೯೯
ಮರಳಿನೊಂದು ಕಣ (ಲಘುಪ್ರಬಂಧ)
ಶ್ರೀ ಎಲ್. ಡಿ. ಟಿ ಇನಾಮದಾರ, ಗುಲಬರ್ಗಾ
ಮರೆಯಲಾಗದ ಯಾತ್ರೆ (ಪುಸ್ತಕ ವಿಮರ್ಶೆ)
ಧಾರೇಶ ೪೦೭
ಸ್ವಾಗತಗೀತೆ
ಶ್ರೀ. ಜಿ. ಶಂಕರಭಟ್ಟ ಬಿ ಎ., ಬಿ. ಟಿ. ಪೆರಡಾಲ ೪೦೭
ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಆರ್. ಪಿ. ಕುಲಕರ್ಣಿ ಎಂ. ಎ., ಬಿ. ಟಿ., ಡಿ. ಪಿ ಎಡ್. ೪೧೫

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೨೦ ಸಂಚಿಕೆ ೧೦

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

ಜಾಹೀರಾತು ಕೊಡಬಯಸು
ವರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಮತ್ತೆ ಜಯಂತಿಯ ಮಾತುಕಥೆ

ಕಳೆದ ತಿಂಗಳಲ್ಲಿ ಜಯಂತಿಯ ಕಷ್ಟ-ಕೋಟಲೆಗಳ ಕಥೆಯನ್ನು ಕನ್ನಡಿಗರ ಕಿವಿಗೆ ಕೇಳಿಸಿ ಆಯಿತು. ಅದನ್ನು ಕೇಳಿದ ಕೆಲವು ಜನ ಜಯಂತಿಯ ಅಭಿಮಾನಿಗಳು, ಕನಿಕರ. ಕಳವಳ ವಟ್ಟು, ಕಾಗದಗಳನ್ನು ಬರೆದಿದ್ದಾರೆ. ಮಡಿಕೇರಿಯ ಮಹನೀಯ. ರೊಬ್ಬರು, ತಮ್ಮ ಹೆಸರನ್ನು ಅಜ್ಞಾತವಾಗಿಡಲು ಸೂಚಿಸಿ ನಾಲ್ಕು ಜನ ಚಂದಾದಾರರ ಹಣವನ್ನು ಮ. ಆ. ಮೂಲಕ ಕಳುಹಿದ್ದಾರೆ. ಕೆಲವು ಜನ ಸಹೃದಯರು ಸಹಾಯಧನ. ವೆಂದು—ಮುಂದಿನ ಯಾವ ವಿಚಾರವನ್ನೂ ಮನದಲ್ಲಿ ತಾರದೆ—ಶಕ್ಯನಿದ್ದಷ್ಟು ಹಣವನ್ನು ಕಳುಹಿದ್ದಾರೆ. ಇನ್ನು ಕೆಲವರು ಸಹಾಯಧನ ಕಳುಹುವುದಾಗಿ ಆಶ್ವಾಸನದ ಕಾಗದ ಬರೆದಿದ್ದಾರೆ. ರಂಗಂಪೇಟೆಯ ಕರ್ನಾಟಕ ಸಂಘದವರಂತೂ, ಜಯಂತಿಯ ಮುಂದು ವರಿತಕ್ಕಾಗಿ ಧನಸಹಾಯವನ್ನು ಒದಗಿಸಲು ವಿವಿಧ ಬಗೆಯಿಂದ ಚಟುವಟಿಕೆ ನಡೆಸಿರುವು. ದಾಗಿ ಬರೆದು ತಿಳುಹಿದ್ದಾರೆ. ಬೆಳಗಾಂವಿಯ ಆರ್. ಎಲ್. ಎಸ್. ಲಾ ಕಾಲೇಜಿನ ಕರ್ನಾಟಕಸಂಘದ ಸದಸ್ಯರು 'ಜಯಂತಿಯನ್ನು ನಿಲ್ಲಿಸಲಾಗದು. ಅದಕ್ಕೆ ಆರ್ಥಿಕ ಸಹಾಯ ಸಲ್ಲಿಸುವುದರಲ್ಲಿ ನಮ್ಮ ಸಂಘವೂ ತನ್ನ ಪಾಲಿನ ಕರ್ತವ್ಯ ಮಾಡುವುದು' ಎಂಬರ್ಥದ ಗೊತ್ತುವಳಿಯನ್ನು ಮಾಡಿ, ನಮ್ಮ ಕಾರ್ಯಾಲಯಕ್ಕೆ ಅದನ್ನು ಬರೆದು ತಿಳುಹಿರುವರು. ಆದರೆ ಈ ರೀತಿಯ ಸಹಾನುಭೂತಿ—ಸಹಕಾರಗಳನ್ನು ತೋರಿಸಿದವರೆಲ್ಲರೂ ಹೆಚ್ಚಾಗಿ ನಮ್ಮ ಹಳೆಯ ಆಪ್ತಸಂಬಂಧಿಗಳೆ. ಹೊಸಬರಾರ ಹೃದಯವನ್ನೂ ಜಯಂತಿಯ ಗೋಳು ತಟ್ಟಿದ ಸೂಚನೆಗಳು ಇದುವರೆಗೂ ಕಂಡುಬಂದಿಲ್ಲ.

× × × ×

ಜಯಂತಿ ನಿಲ್ಲಬಾರದು—ಅದು ಬಹುಕಾಲ ಬದುಕಬೇಕು—ಎಂದು ಮನವಾರೆ ಬಯಸುವ ಮಹನೀಯರು ಕೆಲವರಾದರೂ ಇರುವರೆಂಬುದು ನಮ್ಮ ಅನುಭವದ ಸಂಗತಿ. ಈಗಲೂ ಜಯಂತಿಯ ಗೋಳಿಗಾಗಿ ಬೇಸರಿಯದೆ, ಅವರ ಹೊಕೆಸು ಭಾರವನ್ನು ಕೆಲವಷ್ಟಿಗೆ ಕಡಿಮೆಮಾಡಲು ಮುಂದೆ ಬಂದು, ನಮ್ಮ ಅನುಭವಕ್ಕೆ ಸತ್ಯನೆಂಬುದನ್ನು ಸಿದ್ಧವಾಗಿ ಕೊಟ್ಟಿದ್ದಾರೆ. ಆದರೆ ಇದರಿಂದ ಜಯಂತಿಗೆ ಸವಲಾಭವಿಲ್ಲ ಓದಬಲ್ಲ ಕನ್ನಡಿಗರೆಲ್ಲರೂ ಜಯಂತಿಯನ್ನು ಬರಮಾಡಿಕೊಂಡು, ಅದರ ಧ್ಯೇಯೋದ್ದೇಶವನ್ನು ಚೆನ್ನಾಗಿ ಪಡೆದು, ಅದಕ್ಕೆ ಪೋಷಣೆಯನ್ನು ಸಲ್ಲಿಸುವುದು ಅಗತ್ಯದ ಮಾತಾಗಿದೆ.

× × × ×

ಜಯಂತಿ ಹೆಣ್ಣಾಗಳಿಸಲು ಹೊರಟ ವ್ಯಾಪಾರೀ ಕಂಪ್ನಿಯಲ್ಲ. ಅದರ ಸಂಚಾಲಕರು ಜಯಂತಿಯ ಗಳಿಕೆಯ ಮೇಲೆ ತಮ್ಮ ಜೀವನ ಸಾಗಿಸಬೇಕೆಂದು ಬಯಸುವವರಲ್ಲ. ನಾಡಿಗ. ರಲ್ಲಿ ಜೀವನೋಪಯುಕ್ತವಾದ ಸುವಿಚಾರ, ಜ್ಞಾನ ವಿಜ್ಞಾನಗಳ ಪರಿಚಯಗಳನ್ನು ಹರಡ. ಬೇಕೆಂಬ ಹಿರಿಯ ಗುರಿಯನ್ನಿರಿಸಿಕೊಂಡು ಜಯಂತಿ ಕಾರ್ಯಮಾಡುತ್ತ ಬಂದಿವೆ. ಆದರೆ ಜಯಂತಿಯ ಒಂದೊಂದು ಸಂಚಿಕೆಯೂ ಹೊರಗೆ ಬರಬೇಕಾದರೆ, ಹಣವನ್ನು ವೆಚ್ಚವಾಗದೆ ಬರುವುದೆ? ಈ ವೆಚ್ಚವನ್ನು ನಮ್ಮ ನಾಡಿಗರು ನಿರ್ವಹಿಸಬೇಕಾದುದು ಅಗತ್ಯ ಕರ್ತವ್ಯ. ವಲ್ಲವೆ? ಹಾಗೆ ನಿರ್ವಹಿಸಿಕೊಂಡಾಗ, ಜಯಂತಿ ಇನ್ನೂ ಪುಷ್ಟ ದೇಹವನ್ನಾದೀತು. ಬಹಿರಂಗ ಸೌಂದರ್ಯಸಾಧನಗಳನ್ನೂ ಹೊಂದಿ ನಿಂತೀತು. ಹೊರಗೆ ತಿರಿದುಂಡು ಹಗಳಿರುಳೂ ಸೇವೆಮಾಡುವ ಭೃತ್ಯನನ್ನು ಬಯಸಿದರೆ, ಅದು ಉಚಿತವೆನಿಸುವುದೇ? ಸಾಧ್ಯ—ವೆನಿಸುವುದೇ ? ತಿನಿಸಿ ಉಣಿಸಿ, ಉಡಿಸಿ ತೊಡಿಸಿ ಸಂತುಷ್ಟನನ್ನಾಗಿ ಇರಿಸಿದ ಭೃತ್ಯನಿಂದಲೇ ಸರಿಯಾದ ಸೇವೆ ಸಂದೀತವಲ್ಲವೆ ?

ಜನತೆಯಿಂದ ಪೋಷಕ ದೊರೆಯದ ಕಾರಣದಿಂದ ಸಂಚಾಲಕರೀಗ ಜಯಂತಿಯನ್ನು ನಿಲ್ಲಿಸಿದರೆಂದೇ ತಿಳಿಯೋಣ; ಇದರಿಂದ ಸಂಚಾಲಕರು ಆರ್ಥಿಕ ಹಾನಿಯಿಂದ ಮುಕ್ತರಾಗಬಹುದು; ಆದರೆ ಜಯಂತಿಯಂತಹ ಪತ್ರಿಕೆಯು ಅಭಾವದಿಂದ ಜನತೆಗಾಗುವ ಸಾಂಸ್ಕೃತಿಕ ಹಾನಿಗೆ ಅಳತೆಯಿಲ್ಲವೆಂಬುದನ್ನು ಕವಿಗಳು ಜನರು ಒಪ್ಪುವರು. ಲಾರರು. ಕರ್ನಾಟಕದಲ್ಲಿ ಜಯಂತಿ ತನ್ನ ೨೦ ವರ್ಷಗಳ ಅವಧಿಯಲ್ಲಿ ನೂರಾರು ಜನ ನವತರುಣ ಲೇಖಕರನ್ನು ಬೆಳಕಿಗೆ ತಂದಿದೆ ಅವರ ಪ್ರಾರಂಭ ಪ್ರಯತ್ನಗಳಿಗೆಲ್ಲ ಒಪ್ಪಕೊಟ್ಟು ಪ್ರಕಟಿಸಿ, ಅವರನ್ನು ಕೈ ಹಿಡಿದು ಮುಂದೆ ಕರೆದುಕೊಂಡು ಬಂದು, ಅನೇಕರನ್ನು ಮೇಲು ಮೇಲಿನ ಮೆಟ್ಟಿಲನ್ನೇರಿಸಿ ನಿಲ್ಲಿಸಿದೆ. ಜಯಂತಿಯು ಈ ಕಾರ್ಯದ ಬೆಲೆಯನ್ನು ಚೆನ್ನಾಗಿ ಅರಿತ ಮಹನೀಯರು ನಮ್ಮಲ್ಲಿ ಇಲ್ಲದೆ ಇಲ್ಲ.

× × × ×

ಇನ್ನೂ ಒಂದು ವಾಸ್ತವ ವಿವೇಕವನ್ನು ನಮ್ಮ ಜನ ಅರಿತು ಕೊಳ್ಳಬೇಕು. ಜಯಂತಿಯಂತಹ ಗುರಿಯಿಂದ ಕಾರ್ಯಮಾಡುವ ಮಾಸಪತ್ರಿಕೆಗಳು, ನಮ್ಮ ನಾಡಿನಲ್ಲಿ ಒಂದು ಕೈಯುದೆರಳಿಂದ ಎಣಿಸುವಷ್ಟೂ ಇಲ್ಲ. ಹೀಗಿರುವಾಗ, ಜಯಂತಿ ಕಣ್ಮರೆಯಾಗುವುದು ಒಳ್ಳೆಯದೆ? ಇದು—ದುರ್ದೈವವಶಾತ್—ಕಣ್ಮರೆಯಾದರೆ, ಇದರ ಸ್ಥಾನವನ್ನು ತುಂಬುವಂತಹ ಮತ್ತೊಂದು ಪತ್ರಿಕೆ ತಲೆದೋರಲು ಸಾಧ್ಯವಾದೀತೆ? ಜಯಂತಿಯ ಬೀಜವನ್ನು ನೆಟ್ಟು ಕವಿಯನ್ನಾಗಿ ಮಾಡಿದ ಮಹನೀಯರೇ—ಮೊದಲಿನ ಮೂರು ವರ್ಷಗಳಲ್ಲಿ—ಹತ್ತೆಂಟುಸಾವಿರರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಆ ಮೇಲಿನ ಹದಿನೇಳು ವರ್ಷ ಆ ಪತ್ರಿಕೆಯನ್ನು ಬೆಳೆಸಿ ಗಿಡವನ್ನಾಗಿಸುತ್ತ ಬಂದವರೂ ಗಳಿಸಿದ್ದು ಸಾವಿರ ರೂಪಾಯಿಗಳ ನಷ್ಟದ ಹೊರೆಯನ್ನು ಹೊತ್ತು ನಿರುತ್ಸಾಹಿಗಳಾಗಿದ್ದಾರೆ ಇಂತಹ ಪ್ರತ್ಯಕ್ಷ ಉದಾಹರಣೆ ಕಣ್ಣೆದುರು ಇರುವಾಗ, ಜಯಂತಿಯಂತಹ ಬೇರೆ ಹೊಸಪತ್ರಿಕೆಯನ್ನು ಹೊರಡಿಸಲಿಕ್ಕೆ ಯಾರಿಗೆ ಧೈರ್ಯವಾದೀತು? ಹಾಗಾದರೆ ಇದ್ದ ಜಯಂತಿಯೆ ಬದುಕಿ-ಮುಂದುವರಿಯುವಂತೆ ಸಹಕರಿಸುವುದು ನಮ್ಮ ಕನ್ನಡ ಜನತೆಯ ಕರ್ತವ್ಯವಲ್ಲವೆ?

× × × ×

ಜಯಂತಿ ತನ್ನ ೨೦ನೆಯ ವರ್ಷವನ್ನು ಮುಗಿಸಲು ಇನ್ನೂ ಎರಡು ತಿಂಗಳ ಅವಧಿಯಿದೆ. ಈ ಅವಧಿಯಲ್ಲಿ, ಜನತೆಯಿಂದ ಶೃದ್ಧಿಕರವಾದ ಸಹಕಾರ ದೊರೆಯುವ ಲಕ್ಷಣಗಳು ಕಂಡುಬಂದರೆ, ಜಯಂತಿ ತನ್ನ ಕಾರ್ಯವನ್ನು ಮುಂದುವರಿಸುವ ಆಶೆಯನ್ನು ಇರಿಸಿಕೊಂಡಿದೆ. ಕನ್ನಡ ಜನತೆ ಈ ಆಶೆಯ ಚಿಗುರನ್ನು ಕಮರಿಸಲಾರದೆಂದು ನಮ್ಮ ಹಾರೈಕೆ.

'ಸಂಪಾದಕರು ನಾಡಿನಲ್ಲಿ ತಿರುಗಾಡಿ ಚಂದಾದಾರರನ್ನು ಹೆಚ್ಚಿಸಬಾರದೇಕೆ?-'ಎಂದು ಕೆಲವು ಜನ ಆಸ್ಥಮಿತ್ರರು ಕೇಳುವರು. ಜಯಂತಿಯ ಇಂದಿನ ಆರ್ಥಿಕ ದುರವಸ್ಥೆಯು ಮೂಲಕ ಅದು ಸಾಧ್ಯವಿಲ್ಲವಾಗಿದೆ. ಏಕೆಂದರೆ ಜಯಂತಿ ಕಾರ್ಯಾಲಯದಲ್ಲಿ ಸಂಪಾದಕರೊಬ್ಬರ ಹೊರತು, ಬೇರೆ ಕಾರ್ಯಕರ್ತರಾರೂ ಇಲ್ಲ ಇದ್ದವರಲ್ಲಿ ಒಬ್ಬರು ಹೊರಗೆ ಹೊರಟರೆ, ಇಲ್ಲಿ ಕಾರ್ಯಾಲಯದ ಕಾರ್ಯಭಾರಗಳೆಲ್ಲ ಬಿದ್ದೆಯಬೇಕು ಹೇಗೆ? ಹಣಕೊಟ್ಟು ಇದನ್ನೆಲ್ಲ ಮಾಡಿಸಿಕೊಳ್ಳಲಿಕ್ಕೆ ಎಲ್ಲಿ ಸಾಧ್ಯ? ಆದುದರಿಂದಲೇ ನಾವು ಅಲ್ಲಲ್ಲಿಯ ಜಯಂತಿಯ ಅಭಿಮಾನಿಗಳಿಗೆ ಬಿನ್ನವಿಸಿಕೊಳ್ಳುವುದು: 'ನೀವೇ ಜಯಂತಿಯ ಪ್ರತಿನಿಧಿಗಳಾಗಿ ಅಲ್ಲಲ್ಲಿಯ ಮಹಾಜನರನ್ನು ಕರೆದು; ಜಯಂತಿಯ ಅಸ್ತಿತ್ವದ ಅಗತ್ಯವನ್ನು ಅವರಿಗೆ ಮನಗಾಣಿಸಿ ಕೊಡಿರಿ ಅವರನ್ನು ಚಂದಾದಾರರನ್ನಾಗಿಸಿ ಜಯಂತಿಯ ಬಲವನ್ನು ಬೆಳೆಸಿರಿ!

ಮೈಸೂರು ರಾಜ್ಯದ ವಿದ್ಯಾಧಿಕಾರಿಗಳು ಹೈಸ್ಕೂಲು—ಮಿಡಲ್ ಸ್ಕೂಲು—ಟ್ರೇನಿಂಗ್ ಸ್ಕೂಲುಗಳಿಗೆ ಜಯಂತಿಯನು ತರಿಸಿಕೊಳ್ಳಬಹುದೆಂದು ಎಂದೋ ಮನ್ನಣೆ ಕೊಟ್ಟಿದ್ದಾರೆ. ನಮ್ಮ ರಾಜ್ಯದ ಹೈಸ್ಕೂಲು-ಮಿಡಲ್ ಸ್ಕೂಲುಗಳಿಗೆಲ್ಲ ಜಯಂತಿಯನ್ನು ಬರವಾಡಿಕೊಂಡರೆ, ಜಯಂತಿಯ ಜೀವನ ಸ್ಥೈರ್ಯಕ್ಕೆ ಯಾವ ಯೋಚನೆಯೂ ಉಂಟಾಗದು. ಜಯಂತಿಯಂತಹ ಪತ್ರಿಕೆಯನ್ನು ತರಿಸಿಕೊಳ್ಳದೆ ಇರುವುದೆಂದರೆ ಒಂದು ಕೊರತೆಯೆಂಬ ಮನವರಿಕೆ, ನಮ್ಮಲ್ಲಿಯ ಬಹಳ ಜನ ಮುಖ್ಯಾಧ್ಯಾಪಕರಿಗೆ ಆದಂತಿಲ್ಲ ಈಗಲಾದರೂ ಅವರು ಚಂದಾದಾರರಾಗಿ ಜಯಂತಿಯ ಪುನರುಜ್ಜೀವನಕ್ಕೆ ಸಹಾಯ ಮಾಡಬೇಕೆಂದು ನಮ್ಮ ಬಿನ್ನಹ.

ಜಯಂತಿ ಜೀವನ-ಮರಣಗಳ ಮಧ್ಯದಲ್ಲಿ ನೇತಾಡುತ್ತಿದ್ದರೂ ಯಾವುದೇ ಬಗೆಯ ಸಂದೇಹ ಭೀತಿಗಳನ್ನು ಮನದಲ್ಲಿ ತಾರದೆ ಅದಕ್ಕೆ ಸಹಾಯ ಮಾಡಲು ಮುಂದೆ ಬಂದಿರುವ ಮಹನೀಯರುಗಳೆಲ್ಲ ನಮ್ಮ ಕೃತಜ್ಞತೆಯ ವಂದನೆಗಳು. ಅವರ ಸದಿಚ್ಛೆಯ ಸಹಾಯ ಒಂದಕ್ಕೆ ನೂರಾಗಿ, ಜಯಂತಿಯು ಜೀವನ ಭದ್ರವಾಗಲಿ! ಜಯಂತಿಯು ಸಂಸ್ಕೃತಿ ಶಿಕ್ಷಣದ ಕಾರ್ಯ ಅವಿಚ್ಛಿನ್ನವಾಗಿ ಸಾಗಲಿ—ಎಂದು ನಮ್ಮ ಹಾರೈಕೆ.

ವಿಲಂಬಕ್ಕೆ ಕಾರಣ

ಜಯಂತಿಯು ಈ ಸಂಚಿಕೆ ಹೊರಬೀಳಲಿಕ್ಕೆ ತುಂಬ ವಿಲಂಬವಾಯಿತು ಇದಕ್ಕೆ ಕಾರಣವೆಂದರೆ, ಮುದ್ರಣ ಕಾಗದದ ದುರ್ಭಿಕ್ಷತೆ ಹಣ ಹಿಡಿಸುಕೊಂಡು ಅಲೆದಾಡಿದರೂ ಈ ತಿಂಗಳ ಗಡುವಿನ ತಾರೀಖಿನವರೆಗೆ ನಮಗೆ ಕಾಗದವೇ ದೊರೆಯಲಿಲ್ಲ ಅನೇಕ ರೋಚಿಯು ಹುಟ್ಟದ ಬಿಡುವು; ಸಂಪಾದಕರು ಅನಿವಾರ್ಯವಾಗಿ ನಿರ್ವಹಿಸಬೇಕಾದ ಒಂದು ಧಾರ್ಮಿಕ ವಿಧಿಗಾಗಿ ಬೇರೆಯೂರಿಗೆ ಹೋಗಬೇಕಾಗಿ ಬಂದುದು-ಇವೆಲ್ಲ ವಿಲಂಬಕ್ಕೆ ಹೆಚ್ಚಿನ ಕಾರಣಗಳಾದುವು. ಮುಂದಿನ ಸಲಕ್ಕೆ ಹೀಗಾಗದಂತೆ ಪ್ರಯತ್ನಿಸುವೆವು. ಈ ಸಲದ ವಿಲಂಬಕ್ಕಾಗಿ ವಾಚಕರು ನಮ್ಮನ್ನು ಕ್ಷಮಿಸಬೇಕು.

—ಸಂಪಾದಕ

ನಾಡನಡೆ

ಡಾ. ಕಬ್ಬೂರ ನಾರಾಯಣರಾಯರು

ಧಾರವಾಡ ನಗರವು—ಜಿಲ್ಲೆಯು—ನಾಗರಿಕರಿಗೆ, ಡಾ. ಕಬ್ಬೂರ ನಾರಾಯಣರಾಯರು ಸುಪರಿಚಿತ ವ್ಯಕ್ತಿಗಳು. ಅವರ ರಾಜಕೀಯ-ಸಾಮಾಜಿಕ-ಸಾರ್ವಜನಿಕ ಕಾರ್ಯವು ತುಂಬುತನದಿಂದ ಕೂಡಿದುದು. ಸ್ವಂತದ ವ್ಯವಸಾಯವಾದ ವೈದ್ಯಕದಲ್ಲಿ ಡಾ ನಾರಾಯಣರಾಯರು, ತಜ್ಞತೆಗಾಗಿಯೂ ಕರ್ತವ್ಯದಕ್ಷತೆ—ಸ್ವಾವಲಂಬಿಕತೆಗಳಿಗಾಗಿಯೂ ಸಾಕಷ್ಟು ಹೆಸರನ್ನು ಪಡೆದವರು. ಮಿಕ್ಕ ಕಡೆಗಳಲ್ಲಿ ಹೆಸರು ಪಡೆದ ಹಲವಾರು ಡಾಕ್ಟರರು ಸಂಪಾದಿಸುವಷ್ಟು ಇವರು ಆರ್ಥಿಕ ಸಂಪಾದನೆ ಮಾಡಿರಲಿಕ್ಕಿಲ್ಲ. ಇದಕ್ಕೆ ಕಾರಣವೆಂದರೆ ಇವರ ಸಮಾಜಸೇವೆಯು ಬಗೆಗಿರುವ ವಿಶೇಷ ಆಸಕ್ತಿ.

ವಿದ್ಯಾರ್ಥಿದಶೆಯಿಂದಲೂ ಡಾ. ನಾರಾಯಣರಾಯರ ಮನಸ್ಸು ಸ್ವಾತಂತ್ರ್ಯದ ಚಳವಳಿಯ ಕಡೆಗೆ. ಇವರ ಅಣ್ಣಂದಿರಾದ ದಿ ಕಬ್ಬೂರ ಮಧ್ವರಾಯರ ದೇಶಭಕ್ತಿ, ತಮ್ಮನ ಸ್ವಾತಂತ್ರ್ಯ ಚಟುವಟಿಕೆಯ ಒಲವಿಗೆ ಹೆಚ್ಚಿನ ಪುಟವನ್ನು ಕೊಟ್ಟಿತು. ಭಾರತ ಸ್ವಾತಂತ್ರ್ಯ-ದೇವಿಯು ಯಾವ ಕರೆಗೂ ಡಾಕ್ಟರರು ಓಗೊಡದೆ ಇಲ್ಲ. ಆದುದರಿಂದಲೇ ಡಾ. ನಾರಾಯಣರಾಯರು, ಪ್ರಗತಿ ಹೊಂದುತ್ತಿರುವ ವ್ಯವಸಾಯ-ವನ್ನು ಕಡೆಗಣಿಸಿ, ಸೆರೆವಾಸ ಸೇರಿ, ವ್ಯವಹಾರ ಬುದ್ಧಿಯವರಿಂದ 'ಅವ್ಯವಹಾರಿ' ಎಂದು ಕರೆಯಿಸಿಕೊಂಡರು. ಕೈಕಾಲುಗಳ ಪ್ರತಿ-ಯೊಂದು ಅಲುಗಾಟವೂ ಕಾಸನ್ನು ಸಂಪಾದಿಸಬೇಕೆನ್ನುವ ಸಾಮಾನ್ಯ-ರಿಗೆ, ಡಾಕ್ಟರರ ಗುರಿಯು ಹೆಂಬಲ ಹೇಗೆ ಅರ್ಥವಾಗಬೇಕು ?

ಡಾಕ್ಟರರ ಸಾರ್ವಜನಿಕ ಸೇವೆಯು ಅಪೇಕ್ಷೆ, ಧಾರವಾಡದಲ್ಲಿ ಅವರಿಂದ ಅನೇಕ ಕಾರ್ಯಗಳನ್ನು ಮಾಡಿಸಿದೆ. ಇವರು ನಗರ ಸಭೆಯ ಅಧಿಕಾರದಲ್ಲಿದ್ದು ಕೆಲಸ ಮಾಡುವಾಗ, ಧಾರವಾಡ ನಗರ ವಿವಿಧರೀತಿಯ ಸುಧಾರಣೆಗಳನ್ನು ಹೊಂದಿತು. ಇವರ ನಾಯಕತ್ವ-ದಲ್ಲಿರುವ ಕರ್ನಾಟಕ ಎಜ್ಯುಕೇಶನ್ ಸೊಸೈಟಿ ಎಂಬ ಸಂಸ್ಥೆಯು, ಧಾರವಾಡದಲ್ಲಿ ಮೂರು ಹೈಸ್ಕೂಲುಗಳನ್ನು ಯಶಸ್ವಿಯಾಗಿ ನಡೆ-ಸುತ್ತಲಿದೆ. ತರುಣರಲ್ಲಿ ವ್ಯಾಯಾಮಪ್ರೀತಿ ಬೆಳೆಯಬೇಕೆಂಬ ಇವರ ಆಶೆ, ವ್ಯಾಯಾಮ ಸಂಸ್ಥೆಗಳ ಉದಯ—ಉತ್ತೇಜನಗಳಿಗೆ ಕಾರಣವಾಗಿದೆ. ದುಗ್ಧಾಲಯ, ಕೃಷಿಕ್ಷೇತ್ರಗಳನ್ನು ಮಾಡುವಾಗ ನಡೆಸಬೇಕೆಂಬ ಇವರ ಪ್ರಯತ್ನವು, ಧಾರವಾಡದ ಜನರಿಗೆಲ್ಲ ಗೊತ್ತಿದ್ದ ವಾತು. ಇವೆಲ್ಲವನ್ನೂ ನೋಡಿದಾಗ, ಡಾ. ನಾರಾಯಣರಾಯರ ವ್ಯಕ್ತಿತ್ವ ದೇಶಕ್ಕೆ—ಜನತೆಗೆ—ಎಷ್ಟೊಂದು ಪ್ರಯೋಜನಕಾರಿಯಾಗಿ ಪರಿಣಮಿಸಿದೆಯೆಂಬುದು ಚೆನ್ನಾಗಿ ಮನವರಿಕೆಯಾಗಬಹುದು

ಡಾ. ನಾರಾಯಣರಾಯರು ಪ್ರಕಟನಾಪ್ರಿಯರಲ್ಲ; ಕಾರ್ಯ-ಪ್ರಿಯರು. ಎಂತಲೇ ಅವರ ಹೆಸರು ಪತ್ರಿಕೆಗಳಲ್ಲಿ ಹೆಚ್ಚು ಸಲ ಕುಣಿದಾಡಿಲ್ಲ; ಆದುದರಿಂದ ಹೊರಗಿನವರಿಗೆ ಅವರ ವ್ಯಕ್ತಿತ್ವ ಎಂತಹ-ದೆಂಬುದು ಹೆಚ್ಚಾಗಿ ತಿಳಿದಿರಲಿಕ್ಕಿಲ್ಲ. ಆದರೆ ಭಾರತದ ಯಾವ ಸ್ವಾತಂತ್ರ್ಯಯೋದ್ಧನ ಕಾರ್ಯಕ್ಕಿಂತ ಡಾಕ್ಟರರ ಕಾರ್ಯ ಹಿಂದೆ ಬೀಳಲಾರದು. ಡಾ. ನಾರಾಯಣರಾಯರಿಗೆ ೬೦ ವರ್ಷಗಳು ತುಂಬಿದುದರಿಂದ, ಸಾರ್ವಜನಿಕ ರೀತಿಯಿಂದ ಅವರ ಷಷ್ಟ್ಯಬ್ದಿ-ಮಹೋತ್ಸವವನ್ನು ನೆರವೇರಿಸಿ, ನಮ್ಮ ಜನತೆ ಅವರಿಗೆ ತನ್ನ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸುವುದು ಸಂತೋಷದ ಸಂಗತಿ. ಕೃತಜ್ಞತಾ ಬುದ್ಧಿ ನಾಡಿಗರ ಸುಸಂಸ್ಕೃತಿಯ ಲಕ್ಷಣ ಕೃತಘ್ನತಾ ಬುದ್ಧಿ ಅವರ ಅಸಂಸ್ಕೃತಿಯ ಲಕ್ಷಣ ಮಾಡಿದವರ ಉಪಕಾರವನ್ನು ಮರೆತು ಬಿಡುವುದು ಕೋತಿಗತನವೆನಿಸುವುದು.

ಅರುವತ್ತು ವರುಷಕಾಲ ಜನತೆಗೆ ಬೇಕಾದವರಾಗಿ ಬಾಳಿರುವ ಡಾ ನಾರಾಯಣರಾಯರು, ಪೂರ್ಣಾಯುಷಿಗಳಾಗಿ ಬಾಳಲಿ. ಅವರು ತಮ್ಮ ಆದರ್ಶಗಳನ್ನೆಲ್ಲ ಸಾಧಿಸಿಕೊಂಡು ನಾಡಿನ ಸುಖ-ಸಂತೃಪ್ತ ಜೀವನಕ್ಕೆ ಕಾರಣರಾಗಲಿ !

ಮಾನವತೆ ಪಶುತ್ವಕ್ಕೆ ಇಳಿದಿದೆಯೆ ?

ಕನ್ನಡ ಜನತೆಯು ಐತಿಹಾಸಿಕ ಜೀವನವನ್ನು ನೋಡಿದರೆ, ಅದು ಸುನೀತಿ-ಸದಾಚಾರಗಳ ತಳಹದಿಯ ಮೇಲೆಯೆ ತನ್ನ ದಿವ್ಯ-ಮಂದಿರವನ್ನು ಕಟ್ಟಿರುವುದೆಂಬುದು ಕಂಡುಬಾರದಿರದು. ಅಂತಹ ಜೀವನ ಸಂಸ್ಕೃತಿಯನ್ನು ಸುಸಂಘಟಿತ ರೀತಿಯಿಂದ ಬೆಳೆಸಬೇಕೆಂದೇ ನಾವೆಲ್ಲ ಭಾರತಸ್ವಾತಂತ್ರ್ಯಕ್ಕಾಗಿ ಕೋರಾಡಿದೆವು; ಕರ್ನಾಟಕ-ವನ್ನು ಒಂದುಗೂಡಿಸಲು ಹೆಣಗಾಡಿ ಸಿದ್ಧಿಯನ್ನು ಪಡೆದೆವು. ಆದರೆ ನಮ್ಮ ನಾಡಿನ ಮೂಲೆ-ಮೂಲೆಗಳಿಂದಲೂ ನಿತ್ಯ ನಿತ್ಯ ಹರಿದುಬರುತ್ತಿರುವ ದುರ್ವೃತ್ತಗಳನ್ನು ಮನನಮಾಡಿದರು ತಂದರೆ, ಕನ್ನಡ ಜನತೆಯು ಜೀವನಸಂಸ್ಕೃತಿಯೆಲ್ಲ ಎಲ್ಲಿಯೋ ಹಾಳಾಗಿ ಹೊಗಿದೆಯೆಂಬುದು ಒಡೆದು ಕಾಣುವುದು. ಸಮಾಜದ ಕಲ್ಯಾಣ-ಕ್ಕಾಗಿ ಸರಕಾರ ಮಾಡಿದ ನಿಯಮ-ನಿರ್ಬಂಧಗಳನ್ನು ವೈಯಕ್ತಿಕ-ವರ್ತವಣೆ-ಲಾಭಕ್ಕಾಗಿ, ಮುರಿಯುವವರ ಸಂಖ್ಯೆಯೇ ನಮ್ಮ ನಾಡಿನಲ್ಲಿ ಹೆಚ್ಚಾಗಿದ್ದಂತೆ ತೋರುವುದು ಪಾನಪ್ರತಿಬಂಧದ ಕಾಯದೆಯನ್ನಂತೂ ನಮ್ಮ ಜನರು ಕಾಲುಕಸದಂತೆ ಮಾಡಿಬಿಟ್ಟ-ದ್ದಾರೆ ಈಗ ಮನೆ-ಮನೆಗಳಲ್ಲಿಯೂ ಚಹಾ-ಕಾಫಿಗಳಂತೆ ಮದ್ಯ ಸಿದ್ಧವಾಗುತ್ತಲಿವೆ ಮೊದಲು ಕಬ್ಬಹುಣ್ಣಿಮೆಗಳಲ್ಲಿ ಗುಡ-ಸರಪ್ಪೇ ಕುಡಿಯುತ್ತಿದ್ದರು; ಈಗ ದಿನದಿನವೂ ಹೆಂಗುಸರು ಮಕ್ಕಳು ಕೂಡ ಕುಡಿಯುತ್ತಲಿದ್ದಾರೆ. ಹಳ್ಳಿಗಳಲ್ಲಿ ಕುಡುಕರ ಸಂಖ್ಯೆ ಹೆಚ್ಚಾಗಿ, ಕುಡಿಯದ ಸಂಭಾವಿತರು ಮರ್ಯಾದೆಯಿಂದ ಬಾಳು-ವುದೇ ದುಸ್ತರವಾಗಿದೆ ಮದ್ಯದ ಭಟ್ಟಿಗಳನ್ನು ಕಂಡುಹಿಡಿಯಲು ಹಳ್ಳಿಗಳಿಗೆ ಬಂದ ಸರಕಾರೀ ಅಧಿಕಾರಿಗಳು, ಕರ್ತವ್ಯಗೇಡಿಗಳಾಗಿ, ತಾವೇ ನಿತಿವಿಾವಾ ಕುಡಿಮಿ ಹಳ್ಳಿಗರೆದುರೇ ಎಚ್ಚರತಪ್ಪಿ ಬಿದ್ದ ಉದಾಹರಣೆಗಳೂ ಇಲ್ಲವೆ ಇಲ್ಲ ಹಳ್ಳಿಗಳಲ್ಲಿಯ ಮದ್ಯೋತ್ಪತ್ತಿಯ ವ್ಯವಸಾಯವು, ಶ್ರಮಜೀವನದಿಂದ ರೈತ-ಕೂಲಿಕಾರರನ್ನು ದೂರ-ಗೊಳಿಸಿಬಿಟ್ಟಿದೆ. ಎಂತಲೇ ಒಕ್ಕಲಿಗರ ಒಕ್ಕಲುತನದ ಕೆಲಸಗಳು ಕಾಲೋಚಿತವಾಗಿ ನಡೆಯದಂತಾಗಿವೆ.

ಹಳ್ಳಿಗರು ಅಶಿಕ್ಷಿತರೆಂದು ಸ್ವಲ್ಪ ಕ್ಷಮಿಸಬಹುದು ಅವರನ್ನು. ಸುಶೀಕ್ಷಿತರಾದ ನಾಗರಿಕರು ಅವರಿಗೆ ಗ್ರಾಹಕರಾಗಿ ದೊರೆಯದೆ ಹೋದರೆ, ಈ ಕಳ್ಳಭಟ್ಟಿಗಳ ವ್ಯವಸಾಯ ಎಷ್ಟೋ ಕಡಿಮೆಯಾಗಬಹುದು. ನಿಜವಾಗಿಯೂ ಇದೊಂದು ನಮ್ಮ ನಾಡಿನಲ್ಲಿ ನಾಚಿಕೆಗೆಡಾಗುವಂತಹ ವಿಷಯವೇ ಆಗಿದೆ.

ಇದರಂತೆಯೆ ಕಳ್ಳಬಿನ್ನದ ವ್ಯಾಪಾರ. ಇದನ್ನು ಮಾಡುವವರು ಅಶಿಕ್ಷಿತರೇನೂ ಅಲ್ಲ ಎಷ್ಟೋ ಜನ, ದೇಶಭಕ್ತರೆಂದು ಹೊರಗೆ ಮನ್ನಣೆಪಡೆಯುತ್ತಿರುವವರೂ ಈ ಮೋಸದ ವ್ಯವಹಾರದಲ್ಲಿ ತೊಡಗಿರುವರು. ಶಾಸನಸಭೆಗಳಲ್ಲಿ ಸದಸ್ಯರಾಗಿ ಇರುವ ಕೆಲವು ಧುರೀಣರ ಸಂಬಂಧವೂ ಈ ಕಾಯದೇಭಂಗದ ವ್ಯವಹಾರದಲ್ಲಿ ಇರುವುದೆಂದು ಮಾತನಾಡುವುದನ್ನೂ ಅಲ್ಲಲ್ಲಿ ಕೇಳುತ್ತೇನೆ. ಮುಂದ್ರಾ ಪ್ರಕರಣದಂತಹ ದುರ್ವ್ಯವಹಾರಗಳು ಇನ್ನೂ ಎಷ್ಟೆಷ್ಟು ಅಡಗಿಕೊಂಡಿರುವುವೋ ಏನೋ! ಸರಕಾರದ ಕರಗಳನ್ನು ತಪ್ಪಿಸುವಂತೆ ಲೆಕ್ಕಾಚಾರವನ್ನಿಡಲು ಕಲಿಸುವ ಸುಶಿಕ್ಷಿತ ಶಿಕ್ಷಕವರ್ಗವೂ ನಮ್ಮಲ್ಲಿ ಸಾಕಷ್ಟಿದೆ. ಭಾರತೀಯರ-ಅದರಲ್ಲಿಯೂ-ಕನ್ನಡಿಗರ ಪ್ರಾಚೀನ ಸುಸಂಸ್ಕೃತ ಮಾನವತೆಗಾಗಿ ಹೆಮ್ಮೆಪಡುವವರು, ಇಂದಿನ ಅವರ ಅಸಂಸ್ಕೃತ ಪಶುತ್ವಕ್ಕೆ ಏನು ಹೇಳುವರು?

ಮಾನವ ಪಶುತ್ವದ ಮತ್ತೊಂದು ಮಾದರಿ

ಜಗತ್ತಿಗೆಲ್ಲ ಶಾಂತಿಯು ಪಾಠವನ್ನು ಕಲಿಸಲು ಹೊರಟಿರುವ ರಾಷ್ಟ್ರದಲ್ಲಿ, ಮಾನವ ವ್ಯಕ್ತಿಗಳ ಹೃದಯದಲ್ಲಿ ಅವನತಿಯೆಂತಹದಾಗಿದೆಯೆಂಬುದಕ್ಕೆ, ನಮ್ಮ ನಿತ್ಯಜೀವನದಲ್ಲಿ ನೂರಾರು ಸಂಖ್ಯೆಯ ಭೀಕರ ಉದಾಹರಣೆಗಳು ದೊರೆಯುತ್ತವೆ. ಪೊನ್ನೆಪೊನ್ನೆಮೆ ಸೂರು ರಾಜ್ಯದಲ್ಲಿ, ಶೃಂಗೇರಿಯ ಬಳಿಯ ಒಂದು ಹಳ್ಳಿಯಲ್ಲಿ ನಡೆದ-ಒಂದು ಗೌಡ ಕುಟುಂಬದ-ಕೊಲೆಯ ಸುದ್ದಿಯನ್ನು ಕೇಳಿದರೆ, ಮಾನವತೆಯ ಹ್ರಾಸ ನಮ್ಮಲ್ಲಿ ಎಷ್ಟರ ಮಟ್ಟಿಗೆ ಆಗಿದೆಯೆಂಬುದು ಕಂಡು ಬರುವುದು. ಒಂದೇ ರಾತ್ರಿಯಲ್ಲಿ ಎಂಟು ಮಾನವಜೀವನದ ನಾಶ! ಅರೇ ಅರು ತಿಂಗಳ ಕೂಸಿನ ಕೊಲೆ! ಅವರ ನಾಲಗೆಯನ್ನು ಕಡಿದು ಚೆಲ್ಲುವುದು. ಇಪ್ಪತ್ತು ವರ್ಷದ ತರುಣಿಯೊಬ್ಬಳನ್ನು ಕೊಂದು ಬತ್ತಲೆ ಮಾಡಿ ಕೆಡಹುವುದು ಇದೆಲ್ಲ ಮನುಷ್ಯ ಮಾಡುವಂತಹ ಕೃತಿಯೇ? ಮನೆಯ ಯಜಮಾನನೊಂದಿಗೆ ದ್ವೇಷವಿದ್ದರೆ, ಅವನನ್ನು ಹಿಂಸಿಸುವುದು ಮಾನವನ ಸಾಮಾನ್ಯತೆಯ ಸ್ವರೂಪವೆನ್ನಬಹುದು; ಆದರೆ ನಿಷ್ಪಾಪಿಗಳಾದ ಚಿಕ್ಕ ಚಿಕ್ಕ ಮಕ್ಕಳೂ, ಅಬಲೆಯಾದ ಕುಲೀನ ತರುಣಿಯೂ ಹಿಂಸೆ-ಅತ್ಯಾಚಾರಗಳಿಗೆ ಗುರಿಯಾಗಬೇಕೆ? ಕಾಡಾಡಿಗಳಲ್ಲಿಯೂ ಕಾಣದಂತಹ ಘಟನೆಯಿದು. ಇಂತಹ ಘಟನೆಗಳು ಬದುಕಬೇಕೆನ್ನುವ ಸಭ್ಯಜನರನ್ನು ಸುಖ-ಸಮಾಧಾನಗಳಿಂದ ಇರಿಸಬಲ್ಲವೆ? ಪದ್ಧತಿಯಂತೆ ಸರಕಾರ ಇದರ ವಿಚಾರಣೆಯು ನಾಟಕ ನಡೆಯಿಸಬಹುದು, ಸರಿಯಾದ ಸಾಕ್ಷ್ಯಗಳಿಲ್ಲವೆಂದು ನ್ಯಾಯಾಲಯ ನಿಜವಾದ ಅಪರಾಧಿಗಳನ್ನೂ ಶಿಕ್ಷಿಸದೆ ಬಿಟ್ಟುಬಿಡಬಹುದು. ಹೀಗೆ ಬಿಟ್ಟುಬಿಟ್ಟ ಅಪರಾಧಿಗಳ ಉದಾಹರಣೆಗಳೇ, ಪಶುಮಾನವರ ಹೊಸ ಹೊಸ ಹಿಂಸಾಚಾರಗಳಿಗೆ ಕಾರಣವಾಗುವುವು. ಸರಕಾರೀ ಕಾಯಿದೆಗಳು ನಮ್ಮ ಜನರಲ್ಲಿ ಮಾನವತೆಯನ್ನು ಜಾಗೃತಗೊಳಿಸಲು ಸಮರ್ಥವಾಗಲಾರವು. ನಮ್ಮ ಹಳ್ಳಿ-ಪಟ್ಟಣಗಳ ಜನತಾಧುರೀಣರೇ ವಿವೇಕಿಗಳಾಗಿ, ಇಂತಹ ಅಮಾನುಷ ಅತ್ಯಾಚಾರಗಳು ನಡೆಯದಂತೆ ಜನಮನವನ್ನು ತಿದ್ದುತ್ತಿರಬೇಕು. ವಿವೇಕವನ್ನು ಕಳೆದುಕೊಂಡರೆ, ಎಂತಹ ಸಾಮಾಜಿಕ ಅಂತಸ್ತಿನಲ್ಲಿದ್ದರೂ ಅವನಿಂದ ಸಾಮಾಜಿಕ ಪ್ರಗತಿ ಸುಖ-ಸಮಾಧಾನಗಳನ್ನು ಬಯಸಲು ಸಾಧ್ಯವಿಲ್ಲ

ಕಾತ ಬೇಲಿಯೇ ಮೇವ ಪಶುವಾದರೆ, ಗತಿ?

ಬೆಂಗಳೂರು ರಾಜಧಾನಿಯ ವರ್ತಮಾನ ಇನ್ನೊಂದು: ಯಾವುದೋ ಅಪಾದನೆಗೊಳಗಾದವಳೆಂದು, ಶೇಷಾದ್ರಿಪುರದ ಪೋಲೀಸರು, ಯುವತಿಯೊಬ್ಬಳನ್ನು ಬಂಧಿಸಿ, ಒಂದು ರಾತ್ರಿ ಲಾಕಪ್ಪಿನಲ್ಲಿ ಇಟ್ಟಿದ್ದರಂತೆ! ಮರುದಿನ ಬಿಡುಗಡೆ ಹೊಂದಿದ ಅವಳು, ಸರಕಾರದ ಆಸ್ಪತ್ರೆಗೆ ಹೋಗಿ, ಅಲ್ಲಿಯ ಡಾಕ್ಟರರಿಮರು, ಪೋಲೀಸರು ತನ್ನಮೇಲೆ ಮಾಡಿದ ಅತ್ಯಾಚಾರಗಳನ್ನು ಬಿನ್ನವಿಸಿಕೊಂಡು, ಅದರಿಂದುಂಟಾದ ಅಸ್ವಸ್ಥತೆಗಾಗಿ ಆಸ್ಪತ್ರೆಯಲ್ಲಿ ನುಲಗಿಕೊಂಡಳಂತೆ ಮರುದಿನವೇ ಅಕೆಯ ಜೀವನದ ಅಂತ್ಯವಾಯಿತಂತೆ. ನಾಗರಿಕರ ಎದೆಗೆ ಸಿಡಿಲಿನ ಆಘಾತವನ್ನು ಉಂಟು ಮಾಡುವಂತಹ ಸಂಗತಿಯಿದು. ದುಷ್ಟರ ಅನ್ಯಾಯದಿಂದ ನಾಗರಿಕರನ್ನು ಸಂರಕ್ಷಿಸಲೆಂದು ಸರಕಾರ ಪೋಲೀಸರನ್ನು ಇರಿಸಿರುವುದು. ಅಂತಹ ಪೋಲೀಸರೇ ನರಹಿಂಸಕರಾಗಿ ವರ್ತಿಸತೊಡಗಿದರೆ, ಜನಸಾಮಾನ್ಯರಿಗೆ ಸುರಕ್ಷಿತತೆಯು ಮಾರ್ಗ ಇನ್ನಾವುದುಳಿಯಿತು? ಸರಕಾರದ ನ್ಯಾಯದ ಪತಿಲುತನದ ಮೂಲಕ, ಇಂತಹ ಪಶುವೃತ್ತಿ ಹೆಚ್ಚುತ್ತ ನಡೆದಿದೆ.

ಭಾರತದಲ್ಲಿ ಹಿಂದಿನ ಕಾಲದ ವಿಜಯೋನ್ಮತ್ತ ಸೈನಿಕರಿಂದಲೂ ಈ ಬಗೆಯ ಸ್ತ್ರೀ ವಿಷಯಕವಾದ ದುರಾಚಾರ—ಅತಿಕ್ರಮಣಗಳು ನಡೆಯುತ್ತಿರಲಿಲ್ಲ. ಅಂದಿನ ಸೈನಿಕರಿಗೆ ಸ್ತ್ರೀಯರ ಮೇಲೆ ಬಲಾತ್ಕಾರ ನಡೆಸದಂತೆ ಮೇಲಿನವರ ಕಟ್ಟಾಜ್ಞೆಯಿರುತ್ತಿದ್ದಿತು. ಸೈನಿಕರಲ್ಲಿಯೂ ಭಾರತೀಯರ ನೀತಿಪರಂಪರೆ ವೈಗೊಂಡಿರುತ್ತಿತ್ತು ಅಪ್ಪಿ ತಪ್ಪಿ ಯಾರಿಂದಾದರೂ ಈ ಬಗೆಯ ಅತ್ಯಾಚಾರ ನಡೆದರೆ, ಶಾಸನವು ಅವನಿಗೆ ದೇಹಾಂತ ಶಿಕ್ಷೆಯನ್ನು ವಿಧಿಸುತ್ತಿತ್ತು. ಇಂದಿನ ಸರಕಾರವೂ ಈ ವಿಷಯದಲ್ಲಿ ನ್ಯಾಯನಿಷ್ಠುರವಾಗಿ ವರ್ತಿಸಬೇಕು. ಅನ್ಯಾಯಿಗಳನ್ನು ಕಂಡುಹಿಡಿದು ಅವರಿಗೆ ಅತ್ಯುಗ್ರ ಶಿಕ್ಷೆಯನ್ನೇ ವಿಧಿಸಬೇಕು.

ಹಿಂಸ್ರಪಶುಗಳನ್ನು ಹಾದಿಗೆ ತರಬೇಕಾದರೆ, ದಯೆ-ಕರುಣೆಗಳಿಂದ ಅದೆಂದೂ ಸಾಧ್ಯವಾಗಲಾರದು. ಬಹುಜನರ ಕಲ್ಯಾಣಕ್ಕಾಗಿ ಅವುಗಳ ಹುಟ್ಟನ್ನು ಅಡಗಿಸಿಬಿಸುವುದೇ ಸರಿಯಾದ ರಾಜಕಾರ್ಯವೆನಿಸುವುದು.

ಆ ಗಡಿತಂಟೆ

(ಸಣ್ಣಕತೆ)

ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ

ದೇವ+ರಾಕ್ಷಸ=ಮಾನವ. ದ್ವೇಷ-ಮತ್ಸರಗಳ ರಾಕ್ಷಸತ್ವವನ್ನು ಕಳೆದುಬಿಟ್ಟರೆ, ಮನುಷ್ಯನಲ್ಲಿ ಬರಿ ದೇವತ್ವವೇ ಉಳಿಯುವುದು. ರಾಮನಗೌಡ ಅಂತಹ ರಾಕ್ಷಸತ್ವದ ಸೂತ್ರದ ಗೊಂಬೆಯಾಗಿದ್ದರೆ, ಈ ಕಥೆಯ ಕೊನೆ ಹೇಗಾಗಬಹುದಿತ್ತು ?

●

"ರಾಮನಗೌಡರಿಗೆ ತಾರು ಕಳುಹಿ ಬಂದಿನಮಾ, ಅವರು ನಾಳೆ ಬೆಳಗಿನ ಬಸ್ಸಿಗೆ ಬರಬಹುದು!" ಬಸಪ್ಪನವರು ಒಡತಿ ಗಂಗಮ್ಮನವರಿಗೆ ಹೇಳಿದರು "ಅವನಿಗೆ ಹೇಳಿಕಳುಹಿಬಾರದಿತ್ತೇನೊ! ಎಲ್ಲಿಯದಪ್ಪ ಈ ಹಾಳು ತಂಟೆ! ಆವನಿಗೆ ಓದಿನ ಚಿಂತೆಯೊಂದಿಗೆ ಮನೆತನದ ಚಿಂತೆಯನ್ನೂ ಹಚ್ಚಿದಂತಾಗಲಿಲ್ಲನೆ? ಮೊದಲೇ ಸಿಟ್ಟಿನವ, ಬಂದಮೇಲೆ ಏನಾದರೊಂದನ್ನು ಮಾಡಿಬಿಟ್ಟರೆ!" ಗಂಗಮ್ಮನವರು ಉದ್ಗಾರತೆಗೆದರು. "ನಾವು ಸುಮ್ಮನಿದ್ದುಬಿಟ್ಟರೆ ಆ ಮಕ್ಕಳು ಅಟ್ಟಕ್ಕೇರುತ್ತಾರೆ. ಇಂದು ಸೀಮೆಕಲ್ಲು ಕೆತ್ತಿ ನಾಲ್ಕುಮಾರು ಹೊಲ ಬಿತ್ತಿದರು; ನಾಳೆ ಇಡೀ ಹೊಲವೇ ತಮ್ಮದೆನ್ನುತ್ತಾರೆ. ಅವರ ಸೊಕ್ಕನ್ನು ನಾವು ಈಗ ಅಡಗಿಸಲೇಬೇಕು. ನಾನು ಈಗ ಇದರ ಎಲ್ಲ ವ್ಯವಸ್ಥೆ ಮಾಡಿದ್ದೇನೆ. ರಾಮನಗೌಡರು ಬರುವುದನ್ನೇ ಕಾಯುತ್ತೇವೆ." ಎಂದು ಹೇಳಿ, ಬಸಪ್ಪನವರು ಅಲ್ಲಿಂದ ಹೊರಬಂದರು. ಒಡತಿ ಗಂಗಮ್ಮನ ಮನದಲ್ಲಿ ಹಲವಾರು ವಿಚಾರಗಳ ತುಮುಲಯುದ್ಧ ನಡೆದಿತ್ತು. 'ಈ ಸುದ್ದಿ ತಿಳಿದು ಮಗ ರಾಮನಗೌಡ ಬಂದೇ ತೀರುತ್ತಾನೆ. ಮಾರಾಮಾರಿಯಾಗಿಯೆ ಬಿಡುತ್ತದೆ. ಆದರಲ್ಲಿ ಮಗನಿಗೆ ಏನಾದರೂ ಆದರೆ!' ಎಂಬ ಚಿಂತೆ ಧುತ್ತೆಂದು ಅವಳ ಎದುರು ನಿಲ್ಲುತ್ತಿತ್ತು. ನನ್ನ ಪಕ್ಷವೇನೋ ಬಲಶಾಲಿಯಾಗಿದೆ. ಮಗನ ಕೂದಲೆಳೆ ಕೂಡ ಕೊಂಕದಂತೆ ನೋಡಿಕೊಳ್ಳುವ ವೀರರಿದ್ದಾರೆ; ಆದರೂ ವೇಳೆ ಹೇಳಿ ಕೇಳಿ ಬರುವುದಿಲ್ಲ. ಇದ್ದೊಬ್ಬ ಮಗ....ಏನಾದರೂ ಹೆಚ್ಚುಕಡಿಮೆಯಾಗಿಬಿಟ್ಟರೆ!' ಎಂದು ಆ ತಾಯಿಯ ಹೆಂಗರುಳು ಮಿಡುಕುತ್ತಿತ್ತು. ಆದರೂ ಹಿಂದಣ ವೈರ-ತ್ವೇಷಗಳ ಪ್ರತಿಕಾರಕ್ಕಾಗಿ ಹಾತೊರೆಯುತ್ತಿತ್ತು. ತನ್ನ ಪತಿಯ ತಲೆಯೊಡೆಯುವಂತೆ ಹೊಡೆದು ಅವಮಾನ ಪಡಿಸಿದ ವೈರಿಗಳಿಗೆ ತಕ್ಕ ಶಾಸನ ವಿಧಿಸುವ ಸಮಯ ಇದೇ— ಎಂದು ಅವಳ ವೈರಬುದ್ಧಿ ಕತ್ತಿ ಮಸೆಯುತ್ತಿತ್ತು

ಹಾಳೂರಿನಲ್ಲಿ ಅಂದು ಪ್ರಕ್ಷುಬ್ಧವಾತಾವರಣದ ಹೊಗೆಯಾಡುತ್ತಿತ್ತು. ಸಾಹುಕಾರ ಶಿವಪ್ಪನವರ ಮಗ ಸಂಗಣ್ಣನು ತಮ್ಮ ಹಾಗು ಸೋಮನಗೌಡರ ಹೊಲದ ಗಡಿಯಲ್ಲಿದ್ದ ಸೀಮೆಕಲ್ಲನ್ನು ಕೆತ್ತು ಸೋಮನಗೌಡರ ಹೊಲದೊಳಗೆ ನೆಡಿಸಿ ಬಂದುದೇ ಇಷ್ಟಕ್ಕೆಲ್ಲ ಕಾರಣವಾಗಿತ್ತು. ನಾಳೆ ಬೆಳಗ್ಗೆ ಸಾಹುಕಾರ ಶಿವಪ್ಪನವರು ತಮ್ಮ ಆ ಹೊಲವನ್ನು ಬಿತ್ತುವವರಿದ್ದರು. ಅದನ್ನು ತಡೆದು ಆ ಕಲ್ಲನ್ನು ಮೊದಲಿನ ಸ್ಥಾನದಲ್ಲಿ ನೆಡಿಸಲೇಬೇಕೆಂದು ಸೋಮನಗೌಡರ ಪಕ್ಷದವರು ಪಣತೊಟ್ಟಿದ್ದರು. ಈ ತಂಟೆ ಇಂದು ನಿನ್ನೆಯದಲ್ಲ; ಬಹುದಿನಗಳಿಂದ ಬೆಳೆದು ಬಂದುದು ಶಿವಪ್ಪಸಾಹುಕಾರರ ಊರ ಮುಂದಿನ ಹೊಲಕ್ಕೆ ಹೊಂದಿಯೆ ರಂಗಣ್ಣನವರ ಬಹುಬೆಳೆಯುಳ್ಳ ಹೊಲವಿತ್ತು. ರಂಗಣ್ಣನವರಿಂದ ಆ ಹೊಲವನ್ನು ಕೊಂಡುಕೊಳ್ಳುವ ಸ್ಪರ್ಧೆಯಲ್ಲಿ ಶಿವಪ್ಪನವರು ಸೋತಿದ್ದರು. ಸೋಮನಗೌಡರು ರಂಗಣ್ಣನಿಗೆ ಬೇಡಿದಷ್ಟು ಬೆಲೆ ತೆತ್ತು, ಶಿವಪ್ಪನವರ ಮನೋರಥವನ್ನು ಮಣ್ಣುಗೂಡಿಸಿದ್ದರು. ಅಂತೆಯೆ ಶಿವಪ್ಪನವರು ಸೋಮನಗೌಡರ ಮೇಲೆ ಬೆಂಕಿಕಾರುತ್ತಿದ್ದರು. ಆ ಎರಡೂ ಹೊಲಗಳ ನಡುವೆ ಒಂದು ದೊಡ್ಡ ಸೀಮೆಕಲ್ಲಿನ ಹೊರತಾಗಿ ಬೇರಾವ ಕುರುಹೂ ಗಡಿಯ ನಿದರ್ಶನಕ್ಕಿರಲಿಲ್ಲ. ಈಗ ಆರೇಳು ವರ್ಷಗಳ ಹಿಂದೊಮ್ಮೆ ಸಾಹುಕಾರರು ಆ ಕಲ್ಲನ್ನು ಸೋಮನಗೌಡರ ಹೊಲದೊಳಗೆ ನೆಡಿಸಿದುದಕ್ಕಾಗಿ ಇಬ್ಬಣಗಳಲ್ಲಿಯೂ ಹೊಡೆದಾಟವಾಗಿತ್ತು. ಶಿವಪ್ಪನವರ ಪಕ್ಷದವರೆಲ್ಲರೂ ಆಗ ಶುಶಜ್ಜಿತರಾಗಿ ಬಂದುದರಿಂದ, ಸೋಮನಗೌಡರ ಪಕ್ಷದವರು ಹಿಂದೆ ಸರಿಯಬೇಕಾಗಿ ಬಂದಿತ್ತು. ಆಗ ಶಿವಪ್ಪ ಸಾಹುಕಾರರ ಮಗ ಸಂಗಣ್ಣನೇ ಮುಂದೆ ಬಂದು, ತನ್ನ ಕೈಕೋಲಿನಿಂದ ಸೋಮನಗೌಡನನ್ನು ಚೆನ್ನಾಗಿ ಥಳಿಸಿದ್ದನು. ಸೋಮನಗೌಡರ ಮಗ ರಾಮನಗೌಡನು ಆಗ ಊರಲ್ಲಿರಲಿಲ್ಲ; ಓದಿಗಾಗಿ ವಿಜಯಪುರದಲ್ಲಿದ್ದನು. ಈ ಸುದ್ದಿ ಕೇಳಿ ಅವನು ಊರಿಗೆ ಬಂದು ಊರಲ್ಲೆಲ್ಲ ಕೋಲಾಹಲವನ್ನೇ ಎಬ್ಬಿಸಿದ್ದನು. 'ನನ್ನ ತಂದೆಯ ತಲೆಯೊಡೆದ ಸಂಗನ ಕೈ ಕಡಿಯದಿದ್ದರೆ ನಾನು ಸೋಮನಗೌಡರ ಮಗನೇ ಅಲ್ಲ' ಎಂದು ಗುಡುಗಿದ್ದನು. ಆಡಿದಂತೆ ಮಾಡಿ ತೋರಿಸುವ ಎದೆಗಾರಿಕೆ ಬಲ ಅವನಲ್ಲಿನೆ—ಎಂದು ಆ ಊರವರೆಲ್ಲರೂ ನಂಬಿದ್ದರು. ಅಂತೆಯೆ ಶಿವಪ್ಪನವರು, ಮಗ ಸಂಗಣ್ಣನನ್ನು ಊರು ಬಿಡಿಸಿ ಆರೇಳು ತಿಂಗಳುಗಳವರೆಗೆ ತಮ್ಮ ಬೀಗರ ಊರಲ್ಲಿರಿಸಿದ್ದರು. ಮುಂದೆ ಊರಿನ ಹಿರಿಯ

ರೆಲ್ಲರೂ ಕೂಡಿ ಶಿವಪ್ಪಸಾಹುಕಾರರಿಗೆ ಚೆನ್ನಾಗಿ ಬುದ್ಧಿ ಹೇಳಿ, ಇಬ್ಬರಲ್ಲಿಯೂ ರಾಜಿಮಾಡಿಸಿ ಆ ಕಲ್ಲನ್ನು ಮತ್ತೆ ಮೊದಲಿನ ಸ್ಥಾನದಲ್ಲಿ ಕೂಡ್ರಿಸಿದರು. ಕಲ್ಲು ಮೊದಲಿನ ಸ್ಥಾನಕ್ಕೆ ಬಂದರೂ ಅವರ ಮನಗಳು ಮಾತ್ರ ಬಹುದೂರ ಸರಿದುವು. ತಾನು ಸಾಹುಕಾರನಿದ್ದರೂ ಬಹುಜನರು ಸೋಮಗೌಡಂಗೇ ಬೆಲೆಕೊಡುತ್ತಾರೆಲ್ಲ!—ಎಂದು ಶಿವಪ್ಪನವರು ಒಳಗೊಳಗೇ ಕುದಿಯುತ್ತಿದ್ದರು. ಹಿರಿಯರೆಲ್ಲ ಸೇರಿ ಆ ಕಲ್ಲನ್ನು ಮತ್ತೆ ಮೊದಲಿನ ಸ್ಥಾನದಲ್ಲಿಯೆ ನೆಡಿಸದುದು ಅವರ ಅಭಿಮಾನವನ್ನು ಕೆಣಕಿದಂತಾಗಿತ್ತು. ಆದರೂ ಜನತೆಯ ಬಲವನ್ನು ಅಲಕ್ಷ್ಯಿಸುವಹಾಗಿರಲಿಲ್ಲ. ಅಂತೆಯೆ ಆಗ ಸುಮ್ಮನೆ ಇರಬೇಕಾಗಿ ಬಂತು. ಈ ಸಂಗತಿ ಜರುಗಿ ಆರೇಳುವರ್ಷಗಳ ತರುವಾಯ, ಈಗ ಮತ್ತೆ ಅಂಥದೇ ಘಟನೆ ಜರುಗಿತು. ಈ ಮಧ್ಯಂತರ ಅವಧಿಯಲ್ಲಿ ಸಣ್ಣಪುಟ್ಟ ಜಗಳಗಳು ನಡದೇ ಇದ್ದುವು. ಸಾಹುಕಾರರ ಅಳುಗಳಿಗೂ ಗೌಡರ ಅಳುಗಳಿಗೂ ಮೇಲಿಂದ ಮೇಲೆ ಮಾತಿನ ಚಕಮಕಿ ನಡೆಯುತ್ತಿತ್ತು. ಸೋಮನಗೌಡರು ತೀರಿಕೊಂಡು ಈಗ ನಾಲ್ಕು ವರ್ಷಗಳಾಗಿದ್ದುವು. ಮಗ—ರಾಮನಗೌಡನು ಉಚ್ಚಶಿಕ್ಷಣಕ್ಕಾಗಿ ಬೆಳಗಾವಿಗೆ ಹೋಗಿದ್ದನು. ಅವನ ತಾಯಿಯ ಸಂಬಂಧಿಕರಲ್ಲೊಬ್ಬನಾದ ಬಸಪ್ಪನು ಮನೆತನದ ಹೊಣೆ ಹೊತ್ತು ಕಾರ್ಯಸಾಗಿಸಿದ್ದನು. ಅವನಿಗೆ ಸೋಮನಗೌಡರ ವಿಷಯವಾಗಿ ತುಂಬ ಅಭಿಮಾನ; ಅವರ ಮನೆ-ತನದ ಅಭಿವೃದ್ಧಿಗಾಗಿ ಹಗಲಿರುಳು ದುಡಿಯುತ್ತಿದ್ದನು. ಇದರಿಂದಾಗಿ ಗಂಗಾಬಾಯಿಗೆ ಪತಿಯ ಮರಣದಿಂದಾದ ವ್ಯಸನ ಕಡಿವೆಯಾಗುತ್ತ ನಡೆದಿತ್ತು. ಬಸಪ್ಪನ ವಿಷಯದಲ್ಲಿ ಅವರಿಗೆ ತುಂಬ ವಿಶ್ವಾಸವಿತ್ತು.

ಬಸಪ್ಪನಿಗೂ ಸಾಹುಕಾರ ಸಂಗಣ್ಣನಿಗೂ ಮೇಲಿಂದ ಮೇಲೆ ತಂಟೆ ಉತ್ಪನ್ನವಾಗುತ್ತಿತ್ತು. ಒಮ್ಮೆ ಸಂಗಣ್ಣನ ಎತ್ತುಗಳು ಸೋಮನಗೌಡರ ಹೊಲದಲ್ಲಿಯ ಬೆಳೆಯನ್ನು ತಿಂದಿದ್ದುವು; ಆಗ ಬಸಪ್ಪನು "ಇನ್ನೊಮ್ಮೆ ಎತ್ತುಗಳು ಈ ಕಡೆಗೆ ಬಂದರೆ ಒಳ್ತಾಂಗ ಲಿಕ್ಕಿಲ್ಲ" ಎಂದಾಗ "ಯಾರದ್ದೋ ಮನೆಯಲ್ಲಿ ಕೂಳಿಗಾಗಿ ದುಡಿಯುವವ, ನಿನಗೇಕೋ ಈ ತಂಟೆ?" ಎಂದು ಸಂಗಣ್ಣ ಮೂದಲಿಸಿ ನುಡಿದಿದ್ದ. ಇದರಿಂದ ಬಸಪ್ಪನ ಕೋಪ ಕೆರಳಿತ್ತು. "ಈ ಸೀಮೆಕಲ್ಲನ್ನು ಕೆತ್ತಿ ಹಾಕಿದವರಾರು?" ಎಂದು ಬಸಪ್ಪ ಕೇಳಿದಾಗ "ಅದನ್ನು ಕೇಳ-ವವ ನೀನಾರು?" ಗರ್ವದಿಂದ ಸಂಗಣ್ಣ ಉತ್ತರಿಸಿದ್ದ ಅಂತೆಯೆ ಬಸಪ್ಪನು ಸಂಗಣ್ಣನಿಗೆ ಈ ಪ್ರಸಂಗದಲ್ಲಿ ಚೆನ್ನಾಗಿ ಬುದ್ಧಿಕಲಿಸಲೇ ಬೇಕೆಂದು ದೃಢನಿರ್ಧಾರ ಮಾಡಿದ್ದನು. ಅಂದು ಮನೆಯಲ್ಲಿ ಗುಪ್ತ ಸಭೆಕರೆದು, ನಿಜಸಂಗತಿಯನ್ನು ಎಲ್ಲರಿಗೂ ತಿಳಿಸಿ, ಮುಂದಿನ ಕಾರ್ಯಕ್ಕೆ ಅಣಿಗೊಳಿಸಿದ್ದನು. ಬಹುಜನರು ಶಿವಪ್ಪನವರ ಗರ್ವಕ್ಕೂ ಕೃಪಣತನಕ್ಕೂ ಒಳಗೊಳಗೇ ಕುದಿಯುತ್ತಿದ್ದರು. ಈ ಪ್ರಸಂಗದಲ್ಲಿ ಅವರನ್ನು ಹಣ್ಣು ಮಾಡದಿದ್ದರೆ ತಮಗೆ ಉಳಿಗಾಲವಿಲ್ಲವೆಂದು ಎಷ್ಟೋ ಜನರು ಬಗೆದಿದ್ದರು. ಅಂತೂ ಬಹುಜನರು ನಾಳೆಯ ಯುದ್ಧಕ್ಕೆ ಅಣಿಯಾದರು. ರಾಮನಗೌಡರನ್ನು ಕೂಡಲೇ ಕರೆಯಿಸಬೇಕೆಂದೂ ಅವರಿಂದಲೇ ಸಂಗಣ್ಣನ ವ್ಯವಸ್ಥೆ ಮಾಡಿಸಬೇಕೆಂದೂ ತೀರ್ಮಾನಿಸಿದರು. ಸಾಹುಕಾರ ಶಿವಪ್ಪನವರ ಮನೆಯಲ್ಲಿಯೂ ಅಂದು ವಿಚಾರ ವಿನಿಮಯ

ವಧೂವರರ ಜ್ಯೋತಿಷ್ಯ

ಕನ್ನಡದಲ್ಲಿಯೆ ಒಂದು ಹೊಸಪುಸ್ತಕ!
ಈಗಾಗಲೇ ಬೆಳಕಿಗೆ ಬಂದಿದೆ.

ಲೇಖಕರು:— ಜ್ಯೋತಿಷಿ ಎನ್. ಕೆ. ಜೋಗಳೇಕರ

ಮದುವೆಗೆ ಮೊದಲು ವಧೂ-ವರರ ಸಲುವಳಿಯನ್ನು ಕೂಡಿಸಿ ನೋಡುವುದಕ್ಕೆ ಬೇಕಾಗುವ ಜ್ಯೋತಿಷ್ಯದ ಪ್ರತಿ-ಯೊಂದು ಸಂಗತಿಯನ್ನೂ ವಿವರ-ವಿವರವಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ಬೇಕಾದವರು ಕೂಡಲೆ ಬೇಡಿಕೆಗಳನ್ನು ಕಳುಹಿರಿ!
ಕ್ರಾ. ಅ. ೧೦೦ ಪುಟಗಳು. ಬೆಲೆ ೧ ರೂಪಾಯಿ
ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು ಕೊಡಲಾಗುವುದು.

ಜ್ಯೋತಿಷಿ ಎನ್. ಕೆ. ಜೋಗಳೇಕರ
ಶಿವಾಜಿ ರೋಡ್, ಮಂಗಳವಾರಪೇಟೆ, ಧಾರವಾಡ

ನಡೆದಿತ್ತು. ನಾಳೆಯ ದಿನ ಬಿತ್ತಿಗೆಯ ಕೆಲಸಕ್ಕೆ ಅವರೇನಾದರೂ ಆತಂಕಪಡಿಸಿದರೆ, ಚೆನ್ನಾಗಿ ಕೈ ತೋರಿಸಬೇಕೆಂದು ನಿರ್ಣಯಿಸಿದರು.

ಅಂದು ರಾತ್ರಿ ಎರಡೂ ಪಕ್ಷದವರಿಗೆ ನಿದ್ರೆಬರಲಿಲ್ಲ. ಬೆಳಗಿನಜಾ ನಡೆಯಲಿರುವ ಕದನದ ಚಿತ್ರ ಅವರ ಕಣ್ಮುಂದೆ ಕುಣಿಯುತ್ತಿತ್ತು. ರಾಮನಗೌಡರಿಗೆ ತಾರುಕಳುಹಿದ ಸಂಗತಿ ಹೇಗೋ ಶಿವಪ್ಪನವ ಕಿವಿಗೂ ತಲುಪಿತ್ತು. ಈ ವ್ಯಾಜ್ಯ ಇಷ್ಟೆಂದು ದೀರ್ಘಕ್ಕೆ ಹೋಗ ಲಿಕ್ಕಿಲ್ಲವೆಂದು ಅವರು ಭಾವಿಸಿದ್ದರು. 'ರಾಮನಗೌಡನು ಬಂದ ದಾದರೆ ಪರಿಸ್ಥಿತಿ ಹದಗೆಡುವುದರಲ್ಲಿ ಸಂದೇಹವಿಲ್ಲ; ಅವನೊಬ್ಬ ಮಹಾಪುಂಡ. ಕಿಂದಿನ ಕುನಸನ್ನು ಅವನು ಮರೆತಿರುವಂತಿ ಅವನು ಬರದಿರುವುದೇ ಲೇಸು!' ಎಂದು ಶಿವಪ್ಪನವರ ಬುದ್ಧಿ ಲೆ ಹಾಕುತ್ತಿತ್ತು. ಮಗ ಸಂಗಣ್ಣನೂ - ರಾಮನಗೌಡನೂ ಇವರ ಸಹಪಾಠಿಗಳು. ಆದರೆ ಅವರಿಬ್ಬರಿಗೂ ಕತ್ತಲೆ-ಬೆಳಕಿನ ಸ್ನೇಹ ಓದಿನಲ್ಲಿಯೂ ಆಟದಲ್ಲಿಯೂ ರಾಮನಗೌಡನದೇ ಮೇಲು ಗೈ ಸಂಗಣ್ಣನು ಹೈಸ್ಕೂಲಿನ ಕೊನೆಯ ಮೆಟ್ಟಿಲನ್ನೇರಲು ಸಾಧ್ಯವಾಗ ಮರಳಿ ಊರಿಗೆ ಬಂದು ಮನೆಗೆಲಸಕ್ಕೆ ನೆರವಾಗಿದ್ದನು. ಆದ ರಾಮನಗೌಡನು ತನ್ನ ಚುರುಕುಬುದ್ಧಿಯಿಂದಾಗಿ ಎಲ್ಲ ವರ್ಗಗಳನ್ನು ದಾಟಿ, ಈಗ ಬಿ. ಎ ಅಭ್ಯಾಸದಲ್ಲಿ ತೊಡಗಿದ್ದನು. ಇದು ಕೂ ಶಿವಪ್ಪನವರಿಗೆ ಸಹಿಸದ ವೇದನೆಯನ್ನುಂಟುಮಾಡಿತ್ತು. 'ವಿ ಅಗಲಿ, ನಾಳೆಯ ದಿನ ಆ ಹೊಲವನ್ನು ಬಿತ್ತಿ ನಮ್ಮ ವಿಜಯಪತಾ ಯನ್ನು ಹಾರಿಸಲೇಬೇಕು' ಎಂದು ಸಂಗಣ್ಣನು ಮಾಡಿದ ನಿರ್ಧಾರ ಶಿವಪ್ಪನವರು ಪುಟಕೊಟ್ಟಿದ್ದರು. ಅದು ಅಲ್ಲದೆ, ಅನಾಯಾಸ ನಾ



ಮಾರು ಹೊಲ ಹೆಚ್ಚಿಗೆ ಬರುತ್ತದೆ; ಪ್ರತಿವರ್ಷ ನಾಲ್ಕಾರು ಚೀಲ ಕಾಳು ಹೆಚ್ಚಿಗೆ ಬರುತ್ತವೆ—ಎಂದು ಅವರ ಆಸೆಯ ಬುದ್ದಿ ಲೆಕ್ಕ ಹಾಕಿತ್ತು. ಇದು ಅವರ ಹೊಸ ವಿಚಾರವೇನಲ್ಲ. ಈ ಬಗೆಯ ಮರೆ-ನೋಪಗಳಿಂದಲೇ ಅವರು ಹೆಚ್ಚಾಗಿ ಆಸ್ತಿಯನ್ನು ಸಂಪಾದನೆ ಮಾಡಿದ್ದರು. ಹಾಳೂರು ಸುಮಾರು ನೂರಾರು ಮನೆಗಳ ಚಿಕ್ಕಹಳ್ಳಿ. ಆ ಹಳ್ಳಿಯಲ್ಲಿ ಎದ್ದು ಕಾಣುವ ವ್ಯಕ್ತಿಗಳೆಂದರೆ ಶಿವಪ್ಪ ಸಾಹುಕಾರರು ಹಾಗು ರಾಮನಗೌಡರು. ಆ ಹಳ್ಳಿಯ ಹೊಲಗಳಲ್ಲಿ ಕಾಲುಭಾಗ ಶಿವಪ್ಪಸಾಹುಕಾರರ ಒಡೆತನದಲ್ಲಿಯೆ ಇದ್ದುವೆನ್ನಬಹುದು ರಾಮನಗೌಡರಿಗೂ ತಕ್ಕಷ್ಟು ಆಸ್ತಿ—ಎರೇಳು ಎರೆಯ ಹೊಲಗಳು ಇದ್ದುವು ಶಿವಪ್ಪನವರ ಆಸ್ತಿ—ಹೊಲ-ಮನೆಗಳು ವರುವರುಷವೂ ಬೆಳೆಯುತ್ತಲೇ ಇದ್ದುವು ನೆರೆಯ ಹೊಲ ಹಾಗು ಮನೆಗಳು ಹೇಗೋ ಇವರ ಕೈ ಸೇರುತ್ತಿದ್ದುವು. ಸಾಲಕೊಟ್ಟ ಹಣ ಮರಳಿ ಬಾರದಿದ್ದರೂ ಅವರ ಹೊಲ-ಮನೆಗಳನ್ನು ಮಾತ್ರ ತಪ್ಪದೆ ಇವರ ಪದರಿನಲ್ಲಿ ನೀಡುತ್ತಿತ್ತು. ಹೀಗಾಗಿ ಊರ ಬಹುಜನರಿಗೆ ಸಾಹುಕಾರರು ಬೇಕಾಗಿಯೆ ಬೇಡವಾಗಿದ್ದರು. ಆದರೆ ಯಾರಿಗೂ ಅವರನ್ನೆದುರಿಸುವ ಧೈರ್ಯವಿರಲಿಲ್ಲ ಈಗ ಮಾತ್ರ ಆ ಸಮಯ ಒದಗಬಂದಿತ್ತು. ಸಾಹುಕಾರರ ಕೈಗೆ ಸಿಕ್ಕು ಪೇಚಾಡಿದವರೆಲ್ಲ ಬಸಪ್ಪನ ಪಕ್ಷದಲ್ಲಿ ಕೂಡಿದ್ದರು

ಬೆಳಗಾಯಿತು ಶಿವಪ್ಪನವರ ಮಗ ಸಂಗಣ್ಣನು ಕೊಡಲಿ, ಬಡಿಗೆಗಳಿಂದ ಸುಸಜ್ಜಿತರಾದ ಹತ್ತೆಂಟು ಆಳುಮಕ್ಕಳೊಂದಿಗೆ ಹೊಲದ ಕಡೆಗೆ ಹೊರಟಿದ್ದನು. ಜನರು ತಮ್ಮ ತಮ್ಮ ಮನೆಯ ಬಾಗಿಲಬಳಿ ನಿಂತು ಈ ದೃಶ್ಯ ನೋಡುತ್ತಿದ್ದರು. ಹಲವುಕಡೆ ಗುಂಪು ಕೂಡಿ ಪಿಸುಪಿಸು ಮಾತುಕತೆ ನಡೆದಿದ್ದುವು 'ಹಾಳೂರ ಭೂಮಿಯಲ್ಲಿ ಇಂದು ಹದ್ದುಗಳು ಹಾರಾಡುತ್ತವೆ' ಎಂದು ಒಬ್ಬ ಭವಿಷ್ಯನುಡಿದ. ಊರಿಂದ ಅರ್ಧ ಮೈಲು ಅಂತರದಲ್ಲಿ ಇರುವ ಹೊಲದಲ್ಲಿಯೆ ಈ ಕುಸ್ತಿ ನಡೆಯಲಿತ್ತು. ಇವರಿಬ್ಬರ ಹೊಲಕ್ಕೆ ಹೊಂದಿಯೆ ಕೃಷ್ಣೆ ಸರಳವಾಗಿ ದಾರಿಮಾಡಿಕೊಂಡು ಸಾಗಿದ್ದಳು. ವಿಜಯಪುರದಿಂದ ಬೆಳಗಾವಿಗೆ ಹೋಗುವ ರಾಜಮಾರ್ಗ, ರಾಮನಗೌಡರ ಹೊಲದ ಅಚೆಯ ಬದಿಗುಂಟ ಬಿದ್ದಿತ್ತು. ಅಲ್ಲಿಯೆ ಕೃಷ್ಣೆಗೆ ಒಂದು ಚಿಕ್ಕ ಸೇತುವೆಯನ್ನು ಹೊಸತಾಗಿ ಕಟ್ಟಲಾಗಿತ್ತು. ಬೆಳಗಾವಿಯಿಂದ ಬರುವ ಬಸ್ಸು ಆ ಸೇತುವೆ ದಾಟುತ್ತಲೆ, ಹಾಳೂರ ಜನರನ್ನಿಳಿಸಲು ನಿಲ್ಲುತ್ತಿತ್ತು. ರಾಮನಗೌಡರ ಹೊಲದ ಸೀಮೆಯಲ್ಲಿಯೆ ಆ ಊರ ನಿಲ್ದಾಣವಿದ್ದಿತೆನ್ನಬಹುದು. ಆದರ ವಿರುದ್ಧ ದಿಕ್ಕಿನ ಸೀಮೆಯಲ್ಲಿ ಶಿವಪ್ಪ ಸಾಹುಕಾರರ ಹೊಲವಿದ್ದಿತು. ಬಸಪ್ಪನ ಸೈನ್ಯವೂ ಬಂದಿತು. ಸೈನ್ಯವೆಂದೇ ಹೇಳಬಹುದು. ಯಾಕೆಂದರೆ ನಾಲ್ವತ್ತು-ಐವತ್ತು ಜನ ತರುಣರು ಕಟ್ಟನ ಬಡಿಗೆ, ಚಂದ್ರಾವಳಿಯ ಕೊಡಲಿ ಮುಂತಾದ ಆಯುಧಗಳಿಂದ ಸುಸಜ್ಜಿತರಾಗಿ ಹೊರಟಿದ್ದರು. ಅವರೆಲ್ಲರೂ ನೇರವಾಗಿ ನಿಲ್ದಾಣದತ್ತ ಬಂದರು. ಹೊಲದ ಎದುರುಬದಿಯಲ್ಲಿದ್ದ ಸಂಗಣ್ಣ ಇದನ್ನೆಲ್ಲ ನೋಡಿದ. ಅವನ ಮೈ ಜುಮ್ಮೆಂದಿತು. ಎಂದಿಲ್ಲದ ಹೆದರಿಕೆ ಅವರಿಸಿತು. 'ಇಷ್ಟು ಜನ ತನ್ನನ್ನೆದುರಿಸಲು ಸಿದ್ಧರಾಗಿದ್ದಾರಲ್ಲ!' ಎಂದು ಆಶ್ಚರ್ಯವೂ ಉಂಟಾಯಿತು. ಇವರೆಲ್ಲರ ಮುಂದೆ ನಮ್ಮ ಹತ್ತೆಂಟು ಜನರ ಆಟ ನಡೆಯುವುದೆಂತು? ಅವನ ಕಂಪಿತ ಎದೆಯಲ್ಲಿ ಹಲವಾರು ವಿಚಾರಗಳ ಮಂಥನ ನಡೆಯಿತು. ಅವನ ಜೊತೆಯವರೂ ಗಾಬರಿಯಲ್ಲಿ ಮುಳುಗಿದ್ದರು. ಸಂಗಣ್ಣ ಒಬ್ಬನನ್ನು ಕರೆದು "ಮನೆಗೆ ಹೋಗಿ ತಂದೆಯವರಿಗೆ ಈ ಸಮಾಚಾರ ಹೇಳಿ, ಹೆಚ್ಚು ಜನರನ್ನು ಕಲೆಹಾಕಿಕೊಂಡು ಬಾ! ಹೂಂ ಬೇಗ ಹೋಗು!" ಎಂದು ಹೇಳಿದ. ಆ ಆಳು ಕೂಡಲೆ ಅಲ್ಲಿಂದ ಕಾಲುಕಿತ್ತಿದ.

"ಬೆಳಗಾವಿಯಿಂದ ಬರುವ ಬಸ್ಸು ಎಂಟೂಮೂವತ್ತಕ್ಕೆ ಸರಿಯಾಗಿ ಇಲ್ಲಿಗೆ ಬಂದೇಕಿತ್ತು; ಬರಲಿಲ್ಲವೇಕೋ!" ಎಂದು ಬಸಪ್ಪ ತಳಮಳಿಸಿದ. ಎಲ್ಲರ ದೃಷ್ಟಿ ಆ ದಾರಿಯಕಡೆಗೇ ಇತ್ತು. ಇತ್ತ ಸಂಗಣ್ಣನ ಆಳುಗಳು ಬಿತ್ತುವ ಕೂರಿಗೆಗೆ ಎತ್ತುಗಳನ್ನು ಹೂಡಿ ಅಣಿಗೊಳಿಸಿದ್ದರು. ಅವರೆಲ್ಲರ ದೃಷ್ಟಿ ಊರಕಡೆಗೊಮ್ಮೆ, ಬಸ್ಸುಬರುವ ದಾರಿಯ ಕಡೆಗೊಮ್ಮೆ ಚಲಿಸುತ್ತಿತ್ತು. ಊರಲ್ಲಿ ಹೋದ ಆಳು ಒಂದು ತಾಸಾದರೂ ಮರಳಿ ಬರಲೇಇಲ್ಲ. ಸಂಗಣ್ಣನಿಗೆ ಏನು ಮಾಡಬೇಕೆಂಬುದು ತಿಳಿಯದಾಯಿತು. ದೂರದಲ್ಲಿ ಬಸ್ಸು ಕಾಣಿಸಿಕೊಂಡಿತು. ಎಲ್ಲರೂ ತವಕದಿಂದ ಅತ್ತಕಡೆಗೇ ನೋಡುತ್ತಿದ್ದರು. ಬಸ್ಸು ಬಂದು ನಿಂತಿತು. ಜನರೆಲ್ಲ ಧಾವಿಸಿ ಬಾಗಿಲ ಬಳಿ ಬಂದರು. ರಾಮನಗೌಡರು ನಗುತ್ತಲೇ ಕೆಳಗಿಳಿದನು. ಎಲ್ಲರ ಮುಖದಲ್ಲಿಯೂ ಸಂತಸದ ನಗೆ ಮಿಂಚಿತು. ರಾಮನಗೌಡನು ಹೊಲದ ಸೀಮೆಯ ಕಡೆಗೆ ನೇರವಾಗಿ ನಡೆದ ಬದಿಯಲ್ಲಿಯೆ ಬಸಪ್ಪನಡೆದಿದ್ದ; ಸುತ್ತಲೂ ಬೆಂಬಲಿಗರು ಹೊರಟಿದ್ದರು. ಬಸಪ್ಪ ನಡೆದ ಸಂಗತಿಯ ವರದಿ ಒಪ್ಪಿಸಿದ. "ನೀಳೆಚೆನ್ನಾಗಿದೆ ನೀವು ಎಲ್ಲಿ ತಪ್ಪಿಸುವಿರೋ ಎಂದು ಚಿಂತಿಸುತ್ತಿದ್ದೆವು." ಎಂದನೊಬ್ಬ ತನ್ನ ಚೂಪಾದ ಮೀಸೆತಿದ್ದುತ್ತ. "ಕೀಚಕನ ವಧೆ ಭೀಮನಿಂದಲೇ ಆಗಬೇಕಲ್ಲ" ಮತ್ತೊಬ್ಬ ತನ್ನ ರುಮಾಲಿನ ಚುಂಗವನ್ನು ಸರಿಪಡಿಸಿಕೊಳ್ಳುತ್ತ ನುಡಿದ. ರಾಮನಗೌಡ ಮೌನವಾಗಿಯೆ ಸಾಗಿದ್ದನು. ಯಾರ ಪ್ರಶ್ನೆಗೂ ಉತ್ತರಿಸುವ ಸಾಹಸವಮಾಡಲಿಲ್ಲ ಎಲ್ಲರೂ ಬಂದು ಸೀಮೆಕಲ್ಲಿನ ಹತ್ತಿರ ನಿಂತರು. ಸುಮಾರು ಹತ್ತಿಪ್ಪತ್ತು ಗಜ ಅಂತರದಲ್ಲಿಯೆ ಸಂಗಣ್ಣ ತನ್ನ ಸಂಗಡಿಗರೊಂದಿಗೆ ನಿಂತಿದ್ದ. ಅವನು ಪೂರಾ ಸೋತುಹೋಗಿದ್ದ. ಮೈ ಬೆವರಿನಿಂದ ಒದ್ದೆಯಾಗಿತ್ತು. 'ನಾನೇ ಇನ್ನು ಮನೆಯ ಕಡೆಗೆ

ಹೋಗಬೇಕೆ ಹೇಗೆ ? " ಎಂದು ವಿಚಾರಿಸಿದ. ಇಲ್ಲಿಂದ ಕಾಲುಕಿತ್ತು ಹೊರಡುವುದು ಹೇಡಿತನದ ಲಕ್ಷಣವೆನಿಸಿತು. ಹಾಗು " ನಾನು ಹೊರಟರೂ ಅವರು ಬಿಡುವರೆ ? ರಾಮನಗೌಡ ಹಿಂದಿನ ಋಣಸನ್ನು ತೀರಿಸಲೆಂದೇ ಬಂದಿದ್ದಾನೆ. ವಿಧಿ ಆತನಿಗೆ ಅನುಕೂಲವಾಗಿದೆ. ಇಂದು ನನ್ನ ಕೈ ಕತ್ತರಿಸುವುದು ನಿಶ್ಚಿತ. ಏನುಮಾಡಬೇಕು ? ರಾಮನಗೌಡನ ಬಳಿ ಹೋಗಿ ಕ್ಷಮೆ ಕೇಳಲೆ ? ಅಷ್ಟು ಕೀಳುಮಟ್ಟಕ್ಕೆ ಇಳಿಯಲೆ ? ಅವನ ಕ್ಷಮೆ ಕೇಳಕೂಡದು ! ಜೀವಹೋದರೂ ಅವನಿಗೆ ತಲೆ ಬಾಗಲಾರೆ ! " ಸಂಗಣ್ಣನ ಅಭಿಮಾನ ಅವನಲ್ಲಿ ಧೈರ್ಯ ತುಂಬ ತೊಡಗಿತ್ತು.

ಊರಲ್ಲೆಲ್ಲ ಆಲೆದಾಡಿದರೂ ಯಾರೊಬ್ಬರೂ ಸಹಾಯಕ್ಕೆ ಬಾರದಿರುವುದನ್ನು ಕಂಡು ಕಂಗಾಲರಾದ ಶಿವಪ್ಪನವರು, ತಾವೇ ಹೊಲದ ಕಡೆಗೆ ನಡೆದರು. ಇಬ್ಬರಲ್ಲಿಯ ತಂಟೆ ಬಗೆಹರಿಸಲು ಹಿರಿಯರು ಕೂಡ ನಿರಾಕರಿಸಿದರು. "ನಾವು ಹೇಳಿದಂತೆ ನೀನು ನಡೆದು ಕೊಂಡಿಲ್ಲ; ಈಗ ಅದರ ಫಲ ಅನುಭವಿಸು ! " ಎಂದು ಅವರು ಸ್ಪಷ್ಟವಾಗಿ ಹೇಳಿದರು. ಇದರಿಂದಾಗಿ ಶಿವಪ್ಪನವರ ಧೈರ್ಯ ಕುಸಿದು ಹೋಗಿತ್ತು. " ಇಂದು ನನ್ನ ಮಗನ ಸ್ಥಿತಿ ಚೆನ್ನಾಗದು ! " ಎಂದು ಅವರಿಗೆ ಮನವರಿಕೆಯಾಯಿತು. "ನಾನು ಹೋಗಿ ರಾಮನಗೌಡನಲ್ಲಿ ಕ್ಷಮೆ ಕೇಳಿಕೊಳ್ಳಬೇಕು; ಅವನ ಯಾವ ಮಾತಿಗೂ ಒಪ್ಪಿಗೆ ಕೊಡಬೇಕು. ಇದೇ ಕೊನೆಯ ದಾರಿ ! " ಎಂದು ನಿರ್ಧರಿಸಿ ಹೊಲದ ಕಡೆಗೆ ಹೊರಟರು.

" ಸಂಗಣ್ಣಾ, ಸ್ವಲ್ಪ ಇಲ್ಲಿಯವರೆಗೆ ಬರುವೆಯಾ ? " ಎಂದು ರಾಮನಗೌಡ ಕೂಗಿದ. ಅವನ ಆ ಮಾತಿನಲ್ಲಿ ವೈರತ್ವದ ವೈಖರಿ ಇರಲಿಲ್ಲ; ಸ್ನೇಹದ ಸಹಾನುಭೂತಿಯಿತ್ತು. ಸಂಗಣ್ಣ ಒಂದು ಗಳಿಗೆ ಯೋಚಿಸಿದ ! " ನಾನು ಅಲ್ಲಿಗೆ ಹೋಗಲೋ ಬೇಡವೋ " ಎಂದು. ಆದದ್ದಾಗಲಿ ಎಂದು ಧೈರ್ಯ ತಾಳಿ ಹೊರಟುಬಂದ. ಜೊತೆಗೆ ಅವನ ಬೆಂಬಲಿಗರೂ ಹಿಂಬಾಲಿಸಿದರು. ಸಂಗಣ್ಣ ಅಧೋವದನನಾಗಿ ರಾಮನಗೌಡನ ಎದುರು ನಿಂತುಕೊಂಡ; ಬಲೆಯಲ್ಲಿ ಬಿದ್ದ ಬೇಟೆಯಂತೆ. " ಸಂಗಣ್ಣಾ, ಈ ಸೀಮೆಯ ಕಲ್ಲು ಕಿತ್ತಿದವನು ನೀನೇ ಅಲ್ಲವೆ ? " ರಾಮನಗೌಡ ಮೃದುವಾಗಿಯೆ ಕೇಳಿದ. "ಹೌದು" ಎಂದು ಸಂಗಣ್ಣ ಗೋಣುಹಾಕಿದ. " ಇದನ್ನೇಕೆ ಕಿತ್ತುಹಾಕಿದೆ ? " ಎಂದು ರಾಮನಗೌಡ ಕೇಳಿದಾಗ ಸಂಗಣ್ಣ ಉತ್ತರಿಸಲಿಲ್ಲ " ಏಕೆ ಕಿತ್ತಿದೆ ಬೊಗಳು; ಸುಮ್ಮನೆ ಏಕೆ ನಿಂತುಕೊಂಡೆ ? " ಬಸಪ್ಪ ಮುಂದೆ ಬಂದು ಗುಡುಗಿದ. "ಸ್ವಲ್ಪ ತಡೆ ಮಾವಾ, ಹಾಗೆ ದುಡುಕಬಾರದು" ಎಂದು ಬಸಪ್ಪನನ್ನು ಹಿಂದೆ ಸರಿಸಿ ರಾಮನಗೌಡನು ಸಂಗಣ್ಣನ ಹತ್ತಿರ ಬಂದ.

" ಹೀಗೆ ಕಾಲು ಕೆದರಿ ಜಗಳ ತೆಗೆಯುವುದು ಯೋಗ್ಯವೇ ಸಂಗಣ್ಣಾ ? " ರಾಮನಗೌಡ ನಮ್ರನಾಗಿ ನುಡಿದ. ಸಂಗಣ್ಣ ತಲೆ ತಗ್ಗಿಸಿ ಹಾಗೆಯೆ ನಿಂತಿದ್ದ. ಅವನ ಬಾಯಿಂದ ಮಾತುಗಳೇ ಹೊರಬರಲಿಲ್ಲ. ರಾಮನಗೌಡನು ಹೀಗೆ ಮೆತ್ತಗೆ ಮಾತನಾಡುತ್ತಿರುವುದನ್ನು ಕಂಡು ಅಲ್ಲಿದ್ದವರಿಗೆ ಆಶ್ಚರ್ಯವಾಯಿತು. ಕೆಲವರಿಗೆ ತಮ್ಮ ಒಡೆಯನ ಮೇಲೆ ಕೋಪವೂ ಬಂತು. ಅದರಲ್ಲಿ ಒಬ್ಬ ಮುಂದೆ ಬಂದು :—

" ಈ ಒಣ ಮಾತುಗಳಿಂದೇನು ಪ್ರಯೋಜನ ? ಹಿಡಿಯಿರಿ ಈ ಕೊಡಲಿಯನ್ನು; ನಿಮ್ಮ ಕಾರ್ಯ ಮುಗಿಸಿಬಿಡಿರಿ. " ಎನ್ನುತ್ತ ತನ್ನ ಚಂದ್ರಾವಳಿಯ ಕೊಡಲಿಯನ್ನು ರಾಮನಗೌಡನ ಕೈಗೆ ಕೊಡಲು ಹೋದ. ರಾಮನಗೌಡ ಆ ಕೊಡಲಿಯನ್ನು ದೂರ ಒಗೆದು.—

" ನಾನು ಬಂದುದು ಜಗಳ ತೆಗೆಯಲಿಕ್ಕೆ ಅಲ್ಲ; ಸ್ನೇಹ ಬೆಳೆಸಲಿಕ್ಕೆ. ನೀವಾರೂ ಒಂದು ಮಾತನ್ನೂ ಆಡಕೂಡದು " ಎಂದು ಅವನನ್ನು ಬದಿಗೆ ಸರಿಸಿದ. ರಾಮನಗೌಡನ ಮಾತನ್ನು ಕೇಳಿ ಸಂಗಣ್ಣ ಚಕಿತನಾದ. ಅವನು " ಈ ಕಲ್ಲು ಕಿತ್ತಿ ಮೊದಲಿನ ಸ್ಥಾನದಲ್ಲಿ ನೆಡಿಸಿರಿ. " ಎಂದು ತನ್ನ ಆಳುಗಳಿಗೆ ಕೇಳಿದ. ರಾಮನಗೌಡ ನಗುತ್ತಲೇ ಹೇಳಿದ :—

" ಸಂಗಣ್ಣಾ, ಹಾಗೇನೂ ಮಾಡುವ ಅವಶ್ಯಕತೆಯಿಲ್ಲ. ಆ ಕಲ್ಲು ಆಲ್ಲಿಯೇ ಇರಲಿ. ನನಗೆ ಈಗ ಈ ಹೊಲದ ಮೇಲೆ ಯಾವ ಅಧಿಕಾರವೂ ಇಲ್ಲ. ನಾನು ಬರುವಾಗ ಈ ಹೊಲವನ್ನು ಆಚಾರ್ಯ ವಿನೋಬಾ ಭಾವೆಯವರಿಗೆ ದಾನವಾಡಿದ್ದಾಗಿ ಬರೆದು ಹಾಕಿದ್ದೇನೆ. ನಮ್ಮ ಊರಲ್ಲಿ ಯಾವುದೇ ಬಗೆಯ ವೈರ ಬೆಳೆಯದಂತೆ ಉಳಿಯದಂತೆ ನೋಡಿಕೊಳ್ಳಲು ಬಂದಿದ್ದೇನೆ. " ರಾಮನಗೌಡನ ಮಾತು ಮುಗಿಯುವಷ್ಟರಲ್ಲಿ, ಸಂಗಣ್ಣನ ತುಂಬಿನಿಂತ ಕಣ್ಣುಗಳ ಕಟ್ಟೊಡೆದು ನೀರು ಹೊರಚಿಮ್ಮಿತು. ಅದರೊಡನೆ ಅವನ ವೈರ, ಮಾತ್ಸರ್ಯ, ದುರಭಿಮಾನಗಳೆಲ್ಲ ಕೊಚ್ಚಿಕೊಂಡು ಹೋದುವು. ಇಂದು ರಾಮನಗೌಡನು ಅವನ ಪಾಲಿಗೆ ದೇವತೆಯಾಗಿ ಕಂಡ. ಹೆಚ್ಚು ನಿಲ್ಲಲಿಕ್ಕಾಗದೆ ಮೆಲ್ಲನೆ ಕುಸಿದು ರಾಮನಗೌಡನ ಪಾದಗಳ ಮೇಲೆ ಉರುಳಿದ. ರಾಮನಗೌಡ ಕೂಡಲೆ ಅವನನ್ನು ಹಿಡಿದೆತ್ತಿ ಆಲಿಂಗಿಸಿದ. ಅಷ್ಟರಲ್ಲಿ ಶಿವಪ್ಪನವರೂ ಅಲ್ಲಿಗೆ ಬಂದು, ಬದಲಾವಣೆ ಹೊಂದಿದ ವಾತಾವರಣವನ್ನು ಕಂಡು ಹರ್ಷಿತರಾದರು.

ಅಂದೇ ಸಂಜೆ ಸಾಹುಕಾರ ಶಿವಪ್ಪನವರು, ಊರಮುಂದಿನ ತಮ್ಮ ಆ ಹೊಲವನ್ನು ಆಚಾರ್ಯ ವಿನೋಬಾ ಭಾವೆಯವರಿಗೆ ದಾನ ಮಾಡಿದ್ದಾಗಿ ಬರೆದ ಕಾಗದವನ್ನು ರಾಮನಗೌಡನಿಗೆ ಒಪ್ಪಿಸಿದರು.

ರಾಜಧರ್ಮ

(ವಿಚಾರ ಪ್ರಚೋದಕ ಪ್ರಬಂಧ)

ಶ್ರೀ. ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು

ರಾಜಧರ್ಮ ತಿಳಿಯದವರ ಕೈಯಲ್ಲಿ ಅಡಳಿತದ ಸೂತ್ರಗಳು ಸಿಕ್ಕಿಕೊಂಡರೆ, ರಾಜ್ಯದಲ್ಲಿ ಎಂದೂ ಸುಖ-ಸಮಾಧಾನಗಳು ನೆಲೆಗೊಳ್ಳಲಾರವು. ಇಂದಿನ ನಮ್ಮ ಭಾರತದ ಪ್ರಜಾ-ಪ್ರಭುತ್ವದ ಶಾಸನಕರ್ತರಲ್ಲಿ, ನಿಜವಾದ ರಾಜಧರ್ಮವನ್ನು ಅರಿತುಕೊಂಡು ಅದನ್ನು ಅನುಷ್ಠಾನದಲ್ಲಿ ತರಬಯಸುವವರು ಎಷ್ಟು ಜನ?

●

ಭಾರತ ಹಾಗೂ ವಿದೇಶಗಳ ಪ್ರಾಚೀನಗ್ರಂಥಗಳಲ್ಲಿ ರಾಜ-ನೀತಿ ಹಾಗೂ ರಾಜಧರ್ಮದ ವಿಚಾರ ತುಂಬಾ ಬಂದಿದೆ ಇಂದಿನ ಭಾರತದೇಶವು ಪ್ರಜಾತಂತ್ರಾತ್ಮಕ ರಾಜ್ಯವಾಗಿದೆ; ಆದರೂ, ಅಯಾ ಪ್ರಾಂತಿಕ ಹಾಗೂ ಕೇಂದ್ರ ಸ್ಥಳಗಳಲ್ಲಿ ಪ್ರಜಾಪ್ರತಿನಿಧಿಗಳಾಗಿ ಸೇರಿಕೊಂಡು ರಾಜ್ಯವನ್ನು ಮುನ್ನಡೆಸುವವರು, ಈ ರಾಜನೀತಿಯನ್ನು ತುಸ ಮನನಮಾಡಿಕೊಳ್ಳಬೇಕಾದುದು. ಏಕೆಂದರೆ, ಅಂದಿನ ರಾಜನು ಮಾಡುವ ಯಾವತ್ತೂ ರಾಜ್ಯನಿರ್ವಹಣಭಾರವನ್ನು ಇಂದಿನ ಪ್ರಜಾಪ್ರಮುಖರು ವಹಿಸಿಕೊಳ್ಳಬೇಕಾಗಿದೆ. ರಾಜನೆಂಬ ಹೆಸರಿಲ್ಲದಿದ್ದರೂ, ಅಡಳಿತೆಯವರೆಂಬ ಹೆಸರು 'ನೃಪ'ನಂತೆ ಇದ್ದೇ ಇದೆ. ಇಂತಹ ಕೆಲವು ವಿಷಯಗಳನ್ನು ಮನುಸ್ಮೃತಿ ಹಾಗೂ ಮಹಾ ಭಾರತ ಗ್ರಂಥಗಳಿಂದ ಆಯ್ದು ಬರೆದಿದೆ. ಮನುವು ಮಾನವರ ಮೊದಲ ಮುಖಂಡನೆಂಬುದು, ಪ್ರಸಿದ್ಧ ಸಂಗತಿಯಾಗಿದೆ. ಇವರಿಬ್ಬರ ಗ್ರಂಥಗಳು ನಮಗೆ ಆದರ್ಶಗಳೆಂಬುದರಲ್ಲಿ ಅದೇನೂ ಅನುಮಾನವಿಲ್ಲ.

೧. **ಪ್ರಜೆಗಳು ಹಾಗೂ ಮುಖಂಡರು :** ಇವರಿಬ್ಬರು ಹೇಗಿರಬೇಕೆಂದು ನಾವು ಮೊದಲು ತಿಳಿಯಬೇಕು :—

ಭಾರತ ॥ ಬ್ರಹ್ಮ ಕ್ಷತ್ರೇಣ ಸಹಿತಂ ಕ್ಷತ್ರಂಚ ಬ್ರಹ್ಮಣಾ ಸಹ ।
ಸಂಯುಕ್ತೌ ದಹತಃ ಶತ್ರೂನ್ ವನಾನೀವಾಗ್ನಿ ಮಾರುತೌ ॥

ಪ್ರಜೆಯ ಜ್ಞಾನವು ಮುಖಂಡನ ಬಲದೊಂದಿಗೆ, ಅಥವಾ ಮುಖಂಡನ ಬಲವು ಪ್ರಜೆಯ ಜ್ಞಾನದೊಂದಿಗೆ ಜತೆಯಲ್ಲಿ ಸಾಗ-ಬೇಕು. ಗಾಳಿ-ಕಿಚ್ಚುಗಳು-ಒಟ್ಟಾದರೆ ಕಾಡುಗಳನ್ನು ಸುಡುವಂತೆ, ಇವರು ತಮ್ಮಲ್ಲಿ ಒಟ್ಟಾದರೆ, ತಮ್ಮ ಹಗೆಗಳನ್ನು ಸುಡುತ್ತಾರೆ. ಪ್ರಜೆಗಳೂ ಅಡಳಿತದವರೂ ಒಕ್ಕಟ್ಟಿನಲ್ಲಿದ್ದರೆ ಸೊಗಸೆಂದು ಹೇಳ-ಲಾಗಿದೆ.

ಪ್ರಜೆಯು ಸರಿದಾರಿಯಲ್ಲಿ ನಡೆವಂತೆ ಕಟ್ಟುಪಾಡುಗಳು, ಸರಿದಾರಿ ತಪ್ಪಿದರೆ ಶಿಕ್ಷೆಯೂ ಇವೆ. ಇದು ರಾಜಧರ್ಮದ ತಿರುಳು, ಇದು ಲೌಕಿಕಧರ್ಮಕ್ಕೂ ಸರಿಯಾಗಿದೆ :—

ಮನು ॥ ಸರಾಜಾ ಪುರುಷೋ ದಂಡಃ ಸನೇತಾ ಶಾಸಿತಾಚಶಃ ।
ಚತುರ್ಣಾಮಾಶ್ರಮಾಣಾಂಚ ಧರ್ಮಸ್ಯ ಪ್ರತಿಭೂಃ ಸ್ಮೃತಃ ॥

ಆ ದಂಡವೇ ರಾಜನೆಂದೋ, ಪುರುಷನೆಂದೋ, ಮುಂದಾಳು-ಎಂದೋ, ಅಡಳಿತೆಯವನೆಂದೋ ಹೇಳಿಸಿಕೊಳ್ಳುವುದು. ದಂಡವು ಎಲ್ಲಾ ಜನರ ಧರ್ಮಕಾರ್ಯಗಳ ಹೊಣೆಯನ್ನು ಹೊತ್ತಿದೆ.

೨. **ವ್ಯಸನಗಳು :** ಮುಂದಾಳು-ಪ್ರಜೆಗಳ ರಕ್ಷಣೆ ಹಾಗೂ ರಾಜ್ಯದ ಭದ್ರತೆಯ ಭಾರವನ್ನು ಹೊತ್ತವನು. ಪ್ರಜೆಗಳಿಗೆ ಮುಖಂಡನೇ ಆದರ್ಶ. 'ಯಥಾ ರಾಜಾ ತಥಾ ಪ್ರಜಾಃ' ಎಂಬಂತೆ 'ಯಥಾ ಪ್ರಜಾಸ್ತಥಾ ನೇತಾ' ಎಂಬುದೂ ತಿಳಿಯತಕ್ಕ ವಿಷಯ-ವಾಗಿದೆ. ಮುಂದಾಳು ನಡೆಯುತಕ್ಕ ಹಲವು ಕೆಲಸಗಳಿರುವಂತೆ, ಬಿಡತಕ್ಕವು ಹಲವಿವೆ :—

ಮನು ॥ ದಶಕಾಮ ಸಮುತ್ಥಾನಿ ತಥಾಷ್ಟೌ ಕ್ರೋಧಜಾನಿ ಚ ।
ವ್ಯಸನಾನಿ ದುರಂತಾನಿ ಪ್ರಯತ್ನೇನ ವಿವರ್ಜಯೇತ್ ॥
ಕಾಮಜೇಷು ಪ್ರಸಕ್ತೋಹಿ ವ್ಯಸನೇಷು ಮಹೀಪತಿಃ ।
ವಿಯುಜ್ಯತೇಽರ್ಥ ಧರ್ಮಾಭ್ಯಾಂ ಕ್ರೋಧ ಜೇಷ್ವಾತ್ಮನೈವತು ॥

ದೇಹಸುಖದ ಬಗೆಗೆ ಅತಿರೇಕದಿಂದ ಹತ್ತು ವ್ಯಸನಗಳು ಹುಟ್ಟುತ್ತವೆ. ಸಿಟ್ಟಿನ ಭರದಿಂದ ಎಂಟು ವ್ಯಸನಗಳು ಹುಟ್ಟುತ್ತವೆ. ಇವು ಮೊದಲು ಸುಖವಾಗಿ ಕಂಡರೂ, ದುಃಖವಾಗಿಯೇ ಕೊನೆ-ಗೊಳ್ಳುತ್ತವೆ. ಹಾಗಾಗಿ, ಇವನ್ನು ಪ್ರಯತ್ನಪೂರ್ವಕ ಬಿಡಬೇಕು. ಕಾಮದ ವ್ಯಸನಗಳಲ್ಲಿ ಅಂಟಿದರೆ ಧರ್ಮ-ಅರ್ಥಗಳು ತೊಲಗುತ್ತವೆ. ಕೋಪದ ವ್ಯಸನಗಳಲ್ಲಿ ಅಂಟಿದರೆ ಧರ್ಮ ಅರ್ಥ ಕಾಮಗಳು ಮಾತ್ರ-ವಲ್ಲ ಜೀವವೇ ತೊಲಗುವುದುಂಟು. ಕಾಮ ಕ್ರೋಧಗಳಿಂದ ಹುಟ್ಟುವ ಹತ್ತೆಂಟು ವ್ಯಸನಗಳು ಇವು :—

ಮನು ॥ ಮೃಗಯಾಕ್ಷಾ ದಿವಾಸ್ವಪ್ನಂ ಪರಿವಾದಃ ಸ್ತ್ರಿಯೋ ಮದಃ ।
ತೌರ್ಯತ್ರಿಕಂ ವೃಥಾಟ್ಯಾಚ ಕಾಮಜೋ ದಶಕೋ ಗಣಃ ॥
ಪೈಶುನ್ಯಂ ಸಾಹಸಂ ದ್ರೋಹ ಈರ್ಷ್ಯಾಸೂಯಾರ್ಥದೂಷಣಂ ।
ವಾಗ್ದಂಡಜಂ ಚ ಪಾರುಷ್ಯಂ ಕ್ರೋಧಜೋಽಪಿ ಗಣೋಽಷ್ಟಕಃ ॥



ಬೇಟಿ, ಜೂಜು, ಹಗಲುನಿದ್ರೆ, ಬೇರೆಯವರ ದೋಷಗಳನ್ನು ಹೇಳುವುದು, ಸ್ತ್ರೀಯರು, ಕುಡಿತ, ವಾದ್ಯ-ಗಾನ-ನರ್ತನಗಳು, ಅಲೆದಾಟ ಇವು ಹತ್ತು ಕಾಮವ್ಯಸನಗಳು. ಚಾಡಿ, ದುಡುಕು, ಎರಡೆಣಿಕೆ, ಬೇರೆಯವರ ಗುಣದಲ್ಲಿ ಹೊಟ್ಟೆಕಿಚ್ಚು, ಬೇರೆಯವರಲ್ಲಿ ಅಪವಾದ ಹೊರಿಸುವುದು, ಹಣದ ಕಳವು, ಕೊಡಬೇಕಾದುದನ್ನು ಕೊಡದಿರುವುದು, ನ್ಯಾಯವಿಲ್ಲದೆ ಬಯ್ಯುವುದು ಮತ್ತು ಹೊಡೆಯುವುದು—ಈ ಎಂಟು ಕೋಪ ವ್ಯಸನಗಳು. ಇವೆಲ್ಲಾ ಏಕೆ ಉಂಟಾಗುತ್ತವೆಯೆಂದು ತಿಳಿಯಬೇಕಾದುದು: —

ಮ॥ ದ್ವಯೋರಪ್ಯೇತಯೋರ್ಮೂಲಂ ಯಂ ಸರ್ವೇ ಕವಯೋ ವಿದುಃ।
ತಂ ಯತ್ನೇನ ಜಯೇಲ್ಲೋಭಂ ತಜ್ಜಾನೇತಾವುಭಾಗಣಾ ॥

ಇವೆರಡು ಗುಂಪಿನ ವ್ಯಸನಗಳು ಉಂಟಾಗಲು ಆಸೆಯೇ ಕಾರಣ. ಆಸೆಯನ್ನು ಗೆದ್ದರೆ ಇವೆಲ್ಲಾ ಉಂಟಾಗವು. ಇವುಗಳಲ್ಲಿ ಕುಡಿತ, ಜೂಜು, ಹೆಣ್ಣು, ಬೇಟೆಗಳೂ; ಶಿಕ್ಷೆ, ಬಯ್ಗಳು, ಹಣದ ವಹಿವಾಟುಗಳು ಪ್ರತ್ಯೇಕವಾಗಿ ಆಯಾ ಗುಂಪಿನಲ್ಲಿ ಹೆಚ್ಚಿನ ಕೆಡುಕುಗಳಾಗಿವೆ. ಇವೆಲ್ಲವುಗಳಲ್ಲಿ ಮೊದಲಿನವು ಮತ್ತಿನವಕ್ಕಿಂತ ಹೆಚ್ಚಿನವೆಂದೂ ಹೇಳಲಾಗಿವೆ. ಇವುಗಳಲ್ಲಿ ಅತಿ ಸೇವನೆಯಿಂದ ಇರಲಾಗದು. ಏಕೆಂದರೆ:—

ಮ ॥ ವ್ಯಸನಸ್ಯಚ ಮೃತ್ಯೋಶ್ಚ ವ್ಯಸನಂ ಕಷ್ಟಮುಚ್ಯತೇ।
ವ್ಯಸನ್ಯಧೋಽಧೋ ವ್ರಜತಿ ಸ್ವರ್ಯಾತ್ಯವ್ಯಸನೀ ಮೃತಃ ॥

ವ್ಯಸನ ಮರಣಗಳಲ್ಲಿ ವ್ಯಸನವೇ ತುಂಬಾ ಕೆಡುಕು. ವ್ಯಸನದಿಂದ ಮನುಷ್ಯನು ಕೆಳಮಟ್ಟಕ್ಕೆ ಇಳಿಯುವನು; ವ್ಯಸನವಿಲ್ಲದೆ ತೀರಿದರೆ ಮೇಲು ಹಂತಕ್ಕೇರುವನು. ಅಂದರೆ ಇವು ಕೆಡುಕನ್ನು ಉಂಟುಮಾಡುತ್ತವೆ, ಇವನ್ನುಳಿದು ಒಳ್ಳೆಯ ದಾರಿಯಲ್ಲಿ ಸಾಗಿದರೆ ಲೇಸು—ಎಂದು ಸಾರಾಂಶ.

೩. **ಮುಖಂಡನ ಕೆಲಸಗಳು:** ಮುಂದಾಳು ರಾಷ್ಟ್ರಕ್ಕಾಗಿ ಯಾವ ಕೆಲಸಗಳನ್ನು ಮಾಡಬೇಕು, ಹೇಗೆ ಮಾಡುವುದು ಧರ್ಮವೆಂದು ತಿಳಿಯಬೇಕು?

ಮ ॥ ಅಲಬ್ಧಂ ಚೈವ ಲಿಪ್ಸೇತ ಲಬ್ಧ ರಕ್ಷೇತ್ಪ್ರಯತ್ನತಃ।
ರಕ್ಷಿತಂ ವರ್ಧಯೇಚ್ಚೈವ ವೃದ್ಧಂ ಪಾತ್ರೇಷು ನಿಕ್ಷಿಪೇತ್ ॥

ಮುಂದಾಳು ದೊರೆಯದುದನ್ನು—ರಾಜ್ಯವನ್ನಾಗಲೀ ಹಣವನ್ನಾಗಲೀ—ದಂಡದಿಂದಾದರೂ ಪಡೆಯಲು ಬಯಸಬೇಕು. ಹಾಗೆ ಪಡೆದುದನ್ನು ನೌಕರ ಮುಂತಾದವರಿಂದ ಪ್ರಯತ್ನದಿಂದ ಕಾಪಾಡಬೇಕು. ಅದನ್ನು ವ್ಯಾಪಾರ-ವಹಿವಾಟುಗಳಿಂದ ಅದಷ್ಟು ಹೆಚ್ಚಿಸಬೇಕು; ಅದನ್ನು ಯೋಗ್ಯವಾದ ವಿಷಯುಗಳಲ್ಲಿ ವಿನಿಯೋಗಿಸಬೇಕು. ರಾಜ್ಯದಲ್ಲಿ ಕಂದಾಯ ಕಪ್ಪಗಳನ್ನು ಜಾಗ್ರತೆಯಿಂದ ಕೊಳ್ಳಬೇಕು; ಅದರಿಂದ ಪ್ರಜೆಗಳಿಗೆ ತೊಂದರೆಯಾಗಲೂ ಬಾರದು, ರಾಜ್ಯದ ವೆಚ್ಚಕ್ಕೆ ತಕ್ಕಷ್ಟು ಒದಗಲೂಬೇಕಾದುದೆಂದು ಬೇರೆ ಹೇಳಿದೆ:—

ಮ ॥ ಯಥೈವೋದ್ಧರತಿ ನಿರ್ದಾತಾ ಕರ್ಷಕಃ ಧಾನ್ಯಮಂಚ ರಕ್ಷತಿ।
ತಥಾ ರಕ್ಷೇನ್ನೃಪೋ ರಾಷ್ಟ್ರಂ ಹನ್ಯಾಚ್ಚ ಪರಿಪಂಥಿನಃ ॥
ಸೋಽಚಿರಾದ್ಭ್ರಶ್ಯತೇ ರಾಜ್ಯಾಜ್ಜೀವಿತಾಚ್ಚ ಸಬಾಂಧವಃ ॥
ಕರೀರಕರ್ಷಣ್ಯಾಣಾಃ ಕ್ಷೀಯಂತೇ ಪ್ರಾಣಿನಾಂ ಯಥಾ।
ತಥಾ ರಾಜ್ಞಾಮಪಿ ಪ್ರಾಣಾಃ ಕ್ಷೀಯಂತೇ ರಾಷ್ಟ್ರಕರ್ಷಣಾತ್ ॥

ರೈತನು ಗದ್ದೆಯ ಕಳೆಯನ್ನೂ ಕೀಳುತ್ತಾನೆ, ಧಾನ್ಯವನ್ನೂ ಕಾಯುತ್ತಾನೆ. ಹಾಗೆಯೇ ಮುಖಂಡನು ಹಗೆಗಳನ್ನೂ ಕೀಳಬೇಕು, ರಾಜ್ಯವನ್ನೂ ಕಾಯಬೇಕು. ಮುಖಂಡನು ವಿಚಾರಮಾಡದೆ, ಸುಖದ ಆಸೆಯಿಂದ ರಾಜ್ಯವನ್ನು ಪೀಡಿಸಿದರೆ, ಕೊಂಚ ಕಾಲದಲ್ಲಿ ರಾಜ್ಯ-ಪ್ರಾಣಗಳಿಂದ ಬಿಡುಗಡೆ ಹೊಂದುವನು ವೈಯನ್ನು ಬತ್ತಿಸಿದರೆ ಪ್ರಾಣಿಗಳ ಪ್ರಾಣಗಳು ನಾಶವಾಗುತ್ತವೆ. ಹಾಗೆಯೇ ರಾಜ್ಯವನ್ನು—ಪ್ರಜೆಯನ್ನು—ಬತ್ತಿಸಿದರೆ ' ಮುಖಂಡರ ಪ್ರಾಣಗಳು ನಾಶವಾಗುತ್ತವೆ. ಮುಖಂಡನಿಗೆ ದೇಶವು ದೇಹದಂತೆಯೂ, ಜನರು ಪ್ರಾಣಗಳಂತೆಯೂ ಇಲ್ಲಿ ನಿರೂಪಿಸಿದುದು ಸತ್ಯ ಸಂಗತಿಯಾಗಿದೆ.

ಮ ॥ ಯಥಾಲ್ಪಾಲ್ಪಮದಂತ್ಯಾದ್ಯಂ ವಾರ್ಯೋಕೋ ವತ್ಸಷಟ್ಪದಾಃ।
ತಥಾಲ್ಪಾಲ್ಪೋ ಗ್ರಹೀತವ್ಯೋ ರಾಷ್ಟ್ರಾತ್ರಾಜ್ಞಾಬ್ದಕಃ ಕರಃ ॥

ಜಿಗಳೆಯು ನೆತ್ತರನ್ನು ಸ್ವಲ್ಪ ಸ್ವಲ್ಪವಾಗಿ ಕೊಳ್ಳುವುದು. ಕರುವು ಹಾಲನ್ನು ಸ್ವಲ್ಪವಾಗಿಯೇ ಕೊಳ್ಳುವುದು. ತುಂಬಿಯು ಹೂವಿನ ರಸವನ್ನು ಸ್ವಲ್ಪವಾಗಿ ಕೊಳ್ಳುವುದು. ಹಾಗೆಯೇ ಆಡಳಿತೆಯವನು ರಾಜ್ಯದಿಂದ ತೆರಿಗೆಯನ್ನು ಸ್ವಲ್ಪವಾಗಿಯೇ ಕೊಳ್ಳಬೇಕು. ನಿತ್ಯ ಹಾಗೂ ವಿಶೇಷ ಕ್ರಮದ ಕಂದಾಯಗಳನ್ನು ಸ್ವಲ್ಪವಾಗಿಯೇ ಕೊಳ್ಳುತ್ತಾ ಇರಬೇಕು.

ಮ॥ನೋಚ್ಛಿಂದ್ಯಾದಾತ್ಮನೋ ಮೂಲಂ ಪರೇಷಾಂ ಚಾತಿತೃಷ್ಣಯಾ।
ಉಚ್ಛಿಂದನ್ನಾತ್ಮನೋ ಮೂಲಮಾತ್ಮಾನಂ ತಾಂಶ್ಚಪೀಡಯೇತ್ ॥

ಆಡಳಿತಗಾರನು ತೆರಿಗೆಗಳನ್ನು ಪಡೆಯದೆ ತನ್ನ ಮೂಲವನ್ನು ಕೀಳಬಾರದು. ಹಾಗೆಂದು ಹೆಚ್ಚು ಆಸೆಯಿಂದ ಹೆಚ್ಚು ತೆರಿಗೆಯನ್ನು ಹೊರಿಸಿ, ಪ್ರಜೆಗಳ ಮೂಲವನ್ನು ಕೀಳಲಾಗದು. ತನ್ನ ಮೂಲವನ್ನು ಕೀಳುವುದರಿಂದ ತನ್ನ ಹಾಗೂ ಪ್ರಜೆಗಳ ಪೀಡೆಯಾದಂತೆಯೇ, ಪ್ರಜೆಗಳ ಪೀಡೆಯಿಂದ ತನಗೆ ಲಾಭವೆನಿಸಿದರೂ ಮುಂದೆಲ್ಲಾ ನಾಶವಾಗುವ ಸಂಭವವಿದೆ. ಆದುದರಿಂದ ಇವೆರಡು ವಿಷಯದಲ್ಲೂ ಜಾಗ್ರತೆ ವಹಿಸಬೇಕು. ವ್ಯಾಸನು ಇದನ್ನು ಬೇರೆ ತೆರದಿಂದ ಚೆಲುವಾಗಿ ನಿರೂಪಿಸಿದ್ದಾನೆ:—

ಭಾ॥ ಊಧಶ್ಛಿಂದ್ಯಾತ್ತು ಯೋಧೇನ್ಯಾಃ ಕ್ಷೀರಾರ್ಥಿ ಭಿನಲೀತ್ಪಯಃ।
ಏವಂ ರಾಷ್ಟ್ರಮಯೋಗೇನ ಪೀಡಿತಂ ನ ವಿವರ್ಧತೇ ॥
ಯೋಹಿ ದೋಗ್ಧ್ರೀಮುವಾಸ್ತೇಚ ಸನಿತ್ಯಂ ವಿಂದತೇ ಪಯಃ।
ಏವಂ ರಾಷ್ಟ್ರಮುಪಾಯೇನ ಭುಂಜಾನೋ ಲಭತೇ ಫಲಂ ॥

ಹಾಲು ಬೇಕೆನ್ನುವವನು ಹಸುವಿನ ಕೆಚ್ಚಲನ್ನು ಕೊಯ್ದರೆ ಹಾಲು ದೊರೆಯದು; ಹಾಗೆಯೇ ರಾಜ್ಯವು ಪೀಡಿತವಾದರೆ ಬೆಳೆಯದು, ಫಲಿಸದು. ಹಸುವನ್ನು ದಿನಾಲೂ ಸೇವಿಸುತ್ತಿದ್ದರೆ ಹಾಲು ಕೊಳ್ಳಬಹುದು; ಹಾಗೆ ರಾಜ್ಯವನ್ನು ಕ್ರಮದಿಂದ ನಡೆಸಿದರೆ ಧನ ಹಾಗೂ ಸುಖಫಲವನ್ನು ಪಡೆಯಬಹುದು.

ಭಾ॥ ದೋಗ್ಧ್ರೀ ಧಾನ್ಯಂ ಹಿರಣ್ಯಂಚ ಮಹೀರಾಜ್ಞಾ ಸುರಕ್ಷಿತಾ।
ನಿತ್ಯಂ ಸ್ವೇಭ್ಯಃ ಪರೇಭ್ಯಶ್ಚ ತೃಪ್ತಾ ಮಾತಾ ಯಥಾಪಯಃ ॥

ರಾಜ್ಯವು ಅಡಳಿತಗಾರನಿಂದ ಚೆನ್ನಾಗಿ ರಕ್ಷಿತವಾದರೆ ಧಾನ್ಯವನ್ನೂ ಅಮೇರೆಗೆ ಹಣವನ್ನೂ ಕರೆಯಬಲ್ಲದು. ತೃಪ್ತಳಾದ ಗೋಮಾತೆಯು ನಿತ್ಯವೂ ತನ್ನ ಕರುಗಳಿಗೂ ಬೇರೆಯವರಿಗೂ ಬೇಕಷ್ಟು ಹಾಲು ಕರೆಯುವುದು. ಇಲ್ಲಿ ಕರೆಯುವ ಹಸುವಿನ ಉಪಮೆಗಳು ಬಹಳ ಮನನೀಯವಾಗಿವೆ.

೪. **ಮುಖಂಡನ ನಡತೆ:** ಮುಖಂಡನು ಕೇವಲ ಶಾಂತನೂ, ಕೇವಲ ಕೋಪಿಯೂ ಆಗಿರುವುದಲ್ಲ. ಕೋಪದಿಂದಾಗಲಿ, ಶಾಂತದಿಂದಾಗಲಿ ಅವನ ಕೆಲಸಗಳು ಧ್ಯೇಯಗಳು—

ಮ॥ ತೀಕ್ಷ್ಣಶ್ಚೈವ ಮೃದುಶ್ಚಸ್ಯಾತ್ತಾರ್ಯಂ ವೀಕ್ಷ್ಯಮಹೀಪತಿಃ।
ತೀಕ್ಷ್ಣಶ್ಚೈವ ಮೃದುಶ್ಚೈವ ರಾಜಾ ಭವತಿ ಸಮ್ಮತಃ।

ಕೆಲಸವನ್ನು ನೋಡಿ ತಕ್ಕ ಉಗ್ರನೂ ಶಾಂತನೂ ಆಗಿರಬೇಕು. ಅಂತಹವನೇ ಜನರಿಗೆ ಸಮ್ಮತನಾದ ಮುಖಂಡನಾಗುವನು.

ಭಾ॥ ತಸ್ಮಾನ್ನೈವ ಮೃದುರ್ನಿತ್ಯಂ ತೀಕ್ಷ್ಣೋ ನೈವಭವೇನ್ನೃಪಃ।
ವಾಸಂತಾರ್ಕ ಇವ ಶ್ರೀಮಾನ್ ನ ಶೀತೋನಚ ಘರ್ಮದಃ ॥

ಮುಂದಾಳು ಸದಾಕಾಲ ಶಾಂತನಾಗಿ ಇರಬಾರದು, ಉಗ್ರನಾಗಿಯಿರಬಾರದು. ವಸಂತಕಾಲದ ಸೂರ್ಯನಂತೆ ತಂಪೂ ಅಲ್ಲ, ಕಾವೂ ಅಲ್ಲ—ಎಂಬಂತಿರಬೇಕು.

ಮ॥ ಯಃಕ್ಷಿಪ್ತೋ ಮರ್ಷಯತ್ಯಾರ್ತೈಃ ತೇನ ಸ್ವರ್ಗೇ ಮಹೀಯತೇ।
ಯಸ್ತ್ವೇಶ್ವರ್ಯಾನ್ನ ಕ್ಷಮತೇ ನರಕಂ ತೇನ ಗಚ್ಛತಿ ॥

ಕಷ್ಟಗೊಂಡವರು ನಿಂದಿಸಿದಾಗ ಮುಂದಾಳು ಸಹಿಸಬೇಕು. ಅದರಿಂದ ಕೀರ್ತಿ-ಸುಖಗಳು ಸಿಗುತ್ತವೆ. ಯಾವಾತನು ಹಣ, ಹುದ್ದೆಗಳ ಬಲದಿಂದ ಸಹಿಸುವುದಿಲ್ಲವೋ ಅವನು ಹಾಳಾಗುವನು ಮುಖಂಡನಲ್ಲಿ ಮೂವತ್ತಾರು ಗುಣಗಳಿರಬೇಕೆಂದು ಮಹಾಭಾರತದಲ್ಲಿ ಹೇಳಿದೆ, ಅದರ ವಿವರಣೆ–ಸುದೀರ್ಘವಾದೀತೆಂದು–ಮಾಡಿಲ್ಲ. ಒಟ್ಟಿನಲ್ಲಿ ಮುಂದಾಳಿನ ನಡತೆಯೇ ದೇಶದ ಮೇಲ್ಕೈ ಹಾಗೂ ಕೇಳ್ಕೈಗಳಿಗೆ ಕಾರಣವಾಗುವುದು ಅವನ ವರ್ತನೆ ಹೇಗೆ ಇರಬೇಕೆಂದು ಸಂಗ್ರಹವಾಗಿ ಹೇಳಿದೆ:—

ಮ ॥ ಇಂದ್ರಸ್ಯಾರ್ಕಸ್ಯವಾಯೋಶ್ಚ ಯಮಸ್ಯ ವರುಣಸ್ಯಚ।
ಚಂದ್ರಸ್ಯಾಗ್ನೇಃ ಪೃಥಿವ್ಯಾಶ್ಚ ತೇಜೋವೃತ್ತಂ ನೃಪಶ್ಚರೇತ್ ॥

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.
ಮಾಲಕರು: **ಬಿ. ಜೆ. ಮುತ್ತಗಿ**

ಮುಂದಾಳು ಇಂದ್ರ, ಸೂರ್ಯ, ವಾಯು, ಯಮ, ವರುಣ, ಚಂದ್ರ, ಅಗ್ನಿ, ಭೂಮಿಗಳಂತೆ ತನ್ನ ಕರ್ತವ್ಯವನ್ನು ತಪ್ಪದೆ ಮಾಡುತ್ತಿರಬೇಕು. ಇಂದ್ರನು ಮಳೆಗರೆವಂತೆ, ಜನರಿಗೆ ಉದ್ದಿಮೆಗಳನ್ನು ಒದವಿಸಬೇಕು. ಸೂರ್ಯನು ನೀರನ್ನು ಹೀರುವಂತೆ, ಜನರಿಗೆ ಹಂಸೆಯಾಗದಂತೆ ತೆರಿಗೆಗಳನ್ನು ಕೊಳ್ಳಬೇಕು. ಗಾಳಿಯು ಒಳಹೊಕ್ಕು ಹೊರಡುವಂತೆ, ತಾನೂ ಗುಪ್ತಚಾರರಿಂದಲೂ ಒಳಹೊರಗು ತಿಳಿಯಬೇಕು. ಯಮನು ಕಾಲಕ್ಕೆ ತಪ್ಪದೆ ಎಲ್ಲರನ್ನೂ ಶಿಕ್ಷಿಸುವಂತೆ ಭೇದವಿಡದೆ ದಂಡಿಸಬೇಕು. ವರುಣನು ನಿಗ್ರಹಿಸುವಂತೆ ಕೆಡುಕರನ್ನು ಶಿಕ್ಷಿಸಬೇಕು. ಚಂದ್ರನು ನೋಟಕರನ್ನು ಸಂತಸಗೊಳಿಸುವಂತೆ, ಪ್ರಜೆಗಳನ್ನು ಸಂತಸಗೊಳಿಸಬೇಕು. ಅಗ್ನಿಯು ವಾಪಕರ್ಮಿಗಳಲ್ಲಿ ಉಗ್ರನಿರುವಂತೆ, ದುಷ್ಟರಲ್ಲಿ ಉಗ್ರನಾಗಿರಬೇಕು. ನೆಲವು ಎಲ್ಲಾ ಹೊರುವಂತೆ, ಎಲ್ಲರನ್ನು ಸಮನಾಗಿ ಕಾಪಾಡಬೇಕು. ಮುಂದಾಳಿನ ಆಡಳಿತ ಜನರ ಸುಖ-ದುಃಖಗಳ ಹೊಣೆ ಹೊತ್ತಿದೆ:—

ಮ ॥ ಕೃತಂತ್ರೇತಾಯುಗಂ ಚೈವ ದ್ವಾಪರಂ ಕಲಿರೇವಚ।
ರಾಜ್ಞೋವೃತ್ತಾನಿ ಸರ್ವಾಣಿ ರಾಜಾಹಿ ಯುಗಮುಚ್ಯತೇ ॥
ಕಲಿಃ ಪ್ರಸುಪ್ತೋ ಭವತಿ ಸ ಜಾಗ್ರದ್ದ್ವಾಪರಂ ಯುಗಂ।
ಕರ್ಮಸ್ವಭ್ಯುದ್ಯತಸ್ತ್ರೇತಾವಿಚರಂಸ್ತು ಕೃತಂ ಯುಗಂ ॥

ಪ್ರಜಾಪ್ರತಿನಿಧಿಯು ವರ್ತನೆಗಳೇ ಕೃತ, ತ್ರೇತ, ದ್ವಾಪರ, ಕಲಿಯುಗಗಳು. ಅವನು 'ಯುಗಪುರುಷ' ಎನ್ನಿಸುತ್ತಾನೆ. ಅವನು ಒರಗಿದ್ದರೆ ಕಲಿ ಸುಮ್ಮನಿದ್ದರೆ ದ್ವಾಪರ, ಕೆಲಸ ಮಾಡುತ್ತಿದ್ದರೆ ತ್ರೇತೆ, ಸ್ಪರ್ಧೆಯೇ ಕೃತವೆಂದು ಅರ್ಥ.

ಕೊನೆ: ಒಟ್ಟಾರೆ, ರಾಜನೀತಿಯು ಒಂದು ವಿಶಿಷ್ಟಧರ್ಮ, ಅದರ ಆಚಾರದ ವಿವಿಧತೆ ಬೇರೆ ಬೇರೆ ಯುಗವೆನಿಸುವುದು 'ಮುಖಂಡನೇ ಕಾಲಕ್ಕೆ ಕಾರಣ'ನೆಂಬುದು ಅಕ್ಷರಶಃ ಸತ್ಯವಾದುದು. ಇಂದಿನ ಪ್ರಜಾಪ್ರತಿನಿಧಿಗಳು ಇಂತಹ ಅನೇಕ ವಿಚಾರಗಳನ್ನು ತಿಳಿದು, ಒಳ್ಳೆತ್ತಾಗಿ ನಡೆಸಿದರೆ ಸುಖಜೀವನವಾಗಲಡ್ಡಿಯಿಲ್ಲ.

ಸುಸಂಸ್ಕೃತರ ಹೃದಯ

ಶ್ರೀ. ವಿರೂಪಾಕ್ಷ ಬಿ. ಕಾಮ್. (ಸೀ) ಹುಬ್ಬಳ್ಳಿ

" ಔಷುದ್ಯಾ ಕೊಡಿರಪ್ಪ! ಔಷುದ್ಯಾ! ಡಾಕ್ಟರರೇ,
ಬಾಳೆಗಿಡಕೆದ್ದಾಸರಯ್ಯೊ ಬಿತ್ತೆ.....
ನಾನಿನ್ನು ಸತ್ತೆ!"

ಎಂಥ ಬಿರುಗಾಳಿಯಹ! ಓ ಕ್ರೂರ ದೇವರೇ,
ಬಲವಿಲ್ಲದಾಗ ನೆಲವೆದ್ದು ಸಹ ಬಡಿಯುತ್ತೆ!
ಬಾಳೆಗಿಡ ಬಾಳಿನಲಿ ಬಾಳೆಗೊನೆ ಹೊತ್ತಿತ್ತು
ಒಂದೆ ಮಾತ್ರವೆ ಹಣ್ಣು, ಪೂರ್ಣ ಹಣ್ಣಲ್ಲವದು
ದೋರೆಗಾಯಿ!
ಉಳಿದು ಜೋತಿಹವೆಲ್ಲ ಹಸುರು ಕಸುಗಾಯಿ,
ರವಿಗೆ ಕಾಣದ ವಸ್ತು ಕವಿಗೆ ಕಾಣುವುದು
ಕವಿಗು ಕಾಣದ ವಸ್ತು ಮತ್ತಾರ ಸೊತ್ತು?
ಸೊತ್ತಾದರೊಂದು ವಿಧ ವಾಸಿ ಓ ಸೋದರರೇ,
ತುತ್ತು!
ಕ್ರೂರ ವಿಧಿಗೆಲ್ಲ ಗೊತ್ತು, ಆ ವಸ್ತು ತುತ್ತು!

ಇನಿತು ದಿನ ನೆರಳಲ್ಲೆ ಬೆಳೆದು ಬಂದಾ ಹಣ್ಣು
ಪೂರ್ಣ ಹಣ್ಣಲ್ಲವದು ದೋರೆಗಾಯಿ—
ಬಿತ್ತದರ ಮೇಲೆ ಸಹ ದುಷ್ಟ ವಿಧಿಯಾ ಕಣ್ಣು!
ಒಂದೊಂದು ಸಲ ವಿಧಿಯು ಹುಚ್ಚುನಾಯಿ!
ಸಾಮಾನ್ಯ ಗಿಣಿಯೊಂದು ಹಣ್ಣ ಮೇಲೆಯೆ ಕುಳಿತು
ಕೊಕ್ಕಿನಲಿ ಕುಕ್ಕುವುದು ಲೋಕರೂಢಿ—
ಗಿಣಿಯ ಕೊಕ್ಕಿನ ಕುಕ್ಕು ತಡೆಯಲಾರದೆ ಕೊಳೆತು
ಹಣ್ಣು ಕೆಳಗುರುಳುವುದೆ? ಯಾರ ಮೋದಿ!
" ಐದು ಬೆರಳೆಂದಿಗೂ ಸಮವಿಲ್ಲ ಕೈಯಲ್ಲಿ "
ಸುತ್ತ ಸುಳಿಯುತ್ತಿರುವ ಸಣ್ಣ ಸಾಮಾನ್ಯ ನೊಣ
ಸಮಯ ಬಂದರೆ ನಿಜಕು ಕದನ ವಿಮಾನ!
ಧ್ವಂಸ ಗೈವುದು ಕೊಲ್ಲಿ
ಸಾಂಕ್ರಾಮಿಕ ರೋಗಗಳ ಬಾಂಬನೆಲ್ಲೆಡೆ ಚೆಲ್ಲಿ!
ಐದು ಬೆರಳೆಲ್ಲವೂ ಸಮವಿಲ್ಲ ಕೈಯಲ್ಲಿ

× × ×

" ಔಷುದ್ಯಾ ಕೊಡಿರಪ್ಪ! ಔಷುದ್ಯಾ! ಡಾಕ್ಟರರೇ,
ಬಾಳೆಗಿಡಕೆದ್ದಾಸರಯ್ಯೊ ಬಿತ್ತೆ!
ನಾನು ಸತ್ತೆ,, ಮಗನು ಬದಕುವ ರೀತಿ ನಿಮಗೆ ಗೊತ್ತೆ?
ನನ್ನ ಪಾಲಿಗೆ ದೊರಿತ ಓ ದೇವರೇ,
ಬಾಳುವೆನು ನೆನಸುವೆನು ಜನಿಸಲಿಹ ಕೂಸಿಂಗೆ
ನಿಮ್ಮ ಹೆಸರನ್ನಿಟ್ಟು ಓ ವೈದ್ಯರೇ!"

" ಏಳೆ? ಏನಾಗಿತ್ತು? ಶಕ್ತಿಲ್ಲವಿನ್ನೂ .....
ರಕ್ತ ಹೊಮ್ಮುವುದೇಕೆ? ಮೂರ್ಛೆ ಹೋಗಿಹನು!
ಹೇಳಬ್ಬೆ, ಹೇಳು—ಹಣವೆಷ್ಟು ತಂದಿರುವಿ?
ಕೊಡಬೇಕು ಕೂಡಲೇ—ಒಂದಲ್ಲ, ಹತ್ತು ಇಂಜಕ್ಷನ್ನು!"

" ಹಣವೆಲ್ಲಿ ತರಬೇಕು? ಬಡವ ನಾನು,
ಇಪ್ಪತ್ತು ವರ್ಷದಾ ಮಗನಿಲ್ಲವಿನ್ನು!
ಒಂಬತ್ತು ರೂಪಾಯಿ ಕೂಲಿ ಬರುತಿತ್ತು,
ಎತ್ತು-ಚಕ್ಕಡಿಯನ್ನು ಬಾಡಿಗೆಗೆ ಪಡೆದಿದ್ದ.
ಧಣಿಯ ಮಾಲನು ಹೇರಿ ಹಳ್ಳಿ ಕಡೆ ಬರುತಿದ್ದ;
ಎತ್ತು ಬೆದರಿದುವಬ್ಬ! ಕೊರಕ್ಕರಿದುಕೊಂಡು
ಚಕ್ಕಡಿಯು ಕೂಡಲೇ ನೆಲಕೆ ಬಿತ್ತು!
ಗಾಲಿಯೂ ಕೆಳಗಯ್ಯೊ ಮಲಗಿ ಬಿದ್ದ—
ಚಕ್ಕಡಿಯ ಮೂಟೆಯೆಲ್ಲವು ಮೇಲೆ ಬಿತ್ತು,
ಇಲ್ಲದಿರೆ ಕೂಲಿ ಬರ ತಿತ್ತು!
ಹೊಟ್ಟೆ ತುಂಬುತ್ತಿತ್ತು! ನಿಮಗೂ ಗೊತ್ತು!"

× × ×

ಗೊತ್ತಿಲ್ಲ ಯಾವುದೂ! ದಾಸರೇ ಹೇಳಿಹರು:
" ಯಾರಿಗೆ ಯಾರಿಲ್ಲ ಎರವಿನ ಸಂಸಾರ!
ನೀರು ನಳಿಗೆಯಲಿಳಿದು ಚುಚ್ಚಿದರು ವೈದ್ಯರು,
ತೋರಿದರು ಬಡವರಿಗೆ ಪುರಸ್ಕಾರ—
ಜಗಕೆ ಕಣ್ಣಿಲ್ಲೆನುವ ಭ್ರಾಂತಿಗಾರ!
ಇದು ಇಪ್ಪತ್ತನೆಯ ಶತಮಾನ!
ಸುಧಾರಣೆಗಿತಿ-ಮಿತಿ? ಇನ್ನೆಲ್ಲೊ ಎಲ್ಲೆ?
ಒಬ್ಬರೇ? ಇಬ್ಬರೇ? ಎಷ್ಟೊಂದು ಗಿರಾಕಿ!
ಸುಧಾರಿಸಿದೆ ನಗರ! ಮಾನವತೆಗಪಾರ ದಯ!
" ಹೊರಗೆ ಹೋಗಿರಿ " ಎನ್ನದೆ ಹೊಗೆಯು ಹಾಕಿ
ಕುಳ್ಳಿರೆನುವುದೆ ದಿನವೂ? ನಾಗರಿಕ ಹೃದಯ!
ಕಾಲದೇವನ ಹಯ
ಸುಸಂಸ್ಕೃತರ ಹೃದಯ! ವಿಧಿಯ ಮಾಯ!

ಈ ಪರಿಯ ಸೋಗು

(ಸಣ್ಣಕತೆ)

ಲೇ. 'ಸ. ಬಿ. ಕು.' ಮುಂಬಯಿ

ಅಜ್ಞಾನ-ಸ್ವಾರ್ಥದೌರ್ಬಲ್ಯಗಳ ನೆರೆಯಲ್ಲಿ ನೀತಿ-ಸುಸಂಸ್ಕೃತಿಗಳು ಬಾಳಲಿಕ್ಕೆ ಸಾಧ್ಯವೇ ಇಲ್ಲ. ಸ್ವಾರ್ಥ-ದುಷ್ಟವಾದ ಸಾವಂತ, ಅಜ್ಞಾನಿಗಳಾದ ಕಾರ್ಮಿಕರಿಗೆ ನಾಯಕನಾದ; ಸುಸಂಸ್ಕೃತ ಹೃದಯದ ಶ್ಯಾಮ, ಅವರಿಗೆ ದ್ರೋಹಿಯಾಗಿ ಕಂಡ. ಸಾಮಾನ್ಯ ವ್ಯವಹಾರ ಹೀಗೆಯೆ ತಲೆಕೆಳಗು!

ಜೌಪಾಟಿಗೆ ಬಂದ ಶ್ಯಾಮನು ಆ ಮಳಲ ದಂಡೆಯ ಮೇಲೆ ಒರಗಿಕೊಂಡ. ರವಿವಾರದಂತಹ ರಜಾದಿನಗಳಲ್ಲಿ ಸಮುದ್ರದ ತಂಪು ಗಾಳಿಯು ಸೇವನೆಗಾಗಿ ಜೌಪಾಟಿಗೆ ಬರುವ ಮುಂಬಯಿ ನಗರವಾಸಿಗಳೇನು ಕಡಿಮೆಯೇ! ಅಷ್ಟು ಜನರು ಅಲ್ಲಿ ಕೂಡುತ್ತಾರೆಂದ ಮೇಲೆ ಅವರಿಗೆ ಬೇಕುಬೇಕಾದ ತಿಂಡಿಗಳನ್ನೊ, ಪಾನೀಯಗಳನ್ನೋ ಒದಗಿಸುವ ಮರಿ ವ್ಯಾಪಾರಿಗಳೂ ಅಲ್ಲಿರಬೇಕು ತಾನೆ? ಚನ್ನಾವಾಲಾ, ಚುರುಮುರುವಾಲಾ, ನಾರಿಯಲ್‌ಪಾನೀವಾಲಾ, ಎಲ್ಲಾ ತರದ 'ವಾಲ'ರು ತಮ್ಮ ತಮ್ಮ ಸಾಮಾನುಗಳನ್ನು ಹರವಿಕೊಂಡು ಗಿರಾಕಿಗಳನ್ನು ಆಕರ್ಷಿಸುತ್ತಾರೆ. ಬಿಸಿ ಬಿಸಿ ತಿಂಡಿತಿಂದು, ತಂಪಾದ ಎಳನೀರು ಕುಡಿದು ಹಾಯಾಗಿ ದಂಡೆಯ ಮೇಲೆ ಒರಗಿಕೊಂಡಾಗ, ಸುಂಗಗಳನ್ನೋ ಕರಡಿಗಳನ್ನೋ ಕುಣಿಸುವವರು ಅವುಗಳ ಸೊಂಟಕ್ಕೋ ಮೂಗಿನ ದ್ವಾರಕ್ಕೋ ಹಗ್ಗ ಬಿಗಿದು ಎಳೆದುಕೊಂಡು ಬಂದು ಕುಣಿಸಲಾರಂಭಿಸುತ್ತಾರೆ. ಒಂದು ಬದಿಯಲ್ಲಿ ಈ ವೈಜನ್ಯವನ್ನು ನೋಡುವರೆ ಒಂದಿಷ್ಟು ಜನ ಸೇರುತ್ತಾರೆ. ಮತ್ತೊಂದೆಡೆ ಮನುಷ್ಯನ ತಲೆಬುರುಡೆಯೊಂದನ್ನು ಇಟ್ಟು, ತಾನು ಬಂಗಾಲದ ಜಾದೂಗಾರನೆಂದು ಹೇಳುತ್ತಾ, ಬಂಗಾಲಿ ಬಾಬು ತನ್ನ ಜಾದೂವಿದ್ಯೆಯ ಪ್ರದರ್ಶನಕ್ಕೆ ಪ್ರಾರಂಭಿಸುತ್ತಾನೆ. ಸ್ವಲ್ಪ ಜನ ಅವನ ಸುತ್ತ ನೆರೆಯುತ್ತಾರೆ. ಇನ್ನು ಅಲ್ಲಲ್ಲಿ ಆಯಾಯ ರಾಜಕೀಯ ಪಕ್ಷಗಳ ಮರಿಮುಖಂಡರು– 'ಹಿಂದೂ ಧರ್ಮವನ್ನು ಉಳಿಸಿರಿ'— 'ಬಂಡವಾಲಶಾಹಿಗಳ ತಲೆ ಒಡೆಯಿರಿ ದೇಶಕ್ಕಾಗಿ ದುಡಿಯಿರಿ, ಮಡಿಯಿರಿ'—ಎಂದೆಲ್ಲಾ ತಮ್ಮ ಭಾಷಣಕ್ಕೆ ಸುರು ಮಾಡುತ್ತಾರೆ. ಗಾಳಿಸೇವನೆಯ ನೆವನದಿಂದ ಈ ಸಮುದ್ರಕಿನಾರೆಗೆ ಹೋದರೆ, ಕಾಸುಕೊಡದೆಯೆ ಮನೋರಂಜನ ಕಾರ್ಯಕ್ರಮಗಳು ನೋಡಸಿಗುತ್ತವೆ.

ಆದರೆ ಶ್ಯಾಮನು ಯಾತ್ರ ಇವಾವುವನ್ನೂ ನೋಡದೆ, ತನ್ನ ಇದಿರಿಗಿರುವ ಅನಂತಸಾಗರವನ್ನೇ ನಿಟ್ಟಿಸುತ್ತಿದ್ದ. ಸೂರ್ಯನು ಅಗಲೇ ಮುಳುಗುವುದರಲ್ಲಿದ್ದ. ದೂರದ ಬಂದರದಿಂದ ಸರಕನ್ನು ತುಂಬಿಕೊಂಡು ಮುಂಬಯಿ ಬಂದರದತ್ತ ಬರುವ ಹಡಗು ಒಂದು ದೂರದಲ್ಲಿ ಕಾಣಿಸುತ್ತಿತ್ತು. ಇವೆಲ್ಲವನ್ನೂ ನೋಡುತ್ತ ಶ್ಯಾಮು ಮೈಮರೆದಿದ್ದ—"ಶ್ಯಾಮು'—ಎಂದ ಹಾಗಾಯಿತು ಹಿಂದಿನಿಂದ. ಶ್ಯಾಮು ಹಿಂದಿರುಗಿ ನೋಡಿದ. ಗೆಳೆಯ ಶಾಂತಾರಾಮು ನಿಂತುಕೊಂಡಿದ್ದ.

"ಕುಳಿತುಕೊಳ್ಳು ಶಾಂತಾರಾಮ"— ಎಂದ ಶ್ಯಾಮು.

ಶಾಂತಾರಾಮು ಅವನ ಬಳಿಯಲ್ಲೇ ಕುಳಿತುಕೊಂಡ.

"ಇಂದು ಸಭೆಗೆ ಬರುವುದಿಲ್ಲವೇ ಶ್ಯಾಮು!"—ಶಾಂತಾರಾಮು ಪ್ರಶ್ನಿಸಿದ.

"ಬರಬೇಕೆ?"

"ನೀನು ಬಾರದಿದ್ದರೆ ಸಾಧ್ಯವೆ?"

ಒಂದು ನಿಮಿಷ ಮೌನ ಅವರಿಸಿತು.

"ಏನು, ಬರಲಿಕ್ಕೆ ಮನಸ್ಸಿಲ್ಲವೇ?"—ಶಾಂತಾರಾಮು ಮೌನವನ್ನು ಮುರಿದು ಕೇಳಿದ.

"ಅದೇ ಆಲೋಚನೆ ಮಾಡುತ್ತಿದ್ದೇನೆ, ಶಾಂತರಾಮ್!"

"ನೀನು ಬಾರದೆ ಒಂದೂ ನಡೆಯುಲಿಕ್ಕಿಲ್ಲ ಶ್ಯಾಮು! ಅದಕ್ಕಾಗಿಯೇ ನಾನು ಇಲ್ಲಿಯತನಕ ನಿನ್ನನ್ನು ಹುಡುಕಿಕೊಂಡು ಬಂದುದು. ನಡೆ, ಹೋಗುವ ಸಮಯವಾಗುತ್ತಾ ಬಂತು"—ಎಂದ ಶಾಂತಾರಾಮು ಎದ್ದುನಿಂತ.

"ನನ್ನ ನಿನ್ನ ಮಾತನ್ನು ಅಲ್ಲಿ ಯಾರು ಕೇಳುತ್ತಾರೆ ಶಾಂತಾರಾಮ್? ಹುಮ್ಮನೆ ನಮಗೆ ಅಧಿಕಸ್ಪರ್ಧಿಗಳ್ಯಾಕೆ? ಕಾರ್ಮಿಕರಿಗೆ ಹೆಚ್ಚು ಕಂಬಳ ಸಿಗಬೇಕು, ಅವರ ಜೀವನವು ಸುಗಮವಾಗಬೇಕೆಂಬ ಇಚ್ಛೆ ನಮಗಿಲ್ಲವೆ? ಅಂತಹ ಬೇಡಿಕೆಗಳನ್ನು ಕಾರ್ಖಾನೆಯ ಮಾಲಿಕರ ಮುಂದಿಡಲು ನಮಗೂ ಮನಸ್ಸಿಲ್ಲವೇ? ಅದಕ್ಕೆ ಇಷ್ಟೆಲ್ಲ ಭಾಷಣಗಳು ಬೇಕೆ?"—ಎಂದು ಶಾಮನು ಕುಳಿತುಕೊಂಡೇ ಉತ್ತರವಿತ್ತ. ಆದರೆ ಶಾಂತಾರಾಮ ಬಿಡಲಿಲ್ಲ. ಬಲಾತ್ಕಾರದಿಂದ ಎಂಬಂತೆ ಕರೆದುಕೊಂಡೇ ಹೋದ.

ಲಾಲ್‌ಬಾಗಿನಲ್ಲಿ ಸಭೆ ಸೇರಿತ್ತು. ಶ್ರೀರಾಮ ಸಿಲ್ಕ್‌ಮಿಲ್ಲಿನ ಕಾರ್ಮಿಕರೆಲ್ಲಾ ನೆರೆದಿದ್ದರು. ಎತ್ತರವಾಗಿ ರಚಿಸಿದ ವೇದಿಕೆಯ ಮೇಲೆ, ಕಾರ್ಮಿಕರ ಸಂಘದ ಅಧ್ಯಕ್ಷ ಸಾವಂತನು, ತನ್ನ ಗೆಳೆಯರಾದ ವಾಗಲೇ ಮತ್ತು ಜೋಶಿಯವರೊಟ್ಟಿಗೆ—ಬಹಳ ಶೀವಿಯಿಂದಲೇ ಕುಳಿತುಕೊಂಡಿದ್ದ. ಶ್ಯಾಮ ಮತ್ತು ಶಾಂತಾರಾಮರು ವೇದಿಕೆಯ ಒಂದು ಮೂಲೆಯನ್ನೇರಿ ಅಲ್ಲೇ ಕುಳಿತುಕೊಂಡರು. ಕಾರ್ಯಕ್ರಮವು ಪ್ರಾರಂಭವಾಯಿತು. ಕಾರ್ಖಾನೆಯ ಕಾರ್ಮಿಕರಿಗೆ ಸಂಬಳ ಹೆಚ್ಚು ಸಿಗಬೇಕೆನ್ನುವುದು ಒಂದನೆಯ ಠರಾವು; ಹೆಚ್ಚು ಸಿಗದಿದ್ದಲ್ಲಿ ಮುಷ್ಕರ ಹೂಡುವುದೆಂದು ಎರಡನೆಯ ಠರಾವು. ಈ ಠರಾವುಗಳನ್ನು ವಿವರಿಸುತ್ತಾ ಸಂಘದ ಅಧ್ಯಕ್ಷ ಸಾವಂತನು, ಬಿಸಿ ಬಿಸಿ ಶಬ್ದಗಳ ಜೋಡಣೆ ಮಾಡುತ್ತಾ ತನ್ನ ಭಾಷಣಕ್ಕೆ ಆರಂಭಿಸಿದ:—

"ಬಂಡವಾಳಶಾಹಿಗಳ ತಲೆ ಒಡೆಯಬೇಕು. ಅವರು ವಾಸ ಮಾಡುತ್ತಿರುವ ಬಂಗಲೆಗಳಿಂದ ಅವರ ಹೆಂಡತಿ-ಮಕ್ಕಳನ್ನು ಹೊರಗೆ ಎಳೆದು, ಅವುಗಳಲ್ಲಿ ನಾವು ವಾಸ ಮಾಡಬೇಕು. ನಾವು ಕಷ್ಟಪಟ್ಟು ಬೆವರು ಸುರಿಸಿ ದುಡಿದುದರಿಂದ ಬಂದ ಹಣದಿಂದ ಮೋಟಾರು ಕಾರುಗಳ ಮೇಲೆ ಕುಳಿತು ಸೊರಿದಾಡಿ ಸುಖಪಡುವ ಈ ಶ್ರೀಮಂತರ ಕಾರ್ಖಾನೆಗಳನ್ನು ಬೆಂಕಿ ಇಟ್ಟು ಸುಟ್ಟುಬಿಡಬೇಕು. ಇಂತಹ ಹಣದ ಪಿಶಾಚಿಗಳಿಗೆ ಬೆಂಬಲವನ್ನೀಯುವ ಸರಕಾರವನ್ನು ಉರುಳಿಸಬೇಕು—ಸರ್ವಾಧಿಕಾರವು ನಮಗೆ ಬೇಕು"..... ...ಎಂದು ಸಾವಂತನು ತನ್ನ ಭಾಷಣವನ್ನು ಮುಗಿಸಿದ. ಸಭಿಕರಲ್ಲಿ ಕೆಲವರು ನಗೆಯಾಡಿದರು. ಕೆಲವರು ಕೈನೋಯುವಷ್ಟನಕ ಚಪ್ಪಾಳೆ ಬಡಿದರು. ಕೆಲವರು 'ಇಂಕಿಲಾಬ್ ಜಿಂದಾಬಾದ್' ಎಂದು ಕಾಡ ಬಿರಿಯುವ ತನಕ ಕೂಗಿ. ಕೊಂಡರು. ಉಳಿದವರು ಕಣ್ಣಾರಳಿಸಿ ನೋಡಲಾರಂಭಿಸಿದರು. ಸಾವಂತನ ಭಾಷಣ ಮುಗಿದಮೇಲೆ ಶ್ಯಾಮನ ಸರದಿ. ಅವನು ಮಾತನಾಡುವರೆ ಎದ್ದು ನಿಂತ. ಆದರೆ ಸಾವಂತನಷ್ಟು ತೀಕ್ಷ್ಣವಾಗಿರಲಿಲ್ಲ—ಅವನ ಮಾತುಗಳು. ಶಾಂತಯಾಗಿಯೇ ಮಾತನಾಡರಂಭಿಸಿದ:—

"ಗೆಳೆಯ ಸಾವಂತರು ಮಾತನಾಡಿದುದನ್ನು ನೀವೆಲ್ಲಾ ಕೇಳಿದಿರಿ. ನಮಗೆ ಸಿಗುವ ಸಂಬಳ ಕಡಿಮೆ, ಹೆಚ್ಚಿಗೆ ಬೇಕು—ಎಂಬುದು ನಮ್ಮ ಠರಾವು. ಹೆಚ್ಚು ಕೊಡದಿದ್ದರೆ ಮುಷ್ಕರ ಹೂಡುತ್ತೇವೆಂಬುದು ಮತ್ತೊಂದು ಠರಾವು. ನಮಗೆ ಬೇಕಾದುದು ಹೆಚ್ಚು ಸಂಬಳ. ಬಂಗಲೆಗಳಲ್ಲ, ಮೋಟಾರುಕಾರುಗಳಲ್ಲ. ಬಂಡವಾಳಶಾಹಿಗಳ ತಲೆಯೊಡೆದು, ಕಾರ್ಖಾನೆಗೆ ಬೆಂಕಿಹಚ್ಚಿ, ಸರಕಾರವನ್ನು ಉರುಳಿಸಿದರೆ ನಮ್ಮ ಸಂಬಳದಲ್ಲಿ ಎಂತಹ ಬದಲಾವಣೆಯಾಗಬಹುದೆಂದು ನಾವೇ ಆಲೋಚಿಸುವ. ನಾಳೆ ಸಂಬಳ ಹೆಚ್ಚು ಸಿಕ್ಕಿತೆಂದರೆ ಅದನ್ನು ಹೇಗೆ ಉಪಯೋಗಿಸಬೇಕು?—ಸಿಕ್ಕಿದ ಹಣವನ್ನು ಸಟ್ಟಾ, ಜುಗಾರಿ, ಕುಡಿತಗಳಿಗೇನೇ ವ್ಯಯ ಮಾಡಬೇಕೋ?—ಎಂಬುದನ್ನೂ ನಾವು ವಿಚಾರಿಸಬೇಕಾಗಿದೆ. ಹೇಗೂ ಇರಲಿ; ಮುಖ್ಯ ನಾವು ನಮ್ಮ ಶಿಸ್ತನ್ನು ಕಾಪಾಡಿಕೊಳ್ಳಬೇಕಾದುದು. ನಮ್ಮ ನ್ಯಾಯವಾದ ಬೇಡಿಕೆ, ನ್ಯಾಯದಿಂದಲೆ ಸಿಗಲಿ. ಅನ್ಯಾಯಕ್ಕೆ ಹೋಗಿ ಕೊನೆಗೆ ಫಜೀತಿಗೆ ಗುರಿಯಾಗುವ ಸಂದರ್ಭ ಬರಬಾರದು"—ಎಂದು ಹೇಳಿ ಶ್ಯಾಮನು ತನ್ನ ಮಾತುಗಳನ್ನು ಮುಗಿಸಿದ. ಸಭೆ ಮೌನವಾಗಿತ್ತು. ಆದರೆ ಸಾವಂತನು ಕೆರಳಿ ಕೆಂಡವಾದ; ಬಳಿಯಲ್ಲಿದ್ದ ಧ್ವನಿವರ್ಧಕ ಯಂತ್ರವನ್ನು ಇನ್ನಷ್ಟು ಬಳಿಗೆ ಕಸಿದುಕೊಂಡು ಮಾತಿಗೆ ಪ್ರಾರಂಭಿಸಿದ:—

"ನಮಗಿಂದು ಶ್ಯಾಮನ ಉಪದೇಶದ ಯಾವ ಅವಶ್ಯಕತೆಯೂ ಇಲ್ಲ. ನಮಗೆ ಯಾರೂ ಶಿಸ್ತನ್ನು ಕಲಿಸಿಕೊಡಬೇಕಾದುದಿಲ್ಲ. ಸಿರಿವಂತರ ಮೇಲೆ ಅಷ್ಟು ಕರುಣೆಯಿದ್ದವರು, ಅವರ ಮನೆಗೆ ಹೋಗಿ ಅವರ ಪಾದಸೇವೆ ಮಾಡುತ್ತಿರಬೇಕು. ಇಲ್ಲಿ ಬಡಪಾಯಿಗಳ ಕಷ್ಟ ಮುರಿಯುವ ಕೆಲಸ ಮಾಡಬಾರದು"—ಎಂದು ಮುಂತಾಗಿ ಏನೇನನ್ನೋ ಒದರಿಬಿಟ್ಟ. ಸಭೆಯಲ್ಲಿ ಪುನಃ ಪ್ರಚಂಡ ಕರತಾಡನ. 'ಇಂಕಿಲಾಬ್ ಜಿಂದಾಬಾದ್' ಗಗನವನ್ನು ಭೇದಿಸಿತು. ಶ್ಯಾಮ ಪಿಟ್ಟಿನ್ನಲಿಲ್ಲ. ಶಾಂತಾರಾಮನು ಕೆಳಗಿಟ್ಟ ದೃಷ್ಟಿಯನ್ನು ಮೇಲಕ್ಕೆ ಎತ್ತಲಿಲ್ಲ. ಸಭೆಯು ಇನ್ನಿತರ ಕಾರ್ಯಕ್ರಮಗಳು ಮುಗಿದುವು; ಸಭೆ ಚೆದರಿತು.

ಶ್ಯಾಮ, ಶಾಂತಾರಾಮನನ್ನು ಬೀಳ್ಕೊಟ್ಟು ತನ್ನ ಊಟದ ಹೋಟೆಲಿಗೆ ಹೋಗಿ ಊಟ ತೀರಿಸಿದ. ಅಲ್ಲಿಂದ ನೇರವಾಗಿ ತನ್ನ ಕೋಣೆಗೆ ಬಂದು, ಬಾಗಿಲನ್ನು ತೆರೆದು ದೀರ್ಘ ಹಚ್ಚಿ ಸುಮ್ಮನೆ ಕುಳಿತು ಬಿಟ್ಟ. ಮನಸ್ಸು ಮಾತ್ರ ಸುಮ್ಮನಿರದೆ ಎಲ್ಲೆಲ್ಲೋ ಅಲೆಯುತ್ತಿತ್ತು. ಐದು ನಿಮಿಷ ಹೀಗೆ ಕಳೆದಿರಬೇಕು; ಬಾಗಿಲು ಬಡಿದ ಶಬ್ದವಾಯಿತು. ಶ್ಯಾಮ ಎದ್ದು ಹೋಗಿ ಬಾಗಿಲು ತೆರೆದು ನೋಡಿದಾಗ, ಅವನ ಮಗ್ಗುಲಿನ ಕೋಣೆಯ ಬಾಲಕ - ರಾಘು—ನಿಂತುಕೊಂಡಿದ್ದ.

"ಏನು ರಾಘು, ಏನು ಸಮಾಚಾರ?"—ಶ್ಯಾಮ ವಿಚಾರಿಸಿದ.

"ನಿಮ್ಮ ಊಟ ಆಯಿತೇ? ಅಕ್ಕ ವಿಚಾರಿಸಿಕೊಂಡು ಬರುವರೆ ಕಳುಹಿದಳು"—ಎಂದ ಆ ಬಾಲಕ.

"ಹೌದು, ಈಗ ಹೋಟೆಲಲ್ಲಿ ಊಟ ತೀರಿಸಿ ಬಂದೆ"—

ಹುಡುಗ ಹೋಗಿಬಿಟ್ಟ. ಶ್ಯಾಮ ಪುನಃ ಬಂದು ಕುಳಿತುಕೊಂಡ. ಈಗ ಅವನ ಮನಸ್ಸು ಒಂದು ಕಡೆ ಬಾದು ನಿಲ್ಲುವಂತಾಯಿತು. ಸರ್ವ ಚಿಂತೆಯನ್ನು ಬಿಟ್ಟು ಒಂದೇ ಕಡೆಗೆ ಹಾರಿತು ಆ ಮನಸ್ಸು—ನೆರಮನೆಯ ಆ ಹುಡುಗಿ—ಆ ಬಾಲಕನ ಅಕ್ಕ—ಕುಸುಮಳ ಭವಿಷ್ಯದೆಡೆಗೆ. ಶ್ಯಾಮನ ಸರಳ ನಿಷ್ಕಪಟ ಜೀವನ, ಆ ಬಾಲೆಯ ಮನಸ್ಸನ್ನು ಎಂದೋ ಆಕರ್ಷಿಸಿತ್ತು. ಶ್ಯಾಮ ಮೊದಲು ಅದನ್ನು ಗಮನಿಸಲೇ ಇಲ್ಲ. ಕೊನೆಗೆ ಅವನ ಹೃದಯದಲ್ಲಿ ಕುಸುಮಳಿಗೆ ಸ್ಥಾನ ಸಿಕ್ಕಿತು. ಹತ್ತಿರದ ಬಂಧುಗಳು ಯಾರೂ ಇಲ್ಲವೆ ಒಂಟಿಜೀವನ ನಡೆಯಿಸುತ್ತ ಇರುವ ಅವನಿಗೆ ಜೀವನಸಂಗಾತಿ ಬೇಕೇ ಬೇಕಿತ್ತು. ಹೀಗಾಗಿ ಪರಸ್ಪರ ಅನುರಾಗ ಬೆಳೆದು, ಶ್ಯಾಮ ಕುಸುಮ—ಒಂದು ಹೃದಯದ ಒಂದೇ ಜೀವ ಆದರು.

ಆದರೆ ಕುಸುಮನ ಅಪ್ಪ ಮತ್ತು ಅಣ್ಣ, ಆ ಕಾರ್ಮಿಕಸಂಘದ ಅಧ್ಯಕ್ಷ ಸಾವಂತನ ಎಡಗೈ-ಬಲಗೈ. ಆದುದರಿಂದಲೇ ಅವರ ಮನೆಯಲ್ಲಿ ಸಾವಂತನಿಗೆ ಗಡಿಗಡಿ ಮಾಂಸ-ಶರಾಬಿನ ಸಂತರ್ಪಣೆಯಾಗು-

ತ್ತು. ಈ ಸಂಬಂಧ ಇಷ್ಟರಲ್ಲೇ ಉಳಿಯದೆ, ಸಾವಂತನು ಕುಸುಮಳನ್ನು ತನಗಾಗಿ ಕೇಳುವಷ್ಟರಲ್ಲಿಯೂ ಬಂತು. ಆದರೆ ಕುಸುಮ ಒಪ್ಪಲಿಲ್ಲ. ಬದಲಿಗೆ ಮನೆಯಲ್ಲಿ ರಂಪವನ್ನೇ ಮಾಡಿಬಿಟ್ಟಳು. ಬಾಲ್ಯದಲ್ಲೇ ತಾಯಿಯನ್ನು ಕಳಕೊಂಡ ಅಕೆ ಪಾಪ, ಯಾರಲ್ಲಿ ತನ್ನ ದುಃಖವನ್ನು ಹೇಳಿಕೊಳ್ಳಬೇಕು? ಈ ಇವಳ ವರ್ತನೆಗೆ ಕಾರಣ ಶ್ಯಾಮನೇ—ಎಂದು ತಿಳಿದ ಅವಳ ರಕ್ಷಕರು, ಅವನ ಮೇಲೆ ಕತ್ತಿ ಮಸೆಯುಲಾರಂಭಿಸಿದರು. ಸಾವಂತನಿಗೂ ವಿಷಯ ವಿವರಿಸಿ ಹೇಳಿದರು.

ತಾನು ಬೆಂಕಿಯ ನಡುವೆ ಇದ್ದೇನೆಂದು ಶ್ಯಾಮನಿಗೆ ಅರಿವಾಯಿತು. ಕುಳಿತುಕೊಂಡವ ಎದ್ದು ಬಳಿಯಲ್ಲಿದ್ದ ಜಾಪೆಯನ್ನು ಹಾಸಿ ಮಲಗಿಕೊಂಡ. ಆದರೆ ನಿದ್ದೆ ಬರಲಿಲ್ಲ. ಆಲೋಚನೆಯೂ ಕೊನೆ ಮುಟ್ಟಲಿಲ್ಲ.

× × × ×

ಶ್ರೀರಾಮ ಮಿಲ್ಕ್ ಮಿಲ್ಲಿನ ಕಾರ್ಮಿಕರಿಗೆ ಹೆಚ್ಚು ಸಂಬಳ ಸಿಗಲಾರದೆಂದು ಮಿಲ್ಲು ಮ್ಹಾಲೀಕರು ಸ್ಪಷ್ಟವಾಗಿ ಸಾರಿದ್ದರು. ಎರಡನೆಯ ಅಸ್ತ್ರಪ್ರಯೋಗವಾಯಿತು—ಮುಷ್ಕರ! ಹದಿನೈದು ದಿನಗಳಿಂದ ಕಾರ್ಮಿಕರು ಮುಷ್ಕರ ಹೂಡಿದ್ದಾರೆ. ಯಾರೂ ಕೆಲಸಕ್ಕೆ ಹೋಗುವುದೇ ಇಲ್ಲ. ಮಿಲ್ಲಿನ ಸುತ್ತಲೂ ಕಾರ್ಮಿಕರು ಜಯಘೋಷ ಮಾಡುತ್ತಿದ್ದರು. ಕೆಲವರು ಕಾನೂನಿಗೆ ವಿರುದ್ಧ ಹೋದುದರಿಂದ ಕಾರಾಗೃಹ ಸೇರಿದರು. ಕೆಲವರು ಮನೆಯಲ್ಲೇ ಕುಳಿತುಕೊಂಡರು. ಇನ್ನು ಕಾರ್ಮಿಕರ ಈ ತರದ ಸಂಘಟನೆಗೆ ಮಿಲ್ಲಿನ ಮ್ಹಾಲಕರೇ ಬಗ್ಗಬೇಕಿತ್ತು. ಇನ್ನು ತಮ್ಮ ವಿಜಯ ಖಂಡಿತವೆಂದು ಕಾರ್ಮಿಕರು ಬೀಗಿ ಹಿಗ್ಗಿದರು.

ಅಧ್ಯಕ್ಷ ಸಾವಂತ ಲಾಲ್‌ಬಾಗಿನಲ್ಲಿ ಸಭೆ ಕರೆದ. ಪ್ರಚಂಡ ಸಭೆ ಆಗಿತ್ತು. ಸಾವಂತನ ಭಾಷಣವು ಪ್ರಾರಂಭವಾಯಿತು; ಆದರೆ ಅದರಲ್ಲಿ ಮೊದಲಿನ ತೀಕ್ಷ್ಣತೆ ಇರಲಿಲ್ಲ:—

"ಪ್ರಿಯ ಬಂಧುಗಳೇ, ನಾವು ಗೆದ್ದೆವು. ನಮ್ಮ ಕೇಳಿಕೆಯ ಪ್ರಕಾರ ಕೊಡಲು ಮಿಲ್ಲಿನ ಮಾಲಕರು ಒಪ್ಪಿಗೆ ಇತ್ತಿರುವರು. ಆದ್ದಕ್ಕೆ ಇವರು ದೀರ್ಘ ಆಲೋಚನೆ ಮಾಡಿ, ಅದಷ್ಟು ಬೇಗನೆ ನಮ್ಮ ಬಿಡಿಕೆಗೆ ಮನ್ನಣೆ ಕೊಡುತ್ತೇನೆಂದು ಭರವಸೆ ಇರುತ್ತಿರುವರು. ನಾವು ಮುಷ್ಕರ ಹೂಡಿದ್ದರಿಂದ ಲಕ್ಷಗಟ್ಟಲೆ ರೂಪಾಯಿ ನಷ್ಟವಾಯಿತಂತೆ. ನಮಗೂ ನಷ್ಟವೆ. ಹೀಗೆ ಅವರು ಭರವಸೆ ಕೊಟ್ಟ ಮೇಲೆ, ನಾವು ಮುಷ್ಕರವನ್ನು ಇನ್ನೂ ಮುಂದುವರಿಸುವುದು ಸರಿ ಇಲ್ಲ. ಅದುದರಿಂದ ನಾನೆಲ್ಲರೂ ನಾಳೆಯಿಂದ ಕೆಲಸಕ್ಕೆ ಸೇರಿರಿ"—ಎಂದು ಸಾವಂತ ಭಾಷಣ ಮುಗಿಸಿದ. ಸಭಿಕರು ಕೆವಿಗುಟ್ಟು ಆಲಿಸಿದರು. ಕೆಲವರೇನೋ—'ಇಂಕೆಲಾಬ್ ಜಿಂದಾಬಾದ್' ಎಂದು ಕೂಗಿಕೊಂಡರು. ಆದರೆ ಹೃದಯದಿಂದ ಬಂದ ಕೂಗು ಅದಲ್ಲ. ಸಭೆ ಮುಗಿಯಿತು.

ಶ್ರೀರಾಮ ಮಿಲ್ಲಿನ ಮುಷ್ಕರವು ಮುಗಿಯಿತು. ಆದರೆ ಹದಿನೈದು ದಿನಗಳ ಸಂಬಳಕ್ಕೆ ಕಡಿತಬಿತ್ತು. ಈ ಬಗ್ಗೆ ಕಾರ್ಮಿಕರು ಸಾವಂತನಲ್ಲಿ ದೂರು ಹೇಳಿದರು; ಆದರೆ ಅವನು ಇಲ್ಲದ ಕಾರಣಗಳನ್ನು ಕೊಟ್ಟು, ಕಾರ್ಮಿಕರಿಗೆ ಶಾಂತಿಯ ಮತ್ತು ತಾಳ್ಮೆಯ ಪಾಠಕಲಿಸಲಾರಂಭಿಸಿದ.

ಮುಷ್ಕರ ಮುರಿದ ಒಳಗುಟ್ಟು ತಿಳಿದು ಶ್ಯಾಮನು ಕಿಡಿಕಿಡಿಯಾದ. ಭೂಮಿ ಆಕಾಶವನ್ನೆಲ್ಲಾ ಒಂದೇ ಮಾಡಬೇಕೆಂದೆನಿಸಿತು, ಅವನಿಗೆ. ಗುಟ್ಟು ತಿಳಿಸಿದ ಶಾಂತಾರಾಮನು ಕುಳಿತುಕೊಂಡು ಶ್ಯಾಮನ ಮುಖದಲ್ಲಾಗುವ ಪರಿವರ್ತನೆಯನ್ನು ನಿರೀಕ್ಷಿಸುತ್ತಿದ್ದ. ಕೋಣೆಯಿಡೀ ಸ್ಮಶಾನ ಮೌನ ಅವರಿಸಿತ್ತು. ರಾತ್ರಿಯಾದುದರಿಂದ ಹೊರಗೂ ನೀರವತೆ ಹಬ್ಬಿತ್ತು. ಆದರೆ ಮಗ್ಗುಲಿನ ಕೋಣೆಯಲ್ಲಿ ಸಾವಂತನಿಗೆ ಮಾಂಸ ಮತ್ತು ಶರಾಬಿನ ಸಂತರ್ಪಣೆಯಾಗುತ್ತಿದೆ ಎಂಬುದನ್ನು, ಕಿಟಕಿಯಿಂದ ತೂರಿಬರುವ ಅಟ್ಟಹಾಸದ ನಗೆಯೇ ಹೇಳುತ್ತಿತ್ತು.

"ನಾವು ಈ ಪರವಾಗಿ ಆಲೋಚನೆ ಮಾಡುವುದೇ ಬೇಡ. ಬಿತ್ತಿದವರು ಕೊಯ್ಯುತ್ತಾರೆ. ನಮ್ಮಿಷ್ಟಕ್ಕೆ ನಾವು ಇದ್ದರಾಯಿತು. ಲೋಕವನ್ನು ಕಟ್ಟಿಕೊಂಡು ನಾವು ಮಾಡಬೇಕಾದರೂ ಏನು? ಸುಮ್ಮನೆ ತಲೆಕೆಡಿಸಿಕೊಳ್ಳುವ ವ್ಯಾಪಾರ ಅದು!"—ಶಾಂತಾರಾಮ ಶ್ಯಾಮನಿಗೆ ಸಮಾಧಾನ ಹೇಳುತ್ತಲೇ ಇದ್ದ. ಮಿಲ್ಲುಮಾಲಿಕರು ಸಾವಂತನನ್ನು ಗುಟ್ಟಾಗಿ ಕರೆದು, ಮೂರುಸಾವಿರ ರೂಪಾಯಿ ಲಂಚ ಕೊಟ್ಟು ಮುಷ್ಕರ ಮುರಿಸಿದ್ದಾರೆಂಬ ವಾರ್ತೆ, ಶ್ಯಾಮನಿಗೆ ತಿಳಿಯುವ ಮೊದಲೇ ಕಾರ್ಮಿಕರಿಗೆ ತಿಳಿದುಹೋಗಿತ್ತು.

ಬಹಳ ರಾತ್ರಿಯ ವರೆಗೆ ಶ್ಯಾಮು–ಶಾಂತಾರಾಮ ಹೀಗೆಯೇ ಕುಳಿತುಕೊಂಡಿದ್ದರು. ಕೊನೆಗೆ ಶಾಂತಾರಾಮನು ತನ್ನ ಮನೆಗೆ ಹೊರಟ. ಶ್ಯಾಮ ಅಲ್ಲೇ ಸ್ವಲ್ಪ ಒರಗಿಕೊಂಡ; ನಿದ್ದೆ ಬಂದಿರಲಿಲ್ಲ—ಬರುವ ಪರಿಸ್ಥಿತಿಯಲ್ಲೂ ಇದ್ದಿಲ್ಲ. ಮನಸ್ಸು ಏನೇನನ್ನೋ ಚಿಂತಿಸುವುದರಲ್ಲಿತ್ತು. ಕೊನೆಗೆ ಸ್ವಲ್ಪ ಜೊಂಪು ಹತ್ತಿತೆನ್ನುವಾಗ, ಯಾರೋ ಚೀರಿದ ಧ್ವನಿ ಕೇಳಿಸಿತು. ಶ್ಯಾಮು ಫಕ್ಕನೆ ಎಚ್ಚತ್ತ. ಕಾರ್ಮಿಕರ ಆ ಕಟ್ಟಡದಲ್ಲಿ ಚೀರಾಟಕ್ಕೇನು ಕಡಮೆಯೇ! ಯಾರೋ ಕುಡಿದು ಬಂದು ತನ್ನ ಹೆಂಡತಿಯನ್ನು ಹೊಡೆಯುತ್ತಿರಬೇಕು.....ಆದರೆ ಚೀರುವ ಧ್ವನಿ ಮಗ್ಗುಲಿನ ಕೋಣೆಯಲ್ಲೆ! ಶ್ಯಾಮ ಆಲಿಸಿದ.... ಕುಸುಮಳ ಬೊಬ್ಬೆ! ಅವಳ ಆರ್ತನಾದ ಕೇಳಬರುತ್ತಿತ್ತು. ಶ್ಯಾಮು ತನ್ನ ಕೋಣೆಯಿಂದ ಹೊರಗೆ ಧಾವಿಸಿದ. ಚೀರಾಟ ಪದೇ ಪದೇ ಹೆಚ್ಚುತ್ತಲಿತ್ತು. ಮಗ್ಗುಲಿನ ಕೋಣೆಯ ಬಾಗಿಲು ಹಾಕಲ್ಪಟ್ಟು ಒಳಗೆ ಚಿಲಕ ಬಿಗಿದಿತ್ತು. ಒಳಗಡೆ ಮಂದಪ್ರಕಾಶವಿದೆ ಎಂದು ಬಾಗಿಲಕಂದಿನಿಂದ ನೋಡಬಹುದಿತ್ತು. ಶ್ಯಾಮು ಒಳಗೆ ದೃಷ್ಟಿ ಹಾಯಿಸಿದ. ಕುಡಿದು ಮತ್ತನಾದ ಸಾವಂತ, ಕುಸುಮಳ ಮೇಲೆ ಪದೇ ಪದೇ ಏರಿ ಹೋಗುತ್ತಲಿದ್ದ. ಪಾಪ, ಅಬಲೆ, ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಅವನನ್ನು ಹಿಂದಕ್ಕೆ ದಬ್ಬುತ್ತಿದ್ದಾಳೆ. ಮನೆಯಲ್ಲಿ ಇನ್ನಾರೂ ಇರಲಿಲ್ಲ. ಶ್ಯಾಮುನಿಗೆ ವಿಷಯ ತಿಳಿಯಿತು. ಸಾವಂತನನ್ನು ಮದುವೆಯಾಗಲು ಒಪ್ಪದ ಕುಸುಮಳನ್ನು ದಾರಿಗೆ ತರುವ ಪ್ರಯತ್ನ ನಡೆದಿತ್ತು. ಕೊನೆಯ ಪ್ರಯತ್ನವೋ—ಎಂಬಂತೆ,

ಕುಸುಮಳ ರಕ್ಷಕರು ಉಪಾಯದಿಂದ ಎಲ್ಲೋ ಮನೆಯಿಂದ ತಪ್ಪಿಸಿ ಕೊಂಡು, ಸಾವಂತನಿಗೆ ಸಂದರ್ಭ ಕಲ್ಪಿಸಿಕೊಟ್ಟಿದ್ದಾರೆಂದು ಶ್ಯಾಮನಿಗೆ ಹೊಳೆಯಿತು. ಎಲ್ಲಿಂದ ಬಂದ ಆವೇಶವೂ ಏನೊ; ಶ್ಯಾಮ ಆ ಕೋಣೆಯ ಬಾಗಿಲಿಗೆ ಬಲವಾಗಿ ಒದ್ದುಬಿಟ್ಟ. ಬಾಗಿಲು ಮುರಿದು ಬಿತ್ತು. ತಟಕ್ಕನೆ ಹುಲಿಯಂತೆ ಹಾರಿ, ಸಾವಂತನ ಮೇಲೆರಗಿದ. ಅವನ ಗಂಟಲನ್ನು ಬಲವಾಗಿ ಒತ್ತಿ ದಬ್ಬಿಬಿಟ್ಟ. ಸಾವಂತ ಹೋಗಿ ಗೋಡೆಗೆ ಡಿಕ್ಕಿಹೊಡೆದು, ಅಲ್ಲೇ ಕುಸಿದು ಬಿದ್ದ. ಕುಸುಮಾ ಶ್ಯಾಮನ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು—'ಎಂದೆಂದಿಗೂ ಬಿಡೆನು' ಎಂಬ ನಿರ್ಧಾರದಿಂದ. ಶ್ಯಾಮನ ಚುರುಕುಮನಸ್ಸು ಮುಂದಿನ ಹಾದಿಯನ್ನು ಹುಡುಕುತ್ತಲಿತ್ತು.

× × × ×

ಸಾವಂತನು ಪುನಃ ಶ್ರೀರಾಮಸಿಲ್ಕುಮಿಲ್ಲಿನ ಕಾರ್ಮಿಕರ ಸಭೆ ಕರೆದ. ಯಾಕೆ ಏನೆಂದು ಯಾರಿಗೂ ತಿಳಿಯಲಿಲ್ಲ. 'ಸಭೆಗೆ ಹೋಗದಿದ್ದರೇನು?'—'ಅವನು ನಮ್ಮ ಕಾರ್ಮಿಕ ಸಂಘಕ್ಕೆ ಅಧ್ಯಕ್ಷನಾಗುವುದೇ ಬೇಡ'—"ಅವನು ನಮಗೆ ದ್ರೋಹಮಾಡಿದನು!"—ಎಂದೆಲ್ಲಾ ಕಾರ್ಮಿಕರು ಅಲ್ಲಲ್ಲಿ ಹೇಳಿಕೊಂಡರೂ, 'ಸಭೆ ಯಾಕೆ ಕರೆದ—ಎಂದು ನೋಡುವ' ಎಂದು ಎಲ್ಲರೂ ಬಂದು ಸೇರಿದರು. ಸಭೆ ಪ್ರಾರಂಭವಾಯಿತು. ಸಾವಂತನು ಎದ್ದು ಸಭಿಕರಿಗೆ ಕೈಮುಗಿದು ವಂದಿಸಿದ. ಶೋಕಮಿಶ್ರಿತ ಧ್ವನಿಯಿಂದ ನಿಧಾನವಾಗಿ ಭಾಷಣಕ್ಕಾರಂಭಿಸಿದ:—"ನನ್ನ ಕೆಲಸಗಾರ ಬಂಧುಗಳೇ, ನಮ್ಮ ಸಂಘದ ಒಳಗೆ ಅತ್ಯಂತ ಮರ್ಯಾದೆ ಕೆಟ್ಟ ಘಟನೆಯೊಂದು ನಡೆದುದರಿಂದ, ನಿಮ್ಮನ್ನು ಈ ರೀತಿ ಇಲ್ಲಿ ಕರೆಯಬೇಕಾಯಿತು. ಆ ವಿಷಯವನ್ನು ಹೇಳುವರೆ ನನಗೂ ನಾಚಿಕೆಯಾಗುತ್ತದೆ, ಕೇಳುವ ನಿಮಗೂ ನಾಚಿಕೆಯಾಗಬಹುದು. ನಮ್ಮ ಸಂಘದಲ್ಲಿ ಇಂತಹ ಮಾನಕೆಟ್ಟ ಜನರೂ ಇದ್ದಾರೆಂದು ನನಗೆ ಈಗ ತಿಳಿಯಿತು. ಶ್ಯಾಮನು ನಮ್ಮೆಲ್ಲರ ಕಾರ್ಮಿಕಲೋಕದ ಮರ್ಯಾದೆಯನ್ನು ತೆಗೆದ. ಅವನು ನಿನ್ನೆ, ಕುಸುಮಾ ಎಂಬ ಹುಡುಗಿಯನ್ನು ಹಾರಿಸಿಕೊಂಡು ಎಲ್ಲೋ ಓಡಿಬಿಟ್ಟಿದ್ದಾನೆ. ಅವಳ ತಂದೆ ಮತ್ತು ಅಣ್ಣ ನನ್ನಲ್ಲಿ ಬಂದು ಹೇಳಿಕೊಂಡು ತುಂಬ ದುಃಖಿಸಿದರು. ಅವರಿಗೆ ನಾನು ಯಾವ ತರದ ಸಮಾಧಾನ ಹೇಳಲಿ? ಇಂತಹ ಅತ್ಯಾಚಾರವೂ ನಡೆಯಬಹುದೇ! ಇದನ್ನು ನಾವು ಸಹಿಸಬೇಕೆ? ನಮ್ಮ ಕಾರ್ಮಿಕ ಲೋಕಕ್ಕೇನೇ ಅವಮಾನ. ಇದು ಒಂದು ವಿಷಯವಾಯಿತು. ಇನ್ನೊಂದು ವಿಷಯವೆಂದರೆ—ಮುಷ್ಕರ ಮುರಿದುದು ಈ ಬಗ್ಗೆ ಶ್ಯಾಮನು ನಮಗೆಲ್ಲಾ ಬಲು ದೊಡ್ಡ ದ್ರೋಹ ಮಾಡಿದ್ದಾನೆ. ನನ್ನನ್ನು ಜೈಲಿಗೆ ಕೊಂಡು ಹೋಗುವ ತಂತ್ರವನ್ನು ಮಾಡಿದ್ದಾನೆ—ನಾನು ಜೈಲಿಗೆ ಹೆದರುವವನಲ್ಲ ಮಾಲಕರ ಒಟ್ಟಿಗೆ ಸೇರಿ ಅವನು ಮುಷ್ಕರ ಮುರಿಸಿದ. ಹದಿನೈದು ದಿನಗಳ ಸಂಬಳಕ್ಕೆ ಕಡಿತ ಹಾಕಿಸಿದ. ಅದೂ ಅಲ್ಲದೆ, ನನ್ನ ಮೇಲೆ ಬಲುದೊಡ್ಡ ಆರೋಪ ಒಂದನ್ನು ಹೊರಿಸಿದ. ನಾನೇ ಮೂರು ಸಾವಿರ ರೂಪಾಯಿ ಲಂಚ ತೆಗೆದುಕೊಂಡು ಮುಷ್ಕರ ಮುರಿಸಿದೆನಂತೆ! ಎಂತಹ ಆರೋಪ!

ತಾರಕಂಬಗಳು

(ಲಲಿತಪ್ರಬಂಧಗಳ ಸಂಕಲನ)

ಲೇಖಕರು :

ಶ್ರೀ. ಬಿ. ಆರ್. ಪಾಡಸ್ಪಿ, ಎಂ ಎ.

ಇದೀಗ ಪ್ರಕಟವಾಗಿದೆ.

ಹಿರಿಯ ಕವಿಗಳಾದ ಶ್ರೀಮಾನ್ ಬೇಂದ್ರೆ ದತ್ತರಾಯರ ಮುನ್ನುಡಿಯೂ ಇದೆ.

ಬೆಲೆ ೧-೩ ನ. ಪೈ. ಕ್ರಾ. ೯೬ ಪುಟಗಳು.

ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

ಮತ್ತು

ಸಮಾಜ ಪುಸ್ತಕಾಲಯ, ಭಗತ್ ಸಿಂಗ್ ಬೀದಿ ಧಾರವಾಡ,

ನಾನು ಮನಸ್ಸು ಮಾಡಿದರೆ, ದಿನಕ್ಕೆ ಐದು ಸಾವಿರ ರೂಪಾಯಿಗಳಿಸಿಯೇನು! ಎಷ್ಟೋ ದೊಡ್ಡ ದೊಡ್ಡ ಕಂಪೆನಿಗಳಿಂದ, ಸರಕಾರದಿಂದ ನನಗೆ ಕರೆಬಂತು. ಆದರೂ ನಾನು ಎಲ್ಲವನ್ನೂ ನಿರಾಕರಿಸಿದೆ; ಕಷ್ಟೀ ಜೀವಿಗಳ ಉದ್ಧಾರಕ್ಕಾಗಿ ನಾನು ನನ್ನ ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ಧ. ಕಾರ್ಮಿಕರಿಗಾಗಿ ಜೀವತೆತ್ತಲೂ ನಾನು ಹಿಂಜರಿಯುವವನಲ್ಲ ಹೀಗಿರುವಾಗ ಬರೇ ಮೂರು ಸಾವಿರ ರೂಪಾಯಿಗಾಗಿ ನಾನು ನಿಮಗೆ ದ್ರೋಹಮಾಡಿದೆನೆಂದು ಹೇಳಿದರೆ ಯಾರಾದರೂ ನಂಬಿಯಾರೆ? ಇಂತಹ ಸುಳ್ಳು ವಾರ್ತೆಗಳನ್ನು ಹುಟ್ಟಿಸಿ, ಕೊನೆಗೆ ಪಾಪದ ಹುಡುಗಿಯೊರ್ವಳನ್ನು ಹಾರಿಸಿಕೊಂಡು ಹೋದ ಆ ಶ್ಯಾಮನು, ನಮ್ಮೆಲ್ಲರ ಮರ್ಯಾದೆ ತೆಗೆದ. ಅಂತೆಯೇ ಅಪಾರ ನಷ್ಟಕ್ಕೆ ಗುರಿಪಡಿಸಿದ. ಇವನ್ನು ನಾವು ಸಹಿಸಬೇಕೇ?"—ಎನ್ನುತ್ತಾ ಸಾವಂತನು, ತನ್ನ ಭಾಷಣವನ್ನು ಮುಂದುವರಿಸುತ್ತಾ ಹೋದ. ಕಾರ್ಮಿಕರ ಸಂಘಟನೆ, ಉದ್ಧಾರ, ಲಾಭಗಳನ್ನೆಲ್ಲಾ ವಿವರಿಸುತ್ತಾ, ಸ್ವರ್ಗವನ್ನೇ ತಂದು ಸಭೆಯು ವಂದಿಟ್ಟ.

ಆ ತನಕ ಮುಷ್ಕರ ಮುರಿದನೆಂದು ಸಾವಂತನನ್ನು ತೆಗಳುತ್ತಿದ್ದ ಕಾರ್ಮಿಕರು, ತಮ್ಮ ಅಭಿಪ್ರಾಯ ಬದಲಿಸಲಾರಂಭಿಸಿದರು. ಶ್ಯಾಮನು ಮೊದಲೇ ಮಿಲ್ಲು ಮಾಲಕರ ಪರವಾಗಿ ಮಾತನಾಡಿದ್ದನೆಂದು ಅವರಿಗೆ ತಿಳಿದಿತ್ತು. ಅಂತವನು ಮುಷ್ಕರ ಮುರಿಸುವುದು ಸಹಜನೆ—ಎಂದು ತಿಳಿದುಕೊಂಡರು. ಹುಡುಗಿಯನ್ನು ಹಾರಿಸಿಕೊಂಡು ಹೋದುದು ಅಕ್ಷಮ್ಯ ಅಪರಾಧ! ಅಂತೂ ಅವರೆಲ್ಲರ ದೃಷ್ಟಿಯಲ್ಲಿ ಅವನೇ ಅಪರಾಧಿ, ದ್ರೋಹಿ! ಸಾವಂತ ನಿಷ್ಕಪಟಿ, ಕಾರ್ಮಿಕರ ಬಂಧು! ಪಾಪ, ಆ ಜನಕ್ಕೆ ಒಳಗಿನ ಗುಟ್ಟು ತಿಳಿಯಲೇ ಇಲ್ಲ ತಿಳಿಯುವುದೇನೆ ಪುನಃ ಸಾವಂತನಿಗೆ ಕಾರ್ಮಿಕಸಂಘದ ಅಧ್ಯಕ್ಷತೆಯ ಪಟ್ಟವನ್ನು ಕಟ್ಟಿದರು.

ನಿಕಿತಾ ಕ್ರುಶ್ಚೇವ್

(ವ್ಯಕ್ತಿತ್ವ ಪರಿಚಯ)

ಶ್ರೀ. ವೆಂ. ಮು. ಜೋಶಿ, ಧಾರವಾಡ

ನಿಕಿತಾ ಕ್ರುಶ್ಚೇವ್ ಈತನ ವ್ಯಕ್ತಿತ್ವವಿಂದು ಒಡೆಯದಂತಹ ಒಗಟಾಗಿದೆ. ಮುಹಶ್ತ್ರಾಶಾಂಕ್ಷೆಯ—ಸಾಹಸಪೂರ್ಣ—ರಾಜತಂತ್ರಗಳಿಂದಲೇ ತುಂಬಿದ ಇವನ ಪೂರ್ವಚರಿತ್ರೆ, ಇವನು ಬಯಸುವ ಭವಿಷ್ಯವೇ ನಂಬುದವರ ಬಗ್ಗೆ ಸಂದೇಹ-ಭೀತಿಗಳನ್ನು ಹುಟ್ಟಿಸುವಂತಿದೆ.

●

[ಹಳೆಯ ಸಂಚಿಕೆಯಿಂದ ಮುಂದುವರಿದುದು.]

ಎರಡನೆಯ ಮಹಾಯುದ್ಧ

ಪೋಲಂಡ್ ಆಕ್ರಮಿತ ರಶಿಯಾ ಪ್ರದೇಶ ಮರಳಿ ದೊರೆತ ಕೂಡಲೆ, ನಿಕಿತಾನ ಉತ್ಸಾಹ ದ್ವಿಗುಣಿತವಾಯಿತು. ರಶಿಯಾ ಆಗ ಪ್ರತ್ಯಕ್ಷವಾಗಿ ಯುದ್ಧಕ್ಷೇತ್ರದಲ್ಲಿ ಧುಮುಕಿರದಿದ್ದರೂ, ಆ ಪ್ರಸಂಗ ಕತ್ತಿರದಲ್ಲಿಯೇ ಸುಳಿದಾಡುತ್ತಿದ್ದಿತು. 'ಒಂದು ವೇಳೆ ಯುದ್ಧ ಪ್ರಾರಂಭವಾದರೆ, ಯುಕ್ರೇನ್ ಜನರ ನಿಷ್ಠೆಯ ವಿಷಯವಾಗಿ ನನ್ನೂ ಹೇಳಲು ಬರುವಂತಿಲ್ಲ' ಎಂದು ಬೆರಿಯಾ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ಅದರಂತೆ ಯುದ್ಧ ಪ್ರಾರಂಭವಾದ ಕೂಡಲೆ, ಸಾವಿರಾರು ಯುಕ್ರೇನೀ ಜನರು, ನಾಝೀ ಜರ್ಮನಿಗೆ ಹೋಗಿ ಅಲ್ಲಿಯವರನ್ನು ಕೂಡಿಕೊಂಡರು.

ಯುದ್ಧಸಮಯದಲ್ಲಿ ನಿಕಿತಾ ಕೀವ್ನ ವಿಭಾಗದ ಸಂರಕ್ಷಣ ಸಮಿತಿಯ ಅಧ್ಯಕ್ಷನೆಂದು ನೇಮಕಹೊಂದಿದನು. ಅಲ್ಲಿಯ ಮಾರ್ಶಲ್ 'ಬುಡೇನಿ'ಗೆ ತನ್ನ ಸಹಾಯ-ಸಹಕಾರಗಳನ್ನು ಕೊಡಬೇಕಿತ್ತು; ಆದರೆ ಇಬ್ಬರಿಗೂ ಕೂಡಿ ಆಡೆಯುದುದರಿಂದ, ಬುಡೇನಿಯನ್ನು ಬೇರೆ ಕಡೆಗೆ ವರ್ಗಾಯಿಸಲಾಯಿತು. ಗಳಿತರಲ್ಲಿ ಹೊಸ ಕಾಳಯನ್ನು ಪ್ರಾರಂಭಿಸುವುದಕ್ಕಾಗಿ ನಿಕಿತಾನು ಮಾರ್ಶಲ್ ಟಿಮೋಶಂಕೋನಿಗೆ ಸಂಪೂರ್ಣ ಸಹಾಯವನ್ನು ಒದಗಿಸಿದನು. ಆದರೆ ಈ ಸಹಾಯದಿಂದ ದಾಳಿಯು ಫಲಕಾರಿಯಾಗಲಿಲ್ಲ. ದಾಳಿ ಅಯಶಸ್ವಿಯಾದರೂ ಒಂದು ಲಾಭ ಮಾತ್ರ ಆಯಿತು; ಅದೆಂದರೆ ಎರಡು ತಿಂಗಳ ಮಟ್ಟಿಗೆ ಜರ್ಮನಿಯು ಮುನ್ನಡೆಯು ಕುಗ್ಗಿತು. ಈ ಸಮಯದಲ್ಲಿಯೇ ನಿಕಿತಾ ಮತ್ತು ಕೋನಿವ್ಹ್ ಇವರಲ್ಲಿ ಸ್ನೇಹ ಬೆಳೆಯತೊಡಗಿತು. ಮುಂದೆ ಕೋನಿವ್ಹ್ ಸುಪ್ರೀಮ್ ಜನರಲ್ ಸ್ಟಾಫಿನ ಪ್ರಮುಖನಿದ್ದಾನೆ.

ಗಳಿತರ ಸಪ್ಟಂಬರಿನಲ್ಲಿ ಸ್ಟಾಲಿನ್‌ಗ್ರಾಡ್‌ನ ಪತನದ ಲಕ್ಷಣಗಳು ತೋರತೊಡಗಿದುವು. ಮೊದಲು ಮೆಲೆನ್ ಕಾರ್ಪ್ಸ್ ಅಲ್ಲಿಯ ಮುಖ್ಯಸ್ಥನಾಗಿ ನೇಮಕ ಹೊಂದಿದ್ದನು; ಆದರೆ ಬೇಗನೆ ಆತನನ್ನು ಹಿಂದಕ್ಕೆ ಕರೆಯಿಸಿಕೊಳ್ಳಲಾಯಿತು. ಆ ಸ್ಥಳದಲ್ಲಿ ನಿಕಿತಾನನ್ನು ಕಳಿಸಲಾಯಿತು. ನಿಕಿತಾ ಮಾರ್ಶಲ್ ಝುಕಾವ್ಹನನ್ನು ಆ ರಣರಂಗಕ್ಕೆ ಕರೆಯಿಸಿಕೊಂಡು, ದಾಳಿಯ ಯೋಜನೆಗಳನ್ನು ಕುರಿತು ಲೆಕ್ಕಹಾಕಿ ಯಶಸ್ಸನ್ನು ಗಳಿಸಿದನು.

ನಾಝೀ ಸೈನ್ಯವು ಸಂಪೂರ್ಣವಾಗಿ ಯುಕ್ರೇನಿನಿಂದ ಹಿಂದಿರುಗುವವರೆಗೆ ನಿಕಿತಾ ಸೈನ್ಯಪ್ರತಿಯಲ್ಲಿ ನಿಂತುಕೊಂಡನು. ಯುಕ್ರೇನಿನ ಕೂಲಕ್ಷ ಜನರು ನಾಝೀ ಜರ್ಮನಿಯು ಪತಿಯಲ್ಲಿ ಸಹಕರಿಸಿದ ಎಂಬ ಆರೋಪವನ್ನಿರಿಸಿ ಅವರನ್ನು ಗಡಿಪಾರು ಮಾಡುವ ವರೆಗೂ ನಿಕಿತಾ ಯುಕ್ರೇನನ್ನು ಪ್ರವೇಶಿಸಲಿಲ್ಲ ಮುಂದೆ ಗಳಿತರಲ್ಲಿ ತನ್ನನ್ನು ಮುಖ್ಯ ಕಾರ್ಯದರ್ಶಿಪದವಿಯಿಂದ ಮುಕ್ತಗೊಳಿಸಿ ಯುಕ್ರೇನ್ ಸರಕಾರದ ಪ್ರಮುಖನೆಂದು ವರ್ಗಾಯಿಸಬೇಕೆಂದು, ನಿಕಿತಾ ಸ್ಟಾಲಿನ್‌ನನ್ನು ವಿನಂತಿಸಿಕೊಂಡನು. ತಾನು ಹೊಸದಾಗಿ ತಯಾರಿಸಿದ ಭೂಸುಧಾರಣೆಯ ಕಾಯಿದೆಯನ್ನು ಅಮಲಿನಲ್ಲಿ ತರುವುದೇ ಈ ವಿನಂತಿಯ ಉದ್ದೇಶವಾಗಿತ್ತು. ಅವನ ವಿನಂತಿಯನ್ನು ಮನ್ನಿಸಲಾಯಿತು; ಆತನ ಹಸ್ತಕನಾದ ಮೆಲನಿಕ್‌ನನ್ನು ಮುಖ್ಯ ಕಾರ್ಯದರ್ಶಿಯೆಂದು ನಿಯಮಿಸಲಾಯಿತು.

ಮಧ್ಯವರ್ತಿ ಪಕ್ಷಸಮಿತಿಯ ಅಧಿಕಾರಪಟ್ಟದ ಮೇಲೆ

೧೯೫೨ನೆಯ ಇಸ್ವಿಯು ಸ್ಟಾಲಿನ್ನನಿಗೆ ಅತ್ಯಂತ ಕಷ್ಟದಾಯಕವಾದ ವರ್ಷವಾಗಿತ್ತು. ಮಾರ್ಶಲ್ ಪಿಟೋನ ಮೂಲಕ ಅಂತರರಾಷ್ಟ್ರೀಯ ರಾಜಕಾರ್ಯರಂಗದಲ್ಲಿ ರಶಿಯಾದ ಮಾನ ಧಕ್ಕೆಗೊಂಡಿತು. ಇದೆಲ್ಲವನ್ನು ಹೋಗಲಾಡಿಸುವ ಉದ್ದೇಶದಿಂದ ಸ್ಟಾಲಿನ್ನನು ಪಕ್ಷದ ಪುನರ್ಘಟನೆಯನ್ನು ಮಾಡಲಿಚ್ಛಿಸಿದನು. ಮುಖ್ಯವಾದ ಕೆಲವು ಕೆಲಸಗಳನ್ನು ತಾನಿರಿಸಿಕೊಂಡು, ಮುಖ್ಯ ಕಾರ್ಯದರ್ಶಿಯಾಗಿ,

ಸ್ಟಾಲಿನ್‌ನು ಮೆಲನ್ ಕಾವ್ವನನ್ನು ಪಕ್ಷದ ಪ್ರಥಮ ಕಾರ್ಯದರ್ಶಿಯನ್ನಾಗಿಯೂ, ಕ್ರುಶ್ಚೇವ್ಹನನ್ನು ದ್ವಿತೀಯಕಾರ್ಯದರ್ಶಿಯನ್ನಾಗಿಯೂ ನಿಯಮಿಸಿದನು. ಒಟ್ಟಿನಲ್ಲಿ ಏಳು ಜನ ಕಾರ್ಯದರ್ಶಿಗಳನ್ನು ನಿಯಮಿಸಲಾಯಿತು. ಭೂಸಾಗುವಳಿ ಮತ್ತು ಉದ್ಯೋಗ ವಿಭಾಗವನ್ನು ನಿಕಿತಾಗೆ ಕೊಡಲಾಗಿತ್ತು. ಹಳೆಯ ಸಾಮುದಾಯಿಕ ಭೂಸಾಗುವಳಿಯ ಬದಲು, ರೈತರನ್ನು ಕೆಲಸಗಾರರೆಂದು ಎಣಿಸುವ ಮತ್ತು ವಿದ್ಯುತ್ ಸಲಕರಣೆಗಳಿಂದ ಉತ್ಪಾದನೆಯನ್ನು ಬೆಳೆಸುವ ಯೋಜನೆಯನ್ನು ನಿಕಿತಾ ಸಿದ್ಧಪಡಿಸಿದನು. Garden cities (ಕೋಟೆ ಪಟ್ಟಣಗಳು) ನಿರ್ಮಿಸಿ ಈ ಯೋಜನೆಯನ್ನು ಅಮಲಿನಲ್ಲಿ ತರುವುದಿದ್ದಿತು. ಆದರೆ ಈ ಯೋಜನೆಯು ಫಲಕಾರಿಯಾಗಲಿಲ್ಲ. ಸೊವ್ಹಿಯೆಟ್ ಉದ್ಯೋಗ ಧಂದೆಗಳ ಪುನರ್ರಚನೆಯ ಕೆಲಸವನ್ನು ಬುಲ್ಗಾನಿನ್ ಮಾಡುತ್ತಿದ್ದನು. ಆದುದರಿಂದ ಇಬ್ಬರು ಹಳೆಯ ಮಿತ್ರರು ಪುನಃ ಒಂದೆಡೆಯಲ್ಲಿ ಕೂಡಿದರು. ಮಾರ್ಶಲ್ ಝುಕಾವ್ಹ್ ರನ್ನು ಸ್ವೆರ್ಡ್‌ಲಾವ್ಹಸ್ಕಿಗೆ ಕಳಿಸಿ ಕೊಡಲಾಗಿತ್ತು. ಇದು ಒಂದು ಹದ್ದುಪಾರಿನ ಶಿಕ್ಷೆಯಂತೆಯೇ ಇದ್ದಿತು. ನಿಕಿತಾನ ಪ್ರಯತ್ನದ ಮೂಲಕ, ಝುಕಾವ್ಹ್‌ರನ್ನು ಹಿಂತಿರುಗಿ ಕರೆಸಿಕೊಳ್ಳಲಾಯಿತು. ೧೯೫೪ರ ಪಕ್ಷ ಪರಿಷತ್ತಿನ ಸಿದ್ಧತೆಗಳು ೧೯೫೨ರಲ್ಲಿ ಪ್ರಾರಂಭವಾದುವು. "ಪಾನ್ ರಶಿಯನ್ ಬೊಲ್ಶೆವ್ಹಿಕ್ ಕಮ್ಯುನಿಸ್ಟ್ ಪಾರ್ಟಿ" ಎಂಬ ಹಳೆಯ ಹೆಸರನ್ನು ಬದಲಿಸಿ "ಕಮ್ಯುನಿಸ್ಟ್ ಪಾರ್ಟಿ ಆಫ್ ದಿ ಸೋವ್ಹಿಯೆಟ್ ಯುನಿಯನ್" ಎಂಬ ಹೆಸರನ್ನು ಇರಿಸಬೇಕೆಂದು ಸ್ಟಾಲಿನ್‌ನ ಇಚ್ಛೆ ಇದ್ದಿತು. ಈ ಹೊಸ ಬದಲಾವಣೆಯನ್ನು ನಿಕಿತಾ ಒಪ್ಪುವನೆಂದೂ ತನ್ನ ಮಾತಿನ ಹೊರಗೆ ಆತ ಹೋಗಲಾರನೆಂಬುದನ್ನು ಧೃಡಪಡಿಸಿಕೊಂಡೂ ಸ್ಟಾಲಿನ್, ಪಕ್ಷದ ಹೊಸ ಘಟನೆಯನ್ನು ಸಿದ್ಧಪಡಿಸುವ ಕೆಲಸವನ್ನು ನಿಕಿತಾನಿಗೆ ಒಪ್ಪಿಸಿದನು. ಪಕ್ಷದ ಹೊಸ ಅಧಿಕಾರಿಗಳ ಆಯ್ಕೆಯ ವಿಷಯದಲ್ಲಿ ನಿಕಿತಾನೇ ಯಾದಿಯನ್ನು ಸಾದರ ಪಡಿಸಿದನು; ಮತ್ತು ಪಕ್ಷದ ಹೊಸಘಟನೆಯ ಅನುಸಾರವಾಗಿ ನಡೆಯಬೇಕಿದ್ದ ಗುಪ್ತ ಮತದಾನಪದ್ಧತಿಯನ್ನು ಬಿಟ್ಟು, ಚಪ್ಪಾಳೆಯ ಸಪ್ಪಳದ ಮಧ್ಯೇ ನಿಕಿತಾನ ಎಲ್ಲ ಗೊತ್ತುವಳಿಗಳನ್ನೂ ಪಾಸು ಮಾಡಲಾಯಿತು. ಮೆಲನ್‌ಕೋವ್ಹ್ ಮತ್ತು ನಿಕಿತಾ ಪ್ರಥಮ ಮತ್ತು ದ್ವಿತೀಯ ಕಾರ್ಯದರ್ಶಿಗಳೆಂದು ನೇಮಕಗೊಂಡರು.

ಸ್ಟಾಲಿನ್‌ನ ಮರಣ

೧೯೫೨ರ ಪಕ್ಷ ಪರಿಷತ್ತಿನ ತರುವಾಯ ಹೊಸ ಹತ್ಯಾಕಾಂಡವನ್ನು ಪ್ರಾರಂಭಿಸಬೇಕೆಂದು ಸ್ಟಾಲಿನ್ ಲೆಕ್ಕ ಹಾಕಿದ್ದನು. ಕ್ರೆಮಲಿನ್ ಒಳಸಂಚು, ಡಾಕ್ಟರರ ಕೈದು, ಜ್ಯೂವಿರೋಧೀ ವಾತಾವರಣ ಇತ್ಯಾದಿ ಘಟನೆಗಳು ಹತ್ಯಾಕಾಂಡವನ್ನೇ ಸೂಚಿಸುತ್ತಿದ್ದುವು.

ಒಂದೇ ರಾತ್ರಿಯಲ್ಲಿ ಸಮಾಜವಾದವನ್ನು ಸಂಪೂರ್ಣವಾಗಿ ಯಶಸ್ವಿಯನ್ನಾಗಿ ಮಾಡಬೇಕೆಂದು ಸ್ಟಾಲಿನ್‌ನ ಧೋರಣೆಯಾಗಿತ್ತು. ಈ ಧೋರಣೆಯಿಂದ ಪ್ರಚಂಡ ನೌಕರಶಾಹಿಯು ಅಸ್ತಿತ್ವದಲ್ಲಿ ಬಂದಿತು. ದೇಶದ ನೌಕರರ ಸಂಖ್ಯೆ ೫೫ ಕೋಟಿ ಇದ್ದಿತು; ಅದರಲ್ಲಿ ೪೫ ಕೋಟಿ ಸಾದಾ ಕೆಲಸಗಾರರಿದ್ದರು. ಉಳಿದವರು ಅಧಿಕಾರಿಗಳು. ಇವರಲ್ಲಿ ಸುಮಾರು ೧೦ ಲಕ್ಷ ಜನ ಪಕ್ಷದ ವಿವಿಧ ಸಂಘಟನಾತ್ಮಕ ಕಾರ್ಯದಲ್ಲಿ ತೊಡಗಿದ್ದರು. ಈ ಜನರಿಗೆ ಅನೇಕ ಸವಲತ್ತುಗಳು ದೊರೆತಿದ್ದುವು. ಪ್ರತ್ಯಕ್ಷ ಉತ್ಪಾದನಾ ಕಾರ್ಯದ ದೃಷ್ಟಿಯಿಂದ ಈ ಜನ ನಿರುಪಯೋಗಿ ಆಗಿದ್ದರೂ, ರಾಜಕೀಯ ರಂಗದಲ್ಲಿ ಈ ಶಕ್ತಿ ಪ್ರಚಂಡವಾಗಿತ್ತು. ಇದೇ ತಲೆಭಾರವಾಗತೊಡಗಿತ್ತು. ಈ ನೌಕರ ಶಾಹಿಯ ಮೇಲೆಯೇ ಪ್ರಥಮ ದಾಳಿ ಮಾಡಬೇಕೆಂದು ಸ್ಟಾಲಿನ್ ಯೋಚಿಸಿದ; ಆದರೆ ಸ್ಟಾಲಿನ್ ಬೇನೆ ಬಿದ್ದು, ಆದರಲ್ಲಿಯೇ ಆತನ ಅಂತವಾಯಿತು. ಆತನ ಮರಣದ ವಾರ್ತೆಯನ್ನು ೪ ದಿನಗಳವರೆಗೆ ಗೌಪ್ಯವಾಗಿರಿಸಲಾಯಿತು. ಸತ್ತಾ ಕಲಹ ಮತ್ತೆ ಪ್ರಾರಂಭವಾಯಿತು. ನೌಕರಶಾಹಿ ಮತ್ತು ಕೆಂಪುಸೇನೆಯಲ್ಲಿ ಅಧಿಕಾರಪ್ರಾಪ್ತಿಗಾಗಿ ತಿಕ್ಕಾಟ ನಡೆಯಿತು. ೧೦ ಜನರ "ಪ್ರೆಸಿಡಿಯಮ್" ಸಿದ್ಧಗೊಳಿಸಲಾಯಿತು. ಈ ತಿಕ್ಕಾಟದ ನಡುವೆ ಒಂದು ಒಪ್ಪಂದವಾಗಿ, ಹೊಸ ಮಂತ್ರಿಮಂಡಳ ಅಸ್ತಿತ್ವದಲ್ಲಿ ಬಂದಿತು. ನಿಕಿತಾ, ಮಧ್ಯವರ್ತಿ ಸಮಿತಿಯ ಕಾರ್ಯದರ್ಶಿಯೆಂದು ನೇಮಕಗೊಂಡನು ಸತ್ತಾಧಾರಿಗಳ ಯಾದಿಯಲ್ಲಿ ಆತನದು ೭ನೆಯ ನಂಬರು ಇದ್ದಿತು. ಇದರ ಸೇಡನ್ನು ನಿಕಿತಾ ಬೇಗನೇ ತೀರಿಸಿಕೊಂಡನು. ದೇಶದ ತುಂಬೆಲ್ಲ ಸಂಚುಸಿ 'ಜನತೆಯ ಕೈವಾರಿ' ಎಂದು ಪೆಸರು ಪಡೆದನು.

ಬೆರಿಯಾನ ಕೊನೆ

ಪ್ರವಾಸದಿಂದ ಮರಳಿದನಂತರ, ಬೆರಿಯಾ ಮತ್ತು ಬುಲ್ಗಾನಿನ್ ಇವರಲ್ಲಿ ಕಲಹ ಪ್ರಾರಂಭವಾದುದನ್ನು ನಿಕಿತಾ ಕಂಡುಕೊಂಡನು. ಸ್ಟಾಲಿನ್‌ನ ಮರಣದನಂತರ ಬೆರಿಯಾ, ಪ್ರೆಸಿಡಿಯಮ್ಮಿನ ಸಮ್ಮತಿಯನ್ನು ತೆಗೆದುಕೊಳ್ಳದೆ, ಹಲವಾರು ಹೊಸ ಕೆಲಸಗಳನ್ನು ಕೈಗೊಂಡಿದ್ದನು. ತಾನೀಗ ವಿಶಿಷ್ಟವಾದ ವೇದಿಕೆಯ ಹಬ್ಬಕ್ಕೆ ಬಂದ ವ್ಯಕ್ತಿಯಾಗಿದ್ದೇನೆ–ಎಂಬ ಭಾವನೆಯಲ್ಲಿ ಬೇರಿಯಾ, ಡಾಕ್ಟರರ ಬಿಡುಗಡೆ, ೫ ಲಕ್ಷ ಜನರ ಸ್ಥಾನಬದ್ಧತೆಯಿಂದ ಮುಕ್ತತೆ ಇತ್ಯಾದಿಗಳನ್ನು ಮಾಡಿ ಜನಪ್ರಿಯತೆಯನ್ನು ಗಳಿಸಬೇಕೆಂದು ಪ್ರಯತ್ನಿಸತೊಡಗಿದ್ದ. ಗುಪ್ತ-ಪೋಲೀಸ ಸಂಘಟನೆಯಲ್ಲಿಯ ಅಧಿಕಾರಿಗಳನ್ನು ಬೆರಿಯಾ ಸ್ವತಂತ್ರ ರೀತಿಯಲ್ಲಿ ನೇಮಿಸತೊಡಗಿದನು. ಪಾಶ್ಚಿಮಾತ್ಯ ದೇಶಗಳ ರಾಜಕೀಯ ಧೋರಣವನ್ನು ತಾನೇ ತೂಗಿ ನೋಡತೊಡಗಿದ್ದನು. ಆತನು ಯಾವುದೇ ಒಳಸಂಚನ್ನು ಮಾಡುತ್ತಿರಲಿಲ್ಲವಾದರೂ, ಆತನ ಈ ಒಳಕೃತಿಗಳಿಗೆ ಒಳಸಂಚಿಂದು ಬಣ್ಣ ಕೊಡಲಾಯಿತು. ಬೆರಿಯಾ ಪೂರ್ವಜರ್ಮನಿಗೆ ಭೆಟ್ಟಿಕೊಟ್ಟಾಗ, ಅಲ್ಲಿಯ ಜನರಲ್ 'ಗೋರ್ಶ್‌ಕೋಲಾ'ನಿಗೆ ಪ್ರೆಸಿಡಿಯಮ್ಮಿನ ಸಮ್ಮತಿಯನ್ನು ತೆಗೆದುಕೊಳ್ಳದೆ ಕೆಲವೊಂದು ಆದೇಶವನ್ನು ಕೊಟ್ಟನು. ವೇಳೆ ಕಾಯುತ್ತಿದ್ದ ನಿಕಿತಾನಿಗೆ ಈಗ ಸಂಧಿ ದೊರೆತಿದಂತಾಯಿತು. ೨೬ನೆಯ ಜೂನ್ ೧೯೫೩ರಂದು ತನ್ನ ಕಚೇರಿಯಲ್ಲಿಯೇ ಮಧ್ಯವರ್ತಿ ಸಮಿತಿಯ ಸಭೆ ಕರೆದು, ಬೆರಿಯಾನನ್ನು ಕೈದು ಮಾಡುವ ಗೊತ್ತುವಳಿಯನ್ನು ಪಾಸುಮಾಡಿಕೊಂಡನು. ವಿಲಂಬ ಮಾಡದೇ ವಾರಂಟನ್ನು ಸಿದ್ಧಪಡಿಸಿ ಝುಕಾವ್ಹ್ ಮತ್ತು ಕೋನಿವ್ಹ್ ಈ ಸೇನಾನಿಗಳ ಕೈಯಿಂದ

ಬೇರಿಯಾನನ್ನು ಸೆರೆಹಿಡಿಸಿದನು. ಈ ಸಭೆಗೆ ಮೆಲನ್‌ಕಾವ್ಹ್ ಮತ್ತು ಮೊಲೊಟೊವ್ಹ್ ಹಾಜರ್ ಇರಲಿಲ್ಲ—ಎಂಬ ಮಾತಿನತ್ತ ವಿಶೇಷಗಮನವನ್ನು ಕೊಡಬೇಕಾಗಿದೆ. ಬೆರಿಯಾ ಗುಪ್ತ ಪೋಲಿಸ ವಿಭಾಗದ ಮುಖ್ಯಸ್ಥನಿದ್ದ. ಈ ಗುಪ್ತ ಪೋಲಿಸ್‌ಪಡೆಯನ್ನು ಜನತೆ, ಸೇನೆ, ನೌಕರಶಾಹಿಗಳು ಸೇರುತ್ತಿರಲಿಲ್ಲ. ಅದೊಂದು ಅಪ್ರಿಯ ಸಂಘಟನೆಯಾದುದರಿಂದ, ಬೇರಿಯಾನ ಕೈದು, ಸುಲಭಸಾಧ್ಯವಾಯಿತು ಬೇರಿಯಾನಿಗೆ ದೇಶಾಂತರಶಿಕ್ಷೆಯನ್ನು ವಿಧಿಸಲಾಯಿತು.

ಸತ್ತಾಕಲಹದ ತೀವ್ರತೆ

ಬೇರಿಯಾನ ಪತನದ ನಂತರ ನಿಕಿತಾ ಮತ್ತು ಬುಲ್ಗಾನಿನ್ನರ ಜೋಡಿಯು ಅಸ್ತಿತ್ವದಲ್ಲಿ ಬಂದಿತು. ಆದರೂ ನೌಕರಶಾಹಿ, ಸೇನೆ ಮತ್ತು ಜನತೆಗಳ ಗುಂಪಿನ ತಿಕ್ಕಾಟದಿಂದ, ನಿಕಿತಾನ ಸ್ಥಾನಕ್ಕೆ ಧಕ್ಕೆ ತಗಲುವ ಚಿನ್ಹೆಗಳು ಕಾಣತೊಡಗಿದುವು. ಜನತೆಯ ನಿಜವಾದ ಕೈವಾರಿ ಮೆಲನ್‌ಕಾವ್ಹನೆಂದು ಎಲ್ಲರೂ ಬಗೆಯತೊಡಗಿದರು. ನಿಕಿತಾನಿಗೆ ಮೆಲನ್‌ಕಾವ್ಹನ ಜನಪ್ರಿಯತೆಯ ಅರಿವು ಇದ್ದಿತು. ಪಕ್ಷದ ಪ್ರಥಮ ಕಾರ್ಯದರ್ಶಿಯನ್ನಾಗಿ ಮೆಲನ್‌ಕಾವ್ಹನನ್ನು ಆರಿಸಬೇಕೆಂದು ಜನತೆ ಬಹಿರಂಗವಾಗಿ ಘೋಷಿಸತೊಡಗಿತು. ನಿಕಿತಾ ಇವೆಲ್ಲ ಸಂಕಟಗಳಿಗೆ ಎದೆ ಕೊಟ್ಟು ನಿಂತನು. ಮೆಲನ್‌ಕಾವ್ಹ್ ಸೊವ್ಹಿಯೆಟ್ ಯುನಿಯನ್‌ನಲ್ಲಿಯು ಅತ್ಯಂತ ಲೋಕಪ್ರಿಯ ವ್ಯಕ್ತಿಯಾದುದರಿಂದ, ಅವನನ್ನು ಪದಚ್ಯುತನನ್ನಾಗಿ ಮಾಡುವುದು ಅಷ್ಟೊಂದು ಸುಲಭಸಾಧ್ಯವಾದ ಮಾತಾಗಿರಲಿಲ್ಲ. ಆದಕ್ಕಾಗಿ ನಿಕಿತಾ ಅತ್ಯಂತ ಎಚ್ಚರಿಕೆಯಿಂದ ಹೆಜ್ಜೆಯನ್ನಿಡತೊಡಗಿದ. ತಾನು ಕೂಡ ಜನಪ್ರಿಯ ವ್ಯಕ್ತಿಯಾಗುವುದರತ್ತ ವಿಶೇಷಗಮನವನ್ನು ಕೊಡತೊಡಗಿದ. ಈ ಕಲಸ ಸ್ವಲ್ಪಮಟ್ಟಿಗೆ ಸಾಧ್ಯವಾಗತೊಡಗಿದ ಲಕ್ಷಣಗಳನ್ನು ಗುರುತಿಸಿದ ನಿಕಿತಾ, ಮೆಲನ್‌ಕಾವ್ಹನನ್ನು ತಳ್ಳುವ ಯೋಚನೆಯನ್ನು ನಡೆಸಿದನು. ಮೆಲನ್‌ಕಾವ್ಹ್ ರಾಜೀನಾಮೆಯನ್ನು ಪಲ್ಲಿಸಬೇಕೆನ್ನುವ ಗೊತ್ತುವಳಿಯನ್ನು ತರುವುದು ಹಿತಕರವಲ್ಲ—ಎಂಬ ಮಾತು ತಿಳಿಯದಷ್ಟು ನಿಕಿತಾ ಮೂರ್ಖನಲ್ಲ. ಎಂತಲೇ ಮೆಲನ್‌ಕಾವ್ಹ್ ತಾನಾಗಿಯೇ ತನ್ನ ಮುಖ್ಯ ಪ್ರಧಾನ ಪದವಿಯನ್ನು ಬಿಟ್ಟುಕೊಡಬೇಕೆಂದು ಆತ ಹೊಂಚುಹಾಕಿದ. ಮೆಲನ್‌ಕಾವ್ಹ್‌ದ ತನ್ನಿಂದಾದ ತಪ್ಪುಗಳನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುವ ಗುಣವು ನಿಕಿತಾನಿಗೆ ಪಥ್ಯಕರವೆನಿಸತೊಡಗಿತು. ರಾಜೀನಾಮೆ ಕೊಡಬೇಕೆನ್ನುವ ಸೂಚನೆಯನ್ನು ನಿಕಿತಾನು, ಬುಲ್ಗಾನಿನ್‌ನ ಹೆಂಡತಿಯ ಮುಖಾಂತರ ಮೆಲನ್‌ಕಾವ್ಹ್‌ನ ಹೆಂಡತಿಗೆ ಮುಟ್ಟಿಸಿದನು. ಮೆಲನ್‌ಕಾವ್ಹ್‌ನ ಹೆಂಡತಿ, ರಾಜೀನಾಮೆ ಕೊಡುವುದರ ಸಲುವಾಗಿ ಗಂಡನಿಗೆ ಒತ್ತಾಯಪಡಿಸಿದಳು. ಮೆಲನ್‌ಕಾವ್ಹ್ ರಾಜೀನಾಮೆಯನ್ನಿತ್ತನು. ನಿಕಿತಾ ನಿಶ್ಚಿಂತನಾದನು.

ಕೃಶ್ಚೆವ್ಹ್—ಬುಲ್ಗಾನಿನ್-ಜೋಡಿ

ಮೆಲನ್‌ಕಾವ್ಹನ ರಾಜೀನಾಮೆಯಿಂದ ತೆರವಾದ ಸ್ಥಳಕ್ಕೆ ಬುಲ್ಗಾನಿನ್‌ನನ್ನು ತರಲಾಯಿತು. ಈ ಪ್ರಕಾರವಾಗಿ ಕೃಶ್ಚೆವ್ಹ್—

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

		ರೂ ನ. ಪೈ.
ಜೈನಧರ್ಮ		೧೫—೦
	(ಶ್ರೀ. ಮಿರ್ಜಿ ಅಣ್ಣಾರಾಯರು.	
ಭಾರತದ ಬೆಳಕು	,,	೧—೫೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೫೦
ಸಮಯಸಾರ	,,	೧—೫೦
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಮೌಲ್ಯಮೂಪಣ	,,	೦—೭
ಭರತೇಶನ ನಾಲ್ಕು ಚಿತ್ರಗಳು	,,	೧—೨
ಕೆನೆವೊಸರು (ಮಕ್ಕಳ ಕತೆ)	,,	೦—೩

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿಸೇವಾಸದನ, ಸೇಡಬಾಳ

ಪೋ. ಸೇಡಬಾಳ, (ಜಿಲ್ಲಾ ಬೆಳಗಾಂವಿ)

ಬುಲ್ಗಾನಿನ್ ಜೋಡಿಯು ವಿಜಯವನ್ನು ಹೊಂದಿತು ಈ ವಿಜಯದ ಹಿಂದೆ ಹಲವಾರು ಘಟನೆಗಳು ಅಡಗಿವೆ ಅದಕ್ಕಾಗಿ ಈ ಗೆಲವಿನ ಬೆಲೆಯೆಂದು ಹಲವಾರು ಸುಧಾರಣೆಗಳು ಅಲ್ಲಿ ಜಾರಿಯಲ್ಲಿ ಬಂದುವು. ಅನೇಕರಿಗೆ ಹೆಜ್ಜೆನ ಹುದ್ದೆಗಳು ದೊರೆಕಿದುವು ನ್ಯಾಯದ ಹೊಸ ಪದ್ಧತಿಯನ್ನು ಅಸ್ತಿತ್ವದಲ್ಲಿ ತರುವ ಬಗೆಗೆ ಅಭಿವಚನವನ್ನು ಕೊಡಲಾಯಿತು ಪರದೇಶಗಳ ಸಂಚಾರವನ್ನು ಈ ಜೋಡಿಯು ಕೈಕೊಂಡಿತು. ಮಾರ್ಶಲ್ ಟಿಟೋನ ಜತೆಯಲ್ಲಿ ಸ್ನೇಹಹಸ್ತವನ್ನು ಚಾಚಿತು. ಟಿಟೋ ಮತ್ತು ರಶಿಯಾದ ಸಂಬಂಧ, ಬೇರಿಯಾನಿಂದಲೇ ಕೆಟ್ಟಿತ್ತು—ಎಂದು, ಅಪವಾದನೆಯನ್ನು, ಸತ್ತುಹೋದ ಬೇರಿಯಾ ಮತ್ತು ಸ್ಟಾಲಿನ್‌ರ ಮೇಲೆ ಹೊರಿಸಲಾಯಿತು.

ತಿರನೆಯ ಪಕ್ಷಪರಿಷತ್ತು

ರಾಜಕೀಯ ಹಿಡಿತವನ್ನು ಸ್ವಲ್ಪ ಸಡಿಲಿಸಿದರೆ ಅದು ಮೇರೆ ಮೀರಿ ಸಡಿಲಾಗುವ ಸಂಭವ ಹೆಚ್ಚು—ಎನ್ನುವ ಭೀತಿ ನಿಕಿತಾನಿಗೆ ಇದ್ದಿತು. ಆದರೆ ನೌಕರಶಾಹಿಗೆ ಈ ಅಂಜಿಕೆ ಇರಲಿಲ್ಲ. ಇದಕ್ಕಾಗಿ ನೌಕರಶಾಹಿಯ ಧುರೀಣ ಮಿಕೋಯಾನ್, ಸ್ಟಾಲಿನ್ ಮತ್ತು ಸ್ಟಾಲಿನ್‌ವಾದವನ್ನು ಸಂಪೂರ್ಣವಾಗಿ ಮೂಲೆಗೊತ್ತಿಬಿಡುವ ಬೇಡಿಕೆಯನ್ನು ಮಂಡಿಸತೊಡಗಿದನು. ಹಾಗೆ ಮಾಡದ ಹೊರತು, ನೌಕರಶಾಹಿಯ ಸ್ಥಾನ ಸ್ಥಿರವಾಗುವಂತಿರಲಿಲ್ಲ. ಈ ದಿಶೆಯಲ್ಲಿ ಅರ್ಧದಾರಿಯವರೆಗೆ ಬರುವುದಕ್ಕೆ ನಿಕಿತಾ ಒಪ್ಪಿಕೊಂಡಿದ್ದನು. ಹಾಗೆ

ಮಾಡದ ಹೊರತು ಗತಿ ಇರಲಿಲ್ಲ. ಏಕೆಂದರೆ ಮಿಕೋಯಾನನಿಗೆ ಪರ್ಯಾಯವಾಗಿ ಬುಲ್ಗಾನಿನ್‌ನ ಬೆಂಬಲವಿದ್ದಿತು. ಪಕ್ಷ ಪರಿಷತ್ತಿನಲ್ಲಿ ಮಿಕೋಯಾನನ ಉತ್ಸಾಹಪೂರ್ಣ ಭಾಷಣ ಕೇಳಿ, ಪಕ್ಷದ ಜನವೆಲ್ಲ ಅತನ ಬೆಂಬಲಿಗರಿದ್ದಾರೆಂಬುದನ್ನು ಕಂಡು ಹಿಡಿದ ನಿಕಿತಾ, ಪರಿಸ್ಥಿತಿಯನ್ನು ಗಮನಿಸಿ. ಸ್ಟಾಲಿನ್‌ನನ್ನು ಬಾಯಿತುಂಬ ತೆಗಳಿ, ಮಾರ್ಶಲ್ ಝುಕೋವನನ್ನು ಪ್ರೆಸಿಡಿಯಮ್‌ದ ಎರಡನೆ ಸಭಾಪತಿ ಎಂದು ಅರಿಸಿ, ನೌಕರಶಾಹಿಯ ಬೆಂಬಲಿಗನೆಂದು ತೋರಿಸಿಕೊಟ್ಟನು.

೧೯ನೇಯ ಪರಿಷತ್ತು ಅರಿಸಿದ ಮಧ್ಯವರ್ತಿ ಸಮಿತಿಯಲ್ಲಿಯ ಪ್ರತಿನಿಧಿತ್ವ ಪಕ್ಷ ಸಂಘಟನೆಯನ್ನು ನಡೆಸುವ, ಪ್ರಮಾಣ (ನೂರಲ್ಲಿ) ೫೫ ನೌಕರ ಶಾಹಿ, ೨೦ ಸೇನೆ, ೧೫ ರೈತರು, ೧೦ ಕೆಲಸಗಾರರು ಹೀಗಿದ್ದಿತು.

೨೦ ನೆಯ ಪರಿಷತ್ತಿನ ಚುನಾವಣೆಯಲ್ಲಿ ಮೊದಲನೆಯ ಪಕ್ಷದ ಪ್ರಮಾಣದಲ್ಲಿ ೨೦ ನ್ನು ಕಡಿಮೆ ಮಾಡಿ, ಎರಡನೆಯ ಮತ್ತು ಮೂರನೇಯ ಪಕ್ಷಗಳ ಪ್ರಮಾಣವನ್ನು ಹತ್ತತ್ತರಂತೆ ಹೆಚ್ಚಿಸಲಾಯಿತು. ಮೊದಲನೆಯ ಪಕ್ಷವೇ ಎಂದರೆ ನೌಕರ ಶಾಹಿಯೇ ನಿಕಿತಾನಿಗೆ ಬೆಂಬಲ ಕೊಡುವ ಪಕ್ಷವಾಗಿದೆ. ಅದರ ಪ್ರಮಾಣ ಕಡಿಮೆಯಾದುದರಿಂದ, ನಿಕಿತಾ ರೈತ-ಕೆಲಸಗಾರರ ಬೆಂಬಲವನ್ನು ಪಡೆಯುವ ಪ್ರಯತ್ನ ನಡೆಸಿರುವನು. ಈ ಬೆಂಬಲವನ್ನು ಪಡೆಯುವುದಕ್ಕೋಸ್ಕರ, ರಶಿಯಾ ದೇಶ ಕೇವಲ ನೌಕರಶಾಹಿಯ ಮೇಲೆ ನಿಲ್ಲದೇ ಸಾಮಾಜಿಕ ನ್ಯಾಯವೇ ಅದರ ಅಡಿಗಲ್ಲು ಎಂಬ ಧೋರಣೆಯನ್ನು ಅನುಸರಿಸಿದ್ದಾನೆ. ಸೇನೆಯಲ್ಲಿ ಕೆಲವರು ಈ ಧೋರಣೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ರೈತ ಕೆಲಸಗಾರರ ಗುಂಪಿನೊಳಗಿಂದಲೇ ನಿಕಿತಾ ಕರ್ತೃತ್ವ ಶಕ್ತಿಯಿಂದ ಮೇಲಿನ ಸ್ಥಾನಕ್ಕೆ ಬಂದಿರುವನು. ಆದಕಾರಣ ಸಾಮಾಜಿಕ ನ್ಯಾಯದ ವಿಷಯದಲ್ಲಿ ಅತನಿಗೆ ಆಸ್ಥೆ ಇದೆ ರಶಿಯಾದ ನೌಕರ ಶಾಹಿಯ ತೊಂದರೆಗಳ ಅನುಭವವೂ ಅತನಿಗೆ ಸಾಕಷ್ಟಿದೆ. ಅದರ ದೋಷಗಳು ಅತನಿಗೆ ಗೊತ್ತಿವೆ. ಆ ದೋಷಗಳ ಉದಯೋಗವನ್ನು ಅತ ಜಾಣತನದಿಂದ ಮಾಡಿಕೊಳ್ಳಬಲ್ಲನು. ಇಡಿ ಜಗತ್ತನ್ನೇ ಸಂರಕ್ಷಿಸುವ ಸಂದೇಶ ರಶಿಯಾದಲ್ಲಿದೆ—ಎನ್ನುವ ಕಲ್ಪನೆಯು ಹರಡಿಕೊಂಡ ವಾತಾವರಣದಲ್ಲಿ ನಿಕಿತಾನ ರಾಜಕೀಯ ಜೀವನಕ್ಕೆ ಪ್ರಾರಂಭವಾಯಿತು. ನಿಕಿತಾನೂ ಇನ್ನೂ ಹಾಗೆಯೇ ತಿಳಿದುಕೊಂಡಿರುವನು. 'ಸತ್ಯ' ಎಂಬ ವಸ್ತು ತನ್ನಲ್ಲಿಯೇ ಇದೆ—ಎಂದು ಭಾವಿಸಿರುವ-ವಿರೋಧಕರನ್ನು ಬಗ್ಗುಬಡಿಯುವ ಕೆಲಸದಲ್ಲಿ ತುಂಬಾ ಭಾಗವಹಿಸಿರುವ—ನಿಕಿತಾನಿಗೆ ಆ ತಂತ್ರ ಕರಗತವಾಗಿದೆ ಪೂರ್ಣವಾಗಿ ವೈಯಕ್ತಿಕ ಸ್ವಾಮಿತ್ವವನ್ನು ಕಾಪಾಡುವ ಕೆಲಸದಲ್ಲಿ ಈಗಲೂ ಆಸ್ಥೆವಹಿಸಿದ್ದಾನೆ ಈ ಕಾರಣಗಳ ಮೂಲಕ ಅತನ ನೈತೃತ್ವವನ್ನು, ಹೊಸ ಝುಟೆಂಗ್‌ಶಾಹಿಯು ಉದಯವೆಂದು ತಿಳಿಯಬೇಕೋ ಏನೋ—ಎಂಬುದು ತಿಳಿಯದಾಗಿದೆ.

—: ಓ! ದೇವ :—

(ಭಾವಗೀತ)

ಶೀ. ಬಾ. ಸದಾಶಿವ ಕುಂಚೂರ, ಹುಬ್ಬಳ್ಳಿ.

(ಕೊಳಲೂದುವ ಕೃಷ್ಣಮೂರ್ತಿಯ ಕಂಡು)

೧

ನಿನ್ನೊಲವಿನ ಕೊಳಲ। ನೀನೆ ನುಡಿಸುತಿರಲು
ರಸಗಾನ ಹರಿಯುತಿದೆ
ನಿಜನಲಿಯ ತೋರುತಿದೆ।

೨

ನವ್ಯ ಭವ್ಯ ಬನದ। ಬೆಳಸಿ ದೇಹರದೊಳು
(ಗಾರುಡಿಗ) ಆಡಿಸುವೆ
ಈ ಜೀವದಲೆನೋವ।

೩

ಶಿವಕೊಳಲದು ಛಂದ। ದೇವನುಡಿಸಲಾದ
ಆಡಿಸುತ ಭವಗೀತ
ಓಡಿಸುತ ಜಗದನೋವ!

೪

ಮನದ ವನದ ನವಿಲು। ದೇವಗಾನ ಕೇಳಿ
ಮಃಮಕಾರನಳಿಯುತಿದೆ
ಸಂಗಮವ ಸೇರುತಿದೆ,।

೫

ನಿನ್ನ ಕೊಳಲುಲಿಯುಂ। ಕವಿಗದನುಳಸೆಲೆಯು
ಅನವರತ ಹರಿಯುತಿದೆ
'ಓಳಿ' ಬೆಳಕ ಸೂಸುತಿವೆ!

೬

ದೇವ! ಜಗದಜೀವ। ನಿನ್ನ ಗಾನವಿಂಪ
ಪಡೆಯುತಲಿ ಬಾಳುತಿದೆ
ಮಂಗಳವ ಪಾಡುತಿದೆ।

೭

ಸಾವರಸದ ಗಾನ। ಸುಧಾರಸದ ತಾನ
ನುಡಿಸುವುನ ದನಿವತನ
ಎನ್ನಾತ್ಮ ಕಣಿವತನ.

ಜೋಗವಾಹಿನಿ

©ೀ. ಅರವಿಂದ ಪಾಡಳರ್ಣ, ಬಿ. ಎಸ್ಸಿ., ಎಲ್‌ಎಲ್. ಬಿ ಮುಂಬೈ

ವಿಶ್ವವೇ ಶಿಲ್ಪಿಯಾಗಿ ಯೋಚಿಸುತಿರಲು
ಬಸಿರಿನ ಅಳಅಳದಿಂದ ನೆಗೆಯಿತೊಂದು ಬುಗ್ಗೆಯರಳು
ತಪ್ಪಲುಮನದಲ್ಲಿ ಹೊನಲಾಗಿ ಧುಮುಕುತಿನೆ ಹಗಲಿರುಳು
ಓ ಶರಾವತಿ ಓ ವಿಶ್ವಧಾವತಿ,
ಅಹಾ ಏನದರ ಪ್ರಚಂಡ ತಾಂಡವ ಶಕ್ತಿ!
ತಳದ ಕೊಳೆಕಸ ಪಾತಾಳಕ್ಕೆ ಮೆಟ್ಟಿ
ಎದುರಿನ ಶಿಲಾಭಿತ್ತಿ ಒಡೆದು ಮಣ್ಣಿನಲೊಟ್ಟಿ
ಕೈಯೊಡ್ಡುವ ಕುಸುರುಕುಸುರುಗಳ ನುಂಗಿ
ನಿಶಾಂತವಾಗಿ ಅನಂತವಾಗಿ ಹರಿಯುತಿದೆ
ಸ್ಫಟಿಕವಾಹಿನಿಯಾಗಿ ಗಗನಗಾಮಿನಿಯಾಗಿ! ೧೦

ಅಹಾ ಪಚ್ಚೆಯ ನಗೆಯೇ ಹಸುರಾಗುತಿದೆ ಅದರ ಜೊತೆಯಲ್ಲಿ
ರತ್ನದ ಪ್ರಭೆಯೇ ಇಬ್ಬನಿಯರಳಾಗುತಿದೆ ಹವೆಯಲ್ಲಿ
ನೀಲವೇ ಮುಗಿಲಾಗಿ ಚುಕ್ಕಿ ಕೈತೋರುತಿದೆ ಮೇಲೆ,
ನಾದವೇ ಹಕ್ಕಿ ಕಿಲಕಿಲ ಹೊನಲಬುದ್ಬುದವಾಗಿ ಮೀರುತಿವೆ ಎಲ್ಲೆ,
ಭೂಗರ್ಭದ ಕ್ಷಾರಕುಡದಲಿ ಜನಿಸಿಯೂ ಹರಿಯುತಿದೆ
ಕ್ಷೀರವಾಗಿ ವಿದ್ಯುಲ್ಲತೆಯಾಗಿ ವೆತೆಯಾಗಿ ಕವಿತೆಯಾಗಿ.
ಅಮೋ ಇಳಿಯುತಿರುವಳು ಅಪ್ಸರೆಯಹಾ!
ಊರ್ವಶಿಯೋ? ಇಂದ್ರನೂ ಮುಖ ತಗ್ಗಿಸಬಹುದು.
ಮೇನಕೆಯೋ? ಬ್ರಹ್ಮರ್ಷಿಯು ಸಮಾಧಿಯೂ ನಶಿಸಬಹುದು.
ಏನು ಚೆಲುವೆ! ಏನವಳ ಬಲವೇ! ೨೦

ಕೈ ಸ್ಪರುಶಕೆ ಮಾತ್ರ
ಹುಡಿಹುಡಿ ರತ್ನಮಾಣಿಕ್ಯವಾಗುತಿದೆ.
ಶಿಲೆ ಶಿಲೆ ವಜ್ರದ ಭಿತ್ತಿಮಾಗುತಿದೆ.
ಅರಳಿ ಅರಳಿ ಜರತಾರಿ
ಅಡಿಅಡಿಯಲ್ಲಿ ಮಿಂಚಿನ ದಾರಿ.
ಉಸುಕಿನಿಂದೆದ್ದವು ಗಿಡ ಮರ ಲತೆ ಕುಸುಮ ಚೆಲ್ಲಿ
ಮಡುವಿನಿಂದೆದ್ದಿತು ರತ್ನಕಾರಂಜಿ ಹವೆಯಲ್ಲಿ
ಮೃತಾ-ಶಿಲೆಗಳೊಳಗಿಂದೆದ್ದಿತೋ ಅಮರಾವತಿ
ಓ ಶರಾವತಿ.
ಬಾ ಚೆಲುವೆ ಬಾ ನನ್ನ ಜೀವದ ಗೆಲುವೆ ೩೦

ಎದೆಯಾಳದಲೆಯಲೆಗಳೊಡನೆ ಉಯ್ಯಲೆಯಾಡುವೆ
ನೇತ್ರವ್ಯೋಮದ ಕೊನೆಕೊನೆಯಲಿ ಸೆಲೆಯಾಡುವೆ
ಒಮ್ಮೆ ಬಾ.
ಮತ್ತೆ ಈ ಗೋಬಿಯನ್ನು ವೃಂದಾವನಿಸು.
ಈ ಮುಸಣಿಶಯ್ಯೆಯನು ಗೋಕುಲಿಸು.
ಈ ಹುಡಿಕಟ್ಟಿಯನು ತಾಜಮಹಲಿಸು.
ಇಗೋ ನಾ ನಿನ್ನವನಾವೆ.
ನನ್ನ ಈ ಬಂಗಲೆ, ಕಾರು, ಬ್ಯಾಂಕುಬೆಲೆನ್ನು
ಸರ್ವಸ್ವ ಸಮರ್ಪಿಸುವೆ ನಿನ್ನಡಿಯಲ್ಲಿ,
ಬಾ ಒಮ್ಮೆ ನನ್ನನುದ್ಧರಿಸು. ೪೦

ಓ ಚತುರ್ಮುಖಮಾನವ
ಅನಿಂತಹ ದಿವ್ಯವೀ ಕಮಲಾಸನಯೋಗ!
ಈ ನಿರಂತರ ರಚನಾಲೋಭ!
ಬಾಂಬು ತೋಪುಗಳು ಭಸ್ಮೀಕರಿಸಿದ ಈ ಹುಡಿಹುಡಿ-
ಯೊಳಗಿಂದ
ಮತ್ತೆ ತಲೆಯೆತ್ತಿ ಕರೆಯುತಿದೆ ಹಿರೋಶಿಮಾ
ಬರ್ಲಿನ್ನುಗಳು
ಜಗವ ಜನವ ಅಪ್ಪದಿಶಾಧಿಪತಿಗಳನ್ನು
ಪ್ರಳಯಜಲದಿಂದೆದ್ದ ಸೃಷ್ಟಿಯಂತೆ.
ಮಣ್ಣು ಬೂದಿಯ ಗಾದಿಯಲ್ಲೇ
ಉಗಮಿಸುತಿವೆ ಚೇತನ ಯುಗಾದಿಯಲ್ಲೇ?
ಅದಕ್ಕೆ ಅಂತ್ಯಸಂಧಿಯೆಲ್ಲೇ? ೫೦

ಅಗೋ ಹರಿಯುತಿದೆ ಶರಾವತಿ
ಅನಾದಿಯಾಗಿ, ಅನಂತವಾಗಿ, ಶಾಂತವಾಗಿ,
ಮತ್ತೆ ಧುಮುಕುತಿದೆ ನೆಲಕ್ಕೆ
ಎತ್ತರದ ಮೇಲಿಂದ
ಕಾಲಡಿಯಂ ಯಂತ್ರಜಾಳಿಗೆಯ ಸ್ವಿಚ್ಚೊತ್ತಿ.
ಅದಾಗ ಹರಿಯುತಿದೆ ಝರಿಝರಿ ಪಾಳಿನದಲ್ಲಿ
ಮೆರೆಯುತಿವೆ ಜನ ಬಂಜರಿನಲ್ಲಿ
ಉರಿಯುತಿವೆ ದೀಪ ಮನೆಮನೆಗಳಲ್ಲಿ
ನೆಲದ ಪ್ರಾಣವೇ ಮೊರೆಯುತಿದೆ ಅನಂತವಾಗಿ
ದಿಗಂತ ಪ್ರತಿಧ್ವನಿಸಿ,
ಓ ಜೋಗವಾಹಿನಿ ರಸಕಾಮಿನಿ! ೬೦

ನಾನು ಬರೆದ ದೊಡ್ಡ ಪತ್ರ

(ಹರಟೆ)

ಶ್ರೀ. ಸಂಜೀವ ಲಕ್ಷ್ಮೀಶ್ವರ ಬಿ. ಎ. ಮುಂಬಯಿ

ಜೀವನವನ್ನು ವಾಸ್ತವ ದೃಷ್ಟಿಯಿಂದ ಮಾತ್ರ ನೋಡುವವರಿಗೆ ಪತ್ರ ಬರೆಯಲು ವಿಷಯಗಳೇ ದೊರೆಯುವುದಿಲ್ಲ. ಅಂತಹರು ಬರೆದ ಪತ್ರಗಳೆಂದರೆ, ಕೇವಲ ಎಣಿಕೆಯ ಮಾತುಗಳಿಂದ ಕೂಡಿರುವುವು. ಅದರೆ ಜೀವನವನ್ನು ಭಾವನೆಯ ದೃಷ್ಟಿಂದ ನೋಡುವವರಿಗೆ ವಿಷಯದ ಕೊರತೆ ಬೀಳುವುದೇ ಇಲ್ಲ! ಅಂತಹರ ಪತ್ರಗಳು ಸಾಹಿತ್ಯದ ಮಟ್ಟಕ್ಕೂ ಏರಿ ನಿಲ್ಲಬಹುದು!

●

ಪತ್ರ ಬರೆಯುವುದು ಒಂದು ಕಲೆಯೇ ಸರಿ ಅಸರೆ ನನ್ನ ಪಾಲಿಗೆ ಅದೊಂದು ಕೊಲೆಯಾಗಿ ಪರಿಣಮಿಸಿದೆ ಕೊಲೆ ಮಾಡಲು ಒಬ್ಬ ಸಾಮಾನ್ಯ ಮನುಷ್ಯ ಹೇಗೆ ಹಿಂಜರಿಯುವನೋ, ಹಾಗೆಯೆ ನನಗೂ ಪತ್ರ ಬರೆಯುವುದೆಂದರೆ ಮೈಮೇಲೆ ನವಿರೇಳುವವು. ಕೆಲವರಿಗಂತೂ ಪತ್ರ ಬರೆಯುವುದೊಂದು ಹುಚ್ಚೇ ಹಿಡಿದಿರುವುದು. ಅವರ ಎಲ್ಲ ಜಾಣತನವು ಅದರಲ್ಲಿಯೇ ವ್ಯಯಿಸಿಹೋಗುವುದು ಕವಿಗಳು ಕವಿತೆ ಬರೆಯುವಾಗ ಸ್ಫೂರ್ತಿ ಬರುವಂತೆ, ಈ ಮಹಾಶಯರಿಗೂ ಪತ್ರ ಬರೆಯಲು ಕುಳಿತರೆಂದರೆ ಎಲ್ಲಿಲ್ಲದ ಸ್ಫೂರ್ತಿ ಬರುವುದು.

ಕಚೇರಿಯಲ್ಲಿ ಸರಕಾರದ ನೂರಾರು ಪತ್ರವ್ಯವಹಾರಗಳನ್ನು ಮಾಡುತ್ತಿರುವ ನನಗೆ, ಖಾಸಗೀ ಪತ್ರ ಬರೆಯುವುದೆಂದರೆ ಮಾಫಿ ಸ್ನಾನ ಮಾಡಿದಂತೆನಿಸುವದು. ಕಾಟ ತೀರಿಸಲೆಂದು ಏನಾದರೂ ನಾಲ್ಕು ಸಾಲು ಗೀಚಿಬಿಸಾಕುವುದು ನನ್ನ ರೂಢಿ ಈ ನನ್ನ ನಾಲ್ಕು ಸಾಲಿನ ಅಸ್ತವ್ಯಸ್ತ ಕಾಗದ ನೋಡಿ, ನನ್ನ ಬಂಧುಗಳೆಲ್ಲ ನನ್ನನ್ನು ಕುರಿತು ಹಾಸ್ಯ ಮಾಡುವುದುಂಟು. ಇಷ್ಟೇ ಅಲ್ಲ, ನನ್ನ ಮಿತ್ರನೊಬ್ಬ, ನನ್ನ "ಪೇಟೆಂಟ್" ಪತ್ರಗಳನ್ನು ಓದಿ, ನನಗೆ, ಒಂದು ಸಾವಿರ ಅದೇ ಮಜಕೂರಿನ ಕಾರ್ಡುಗಳನ್ನು ಮಾಡಿಸಿ, ಪ್ರತಿವಾರಕ್ಕೆ ಒಂದೊಂದರಂತೆ ಮನೆಯವರಿಗೆ ಹಾಗೂ ಇಷ್ಟ ಮಿತ್ರರಿಗೆ, ಕಾರೀಮು ಹಾಗು ವಿಳಾಸ ಬರೆದು ಕಳಿಸಲು ಸೂಚಿಸಿದ. ಹೀಗಾಗಿ ನನ್ನ ಪತ್ರಗಳು ಎಲ್ಲರ ಹಾಸ್ಯದ ವಿಷಯಗಳಾಗಿವೆ.

ನಮ್ಮಲ್ಲಿ ಖಾಸಗೀ ಪತ್ರಗಳನ್ನು ಬರೆಯಲು ಕೂಡ ಅನೇಕಾನೇಕ ಶಿಷ್ಟಾಚಾರಗಳಿವೆ. ಕೆಲವರು ಪತ್ರಗಳ ಮೇಲೆ ತಮ್ಮ ಕುಲದೇವರ ಇಲ್ಲವೆ ಆರಾಧ್ಯ ದೇವತೆಯ ಹೆಸರನ್ನು ಬರೆಯುವ ರೂಢಿಯುಂಟು. ಕನಿಷ್ಠ ಪಕ್ಷಕ್ಕೆ 'ಶ್ರೀ' 'ಕ್ಷೇಮ' ಮುಂತಾದುವುಗಳನ್ನಾದರೂ ಬರೆಯಲೇಬೇಕೆಂಬ ಅಭಿಪ್ರಾಯದವರಿದ್ದಾರೆ. ಕಾಲಮಾನ ಪರಿಸ್ಥಿತಿ ಬದಲಾಗಿ ಸುಧಾರಿಸಿದ ಕೆಲವರು "ಜೈಹಿಂದ್" "ಜೈಕರ್ನಾಟಕ" ಎಂದು ಬರೆದು, ತಮ್ಮ ದೇಶಪ್ರೇಮವನ್ನು ಖಾಸಗೀ ಪತ್ರಗಳಲ್ಲಿ ಕೂಡ ವ್ಯಕ್ತಗೊಳಿಸುವುದುಂಟು. ನೇಳೆಯ ಅಭಾವವಿದ್ದ ನಾನು ಇವಾವ ಶಿಷ್ಟಾಚಾರಂಗಳನ್ನು ಪಾಲಿಸದೇ ಪತ್ರ ಬರೆದದ್ದಕ್ಕಾಗಿ ಅನೇಕರ ಆಕ್ಷೇಪಣೆಗೆ ಗುರಿಯಾಗಿದ್ದೇನೆ

ಪತ್ರ ಬರೆಯುವುದರಲ್ಲಿಯೂ ಅನೇಕಾನೇಕರು ತೀಕ್ಷ್ಣವಿಮರ್ಶೆಗಳಿಗೆನಿಸಿಕೊಂಡವರಿದ್ದಾರೆ. ಕೆಲವರಿಗಂತೂ ಮೂರು ನಾಲ್ಕು ಹಾಳೆಗಳಷ್ಟಾದರೂ ಬರೆಯದಿದ್ದರೆ ಪತ್ರ ಬರೆದಂತೆ ಎನಿಸುವುದಿಲ್ಲ. ಇಷ್ಟೇ ಅಲ್ಲದೆ, ಪತ್ರದ ತುಂಬೆಲ್ಲ ತಾವು ಶಾಲೆ ಕಲಿಯುವಾಗ ಕಂಠಪಾಠ ಮಾಡಿದ ಗಾದೆ ಮಾತುಗಳನ್ನು, ಸಂಸ್ಕೃತ, ಹಳಗನ್ನಡ ಪದ್ಯಗಳನ್ನು, ಸಂತರ ವಚನಗಳನ್ನು ಉದಹರಿಸಿ ಕಾಗದ ತುಂಬುವುದುಂಟು. ತಮ್ಮ ಪತ್ರಗಳ ಮುಖ್ಯ ಅಂಶಗಳನ್ನು ಬಣ್ಣದ ಪೆನ್ಸಿಲಿನಿಂದ ಗುರುತು ಮಾಡಿ ಪತ್ರಗಳನ್ನು colour by technicolour ಮಾಡುವರು. ನನ್ನೊಬ್ಬ ಮಿತ್ರ ಮಹಾಶಯನ ಉದಾಹರಣೆಯುಂತೂ ತೀರ ವಿಚಿತ್ರವಾಗಿರುವದು. ಮನೆಗೆ ಕ್ಷೇಮಸಮಾಚಾರದ ಪತ್ರ ಬರೆಯಲೆಂದು ಒಂದು ಪೋಸ್ಟ್‌ಕಾರ್ಡು ತೆಗೆದುಕೊಂಡು ಬರೆಯುಲು ಪ್ರಾರಂಭಿಸುವನು. ಅರ್ಧದಷ್ಟು ಮಜಕೂರು ಬರೆದ ಮೇಲೆ ಒಮ್ಮೆ ಓದಿ ಏನೋ ಅವೇಶ ಬಂದು ಅದೆ ಒಂದು ಕಾರ್ಡು ಸಾಕಾಗದೇ "In continuation of my previous post card" ಎಂದು ಉಳಿದ ಮಜಕೂರನ್ನು ಮತ್ತೊಂದು ಕಾರ್ಡಿನಲ್ಲಿ ಬರೆದು ಎರಡನ್ನೂ ಪೋಸ್ಟ್ ಮಾಡುವುದುಂಟು.

ನನ್ನ ಇನ್ನೊಬ್ಬ ಮಿತ್ರ ತನ್ನ ಹೆಂಡತಿಗೆ ಏಳಿಂಟು ಪಾನುಗಳ ಪತ್ರಗಳನ್ನು ಬರೆಯುವುದುಂಟು. ಅದನ್ನು ನೋಡಿ, ಕಾಳಿದಾಸನ

ಅಮರ ಕಾವ್ಯ "ಮೇಘದೂತ"ದಲ್ಲಿ ಯಕ್ಷನು ತನ್ನ ಪತ್ನಿಗೆ ಮೋಡದ ಮುಖಾಂತರವಾಗಿ ಸಂದೇಶ ಕಳಿಸಿದ ವಿಷಯವನ್ನು ನನ್ನ ಮಿತ್ರನಿಗೆ ತಿಳಿಸಿ, ಯಕ್ಷನ ಬದಲು ನೀನು ನಿನ್ನ ಹೆಂಡತಿಗೆ ಇಂಥ ದೊಡ್ಡ ಸಂದೇಶ ಮೇಘರಾಜನ ಮೂಲಕವಾಗಿ ಕಳಿಸಿದ್ದರೆ, ಮೇಘರಾಜನು ಅದನ್ನು ಹೊರಲಾರದೇ ಎಲ್ಲಿಯಾದರೂ ಮಳೆ ಕಡವಿ ತನ್ನ ದುಃಖವನ್ನು ವ್ಯಕ್ತಪಡಿಸುತ್ತಿದ್ದ. ಎಂದು ಜೇಷ್ಟೆಮಾಡಿದ್ದೆ. ಅದಕ್ಕಂತೆಯೇ ಒಮ್ಮೆ ಅವನ ಹೆಂಡತಿಯಿಂದ ಒಂದು ದಪ್ಪ ಲಕೋಟೆ ಬಂದಿತು ಅದನ್ನು ತಂದ ಪೋಸ್ಟ್‌ಮನ್ನನ ಬೆನ್ನು ಬಾಗಿದ್ದು ನೋಡಿ, ನಾನು ನನ್ನ ಮಿತ್ರನಿಗೆ, "ನಿನ್ನ ಹಾಗು ನಿನ್ನ ಹೆಂಡತಿಯ ಜಡವಾದ ಪತ್ರಗಳನ್ನು ಹೊತ್ತು ತೊತ್ತು, ಪಾಪ, ಈ ಬಡ ಪೋಸ್ಟ್‌ಮನ್ನನ ಬೆನ್ನು ಬಾಗಿಹೋಗದೆ" ಎಂದು ಜೇಷ್ಟೆಮಾಡಿದ್ದೆ. ಅಂತೂ ಈ ಬಂದ್ದಿದ್ದ ಪತ್ರ ಬರೆಯುವವರು ದೇಶಕ್ಕೆ ಅತ್ಯಂತ ಉಪಯುಕ್ತ ವಾಗಿರುವರೆಂದು ಹೇಳಬಹುದು. ಏಕೆಂದರೆ ಇವರ ಪತ್ರವ್ಯವಹಾರದ ಮೂಲಕವಾಗಿ ಅಂಚೆಯಣ್ಣತೆಗೆ ಲಾಭವಾಗಿ ತನ್ಮೂಲಕ ದೇಶಕ್ಕೂ ಸಹಾಯವಾಗುವದು. ನಮ್ಮ ಯೋಜನೆಗಳ ಯಶಸ್ಸಿಗೆ ಹಣದ ಬೇಡಿಕೆ ಇದ್ದ ಈ ವೇಳೆಯಲ್ಲಿ ಹಿಂದಕ್ಕೆ Travel as you like ಎಂಬಂತೆ write as you like ಎಂಬ ಅಥವಾ "ಹೆಚ್ಚು ಆಹಾರ ತಿನ್ನಿರಿ" ಎಂಬಂತೆ "ಹೆಚ್ಚು ಪತ್ರ ಬರೆಯಿರಿ" ಮುಂತಾದ ಯೋಜನೆಗಳನ್ನು ಪ್ರಾರಂಭಿಸಲಡ್ಡಿ ಇಲ್ಲ.

ಚಿಕ್ಕ ಚಿಕ್ಕ ಪತ್ರ ಬರೆಯುವುದರ ಬಗ್ಗೆ ನನ್ನ ನೋಲಿನ ವಿಷಯು ಮಲ್ಲಿಯ ದೂಷಣೆಯನ್ನು ಕೇಳಿ ಬೇಸತ್ತ ನಾನು, ಒಮ್ಮೆಯಾದರೂ ಒಂದು ದೊಡ್ಡ ಪತ್ರ ಬರೆಯಬೇಕೆಂದು ಮನಸ್ಸುಮಾಡಿದೆ. ಅದಕ್ಕೆಂದೇ ೨ ಆಣೆಯ ಬಿಳಿಹಾಳೆಯನ್ನು ತಂದು ಫೌಂಟನ್‌ಪೆನ್ನಿನ ತುಂಬ ಮಸಿ ತುಂಬಿ, ಬರೆಯಲು ಸನ್ನದ್ಧನಾದೆ, ತಾನೂ ದೊಡ್ಡ ಲೇಖಕನಾಗ ಬೇಕೆಂದು ಹಂಬಲಿಸಿ ಕಾದಂಬರಿ ಬರೆಯಲು ಸನ್ನದ್ಧನಾದ ಒಬ್ಬ ಕವಿಯು "ಸಾಹಿತಿ"ಯಂತೆ ಸ್ಫೂರ್ತಿ ಬರಲೆಂದು ಚಹ ಕುಡಿದದ್ದಾಯಿತು. ಏನಾದರೂ ದೊಡ್ಡ ಪತ್ರ ಬರೆಯಲು ವಿಷಯವೇ ದೊರೆಯುದಾಯಿತು. ಮತ್ತೆ ಪ್ರತಿಸಲ ಬರೆಯುವಂತೆ, "ಇಲ್ಲಿ ಕ್ಷೇಮ, ತಮ್ಮ ಕ್ಷೇಮ ಸಮಾಚಾರ ತಿಳಿಸುತ್ತಿರಬೇಕು. ಎಲ್ಲ ಹಿರಿಯರಿಗೆ ನಮಸ್ಕಾರ ಕಿರಿಯರಿಗೆ ಆಶೀರ್ವಾದ" ಮುಂತಾದವುಗಳ ವಿನಾ, ಏನು ಬರೆಯಬೇಕು?—ಎಂಬುದು ತಿಳಿಯಲೇ ಇಲ್ಲ ತಲೆ ಕೆರೆದದ್ದಾಯಿತು ಏನಾದರೂ ಮಾಡಿ ಕನಿಷ್ಠ ಎರಡು ಹಾಳೆಗಳಷ್ಟಾದರೂ ಪತ್ರ ಬರೆಯಬೇಕೆಂದು ನಿರ್ಧರಿಸಿದ್ದೆ. ಎಷ್ಟು ವಿಚಾರಮಾಡಿ ತಲೆ ಕೆರೆದರೂ ಅರ್ಧಪಾನಿನಷ್ಟು ಕೂಡ ಬರೆಯಲು ಬೇಕಾದ ವಿಷಯ ದೊರೆಯಲಿಲ್ಲ. ಆಷ್ಟರಲ್ಲಿ, ನನ್ನ ಮಿತ್ರನೊಬ್ಬನು ತನ್ನ ಅನುಭವ ಹೇಳಿದ ಸಂಗತಿ ನೆನಪಾಯಿತು. ಅವನು ಇಂಟರ್‌ಪರೀಕ್ಷೆಗೆ ಕುಳಿತಾಗ

ಸ್ವಾತಂತ್ರ್ಯದಿನೋತ್ಸವದ ನಿಮಿತ್ತ

ಒಲವಿನ ಕಾಣಿಕೆ!

ನಮ್ಮ ಕೋಟ್ಯವಧಿ ಗ್ರಾಹಕರಿಗೆ, ಸಹಸ್ರಾವಧಿ ಶೋಕ–ವ್ಯಾಪಾರಿಗಳಿಗೆ ಮತ್ತು ಕಿರುಕೋಳಿ ವ್ಯಾಪಾರಿಗಳಿಗೆ

ESTRELA
RED TRADE MARK

ಎಸ್ತ್ರೇಲಾ ನಿರ್ಮಾತೃಗಳ
ಬೆಲೆಬಾಳುವ ಟಾರ್ಚುಗಳು, ಸೆಲ್ಲುಗಳು.
ಬ್ಯಾಟರಿಗಳು !

ಒಂದು ಪ್ರಶ್ನೆಯನ್ನು ಕೂಡ ಬಿಡಿಸಲು ಅವನಿಂದ ಆಗಲಿಲ್ಲವಂತೆ. ಆದರೆ ಹಾಗೆ ಸುಮ್ಮನೆ ಕುಳಿತು ನಗೆಗೀಡಾಗುವುದು ಅವನಿಗೆ ಬೇಕಿರಲಿಲ್ಲ ಮೂರು ತಾಸುಗಳ ವರೆಗೆ ಏನಾದರೂ ಬರೆಯುತ್ತಲಿರಬೇಕು – ಎಂದು ನಿರ್ಧರಿಸಿ, ಪ್ರಶ್ನಪತ್ರಿಕೆಯನ್ನೇ ೫–೬ ಸಲ ಉತ್ತರ ಪತ್ರಿಕೆಯಲ್ಲಿ ಬರೆದು ತೆಗೆದನಂತೆ ನಾನು ಅವನಂತೆಯೇ ಪ್ರತಿಸಲ ಬರೆಯುವ ನಾಲ್ಕು ಸಾಲಿನ ಮಜಕೂರನ್ನೇ ಪುನಃ ಪುನಃ ಬರೆದು, ಎರಡೇಕೆ ನಾಲ್ಕು ಹಾಳೆಗಳನ್ನು ತುಂಬಬಹುದು—ಎಂಬ ವಿಚಾರ ಹೊಳೆಯಿತು ತಿಂಗಳ ಕೊನೆಯ ವಾರದಲ್ಲಿ ಹತ್ತುರೂಪಾಯಿಯ ನೋಟು ಸಿಕ್ಕರೆ ಆಗುವಷ್ಟು ಸಂತೋಷವಾಯಿತು. ಅದರಂತೆ "ನಾನು ಆರಾಮ ಇದ್ದೇನೆ ನೀವು ಆರಾಮ ಇರಲು ಸಾಕು. ನಿಮ್ಮ ಪತ್ರ ಮುಟ್ಟಿ ಮಜಕೂರು ತಿಳಿಯಿತು. ಹಿರಿಯರಿಗೆ ನಮಸ್ಕಾರ ಕಿರಿಯರಿಗೆ ಆಶೀರ್ವಾದ ಹೇಳಬೇಕು" ಎಂಬ ಪೇಟೆಂಟ್ ವಿಷಯವನ್ನೇ ನಾಲ್ಕು ಪಾನು ತುಂಬುವ ತನಕ ಬರೆದು ತೆಗೆದು, ಸಹಿಮಾಡಿ, ಅಂಚೆಗೆ ಹಾಕಿ, ಒಂದು ಅಸಾಮಾನ್ಯ ಕೆಲಸ ಮಾಡಿದವನಂತೆ ಉಸುರ್ಗರೆದೆ. ಅಂದಿನ ನನ್ನ ಅನುಭವವು "ಎಲ್ಲದಕ್ಕೂ ಪಡೆದು ಬಂದಿರಬೇಕು" ಎಂಬಂತೆ "ದೊಡ್ಡ ಪತ್ರ ಬರೆಯಲು ಕೂಡ ಪಡೆದು ಬಂದಿರಬೇಕು" ಎಂಬುದನ್ನು ಕಲಿಸಿತು. ಅಂದಿನಿಂದ ದೊಡ್ಡ ಪತ್ರ ಬರೆಯುವ ಹವ್ಯಾಸವನ್ನೇ ಬಿಟ್ಟುಬಿಟ್ಟಿದ್ದೇನೆ.

ಗುಂಡೂನ ಗಂಡಾಂತರ

(ಒಂದು ಜೀವನ ಚಿತ್ರ)

"ಮಳರಂದ" ಬೆಂಗಳೂರು

ಪರಂಪರೆಯನ್ನು ಕಾಯ್ದುಕೊಂಡು ಬಂದಿರುವ ನಮ್ಮ ಸಾಮಾಜಿಕ ಅನೇಕ ಮನೆತನಗಳಲ್ಲಿ ನಾವು ಈ ಬಗೆಯ ಚಿತ್ರಗಳನ್ನು ಕಾಣಬಹುದು. ಇದೂ ಒಂದು ಬಿಡಲಾಗದ ಸಮಸ್ಯೆ. ತರುಣರು ತಮ್ಮ ವೈವಾಹಿಕ ಸ್ವಾತಂತ್ರ್ಯಕ್ಕಾಗಿ ಆತ್ಮೀಯರಿಂದ ದೂರವಾಗಬೇಕೇ? ಹಾಗಾಗಬಾರದೆಂದು, ಮನಸ್ಸಿಗೊಪ್ಪದ ಹೆಣ್ಣನ್ನು ಮದುವೆಯಾಗಬೇಕೆ?

"ಕಾಫಿ ಆರಿಹೋಗುತ್ತೆ ಸಾರ್" ಎನ್ನುವ ಹೋಟಲ ಸಪ್ಲಾಯರ್‌ನ ಕೂಗಿನಿಂದ ಎಚ್ಚತ್ತು, ಗುಂಡು "ಆಂ!—ಸರಿ—" ಎಂದು ತನ್ನೆದುರಿಗಿದ್ದ ಕಾಫಿಯ ಕಪ್ಪನ್ನು ಎತ್ತಿದ. ಕಾಫಿ ನಿಜವಾಗಿಯೂ ಆರಿತಣ್ಣಗಾಗಿ ಹೋಗಿದ್ದಿತು ಗುಂಡೂನ ಎಡಗೈಯಲ್ಲಿದ್ದ ಸಿಗರೇಟ್ ಕೂಡಾ ಮುಗಿಯುತ್ತ ಬಂದಿತ್ತು. ವೇಟ್ಟನೆ ಕಾಫಿ ಕುಡಿಯುತ್ತಿದ್ದಾಗ ಅವನಿಗೆ ತನ್ನ ಗಂಡಾಂತರದ ನೆನಪಾಯಿತು—

ಅಂದು ಅವನಿಗೆ ಏನೋ ಬೇಜಾರು. ಆಫೀಸರ್‌ನ ಅನುಮತಿ ಪಡೆದು ಮಧ್ಯಾನ್ಹ ಮನೆಗೆ ಬಂದಿದ್ದ. ಮನೆ ಸೇರಿದಾಗ ಅಲ್ಲಿ ಓಣಿಯ ಕೆಲವು ಮಹಿಳೆಯರು ಸಭೆ ಸೇರಿದ್ದರು. ಸದ್ದಾಗದಂತೆ ಗುಂಡು ಪಡಸಾಲೆಯ ಪಕ್ಕದ ಕೋಣೆಯನ್ನು ಹೊಕ್ಕು, ಅಲ್ಲಿದ್ದ ಕುರ್ಚಿಯಲ್ಲಿ ಕುಳಿತ. ಒಳಗೆ ನಡೆದ ಸಂಭಾಷಣೆ ಸ್ಪಷ್ಟವಾಗಿ ಕೇಳಿಬರುತ್ತಿತ್ತು.

"ನಿಮ್ಮ ಗುಂಡುರಾಯರ ವಯಸ್ಸೆಷ್ಟು—?" ಎಂಬ ಅಪರಿಚಿತ ಹೆಣ್ಣಿನ ಸ್ವರ ಕೇಳಿಸಿತು. ಗುಂಡುನ ಕಿವಿಗಳು ನಿಮಿರಿದವು. ತನ್ನ ವಿಷಯದಲ್ಲೆ ಚರ್ಚೆ ನಡೆದುದಕ್ಕೆ ಆಶ್ಚರ್ಯವಾಯಿತು.

"ಯಾರಿಗೆ, ನಮ್ಮ ಗುಂಡುಗೇನು?" ಎಂದು ಕೇಳಿದ ತನ್ನ ಅಕ್ಕನ ಧ್ವನಿಯನ್ನು ಗುರುತಿಸಿದ ಗುಂಡು ಕುತೂಹಲದಿಂದ ಮಾತುಗಳನ್ನಾಲಿಸತೊಡಗಿದ.

"ಹೌದ್ರಿ—"

"ಇದೇ ಬರುವ ಕಾರ್ತಿಕಕ್ಕೆ ಇಪ್ಪತ್ತೆಂಟು ಮುಗಿಯುತ್ತದೆ."

"ಇಪ್ಪತ್ತೆಂಟೆ?—ಮದುವೆ ಏಕ್ರಿ ಇನ್ನೂ ಆಗಲಿಲ್ಲ?" ಎಂದು ಪುನಃ ಅದೇ ಅಪರಿಚಿತ ಸ್ವರ ಆಶ್ಚರ್ಯಗೊಂಡು ಕೇಳಿತು.

"ಅದೊಂದು ದೊಡ್ಡ ರಾಮಾಯಣ ಕಣ್ರೀ. ನಿಮಗೆಲ್ಲಾ ಆ ಕಥೆ ಏಕೆ?—" ಎನ್ನುತ್ತ ಸೀತಮ್ಮ ದೊಡ್ಡದೊಂದು ನಿಟ್ಟುಸಿರನ್ನು ಬಿಟ್ಟಳು.

"ಹೋಗಲಿ ಬಿಡು ಸೀತಾ. ನಮಗೆಲ್ಲಾ ಏಕೆ ನಿನ್ನ ಮನೆಯ ಪುರಾಣವೆ. ಏನೋ, ಬೇಕಾದವರು ಎಂದಮೇಲೆ ವಿಷಯ ತಿಳಿಕೊಳ್ಳಬೇಕೆಂಬಾಕೆ ಅಷ್ಟೇ!—" ಎಂದು ನುಡಿದ ಸ್ವರ ಪಕ್ಕದ ಮನೆಯ ಕಾಶಮ್ಮನದೆಂದು ಗುಂಡುಗೆ ಗೊತ್ತು.

ಸೀತಮ್ಮನಿಗೂ ಕಾಶಮ್ಮನಿಗೂ ತುಂಬಾ ಸ್ನೇಹವಾದುದರಿಂದ, ಸೀತಮ್ಮನಿಗೆ ಏಕೆ ಮನಸ್ಸು ನೋಯಿಸಲಾಗಲಿಲ್ಲವೋ ಏನೋ, "ಸುಟ್ಟಾಗಬೇಡ ಕಾಶಕ್ಕಾ, ನಿಮ್ಮೆದುರಿಗೆ ಹೇಳಿಕೊಳ್ಳದಿದ್ದರೆ ಮತ್ತಾರ ಮುಂದೆ ಹೇಳಲಿ ಈ ಹೊಟ್ಟೆಶಂಕಟ—" ಎಂದು ಸೀತಮ್ಮ ನುಡಿದಾಗ, ತನ್ನ ಹುಸಿಕೋಪದ ಪರಿಣಾಮವಾದುದನ್ನರಿತು ಕಾಶಮ್ಮ ಹೆಮ್ಮೆ ಪಟ್ಟರಬೇಕು.

"ಅಂತಹ ಶಂಕುವೇನು ಬಂತ್ರಿ?" ಎಂದು ಮತ್ತೆ ಅದೇ ಅಪರಿಚಿತ ಸ್ವರ ಮೂದಲಿಸಿತು.

"ನೋಡ್ರಿ ರಂಗವ್ವಾ, ಗುಂಡು ನನ್ನ ತಮ್ಮನೇನೋ ನಿಜ. ಆದರೆ ನನಗಿದ್ದ ತಿಳುವಳಿಕೆ ಅವನಿಗಿಲ್ರಿ."

"ಏನ್ರಿ ಹೀಂಗಂತೀರಿ. ಹುಡುಗ ಬಿ. ಎ. ಪಾಸು ಮಾಡಿಕೊಂಡಿದ್ದಾನೆ. ಅವನಿಗೆ ತಿಳುವಳಿಕೆ ಇಲ್ಲ್ಯಾ?" ಎಂದು ಕೇಳಿದ ಸ್ವರ—ಅಪರಿಚಿತಳಾದ ರಂಗಮ್ಮನ ಸ್ವರವಾಗಿತ್ತು.

"ಬಿ. ಎ. ಆದರೇನು, ಎಂ. ಎ. ಆದರೇನು, ನಮ್ಮವರೂ ಅನ್ನೋ ಭಾವನೆ ಸ್ವಲ್ಪವಾದರೂ ಇಲ್ಲ. ಈ ನಡುವೆ ಅವನಿಗೆ ನನ್ನ ಕಂಡರೆ ಆಗದು."

"ಯಾಕೆ ನೀನೇನು ಮಾಡಿದೆ ಪಾಪ! ಜೋಟು ಹುಡುಗನ್ನ ಹಿಡಿದು ಓದಿಸಿ ಬರೆಯಿಸಿ ದೊಡ್ಡವನ ಮಾಡಿದೆ. ನಿನ್ನ ಕಂಡ್ರೆ ಅವನಿಗೇಕಾಗದು?" ಎಂದು ಕಾಶಮ್ಮ ಕುತೂಹಲವನ್ನು ವ್ಯಕ್ತ ಪಡಿಸಿದಳು.

"ರಟ್ಟಿ ಬಲಿತ ಮೇಲೆ ಯಾರು ಕೇಳ್ತಾರೆ. ದೊಡ್ಡವರೆಂಬ ಆದರ ಭಾವನೆ ಅವನಲ್ಲಿಲ್ಲ"

"ಹಾಗೇನಿಲ್ಲಾ ಕಣ್ರೀ ರಂಗವ್ಮಾ! ಯಾವಾಗಲೂ ಸೀತೆಯದು ಸ್ವಲ್ಪ ಉಪ್ಪುಖಾರಾ ಹೆಚ್ಚಿ ಮಾತನಾಡುವ ಸ್ವಭಾವ. ಹುಡುಗ ಭಾವಾ ಅಕ್ಕಾ ಅಂದ್ರೆ ಪ್ರಾಣಾ ಕೊಡುತ್ತಾನೆ!" ಎಂದು ನಡುವೆ ಬಾಯಿ ಹಾಕಿದಳು ಕಾಶಮ್ಮ

ಜಯುಂ

"ಪ್ರಾಣ ಕೊಡುತ್ತಾನಂತೆ, ಪ್ರಾಣ! ಕೇಳಿದಿರೇನ್ರಿ?—ರಂಗಮ್ಮಾ!! ಈ ಕಾಶಕ್ಕಗ ವಯಸ್ಸಾದಂತೆ ಬುದ್ಧಿ ಕಡಿಮೆ ಆಗ್ತಾ ಇದೆ!" ಎಂದು ಸ್ವಲ್ಪ ಕೋಪದಿಂದಲೆ ನುಡಿದಳು ಸೀತಮ್ಮ.

ಅಕ್ಕನಿಗೇಕಿಷ್ಟು ತನ್ನ ಮೇಲೆ ಕೋಪವೆಂಬುದೆ ಗುಂಡುಗೆ ತಿಳಿಯಲಿಲ್ಲ.

"ಹೇಳೋ ವಿಷಯಾ ಬಿಟ್ಟು ನೀವಿಬ್ರೂ ಜಗಳಾ ನಡಿಸಿದರಲ್ರಿ!"

"ಹಾಂ—ಏನು ಹೇಳ್ತಾ ಇದ್ದೆ ರಂಗಮ್ಮಾ—ಹಾಳು ನೆನಪು ಕೂಡಾ ಹಾರಿಹೋಯ್ತು!" ಎಂದಳು ಸೀತಮ್ಮ.

"ಅದೇರಿ—ನಿಮ್ಮ ಗುಂಡುರಾಯನ ವಿಷಯಾ!" ಎಂದು ರಂಗಮ್ಮ ಜ್ಞಾಪಿಸಿಕೊಟ್ಟಳು.

"ಹುಂ—ನೋಡ್ರಿ, ಚಿಕ್ಕವನಿದ್ದಾಗ ನನ್ನ ಕಂಡ್ರೆ ಅವನಿಗೆ ಬಹಳ ಪ್ರೀತಿ ಇತ್ತು. ಮನೆಯಲ್ಲಿ ಮಗು ಇಲ್ಲಾಂತ ನಮ್ಮ ತಂದೆಗೆ ಕೇಳಿಕೊಂಡು, ನಮ್ಮ ಯಜಮಾನರನ್ನೊಪ್ಪಿಸಿ, ಅವನನ್ನು ತಂದು ಮನೆಯಲ್ಲಿ ಇಟ್ಟುಕೊಂಡೆ—ಅಮೇಲೆ ನನಗೂ ಒಂದು ಹೆಣ್ಣು ಹುಟ್ಟಿತು—"

"ಅಂದ ಹಾಗೆ ನಿಮ್ಮ ಮಗಳ ಹೆಸರೇನ್ರಿ?" ರಂಗಮ್ಮ ಕೇಳಿದಳು.

"ವಿಜಯಾ—ಅವಳಿಗೆ ಹದಿನೈದು ತುಂಬಿದೆ. ಸ್ವಲ್ಪ ಬೆಳೆವಣಿಗೆ ದೊಡ್ಡದು; ಹದಿನೆಂಟು ಇಪ್ಪತ್ತು ವಯಸ್ಸಿರಬಹುದು—ಅನ್ನಿಸುತ್ತೆ" ಎಂದ ಸೀತಮ್ಮನ ಮಾತಿಗೆ, ಹೊರಗೆ ಕುಳಿತ ಗುಂಡು ದೆರಗಾಗಿದ್ದ.

ನಿಜವಾಗಿ ವಿಜಯಾಗೆ ಇಪ್ಪತ್ತು ವರ್ಷ ವಿಾರಿತ್ತು. ಕ್ಷಲ್ಪ ಎತ್ತರವಾದ ದೇಹ. ಬಣ್ಣ ತಿಳಿಗಪ್ಪು, ದೃಢವಾದ ಮೈಕಟ್ಟು, ಉಬ್ಬುಗಲ್ಲಗಳು; ದುಂಡುಮುಖದಲ್ಲಿ ಹೊಳೆದ ಚಿಕ್ಕ ಕಣ್ಣುಗಳು, ಎಲ್ಲಕ್ಕೂ ಮಿಗಿಲಾಗಿ ಎದ್ದು ಕಾಣುವ ಚಿಕ್ಕ ಮೂಗು, ಇವೆಲ್ಲ ಸ್ತ್ರೀ-ಸೌಂದರ್ಯಕ್ಕೆ ಬೇಕಾದ ಸಾಧನೆಗಳಾಗಿರಲಿಲ್ಲ—ವಿಜಯಾನ ರೂಪ ಚಿತ್ರಿಸಿಕೊಳ್ಳುವುದರಲ್ಲಿ ಒಳಗಿನ ಸಂಧಾಪಣೆ ಮುನ್ನುಗ್ಗಿತ್ತು. ಪುನಃ ಗುಂಡು ಮಾತಿಗೆ ಕಿವಿಗೊಟ್ಟಾಗ, ನುಡಿಯುತ್ತಿದ್ದಳು:—

"ಈಗ ಅವಳು ಮ್ಯಾಟ್ರಿಕ್ಯುಲೇಷನ್ನಲ್ಲಿ ಓದುತ್ತಿದ್ದಾಳೆ. ಅವಿಷ್ಟು ಮುಗಿಸಿಕೊಂಡರೆ, ಅವಳಿಗೂ ಒಂದು ಮನೆಮಾತು ಕೊಡಬೇಕೂಂತ ಇದ್ದಾರೆ."

"ಮನೆ ಮಾಡಿಕೊಡೋದು ಇರಲಿ; ಮೊದಲು ಶಾನಿಗೆ ಹಿಟ್ಟು ಕುಳಿತಿದೆ, ಅದನ್ನು ಮುಗಿಸು" ಎನ್ನುತ್ತ ಕೈಯಲ್ಲಿದ್ದ ಕೆಲಸದ ಕಡೆಗೆ ಧ್ಯಾನವೆಳೆದಳು ಕಾಶಮ್ಮ.

"ಹಾಳಾಯ್ತೆ ನಿನ್ನ ಶಾನಿಗೆ ಹಿಟ್ಟು. ಹಗಲೂ ರಾತ್ರಿ ನಿದ್ದೆ ಇಲ್ಲ. ನನಗಂತೂ ನಮ್ಮ ವಿಜಯಾನ ಚಿಂತೆ ಬೆನ್ನುಹತ್ತಿದೆ." ಎಂದು ಸೀತಮ್ಮ ನಿಟ್ಟುಸಿರನ್ನು ಬಿಟ್ಟಳು.

"ಚಿಂತೆ ಯಾಕೆ?....ಮನೆಯಲ್ಲಿ ಗಂಡು ಇಟ್ಟುಕೊಂಡು ಚಿಂತೆ ಮಾಡ್ತಾಳಂತೆ! ಕೇಳ್ರಿ ರಂಗಮ್ಮ!" ಎಂದಳು ಕಾಶಮ್ಮ.

"ಅದ್ಯಾರ್ರಿ?" ಎಂದು ಏನೂ ಅರಿಯದವಳಂತೆ ಕೇಳಿದಳು ರಂಗಮ್ಮ.

"ಅದೇ, ಗುಂಡು ಇದ್ದಾನಲ್ಲಾ—" ಎಂದಳು ಕಾಶಮ್ಮ.

"ಓ! ಹೀಗೇನು?—ಅದರೆ ಜೋಡಿ ಸ್ವಲ್ಪ ಸರಿಯಾಗೊಲ್ಲಾ ಕಣ್ರೀ" ಎಂದಳು ರಂಗಮ್ಮ.

"ಏನ್ರೀ ಜೋಡಿನೆ—ಏನೋ ಸ್ವಲ್ಪ ದೊಡ್ಡ ಓದು ಓದಿದವ. ಹೊತ್ತು ಹೊತ್ತಿಗೆ ನಿದ್ದೆ ಇಲ್ಲೆ ಕಷ್ಟಪಟ್ಟದ್ದಾನೆ. ಎಡೆಯುಮೇಲೆ ಕೂತರೆ ಎರಡು ತುತ್ತು ತಿನ್ನುತ್ತಾನಂತೆ. ಮದುವೆಯ ವಯಸ್ಸು ಬೇರೆ. ಮನಸ್ಸಿನ ಕೊರಗೇನೊ ದೇವರೆ ಬಲ್ಲ! ಮದುವೆಯಾದರೆ ತಾನಾಗಿಯೇ ಮೈ ತುಂಬಿಕೊಳ್ಳುತ್ತೆ" ಎನ್ನುವ ಕಾಶಮ್ಮನ ಮಾತಿಗೆ ಸೀತಮ್ಮ ಮನಸ್ಸಿನಲ್ಲಿಯೇ ಹಿಗ್ಗಿರಬಹುದು. ಅದರೆ ಹೊರಗೆ ಕುಳಿತ ಗುಂಡುಗೆ 'ಈ ಕಾಶಕ್ಕ ಕಾತಿಗೆ ಹೊರಟು ಹೋಗಿದ್ರೆ ಚೆನ್ನಾಗಿತ್ತು' ಅನ್ನಿಸಿತು.

"ಕಾಶಕ್ಕಾ, ನೀನು ಹೇಳೋದೇನೊ ನಿಜ! ಚಿಕ್ಕಂದಿನಿಂದ ಇದೇ ಭಾವನೆಯಿಂದಲೆ ಬೆಳೆಸಿದೆ. ವಿಜಯಾನಂತೂ ಈ ನಡುವೆ ಗುಂಡುಗೆ 'ಗೂಮಾಮಾ' ಅನ್ನೋದಕ್ಕೆ ನಾಚುತ್ತಾಳೆ. ಅವಳಿಗೂ ತಿಳಿವಳಿಕೆ ಬಂದಿದೆ. ಏನೋ ಮನೆಯಲ್ಲಿಯೇ ಗುಂಡು ಇದ್ದಾಗ ಬೇರೆ ಕಡೆ ನೆಕೆ ಹುಡುಕಬೇಕು—ಎಂದುಕೊಂಡು, ನಾನು ನಮ್ಮವರಿಗೆ ಸುಮ್ಮನಿರಲು ಹೇಳಿದೆ. ಅದರೆ ಮೊನ್ನೆ ಗುಂಡು ಒಬ್ಬನೆ ಊಟಕ್ಕೆ ಕುಳಿತಾಗ, ಸೂಕ್ಷ್ಮವಾಗಿ ಕೇಳಿ ನೋಡಿದೆ.

"ಏನಂದ್ರು?" ಎಂದು ರಂಗಮ್ಮ ಕುತೂಹಲದಿಂದಲೆ ಕೇಳಿದಳು.

"ನಿನ್ನ ತಮ್ಮ ಬದುಕಿರಬೇಕು ಅಂತ ಬಯಸಿದರೆ, ಇದೊಂದು ಮಾತು ಬಿಟ್ಟು ಬೇರೆ ಏನಾದರೂ ಹೇಳು, ಎಂದು ಒಟ್ಟಿನ ಭರದಲ್ಲಿ ಎಡೆಬಿಟ್ಟಿದ್ದು ಹೋದ!" ಎನ್ನುವಾಗ ಸೀತಮ್ಮನ ಕಂಠ ಗದ್ಗದಿತವಾಗಿತ್ತು.

"ಮದುವೆಗೆ ಮೊದಲು ಎಲ್ಲಾರೂ ಹೀಗೇ ಮೂಗುಮುರೀತಾರೆ ಕಣ್ರೀ!" ಎಂದು ರಾಗನೆಳೆದಳು ರಂಗಮ್ಮ. ಹೊರಗಿದ್ದ ಗುಂಡು ಒಟ್ಟಿನಿಂದ ಉರಿದು ಬೀಳುತ್ತಿದ್ದ. 'ಈ ರಂಗಮ್ಮನಿಗೇಕೆ ನನ್ನ ಚಿಂತೆ? ಮೂಗುಮುರೀತಾರಂತೆ ಮೂಗು!—ಹೊರಗೆ ಬಂದರೆ ಕಾಲು ಕೂಡಾ ಮುರೀತಾರೆ'—ಎಂದುಕೊಂಡು ಸುಮ್ಮನಾದ. ಎದ್ದು ಹೋಗಬೇಕೆನ್ನಿಸಿದರೂ ಮುಂದೇನಾಗುತ್ತೊ ಕೇಳೋಣವೆಂದು ಅಲ್ಲಿಯೇ ಕುಳಿತ.

"ಸೀತಾ, ನಿನ್ನ ಯಜಮಾನ್ರನ್ನೊಮ್ಮೆ ಕೇಳಿ ನೋಡೂಂತಾ ಹೇಳು. ಹಿರಿಯರು ಕೇಳುತ್ತಾರಂತಾದರೂ ಒಪ್ಪಿಕೊಂಡಾನು"—ಕಾಶಮ್ಮ ಸಲಹೆ ನೀಡಿದಳು.

"ನನ್ನ ಮಾತೇ ಕೇಳದೆ ಇದ್ದಾಗ, ಇನ್ನು 'ಅವರ' ಮಾತು ಕೇಳ್ತಾನೇನು? ನಿನಗೊಂದು ಹುಚ್ಚು! ಮುಖ್ಯ ನನ್ನ ಕರ್ಮ. ನಾನು ಹಿಂದಿನ ಜನ್ಮದಲ್ಲಿ ಏನು ಪಾಪ ಮಾಡಿದ್ದೆನೋ, ಈಗ ಅನು-

ಭೀಗಿಸಬೇಕಾಗಿದೆ"—ಎನ್ನುತ್ತ ಸೀತಮ್ಮ ಕಣ್ಣೀರು ಹಾರಲಾರಂಭಿಸಿದಳು.

"ಅಳ್ತಾರೇನೇ ಸೀತಾ—ಹೀಗೆ ಅಧೈರ್ಯಳಾದರೆ ಹೇಗೆ?" ಎಂದು ಕಾಶಮ್ಮ ಸೀತಮ್ಮನ ದುಃಖಾಗ್ನಿಗೆ ತೈಲವೆರಚಿದಳು.

"ಇಲ್ಲ ಕಾಶಕ್ಕಾ—ನಾನು ಇರಬಾರದು—"ಮುಂದೆ ಮಾತೇ ಬರಲಿಲ್ಲ. ಸೀತಮ್ಮ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ಸೀತಮ್ಮನನ್ನು ಸಂತೈಸಲಾಯಿತೆ ಕಂಗಾಲಾಗಿದ್ದ ರಂಗಮ್ಮ, "ಇರಬಾರದಂಥಾದ್ದೆನಾಗಿದೇರಿ!—ಕಣ್ಣೀರುಹಾಕಿದರಾಗುತ್ತೇನ್ರೀ? ಇದಿಲ್ಲದಿದ್ದರೆ ಇನ್ನೊಂದು ಗಂಡು! ಹೆಣ್ಣು ಎಂದಮೇಲೆ ಅದಕ್ಕೊಂದು ಗಂಡನ್ನು ದೇವರು ಸೃಷ್ಟಿಸಿರುತ್ತಾನೆ." ಎಂದು ಸಂತಯಿಸಲೆತ್ನಿಸುತ್ತಿದ್ದಾಗ:

"ಅಮ್ಮಾ!—ಅಮ್ಮಾ"— ಎನ್ನುವ ವಿಜಯನ ಧ್ವನಿ ಕೇಳಿಸಿತು.

"ಕಣ್ಣೊರಸಿಕೊ ಸೀತಾ—ವಿಜಯೂ ಬಂದ್ಬು"—ಎನ್ನುತ್ತ ಕಾಶಮ್ಮ, ವಿಜಯೂ ಒಳಗೆ ಪ್ರವೇಶಿಸಿದ ಕೂತಲೇ—"ಹೋಗು ವಿಜಯೂ, ಕಾಫಿಗಿಡು. ನಿನ್ನ 'ಗೂಮಾಮಾ' ಬರೋ ಹೊತ್ತಾಯ್ತು" ಎಂದು ಸಲುಗೆಯಿಂದ ಆಜ್ಞಾಪಿಸಿದಳು.

"ಹೋಗ್ರಿ, ನಾನು ಮಾಡೊಲ್ಲಾ" ಎಂದುತ್ತರಿಸಿದ ವಿಜಯೂಗೆ "ಹುರಿಯುರಿಗೆ ಎಮರುನುಡೀತಾರರೇನೆ?"—ಎಂದು ಸೀತಮ್ಮ ಗದರಿಸಿದಳು.

ಅಷ್ಟರಲ್ಲಿ "ಬಿಡ್ರಿ ಶಕುಂತಲಾಬಾಯಿ! ಏನು ಅಪರೂಪವಾಗಿ ಬಿಟ್ರೆಲ್ಲ" ಎನ್ನುವ ಕಾಶಮ್ಮನ ಧ್ವನಿ ಕೇಳಿಸಿತು.

"ಹಾಗೇನಿಲ್ರೀ! ಕೈತುಂಬಾ ಕೆಲಸವಿದೆ. ಮಗು ಬೇರೆ ಕೈ ಬಿಡೋದಿಲ್ಲ"—ಎನ್ನುತ್ತ ಶಕುಂತಲಾಬಾಯಿ ಕುಳಿತುಕೊಂಡಿರಬೇಕು. ಶಂಕುಂತಲಾಬಾಯಿ ಹೊಸತಾಗಿ ತಮ್ಮ ನೆರೆಮನೆಗೆ ಬಂದದ್ದು ಗಂಡುಗೆ ಗೊತ್ತಿತ್ತು. ಆ ದಂಪತಿಗಳನ್ನು ಕಂಡು 'ಸಂಸಾರವೆಂದರೆ ಹೀಗಿರಬೇಕು' ಎನ್ನಿಸಿತ್ತು ಗುಂಡುಗೆ

"ಹೋಗ್ಲು ವಿಜಯೂ, ಕಾಫೀಗಿಡು! ದೊಡ್ಡವರ ಮಾತುಕತೆ ಕೇಳೋದು ಸರಿಯಲ್ಲ!" ಎನ್ನುತ್ತ ಸೀತಮ್ಮ ಮಗಳಿಗೆ ಆದೇಶಿಸಿದಳು

"ಏನ್ರಿ ಸೀತಮ್ಮಾ— ಕಣ್ಣುಗಳೇಕೆ ಕೆಂಪಾಗಿವೆಯಲ್ಲ?", ಎಂದು ಶಕುಂತಲಾಬಾಯಿ ವೊದಲಿಸಿದಳು.

"ಏನಿಲ್ರೀ—ವಿಜಯಾಸ್ತ್ರ ಗುಂಡುರಾಯನಿಗೆ ಕೊಟ್ಟು ಮದುವೆ ಮಾಡಬೇಕೂಂತಾರೆ ಸೀತಮ್ಮ, ಅತನೇನೋ ಮಾಡಿಕೊಳ್ಳಿಲ್ಲಾ ಅನ್ನುತ್ತಾನಂತೆ. ಕಾಶಮ್ಮನೇನೋ—ಸೀತಮ್ಮನ ಯಜಮಾನರಿಗೆ ಹೇಳಿ ಒತ್ತಾಯ ಪಡಿಸಿಯಾದರೂ ಈ ಮದುವೆ ಮಾಡಿಸಬೇಕು ಎನ್ನುತ್ತಾರೆ. ಇತ್ಕಕ್ಕೆ ಸೀತಮ್ಮ ಕಣ್ಣೀರು ಹಾಕಿದ್ದು—" ಎಂದು ರಂಗಮ್ಮ ಒಂದೇ ಉಸುರಿನಲ್ಲಿ ನಡೆದುದೆಲ್ಲವನ್ನೂ ವಿವರಿಸಿದಳು.

"ಅಲ್ರೀ ಸೀತಮ್ಮಾ—ಹಿಂದೆಕ್ಕೆಲ್ಲ ಹೆಣ್ಣಿಗೆ ತಿಳಿವಳಿಕೆ ಹುಟ್ಟುವ ವೊದಲು, ಕೊರಳಿಗೆ ಮಂಗಳಸೂತ್ರ ಕಟ್ಟಿ, ಅವಳಿಗೆ ಬೇಡಾದವನ ಮನೆಗೆ ಅಟ್ಟುತ್ತಿದ್ದು—ಹೀಗಾಗಿ ಸಂಸಾರ ಹಾಳಾಗ್ತಾ ಇತ್ತು. ಈ ಅನ್ಯಾಯವನ್ನು ಶಮನಾಜ ನಿಲ್ಲಿಸಬೇಕು ಅಂತ ಹೇಳಿ, ಎಷ್ಟೋ ಲೇಖಕರು ಕಾದಂಬರಿಗಳನ್ನು ಬರೆದಿದ್ದಾರೆ. ಈಗೇನೋ ನೀವೆಲ್ಲಾ ಸೇರಿ, ಬೇಡವಾದ ಹೆಣ್ಣನ್ನು ಗುಂಡುರಾಯನ ಕೊರಳಿಗೆ ಕಟ್ಟಬೇಕು ಅಂತೀರಲ್ರೀ! ಇದೆಲ್ಲಿಯ ನ್ಯಾಯ?" ಎಂದು ನುಡಿದು ಶಕುಂತಲಾಬಾಯಿ ನಕ್ಕಳು.

"ನೀವೇನ್ರೀ, ಓದಿಕೊಂಡೋರು ಬಿ ಎ ಪಾಸು ಮಾಡಿದ್ದೀರಿ. ನ್ಯಾಯ ಅನ್ಯಾಯ ಎಣಿಸ್ತೀರಿ. ನಮಗೇನೋ ಮನೆಯ ಹೆಣ್ಣು ಮನೆಯಲ್ಲಿಯೇ ಇರಬೇಕು ಅನ್ನಿಸುತ್ತೆ" ಎಂದ ಕಾಶಮ್ಮನ ಮಾತುಗಳಿಂದ ಸೀತಮ್ಮನಿಗೆ ನೆಮ್ಮದಿಯಾಗಿರಬೇಕು.

"ನೀವು ಹೇಳೊದೇನೋ ನಿಜ ಕಾಶಮ್ಮ! 'ಅವರೆ ಹೆಣ್ಣು ಮನೆಯಲ್ಲಿ ಇರಲಿ' ಅಂತ, ಬೇಡವೆನ್ನುವವನಿಗೆ ಕಟ್ಟಿದರೆ ಸಂಸಾರ ಸರಿಯಾಗತ್ತೇನ್ರಿ? ಗಂಡಾ ಹೊಡ್ತಿ ಅಂದರೆ ಹಾಲು ಸಕ್ಕರೆ ಹಾಗೆ ಬೆರೆಯುಬೇಕು. ಬಲವಂತ ಮಾಡಿದರೆಲ್ಲಾ ಪ್ರೇಮು ಹುಟ್ಟುತ್ತೇನ್ರಿ? ಅದಲ್ಲದೆ. ಹೆಣ್ಣು ಎಂದಮೇಲೆ, ಹುಟ್ಟಿದ ಮನೆಯಲ್ಲಿಯೇ ಇರಲಾಗುತ್ತದೆಯೇ!" ಎಂದು ಶಕುಂತಲಾಬಾಯಿ ನುಡಿಯುತ್ತಿದ್ದಾಗ:

"ಕಾಫಿ ತಕ್ಕೊಳ್ರಿ ಶಕುಂತಲಾಬಾಯಿ. ಸಕ್ಕರೆ ಬೇಕಾದರೆ ಕೇಳ್ರಿ" ಎನ್ನುವ ವಿಜಯನ ಧ್ವನಿ ಕೇಳಿಸಿತು. ಅತೀವೆ ಸ್ವಲ್ಪ ಹೊತ್ತಿನವರೆಗೆ ಎಲ್ಲರೂ ಮೌನ ತಾಳಿದ್ದರು

"ನಮ್ಮ ಯಜಮಾನ್ರು ಬರೋ ಹೊತ್ತಾಯಿತು ಇನ್ನು ಬರ್ತೀನೆ" ಎನ್ನುವ ರಂಗಮ್ಮನ ಮಾತು ಮೌನವನ್ನು ಮುರಿಯಿತು.

"ಕೂತುಕೊಳ್ರೀ, ಹೆಂಗುವಿರಂತೆ. ಅಪರೂಪವಾಗಿ ಶಕುಂತಲಾಬಾಯಿ ಬಂದಿದ್ದಾಳೆ ನಾಲ್ಕು ಮಾತಾಡೋಣ!"

ಎಂದಳು ರಂಗಮ್ಮ.

"ಇಲ್ರೀ ಹೋಗಬೇಕು—

"ಹಾಗಾದರೆ ನಿಮ್ಮಿಷ್ಟ! ಆಗಾಗ ಬರ್ತಾ ಇರಿ. ವಿಜಯೂ! ರಂಗಮ್ಮಗ ಕುಂಕುಮ ಕೊಡು." ಎನ್ನುತ್ತ ಸೀತಮ್ಮ ತನ್ನ ಅನುಮತಿಯನ್ನು ಸೂಚಿಸಿದಳು.

ಇನು ಮನೆಯಲ್ಲಿರುವುದು ಒಳಿತಲ್ಲವೆಂದುಕೊಂಡು, ಮನಸ್ಸಿನಲ್ಲಿಯೇ ಒಮ್ಮೆ ಶಕುಂತಲಾಬಾಯಿಗೆ ವಂದಿಸಿ, ಗುಂಡು ಮೆಲ್ಲನೆ ಮನೆ ಬಿಟ್ಟು ನಡೆದ. ಆಗ ಅವನ ಚಿತ್ತ ಚಾಂಚಲ್ಯವಾಗಿತ್ತು. ತಲೆ ಗಿರ್ರನೆ ತಿರುಗುತ್ತಿದ್ದಂತೆ ಭಾಸವಾಗುತ್ತಿತ್ತು. ಅವನಾಯುದಾಂತೆ ಗುಂಡುನ ಕಾಲುಗಳು ಅವನನ್ನು 'ರಾಮುಭವೋಜನ ರೆಸ್ಟೋರೆಂಟ್'ಗೆ ಎಳೆದೊಯ್ದಿದ್ದವು. ಕಾಫಿಗಾಗಿ ಆರ್ಡರ್ ಕೊಟ್ಟು ಸಿಗರೇಟು ಹೊತ್ತಿಸಿ ಕುಳಿತಿದ್ದ—

ಕೈಯಲ್ಲಿಯ ಕಾಫಿ ಮುಗಿದಿತ್ತು.

"ಬಿಲ್ ಕೊಡ್ಲಾ ಸಾರ್?" ಎಂದು ಕೇಳಿದ ಹೋಟಲ ಆಳಿಗೆ ಇನ್ನೊಂದು ಕಪ್ಪು ಕಾಫಿ ತರಲು ಹೇಳಿ ಗುಂಡು, ಮತ್ತೊಂದು ಸಿಗರೇಟನ್ನು ಹಚ್ಚಿದ. ಕೂತಲೆ ತನ್ನ ಬಾಯಿಂದ ದೊಡ್ಡದೊಂದು ನಿಟ್ಟುಸಿರು ಹೊರಬಿತ್ತು.

ಭೃಗು-ವರುಣ ಸಂವಾದ*

(ಔಪನಿಷದಿಕ ವಿಚಾರ)

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ, ಎಲ್‌ಎಲ್. ಬಿ. ಧಾರವಾಡ

ಸೃಷ್ಟಿಯ ಮೂಲಕಾರಣವನ್ನೂ ಮಾನವಜೀವನದ ಆದರ್ಶತತ್ತ್ವಗಳನ್ನೂ ಕುರಿತು, ಪುರಾತನ ಭಾರತದಲ್ಲಿ ವಿವಿಧರೀತಿಯಲ್ಲಿ ವಿಚಾರಮಾಡಲಾಗಿದೆ. ಅಂತಹ ವಿಚಾರ-ಪ್ರವಾಹದ ಶಾಖೆಯೊಂದನ್ನು ಈ ಲೇಖನದಲ್ಲಿ ನೋಡಬಹುದು.

●

ವೇದದಲ್ಲಿ ಋಷಿಗಳು—ದೃಷ್ಟಾರರು—ಗಾಳಿ, ಮಳೆ, ಬೆಳಕು ಇವೆಲ್ಲವುಗಳಿಗೆ ಒಬ್ಬೊಬ್ಬ ದೇವತೆಯನ್ನು ಕಲ್ಪಿಸಿ, ಅವರನ್ನು ಕುರಿತು ಹಾಡಿದ್ದಾರೆ. ಸೃಷ್ಟಿ-ಸ್ಥಿತಿ-ಪ್ರಳಯಗಳಿಗೆ ಕಾರಣವಾದ ಶಕ್ತಿಯನ್ನು "ಅತ್ಯಷ್ಠಿತ್ ದಶಾಂಗುಲಂ"—ಎಲ್ಲವನ್ನೂ ಮೀರಿ ಎತ್ತರದಲ್ಲಿ ನಿಂತಂತಹದು—ಎಂದು ವರ್ಣಿಸಿದ್ದಾರೆ. ವೇದಗಳ ಭಾಷೆ ಕಾಲಕ್ರಮೇಣ ಅರ್ಥವಾಗದೆ ಹೋದದ್ದರಿಂದಲೇ ಇರಬಹುದು—ಉಪನಿಷತ್ತುಗಳಲ್ಲಿ ಸರ್ವಾಂತರ್ಯಾಮಿಯಾದ ಆ ಶಕ್ತಿಯನ್ನು,—ಬ್ರಹ್ಮವನ್ನು—ವಿವಿಧಬಗೆಯ ಉದಾಹರಣೆಗಳಿಂದ ಸ್ಪಷ್ಟಗೊಳಿಸಲು ಉಪನಿಷತ್ತಿನ ಆಚಾರ್ಯರು ಯತ್ನಿಸಿದ್ದಾರೆ. ಉದಾಹರಣೆಗಳನ್ನು ರಚಿಸುವಾಗ, ಅಂದಿನ ವಾತಾವರಣದ ಪ್ರಭಾವ ಅವುಗಳ ಮೇಲೆ ಆಗದೆ ಹೋಗಿಲ್ಲ. ಉಪನಿಷತ್ತು ಹಾಗೂ ಬ್ರಾಹ್ಮಣಗಳು, ಬ್ರಹ್ಮಜ್ಞಾನವನ್ನು ಹೆಚ್ಚು ಸುಲಭವಾಗಿ ಹೇಳಬೇಕು—ಎಂದು ಪ್ರಯತ್ನಿಸಿದುವುಗಳಲ್ಲಿ ಒಂದೊಂದು ಮೆಟ್ಟಿಲುಗಳು. ಉಪನಿಷತ್ತುಗಳಲ್ಲಿ ಆಚಾರ್ಯರು ಶಿಷ್ಯರಿಗೆ ಜ್ಞಾನತನ್ನು—ಬಳಿಯಲ್ಲಿ ಕೂಡಿಸಿಕೊಂಡು—ವಿವರಿಸಿದ್ದರಿಂದ, ವೇದಕ್ಕೆ ಸನ್ನಿಹನವಾದುವುಗಳಾದ್ದರಿಂದ, ವೇದಗಳಿಗೂ ಬ್ರಾಹ್ಮಣಗಳಿಗೂ ಉಪನಿಷತ್ತುಗಳು ಮಧ್ಯೆ ಬಂದಿವೆ ಎಂಬುದನ್ನು ಕಾಣಬಹುದು ಸಂವಾದ-ಸಂಭಾಷಣೆಗಳ ಮೂಲಕ ಬ್ರಹ್ಮಜ್ಞಾನವನ್ನು ತಿಳಿಯಪಡಿಸುವ, ಇನ್ನೂ ಹೆಚ್ಚು ಸುಲಭಗೊಳಿಸುವ ಉಪಾಯ; ಹಾಗೆ ಉಪನಿಷತ್ತು ಬ್ರಾಹ್ಮಣಗಳಲ್ಲಿ ಸಂವಾದರೂಪವಾಗಿ ಅನೇಕ ಉದಾಹರಣೆಗಳು ಕಂಡುಬರುತ್ತವೆ. ಭೃಗು-ವರುಣ ಸಂವಾದ, ಬ್ರಹ್ಮಜ್ಞಾನವನ್ನು ತಿಳಿಸಿಕೊಡುವ ಪ್ರಯತ್ನದಲ್ಲಿ ಒಂದು ಉದಾಹರಣೆ.

ಭೃಗು ಇಪ್ಪತ್ತಾರು ಕಡೆ ಋಗ್ವೇದದಲ್ಲಿ ಕಾಣಿಸಿಕೊಳ್ಳುತ್ತಾನೆ ಬಹುವಚನದಲ್ಲಿ 'ಭೃಗುವಿನ ವಂಶದವರು' ಎಂಬರ್ಥದಲ್ಲಿ ಬಂದಿದೆ. ಅಥರ್ವವೇದದಲ್ಲಿ, 'ಯಜ್ಞ ಮಾಡಿದವರು ಭೃಗುವಿನೊಡನೆ ಸ್ವರ್ಗಕ್ಕೆ ಹೋಗುತ್ತಾರೆ' ಎಂದು ಹೇಳಲಾಗಿದೆ. ಏತರೇಯ ಬ್ರಾಹ್ಮಣದಲ್ಲಿ 'ಪ್ರಜಾಪತಿಯ ಬೀಜವು ಅಗ್ನಿಯಲ್ಲಿ ದೇವತೆಗಳಿಂದ ಚೆಲ್ಲಲ್ಪಡಲು ಒಂದರಿಂದ ಆದಿತ್ಯ, ಇನ್ನೊಂದರಿಂದ ಭೃಗು, ಮತ್ತೊಂದರಿಂದ ಆದಿತ್ಯರು, ಕೊನೆಯವದರಿಂದ ಅಂಗಿರಸರು ಹುಟ್ಟಿದರು' ಎಂಬ ಐತಿಹ್ಯವಿದೆ. ಬೃಹದ್ದೇವತೆಯ ಮೇರೆಗೆ 'ಭೃಗು, ಅಂಗಿರಸ, ಕವಿ, ವಸಿಷ್ಠ ಇವರೆಲ್ಲ ಪ್ರಜಾಪತಿಯ ಬಲದಿಂದಲೇ ಹುಟ್ಟಿದ್ದಾರೆ ಎಂದಿದೆ. ಮಹಾಭಾರತದಲ್ಲಿ ಬ್ರಹ್ಮನ ಹೃದಯದಿಂದ ಭೃಗು ಹುಟ್ಟಿದ್ದಾನೆಂದು ಇದ್ದರೆ, ಭಾಗವತಪುರಾಣದ ಮೇರೆಗೆ ಬ್ರಹ್ಮನ ತೊಗಲಿನಿಂದ ಹುಟ್ಟಿದ್ದಾನೆಂದು ಇದೆ. ಏನಿದ್ದರೂ ಭೃಗು, ವರುಣನ ದತ್ತಕ ಪುತ್ರ ಶತಪಥ ಬ್ರಾಹ್ಮಣದಲ್ಲಿ "ಭೃಗು-ವರುಣ" ಎಂದು ಕಂಡುಬಂದರೆ, ತೈತ್ತಿರೀಯೋಪನಿಷತ್ತಿನಲ್ಲಿ "ಭೃಗು-ವಾರುಣಿ" ಎಂದು ಕಂಡುಬರುತ್ತದೆ.

ಮಾನವವರ್ಗ ಬೆಂಕಿಯನ್ನು ಕಂಡುಹಿಡಿದ ಕಥೆ, ಭೃಗುವಿನ ಹೆಸರಿನೊಡನೆ ಹೆಣೆಯಲ್ಪಟ್ಟಿದ್ದು ಋಗ್ವೇದದಲ್ಲಿ ಕಂಡುಬರುತ್ತದೆ. 'ನೀರಿನ ತಳದಿಂದ ಅಗ್ನಿಯನ್ನು ಕಂಡು ಹಿಡಿದು, ಕಟ್ಟಿಗೆಯಲ್ಲಿ ಶೇಖರಿಸಿಟ್ಟು, ಮಾನವಕುಲಕ್ಕೆ ಕೊಟ್ಟವನು' ಎಂದು ಭೃಗುಗಳ ಬಗ್ಗೆ ಆಖ್ಯಾಯಿಕೆ ಇದೆ. ತರುವಾಯದ ಪೌರಾಣಿಕಸಾಹಿತ್ಯದಲ್ಲಿ ಸುಪ್ರಸಿದ್ಧ ಋತ್ವಿಜರ ಕುಟುಂಬಕ್ಕೆ ಮೂಲಪುರುಷನಾಗಿ ಭೃಗು ಮಹರ್ಷಿ ಕಾಣಿಸಿಕೊಂಡಿದ್ದಾರೆ ಚ್ಯವನಋಷಿ ಭೃಗುವಿನ ಮಗ; ಮಹಾಭಾರತದಲ್ಲಿ ಭಾರ್ಗವ-ಪರಶುರಾಮನ ಕಥೆಯೂ ಇದರ ಜೊತೆಯಾಗಿಯೇ ಬಂದಿದೆ.

ತೈತ್ತಿರೀಯೋಪನಿಷತ್ತಿನ ಕಥೆಯ ಮೇರೆಗೆ—ಒಂದು ದಿನ ಭೃಗು ತನ್ನ ತಂದೆ ವರುಣನ ಬಳಿಗೆ ಬಂದು 'ಪೂಜ್ಯರೆ, ಬ್ರಹ್ಮಜ್ಞಾನವನ್ನು ಹೇಳಿಕೊಡಬೇಕು' ಎಂದು ವಿನ್ನವಿಸಿಕೊಂಡನು. ಅವನಿಗೆ ಬ್ರಹ್ಮಜ್ಞಾನಕ್ಕೆ ಮೂಲವಾಗಿ ಅನ್ನ, ಪ್ರಾಣ, ಕಣ್ಣು, ಕಿವಿ ಮನಸ್ಸು

* ೧೨—೩—೫೭ರಂದು ಅಖಿಲ ಭಾರತ ಆಕಾಶವಾಣಿ, ಧಾರವಾಡದಿಂದ ಪ್ರಸಾರಗೊಂಡುದು

ಮತ್ತು ವಾಕ್ ತಿಳಿದುಕೊಳ್ಳುವುದು ಅವಶ್ಯ (ಯತೋವಾ ಇಮಾನಿ ಭೂತಾನಿ ಜಾಯಂತೇ | ಯೇನ ಜಾತಾನಿ ಜೀವಂತಿ. ಯತ್ ಪ್ರಯಂತ್ಯಭಿ ಸಂವಿಶಂತಿ ತದ್ ಬ್ರಹ್ಮ!) ಸಕಲ ಜೀವಜಂತುಗಳೂ ಎಲ್ಲಿಂದ ಹುಟ್ಟಿ ಯಾತರಿಂದ ಬದುಕಿ, ಪುನಃ ಎಲ್ಲಿ ಪ್ರವೇಶಮಾಡುವುವೋ ಅಂತಹ ಈ ಮೂಲಭೂತ ಪದಾರ್ಥಗಳನ್ನು ತಿಳಿಯುವುದು ಅತ್ಯವಶ್ಯ—ಎಂದು ವರುಣನು ಅಭಿಪ್ರಾಯಪಟ್ಟನು. ಒಂದು ವರ್ಷ ವಾದರೂ ಗುರುಸೇವೆಯನ್ನು ಮಾಡದ ಯೋಗ್ಯಪುತ್ರನಿಗೆ ಬ್ರಹ್ಮ-ವಿದ್ಯೆಯನ್ನು ತಿಳಿಸಿಕೊಡಬೇಕೆಂದಿದ್ದುದರಿಂದ, ಇಲ್ಲಿ ವರುಣ ಭೃಗುವಿಗೆ ಹೇಳುತ್ತಾನೆ. ಕೇನೋಪನಿಷತ್ತಾದರೂ ಇದೇ ಮಾತನ್ನೇ ಹೇಳುತ್ತದೆ:— 'ಕಣ್ಣು, ಕಿವಿ, ವಾಕ್, ಮನಸ್ಸುಗಳ ಹಿಂದೆ ನೆಲೆಸಿರುವ ಶಕ್ತಿಯೇ ಬ್ರಹ್ಮ! ' ಎಂದು. ಜಿಜ್ಞಾಸುವಿಗೆ ಅಲ್ಪಸೂಚನೆ ಕೊಟ್ಟರೆ ಸಾಕು; ಅವನು ಎಲ್ಲವನ್ನೂ ಗ್ರಹಿಸುತ್ತಾನೆ: ತಪಸ್ಸನ್ನಾಚರಿಸಿ ತಿಳಿಯುತ್ತಾನೆ. ಸಕಲ ಜೀವಜಂತುಗಳಿಗೆ ಹಿನ್ನೆಲೆಯಲ್ಲಿದ್ದ ಶಕ್ತಿಯೇ ಬ್ರಹ್ಮ! ಈ ಶಕ್ತಿಯನ್ನು ಅರಿತರೆ, ಆ ಬ್ರಹ್ಮನ ಕೃಪೆಯುಂಟಾದರೆ, ಜನ್ಮ-ಮರಣಗಳ ಜಂಜಾಟದಿಂದ ದೂರವಾಗಿರಬಹುದು.

ತಂದೆಯ ಮಾತಿನಂತೆ ಬ್ರಹ್ಮಜ್ಞಾನವನ್ನು ಅರಿಯಲು ಭೃಗು ತಪಸ್ಸಿಗೆ ಪ್ರಾರಂಭಿಸುತ್ತಾನೆ; "ತಪೋಭಿಃ ಪ್ರಾಪ್ಯತೇಽಭೀಷ್ಟಂ ನಾಸಾಧ್ಯಂಹಿ ತಪಸ್ವಿನಃ" ತಪಸ್ಸಿಗೆ ಯಾವುದು ತಾನೇ ಅಸಾಧ್ಯ?

"ಅನ್ನಂ ಬ್ರಹ್ಮೇತಿ ವ್ಯಜಾನಾತ್"—ಅನ್ನದಿಂದಲೇ ಸಕಲ ಪ್ರಾಣಿಗಳೂ ಹುಟ್ಟಿ ಬದುಕಿ, ಅನ್ನದಲ್ಲಿಯೇ ಮತ್ತೆ ಲೀನವಾಗುವುದರಿಂದ, ಅನ್ನದ ರಹಸ್ಯವನ್ನರಿತ ಭೃಗು ಮತ್ತೆ ತಂದೆಗೆ ಬಿನ್ನವಿಸಿಕೊಂಡ; ಆಗ ವರುಣ ಹೇಳಿದ: 'ತಪಸಾ ಬ್ರಹ್ಮಂ ವಿಜಿಜ್ಞಾಸಸ್ವ! ತಪೋಬ್ರಹ್ಮೇತಿ' "ತಪಸ್ಸಿನಿಂದ ಬ್ರಹ್ಮನನ್ನು ತಿಳಿ, ತಪಸ್ಸೇ ಬ್ರಹ್ಮ!' ಭೃಗು ಪ್ರಾಣವನ್ನು ನಿಗ್ರಹಿಸಿ ತಪಸನ್ನಾಚರಿಸಿದ; ಮತ್ತೆ ತಂದೆಯ ಬಳಿ ಬಂದು ಕೇಳಿಕೊಂಡ: ತಂದೆಯ ಉಪದೇಶದ ನೇರಿಗೆ ಮನಸ್ಸು-ವಿಜ್ಞಾನಗಳು ಬ್ರಹ್ಮವೆಂಬುದನ್ನರಿತ. ಅನುಭವದಿಂದ ಭೃಗುವಿಗೆ ಇವುಗಳಲ್ಲಿ ಪೂರ್ಣತೆ ಕಂಡುಬರಲಿಲ್ಲವೇನೋ!—ಅನ್ನ ನಷ್ಟವಾಗುತ್ತದೆ, ಪ್ರಾಣ ಅಚೇತನವಾದೀತು; ಮನಸ್ಸು ಬದಲಾದೀತು! ಬುದ್ಧಿ ಸುಖ-ದುಃಖಗಳಿಗೆ ಎಡೆಕೊಟ್ಟೀತು; ಆದರೆ ಆನಂದ! ಯಾವುದೂ ಅದನ್ನು ಸಂಪಾದಿಸಲಾರದು. ಉಪಾಸಕನಿಗೆ ಅನ್ನ, ಪ್ರಾಣ, ದೇಹ ಎಲ್ಲವೂ ಅವಶ್ಯ: ಅನ್ನವೇ ಪ್ರಾಣವೆಂಬುದನ್ನು ಸ್ಪಷ್ಟವೆಂದು ತಿಳಿದು ಆಚರಿಸುವವನು ಮಹಾತ್ಮನಾಗುತ್ತಾನೆ: ಅದರಂತೆ ನೀರಿನ್ನುವುದು ಅಹಾಂ! ನೀರಿನಲ್ಲಡಗಿರುವ ಅಗ್ನಿ ಆಹಾರವನ್ನು ತಿಂದೇ ಬದುಕುತ್ತಾನೆ; ಪೃಥ್ವಿ ಎನ್ನುವುದೇ ಅನ್ನ; ಆಕಾಶ ವಾಯುಮಂಡಲ ಇದನ್ನು ತಿಂದು ಜೀವಿಸುವುದು; ಪೃಥ್ವಿ-ಆಕಾಶಗಳು ಪರಸ್ಪರ ಅವಲಂಬಿಸಿವೆ: ಅದ್ದರಿಂದ ಅನ್ನ ಬಹುಮುಖ್ಯ; ಮನೆಗೆ ಬಂದ ಯಾರನ್ನೇ ಆಗಲಿ ಮುಮುಕ್ಷು, ಅನ್ನವಿನ್ನದೆ ಹಾಗೇ ಕಳಿಸಕೂಡದು; ಗೃಹಸ್ಥಾಶ್ರಮದಲ್ಲಿ ಮಾಡಬೇಕಾದ ಐದು ಯಜ್ಞಗಳಲ್ಲಿ ಇದೂ ಒಂದು ದೊಡ್ಡ ಯಜ್ಞ:(ಹಿರಣ್ಯಗರ್ಭ ಬುಧ್ಯಾತಂಮನ್ಯೇದಾಭಾಗಶಂ ಗೃಹೇ) ಬಂದ ಅತಿಥಿ ಯಾವನಿದ್ದರೂ ದೇವತಾಸಮಾನನೇ! ಅತಿಥಿಗಳಿಗಾಗಿಯೇ ಗೃಹಸ್ಥಾಶ್ರಮಿಯ ಮನೆಯಲ್ಲಿ ಅನ್ನಸಿದ್ಧವಾಗುವುದು. ಎಷ್ಟು ಉತ್ತಮವಾಗಿ ಅನ್ನವನ್ನು ತಯಾರಿಸಿ ಅತಿಥಿಗಳಿಗೆ ಕೊಡುವನೋ ಅದೇ ರೀತಿಯಲ್ಲಿ ಅನ್ನ ಕೊಡುವವನಿಗೂ ದೊರೆಯುತ್ತದೆ.

ಪ್ರಾಣ ಅಪಾನಗಳ ಹಾಗೂ ವಾಙ್ಮನಗಳ ಸಂಯಮನದಿಂದ ನಿಧಿಧ್ಯಾಸವನ್ನು ಮಾಡಲಾಗಿ ಬ್ರಹ್ಮಜ್ಞಾನವನ್ನರಿಯಬಹುದು. ಮಳೆಯಲ್ಲಡಗಿದ ಸಂಕೃಷ್ಟಿಯಂತೆ, ವಿದ್ಯುತ್ತಿನಲ್ಲಡಗಿದ ಶಕ್ತಿಯಂತೆ ಮಾನವನ ಬ್ರಹ್ಮಜ್ಞಾನ ಧ್ಯಾನಗಮ್ಯವಾಗಿದೆ ಈ ಶಕ್ತಿಗೆ ಪ್ರಣಿ-ಪಾತಗೈದರೆ ಮಾನವನ ಇಷ್ಟವಸ್ತುಗಳೆಲ್ಲವೂ ಅವನಿಗೆರಗುತ್ತವೆ ಇದೊಂದು ಅತಿಶಕ್ತಿಯೆಂದು ಆರಾಧಿಸಿದರೆ, ವೇದೋಕ್ತ ಅತಿಶಕ್ತಿಯ ರಹಸ್ಯ ಆ ಮಾನವನಿಗೆ ಗೊತ್ತಾಗುವುದು. ಇದೊಂದು ಪ್ರಳಯ-ಕಾರಿಶಕ್ತಿಯೆಂದಾರಾಧಿಸಿದರೆ, ವಿರಾಧಕನ ಶತ್ರುಗಳೆಲ್ಲರೂ ನಷ್ಟ ಹೊಂದುತ್ತಾರೆ. ಇಲ್ಲಿ ಮಾನವನಲ್ಲಡಗಿದ ಅತ್ಯಶಕ್ತಿ, ಅಲ್ಲಿ ಸೂರ್ಯನಲ್ಲಡಗಿರುವುದು—ಒಂದೇ ಎಂದು ಅರಿವುಂಟಾದರೆ ಅನ್ನ, ಪ್ರಾಣ, ಮನಸ್ಸು ವಿಜ್ಞಾನ, ಆನಂದಗಳ ಲೋಕಗಳನ್ನೆಲ್ಲ ದಾಟಿ ಕಾಮರೂಪಿಯಾಗಿ ಮನುಷ್ಯ, "ನಾನೇ ಅನ್ನ, ನಾನೇ ಅನ್ನ; ಅನ್ನ ತಿನ್ನುವವನೂ ನಾನೇ; ವಿಶ್ವದಲ್ಲಿ ಮೊದಲು ಹುಟ್ಟಿದವನು ನಾನು; ದೇವತೆಗಳಿಗೂ ನಾನು ಮೊದಲು; ಅಮೃತತ್ವಕ್ಕೆ ನಾನೇ ಆದಿ, ಮಧ್ಯ; ನನ್ನನ್ನು ದಾನವಾಗಿ ಕೊಡುವವರೆಲ್ಲ ನನ್ನ ರಕ್ಷಕರು. ಇನ್ನೊಬ್ಬರಿಗೆ ಕೊಡದೇ ಅನ್ನ ತಿನ್ನುವವನನ್ನು ನಾನೇ ತಿನ್ನುತ್ತೇನೆ. ನಾನು ಸೂರ್ಯನ ತೇಜಸ್ಸು" ಎಂದು ಸಾವುವೇದದೊಡನೆ ಹಾಡುತ್ತ ಹೊರಡಬಲ್ಲನು! ಇದೇ ಆ ವಿದ್ಯೆಯ ರಹಸ್ಯ! ಇವೆಲ್ಲವುಗಳಿಗೆ ಭೃಗುವಿನಂತೆ ತಪವೇ ಮುಖ್ಯ!

ಶತಪಥ ಬ್ರಾಹ್ಮಣದಲ್ಲಿ ಬರುವ ಭೃಗು-ವರುಣರ ಸಂವಾದ ಅಗ್ನಿಹೋತ್ರದ ಮಹಿಮೆಯನ್ನು ಹೆಚ್ಚಾಗಿ ಹೇಳಿದೆ. ಭೃಗುವಿನ ಅಹಂಕಾರವನ್ನು ಕಳೆದು, ಆತ್ಮಜ್ಞಾನವನ್ನುಂಟುಮಾಡಿಕೊಡಲು ವರುಣ ಅವನನ್ನು ಸೃಷ್ಟಿಯ ಪ್ರದಕ್ಷಿಣೆಗೆ ಕಳಿಸುತ್ತಾನೆ.

ಪ್ರಾಙ್ ಪುತ್ರಕ ವ್ಯಜಾನಾತ್ ತತ್ರ ಯತ್ ಪಶ್ಯತ್ ತದಾದೃಷ್ಟ್ವಾ ದಕ್ಷಿಣವ್ಯಜಾನಾತ್.....ಇತ್ಯಾದಿಯಾಗಿ ವರುಣ ಭೃಗುವನ್ನು— ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಈಶಾನ್ಯ, ನೈಋತ ದಿಕ್ಕುಗಳಲ್ಲಿ ಸಂಚರಿಸಿ ಜ್ಞಾನ ಪಡೆದುಕೊಂಡು ಬರಲು ಕಳಿಸುತ್ತಾನೆ

ವರುಣನ ಆಜ್ಞೆಯ ಮೇರೆಗೆ ಭೃಗು ಪೂರ್ವಕ್ಕೆ ಹೋಗುತ್ತಾನೆ ಅಲ್ಲಿಯ ಪುರುಷರು ಒಬ್ಬರನ್ನೊಬ್ಬರು ಕೊಂದು ತಿನ್ನುವವರು. "ಯಾಕೆ ಹೀಗೆ? ಇದಕ್ಕೆ ಬೇರೇನೂ ಪ್ರಾಯಶ್ಚಿತ್ತವಿಲ್ಲವೆ?" ಎಂದು ಭೃಗು ಅವರನ್ನು ಕೇಳಲಾಗಿ "ಕಾತಿ ಪಿತಾ ತೇ ವೇದೇತಿ" — "ಏನಿದೆ ಎಂಬುದು ನಿನ್ನ ತಂದೆಗೇನೇ ಗೊತ್ತು" ಎಂದು ಹೇಳುತ್ತಾರೆ

ಅದರಂತೆ ದಕ್ಷಿಣ, ಪಶ್ಚಿಮ, ಉತ್ತರಕ್ಕೆ ಹೋದಾಗಲೂ ಇದೇ ಬಗೆಯ ಕೃತ್ಯ ಕಣ್ಣಿಗೆ ಬೀಳುತ್ತದೆ. ಅಲ್ಲಿಯ ಪುರುಷರನ್ನು ಕೇಳಲಾಗಿ ಅವರೂ 'ನಿನ್ನ ತಂದೆಯೇ ಬಲ್ಲ' ಎಂದು ಉತ್ತರ ಕೊಡುತ್ತಾರೆ. ಈಶಾನ್ಯ ದಿಕ್ಕಿಗೆ ಹೋದರೆ ಅಲ್ಲಿ ಇಬ್ಬರು ಸ್ತ್ರೀಯರು

(ಮುಂದಿನ ಪುಟ ನೋಡಿರಿ

ಕಂಕಣ

(ಒಂದು ವಿಮರ್ಶನ ಕಾದಂಬರಿಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು

"ತ್ರಿವೇಣಿ" ಅವರ—ಮನೋವೈಜ್ಞಾನಿಕ ವೈಖರಿಯಿಂದ ತುಂಬಿನಿಂತ—ಒಂದುತ್ತಮ ತರುಣ ಸ್ತ್ರೀಜೀವನ ದರ್ಶಕ ಶುಭ್ರದರ್ಪಣವಿದು. ಹೆಣ್ಣಿನ ಭವ್ಯಭಾವಿಗೆ ಸಮಾಜವು ನೀಡಿದ, ಹೆಣ್ಣು ತನ್ನೆದೆಯೊಲವನ್ನು ತುಂಬಿಕೊಳ್ಳಲು ಧರಿಸುವ 'ಮದುನೆ'ಯ ಕಂಕಣವಲ್ಲವಿದು!— ಮನೋವೈಜ್ಞಾನಿಕ ರಸಗ್ರಂಥಿಯಲ್ಲಿ ಜಿನುಗುವ ಮಧುರ ಭಾವಸ್ಪಂದನದ ಕಂ-ಕಣವಿದು!

'ಕಂಕಣದ'—ರೂಪದರ್ಶನದ ಮೊದಲು ಕಾದಂಬರಿಯ ಕುರಿತೊಂದು ಮಾತು:

ಇದು ಕಾದಂಬರೀಯುಗ! ದಿನದಿಂದ ದಿನಕ್ಕೆ ಕಾದಂಬರಿಗಳು ವಿವಿಧ ವೈಖರಿಯಲ್ಲಿ ಸ್ವಾದ್ಯತ ಮಾರ್ಗವೈವಿಧ್ಯದಲ್ಲಿ ಬೆಳಕು ಕಾಣುತ್ತಿವೆ. ಇಂದು ಪ್ರಕಾಶನಗೊಳ್ಳುವ ಕಾದಂಬರಿಗಳಲ್ಲಿ ಹೆಚ್ಚಿನವು ಓದುಗನಿಗೆ ನಿರುತ್ಸಾಹದ ದಾರಿಯನ್ನು ತೋರುತ್ತಿವೆಯೆಂದೆನ್ನುವಂತೆ, ಓದಿಗಾಗಿ ತಪಿಸುವವರೂ ಓದನ್ನು ಕಡಿಮೆ ಮಾಡಿ, ಬೆರಳೆಣಿಕೆಗೆ ನಿಲುಕುವಷ್ಟು ಲೇಖಕರ ಕಾದಂಬರಿಗಳನ್ನೇ ಕೈಗೆತ್ತಿಕೊಳ್ಳುವಂತಹ ಪರಿಸ್ಥಿತಿಗೆಡೆಬಂದುದು ವಿಷಾದದ ಮಾತಾಗಿದೆ. ಅರ್ಥಾತ್ ಹೆಚ್ಚಿನ ಕಾದಂಬರಿಗಳು ಅಶ್ಲೀಲದ ಜಾಲಗಳು; ಅಲ್ಲದೆ ಚರ್ವಿತ-ಚರ್ವಣವಿರುವುವುಗಳು!

ಇರಲೀ ಮಾತು!

'ಸಾಹಿತ್ಯ' ಮಾರ್ಗದಲ್ಲಿ ತನ್ನದೇ ಆದ ವಿಶಿಷ್ಟ ಪಂಥವನ್ನರಳಿಸಿ ನಿಂತ 'ಕಾದಂಬರಿ'ಯು ತೋರಬೇಕಾದುದು— ಮಾನವ ಜೀವನದ ಭಾವಪ್ರಚೋದನೆಯೊಡನೆ ಸಾಗಿನಿಂತ ವಿವಿಧ ಜೀವನದ ಅಂತರ್ನಾದವನ್ನು! ಜನತೆಯು ಆರೋಗ್ಯವೂ-ಮಾನಸಿಕೋನ್ನತಿಯೂ ಕಾದಂಬರಿಯು ತನ್ನಲ್ಲಿರಿಸಬೇಕಾದ ಇನ್ನೊಂದಾದರ್ಶ!

ಆದುದರಿಂದ,

ಕಾದಂಬರೀಕಾರನಲ್ಲಿ ಯಶೋಮುಖವಾದ ಸೃಜನಶಕ್ತಿಯಿರಬೇಕು. ಅವನಲ್ಲಿ ಮಾನುಷೋಚಿತವಾದ ಯಾವ ಅಧಾವವೂ-ಕೂರತೆಯೂ ಇರಬಹುದಾದರೂ, ಕಾಲ್ಪನಿಕ ಶಕ್ತಿಯ ಪ್ರಖರತೆ ಮಾತ್ರ ಅಗತ್ಯ ಬೇಕು. ಈ ಶಕ್ತಿಯಿದ್ದರೆ ಆತ ತನ್ನ ಅನುಭವಕ್ಕೆ ನಿಲುಕಿದ-ಜೀವನ ಹಾಗೂ ತದಂತರ್ಗತವಾದ ಗೂಢಾತ್ಗೂಢತಮವಾದ ಮನೋಭಾವ—ಇವುಗಳನ್ನು ಚಿತ್ರಿಸಬಲ್ಲನು. ಓದುಗನು "ತಾನು ಜೀವಂತ ಸನ್ನಿವೇಶದಲ್ಲಿ ಸ್ವನಿರ್ವಿಶೇಷವಲ್ಲದ ಪಾತ್ರಗಳೊಡನೆ ವ್ಯವಹರಿಸುತ್ತೇನೆಂದು" ಭಾವಿಸಬೇಕಾದರೆ, ಕಾದಂಬರೀಕಾರನು ಮನೋವೈಜ್ಞಾನಿಕ ಗತಿಯ, ಜೀವನ ವಿಶ್ಲೇಷಣಾ ಕಾರ್ಯದರ್ಶಕ ಕಲ್ಪನಾಶಕ್ತಿಸಂಪನ್ನನಿರಬೇಕು. ಇಂತಹ ರಸಿಕ ಕಾದಂಬರೀಕಾರನು, ತನ್ನ ರಚನಾಶೈಲಿಯನ್ನು ಸಜೀವವೂ—ಪರಿಣಾಮಕಾರಿಯೂ ಮಾಡಲು ಗೂಢತೆಯ ವೈಶಿಷ್ಟ್ಯವಿರದೆ ಸರಳತೆಯ ಮಾರ್ದವವಿರುವ ಭಾಷಾ-ಭಾವವನ್ನು ಮಧುರವಾಗಿ ಹೊಸೆಯುವನು

ಆದುದರಿಂದ, ಕಾದಂಬರೀಕಾರನು— ಮಾನವ ಜೀವನ ಸಮಸ್ಯೆಯೊಡನೆ—ಸ್ವಾದ್ಯತ ಪಾತ್ರಚಿತ್ರಣವನ್ನು ವಿಕಾಸಮಾರ್ಗದಲ್ಲಿ ತಂದಿರಿಸಿ, ಸ್ವಾದ್ಯತ ಪಾತ್ರಗಳ ಭಾವವನ್ನು ಪಾಠಕರ ಹೃದಯದಲ್ಲಿಯೂ ಜಾಗೃತಗೊಳಿಸಿ—ಕಾದಂಬರೀಗತ ಘಟಕಗಳನ್ನು ಮನೋವೈಜ್ಞಾನಿಕ ಗತಿಯಲ್ಲಿ ತೋರಿದರೆ ಜನತೆಯ ಮುಂದೆ ಸದಾ ಧನ್ಯನು.

ಉಪರ್ಯುಕ್ತ ಕಾದಂಬರಿ ಹಾಗೂ ಕೃತಿನಿರ್ಮಾತೃವಿನ ಧರ್ಮವು ನ್ಯಾಯ್ಯವಾಗಿ ತಲೆಮೇರಿ ಕಳೆಯೇರಿ ನಿಂತ ಒಂದು ನೂತನ ಜೀವನ ದರ್ಶನವೇ 'ಕಂಕಣ'ದ ಕಥಾತಂತ್ರ. 'ತ್ರಿವೇಣಿ' ಯವರ ಲೇಖನಿಯಿಂದ ಅರಳಿಬಂದ ಪ್ರತಿಯೊಂದು ಕಾದಂಬರಿಯಲ್ಲೂ ಮಾನವಜೀವನವನ್ನು ವಿಶ್ಲೇಷಣೆ ಮಾಡಿ ತೋರುವ, ಅನ್ಯಾದೃಶವಾದ ಒಂದು ಬಗೆಯ ರಚನಾಸಂವಿಧಾನದ ಮಾಧುರ್ಯವಿದೆ. ಇವನ್ನು 'ಅಪಸ್ವರ,' 'ಬೆಕ್ಕಿನಕಣ್ಣು' ಮೊದಲಾದುವುಗಳಲ್ಲಿ ಧಾರಾಳವಾಗಿ ನಿಬ್ಬೆರಗಾಗಿಸಿಬಹುದಾಗಿದೆ;ಅಂತೆಯೆ ಕಂಕಣವೂ ಹೃದಯಾವರ್ಜಕವಾಗಿದೆ!

ಕಂಕಣ:—

ಹೌದು, ರಮಾ ತನ್ನ ಜೀವಿತದ ಎಲ್ಲಾ ಸುಖವನ್ನೂ ನುಂಗಿ, ತಾನು ಹೊತ್ತ ಸಂಸಾರದ ಭವ್ಯತೆಗಾಗಿ, ಹೃದಯನೇರಿ ಬಂದಿದ್ದ—ತನ್ನ ಇಷ್ಟದೇವತೆಯಾಗಿ ರೂಪುಗೊಳ್ಳಲಿದ್ದ ನಾಗೇಂದ್ರನಸ್ತು ದೂರ ವಿರಿಸಿ—ತನ್ನ ಬಾಳನ್ನು ಕಡೆಗಣಿಸಿ—ಕುರುಡನೊಬ್ಬನ ಕೈಹಿಡಿಯಲು ಕಂಕಣ ತೊಟ್ಟಳು—ರಮಾ! ಅಯ್ಯೋ! ಪಾಪವೆನಿಸುತ್ತದೆ!

ಹೃದಯವಿದಾರಕ ಜೀವನವದು! ರಮಾ—ಸೀತಾರಾಮಯ್ಯನವರ ಮಗಳು. ಮಗಳು ಪ್ರಾಯಕ್ಕೆ ಬರುತ್ತಿರುವಾಗ, ತಾಯಿ ವಿವಾಹದ ಯೋಚನೆಯ ಮಾಡಿದರೂ, ತಂದೆಯು ಸಮ್ಮತಿಸಿಲ್ಲದೆ ಉರುಳಿತು. ಅಳೆ ಕಲಿಯತೊಡಗಿದಳು. ಅದರೆ ಸೀತಾರಾಮಯ್ಯನವರು ಮಗಳ ಭವಿಷ್ಯವನ್ನು ಕಾಣಲು ವಿಧಿಯ ಮುಂದೆ ಅಶಕ್ತರಾದರು. ಸೀತಾರಾಮಯ್ಯನವರ ಮರಣದ ಬಳಿಕ, ರಮೆಯೆ ಎಲ್ಲರಿಗೂ ಪಥದೀಪಿಕೆಯಾಗಬೇಕಾಯಿತು. ಆಕೆಗೆ ವಿದ್ಯಾಭ್ಯಾಸಕ್ಕೆ ಸಾಕಷ್ಟು ಅನುಕೂಲ ವಿಲ್ಲದಿದ್ದರೂ, ತಾಯಿ ಮನೆಯ ಒಡವೆ ಪಾತ್ರೆಗಳಲ್ಲಿ ಅನೇಕವನ್ನು ಮಾರಿದಳು. ರಮೆಯ ವಿದ್ಯೆಯು 'ಬಿ. ಎ.' ಎಂಬ ಎರಡಕ್ಷರದಲ್ಲಿ ಪೂರ್ಣಗೊಂಡಂತೆ, ಆಕೆ ಮುಂದೆ ಹೆಣ್ಣಾದರೂ ಗಂಡಿನ ಹೊಣೆ ಹೊತ್ತು ಸಂಸಾರದ ರಕ್ಷಣೆಗಾಗಿ, ಮನೆಯ ಹೊರಗೆ ಕಾಲಿರಿಸಿದಳು. ತನ್ನ ಬಳಿಕ ಬಂದ ತಮ್ಮಂದಿರನ್ನು—ತಂಗಿಯಂದಿರನ್ನೂ, ಆಕೆಯೆ ನೋಡಿಕೊಳ್ಳಬೇಕಾಯಿತು. ರಮೆಯಂತೆಯೆ ಕಾಲೇಜಿನಿಂದಲೇ ಆಕೆಯ ಗೆಳತನದೊಡನೆ ಸಾಗಿನಿಂತ ಇನ್ನು ಕೆಲವರು ಗೆಳತಿಯರಿರುವರು. ಅವರು ಒಂದೊಂದು ವಿಧದಿಂದ ರಮೆಯ ಜೀವನದ ಮುಂದೆ ಸಾಗಿನಿಂತು ಹೋದರು. ಈ ಗೆಳತನದ ಒಡನಾಟದಲ್ಲಿ—ಒಡನಾಟದಲ್ಲಿ ಯುವಜನಸದೃಶವಾಗಿ ತಲೆದೋರುವ ವಿವಿಧ ಹೃದಯತಾಡನದ ತಾಗಲಾಟದಲ್ಲಿ—ರಮಾ ಬೆರೆತು - ಸಾಗಿದಂತೆ, ತನ್ನ ಸಂಸಾರನಿರ್ವಹಣೆಗಾಗಿ—ಟಿಕ್ಕ ಟ್ಯೂಶನ್ ಸಂಪಾದಿಸಿದಳು. ಅಲ್ಲಿಂದ ಮುಂದೆ 'ಶಿಶುವಿಹಾರದಲ್ಲಿ' ಉಪಾಧ್ಯಾಯಿನಿಯಾದಳು. ಆ ಬಳಿಕ "ಕರ್ನಾಟಕ ಟ್ಯುಟೋರಿಯಲ್ ಇನ್‌ಸ್ಟಿಟ್ಯೂಟ್"ನಲ್ಲಿ ಅಧ್ಯಾಪಿಕೆಯಾದಳು. ಈ ಜೀವನಕಾಲದಲ್ಲಿಯೆ ರಮೆಯ ಮುಂದೆ ಅನೇಕ ಸಮಸ್ಯೆಗಳು ಮೂಡಿಬಂದುವು. ಇಲ್ಲಿಯೆ ಕಂಕಣದ ಜೀವನಾಡಿಯು ಸ್ಪಂದಿಸುತ್ತಿರುವುದು ರಮಾ ಇಲ್ಲಿ ಸಾಂದರ್ಭಿಕವಾಗಿ ತನ್ನ ಶಿಷ್ಯನೇ ಆದರೂ ತನಗಿಂತ ಹಿರಿಯವನಾದ 'ನಾಗೇಂದ್ರ'ನನ್ನು ಹೃದಯದಲ್ಲಿ ಎರಕವಾಗಿಸಿ, ವಿವಾಹಕ್ಕಾಗಿ ಹೃದಯವನ್ನು ಸಂಸಾರದ ಸುಂದರ ರೂಪಣಾನಂತರದಲ್ಲಿ—ನೆಲೆಗೊಡಿಸಿದರೆ, ಇತ್ತ ಆಕೆಯ ತಂಗಿ ಜಾನಕಿಯು, ತುಂಬಿದ ಹೆಣ್ಣು ದಾರಿ ತಪ್ಪುತ್ತಿರುವುದನ್ನು ಕಂಡು,—ಸಹಿಸಲಾರದೆ " ಬತ ನಾಗೇಂದ್ರನಿಂದ ಈ ಬಡತನದಿಂದ ಬಂದೊದಗಿದ ವಿಪತ್ತು ನೀಗದೆಂದು ಬಗೆದು—" ತನ್ನನ್ನು ಶ್ರೀಮಂತ ಕುರುಡನೊಬ್ಬನಿಗೆ ಮುಡಿಪಾಗಿಸಲು ಸಿದ್ಧಳಾಗುವಳು, ಈ ನಿರ್ಣಯದ ಮುಂದೆ—ಆಕೆಯು ಗೆಳತಿ ಅಮೃತ " ಬಿಗೈಗಿಂತ ಹಿತ್ತಾಳೆ ಕಡಗ ವಾಸಿಂತ " ಎಂದರೆ ರಮಾ " ಗಂಡನೇ ಇಲ್ಲದಿರುವುದಕ್ಕಿಂತ ಕುರುಡುಗಂಡನಿರುವುದು ವಾಸಿ " ಎಂದು ಅವಿವಾಹಿತೆ ಅಮೃತಳ—ಮುಂದಾಡಿದಂತೆ—ಕತೆಯು ಗಂಭೀರವಾದ ಸುಳಿಯಲ್ಲಿ ಆಳವಾಗಿ ಇಳಿದುಬಿಡುವುದು; ಇಳಿದಲ್ಲಿಂದ ಅಂದೋಲನಗಳು ಏಳುತ್ತಲೇ ಇರುವುವು.

ಕಂಕಣದಲ್ಲಿ 'ರಮಾ'ಳ ಜೀವನದರ್ಶನ ಮಾತ್ರವಲ್ಲ ಇರುವುದು. ಇಲ್ಲಿ ಕಾಣುವ ಜೀವನಗಳು ಒಂದೆರಡಲ್ಲ. ಇದೊಂದು ಮಿಶ್ರಪಾಕ. ಅಂತರ್ಮುಖರಸೋದಯವಾದ ಹೃದಯಪಾಕ! ರಮೆಯು ಕಥಾನಾಯಕಿ ಮಾತ್ರ! ರಮೆಯ ಜೀವನದ ವಿವಿಧ ಸ್ಪಂದನಗಳನ್ನು ಲೇಖಕಿಯರು, ಮಾರ್ಮಿಕ ಘಟನೆಗಳಿಂದ ತೋರಿಸಿದಂತೆ,—ಆಕೆಯು ಗೆಳತಿಯರಾಗಿ ಬಂದ " ಅಂಬಿಕಾ, ಕಸ್ತೂರಿ, ಸುಶೀಲಾ, ಅಮೃತ, ವೇದವಲ್ಲಿ" ಇವರ ಮಾರ್ಮಿಕೇತಿವೃತ್ತದಿಂದಲೂ ಕೆರಳಿಸಿ ತೋರಿದ್ದಾರೆನ್ನಬೇಕು. ಇವರೆಲ್ಲರೂ ಒಡನಾಡಿಗಳು ಮಾತ್ರ ಅಲ್ಲ. ಪದವೀಧರೆಯರು—ಒಬ್ಬೊಬ್ಬರು ಒಂದೊಂದು ವಿಧದ ಜೀವನ ಸಂಬಂಧಕ್ಕೆ ತುತ್ತಾಗಿ ಸಾಗುವರು! ರಮೆಯಂತೆ ಇವರಲ್ಲಿ ಪ್ರತಿಯೊಬ್ಬರ ಜೀವನದಲ್ಲೂ ಬಿರುಗಾಳಿಯೆದ್ದಿದೆ. ಈ ಬಿರುಗಾಳಿಯು ಬೀಸಿದ ದಾರಿಯಲ್ಲಿ ದುರಂತವೆದ್ದಿದೆ; ತಾಕಲಾಟವೆದ್ದಿದೆ; ಅಸ್ತವ್ಯಸ್ತವಾದ ಪರಿಸ್ಥಿತಿಯೆದ್ದಿದೆ. ಈ ಜೀವನಗಳ ಮಧ್ಯವರ್ತಿಯಾಗಿ ಸಾಗಿನಿಂತ ರಮೆ—ತಾನು ಹೊಸ ಸಂಸಾರದ ಹೊಣೆಯೊಡನೆ ಗಂಡಾಗಿ ಬಾಳುತ್ತ—ಗೆಳತಿಯರ ಜೀವನದ ನಡುವೆ ಹೆಣ್ಣಾಗಿ ಆ ಜೀವನಗಳನ್ನು ನಿಟ್ಟಿಸುತ್ತ ಸಾಗಿನಿಂತಿದ್ದಾಳೆ! ಪ್ರತಿಯೊಂದು ಜೀವನದ ಪ್ರಭಾವವೂ ರಮೆಯ ಹೃದಯವನ್ನು ತಟ್ಟಿದೆ! ಈ ತಟ್ಟುವಿಕೆಯಂತೆ ಆಕೆಯನ್ನು ಸ್ವಜೀವನ ಕುಠಾರವೂ ಬಡಿದು ನೋವೆಬ್ಬಿಸಿದೆ! ಬಾಳಿನ ಸಿಹಿ-ಕಹಿಗಳು ಆಕೆಯನ್ನು ಮುಂಗಿವೆ!

" ಅಂಬಿಕಾ "—ಈಕೆ ಶ್ರೀಮಂತರ ಹುಡುಗಿ; ಬೆಡಗಿನವಳು;

(೭೦ನೆಯ ಪುಟದಿಂದ ಮುಂದುವರಿದುದು.)

ಒಬ್ಬಳು ಕಲ್ಯಾಣಿ. ಇನ್ನೊಬ್ಬಳು ಅತಿಕಲ್ಯಾಣಿ. ಅವರ ಮಧ್ಯೆ ಕಪ್ಪು ವರ್ಣದ ಹಳದೀ ಕಣ್ಣಿನವನೊಬ್ಬ!

ಭೃಗು ಇದರರ್ಥವನ್ನು ತಿಳಿಯದೆ ಬಂದು ತಂದೆಗೆ ನಿವೇದಿಸಿ, ಅರ್ಥವನ್ನು ಹೇಳಬೇಕೆಂದು ಬೇಡಿಕೊಳ್ಳುತ್ತಾನೆ ವನಸ್ಪತಿಯು ಸಮಿತ್ತನ್ನು ತಂದು ಯಜ್ಞ ಮಾಡುವವರು ವನಸ್ಪತಿಯು ಲೋಕವನ್ನು ಗೆಲ್ಲುತ್ತಾರೆ. ಹಾಲಿನಿಂದ ಯಜ್ಞ ಮಾಡುವವರು ಪಶುಗಳ ಲೋಕವನ್ನು ಗೆಲ್ಲುತ್ತಾರೆ ಹುಲ್ಲಿನಿಂದ ಮಾಡುವವರು ಔಷಧಿಗಳ ಲೋಕವನ್ನು ಗೆಲ್ಲುತ್ತಾರೆ. ಇದರಂತೆ ನೀರಿನ ಲೋಕವನ್ನು ಗೆಲ್ಲಬಹುದು.

"ಸಾ ಯಾ ಕಲ್ಯಾಣೀ ಸಾ ಶ್ರದ್ಧಾ ಸ ಯತ್ ಪೂರ್ವಾಮಾಹುತಿಂ ಜುಹೋತಿ ತೇನ ಶ್ರದ್ಧಾಂ ಜಯತಿ। ಯಾತಿಕಲ್ಯಾಣೀ ಸಾತಿಶ್ರದ್ಧಾ ಸ ಯದುತ್ತರಮಾಹುತಿಂ ಜುಹೋತಿ ತೇನಾತಿಶ್ರದ್ಧಾಂ ಜಯತಿ। ನಡುವಿನ ಮನುಷ್ಯ ಕ್ರೋಧ. ಅವರಿಬ್ಬರು ಸ್ತ್ರೀಯರು ಶ್ರದ್ಧೆ, ಅಶ್ರದ್ಧೆಯರು! ಸ್ಪುಟ್ಯಪದಿಂದ ಯಜ್ಞ ಮಾಡುವವನು ಇವೆಲ್ಲವನ್ನು ಗೆಲ್ಲುತ್ತಾನೆ.

ಅಗ್ನಿಹೋತ್ರ ತಪಸ್ಸುಗಳಿಂದ, ನಿಷ್ಠೆ-ಶ್ರದ್ಧೆಗಳಿಂದ, ಧ್ಯಾನ ಮನನಗಳಿಂದ ಸೃಷ್ಟಿ-ಸ್ಥಿತಿ-ಲಯಗಳಿಗೆ ಮೂಲಭೂತವಾದ ಬ್ರಹ್ಮನನ್ನು ಅರಿಯಬಹುದು ಎಂಬುದನ್ನು, ವರುಣ ಭೃಗುವಿಗೆ ಹೇಳುತ್ತಾನೆ— ಯುಧಿಷ್ಠಿರರಾಜ ಕಠೋಪನಿಷತ್ತಿನಲ್ಲಿ ನಚಿಕೇತನಿಗೆ ಹೇಳಿದಂತೆ.

ಚೆಲ್ಲಾಟದವಳು. ಗೆಳತಿಯರ್ಯಾಗಿ ಹಾತೊರೆಯುವಾಕೆ. ಆಕೆ ಜೀವನದಲ್ಲಿ ತನ್ನ ಪತಿಯನ್ನು ಹೊಂದುವ ಮೊದಲು—ತನ್ನದೇ ಗೆಳತಿಯಾದ 'ಕಸ್ತೂರಿ'ಯನ್ನು ಸಾಯುವಂತಾಗಿಸಿ ಕೊರಗಿದಳು; ಅವಿವೇಕದ ಹೆಜ್ಜೆಯನ್ನಾಕೆ ತುಳಿದರೂ ಸಹೃದಯಿನಿ;—

ಕಸ್ತೂರಿ—ಹೃದಯವಿಕಾರದ ಕತೆಯಾಕೆಯದು! ಗೆಳತಿಯರೆಲ್ಲರೂ ಸೇರಿಕೊಂಡು—ಅಂಬಿಕೆಯೊಡನೆ ಆಕೆಯ ಚಿಕ್ಕಪ್ಪನ ಮನೆಗೆ ಹೋದಾಗ, ಆಕೆಯು ಚಿಕ್ಕಪ್ಪನ ಮಗನಾದ ಸುರೇಶನನ್ನು ಮನಸಾ ಮೆಚ್ಚಿ ವರಿಸಬಗೆದವಳು! ಈ ನಿಶ್ಚಯದ ಮುಂದೆ ತನ್ನ ಮನೆಯವರು ನಿಶ್ಚಯಿಸಿದ ವರನನ್ನೂ ಒಲ್ಲದಾದಳು. ಆದರೇನು— ಧೂರ್ತನಾದ ಸುರೇಶನು ತನಗೆ ಕಸ್ತೂರಿ ಬರೆದ ಓಲೆಯನ್ನು ಅಂಬಿಕೆಗೆ ಕಳುಹಿ, ಆಕೆಯನ್ನು ಕೆರಳಿಸಿದನು. ಅಂಬಿಕೆಯು ಅಂತರಂಗದ ನೆಲೆಯರಿಯದೆ ಕಸ್ತೂರಿಯನ್ನು ಛೀಗಳೆದು ಬೈದು ಭಂಗಿಸಿದಳು. ಕಸ್ತೂರಿಯ ಜೀವನ ರೈಲುಗಾಡಿಯ ಚಕ್ರದಡಿಯಲ್ಲಿ ಹೋಳುಹೋಳಾಯಿತು. ದುರ್ಧರ ಪ್ರಣಯಪ್ರಸಂಗವದು!

ಸುಶೀಲ—ತಾನು ಮೆಚ್ಚಿದ ವರನೇ ಕಾರಣಾಂತರದಿಂದ ತನ್ನ ಪಾಲಿಗಿಲ್ಲದಾಗಲು, ಸಮಾಜದ ಮೇಲೋ ಇಲ್ಲವೇ ಜೀವನದ ಮೇಲೋ ಮುಯ್ಯಿ ತೀರಿಸುವುದಕ್ಕಾಗಿ ಜೀವನವನ್ನು—ತದುದ್ದೇಶವನ್ನು—ತನ್ಮಾನವನ್ನು ಕಡೆಗಣಿಸಿ ಸಾಗಿ—ಯೌವನದ ಸಾರ್ಥಕ್ಯದೊಡನೆ ಜೀವನಸುಖವನ್ನು ನಿಟ್ಟಿಸಿ ಸಾಗಿದಳು. ಈಕೆಯು ಕಂಡ ಸುಖವಿದು! ಕಾರಣ ಆಕೆಯು ಈ ವಿವಾಹದ ಭವ್ಯಗೋಪುರದ ಬಾಹ್ಯಸ್ಥಿತಿಯನ್ನು—ತದಂತರ್ಗತ ರುದ್ರ ಭೀಕರ ತಾಂಡವ ತಾಡನಗಳನ್ನು ಅನುಭವಿಸಿ—ನಿಶ್ಚಿತಾರ್ಥಕ್ಕೆ ಬಂದವಳು! ಸೌಂದರ್ಯದ, ಯೌವನದ ಕೃಪ್ತಿಯನ್ನೇ ಆಕೆ ನಿಮಿತ್ತಾಯಳಾಗಿ ನಿಟ್ಟಿಸಿದಳ!

ಅಮ್ಮೆ—ವಿವಾಹಕ್ಕಾಗಿ ಹಾತೊರೆದರೂ, ಕೊನೆಯವರೆಗೂ ಆಕೆ ಈಡೇರಲಾರದೆ ನವೆದವಳು. ಕನ್ನಿಂದಾಗಿ ತನ್ನ ತಮ್ಮನಿಗೆ ತೊಡಕಾಗಬಹುದಾದ ಮದುವೆಯನ್ನು ಸಾಗಹಚ್ಚಿ—ಕೊನೆಯವರೆಗೂ ಹಾಗೆಯೆ ನಿಂತವಳು. ಆಕೆಯ ಕಣ್ಣ ಮುಂದೆ ಹಿಂದೆ ದಪ್ಪ ಕನ್ನಡಕವಿದೆ; ನವರತ್ನಗಳಲ್ಲಿ 'ಮುತ್ತಿ'ನ ಮೇಲೆ ಆಕೆಗೆ ತುಂಬಾ ಆಶೆಯಿದ್ದರೂ— ಜೀವನದಲ್ಲದನ್ನು ಹೊಂದಿಸಲಾರದ ಅಸಹಾಯಿನಿ! ಆಕೆಗೆಂದು ವಿವಾಹವೊ!

ವೇದವಲ್ಲಿ— ಸ್ವಾಭಾವಿಕವಾಗಿ ಅಯ್ಯಂಗಾರರ ಮನೆತನಕ್ಕಿರುವ ಸೌಂದರ್ಯ ಇವಳಿಗಿಲ್ಲ! ಇವಳು ಮನೆತನದ ಗೌರವಕ್ಕೆ ಕಪ್ಪೆರಚಿ, ಯಾವನೋ ಒಬ್ಬ ಸ್ಟುಡಿಯೊದವನೊಡನೆ ಸಾಗಿ, ಕೊನೆಗೆ ಅವನ ದುಃಸ್ಥಿತಿಯಲ್ಲಿ ಪಡಲಾರದ ಬವಣೆ ಪಟ್ಟು, ಯಾವ ಗತಿಯನ್ನೂ ಕಾಣದೆ—ಅಂತರ್ಜಾತಿಯ ವಿವಾಹದ ನೋವನ್ನು ಅನುಭವಿಸಿ- ಭ್ರಷ್ಟೆಯಾದವಳು! ದುರಂತದ ಮತ್ತೊಂದು ರೇಖೆಯದು!

ಇವರಿಷ್ಟು ಮಂದಿ ರಮೆಯ ಜೀವನದಲ್ಲಿ ಬೆರೆತುನಿಂತ ಗೆಳತಿಯರು! ಇವರೆಲ್ಲರ ಜೀವನದ ಸಾಗಿನಲ್ಲೂ ಲೇಖಕಿಯರು ರಮೆಯ ಪಾತ್ರಚಿತ್ರಣವನ್ನು ತುಂಬಿದ್ದಾರೆ. ರಮೆಯ ಚರಿತ್ರಚಿತ್ರಣದಲ್ಲಿ ನೂತನವಿಸ್ತಾರವನ್ನು ಲೇಖಕಿಯರು ಗೈದಂತೆ, ಕಥಾಸಂವಿಧಾನದಲ್ಲೂ ಸೆಳೆದಿರುವ ಮಧುರವಾದ ಕ್ರಮವನ್ನು ಪರಿಶೀಲಿಸುವ:—

ಕಥಾರಂಭವು ರಮೆಯ ಜೀವನಕಥೆಯನ್ನು ರುಳಿಸಿಕೊಂಡು ಸಾಗಿದೆ. ಇಲ್ಲಿ ಲೇಖಕಿಯರು—ರಮೆಯು ಪರೀಕ್ಷೆಯ ಮುಂದಿರದಲ್ಲಿ ಪಟ್ಟ ಪಾಡನ್ನು ಹಿನ್ನೆಲೆಯಾಗಿರಿಸಿಕೊಂಡು ಸಾಗುತ್ತ, ಅವಳ ಸಂಸಾರದ ಬಡತನವನ್ನೂ—ಆಕೆಯು ಪಾಲಿನ ಹೊಣೆಯನ್ನೂ ವಿಶದೀಕರಿಸಿ, ಆಕೆಯ ನಿಗೂಢಹೃದಯದಲ್ಲಿ ಅಡಗಿದ್ದ—ಶ್ರೀಮಂತ ವಿವಾಹದ ಪ್ರಸ್ತಾಪವನ್ನೆತ್ತಿ, ಕೊನೆಯಲ್ಲಾದ ವಿವಾಹದುರಂತಕ್ಕೆ ಮಾರ್ಮಿಕ ಪೀಠಿಕೆಯನ್ನು ಸೆಳೆದಿರುವುದು ಗಮನೀಯವಿದೆ. ಮುಂದೆ ಕೆಲವು ಪುಟಗಳನ್ನು—"ಗೆಳತಿಯರೊಟ್ಟಾಗಿ ಸಿನೇಮಾಕ್ಕೆ ಹೋಗುವುದು; ಮಧ್ಯದಲ್ಲಿ ಹೋಟೆಲಲ್ಲಿ ಕಾಫಿ ಕುಡಿಯುವುದು. ಕಸ್ತೂರಿಯು ತನ್ನ ಚೆಲ್ಲಾಟದ ಸೊಗದೂಟವನ್ನು ಇತರರೊಡನೆ ಕಾಲೇಜ್ ಹುಡುಗರಿಗುಣಿಸಿ ಚಕ್ಕರ್ ಕೊಡುವುದು,— ಈ ಕಥಾತಂತುಗಳು ಹೊಸೆದು ನಿಂತಿವೆ. ಈ ಭಾಗವು ಕಾಲೇಜು ಜೀವನದ ಸ್ವಾತಂತ್ರ್ಯವನ್ನೂ—ಕಸ್ತೂರಿಯು ಮುಂದೆ ಬಾಯ್ತೆರೆದು ನಿಂತಿರುವ ದುರಂತವನ್ನೂ ತೋರಿನಿಂತಿದೆ. ಲೇಖಕಿದುರಿಲ್ಲಿ ಕಸ್ತೂರಿಯು ಕೌಶಲವನ್ನು ಸೆಳೆದು ತೋರಿಯುವುದು ಒಂದುತ್ತಮ ಮನೋಧರ್ಮ ವಿಸ್ತಾರ ಸನ್ನಿವೇಶ!— ಈ ಸಂವಿಧಾನಗಳ ಮುಂದೆ ರಮೆಯ ಜೀವನಕ್ರಮವು ಸೂತ್ರಿತವಿದ್ದಂತೆ (ಟ್ಯೂಶನ್ ಇತ್ಯಾದಿ) ಒಂದು ಅಕರ್ಷಕ ಸನ್ನಿವೇಶವು ಲೇಖಿಕೆಯರಿಂದ ಹೊಸೆಯಲ್ಪಡುವುದು—ಅತಿ ಗಂಭೀರವಾಗಿದೆ. ಅದುವೆ—"ನೀಲಗಿರಿ" ಯಾತ್ರೆ! ಈ ಯಾತ್ರೆಯ ಫಲವೇ "ಕಸ್ತೂರಿ" ಯ ದುರಂತ. ಈ ಯಾತ್ರಾಕಾಲದಲ್ಲಿ—ಗೆಳತಿಯರೆಲ್ಲ ಕುಳಿತ ಬಸ್ಸಿನಲ್ಲಿ— ಹೊಸತಾಗಿ ವಿವಾಹಿತರಾದ 'ದಂಪತಿ' ಗಳಿರುವರು. ಈ ದಾಂಪತ್ಯಜೀವನದರ್ಶನವು ಗೆಳತಿಯರೆಲ್ಲರ ಮೇಲೆ ವಿದಾತೀಯವಾದ ಒಂದು ಅಂತಃಪ್ರೇರಣೆಯನ್ನುಂಟುಮಾಡುತ್ತದೆ. ಇಲ್ಲಿ ಕಾಣುವ ಮಾತುಗಳೂ ದಾರಿಯಲ್ಲಿ ಕಾಣುವ ಮಧುರ ಪ್ರಕೃತಿದರ್ಶನವೂ- ಅವಿವಾಹಿತ ಪುರೋಗಾಮೀ ಯುವಜನ ಹೃದಯದಲ್ಲಿ ಬಿರುಗಾಳಿಯೆಬ್ಬಿಸಿದಂತೆ, ಸಂದರ್ಭವಿದು ಲೇಖಿಕೆಯರ ಅಸದೃಶ ಕಲ್ಪನಾಯುತ ಕ್ರಿಯಾಶಕ್ತಿಯನ್ನು ಬೆಳಗಿ ತೋರಿದೆ! ಊಟಿಯಲ್ಲೂ ಮತ್ತೊಮ್ಮೆ—ಗೆಳತಿಯರೆಲ್ಲ ಬೋಟಿಂಗಿಗೆ ಹೋದಾಗ ಆ ದಂಪತಿಗಳು ಕಾಣಿಸುವರು. ಅಲ್ಲಿಯೂ ಕಸ್ತೂರಿಯೆ ಮುಂದೆ ನಿಂತು—ಅವರ ಭಾವಚಿತ್ರವನ್ನು ಅವರಿಚ್ಛೆಯಂತೆ ತೆಗೆಯುವಳು! ಅಂತೂ ಊಟಿಯಲ್ಲಿ 'ಸುರೇಶ ಮತ್ತು ಕಸ್ತೂರಿ' ಯರ ಪ್ರಣಯ ಪ್ರಸಂಗವನ್ನು ರೂಪಿಸಲು, ಕಸ್ತೂರಿಯ ಗಂಡಿದೆಯನ್ನು ಕರಗಿಸಿ, ಹೃದಯದಲ್ಲಿ ಅಂದೋಲನವೆಬ್ಬಿಸಲು, ಉಚಿತವಾದ ಈ ಘಟಕಗಳಿಂದ, ಲೇಖಿಕೆಯರು ಹದಬರಿಸಿದ್ದಾರೆ ಜೀವನವನ್ನು! ಇಡಿಯ ಕಂಕಣದಲ್ಲಿ ಮರೆಯಲಾಗದ ಪ್ರಧಾನಧಾಗವಿದೆಂಬಂತೆ, ಊಟಿಯ ಬೀದಿಯಲ್ಲಿ ಪುರುಷಾಹ್ವಾನಕ್ಕಾಗಿ ಕಾಲಿರಿಸಿ ನಿಂತ ಒಬ್ಬಾಕೆ ಹೆಣ್ಣಿನ ಜೀವನವನ್ನೂ ಇವರ ಮುಂದೆ ಸೆಳೆದಿರುವುದು ಮನಶ್ಶಾಸ್ತ್ರದ ಪಂಚಾಂಗದಿಂದ ದೂರ ಸರಿದಿಲ್ಲವೆನ್ನಲು ಆನಂದವಾಗುತ್ತಿದೆ. ಊಟಿಯಲ್ಲಿ

ಕಸ್ತೂರಿಗೆ ಸುಖವಿಲ್ಲದಾಗುವುದು, ವೈದ್ಯಕದ ಪದವ್ಯಾನವುಳ್ಳ ಸುರೇಶನು ಉಪಚರಿಸುತ್ತ — ಆಕೆಯ ಎದೆಯಾಳದಲ್ಲಿ ಹುದುಗು- ವುದು ಮಾರ್ಮಿಕವಾದ ರಚನೆಯಾಗಿದೆ!— ಆ ಮುಂದೆ ಊರಿಗೆ ಬಂದು ಕಸ್ತೂರಿ ತನ್ನೆದೆಯೊಲವಿನವಳಾದ ರಮೆಯಲ್ಲಿ ತನ್ನ ಜೀವನದ ದನಿಯನ್ನೇಳಿಸಿ— ' ಪ್ರೇಮ ಜೀವನ 'ದ ಕುರಿತಾಡುವುದು ಮರೆಯ ಲಾರದ ಒಂದು ಭಾಗವಾಗಿದೆ. ಇಲ್ಲಿಯ ಪ್ರೇಮಜೀವನದ ಕತೆಗಳು ಮಾತುಗಳು ವಿಪ್ಲವವೆದ್ದ ಹೃದಯದಿಂದ ಬರುವ ಮಾತುಗಳಿದ್ದಂತೆ, ಇಂದಿನ ನಾಗರಿಕ ತರುಣಿಯರು ಕಿವಿಗೊಟ್ಟು ಆಲಿಸಬೇಕಾದುವು- ಗಳವೆ! ಸುರೇಶನ ಮುಂದೆ ವಿಶ್ವಪ್ರೇಯಾಗಿದ್ದ ಕಸ್ತೂರಿಯನ್ನು ಮುಂದಿಟ್ಟುಕೊಂಡು— ಲೇಖಿಕೆಯರು ಆಕೆಯ ಮನೆಯಲ್ಲಿ ನಡೆದ ವಿವಾಹ ಪ್ರಸ್ತಾಪವನ್ನಿಲ್ಲಿ ಕೆರಳಿಸುವುದು ಮಾರ್ಮಿಕ ಕಥಾತಂತ್ರ- ವಾಗಿದೆ! ಅಂತೂ ಪ್ರೇಮತ್ಯಾಹುತಿಯಾದ ಕಸ್ತೂರಿ,— ಊರಿಗೆ ಬಂದವಳು, ತನ್ನ ಮುಂದೆ ಅನ್ಯವಿವಾಹ ಪ್ರಸಂಗ ಬಂದಾಗ, ಸುರೇಶ ತನ್ನವನೆಂದು ಬಗೆದು, ಕಾಗದ ಬರೆದು ಕೊನೆಗವನಿಂದ ತಿರಸ್ಕರಿಸ- ಲ್ಪಟ್ಟು ಅಂಬಿಕೆಯಿಂದಲೂ ನೋಯಿಸಲ್ಪಡುವುದು " ದುರಂತವಾದ ಅಸಹ್ಯವಾದ ಈದಂತತಯಾ ನಿರೂಪಿಸಲಸಾಧ್ಯವಾದ ಸಾವಿಗೆ ಬಲಿ ಯಾಗುವುದು—ಕಸ್ತೂರಿಯ ಜೀವನ ನಮ್ಮೆದೆಯನ್ನು ಸೀಳು- ವಂತೆ— ಮಣ್ಣಗೂಡುವುದು!

ಹೀಗೆ ಸಾಗಿ— ಕಥಾಗರ್ಭಕ್ಕೆ ಬಂದು ಮುಟ್ಟಿದ ಕಥಾಭಾಗದ ಅಲ್ಲಲ್ಲಿ— ರಮೆಯು ಟ್ಯೂಶನಿಗಾಗಿ ಓದ್ವಾಡುವುದು, ಹಿಂದೆ ಗೆಳತಿ- ಯರಾಗಿದ್ದವರು ತಮ್ಮ ಶ್ರೀಮಂತಿಕೆಯಲ್ಲಿ ರಮೆಯನ್ನು ಮರೆಯು- ವುದು, ಇನ್ನು ಟ್ಯೂಶನ್ ಪಡೆದಾಗ ಟ್ಯೂಶನಿಗಾಗಿದ್ದ ಹೆಣ್ಣಾಗಳ ಮೊದ್ದುಜೀವನದ್ದ ಒಡನಾಟವೆಸಗಿ ಬೇಸರಗೊಳ್ಳುವುದು, ಆ ಬೇಸರ ವನ್ನು ತನ್ನ ಸೋದ್ಯಜೀವನದ ಪಾಲನೆಯಲ್ಲಿ ಮರೆಯುವುದು— ಇವೆಲ್ಲ ಸೇರಿಕೊರೆಡಿದ್ದಂತೆ, ಹೆಂಗುಸರೇ ಚಂದಾ ಎತ್ತಿ ನಿಷ್ಫಲವಾದ ವಿದ್ಯಾಲಯುಗಳ ಅಪ್ರಯೋಜಕ ಸಂಧಿಗಳೂ ಬೆಳಕು ಕಂಡಿವೆ! ಈ ಭಾಗಗಳು ಪ್ರಧಾನ ಕಥಾಭಾಗಕ್ಕೆ ತುಂಬಾ ನೆರವೀಯುತ್ತವೆ. ಹೃದಯಶಕ್ತಿಯನ್ನು ಪೂರ್ಣತ್ವದಲ್ಲಿ ತಂದಿರಿಸಬೇಕಾದರೆ, ಪರಿಸ- ತಿಯ ಶಕ್ತಿಯನ್ನು ಪ್ರಭಾವಯುತವಾಗಿ ತೋರಬೇಕೆಂಬುದಕ್ಕಿದು ಒಂದುತ್ತಮ ಉದಾಹರಣೆ ಕಥಾಭಾಗವು ಮುಂದುವರಿದು ಹೋಗು ತ್ತಿರುವಂತೆ, ರಮಾ ಶಿಶುವಿಹಾರದಲ್ಲಿ ಉಪಾಧ್ಯಾಯಿನಿಯಾಗಿ ಸೇರಿದ್ದ ಕಾಲದಲ್ಲಿ ಒಂದು ದಿನ, ಆಕೆಗೂ ಅಮೃತಳಿಗೂ,— ನಡೆಯುವ " ಪ್ರೇಮವಿವಾಹ "ದ ಕುರಿತಿರುವ ವಾದ ವಿವಾದವು ಬಹ್ಯಾಕರ್ಷಣೀ- ಯವಾಗಿದೆ. ಈ ಭಾಗದಲ್ಲಿ ಪ್ರಾಚೀನ ವಿವಾಹಜೀವನ—ಆಧುನಿಕ ವಿವಾಹಜೀವನಗಳ ಒಳಿತು ಕೆಡುಕುಗಳ ಆಳವಾದ ವಿಚಾರವಿಮರ್ಶೆ ಸಾಗಿ ನಿಲ್ಲುವುದು ಗಮನೀಯವಿದೆ! ಇಲ್ಲಿ ಓದುಗನು ಲೇಖಿಕೆಯರ ' ಮನೋವಿಶ್ಲೇಷಣ ಕೌಶಲ್ಯ '' ದ ಚಾಕಚಕ್ಯತೆಯನ್ನು ಕಂಡು ಬೆರಗಾಗದೇಕು. ಇದನ್ನು ಒಂದು ವಿಧದಲ್ಲಿ ' ಹೃದಯಾಂದೋಲನ ' ವೆನ್ನಬಹುದು; ಇನ್ನೊಂದು ವಿಧದಲ್ಲಿ ಅಸಹ್ಯ ಪರಿವೇದನಾಯತ್ತ- ವಾಗಿ ನೆಲೆನಿಂತ, ತಾತ್ತ್ವಿಕೋಪದೇಶವೆನ್ನಬಹುದು—

ಇನ್ನೊಂದು 'ಸುಶೀಲ'ಳ ಆತ್ಮಕಥೆ. ಆಕೆ ದಾರಿ ತಪ್ಪಿದ್ದರೂ ರಮೆಯ ಮುಂದೆ ತನ್ನ ದುರ್ಭರ ಪರಿಸ್ಥಿತಿಯನ್ನರುಹಿ— ದಾರಿ- ಗಾಣದೆ— ಮುಂದಡಿಯಿಟ್ಟಿದ್ದಾಳೆ. ಈ ಭಾಗದಲ್ಲಿ ಸುಶೀಲಳ ಮಾತನ್ನು ಕೆದಕಿ—ಕೆಣಕಿ ರಮಾ ಆಡುವ ಮಾತು, ಅದನ್ನು ಪ್ರತಿ- ಭಟಿಸುವ ಸುಶೀಲಳ ಮಾತು—ಸಹೃದಯೀ ಸಮಾಜಪ್ರೇಮಿಯ ಕಣ್ಣನ್ನು ಹನಿಗೂಡಿಸದಿರದು. ಇವಳಂತೆಯೆ ಬೆಳೆದುನಿಂತ ವೇದ. ವಲ್ಲಿ-ತನ್ನ ಮುಂದೆ ಬಂದೊದಗಿದ್ದ ಯುವಕನ ಸನ್ನಿಕರ್ಷ ಸಂಬಂಧ ದಲ್ಲಿ ದಾರಿ ತಪ್ಪಿದುದು ಚೋದ್ಯಕ್ಕೆರವಾಗದು; ಸ್ವಾಭಾವಿಕವದು.

ಈ ಎಲ್ಲಾ ಸಂವಿಧಾನಗಳೆಡೆಯಲ್ಲೆ—ರಮೆಯ ಜೀವನದ ಪ್ರಸಂಗಗಳೂ ಹಾಯಾಗಿ ಉರುಳಿವೆ. ತನ್ನ ಗೆಳತಿಯರ ವೈವಿಧ್ಯ ಪೂರ್ಣ ಜೀವಿತದಲ್ಲಿ ಆಕೆ ಬೇಕಾದಷ್ಟು ಅನುಭವವನ್ನು ಹೊಂದಿದಳು. ಆಕೆ ಸಂಸಾರದ ಹೊಣೆಹೊತ್ತು, ಗೆಳತಿಯರೊಡನೆ ಆಡಿ ಕೂಡಿದಾಗ, ಕೆಲವೊಮ್ಮೆ ಆಕೆಯೊಂದಿಗೆ ಆಕೆಯ ಸೋದರ ಸೋದರಿಯರೂ ಯುವಜನರ ಮನೋಧರ್ಮದ ಆಶೆ-ರೀತಿಗಳನ್ನು ನಿಟ್ಟಿಸಿದಾಗ, ರಮೆಯ ಜೀವನದ ಬಡತನದಲ್ಲಿ ತಮ್ಮ ಆಶೆಯು ಕಡಿದೊಡೆವ ಬಗೆ- ಯನ್ನು ಅವರು ನಿಟ್ಟಿಸಿದಾಗ—ಪರಿಸ್ಥಿತಿಯ ಪ್ರಭಾವದಿಂದ ಯುವತಿ ' ಜಾನಕಿ '— ಒತ್ತಿಕೆಂಬ ತಳಕುಪೆಣ್ಣಿನ ಜತೆ ಹಿಡಿದು ದಿಟ್ಟಿ- ಯಾದುದೂ, ರಾಮನು ಸ್ವೇಚ್ಛಾಪೂರಣೆಗಾಗಿ ಕಳ್ಳತನಕ್ಕಾರಂಭಿಸಿ- ದುದೂ ಆಶ್ಚರ್ಯವಲ್ಲ! ಮಾನಸಿಕ ಪ್ರೇರಣೆಯ ತಂತ್ರೀನಾದವದು!! ಇದನ್ನರಿತವಳಾದುದರಿಂದಲೆ ರಮಾ-ತಾನು ಹಿಡಿದು ನಿಂತ ಸಂಸಾರವು ಬಡತನದ ರುದ್ರ ಭೀಷಣಗರ್ತದಲ್ಲಿ ಮುಳುಗಬಾರದೆಂದು ನೆನೆದು, ನಿರುಪಾಯಳಾಗಿ—ತನ್ನೆದೆಯ ಮುಂದೆ ಅಮೃತಕುಂಭವನ್ನು ನೀಡಿ ನಿಂತ ನಾಗೇಂದ್ರನನ್ನುಳಿದು ಕುರುಡುಜೀವನದ ಮುಂದೆ ವಿವಾಹ- ಕ್ಕಾಗಿ ನಿಂತಳು!— ಆ ನಾಗೇಂದ್ರ! ಅವನು! ಆಕೆಯ ಜೀವ! ಟ್ಯುಟೋರಿಯಲ್ ಕಾಲೇಜಿನಲ್ಲಿ ಆಕೆ ಪಾಠ ನಡೆಸುವಾಗ ನಡೆದ ಘಟನೆ! ಶ್ರೀನಿವಾಸರಾವ್ ಎಂಬ ಅಧ್ಯಾಪಕನ ಕುಹಕವರ್ತನೆಯ ಮುಂದೆ ಬಂದು ನಿಂತ, ನಾಗೇಂದ್ರ; ರಮೆಯೊಡನೆ— ಸಾಯಂಕಾಲ, ಸಂಜೆ, ರಾತ್ರಿ ಒಡನಾಡಿಯಾಗಿ ಸುಖ-ದುಃಖದ ಪಾರಸ್ಪರಿಕ ವಿನಿಮ- ಯದಲ್ಲಿ ಜೀವದಾಳಿ ನಿಂತ ನಾಗೇಂದ್ರ, ಒಂದು ದಿನ ತನ್ನ ಕೋಣೆ- ಯಲ್ಲೇ ರಮೆಯನ್ನು ಬರಮಾಡಿ ಮದುವೆಯಾಗ ಬಯಸಿ, ಒಂದು ರೀತಿಯ ವಿಪ್ಲವವೆದ್ದರೂ ಆಕೆಯಿಂದ ಪಾಸುಮಾರ್ಕನ್ನು ಹೊಂದಿ ತನ್ನ ತುಟಿಗಳನ್ನು ಆಕೆಯ ಬಿಸಿಯಾದ ಹಣೆಯಲ್ಲಿ ಒತ್ತಿ ನಿಲ್ಲಿಸಿದ ನಾಗೇಂದ್ರ, ಟ್ಯುಟೋರಿಯಲ್ ಕಾಲೇಜಿನಿಂದ ಒಂದು ದಿನ ಬರು- ವಾಗ ಬಂದ ಮಳೆಯ ನಿಮಿತ್ತ - ರಮೆಯ ಮನೆಗೇ ಬರುವಂತಾಗಿ, ಅಲ್ಲಿ ಉಂಡು—ಮತ್ತು ಮಳೆ ನಿಲ್ಲದಿರಲು ಆಕೆಯಿಂದ ಪಾಠ ಹೇಳಿಸಿ ಕೊನೆಗೆ " ರಮಾ " ಎಂಬ ಮಾತನ್ನೆತ್ತಿ ರಮೆಯ ಹೃದಯದಲ್ಲಿ ವಿದ್ಯುತ್‌ಸಂಚಾರವೆಸಗಿ ಸಾಗಿದ ನಾಗೇಂದ್ರ— ' ಮೇಡಂ ' ಎಂದು ಕರೆಯುತ್ತಿದ್ದು ಸದಾಕಾಲ ಒಡಬಂದು— ಕೊನೆಗೆ ' ರಮಾ ' ಎಂದು ಕರೆದು ಸಾಗಿದ ಯುವಕ ನಾಗೇಂದ್ರ,— ಅಬ್ಬ!— ಎಂತಹ ಸಂದ- ರ್ಭಗಳು ಸಾಗಿನಿಂತಿವೆ ನಾಗೇಂದ್ರನ ಮೂಲಕ ರಮೆಯಲ್ಲಿ!!

ರಮೆಯ ಹೃದಯದಲ್ಲಿ ಸಿಡಿಯುತ್ತಿದ್ದ ಗುಡುಗು-ಮಿಂಚುಗಳನ್ನು ಓದುಗನು ಕಂಡಂತೆ—ಇನ್ನೊಬ್ಬನೋಡಿದ್ದರೆ—ಅವ "ನಾಗೇಂದ್ರ". ನಾಗೇಂದ್ರ-ರಮೆಯರ ಜೀವನದ ಸಂದರ್ಭಗಳನ್ನು-ದಾರಿಗಳನ್ನು-ಮಾತುಗಳನ್ನು — ಲೇಖಿಕೆಯರು ಅನ್ಯಾದೃಶವಾದ ಮಾರ್ಮಿಕ ಶೈಲಿಯಲ್ಲಿ ರೂಪಿಸಿದ್ದಾರೆ. 'ಕಂಕಣ'ದ ಪೂರ್ಣ ಹೃದಯ ಇಲ್ಲಿದೆ. ಕಂಕಣದ ಒಳಗಡಗಿ ನಿಂತ ಸೌಭಾಗ್ಯವೂ—ದುರಂತವೂ ಚಿಲ್ಲಿನಿಂತ ಭಾಗವಿದು! ಟ್ಯೂಟೋರಿಯಲ್ ಕಾಲೇಜಿನಲ್ಲಿ— ರಮೆಯ ದೃಷ್ಟಿ ಮೇಲುರುಳಿನಿಂತ ದಿನದಿಂದ, ಶ್ರೀನಿವಾಸರಾಯನ ಕುಕರ್ಮವೃತ್ತಿಗಾಗಿ ನಿಂತ ಸಂದರ್ಭದಿಂದ—ರಮೆಯ ಮೇಲೆ ಬಿದ್ದ ನಾಗೇಂದ್ರನ ಜೀವನ ಪ್ರಭಾವವೂ—ತನ್ನಧ್ಯೆ ಸಾಗಿನಿಂತ ಜಾನಕಿ ರಮೆಯರ ವೃತ್ತವೂ—ನೊಂದೆದೆಯ ತಾಯಿಯ ವೃತ್ತವೂ—ಎಡೆಬಿಡದೆ ರಮೆಯ ಹೃದಯದಲ್ಲಿ ನೆಲೆನಿಂತ ನಾಗೇಂದ್ರನ ಪ್ರೇಮಭಾವ ಪರಿಸ್ಪಂದದ ವಿವಿಧ-ಲಾಸ್ಯ— ಹಾಗೂ— ತಾಂಡವ ನಟನೆಗಳೂ— ಪ್ರಬುದ್ಧ ಲೇಖಿಕೆಯರ- ಮನಶ್ಶಾಸ್ತ್ರಾನುಭವದ ಪೂರ್ಣ ಪ್ರಭಾವಯುತ ತೂಲಿಕೆಯಿಂದ ಇಳಿದು ಬಂದಿದೆಯೆನ್ನಲು ಆನಂದವಾಗುತ್ತದೆ! ಓದುಗನೀ ಭಾಗದಲ್ಲಿ ಭಾವೋದ್ರೇಕದ ವಿವಿಧತೆಗಳಲ್ಲಿ ಸಿಕ್ಕಿ ಯೋಚನಾಪರನಾಗಿ ಲೇಖಿಕೆಯರಿತ್ತಿದ ಆದರ್ಶದ ಮುಂದೆ ಬೆರಗಾಗುವನೆಂಬಲ್ಲಿ ಸಂಶಯು-ಕ್ಕೆಡೆಯಿದೆಯೆ?

ಮಾತಿನ ಕೊನೆಯ ಮೊದಲು—

ಇಡಿಯ ಕಂಕಣದಲ್ಲಿ ಎಲ್ಲ ನೆಯ ಪೇಜಿನಲ್ಲಿ ಕಾಣುವ ಅನ್ಯ-ತಳ ಮಾತು, ೯೯ ಮತ್ತು ೧೦೧ರಲ್ಲಿ ಕಾಣಬರುವ ಶುಶೀಲಳ ನಿರ್ಧಾರ, ಇದನ್ನೇ ಆಧರಿಸಿ ನಿಂತ ೧೦೭ನೆಯ ಪುಟ, ಮುಂದೆ ೧೩೭ ರಿಂದ ೧೩೯ ರವರೆಗೆ ಸಾಗಿನಿಂತ ನಾಗೇಂದ್ರ-ರಮೆಯರ ಒಡನಾಟದ ಮಾತ್ತಾರ, ೧೬೭, ೧೬೮ರ ಮುಂದೆ ನಿಂತ ನಾಗೇಂದ್ರ-ರಮೆಯರ ಭಾವೋದ್ರೇಕದ ಜೀವನಸಂಧಿ—ಇವು ಮರೆಯಲಾಗದ ಪುಟಗಳು! ಬೆಳಕನ್ನು ಸ್ವಾದೃತ ಪಾತ್ರಗಳಲ್ಲಿ ಕುಂಬಿಡುವ ಸಂಧಿಗಳು.

ವರ್ಣನೆ—

ಉತ್ತಮ ಭಾಷಾಸಂಪತ್ತಿನ ಸರಳ ಶೈಲಿಯಲ್ಲಿ ಮಿನುಗಿನಿಂತಿದೆ ವರ್ಣನೆ; ಮಾತಿನ ಓಜಸ್ಸು ಅಷ್ಟೇ ಗಂಭೀರವಿದೆ. ನೀಲಗಿರಿಯ ನೆಟ್ಟವನ್ನು ಲೇಖಿಕೆಯರು "ಹೆರ್ ಟಿನ್ನಿಗೆ" ಹೋಲಿಸಿ ಹೇಳಿರುವುದು ಸುಂದರವಾಗಿದೆ ಮಾತ್ರವಲ್ಲ; ಕಂಕಣದ ಸ್ತ್ರೀಜೀವನ ಕತೆಗೆ ಅನುಗುಣವಾಗಿದೆ. ಇನ್ನೊಂದೆಡೆ ತಾಯಿ, ಮದುವೆಯ ಮಾತೆತ್ತಿ ರಮಾಳನ್ನು ಕುರಿತು ಆಡಿದ " ದೇವರ ಪೂಜೆಗಾಗಿ, ನಮಗೆ ಮುಡಿಯಲು ಹೂವಿರುವುದು. ಆದರೆ ಆದನ್ನು ನಾವು ಕೇಳಿದಿದ್ದರೆ ಅದು ಗಿಡದ ಮೇಲೆ ಅನ್ಯಾಯವಾಗಿ ಒಣಗಿ ಹೋಗುತ್ತದೆ..... ಎಂದಾಡುವ ಮಾತು ಭಾವಪೂರ್ಣವಿದೆ! ಇನ್ನೊಂದೆಡೆ ನಾಗೇಂದ್ರ ರಮಾಳ ಮನೆಯಲ್ಲಿ ಊಟಕ್ಕೆ ಇದ್ದದಿನ ಆಡಿದ " ನಾನು ಉಪಾ-ಧ್ಯಾಯನಾಗಿ---ನಿಮ್ಮ ಕಿವಿಹಿಂಡಿ ಮನೆಗೆ ಹೊಟ್ಟು ಹೋಗುತ್ತಿದ್ದೆ" ಎಂಬ ಮಾತಿನ ಮುಂದೆ—" ಅವಳ ಕಿವಿಗಳು ಬಿಸಿಯೇರಿ ಕೆಂಪಾದುವು, ಅವಳ ಕಣ್ಣುಗಳು ಮುಂಗೈವರೆಗೆ ಸರಿದು ಬಂದಿದ್ದ ಕೆಂಪು ಬಳೆಗಳನ್ನು

ಸುದಾಮ ಚರಿತಂ

ಶ್ರೀ. ಸಾಲಿ ರಾಮಚಂದ್ರರಾಯ ವಿರಚಿತಂ

ಸಂಸ್ಕೃತ ನೂತನಕಾವ್ಯ — ಕ್ರಯ ೧ ರೂಪಾಯಿ

" ತುಂಬ ಆಶ್ಚರ್ಯವಾಯಿತು ಮನನೆಚ್ಚಿದೆ. ಬಹಳ ಚೆನ್ನಾಗಿದೆ. ಬಹಳ ಚೆಲೋದಾಗಿದೆ. ತುಂಬ ಸರಲವೂ ಸರಸವೂ ಆಗಿದೆ, ಸಂಸ್ಕೃತ ಕಾವ್ಯಸಾಹಿತ್ಯದ ಉದ್ದಾಮ ಕವಿಗಳನ್ನು ಪದೇ ಪದೇ ನೆನಪುರಿಸುತ್ತಲೂ ಇದೆ. ಹಳಗಾಲದ ಸಂಸ್ಕೃತ ಸಾಹಿತ್ಯ ವನದಿಂದ ಎತ್ತಿಕೊಂಡು ಇಂದಿನ ಸಾಹಿತ್ಯವನದಲ್ಲಿ ಕಸಿ ಮಾಡಿದ ಬಳ್ಳಿಯ ಹಣ್ಣಿನಂತಿದೆ. ಕಸಿಯ ಹಣ್ಣು ರೂಪದಲ್ಲೂ ರುಚಿಯಲ್ಲೂ ತಾಯಿಹಣ್ಣನ್ನು ಬಿಟ್ಟುರಲಾರದಷ್ಟೆ "

ರಾಷ್ಟ್ರಕವಿ — ಶ್ರೀ. ಎಂ. ಗೋವಿಂದ ಪೈ

ಪ್ರತಿಗಳಿಗಾಗಿ :

ಆಕಳವಾಡಿ ಬುಕ್‌ಡಿಪ್ಪೊ, ವಿಜಯರೋಡ್

ಧಾರವಾಡ.

ಸಂಸ್ಕೃತಿ ಪ್ರಕಾಶನ, ಮಾಳಮುಡ್ಡಿ

ದಿಟ್ಟಿಸಿದುವು. ಜೆರಳುಗಳು ತಟ್ಟೆಯಲ್ಲಿದ್ದ ಅಗುಳಿನೊಡನೆ ಆಟವಾಡಿ-ದುವು "—ಎಂಬೀ ಮಾತನ್ನು ಬರೆದ ಲೇಖಿಕೆಯರ ಲೇಖನಿಯ ಮಸಿಯ ಗೂಢತೆ ಚೆಲುವಾಗಿದೆ. ಕೊನೆಗೆ ತನ್ನನ್ನು ಕುರುಡನ ಬಾಳಿಗೆ ಅರ್ಪಿಸಿ-ನಾಗೇಂದ್ರನನ್ನು ಬರಹೇಳಿ;ಅವನಿಗೆ ನಿರ್ಧಾರವನ್ನು ಯಾಕೆಂದು ಹೇಳದೆ—ಕುರುಡನಿಗೆಂದು ತಿಳಿಸದೆ- ಹೇಳಿದಾಗ- ತಾಯಿ ಮುಂದೆ ಬಂದು ನಿರ್ಧಾರವನ್ನರುಹಿದಾಗ, ನಾಗೇಂದ್ರನಾಡಿದ 'ಈ ಆತ್ಮಹತ್ಯೆಯಾಕೆ ರಮಾ? ನಾನು ಅವನಿಗಿಂತಲೂ ನಿನಗೆ ಕಡಿಮೆಯಾದೆನೇ?" ಎಂದೆನ್ನುವಾಗ, ಬಿಗಿದ ಕಂಠದಿಂದ ರಮಾ "ಅಯ್ಯೋ ದೇವರೇ, ನೀವು ಹಾಗೆ ಮಾತನಾಡಿ ನನ್ನ ಕೊಲ್ಲದೇಡಿ...." ಎಂದೆಂದು ಕಸ್ತೂರಿಯ ನುಡಿಯೆತ್ತಿ, ತನ್ನೆದೆಯಾಳದ ದುಃಖವನ್ನು ತೋಡಿ ಆಡಿದಾಗ, ನಾಗೇಂದ್ರ ತತ್ತರಿಸಿದಂತೆ ಓದುಗನು ದುಃಖ-ಗರ್ತದಲ್ಲಿ ತಳ್ಳಲ್ಪಡುವನು. ಏನೊಂದು ಹಿಡಿತವೀ ಉಪಸಂಹಾರಕ್ಕೆ! ರಮೆಯುಂತಹ ಆದರ್ಶ ಹೆಣ್ಣಿನ ಜೀವನವನ್ನು ಬಿಂಬಿಸುವ ಮಾರ್ಮಿಕೋಪಸಂಹಾರವಿದು! ನಿರಾಶೆಯ ಗರ್ತದಲ್ಲಿ ನಾಗೇಂದ್ರ ತಳ್ಳಲ್ಪಟ್ಟು ಸಾಗಿದನು ರಮೆಯು ಕಲ್ಲು ವಿಗ್ರಹದಂತಾದಳು. ದಲ್ಲಾಲಿ ಪಂಡಿತರ ಮುಂದೆ ಹಿಂದೊಂದು ದಿನ ರಮಾ ಆಡಿದ " ಮೂರನೆಯ ಬಾರಿ ಹೆಣ್ಣಿಗಾಗಿ ಬಂದಾಗ ನಿರಾಶಲಾಗಲಾರಿರಿ" ಎಂದಮಾತು ಸತ್ಯವಾಗಿ—ಕೊನೆಗೆ ರಮಾ ಮದುವೆಯ ಕಂಕಣ-ವನ್ನುಳಿದು ಕರ್ತವ್ಯದ ಕಂಕಣಕ್ಕೆ ತನ್ನ ತಲೆವಾಗಿ—ತನ್ನ ಸಂಸಾರವು ಸುಭದ್ರವಾಗಲು ಶುಶೀಲವಾಗಲು ಸಾಗಿನಿಂತಳು! ಮನೋಜ್ಞವೀ ಕಥಾಕುಸುಮ. 'ಶ್ರೀವೇಣಿ'ಯವರು ಸಾಹಿತ್ಯದೇವಿಯ ತುರುಬಿ-ನಲ್ಲಿ ಒಲವಿನಿಂದ ಅಲಂಕರಿಸಿ ಮುಡಿಸಿದ್ದಾರೆ. ಸ್ವಾಗತವೀಕೃತಿ-ಕುಸುಮಕ್ಕೆ!

"ಮರಳಿನೊಂದು ಕಣ"

(ಲಲಿತಪ್ರಬಂಧ)

ಶ್ರೀ. ಎಚ್. ಡಿ. ಟಿ. ಇನಾಮದಾರ, ಗುಲ್ಬರ್ಗಾ

ಮರಳಿನ ಒಂದು ಕಣ, ಅವಿರತಪರಿಚಯದ ಮೂಲಕ ನಮಗೆಲ್ಲ ಲಘುವಾಗಿ ತೋರುವುದು; ನಿರುಪಯುಕ್ತವೆಂದು ಎನಿಸುವುದು. ಆದರೆ ಅದರ ಐತಿಹಾಸಿಕ ಅನುಭವ ಅದೆಷ್ಟು ಪುರಾತನವಾದುದು? ಅದು ಅರಿತ ಜೀವನತತ್ತ್ವದ ಆಳವೆಂತಹದು?

●

ನಾನು ಆದೇ ಆಗ ಸಿಕ್ಕ ಪತ್ರಿಕೆಯಲ್ಲಿಯು ಕವನ ಓದುತ್ತಿದ್ದಂತೆಯೇ, ನನ್ನೊರ್ವ ಮಿತ್ರರು "ಅಯ್ಯೋ, ಅದರಲ್ಲೇನಿದೆ 'ಮಣ್ಣು' ಅದೇ ಆ ಹಳೆಯ ಕಂತೆ 'Cyelie order of life' ಎಂದು ತೆಗಳಿದರು. ಅವರಿಗೆ 'ಮಣ್ಣಿ'ನ ಬೆಲೆ ಇಲ್ಲ, ಆ ದೃಷ್ಟಿಯಲ್ಲಿ-ಕವನಕ್ಕೆ ಬೆಲೆ ಇಲ್ಲವೆಂದು ಅವರ ಅಭಿಪ್ರಾಯ. ನನಗೆ ಕೇಳಿದರೆ-ಪ್ರತಿ ಕವನ-ಮಣ್ಣಿನ ಬೆಲೆ ಪಡೆದರೆ ಸಾಕು—ಅದು ಸರ್ವಮಾನ್ಯ!

ಮಣ್ಣಿನಲ್ಲೇನಿಲ್ಲ??

ಮಾನವನ ಸಂಸ್ಕೃತಿ, ಅವನ ಪ್ರಗತಿ, ಅವನ ಸುಖ-ದುಃಖ, ಉಚ್ಛ್ರಾಯ, ಅವನತಿ ಎಲ್ಲಕ್ಕೂ ಮಣ್ಣೇ ಹೊಣೆ. ಅದೊಂದಿರದಿದ್ದರೆ ಏನೆಲ್ಲಾ ಇರುತ್ತಿರಲಿಲ್ಲ! ಸೀರಿಯಾದ ಮಣ್ಣಿನಲ್ಲಿ ಎಣ್ಣೆ ಇದೆ ಎಂದೇ, ಎರಡು ಪ್ರಬಲರಾಷ್ಟ್ರಗಳ ಅವ್ಯಕ್ತಘರ್ಷಣೆ. ಅಂದೊಮ್ಮೆ ಮಣ್ಣು ಕಲ್ಲೆದ್ದಲನ್ನು ಕೊಟ್ಟಿತೆಂತಲೇ— ಏನೇನೋ ಮಾಡಿದ ಈ ಮನುಷ್ಯ. ಮೆದುಳಿಗೆಟಕದ್ದನ್ನು ಮಾಡಿ ತೋರಿಸಿದ. ಇಂದೂ ಹಾಗೆಯೆ.

ಕೃತಜ್ಞತಾಭರಿತ ನೇತ್ರಗಳಿಂದ ಮಣ್ಣಿನೆಡೆ ನೋಡಿದೆ. ಅದೊಂದು ನಿರಾಶೆಯ ನಗು ಬೀರಿತು. ಅದರರ್ಥ ಹೊಳೆಯದೆ ಹೋದರೂ—ಆ ಮಣ್ಣಿನ ಕಣ ನನಗೆ ಇತಿಹಾಸದ ನಿಗೂಢ ತತ್ತ್ವಗಳನ್ನು ತೆರೆದು ತೋರಿಸಿತು. ನೋಡಿದೆ:—ಆ ರೋಮ-ಆ ಗ್ರೀಸ್, ಅವುಗಳ ಪತನ ..... ವೇದೋಪನಿಷತ್ಕಾಲದ ಭಾರತ..... ವಿಕ್ರಮನ ಹೊನ್ನಿನ ಚೆನ್ನಾಡು.....ಇವೆಲ್ಲವನ್ನೂ ಕಂಡಿದೆ ಈ ಚಿಕ್ಕ ಕಣ; ಈ ಪುರಾತನ ಕಣ!!

ಕಾಲಭೈರವನ ತಾಂಡವನೃತ್ಯದಲ್ಲಿ ಸಿಕ್ಕು ನುಗ್ಗಾಗಿದೆ. "ಸಾಕುಮಾಡು ಸ್ವೈರವಾ" ಎಂದೆಷ್ಟೋ ಸಲ ಕೇಳಿದೆ. ಯುಗ-ಯುಗಗಳ ಅನುಭವರಾಶಿಯನ್ನು ಕಲೆಹಾಕಿದೆ; ಸಹಸ್ರಾರು ರಾಜರ ಅಳಿವುಳಿವನ್ನು ಕಣ್ಣಾರೆ ನೋಡಿದೆ. ಚಂಗೀಜ್‌ಖಾನನು ರಕ್ತದಲ್ಲಿ ಮಿಯುವುದನ್ನು ನೋಡಿರಬೇಕು; ಅಂತೆಯೇ ಬುದ್ಧನ ಪಾದಧೂಳಿಯಲ್ಲಿ ಸಿಕ್ಕು ಪುನೀತವಾಗಿದೆ. ಸೀಝರನ ಮೃತಶರೀರವನ್ನು ತೋರಿಸುತ್ತಾ— ಅಂಟನಿ " if I were to put a tongue in each wound of Caezer..... ...which will raise to mutiny" ಎಂದೆನ್ನುತ್ತಾನೆ. ಅದು ಅತಿಶಯೋಕ್ತಿಯೋ ಏನೋ! ಆದರೆ— ಮರಿಚಂದ್ರನನ್ನು ಹಾರಿಸಬಲ್ಲ ನಮ್ಮ ವಿಜ್ಞಾನಿಗಳು— ಪ್ರತಿ ಮಣ್ಣಿನ ಕಣಕ್ಕೂ ಮಾತನಾಡುವ ಶಕ್ತಿ ಕರುಣಿಸಿದರೆ..... ಅದೆಂತಹ ಕರುಣಾಜನಕ ಕಥೆಗಳನ್ನು ನಾವು ಕೇಳಬಹುದೊ!..... ಇತಿಹಾಸದ ಗೂಢಾದ್ಗೂಢ ವಿಚಾರಗಳು ಕೆಲ ಚಣದಲ್ಲಿ ಪರಿಹರಿತವಾಗುತ್ತವಲ್ಲವೇ?

ಮಣ್ಣಿನ ಕಣ ಸ್ಥಿರ— ಶಾಶ್ವತ; ನಾವು— ಈ ಜೀವಿಗಳು— ಮಾತ್ರ ಅಸ್ಥಿರರು!!

ಬಲ್ಲವರು ಜಗವನ್ನೊಂದು ರೇಲ್ವೆನಿಲ್ದಾಣವೆನ್ನುತ್ತಾರೆ. ಅಲ್ಲಿ ಯಾರು ಯಾರೋ ಬರುತ್ತಾರೆ— ಇರುವುದು ಕೆಲಹೊತ್ತು ಮಾತ್ರ-'ಕಾಲ' ಹೊಗೆ ಬಿಡುತ್ತಾ ಬರುತ್ತಾನೆ; ತಮ್ಮ ಮನ ಬಂದಲ್ಲಿಗೆ ಎಲ್ಲರೂ ತೆರಳುತ್ತಾರೆ. ರೇಲ್ವೆನಿಲ್ದಾಣವನ್ನು ಕೇಳಿದರೆ, ತನ್ನ ಗರ್ಭದಲ್ಲಿದ್ದು ಹೋದ ಶತಸಹಸ್ರ ಜನರ ರೀತಿ-ನೀತಿಯನ್ನು ಹೇಳಬಲ್ಲದು. ಅದಕ್ಕಿಂತಲೂ ವ್ಯಾಪಕವಾದ ಜೀವನ, ಅನುಭವ—ನನ್ನ ಕಣದ್ದು. ಅದರ ಆ ಚಿಕ್ಕ 'ಗೃಹಿಕೆ' - ಮಸ್ತಕವೆಂದಾದರೂ ಕರೆಯಬಹುದು—ಏನೇನಿದೆಯೊ! ಅದು ಹೇಳುತ್ತಿರಬಹುದು—ಕೇಳುವವರಿಲ್ಲ. ಅಂತೆಯೇ ಕವಿವಾಣಿ ನುಡಿಯಿತು "ಕೂಗುತಿವೆ ಕಲ್ಲು; ಕಿವಿವೆತ್ತ ಕಿವುಡರಿರಾ ಕೇಳಿ ಆ ಸೊಲ್ಲು!" ಎಂದು

ಕರುಣಾಪೂರಿತನಾಗಿ ಮರಳಿನ ಆ ಹರಳಿನೆಡೆ ನೋಡಿದೆ ಅಯ್ಯೋ 'ಅಪ್ಪ' ಎಂದು ಮರುಗಿದೆ ತತ್‌ಕ್ಷಣ ನನ್ನ ಅಲ್ಪತೆಯು ಅರಿವಾಯಿತು ನಾನೆಲ್ಲಾ ಜಗದ ಅದಾವುದೋ ಮೂಲೆಯಲ್ಲದ್ದು ಏನೇನೋ ವಿಚಾರಿಸುತ್ತೇವೆ. ಏನೋ ಬಯಕೆಗಳು— ಏನೋ ಹರಕೆಗಳು!! ಆದರೆ ನಮ್ಮನ್ನು ಹೊತ್ತಿರುವ ಈ ಭೂಮಿಯೇ ಒಂದು ಮಣ್ಣಿನ ಕಣ. ಸೃಷ್ಟಿಕರ್ತನನ್ನು ನಾನು ಭಗವಂತನೆನ್ನಲಾರೆ. ದೇವನೆ ಇದನ್ನು ಸೃಷ್ಟಿಸಿದ್ದರೆ, ಅವನು ನಿರ್ಗುಣನೋ, ಸರ್ವಶಕ್ತನೋ, ಇಲ್ಲವೆ ಸದಾನಂದನೋ ಅಗಲಾರ. ಆ ಪರಿಪೂರ್ಣನಿಂದ

ಈ ಅಪೂರ್ಣ ಸೃಷ್ಟಿ ಹುಟ್ಟಲಾರದು. ಈ ವಿಷಯದಲ್ಲಿ ನನ್ನ 'ಮತ' ಮಾತ್ರ ಪ್ಲೇಟೋನಿಗೇನೇ ಮೀಸಲು-- (God cannot be the creater of Universe— "Dailogues". ಈ ವಿಶ್ವ, ಕಾಲ ಹಾಗೂ ಅವಕಾಶಗಳ ಮಧ್ಯೆ ಇದೆ. ಅದೆಷ್ಟೋ ಗ್ರಹ, ನಕ್ಷತ್ರಗಳು ಈ ಅವಕಾಶದಲ್ಲಿ--- 'ಆಕಾಶ'ವೆಂದಾದರೂ ಅನ್ನಿ— ಇವೆ. ಸೂರ್ಯ ಪ್ರತಿನಿತ್ಯ ಸಂಕುಚಿತನಾಗಿ—ಹಿಂದಿನ ದಿನಕ್ಕಿಂತ ತೂಕದಲ್ಲಿ ೩೬೦ ಸಹಸ್ರ ಟನ್ನುಗಳಷ್ಟು ಕಡಿಮೆಯಾಗುತ್ತಿದ್ದಾನಂತೆ! ನಮ್ಮ ಸೂರ್ಯ "Milky Way" ಯಲ್ಲಿರುವ ಇಂತಹ ಅಗಣಿತ ಸೂರ್ಯರುಗಳಲ್ಲಿ ಒಬ್ಬ.

ಹೀಗೆ—ಆ 'Milky-way'ಯನ್ನೇ ಒಂದು 'ಮರಳದಿನ್ನೆ' ಯೆಂದರೆ, ನಮ್ಮ ಸೂರ್ಯ ಒಂದು ಕಣ್ಣು ಮರಳಿನ ಕಣ. ಅದೆಂದೋ ಏನೋ, ಸೂರ್ಯನಿಂದ ಹಾಯ್ದು ಒಂದು ನಕ್ಷತ್ರ ಹೋಯಿತಂತೆ; ಅದರ 'gravitational power'ನಿಂದ ಸೂರ್ಯನಲ್ಲಿಯ ಕೆಲ ಭಾಗಗಳು ಸಡಿಲಿ ಸೂರ್ಯನ ಸುತ್ತ ತಿರುಗತೊಡಗಿದುವು—ನಮ್ಮ ದೃಷ್ಟಿಗೆಟಕದ ಈ ಗ್ರಹಗಳೆಲ್ಲಾ ಸೂರ್ಯನಿಂದ ಹಾರಿ ಬಂದುವುಗಳು ನಾವಿರುವ ಭೂಮಿ ಸೂರ್ಯನನ್ನೇ ಒಂದು ಮರಳ ದಿನ್ನೆ ಎಂದು ಭಾವಿಸಿದಾಗ ಆಗುವ ಕಣ ಸೂರ್ಯ 'ಮಿಲ್ಕಿವೇ'ಯನ್ನು ಗಣನೆಗೆ ತಂದಾಗ ಆಗುವ ಕಣ!! ನಾವು ಈ ಭೂಮಿಯಲ್ಲಿ ವಾಸಿಸುತ್ತೇವೆ ನಾವೆಷ್ಟು ಅಲ್ಪರು! ಅಂತೆಯೇ ಸರ್ ಜೇಮ್ಸ್ ಜೀನ್ಸರು ನುಡಿದ ವಾಕ್ಯದಲ್ಲಿ ವಿನೀತ್ಯವಿದೆ. ಸೂರ್ಯನನ್ನು ಇವರು "a millionth part of a 'grain of sand' out of all the sea sand in the world" ಅವರ ಈ ವಾಕ್ಯ ಕೆಲಿಫೋರ್ನಿಯಾದ ಮೌಂಟ್‌ವಿಲ್ಸನ್ ಮೇಲೆ ನೂರು ಇಂಚು ಟಿಲಿಸೋಪ್‌ಕೊಟ್ಟ ಪರಿಜ್ಞಾನಕ್ಕೆ ಪರಿಮಿತವಾಗಿದೆ. ಈಗಂತೂ ಅದಕ್ಕಿಂತ ಪ್ರಬಲವಾದ ಟೆಲಿಸ್ಕೋಪನ್ನು 'mount paloma's ಮೇಲಿಂಟಿಸಿದ್ದಾರೆ! ಅದೆಷ್ಟು ಅಜ್ಞಾತಗಳು ವ್ಯಕ್ತವಾಗುತ್ತವೆಯೋ!! ಮರಳಿನ ಅಲ್ಪತೆಗೆ ಮರುಗಿ—ನನ್ನ ಅಲ್ಪತೆಯನ್ನು ತೋರಿಸಲು ಇಷ್ಟೆಲ್ಲಾ ಬೇಸರಿಕೆ ಬರುವ ಕಠಿಣತಮ ವಿಷಯಗಳತ್ತ ಪ್ರವೇಶಿಸಿದೆ. ಕ್ಷಮೆಯಿರಲಿ!

ನನ್ನ ಅಲ್ಪತೆ ಕಂಡು ಮರುಗಿದೆ ಗರ್ವಪರ್ವತ ಕರಗಿ ನೀರಾಗಿ ಹರಿಯಿತು 'ಮಣ್ಣೆ' ಎಂದೆ; ಆತ್ಮೀಯ ಮಿತ್ರನಂತೆ ಅದು ನಗುತ್ತಲೇ ಇತ್ತು. ಹೆಚ್ಚು ವಿಚಾರಿಸಿದಂತೆ, ಅದರ ಮಹತ್ತು ಮಸಕು ಮಸಕಾಗಿ ಅರಿವಾಗ ತೊಡಗಿತು. ನನಗೆ ತೋಚಿದ್ದನ್ನು ಹೇಳತ್ತಿದ್ದೇನೆ— ಆದರೆ ಈ ಕಣ-ಎಲ್ಲವನ್ನು ತಿಳಿದು-ತಿಳಿಯದಂತಿದೆ, ಶೇಕ್ಸ್‌ಪೀಯರ್ "—actor cannot keep counsel" ಎಂದ; ಅದಕ್ಕೆ "writters t o ...." ಎಂದು ಸೇರಿಸಿದರೆ? ಇರಲಿ.

ಪ್ರಯಾಣಾಭಿಮುಖವಾಗಿ ಹೋಗುತ್ತಿದ್ದ ಲಾರ್ಟೆಸ್ಸನನ್ನು ಕರೆದು ಪಾಲಿನಸ್:

"Give every man thy ear, but few thy voice

Take eachman's censure, but reserve thy judgement"

— Hamlet

ಎಂದು ಹೇಳುತ್ತಾನೆ. ಲಾರ್ಟೆಸ್ ಅದನ್ನು ಪಾಲಿಸಿದನೋ, ಇಂದೂ, ಅವನಿಗೇ ಗೊತ್ತು; ಆದರೆ ನನಗೆನಿಸುವಂತೆ—ಆ ಆಂಗ್ಲಕವಿ ಮಣ್ಣಿನ ಕಣದಿಂದ ಈ ಮಾತನ್ನು ಕದ್ದು ಕೇಳಿರಬಹುದು!

ಇದಕ್ಕೇನು ತಿಳಿದಿಲ್ಲ? ಪಾಂಡವರ ನೇಲಾದ ಅನ್ಯಾಯವನ್ನು ಇದು ಬಲ್ಲದು. ಸೀತೆಯ ದುಃಖ, ತಾರೆಯ ವ್ಯಭಿಚಾರ, ಅಹಲ್ಯೆಯ ಸ್ಖಲಿತವಿಭ್ರಮೆ, ಮಂಡೋದರಿಯ ಪ್ರೇತಪೂರಿತ ಪ್ರಕೋಪ, ಎಲ್ಲವನ್ನೂ ಕೇಳಿದೆ. ನುಡಿಯುತ್ತಿಲ್ಲ—ಅಥವಾ ನುಡಿಯುತ್ತಿದೆಯೋ!

ಜ್ಞಾನವನ್ನು ಟೆನ್ನಿಸನ್ ಹೀಗೆ ಹೋಲಿಸಿ ಕೇಳಿದ, wlvasees ನ ಬಾಯಿಯಿಂದ: ಅಂತರಿಕ್ಷ ಹಾಗೂ ಭೂಮಿಗಳು ಕೂಡುವ ಜ್ಞಾನ— ನೋಡುವ ಕಣ್ಣಿಗೆ ಸಮೀಪವೇ ಕಾಣುತ್ತದೆ. ಮುಂದೆ ಮುಂದೆ ಸಾಗಿದಂತೆ ಅದು ದೂರವಾಗುತ್ತಲೇ ಹೋಗುತ್ತದೆ. ಹಾಗೆಯೇ ಜ್ಞಾನ. ಜ್ಞಾನಸಾಗರವನ್ನು ಕಡೆದಂತೆ ಹಾಲಾಹಲವೋ, ಅಮೃತವೋ—ಹುಟ್ಟುತ್ತಲೇ ಇರುತ್ತದೆ ಆದರೂ ಆ ಕಡಲಿನಲ್ಲಡಗಿರುವ ನಿಗೂಢತೆಯ ಅನ್ವೇಷಕ್ತಗಳನ್ನರಿತವರಾರು? ಟೆನ್ನಿಸನ್‌ನ ವಿಚಾರ ನಿಜವಿರಬಹುದು. ಕೆಲಹಂಕಕ್ಕೆ ಮಾತ್ರ. ನ್ಯೂಟನ್ನನಿಗೆ—ಜ್ಞಾನ ವಾರಿಧಿಯನ್ನು ಅಪ್ಪಿರುವ ಅನಂತವಾದ ಮರಳದಂಡೆಯ ಮೇಲಿನ 'ಕಪ್ಪೆಚಿಪ್ಪು'ಗಳಂತೆ! ಒಂದಕ್ಕಿಂತ ಒಂದು ಚೆಂದ. ಒಂದರ ರೂಪು-ಇನ್ನೊಂದನ್ನು ಮೀರಿಸಿದುದು. ಈ ವಿಚಾರವೂ ಅಬಾಧಿತನಾಗಿಲ್ಲ ಅವನಾರೋ ಜ್ಞಾನವನ್ನು 'ಮರಳದಂಡೆಗೆ' ಹೋಲಿಸಿದನಂತೆ. ಇದು ಸತ್ಯಸ್ಯಸತ್ಯ. ನನ್ನ ದೃಷ್ಟಿಯಿಂದ ನೋಡುವ ಯಾವನಿಗೂ-ಮರಳಿನೊಂದು ಕಣಕ್ಕೂ, ಜ್ಞಾನಕ್ಕೂ ಇರುವ ಸಾಮ್ಯ ಕಾಣದಿರುವುದಿಲ್ಲ. ರಾಶಿ ರಾಶಿಯಾಗಿದೆ ಮರಳು. ಜ್ಞಾನವೂ ಅಂತೆಯೇ.

ಮಣ್ಣಿನಲ್ಲಿ ಎಷ್ಟು ಭಾಗಗಳಿವೆ? ಅವು ಪ್ರಸ್ತುತ ವಿಷಯದಲ್ಲಿ ಬರುವುದಿಲ್ಲ. ಆದರೂ-ಈ ಮಣ್ಣು-ಎಂದರೆ ಈ ವಿಶ್ವ ಹುಟ್ಟಿದುದು ಹೇಗೆ ಎಂಬುದು ಗಹನವಿಚಾರ. ಇದು ಜಡವಾಗಿರುವುದರಿಂದೆ-ಕರ್ತೃವೊಬ್ಬನಿರಬೇಕು; ಅವನೂ ಜಡನಾಗಿರಲಾರ. ದೇಹಾಂಗಳಿಗೂ ಹಾಗೂ ಬುದ್ಧಿಶಕ್ತಿಗೂ ಇರುವ ಸಂಬಂಧವೇ ಸೃಷ್ಟಿ ಹಾಗೂ ಸ್ರಷ್ಟು ವಿನಲ್ಲಿದೆ. ನಮ್ಮ ಅಂಗಾಂಗಗಳು ಜಡ. ಅಧಿಶಕ್ತಿ ಚೇತನ ಅದು ಪ್ರೇರೇಪಿಸುತ್ತದೆ. ಈ ಜಡ ಏನನ್ನೋ— ಎಂದರೆ ಒಂದು ಲೇಖನವನ್ನೋ, ಸುಂದರಚಿತ್ರವನ್ನೋ- ಇಲ್ಲವೇ ಮತ್ತಿನ್ನೇನನ್ನೋ ಹುಟ್ಟಿಸುತ್ತದೆ. ಹುಟ್ಟಿದ್ದು ಜಡವಾಗಿರುವುದರಿಂದ— ಕರ್ತೃ ಚೇತನಿಯಾಗಿರಬೇಕು. ಹಾಗಾದರೆ ಸೃಷ್ಟಿಕರ್ತ— 'ಚೇತನಪ್ರರೂಪಿ' ಯಾಗಿರಬೇಕು. ಇದು ವಿಜ್ಞಾನಿಗಳಿಗೆ ಹಿತವಲ್ಲ- ನನಗೂ ಸಮ್ಮತವಲ್ಲ. "ಹಿಂದೆಂದೋ ಸೂರ್ಯನನ್ನು ಹಾದು ಹೊಯಿತು ಇನ್ನೊಂದು ಪ್ರಬಲ ನಕ್ಷತ್ರ. ಆದರ ಸೆಳೆತಕ್ಕೆ ಸಿಕ್ಕು ಕೆಲ ಭಾಗಗಳು ಹುಟ್ಟಿ, ಅವನಲ್ಲಿಯ ಕೆಲ ಶಕ್ತಿವಿಶೇಷಗಳನ್ನು ಪಡೆದು—ಅವನ



ಎವೆರೆಡಿ ಬ್ಯಾಟರೀಸ್ ಲಿಮಿಟೆಡ್
ಮುಂಬಯಿ – ಮದ್ರಾಸ್ – ದೆಲ್ಲಿ – ನಾಗಪುರ – ಕಲಕತ್ತಾ – ಕಾನಪುರ

NAS-56 E-9

ಸುತ್ತು ತಿರುಗತೊಡಗಿತು. ಸೂರ್ಯನಿಂದ ಈಗಲೂ Radio active rays ಹುಟ್ಟುತ್ತಿರುವುದರಿಂದ, ನಮ್ಮ ಭೂಮಿಯಿಂದಲೂ ಹಿಂದಕ್ಕೆ ಹುಟ್ಟಿರಬೇಕು. ಹೇಗೆ 9½ Helium–ರೂಪಾಂತರ ಹೊಂದುತ್ತ–'Lead' 'ಸೀಸ' ಆಗುವುದೋ–ಹಾಗೆಯೇ ಸೂರ್ಯನಿಂದ ಸಿಡಿದುಬಂದ ಈ ಜಡ ರೂಪಾಂತರ ಹೊಂದಿ, ಕೊನೆಗೆ ಮಣ್ಣಾಗಿರಬೇಕು. ಇದನ್ನೇ ಮೂಲವಾಗಿಟ್ಟುಕೊಂಡು 'ರಸತತ್ವ'ವನ್ನು ಹೊರಗೆಡಹಬಹುದು. ಅಂತೂ ನಮ್ಮ ಮಣ್ಣು—ಹಿಂದೆ ಅದರೂ ಸರಿ–ಅಪಾರ ಶಕ್ತಿಯ ದ್ಯೋತಕ. "ನಮೋ ನಮಃ ಶಕ್ತಿ ದೇವತಾ" ಎಂದು ಕೈ ಮುಗಿದೆ.

ನನಗೆ ವಿಜ್ಞಾನಿಗಳ ಈ ವಿಚಾರದಲ್ಲೂ ಸಂಶಯ. ಆ 'ಶಕ್ತಿ'ಯು ಹುಟ್ಟಿಗೆ ಕಾರಣವೇನೋ! ಹಾಗೆ ನೋಡಿದರೆ, ಪ್ರಥಮತಃ "ಜೀವಿ" ಎಂಬುದು ಹುಟ್ಟಿದುದು ಮರಳದಂಡೆಯ ನೀಲೆಯೇ. 'ಅಮೀಬಾ'ಕ್ಕೆ ಅತಯೇವ—'ಜೀವಿ'ಗಳಿಗೆ ತವರುಮನೆ ನನ್ನ ಮರಳು. ಇದನ್ನು ಡಾರ್ವಿನ್ ಹೇಳಬೇಕಾಗಿಲ್ಲ; ಅದು ಸ್ವತಃಸಿದ್ಧ. ಮರಳಿನ ಮಹತ್ತೇ ಅಷ್ಟು. ನೀವು ಡಾರ್ವಿನ್ನನ 'Theory of Evolution' ಒಪ್ಪುವಿರೋ, ಅಥವಾ ಲಾಮಾರ್ಕನ ವಿಚಾರಕ್ಕೆ ಓಟು ಹಾಕುವಿರೋ ಅಥವಾ ಎರಡನ್ನೂ ತೆಗಳಿ, ಕ್ರಿಸ್ತರ 'Adom' ಹಾಗೂ 'Eve'ರೇ ನಮ್ಮ ಮೂಲವೆನ್ನುವಿರೋ—ತಿಳಿಯದು. ಮರಳದಂಡೆಯ ಮೇಲೆ ಲ್ಲದಿದ್ದರೆ. ಮಣ್ಣಿನ ಮೇಲಲ್ಲವೆ ಅವರು ಹುಟ್ಟಿದ್ದು? ಅಷ್ಟು ನಂಬಿದರೆ ಸಾಕು; ನನ್ನ ಕಾರ್ಯಸಾಧನೆಯಾಯಿತು.

ಈ ಮರಳಿನೊಂದು ಕಣ ಒಂದು ಕಡೆ; ಆ ಅಪಾರ ವಿಶ್ವ ಇನ್ನೊಂದು ಕಡೆ. ಈ ಇದು ಒಂದು ಅನಂತ; ಆ ಎದೂ ಒಂದು ಅನಂತ ಎರಡೂ ಅನಂತಗಳ ನಡುವೆ ನಮ್ಮ ವಾಸ. ಧನ್ಯ ಪ್ಯಾಸ್ಕಲ್ (ಫ್ರೆಂಚ್ ಕವಿ) ಧನ್ಯ!! ಈ ಅನಂತತೆಯ ತತ್ತ್ವವನ್ನು ಏನಿಸ್ಟೀನನಿಗಿಂತ ಮುಂಚೆಯೇ ನೀನರಿತಿದ್ದೆ. 'ತನ್ನ ತಾನಂತೊಡೆ ತನ್ನರಿವು ತನಗೆ ಗುರು' ಎಂದೆನ್ನುತ್ತಾರೆ ನನ್ನ ಅಲ್ಪತೆಯ ಅರಿವು ನನಗಾಗಬೇಕು ಎಂದರೆ ಮೋಕ್ಷ ಸಾಧಿಸುತ್ತದೆ. ಮತ್ತೆ ಪ್ಯಾಸ್ಕಲ್‌ನನ್ನೇ ಉದಾಹರಿಸುವುದಾದರೆ " ..... he may then realize the extent of his insignificance and the relative unimportance of his human-universe placed as is between universes which are infimately small and infimately large. "

ನನಗೆನಿಸುವಂತೆ— ಈ ಮಣ್ಣು (ಮರಳು) ಒಂದಿಲ್ಲೊಂದು ದಿನ ಸೃಷ್ಟಿಯ ವಿನಾಶಕ್ಕೆ ಕಾರಣವಾಗುತ್ತದೆ. ಹಾಗಾಗದಿರಲಿ ಎಂದು ನನ್ನ ಪ್ರಾರ್ಥನೆ ನನ್ನ ಪ್ರಾರ್ಥನೆ ಫಲಿಸುವಂತಿಲ್ಲ. 'One world Government' ಆದರೆ ಸಾಧ್ಯವೋ ಏನೋ! ಈ ಮರಳಿನಲ್ಲಿ 'ಥೋರಿಯಮ್,' 'ಹೇಲಿಯಮ್' ಮುಂತಾದ ಲೋಹಗಳಿಗೆ—ಅವುಗಳ ಕಣಗಳನ್ನು ವಿಭಜಿಸಿದಾಗ, ಅನಂತ ಶಕ್ತಿಯು ಉತ್ಪಾದನೆಯಾಗುತ್ತದೆ ಆ ಶಕ್ತಿಯನ್ನು ಮಾನವನ ಕಲ್ಯಾಣಕ್ಕೂ, ವಿನಾಶಕ್ಕೂ ಯಾವುದಕ್ಕಾದರೂ ಸರಿ ಉಪಯೋಗಿಸಬಹುದು. Atomic Energy Agency ಯವರ ಅಭಿಪ್ರಾಯ ಏನಿದೆಯೋ! ಅದರೂ ಈ ಮರಳು ಏನೆಲ್ಲಾ ಇದ್ದು—ಏನೂ ಇಲ್ಲದಂತಿದೆಯಲ್ಲವೆ?

ಕೆಲಹೊತ್ತು ಮುಗ್ಧನಾಗಿ ಕುಳಿತೆ, ಮಗುವಿನಂತೆ. ನನ್ನ ಸುತ್ತಲಿದ್ದ ಮರಳಿನ ರಾಶಿಯಿಂದ ಹಾರಿ ಬಂದ ಕಣ ನಿಸ್ಪೋಲಿಯನ್ನನ ದುರ್ದಿನಗಳನ್ನು ಹಾಡಿ ಅಳುತ್ತಿತ್ತು. ಬಹುಶಃ ಸೆಂಟ್ ಹೆಲೆನಾದಿಂದ ಹಾರಿಬಂದಿರಬೇಕೆನಿಸಿದು. ಅಲೆಗ್ಸ್ಯಾಂಡರನ ಗುಣಗಾನ ಮಾಡುತ್ತಿತ್ತೊಂದು; ಮಗುದೊಂದು ಸೀಝರನನ್ನು.

ಒಂದೊಂದು ಹರಳಿನದು ಒಂದೊಂದು ಕತೆ. ಎಲ್ಲಾ ಅಪ್ಪಟ್ಟ ಧ್ವನಿಗಳ ಸಮ್ಮಿಶ್ರ ಈ ಗಭೀರ ಮೌನ; ನೀರವ. ನಾನು ಎದ್ದು ಹೋಗುತ್ತಿದ್ದಂತೆಯೇ— ಇನ್ನೊಂದು ಹರಳು "ಅಂಟನಿ, ನೀನು ನಿಷ್ಫಾಪಿ, ದ್ರೋಹಿಯಲ್ಲ; ಆದರೂ ನಿನ್ನನ್ನು..... ....." ಎನೋ ಹೇಳುತ್ತಿತ್ತು—ನಾನು ಕೇಳದೆಯೇ ಮುನ್ನಡೆದೆ.

'ಮರೆಯಲಾಗದ ಯಾತ್ರೆ'

(ಲಲಿತ ಪ್ರಬಂಧಗಳು)

ಶ್ರೀ. ಎಸ್. ಎಸ್. ಗದಗಕರ ಪುಟ ೬೮ ಬೆಲೆ ೦-೧೫-೦

ಪ್ರಸ್ತುತ ಚಿಕ್ಕ ಹೊತ್ತಗೆಯ ಲೇಖಕರು ಸಾಹಿತ್ಯದಲ್ಲಿ ಮೊದಲು ಕೈಯಿಟ್ಟಿದ್ದು ಹರಟೆಯ ನವೀನಸಾಹಿತ್ಯದ ರೂಪದಲ್ಲಿ; ಅವರ ಹರಟೆಯ ಮುಖವು ಬಹುವಿಧದಿಂದ ಬೆಳೆದಿದೆಯೆಂಬ ಮಾತನ್ನು ಓದುಗರು ಈಗಾಗಲೇ ಅವರು ಬರೆದಿರುವ 'ಒಡೆದ ಕನ್ನಡಿ' 'ಗೋವಾಯಾತ್ರೆ' 'ನಗೀನವಿಲು' 'ಶಾರದೆಯ ಅಪರಾವತಾರ' ಮುಂತಾದ ಹರಟೆಗಳ ಸಂಕಲನಗಳಿಂದ ಅರಿತಿದ್ದಾರೆ. ಇದು ಅವರ ಮತ್ತೊಂದು ಪ್ರಬಂಧಸಂಕಲನ! ಪ್ರಬಂಧಸಾಹಿತ್ಯವೇ ಇವರ ಕೇವಲ ಸೊತ್ತುಯೆಂದು ಮೂಗು ಮುರಿಯುವಂತಿಲ್ಲ. ಶ್ರೀಯುತರು ನಾಟ್ಯಚ್ಛಟೆ ಕತೆ, ಮತ್ತು ಕವನಸಂಕಲನಗಳನ್ನು ಹೊರಡಿಸುವಲ್ಲಿಯೂ ಹಿಂದೆ ಬಿದ್ದಿಲ್ಲ. ಇರಲಿ. ಇವರ ಲೇಖನಿಯ ನಂಜು (ಹರಟೆಯಲ್ಲಿ) ಮಂಜಿನ ಮಬ್ಬಿನಲ್ಲಿದ್ದ ಸಮಾಜಕ್ಕೆ ಔಷಧಿ ಆದೀತು. ಇದು ಬಹುದೊಡ್ಡ ಮಾತಾಯಿತು ಎನ್ನುವಂತಿಲ್ಲ. ಹರಟೆಯಲ್ಲಿಯು ವಿಡಂಬನೆ, ಹಾಸ್ಯ, ಜೀವನಕ್ಕೆ ಹಗುರುತನ ಕೊಟ್ಟಿವೆ. ಕೊಂಕು ಬಾಳನ್ನು ನೀಟಾಗಿಸಲೂ ಬಹುದು. ಈ ಸಂಕಲನದಲ್ಲಿ ಹನ್ನೊಂದು ಪ್ರಬಂಧಗಳಿವೆ. ಒಂದೊಂದು ಒಂದು ವಿಧವಾಗಿವೆ 'ರೈಲು ನಿಲ್ದಾಣ'ದಿಂದ 'ದೀಪಾವಳಿಯ ರಸನಿಮಿಷ'ಗಳ ಧ್ಯೇನಿಕೆಯವರೆಗೆ ಲೇಖಕನ ಲೇಖನಿ ಹರಿದಾಡಿದೆ. ಈ ಗ್ರಂಥಕ್ಕೆ ನಾಮಕರಣವಾಗಿರುವ ಪ್ರಬಂಧವು ಹಾಳುಹಂಪೆಯ ಪ್ರವಾಸದ ಫಲವು. ಎಂದೂ ಸಿಟ್ಟಾಗದವರೆಂದು (?) ಹೆಸರು ಪಡೆದ ಇವರು 'ಸಿಟ್ಟಾಗಲೂಬೇಕು' ಎಂದು ತಮ್ಮ ಪ್ರಬಂಧದಲ್ಲಿ ಸಾಧಿಸಿರುವುದನ್ನು ಕಂಡು ಓದುಗನ ಸಿಟ್ಟು ಮಾಯವಾಗಿ ನಗುವು ಹೊರಹೊಮ್ಮಬಹುದೇನೋ! 'ನಾನು' ಎಂಬುದು ತಾತ್ತ್ವಿಕತೆಯ ತಿರುಗಣಿಯ ಮಡುವಾಗಿದೆ; ಉಪಾಯವಿಲ್ಲ! 'ಜೋಡು' 'ಕೊಡೆ' 'ವೋಡ' ಪ್ರಬಂಧಗಳು 'ವಿಶ್ರಾಂತಿಯ ಗೃಹ'ದಂತೆ ಹರವಾಗಿ ಬೆಳೆದಿದ್ದರೆ ಒಳಿತಾಗುತ್ತಿತ್ತು. ಆದರೂ ವಿವೇಚನೆಯ ದೃಷ್ಟಿಯಿಂದ ಒಳ್ಳೇ ಪ್ರಬಂಧಗಳಾಗಿವೆ. 'ತಾಯಿ' ಕಿರಿಯದು. ಆದರೆ ಅದರ ಮಹಿಮೆ ಹಿರಿಯದು. ಸೂತ್ರರೂಪವಾಗಿ ನಿಲ್ಲುವ ವಾಕ್ಯಾವಳಿಯನ್ನು ಹಿಗ್ಗಿಸಿದಷ್ಟೂ ಸೊಗಸೆಂದು ತೋರುತ್ತದೆ. ಶ್ರೀಯುತರ ಶೈಲಿಯಲ್ಲಿ ಅದು ಕೊಂಚ ಕಡಿಮೆ ಎನಿಸುವಂತೆ ಭಾಸವಾಗುತ್ತಿದೆ ಸುಭಾಷಿತಗಳು ಬಹಳಷ್ಟುಬಂದಿವೆ; ಆದರೂ ವಿಷಯವೋಪಣಿಗೆ, ಬೆಳೆವಣಿಗೆಗೆ ಸಹಕಾರಿಯಾಗಿವೆಯೆನ್ನಬಹುದು. 'ನಾಚಿಕೆ' ಪ್ರಬಂಧವು ಓದುಗರ ಗುಣಧರ್ಮಕ್ಕೆ ಪ್ರಶ್ನೆಯಾಗಿ ನಿಂತೀತು! ಕೊನೆಯ ಪ್ರಬಂಧವಾದರೂ ಮೊದಲಿನದರಂತೆ ಗೆಳೆಯರೊಡನೆ ಅನುಭವಿಸಿದ ರಸನಿಮಿಷಗಳ ಧ್ಯೇನಿಕೆಯಾಗಿದೆ. ಪ್ರವಾಸಪ್ರಬಂಧಗಳ ಅಗತ್ಯತೆಯನ್ನು ಕುರಿತು ಹೇಳುವ ಕಾರಣವಿಲ್ಲವಾದರೂ—ಅವು ಹೆಚ್ಚಾಗಿ ಬರಬೇಕಲ್ಲವೆ? ಈ ಕೊರತೆಯನ್ನು ಈ ಸಂಕಲನ ಬಹುಮಟ್ಟಿಗೆ ಪೂರೈಸಿದೆ. ಶೈಲಿಯ ಹದ, ಮಾತಿನ ಚಮಕಿಗೇನೂ ಕೊರತೆ—ಇಲ್ಲಿ ಕಾಣದು.

—ಭಾರತೇಶ

ಸ್ವಾಗತಗೀತೆ

ಶ್ರೀ. ಜಿ. ಶಂಕರಭಟ್ಟ ಬಿ. ಎ., ಬಿ. ಟಿ. ಪೆರಡಾಲ

ಪಲ್ಲವಿ

ಸುಸ್ವಾಗತ ಸುಸ್ವಾಗತ ಭುವಿಬಾಳಿನ ಬೆಳಕೆ
ಎದೆ ತೊಳಗುವ ಮನ ಬೆಳಗುವ ಪ್ರೇಮಾತ್ಮದ-ಚಳುಕೆ ||

೧

ನನ್ನೆದೆಯಲಿ ನಿನ್ನೊಲುಮೆಯ ಪೀಯೂಷವನೆರೆದು
ಭುವಿಬಾಳಿಗೆ ಸೊಗಸಗ್ಗದ ಅಮೃತತ್ವವನೊರೆದು
ರಿಕ್ತಾತ್ಮಗೆ ಬಂದಡಸಿದ ಕಾಂಭಾಯೆಯ ಕಳೆಯೆ
ಪರಮಾತ್ಮದ ಶ್ರೀಮಂತಿಕೆ ನಿನ್ನಲಿ ಮೈದಳೆಯೆ!

೨

ಕರೆದಿದ್ದೆನೆ ಕೈಹಿಡಿಯಲು ಗುರುಹಿರಿಯರ ಮುಂದೆ
ಸಿಂಗರಿಸಿದ ಮಂಟಪದಲಿ ನಾಚಲು ನೀನಂದೆ
ಬಾರಿಲ್ಲಗೆ ಸಿಂಗರಿಸಿದ ಎನ್ನೆದೆಮಂದಿರಕೆ –
ಬಂಗಾರದ ಬನವಲ್ಲಿಗೆ ತುಂಬಿದ ಹಂದರಕೆ.

೩

ಕಗ್ಗಲ್ಲಿಗೆ ವರಶಿಲ್ಪಿಯು ನೀಡನೆ ಚಿರಕಳೆಯು—
ಕುಡಿವಡೆಯಲು ಎನ್ನಾತ್ಮವು ಪಡೆಯದೆ ಹೊಸಕಳೆಯು—
ಈ ಶೂನ್ಯವ ನವನವ್ಯದಿ ತುಂಬಲು ಜೇನ್ ಜೊನ್ನು
ಸಂತೋಷದ ನಂದನದಲಿ ತೂಗುಯ್ಯಲೆಯನ್ನು!

೪

ಕಣ್ಣಂಚಲಿ ನೆಳೆಮಿಂಚನು ಹೊರಸೂಸುವ ಸಂಚು
ಮಧುರಾಮೃತ ವೃಷ್ಟಾನ್ನವ ತುಂಬಿದ ತುಟಿಯಂಚು
ತುಟಿದೆರೆಯಲು ದಂತಾವಳಿ ಕುಡಿಮಲ್ಲಿಗೆ ಸಾಲು—
ರೂಪಾರತಿ ಕಿರುತಾರಕಿ ಬಾಳಂಚಲಿ ತೇಲು!

೫

ಕಿರುಗಾಳಿಗೆ ಮಂದಾರದ ಗಂಧಾನಿಲ ಬಂದಂತೆ
ಹುಣ್ಣಿಮೆಯಲಿ ಹೊಂಗಿರಣಕೆ ಸುಖಶೈತ್ಯವು ಒಲಿದಂತೆ
ಬೆರಳಾಡಿಸೆ ವೀಣೆಯಲ್ಲಿ ಚೆಲುಗಾನವು ಹರಿದಂತೆ
ಏಕಾಂಗಿಯ ಬಾಳ್ತುಂಬಲು ಮಧುರಾಂಗನೆಯೆಂತಂತೆ.

———

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ಕನ್ಯಾಸೆರೆ' ಕಥೆಯನ್ನು ವಿಮರ್ಶಿಸಿದ ಬರೆಹಗಳು ಇಬ್ಬರಿಂದ ಮಾತ್ರ ಬಂದಿವೆ. ಇನ್ನೊಂದು ಕಥೆಯನ್ನು ವಿಮರ್ಶಿಸಿದವರು ಯಾರೂ ಇಲ್ಲ.

ಹೆಚ್ಚು ವಿಮರ್ಶೆಗಳು ಬಾರದಿರುವುದಕ್ಕೆ ಕಾರಣವೆಂದರೆ, ಜಯಂತಿಯ ಕಳೆದ ಸಂಚಿಕೆ ಪ್ರಕಟವಾಗಲಿಕ್ಕೆ ವಿಲಂಬವಾದುದೇ ಎಂಬುದನ್ನು ನಾವು ಬಲ್ಲೆವು. ಈ ಸಂಚಿಕೆಯಂತೂ ಕಳೆದ ಸಲಕ್ಕಿಂತ ಹೆಚ್ಚು ವಿಲಂಬವಾಗಿ ಹೊರಟಿದೆ. ಆದುದರಿಂದಲೇ ಮುಂದಿನ ಸಂಚಿಕೆಯಲ್ಲಿ ನಾವು ವಿಮರ್ಶೆಯ ಮೇಲಾಟವನ್ನು ಇರಿಸುವುದಿಲ್ಲ ಏಪ್ರಿಲ್ ಸಂಚಿಕೆಯನ್ನು ಹೇಗೆನೆ—ಎಂದರೆ—ಕಾಲಕ್ಕೆ ಸರಿಯಾಗಿ ಪ್ರಕಟಿಸಿ, ಆದರಲ್ಲಿ ನಾವು ವಿಮರ್ಶೆಯ ಮೇಲಾಟದ ವಿಷಯಗಳನ್ನು ತಿಳಿಸುವೆವು. ಜಯಂತಿಯ ಅಭಿಮಾನಿಗಳೆಲ್ಲರೂ—ಈ ಅನಿವಾರ್ಯವಾದ ತೊಂದರೆಯನ್ನು ಸಹಾನುಭೂತಿಯಿಂದ ಕಂಡು ಕ್ಷಮಿಸಬೇಕಾಗಿ ಕೋರುವೆವು.

'ಕನ್ಯಾಸೆರೆ' ಕಥೆಯ ವಿಮರ್ಶಕರು:

೧. ಶ್ರೀ. ಆರ್. ಪಿ. ಕುಲಕರ್ಣಿ ಎಂ. ಎ., ಬಿ ಟಿ, ಡಿ. ಪಿ. ಎಡ್. ಬೆಳಗಾಂವಿ. ೨. ಶ್ರೀ. ಬಿ. ಜಯಾಚಾರ್ಯ ಬಿ. ಎಸ್ಸಿ., ಎಲ್ಎಲ್. ಬಿ. ಬೆಂಗಳೂರು.

ಇಬ್ಬರ ವಿಮರ್ಶೆಗಳೂ ತುಂಬ ಚೆನ್ನಾಗಿವೆ. ಎರಡೂ ವಿಮರ್ಶೆಗಳಲ್ಲಿಯೂ ವಿಮರ್ಶಕರ ವಿಶಿಷ್ಟ ವ್ಯಕ್ತಿತ್ವಗಳು ಒಡೆದು ಕಾಣುತ್ತವೆ ಆದರೆ ಒಂದೇ ವಿಮರ್ಶೆಯನ್ನು ಇಲ್ಲಿ ಪ್ರಕಟಿಸಲು ಸಾಧ್ಯವಿದ್ದುದರಿಂದ, ಶ್ರೀ. ಆರ್. ಪಿ ಕುಲಕರ್ಣಿಯವರ ವಿಮರ್ಶೆಯನ್ನು ಪ್ರಕಟಿಸಲಾಗಿದೆ.

—ಸಂಪಾದಕ

ಕನ್ಯಾಸೆರೆ

(ಸಣ್ಣಕತೆಯ ವಿಮರ್ಶೆ)

ಶ್ರೀ. ಆರ್. ಪಿ. ಕುಲಕರ್ಣಿ ಎಂ. ಎ, ಬಿ. ಟಿ, ಡಿ. ಪಿ. ಎಡ್.

ಸ್ವಭಾವ ಪರಿವರ್ತನೆಯನ್ನು ಚಿತ್ರಿಸುವುದೇ ಈ ಕತೆಯ ಉದ್ದೇಶ. ತನ್ನ ಕುರೂಪತೆಯನ್ನು ಮರೆತೂ, ಸುಂದರ ಹೆಣ್ಣನ್ನೇ ಇಚ್ಛಿಸುವ ಗಂಡಿನ ಸ್ವಭಾವವು, ನಿರಪರಾಧಿಯಾದ ಹೆಣ್ಣುಮಕ್ಕಳ ಅಧೋಗತಿಗೆ ಹೇಗೆ ಕಾರಣವಾಗುತ್ತದೆಂಬುದನ್ನು ಇಲ್ಲಿ ಎತ್ತಿ ತೋರಿಸಿದೆ. ಯಾವ ಸುಂದರಿಯೂ ಒಲಿಯದಂತಿದ್ದ ನಟೇಶನು ಕುರೂಪಿಯು; ಅವನು ವಿದ್ಯಾವಂತನಾದರೂ ಧನವಂತನಲ್ಲ. ಕಪ್ಪು ಬಣ್ಣದ ದಪ್ಪತುಟಿಯ ಹೆಣ್ಣುಗಳನ್ನು ಇವನು ಮೆಚ್ಚಲೆಲ್ಲ. ಸೌಂದರ್ಯವಿಲ್ಲದ ಹೆಣ್ಣು ತ್ಯಾಜ್ಯವೆಂಬುದು ಇವನ ಕಲ್ಪನೆ. ಇದಕ್ಕಾಗಿ ಕೊನೆಗೆ ಇವರು ಪಶ್ಚಾತ್ತಾಪ ಪಡಬೇಕಾಯಿತು. ತ್ಯಾಗವನ್ನು ಮಾಡಬೇಕಾಯಿತು. ಇದು ಕನ್ಯಾಸೆರೆಯ ಕಥಾವಸ್ತು.

ಸ್ವಭಾವ ಪರಿವರ್ತನೆಯನ್ನು ತೋರಿಸುವ ಕತೆಗಳಲ್ಲಿ, ಬದಲಾಗುವ ಸ್ವಭಾವದ ಅರಿವು ಓದುಗರಿಗೆ ಚೆನ್ನಾಗಿ ಆಗಬೇಕು. ಆ ಸ್ವಭಾವದ ಮೇಲೆ ಪರಿಣಾಮವನ್ನುಂಟು ಮಾಡುವ ವಿವಿಧ ಘಟನೆಗಳನ್ನು ಯೋಜಿಸಿ, ಸ್ವಭಾವದ ಪರಿವರ್ತನೆಗೆ ಸಾಕಷ್ಟು ಪ್ರಬಲ ಕಾರಣಗಳನ್ನು ಕತೆಗಾರನು ತೋರಿಸಬೇಕು. ನಟೇಶನಲ್ಲಿ ರೂಪವಿಲ್ಲದ ಹೆಣ್ಣಿನ ಬಗ್ಗೆ ಇದ್ದ ತಿರಸ್ಕಾರವನ್ನು ಕತೆಗಾರ್ತಿಯು ಕಲಾಪೂರ್ಣವಾಗಿ ಮೂಡಿಸಿದ್ದಾರೆ. ಅವನು ವೇಶ್ಯಾವೃತ್ತಿಯನ್ನವಲಂಬಿಸಿದ ಲಲಿತಾಳ ಮನೆಯನ್ನು ಪ್ರವೇಶಿಸಿದಾಗ, ಅವನಿಗೆ ತನ್ನ ಕಲ್ಪನೆಯ ಮೂರ್ಖತನದ ಅರಿವಾಗುತ್ತದೆ. ಲಲಿತಾಳು ಅವನ ಮುಂದೆ ಕನ್ನಡಿಯನ್ನು ಹಿಡಿದಾಗ, ತನ್ನ ಕೊರೂಪತೆಯನ್ನು ಕಾಣುತ್ತಾನೆ. ಇದರೊಡನೆ ಲಲಿತಾಳು ತೋಡಿಕೊಂಡ ದುಃಖವೂ ಅವನ ಸ್ವಭಾವಪರಿವರ್ತನೆಗೆ ಸಾಕಷ್ಟು ಪ್ರಬಲ ಕಾರಣವಾಗುತ್ತದೆ.

ನಟೇಶನು ಮತ್ತು ಮುರುಗೇಶನು ಸಿಕಂದರಾಬಾದಿಗೆ ಹೋದದ್ದು, ನಟೇಶನು ಮುರುಗೇಶನನ್ನು ವೇಶ್ಯಾಗೃಹದತ್ತ ಹಿಂಬಾಲಿಸಿದ್ದು, ಲಲಿತಾಳ ದರ್ಶನದಿಂದ ನಟೇಶನ ಮನಸ್ಸಿನಲ್ಲಾದ ಗೊಂದಲ ಮುಂತಾದ ಘಟನೆಗಳೆಲ್ಲವುಗಳಲ್ಲಿ ಸುಸಂಬದ್ಧತೆಯು ಕಂಡು ಬರುತ್ತದೆ. ಕತೆಯು ಲಲಿತಾ ಮತ್ತು ನಟೇಶರ ವಿವಾಹದಲ್ಲಿ ಮುಗಿಯುವುದೆಂಬ ಆಭಾಸವನ್ನುಂಟು ಮಾಡಿ, ಅದು ವಿನುತಾ

ಮತ್ತು ನಟೇಶರ ವಿವಾಹದಲ್ಲಿ ಮುಗಿದುದು, ಓದುಗರಿಗೆ ಆಘಾತವನ್ನು ಉಂಟು ಮಾಡುತ್ತದೆ. ಕಲೆಯ ಪರಿಪಕ್ವತೆಯಿಂದ ಮಾತ್ರ ಇಂತಹ ಘಟನೆಯನ್ನು ಕಲ್ಪಿಸುವುದು ಸಾಧ್ಯ. ಕತೆಯಲ್ಲಿ ಘಟನೆಗಳು ಒಂದಕ್ಕೊಂದು ಪೋಷಕವಾಗಿ ಮುಖ್ಯ ಘಟನೆಯು ಎದ್ದು ಕಾಣುತ್ತದೆ. ಅವುಗಳ ಕ್ರಮವು ಕತೆಯ ಬೆಳವಣಿಗೆಗೆ ಸಹಾಯಕವಾಗಿದೆ.

ಕತೆಗಾರ್ತಿಯು ಮೊದಲು ಕತೆಯ ಗುರಿಯನ್ನು ಗೊತ್ತು ಮಾಡಿ, ಆಮೇಲೆ ಅದರ ಕಡೆಗೆ ಒಯ್ಯುವ ಘಟನೆಗಳನ್ನು ರಚಿಸಿದ್ದರಿಂದ, ಅನಾವಶ್ಯಕವಾದುವುಗಳೆಲ್ಲವೂ ಹಿಂದುಳಿದು, ಕತೆಯ ಮುಖ್ಯ ಸಂಗತಿಗೆ ಪೋಷಕವಾದ ಪ್ರಸಂಗಗಳೆಲ್ಲವೂ ಮುಂದೆ ಬಂದಿರುತ್ತವೆ. ಲಲಿತಾಳ ದುಃಖದಿಂದ ಪಾಠ ಕಲಿತ ನಟೇಶನ ನಿರ್ಧಾರವು, ಓದುಗರ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಮೂಡುತ್ತದೆ. ಪ್ರತಿಯೊಬ್ಬ ಸುಸಂಸ್ಕೃತನಲ್ಲಿ ಹೊಣೆಯ ಅರಿವನ್ನುಂಟುಮಾಡುತ್ತದೆ. ಈ ಕತೆಯ ಗುರಿಯು, ಕಥಾಪ್ರಪಂಚದಲ್ಲಿ ಅದಕ್ಕೆ ಒಂದು ಸ್ಥಾನವನ್ನು ಕೊಟ್ಟಿದೆ. "Great art lends always toward the universal" ಎಂದು ಹೆರಾಲ್ಡ್ ಬ್ಲಾಡ್‌ಗೆಟ್ ಎಂಬ ವಿಮರ್ಶಕರು ಹೇಳಿದ್ದಾರೆ.

"ಕನ್ಯಾಸೆರೆ"ಯಲ್ಲಿ ಎದ್ದು ಕಾಣುವ ಮುಖ್ಯ ಪಾತ್ರಗಳ ಎರಡು – ಒಂದು ನಟೇಶನದು; ಎರಡನೆಯದು ಲಲಿತಾಳದು. ಮುರುಗೇಶ, ನಟೇಶನ ತಾಯಿ, ನಾರಾಯಣಪ್ಪ, ರಂಗಪ್ಪ, ರಂಗಪ್ಪನ ಹೆಂಡತಿ, ವಿನುತಾ. ಮುಂತಾದವರ ಪಾತ್ರಚಿತ್ರಣವಿಂದ ಮುಖ್ಯ ಪಾತ್ರಗಳ ಚಿತ್ರಣವು ಮಸಕಾಗಿಲ್ಲ, ಕಥೆಯ ಏಕೈಕ ಪರಿಣಾಮಕ್ಕೆ ಕುಂದು ಬಂದಿಲ್ಲ. ನಡೆದ ಸಂಗತಿಗಳನ್ನು ಬರಿಹಗಾರರೇ ವರ್ಣಿಸದೆ, ಲಲಿತಾಳ ಮುಖಾಂತರ ಹೇಳಿಸಿದ್ದರಲ್ಲಿ ನೈಪಿಸ್ಯವಿದೆ. ಇದರಿಂದ ಓದುಗರಲ್ಲಿ ಅವಳ ಬಗ್ಗೆ ಹೆಚ್ಚಾದ ಅನುಕಂಪವೂ ಆತ್ಮೀಯತೆಯೂ ಹುಟ್ಟುತ್ತವೆ. ಲಲಿತಾಳಿಗೆ ಸಂಬಂಧಿಸಿದ ಘಟನೆಗಳನ್ನು ಕತೆಗಾರ್ತಿಯು ತಾವಾಗಿ ವರ್ಣಿಸಿದ್ದರೆ, ಅಥವಾ ಬೇರೆ ಪಾತ್ರಗಳ ಮುಖಾಂತರ ತಿಳಿಸಿದ್ದರೆ, ನಿಶ್ಚಿತವಾಗಿ ಲಲಿತಾಳ ವ್ಯಕ್ತಿತ್ವಕ್ಕೆ ಇಷ್ಟು ಕಳೆಯು ಬರುತ್ತಿದ್ದಿಲ್ಲ.

ಕತೆಯಲ್ಲಿ ಎಲ್ಲಿಯೂ ಅಸಂಭವನೀಯ ಘಟನೆಯನ್ನು ಉಪಯೋಗಿಸಿಲ್ಲ. ವಾಸ್ತವತೆಯಿಂದ ಕತೆಗೆ ರಮಣೀಯತೆಯು ಬಂದಿದೆ. ನಟೇಶನು ವಿನುತಾಳನ್ನು ವರಿಸಲು ಒಪ್ಪುವುದು ಕೂಡ ಅಸಂಭವನೀಯವಲ್ಲ. ಯಾಕೆಂದರೆ ಲಲಿತಾಳು ಪಟ್ಟ ಕಷ್ಟ ಎಂತಹ ಕಲ್ಲೆದೆಯನ್ನೂ ಕರಗಿಸುವಂತಹದು. ನಾರಣಪ್ಪ ಲಲಿತಾಳನ್ನು ಮಾರಿದ್ದಕ್ಕೆ ಕೂಡ ಸಾಕಷ್ಟು ಬಲವಾದ ಕಾರಣಗಳವೆ. ವ್ಯಸನಾಧೀನನಾದ ಬಡವನು ಯಾವ ನೀಚಕೃತ್ಯಗಳನ್ನು ಮಾಡಲಿಕ್ಕಿಲ್ಲ? ನಟೇಶ ಮತ್ತು ಲಲಿತಾ ಇವರ ಪಾತ್ರಗಳಲ್ಲಿ ಅಸಾಮಾನ್ಯತೆ — ಕಂಡು ಬರುತ್ತದೆ. ಆದರೆ ಇದು ಸಣ್ಣಕತೆಗೆ ಕುಂದಲ್ಲ. "Traits selected with extreme care may be emphasized into something more than naturalness– this because the human mind tends normally to exaggerate that which it finds interesting or important for itself" ಎಂದು ಅಲ್ಪಾಯಿಟ್ ಎಂಬ ವಿಮರ್ಶಕರು ಹೇಳಿದ್ದಾರೆ.

ಕತೆಗಾರ್ತಿಯು ಕತೆಗೆ ಯೋಗ್ಯವಾದ ಶೈಲಿಯನ್ನು ಉಪಯೋಗಿಸಿದ್ದಾರೆ. ಭಾಷೆಯಿಂದ ಕತೆಯ ಓಘಕ್ಕೆ ಎಲ್ಲಿಯೂ ಬಾಧೆ ಬಂದಿಲ್ಲ. ಅಲ್ಲಲ್ಲಿ ಅಲಂಕಾರಗಳನ್ನು ಮಿತವಾಗಿ ಉಪಯೋಗಿಸಿದ್ದರಿಂದ, ಭಾಷೆಗೆ ಮೆರುಗು ಬಂದಿದೆ: "ಅವಳ ಕಪ್ಪು ಕಣ್ಣು ಹೂವಿನಲ್ಲಿ ಸೆರೆಯಾದ ದುಂಬಿಯಂತೆ, ಅವಳ ಆತ್ಮ ಗಾಜಿನ ಕೊಳವೆಯಲ್ಲಿ ಸೆರೆ ಬಿದ್ದ ಪಾದರಸದಂತೆ ಕಂಡುವು." "ಆಕೆಯ ಮುಖದಲ್ಲಿಯ ಭೀತ ನೋವುಗಳನ್ನು ಕಂಡು ನನ್ನ ಕರುಳಿನಲ್ಲಿ ಕತ್ತರಿಯಾಡಿದಂತಾಯಿತು." ಇಂಥ ವಾಕ್ಯಗಳು ಪಾತ್ರಗಳ ಮನಸ್ಸಿನಲ್ಲಿಯ ತಾಕಲಾಟದ ಮೇಲೆ ಬಿದ್ದ ಕಿರಣಗಳು.

ಈ ಕತೆಯಲ್ಲಿ ಕರುಣಾರಸವು ಪ್ರಾಧಾನ್ಯವಾದುದು. ಕರುಣಾರಸದಲ್ಲಿ ಹಾಸ್ಯಕ್ಕೆ ಮಹತ್ತ್ವದ ಸ್ಥಾನವು ದೊರೆಯುವುದಿಲ್ಲ. ಆದರೂ ಅಲ್ಲಲ್ಲಿ ಹಾಸ್ಯದ ಬುಗ್ಗೆಗಳೆದ್ದಿವೆ. "ನನಗೆ ಮುಖದರ್ಶನ ಮಾಡಲು ಪಟ್ಟ ಕಷ್ಟಕ್ಕಾಗಿ, ಅವರೆಲ್ಲರಿಗೂ ಒಂದೊಂದು ಕನ್ನಡಿಯನ್ನು ಬಹುಮಾನಿಸುವೆ" ಎಂದಾಗ, ಯಾವ ರಸಿಕನ ಹೃದಯದಲ್ಲಿ ನಗೆಯ ಬೆಳಕು ಮೂಡಲಾರದು?

ಬರಿಹಗಾತಿಯ ಭಾಷೆಯ ಶುದ್ಧತೆಗೆ ಹೆಚ್ಚು ಗಮನ ಕೊಡಬೇಕಾಗಿತ್ತು. "ತ್ರಾಸ" "ಗಲ್ಲಿ" ಮುಂತಾದ ಕನ್ನಡಕ್ಕೆ ಸರಿ ಹೋಗದ ಶಬ್ದಗಳನ್ನು ಉಪಯೋಗಿಸಿದ್ದರೆ, ಭಾಷೆಗೆ ಮತ್ತಷ್ಟು ಮೆರುಗು ಬರುತ್ತಿತ್ತು.

"ಕನ್ಯಾಸೆರೆ" ಎಂಬ ತಲೆಕಟ್ಟು ಈ ಕಥೆಗೆ ಅಷ್ಟು ಯೋಗ್ಯ ಅಲ್ಲ. ತಲೆಕಟ್ಟು ಕೊಡುವಾಗ ಕತೆಗಾರ್ತಿಯು ನಟೇಶನಿಗೂ ಅವನು ಮಾಡಿದ ತ್ಯಾಗಕ್ಕೂ ಲಕ್ಷ್ಯಗೊಟ್ಟಿಲ್ಲ. "ಪ್ರತಿಫಲ" ಅಥವಾ "ಪಶ್ಚಾತ್ತಾಪ" ಎಂಬ ತಲೆಬರೆಹವು ಹೆಚ್ಚು ಯೋಗ್ಯವಾಗುತ್ತಿತ್ತು. ಕತೆಯ ಧ್ವನಿಯನ್ನು ಸೂಚಿಸುವ ತಲೆಬರೆಹದಿಂದ ಕತೆಯ ಆಕರ್ಷಕತೆಯು ಕುಗ್ಗುತ್ತದೆ. ತಲೆಬರೆಹಕ್ಕೆ ಇಡೀ ವಸ್ತು ಮಹತ್ತ್ವದ್ದಲ್ಲ. ಆದರೆ ಕತೆಯ ಉದ್ದೇಶ ಮಾತ್ರ. "ಕನ್ಯಾಸೆರೆ" ಎಂಬ ತಲೆಕಟ್ಟು ಕತೆಯ ಉದ್ದೇಶವನ್ನು ಸೂಚಿಸುವುದಿಲ್ಲ. ರೂಪವಿಲ್ಲದ ಹೆಣ್ಣನ್ನು ತಿರಸ್ಕರಿಸಿದ. ಫಲವನ್ನು ಚಿತ್ರಿಸುವುದು ಈ ಕಥೆಯ ಗುರಿ. ಒಟ್ಟಾರೆ "ಕನ್ಯಾಸೆರೆ"ಯು ಒಂದು ಶ್ರೇಷ್ಠ ಕಲಾಕೃತಿಯು.

The statement about ownership and other particulars about the Newspaper entitled "JAYANTI" as required to be published under Rule 8 of the Registration of Newspapers (Central) Rules 1956.

FORM IV

(1)	Place of Publication	:	Jayanti Office, Vijaya Road, Dharwar
(2)	Periodicity of its Publication	:	Every Month
(3)	Printer's Name	:	N. A. Hoskeri Proprietor Vijaya Press, Vijaya Road, Dharwar
	Nationality	:	Indian
	Address	:	Vijaya Road, Dharwar
(4)	Publisher's Name	:	K. S. Betgeri For Proprietors Jayanti Publications
	Nationality	:	Indian
	Address	:	Vijaya Road, Dharwar
(5)	Chief Editor	:	K. S. Betgeri
	Nationality	:	Indian
	Address	:	Vijaya Road, Dharwar
(5a)	Editor	:	K. S. Betgeri
	Nationality	:	Indian
	Address	:	Vijaya Road, Dharwar
(6)	Name and Address of individuals who own the Newspaper and partners or shareholders holding more than 1 percent of the total Capital.		K. S. Betgeri

I, K. S. Betgeri hereby declare that the particulars given above are true to the best of my knowledge and belief.

Dharwar
24-3-1958

(*Sd*) K. S. BETGERI
Editor

ಸಾದರ ಸ್ವೀಕಾರ

ಗಮನಿಸಿ

೧೦೭ ಬಣ್ಣದ ಚಿಟ್ಟೆ (ಕವನಸಂಕಲನ) ಬರೆದವರು ಶ್ರಿಮಾನ್ ಬ. ಮ. ಪಾ. ರಾಜನ್ ಕೋಳೂರ, ಡಿ. ಗುಲ್‌ಬರ್ಗಾ ಲೇಖಕರೇ ಪ್ರಕಾಶಕರು. ಕ್ರೌ. ಅ. ೭೬ ಪುಟಗಳು ಬೆಲೆ ೦-೭೯.

೧೦೮ ಸೈನಿಕ ಉವಾಚ : (ಜೀವನ ಕಥೆ) ಬರೆದವರು ಶ್ರಿಮಾನ್ ವೆಂ. ಮು. ಜೋಶಿಯವರು. ಧಾರವಾಡದ ಮಿಂಚಿನ ಬಳ್ಳಿಯ ಪ್ರಕಾಶನ. ಕ್ರೌ. ಅ. ೧೫೦ ಪುಟಗಳು. ಬೆಲೆ ಉತ್ತಮ ಪ್ರತಿಗೆ ೨. ೦೦; ಸಾಮಾನ್ಯ ಪ್ರತಿಗೆ ೧. ೫೦.

೧೦೯ ಪ್ರಭಾತ (ವಾರಪತ್ರಿಕೆಯ ಪ್ರಜಾಪ್ರಭುತ್ವ ವಿಶೇಷ ಸಂಚಿಕೆ.) ಸಂಪಾದಕರು ಮತ್ತು ಪ್ರಕಾಶಕರು ಶ್ರಿಮಾನ್ ಕುದ್ಪಿ ವಾಸುದೇವ ಶೆಣೈ, ಪ್ರಭಾತ ಕಾರ್ಯಾಲಯ, ರಥಬೀದಿ, ಮಂಗಳೂರು. ಕ್ರೌ. ಡಿದ ೪೪ ಪುಟಗಳು. ಬೆಲೆ ೦-೩-೦.

೧೧೦. ಕಲ್ಯಾಣ (ಹಿಂದೀ ಮಾಸಪತ್ರಿಕೆಯ ಚಿತ್ರಭರಿತ ಭಕ್ತಿ ವಿಶೇಷಾಂಕ). ಸಂಪಾದಕರು ಶ್ರೀಮಾನ್ ಹನುಮಾನ್ ಪ್ರಸಾದ ಪೋದ್ದಾರ ಮತ್ತು ಶ್ರೀ. ಚಿಮ್ಮನಲಾಲ ಗೋಸ್ವಾಮಿ ಎಂ. ಎ. ಆವರು. ಪ್ರಕಾಶಕರು ಘನಶ್ಯಾಮದಾಸ ಜಾಲನಾ, ಗೀತಾ ಪ್ರೆಸ್, ಗೋರಖಪುರ. ಕ್ರೌ. ಡಿದ ೭೦೪ ಪುಟಗಳು. (ಚಿತ್ರಪುಟಗಳು ಬೇರೆ). ಬೆಲೆ ೭-೮-೦.

ಕಲ್ಯಾಣ ಮಾಸಪತ್ರಿಕೆ ಪ್ರತಿವರ್ಷವೂ ಹೊರಡಿಸುತ್ತಿರುವ ವಿಶೇಷಾಂಕವೆಂದರೆ, ಒಂದೊಂದೂ ಆ ವಿಷಯಕವಾದ ಜ್ಞಾನಕೋಶದ ಸಂಪುಟದಂತಿರುವುದು. ಜ್ಞಾನೋಪಾಸಕರು ಈ ವಿಶೇಷ ಸಂಚಿಕೆಗಳನ್ನು ತಮ್ಮ ಪುಸ್ತಕ ಭಾಂಡಾರದಲ್ಲಿ ಅವಶ್ಯವಾಗಿ ಇರಿಸಬೇಕು.

೧೧೧. ಕುಮಾರವ್ಯಾಸಕವಿಯ ಕಾಲದರ್ಶನ (ಕವಿ ವಿಷಯಕ ಕಿರುಹೊತ್ತಿಗೆ). ಬರೆದವರು ಶ್ರಿಮಾನ್ ನರಸಿಂಹ ಶ. ಪುರೋಹಿತ, ಕೋಳಿವಾಡ. ಪ್ರಕಾಶಕರು ಪ್ರಕಟನಾ ಮಂಡಲ ಕೋಳಿವಾಡ, ಜಿ ಧಾರವಾಡ. ಡೆ. ಗ್ಲೈ ದ ೨೪ ಪುಟಗಳು. ಬೆಲೆ ೦೦-೩೫.

ಕುಮಾರವ್ಯಾಸ ಕವೀಂದ್ರನ ಕಾಲದ ವಿಚಾರವು ಇದುವರೆಗೂ ಚರ್ಚೆಯ ವಿಷಯವಾಗಿಯೇ ಉಳಿದಿದೆ. ಈ ಚಿಕ್ಕ ಪುಸ್ತಕದಲ್ಲಿ ಕೆಲವೊಂದು ಪ್ರಾಚೀನ ಕಾಗದಪತ್ರಗಳ ಆಧಾರದಿಂದ, ಕುಮಾರವ್ಯಾಸನ ಕಾಲವನ್ನು ನಿರ್ಣಯಿಸುವ ಪ್ರಯತ್ನ ಮಾಡಲಾಗಿದೆ. ಕುಮಾರವ್ಯಾಸ ವಿಜಯನಗರದ ಕೃಷ್ಣದೇವರಾಯನಿಗಿಂತ ಹಿಂದಿನವನೆಂಬುದೇನೋ ಸಿದ್ಧವಾದ ವಿಷಯ. ಎಷ್ಟುಕಾಲ ಹಿಂದಿನವನಾಗಿರಬಹುದೆಂಬ ಪ್ರಶ್ನೆಯ ಮೇಲೆ, ಈ ಪುಸ್ತಕದಲ್ಲಿಯ ಕೆಲವು ಮಾತುಗಳು ಬೆಳಕನ್ನು ಚೆಲ್ಲುವಂತಿವೆ

೧೧೨ ತರ್ಕಸಂಗ್ರಹ (ಕನ್ನಡ ಸುಬೋಧಿನೀ ವ್ಯಾಖ್ಯಾನದಿಂದ ಕೂಡಿದ ಸಂಸ್ಕೃತಗ್ರಂಥ). ವ್ಯಾಖ್ಯಾನ ಬರೆದವರು ಶ್ರೀಮಾನ್ ಜಿ. ವಿಷ್ಣುಮೂರ್ತಿ ಭಟ್ಟರು, ವ್ಯಾಕರಣ-ತರ್ಕ-ಸಾಹಿತ್ಯ ಕನ್ನಡ ವಿದ್ವಾನ್, ರಾಷ್ಟ್ರ ಭಾಷಾವಿಶಾರದ. ಅಧ್ಯಾಪಕರು ಶ್ರಿಮಾನ್ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆ, ಮೈಸೂರು. ಕ್ರೌ. ಅ. ೧೦೪ ಪುಟಗಳು. ಬೆಲೆ ೧.೫೦

೧೧೩ ಮಿರ್ಜಿ ಅಣ್ಣಾರಾಯ (ವ್ಯಕ್ತಿ ಮತ್ತು ಸಾಹಿತ್ಯಗಳ ಪರಿಚಯ) ಬೇರೆ ಬೇರೆ ಲೇಖಕರು ಬರೆದ ವಿವಿಧವಿಚಾರದ ಲೇಖನಗಳನ್ನು ಶ್ರೀ. ಡಿ. ಪುಟ್ಟಸ್ವಾಮಿ ಬಿ. ಎ., ಬಿ. ಎಲ್. ಮತ್ತು ಶ್ರೀ. ಟಿ. ಕೆ. ಪಾಟೀಲ ಬಿ. ಎ., ಬಿ. ಟಿ. ಜಮಖಂಡಿ ಅವರು ಸಂಪಾದನೆ ಮಾಡಿದ್ದಾರೆ. ಪ್ರಕಾಶಕರು ವಿವೇಕಾಭ್ಯುದಯ ಕಾರ್ಯಾಲಯ, ವೀರಭವನ, ಮಂಗಳೂರು. ಕ್ರೌ. ಅ. ೧೩೬ ಪುಟಗಳು. ಬೆಲೆ ೧-೫೦.

೧೧೪ ಸುದರ್ಶನ (ಕನ್ನಡ ವಾರಪತ್ರಿಕೆಯ ಪರ್ಯಾಯ ವಿಶೇಷಾಂಕ.) ಸಂಪಾದಕರು ಶ್ರೀ. ಬನ್ನಂಜೆ ರಾಮಾಚಾರ್ಯ, ಸುದರ್ಶನ ಕಾರ್ಯಾಲಯ ಉಡುಪಿ. ಕ್ರೌ. ಡಿದ ೯೬ ಪುಟಗಳು. ಬೆಲೆ ೦೦-೪೦.

ಉತ್ತಮವಾದ ಸಂಚಿಕೆ. ನಾಡಿನ ಹಲವು ಜನ ಜ್ಞಾನೋಪಾಸಕರೂ ಕಲೋಪಾಸಕರೂ ಬರೆದ ಲೇಖನಗಳೂ ಕಥೆ-ಕವನ-ಪ್ರಬಂಧಗಳೂ ಇದರಲ್ಲಿ ಬೆಳಕುಕಂಡಿವೆ.

೧೧೫ ಆಚಾರ್ಯ ವಿನೋಬಾ ಭಾವೆಯವರು (ವ್ಯಕ್ತಿ ಪರಿಚಯ). ಲೇಖಕರು ಶ್ರೀ. ಗು. ಭೀ. ಗ್ರಾಮಪುರೋಹಿತ, ಬೆಳಗಾಂವಿ. ಪ್ರಕಾಶಕರು ಸರ್ವೋದಯ ಸ್ವಾಧ್ಯಾಯ ಮಂಡಲ, ಖಡೇಬಝಾರ, ಬೆಳಗಾಂವಿ ಕ್ರೌ. ಅ. ೭೨ ಪುಟಗಳು. ಬೆಲೆ ೦೦-೫೦.

೧೧೬ ಹೇಮಂತ (ಸ್ವತಂತ್ರ ಕಾದಂಬರಿ) ಬರೆದವರು 'ಪ್ರಿಯದರ್ಶಿ'. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೫ನೆಯ ವರ್ಷದ ೪ನೆಯ ಕಿರಣ. ಕ್ರೌ. ಅ ೫೦೪ ಪುಟಗಳು ಬೆಲೆ ೪-೦೦.

೧೧೭ ಕಿಷ್ಕಿಂಧೆ (ಕವನಸಂಕಲನ). ಲೇಖಕರು ಶ್ರೀ. ವಿ. ಜಿ. ಭಟ್ಟ ಅವರು. ಪ್ರಕಾಶಕರು ಸಾಧನ ಮುದ್ರಣಾಲಯ ಧಾರವಾಡ. ಕ್ರೌ. ಅ. ೮೨ ಪುಟಗಳು. ಬೆಲೆ ೧-೪೦.

———

ಹದಿನಾರಾಣೆ ಚೊಕ್ಕ ಬಂಗಾರ

ಒಳ್ಳೆಯ ಅಭಿರುಚಿ ಮತ್ತು ನಯನಾಜೂಕು ಉಳ್ಳವರು ಪ್ರಪಂಚದ ಪ್ರತಿಯೊಂದು ಪದಾರ್ಥದಲ್ಲಿಯೂ ಚೊಕ್ಕ ಗುಣಗಳಿರಬೇಕೆಂದು ಯಾವಾಗಲೂ ಪಟ್ಟು ಹಿಡಿಯುತ್ತಾರೆ. ಸಾರ್ವತ್ರಿಕವಾಗಿ ನಿಗದಿ ದರ್ಜೆಯದೆಂದು ಅಂಗೀಕಾರವಾಗಿರುವ ಒಂದು ಮಾಲಿಗೆ ಬದಲಾಗಿ ಅದರ ನಕಲಿಯನ್ನು ಕೊಡಹೋದರೆ, ನಾಜೂಕಿನ ಮನುಷ್ಯನಿಗೆ ಅಸಹ್ಯವಾಗುತ್ತದೆ. ವಿದ್ಯಾವಂತನೂ ಸುಸಂಸ್ಕೃತನೂ ಆದ ಮನುಷ್ಯನಿಗೆ 'ಅಷ್ಟೇ ಒಳ್ಳೆಯದು' ಎಂಬುದು ಎಂದಿಗೂ ಹಿಡಿಸುವುದಿಲ್ಲ. ಅವನು ಹದಿನಾರಾಣೆ ಚೊಕ್ಕ ಬಂಗಾರವನ್ನಲ್ಲದೆ ಬೇರೊಂದನ್ನು ಅಂಗೀಕರಿಸನು. ಉದಾಹರಣೆಗೆ:—

ಅಸಂಖ್ಯಾತ ನಕಲಿಗಳಿದ್ದರೂ

ಮೈಸೂರು ಸ್ಯಾಂಡಲ್ ಸಾಬೂನು

ಒಂದನ್ನೇ ಅತಿ ಸೂಕ್ಷ್ಮದೃಷ್ಟಿಯ ಮನುಷ್ಯನು ಅಂಗೀಕರಿಸುತ್ತಾನೆ.

ಅದು ಪರಮೋತ್ಕೃಷ್ಟ ಪರಿಮಳಭರಿತವಾದ ನಿಗದಿದರ್ಜೆಯ ಸಾಬೂನು

卐

ಮೈಸೂರು ಸ್ಯಾಂಡಲ್ ಸಾಬೂನನ್ನು

ಉಪಯೋಗಿಸಿರಿ!

卐

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ರಾಜಾಜಿ ನಗರ,

ಬೆಂಗಳೂರು—೩.

Printed by N. A. Hoskeri at the Vijaya Press, Dharwar and published for the Proprietors Jayanti Publications, by K S. Betgeri at the Jayanti Office. Dharwar

ಜಯಂತಿ

ಸಂಪುಟ ೨೦

ಸಂಚಿಕೆ ೧೧

ಬಲವೇ ಬೇಕು!

卐

ಬಲವಿಲ್ಲದ ಬರಡುಬದುಕು ಅದೇತರದಯ್ಯಾ!
ಬಲವೇ ಬೇಕು ಸರುವ ಸ್ಥಲ.ಕಾಲಂಗಳಲಿ!
ಬಲವಿಲ್ಲದವನ ಕೈಯ ಸವಿಗವಳ,
ಬಲವುಳ್ಳವನ ಬಾಯೊಳಗೆ ಬೀಳುತ್ತಿದೆ ನೋಡಾ—
ಬಲವಿಲ್ಲದವನ ಕಾಯದ ಕಷ್ಟ,
ಬಲವುಳ್ಳವನ ಪುಷ್ಟಿ-ತುಷ್ಟಿಗೆ ಕಾರಣವಾಗುತಿದೆ ನೋಡಾ!
ಅಯ್ಯಾ, ಬಲವಿಲ್ಲದವನ ಗಳಿಸಾಳಿತನ,
ಬಲವುಳ್ಳವನ ಭೋಗ-ವಿಲಾಸಗಳಿಗಾಹುತಿಯಾಯಿತ್ತು,
ಬಲವಿಲ್ಲದವನ ಕೃತಿಕೌಶಲಗಳು
ಬಲವುಳ್ಳವನ ಸುಖಜೀವನಕ್ಕೆ ಸಾಧನವಾಯಿತ್ತು, ಕಾಣಾ!
'ಬಲವುಳ್ಳವನ ನ್ಯೆಯಾನೆ ಬೆಳೆಯಲಿಕೆ
ಬಲವಿಲ್ಲದ ಆಡುಗಳ ಆಹುತಿ ಸಂತತವೂ ಸಾಗುತಿದೆ"
ಎಂಬೀ ದೇಶ-ಕಾಲಾತೀತ ಸತ್ಯವನು
ಸಾರುತಿರುವ ಕೂಗಿ ಕೂಗಿ—ನಮ್ಮ ಸರ್ವಸಾಕ್ಷಿ ಕಾಲರಾಯ!

—ಸಾಹೂಕಾರ

ಜೂಲೈ

ಎಪ್ರೀಲ್

JAYANTI

ಈ ಸಂಚಿಕೆಯಲ್ಲಿ :

ಬುದ್ಧಿಜೀವಿಗಳು, ಶ್ರಮಜೀವಿಗಳು (ಸಂಪಾದಕೀಯ)
ಸಂಪಾದಕರು ೪೧೧

ಜಯಂತಿಗೆ ಜನತೆಯ ನೆರವು (ಸ್ವವಿಷಯ)
ಸಂಪಾದಕರು ೪೧೩

ಧನ್ವಂತರೀ ಮಂದಿರ (ಸಣ್ಣಕಥೆ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೪೧೫

ಅದೃಶ್ಯಕವಿಯು ಕಾಳಿದಾಸ (ಸಾಹಿತ್ಯದ ಅಭ್ಯಾಸ)
ಶ್ರೀ. ಎಂ. ಎಸ್. ಕುರಂದವಾಡ ಬಿ. ಎ. ಕುಮಟಾ ೪೧೦

ವಾಮನನಿಗೆ (ಕವಿತೆ)
'ಅನಾಮಿಕ' ಧಾರವಾಡ ೪೧೪

ಜೀವನಸಂದೇಶ (ರೇಡಿಯೋ ನಾಟಕ)
ಶ್ರೀ. ಜಯಸಿಂಹ ರೆಡ್ಡಿ, 'ಹರಿಜನ' ಇಂದೂರು ೪೧೫

ಎಚ್ಚರಿಕೆ (ಅನುಭವಮಾಲೆ)
ಶ್ರೀ. ಬಳ್ಳಾರಿ ಸುಬ್ಬರಾಯ ಅಡಿಗ ೪೨೬

ಹೆಣ್ಣು (ಒಂದು ನಲ್ನಾಡು)
'ಮಗು' ಬಿರದಾರ, ಬಬಲೇಶ್ವರ ೪೨೯

ಪ್ರಾರ್ಥನೆ (ಕವನ)
ಶ್ರೀ. ನೀಲಕಂಠ, ಮುಂಬಯಿ ೪೨೯

ಪ್ರತಿಜ್ಞೆ (ಸಣ್ಣಕಥೆ)
ಶ್ರೀಮತಿ 'ಕಲಾ' ಮಲ್ಲೇಶ್ವರಂ—ಬೆಂಗಳೂರು ... ೪೩೦

ಉಧೋ ಲಕ್ಷ್ಮಣ! (ಒಂದು ಕವಿತೆ)
ಶ್ರೀ. ಅ. ರಾ. ಸೇ, ದಾವಣಗೆರೆ ೪೩೪

ಪುಸ್ತಕವಿಮರ್ಶೆ (ಅ ಮನ್ನಿ)
ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ) ಬಿ. ಎ. (ಆನರ್ಸ್), ಧಾರವಾಡ ೪೩೬

ನಿಸರ್ಗ ನಿಯಮ (ರೂಪಕ ಕಥೆ)
ಶ್ರೀ. ಕುಲಕರ್ಣಿ ಶಂಕರರಾಯರು, ಅಕ್ಕಲಕೋಟೆ ... ೪೩೯

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೨೦ ಸಂಚಿಕೆ ೦೧

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

:*:

ಜಾಹೀರಾತು ಕೊಡಬಯಸುವ
ದರಗಳಿಗಾಗಿ ಬರೆದು ಕೇಳಬೇಕು:

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಬುದ್ಧಿಜೀವಿಗಳು, ಶ್ರಮಜೀವಿಗಳು

ನಾಗರಿಕ ರಾಷ್ಟ್ರದ ಸುಖಮಯ ಸಂಪೂರ್ಣಜೀವನಕ್ಕೆ ಬುದ್ಧಿಜೀವಿಗಳ ಅಗತ್ಯವೂ ಇದೆ; ಶ್ರಮ-ಜೀವಿಗಳ ಅಗತ್ಯವೂ ಇದೆ. ಬುದ್ಧಿಜೀವಿಗಳು ವಿದ್ಯೆಯ ಉಪಾಸಕರು; ಶ್ರಮ-ಜೀವಿಗಳು ಸಂಪತ್ತಿನ ಉಪಾಸಕರು. ವಿದ್ಯೆ ಸಂಪತ್ತಿಗಳ ಸಮನ್ವಯದ ವಿಧಾಯಕ ಕಾರ್ಯವೇ ರಾಷ್ಟ್ರದ ಸಂಸ್ಕೃತಿನಿರ್ಮಿತಿಗೆ ಕಾರಣವಾಗಿರುವುದು. ಈ ಬುದ್ಧಿಜೀವಿ ಶ್ರಮಜೀವಿಗಳಿಬ್ಬರಿಗೂ ವಿಶಾಲವಾದ ಸಮಾಜಕಲ್ಯಾಣ ದೃಷ್ಟಿ ಬೇಕಾಗುವುದು. ಅದಿಲ್ಲದೆ ಇಬ್ಬರೂ ಸ್ವಾರ್ಥೈಕ ದೃಷ್ಟಿಯವರಾದರೆ, ಅಂತಹ ಸಮಾಜದಲ್ಲಿ ಸುಖ-ಸಮಾಧಾನಗಳೆಂದೂ ಉಳಿಯುಲಾರವು.

ಬುದ್ಧಿಜೀವಿ-ಶ್ರಮಜೀವಿಗಳ ಕಾರ್ಯಗಳು ಹೊರಗಣ್ಣಿಗೆ ಪ್ರತ್ಯೇಕವಾಗಿ ಕಂಡು-ಬಂದರೂ, ಪರಸ್ಪರ ಸಹಕಾರವಿಲ್ಲದೆ ಅವೆರಡೂ ಪ್ರತ್ಯೇಕವಾಗಿ ಕಲ್ಯಾಣಕಾರಿಗಳಾಗಲಾರವು. ಬುದ್ಧಿಜೀವಿ ಶ್ರಮಜೀವಿಗೆ ಜೀವನದ ಮಾರ್ಗದರ್ಶಕನಾಗಬೇಕು; ಶ್ರಮಜೀವಿ ಬುದ್ಧಿ-ಜೀವಿಯ ಜೀವನದ ಯೋಗ ಕ್ಷೇಮಗಳ ಹೊಣೆಯನ್ನು ಹೊರಬೇಕು ಈ ಬಗೆಯ ಸಹಕಾರ ತಪ್ಪಿದರೆ, ಬುದ್ಧಿಜೀವಿ ಉಪವಾಸ ಸಾಯಬೇಕಾಗುವುದು; ಶ್ರಮಜೀವಿ ಕಣ್ಣಿದೂ ಕುರುಡನಾಗಬೇಕಾಗುವುದು

ಬುದ್ಧಿಜೀವಿಗಳಲ್ಲಿ ಎರಡು ಪ್ರಕಾರ. ಒಂದು ಬಗೆಯವರು ಲೌಕಿಕ ಸುಖ-ಸಮಾಧಾನ ಗಳ ಸಂಶೋಧಕರು; ಇನ್ನೊಂದು ಬಗೆಯವರು ಅಧ್ಯಾತ್ಮಿಕ ಸುಖ-ಶಾಂತಿಗಳ ಸಂಶೋಧಕರು. ಇಬ್ಬಗೆಯವರೂ ಪ್ರಾಮಾಣಿಕವಾಗಿ ದುಡಿದು, ತಮ್ಮ ಸಂಶೋಧನದ ಫಲಗಳನ್ನು ಸಮಾಜಕ್ಕೆ ಒದಗಿಸುತ್ತಿರಬೇಕು. ಸಮಾಜದ ಘಟಕವಾದ ವ್ಯಕ್ತಿಯ ಬಾಹ್ಯಾಂಗ, ಶ್ರಮಜೀವಿಯ ದುಡಿತದ ಫಲಗಳಿಂದ ಪೋಷಣೆಪಡೆದು ಬೆಳೆಯಬಹುದು; ಆದರೆ ಅವನ ಅಂತರಂಗಗಳಾದ ಮನಸ್ಸು-ಹೃದಯಗಳು ಸಂಪೂರ್ಣವಾಗಿ ಬೆಳೆಯಬೇಕಾದರೆ ಬುದ್ಧಿ ಜೀವಿಯ ಕಾರ್ಯದ ಫಲ ಅಗತ್ಯವಾಗಿ ಬೇಕು. ಬರಿ ಒಂದೇ ಅಂಗದ ಬೆಳೆವಣಿಗೆಯಿಂದ ಮನುಷ್ಯ ಮನುಷ್ಯನಾಗಿ ಬಾಳಲಾರ. ಕೇವಲ ಬಾಹ್ಯಾಂಗ ಬೆಳೆದರೆ ಮನುಷ್ಯ ಪಶುವಿ-ನಂತಾಗುವನು; ಕೇವಲ ಅಂತರಂಗವು ಬೆಳೆದರೆ, ಲೌಕಿಕ ಸಂಪತ್ತಿಯ ಅಭಾವದಿಂದ ಅವನು ನಿಷ್ಕ್ರಿಯನಾಗುವನು. ನಮ್ಮ ಪುರಾತನರು ಈ ವಾಸ್ತವ ಸತ್ಯವನ್ನು ಚೆನ್ನಾಗಿ ಮನ-ಕೊಂಡು, ಎರಡರ ಸಮನ್ವಯವನ್ನು ಚೆನ್ನಾಗಿ ಸಾಧಿಸಿ, ಜೀವನದಲ್ಲಿ ಸಮತೆಯನ್ನು ಪ್ರಸ್ಥಾಪಿಸಿದರು. ವ್ಯಕ್ತಿಯೂ ಸಮಾಜವೂ ಸುಖ-ಸಮಾಧಾನಗಳಿಂದ ಬಾಳುವಂತೆ ಮಾಡಿದರು.

ವಿಶಿಷ್ಟ ವಾತಾವರಣದ ಮೂಲಕ, ಬುದ್ಧಿಜೀವಿಗಳ ಸಂತಾನ ಬುದ್ಧಿಜೀವಿಯೇ ಆಗುವುದು; ಶ್ರಮಜೀವಿಗಳ ಸಂತಾನ ಶ್ರಮಜೀವಿಯೇ ಆಗುವುದು. ಒಂದೊಂದರ ಜೀವನ-ದಲ್ಲಿ ಒಂದೊಂದು ಬಗೆಯ ಸೌಂದರ್ಯವಿರುವುದು; ಒಂದೊಂದು ಬಗೆಯ ತೃಪ್ತಿಗೆ ಅವಕಾಶವಿರುವುದು. ಬುದ್ಧಿಜೀವಿಗಳು ಕಷ್ಟಕರವಾದ ರೀತಿಯಿಂದ ದೇಹವನ್ನು ಡೆಣಿಸದೆ ಬಾಳಿಕೊಂಡಿರಬಹುದು; ಆದರೆ ಅವರಿಗೆ ಸಂಪತ್ತಿಯ ಸಮೃದ್ಧಿ ಇರದು ಶ್ರಮಜೀವಿಗಳ ಸಂಪತ್ಸಮೃದ್ಧಿ ಪಡೆದು ಬಾಳಬಹುದು; ಆದರೆ ಅವರು ಎಡೆಬಿಡದೆ ದೇಹವನ್ನು ದಂಡಿಸ-ಬೇಕಾಗುವುದು.

ಬುದ್ಧಿಜೀವಿಗಳ ಜೀವನಕ್ರಮ ಒಂದು ಬಗೆಯಿಂದ ರೂಪುಗೊಂಡರೆ, ಶ್ರಮಜೀವಿಗಳದು ಇನ್ನೊಂದು ಬಗೆಯಲ್ಲಿ ರೂಪುಗೊಳ್ಳುವುದು. ಮೊದಲನೆಯವರಲ್ಲಿ ಅಚ್ಚುಕಟ್ಟುತನ, ಓರಣ,

ಕಸವನ್ನೆ ರಸವನ್ನಾಗಿ ಮಾಡುವ ಜಾಣ್ಮೆ, ಭವಿಷ್ಯವನ್ನಂತು ಬಾಳುವ ಧೋರಣೆ—ಇವು ಬೆಳೆದಿರುವುವು. ಶ್ರಮಜೀವಿಗಳಲ್ಲಿ ಅವ್ಯವಸ್ಥೆ, ಅಸ್ವಚ್ಛತೆ, ಇದ್ದುದನ್ನೇ ಮುದ್ದೆಮಾಡಿ ತಿನ್ನುವ ಹುಂಬತನ, ಭವಿಷ್ಯದ ಬಗೆಗೆ ಕುರುಡುನೋಟ ಇವು ಕಾಣುವುವು. ಶ್ರಮ-ಜೀವಿಗಳ ಈ ಕೊರತೆಯನ್ನು ಬುದ್ಧಿಜೀವಿಗಳು ತಿದ್ದಿ, ಅವರನ್ನು ಭೀತಿರಹಿತ ಮಾರ್ಗದಿಂದ ನಡೆಸುವುದು ಅವರ ಕರ್ತವ್ಯವಾಗಿದೆ. ಈ ಕರ್ತವ್ಯದ ಪರಿಪಾಲನೆ ಎಂದಿನಿಂದಲೂ ನಮ್ಮ ಸಮಾಜದಲ್ಲಿ ನಡೆದುಕೊಂಡು ಬಂದುದು ಚಾರಿತ್ರ್ಯಿಕ ಸತ್ಯವಾಗಿದೆ.

ಬ್ರಿಟಿಷರ ಭೇದನೀತಿ, ನಮ್ಮ ಸಮಾಜದಲ್ಲಿಯ ಬುದ್ಧಿಜೀವಿ-ಶ್ರಮಜೀವಿಗಳಲ್ಲಿಯ ಪರಸ್ಪರಾವಲಂಬನ ವ್ಯವಸ್ಥೆಯನ್ನು ಕಪ್ಪಿಸಿತು. ತಮ್ಮ ರಾಜ್ಯವ್ಯವಸ್ಥೆಗೆ, ಭಾರತದಲ್ಲಿಯ ಬುದ್ಧಿಜೀವಿಗಳ ಅವಶ್ಯಕತೆಯೆನಿಸಿದುದರಿಂದ, ಅವರಿಗೆ ಸರಕಾರೀ ನೌಕರಿಗಳನ್ನು ಒದಗಿಸಿ, ತನ್ನ ಸೇವಕರನ್ನಾಗಿ ಮಾಡಿಕೊಂಡಿತು. ಸರಕಾರದ ಸಂಬಳದಿಂದ ತಮ್ಮ ಜೀವನವನ್ನು ನಡೆಸತೊಡಗಿದ ಬುದ್ಧಿಜೀವಿಗಳು, ಶ್ರಮಜೀವಿಗಳ ಸಹಕಾರದ ಅವಶ್ಯಕತೆಯಿಲ್ಲದವರಾದರು. ಎಂತಲೇ ಬುದ್ಧಿ-ಜೀವಿಗಳು ಅವರ ಜೀವನದ ಸುಖ-ಸಮಾಧಾನದ ವ್ಯವಸ್ಥೆಯನ್ನು ಸಂಪೂರ್ಣ ದುರ್ಲಕ್ಷಿಸಿದರು.

ಆರ್ಥಿಕ ಪರಾಧೀನತೆಯಲ್ಲಿ ಇರಿಸದೆ ಭಾರತವು ತಮ್ಮ ಕೈಯಲ್ಲಿ ಬಹುಕಾಲ ಉಳಿಯಲಾರದೆಂಬ ಮನವರಿಕೆ ಬ್ರಿಟಿಷರಿಗೆ ಆದಾಗ, ಅವರು ಒಂದೊಂದಾಗಿ ಭಾರತೀಯ ಉದ್ಯಮಗಳನ್ನು ಹಾಳುಮಾಡತೊಡಗಿದರು. ನಿತ್ಯಜೀವನೋಪಯುಕ್ತ ಪದಾರ್ಥ-ಗಳನ್ನು ಕೂಡ ತಮ್ಮ ದೇಶದಿಂದ ತಂದು ಮಾರಲು ತೊಡಗಿದರು. ಭವಿತವ್ಯವನ್ನು ಯೋಚಿಸದೆ, ನಮ್ಮ ಜನರೂ ಹೊರಮೆರುಗಿಗೆ ಮರುಳಾಗಿ—ತಮ್ಮ ದೇಶದ ಸಲಕರಣೆ ಸಾಮಗ್ರಿಗಳನ್ನು ಬಿಟ್ಟು, ಹೊರಗಿನಿಂದ ಬಂದುವುಗಳನ್ನೆ ಕೊಳ್ಳತೊಡಗಿದರು. ಇದರ ಪರಿಣಾಮವೆಂದರೆ, ಭಾರತೀಯ ಉದ್ಯಮಗಳು ಹಾಳಾದುವು. ಆ ಉದ್ಯಮಜೀವಿಗಳಾದ ಜನರು ನಿರುದ್ಯೋಗಿಗಳಾದರು.

ಬುದ್ಧಿಜೀವಿಗಳು ಬ್ರಿಟಿಷರ ದಾಸರಾಗಿ, ಅವರು ಕೊಟ್ಟ ಸಂಬಳದಿಂದ ಭೋಗಜೀವಿಗಳಾದರು. ಉದ್ಯಮದಾರರು ನಿರು-ದ್ಯೋಗಿಗಳಾಗಿ ಹೊಟ್ಟೆಯ ಯೋಚನೆಯಲ್ಲಿ ಬಿದ್ದರು. ಕೃಷಿ-ಜೀವಿಗಳು ಸರಿಯಾದ ಮಾರ್ಗದರ್ಶಕರಿಲ್ಲದೆ ಅಜ್ಞಾನಿಗಳಾದರು. ಇದು ಬ್ರಿಟಿಷರಿಗೆ ಪಥ್ಯವಾಯಿತು; ಭಾರತೀಯ ಸ್ವಾತಂತ್ರ್ಯಕ್ಕೆ ಅಪಥ್ಯವಾಯಿತು.

ಬುದ್ಧಿಯಿದ್ದ ಬಡವ ಸುಮ್ಮನೆ ಕೂಡುವನೆ? ನಿರುದ್ಯೋಗಿ-ಗಳು ಜಾಗೃತರಾಗಿ ಅಸಂತೋಷವನ್ನು ಪ್ರಕಟಿಸಿದಾಗ, ಬ್ರಿಟಿಶರ ಕುಟಿಲತಂತ್ರ ಇನ್ನೊಂದು ಭೂತವನ್ನು ಹೊರಗೆ ಅಟ್ಟಿತು; ಆ ಭೂತವೇ ದರೆ ಜಾತೀಯವಾದದ ಭೂತ. ಈ ಭೂತದಿಂದ ಅಸಂತುಷ್ಟ ಜನರ ಮೂಗಿನೆದುರು ಅದು ಮೂಲಂಗಿಯನ್ನು ಕಟ್ಟಿತು.

ತಪ್ಪುಗಾರರು ಬ್ರಿಟಿಷರಲ್ಲವೆಂದೂ, ತಮ್ಮವರೇ ಆದ ಬುದ್ಧಿ ಜೀವಿಗಳೇ ತಪ್ಪುಗಾರರೆಂದೂ ಅಸಂತುಷ್ಟ ಜನರು ತಿಳಿದುಕೊಂಡರು. ಬುದ್ಧಿಜೀವಿಭಾರತೀಯರನ್ನೇ ಅವರು ದ್ವೇಷಿಸತೊಡಗಿದರು. ಈ ಸ್ವಜನ ಕಲಹದ ಅತ್ಯಘಾತಕ ವೃತ್ತಿಯ ಲಾಭವನ್ನೂ ಬ್ರಿಟಿಷರು ಅನೇಕ ದಿನ ಅನುಭವಿಸಿದರು. ಭಾರತೀಯರಲ್ಲಿ ಸಾಮೂಹಿಕವಾಗಿ ಉಂಟಾದ ಸ್ವಾತಂತ್ರ್ಯ ಜಾಗೃತಿ, ಕೊನೆಗೂ ಬ್ರಿಟಿಷರ ಭೇದನೀತಿ-ಯನ್ನು ಭೇದಿಸಿತು. ಬ್ರಿಟಿಷರು ಸೋತು ಕೈಯೂರಿ ಭಾರತವನ್ನು ಬಿಟ್ಟು ಹೊರಟುಹೋದರು.

ಈಗ ನಾವು ಸ್ವತಂತ್ರರಾಗಿದ್ದೇವೆ; ಆದರೆ ಈಗಲೂ ನಮ್ಮ ಸಮಾಜದ ಸಮೃದ್ಧ ಜೀವನ—ಸುಖಜೀವನಗಳಿಗಾಗಿ ಬುದ್ಧಿಜೀವಿ-ಶ್ರಮಜೀವಿಗಳ ಸಮನ್ವಯ-ಸಹಕಾರಗಳು ಅತ್ಯವಶ್ಯವಾಗಿವೆ. ಒಂದೇ ಜೀವಿ ಬುದ್ಧಿ-ಶ್ರಮಗಳ ಎರಡರ ಕಾರ್ಯವನ್ನೂ ನಡೆಸಿಕೊಂಡು ಹೋಗಲಾರದೆಂಬ ಶಾಶ್ವತಸತ್ಯವನ್ನು ಮೊದಲೇ ವಿಶದಪಡಿಸಲಾಗಿದೆ. ಆದರೆ ಇಂದಿನ ವೈಯಕ್ತಿಕ ಸ್ವಾರ್ಥ-ಲೋಭಗಳು, ಬ್ರಿಟಿಷರ ಕಾಲದಲ್ಲಿ ಬೆಳೆದುಬಂದಿದ್ದ ಜಾತೀಯ ಭಾವನೆಯನ್ನು ಮುಂದೆಯೂ ಸಂರಕ್ಷಿಸಿಕೊಂಡು ಹೋಗಬೇಕೆಂದು ಹೊಂಚು-ಹಾಕುತ್ತಲಿವೆ. ನಮ್ಮ ಕನ್ನಡ ರಾಜ್ಯದಲ್ಲಂತೂ ಇಂತಹ ಹೊಂಚು-ಗಾರರೇ ಮುಂದಾಳುಗಳ ಮನ್ನಣೆಯ ಸ್ಥಾನಗಳಲ್ಲಿ ಮೆರೆಯುತ್ತಿದ್ದಾರೆ. ಪರಂಪರಾಗತವಾಗಿ ಬಂದ ಬುದ್ಧಿಜೀವಿಗಳನ್ನು ಸಂಪೂರ್ಣವಾಗಿ ಹಿಂದಕ್ಕೆ ಒತ್ತಬೇಕೆಂದು ಅವರು ಅಖಂಡವಾಗಿ ಪ್ರಯತ್ನ ನಡೆಸಿದ್ದಾರೆ.

ನಮ್ಮ ರಾಷ್ಟ್ರಕ್ಕೆ ನಿಜವಾದ ಹಿತವನ್ನು ಬಯಸುವವರೇ ಸಕಾಲದಲ್ಲಿಯೇ ಇದರ ಹಿತಾಹಿತಗಳನ್ನು ಕುರಿತು ಗಂಭೀರವಾಗಿ ವಿಚಾರಮಾಡಬೇಕಾಗಿದೆ. ಇದನ್ನು ಮಾನವತೆಯ ದೃಷ್ಟಿಯಿಂದಲೂ ವಿಚಾರಮಾಡಬೇಕು; ಸಮಾಜಹಿತದ ದೃಷ್ಟಿಯಿಂದಲೂ ವಿಚಾರ ಮಾಡಬೇಕು. ಇದ್ದ ಶಕ್ತಿಯನ್ನು ನುಣ್ಣಗೂಡಿಸಿ ಅಂತಹದೇ ಆದ ಹೊಸ ಶಕ್ತಿಯನ್ನು ಹುಟ್ಟಿಸುವೆನೆಂದು ಹೊರಡುವುದು ಸಮುಂಜ-ಸವೂ ಎನಿಸದು. ಸುಲಭ ಸಾಧ್ಯವೂ ಎನಿಸದು. ಇದ್ದ ಶಕ್ತಿಯನ್ನೇ ಔಚಿತ್ಯವರಿತು ಉಪಯೋಗಿಸಿಕೊಳ್ಳುವುದು ಪ್ರಸಂಗಾವಧಾನಿಯ ಮುಖ್ಯ ಲಕ್ಷಣ.

ಈಗ ವಂಶಪರಂಪರೆಯಿಂದ ಬಂದ ಬುದ್ಧಿಜೀವಿಗಳನ್ನು ಮಟ್ಟ ಹಾಕಿ ಬಿಡಬೇಕೆಂಬ ಅವಿವೇಕದ ನುಡಿಗಳು, ಹೊಣೆಗಾರರೆನಿಸಿ-ಕೊಳ್ಳುವವರ ಬಾಯಿಂದಲೂ ಹೊಮ್ಮುತ್ತಲಿವೆ ಅದಕ್ಕೆಂದು ಅಭಾಸಕತ್ತ್ವಜ್ಞಾನದ ಒಪ್ಪವನ್ನೂ ಕೊಡಲಾಗುತ್ತಿದೆ. ಆದರೆ ಈ ಅವಿವೇಕ, ವ್ಯಕ್ತಿಯ ತಾತ್ಕಾಲಿಕ ಲಾಭಕ್ಕೆ ಅನುಕೂಲವಾಗಿ ತೋರಬಹುದಾದರೂ, ದೇಶದ ಶುಭ-ಭವಿಷ್ಯದ ದೃಷ್ಟಿಯಿಂದ ಅತ್ಯಂತ ಹಾನಿಕಾರಕವಾಗಿದೆ. ಸಮಾಜದಲ್ಲಿ ಇನ್ನಿಷ್ಟು ವೈಷಮ್ಯ-ವನ್ನು ಹುಟ್ಟಿಸುವುದಷ್ಟೆ ಇದಾಗಿದೆ.

—ಸಂಪಾದಕರು

ಜಯಂತಿಗೆ ಜನತೆಯ ನೆರವು

ವಾಙ್ಮಯ ಸಹಕಾರ

ಜಯಂತಿಯ ಆರ್ಥಿಕ ಆಪತ್ತಿನ ಕಥೆಯನ್ನು ಈಗೆರಡು ತಿಂಗಳ ಸಂಚಿಕೆಗಳಲ್ಲಿ ಜನತೆಗೆ ಬಿನ್ನವಿಸಿಕೊಳ್ಳಲಾಯಿತು. ಅದನ್ನು ನೋಡಿದ ಅನೇಕ ಜನ ಸಹೃದಯರು, ಜಯಂತಿಯು ನಿಂತುಹೋಗ ಕೂಡದೆಂಬ ತಮ್ಮ ಸಹೃದಯದ ಅಭಿಪ್ರಾಯವನ್ನು ಸೂಚಿಸಿದರು. ಸಹೋದ್ಯೋಗಿಗಳಾದ 'ಚಿತ್ರಗುಪ್ತ' 'ಕೊರವಂಜಿ' ಮೊದಲಾದ ಪತ್ರಿಕೆಗಳ ಸಂಪಾದಕರು, ಜಯಂತಿಯ ಕಷ್ಟದ ಬಾಳಿಗಾಗಿ ನಿಟ್ಟುಸಿರು ಬಿಟ್ಟು ಸಹಾನುಭೂತಿಯನ್ನು ತೋರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಮುಖಪತ್ರಿಕೆಯಾದ 'ಕನ್ನಡನುಡಿ'ಯ ಸಂಪಾದಕ ಅಸ್ಥಾನವಿದ್ವಾನ್, ಪಂಡಿತರತ್ನ ಶ್ರೀಮಾನ್ ಶಿವಮೂರ್ತಿ ಶಾಸ್ತ್ರಿಗಳು, ಜಯಂತಿಯ ಬಗೆಗೆ ತುಂಬ ಮಮತೆಯನ್ನು ತೋರಿಸಿ ಹೀಗೆ ಬರೆದಿದ್ದಾರೆ:

"ಧಾರವಾಡದ 'ಜಯಂತಿ' ಮಾಸಪತ್ರಿಕೆ ನಿಲ್ಲಬಾರದು!

ಕರ್ನಾಟಕದ ಸುಪ್ರಸಿದ್ಧ ಗ್ರಂಥಕಾರರೂ ಕವಿಗಳೂ ಪತ್ರಿಕಾ ಕರ್ತರೂ ಆದ ಶ್ರೀ. ಬೆಟಗೇರಿ ಕೃಷ್ಣಶರ್ಮರ ಸಂಪಾದಕತ್ವದಲ್ಲಿ — ಧಾರವಾಡದಿಂದ ಪ್ರಕಟವಾಗುತ್ತಿರುವ 'ಜಯಂತಿ' ಎಂಬ ಪತ್ರಿಕೆಯು ನಾಳಿನ ಮೇ ತಿಂಗಳಿಗೆ ೩೦ ವರ್ಷ ಕಳೆಯುವುದೆಂದೂ, ಸುದೀರ್ಘವಾದ ಈ ಅವಧಿಯಲ್ಲಿ, ಸಂಪಾದಕರಿಗೆ ಹದಿನಾಲ್ಕು ಸಾವಿರ ರೂಪಾಯಿ ಸಾಲವಾಗಿದೆಯೆಂದೂ ಈ ಋಣದ ದೆಸೆಯಿಂದ ಪತ್ರಿಕೆಯು ನಿಲ್ಲುವುದೆಂದೂ ಕೇಳಿ ನಮಗೆ ಬಹಳ ವ್ಯಸನವೆನಿಸಿದೆ.

ಕವಿಭೂಷಣ ಶ್ರೀ. ಬೆಟಗೇರಿ ಕೃಷ್ಣಶರ್ಮರು, ನಾಡಿನಲ್ಲಿ ಹೆಸರಾಂತ ಕವಿಗಳು. ಸುಮಾರು ಮೂವತ್ತು ವರ್ಷಗಳಿಂದ ಅವರು ಕನ್ನಡಿಗರ ಸೇವೆಯನ್ನು ಮಾಡಿದ್ದಾರೆ. ದೇಶದ ಸ್ವಾತಂತ್ರ್ಯಕ್ಕೆ ಶ್ರಮಿಸಿದ್ದಾರೆ. ಏಕೀಕರಣಕ್ಕೆ ಬೆಂಬಲವಿತ್ತಿದ್ದಾರೆ ಸಂಘ-ಸಂಸ್ಥೆಗಳಿಗೆ ಸೇವೆ ಸಲ್ಲಿಸಿದ್ದಾರೆ. ಗ್ರಂಥಗಳನ್ನು ಬರೆದಿದ್ದಾರೆ ಕವಿತೆಗಳನ್ನು ಹಾಡಿದ್ದಾರೆ. ಪತ್ರಿಕೆಗಳನ್ನು ನಡೆಸಿದ್ದಾರೆ ಇವೆಲ್ಲವುಗಳ ಫಲವಾಗಿ ಈಗ ಅವರು ಹದಿನಾಲ್ಕು ಸಾವಿರ ರೂಪಾಯಿ ಸಾಲಕ್ಕೆ ತಲೆ ಕೊಟ್ಟಿದ್ದಾರೆ. ಜಯಂತಿಯು ಕನ್ನಡದ ಒಂದು ಶ್ರೇಷ್ಠವಾದ ಮಾಸಿಕ. ಅದರಲ್ಲಿ ಉತ್ತಮವಾದ ಲೇಖನಗಳು, ಕವಿತೆಗಳು, ಗ್ರಂಥ ವಿಮರ್ಶೆಗಳು, ಸಂಶೋಧನೆಗಳು ಪ್ರಕಟವಾಗಿ, ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಸೇವೆ ಸಂದಿದೆ. ಇಪ್ಪತ್ತು ವರುಷಗಳಿಂದ ಈ ಪತ್ರಿಕೆಯು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಖ್ಯಾತಿಯನ್ನು ಗಳಿಸಿದೆ. ಇಂತಹ ಪ್ರೌಢ ಪತ್ರಿಕೆ ನಿಲ್ಲುವುದು ಕನ್ನಡಿಗರಿಗೆ ಹೆಚ್ಚಿನ ನಷ್ಟವೆನ್ನಬಹುದು. ಕನ್ನಡ ಜನರು ಔದಾರ್ಯಕ್ಕೆ ಹೆಸರಾದವರು. ಈಗ ಕನ್ನಡಿಗರ ಸರ್ಕಾರ ಅಧಿಕಾರದಲ್ಲಿದೆ. ಎಲ್ಲರೂ ಮನಸ್ಸು ಮಾಡಿ ಉದಾರವಾದ ಸಹಾಯವನ್ನು ಕೊಟ್ಟು, 'ಜಯಂತಿ'ಯು ನಿಲ್ಲದಂತೆ ಮಾಡುವರೆಂದು ನಾವು ನಂಬುತ್ತೇವೆ."

ಮಾನ್ಯರೂ ಹಿರಿಯರೂ ಆದ ಈ ಸಂಪಾದಕರ ನಂಬುಗೆ ನಿಜವಾಗಿ ಪರಿಣಮಿಸಿದರೆ, ಜಯಂತಿಗೆ ತುಂಬ ಸಂತೋಷ.

ಪ್ರತ್ಯಕ್ಷ ಆರ್ಥಿಕಸಹಾಯ

ತೀರ ಸಣ್ಣ ಪ್ರಮಾಣದಲ್ಲಿಯಾದರೂ ಹಣದ ಪ್ರತ್ಯಕ್ಷ ಸಹಾಯವು ದೊರೆತುದು, ಜಯಂತಿಯ ಒಣಗಿದ ಬಾಯಿಗೆ ಹನಿಹನಿ ನೀರು ಬಿಟ್ಟು, ಅದರ ಬದುಕುವ ಆಶೆಗೆ ದಾರಿಮಾಡಿ ಕೊಟ್ಟಿರುತಾಗಿದೆ. ಶ್ರೀಭಂಡಾರಕೇರಿಯ ಮಠದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರು. ಜಯಂತಿಯ ಯೋಗ-ಕ್ಷೇಮವನ್ನು ತಾವಾಗಿಯೆ ವಿಚಾರಿಸಿ, ಅದು ಬದುಕುವುದರ ಅವಶ್ಯಕತೆಯ ಬಗೆಗೆ ತಮ್ಮ ಸದಭಿಪ್ರಾಯವನ್ನು ಸೂಚಿಸಿ, ಆಶೀರ್ವಾದ-ಮಂತ್ರಾಕ್ಷತೆಗಳೊಂದಿಗೆ ೩೫ ರೂಪಾಯಿಗಳನ್ನು ಸಲ್ಲಿಸಿದರಲ್ಲದೆ, ಜಯಂತಿಯ ಯೋಗ-ಕ್ಷೇಮವನ್ನು ಕುರಿತು ಆಗಾಗ ವಿಚಾರಮಾಡುವೆವಾಗಿ ಅಪ್ಪಣೆ ಕೊಡಿಸಿದ್ದಾರೆ. ಶ್ರೀಗಳವರು ವಿದ್ಯಾಭಿಮಾನಿಗಳು; ಸಮಾಜಸಂಸ್ಕೃತಿಯ ಕಡೆಗೆ ತುಂಬ ಲಕ್ಷ್ಯಕೊಡುವವರು. ಅಂತಹ ಮಹಾ ವ್ಯಕ್ತಿಯಿಂದ ಜಯಂತಿಗೆ ಶುಭಾಶೀರ್ವಾದ ದೊರೆತುದು ಒಳ್ಳೆಯ ಭವಿಷ್ಯದ ಸೂಚನೆಯಾಗಿದೆ.

ರಂಗಂಪೇಟೆಯ ಕರ್ನಾಟಕ ಸಂಘದ ಸದಸ್ಯರು,

ಜಯಂತಿಯ ಕಾರ್ಯ ಕಡೆದು ನಿಲ್ಲಬಾರದೆಂದು ತುಂಬ ಪ್ರಯತ್ನ ನಡೆಸಿದ್ದಾರೆ. ಕನ್ನಡಿಗರಲ್ಲಿ ತಲೆಗೆ ಒಂದೊಂದು ರೂಪಾಯಿಯಂತೆ ಜಯಂತಿಗೆ ನೆರವು ದೊರೆತರೂ ಅದೊಂದು, ಮೊತ್ತವಾಗಿ ಜಯಂತಿಯು ಮಾರ್ಗಕ್ರಮಣ ಸುಗಮವಾಗುವುದೆಂದು ಅವರ ಕಲ್ಪನೆ ಕರ್ನಾಟಕದ ಒಳಗೂ ಹೊರಗೂ ಇರುವ ಜಯಂತಿಯ ಹಿತಚಿಂತಕರು, ಈ ನಿಧಿಸಂಗ್ರಹಕ್ಕೆ ಮನಸ್ಸು ಮಾಡಬೇಕೆಂಬುದು ಅವರ ಇಚ್ಛೆಯಾಗಿದೆ. ತಾವು ಈಗಾಗಲೇ ಆ ಬಗೆಯಾಗಿ ಕಾರ್ಯವನ್ನು ಆರಂಭಿಸಿದ್ದಾರೆ ಮೊದಲನೆಯ ಕಂತು ಎಂದು ನಾಲ್ಕುಜನ ಹೊಸ ಚಂದಾದಾರರ ಹೆಸರುಗಳನ್ನೂ, ಹತ್ತು ರೂಪಾಯಿಗಳ ಸಹಾಯನಿಧಿಯನ್ನೂ ಕಳುಹಿಸಿದ್ದಾರೆ. ಈ ರೂಪಾಯಿಗಳನ್ನು—ಜನರಲ್ಲಿ ಜಯಂತಿಯ ಬಗೆಗೆ ಜಾಗೃತಿ ಹುಟ್ಟಿಸಬೇಕೆಂದು—ಒಬ್ಬೊಬ್ಬರಿಂದ ಒಂದೊಂದು ರೂಪಾಯಿಯನ್ನು ಮಾತ್ರ ತೆಗೆದು ಕೊಂಡಿರುವರು. ರೂಪಾಯಿಗಳನ್ನು ಕೊಟ್ಟವರ ಹೆಸರುಗಳವು:

೧ ಶ್ರೀ. ಎಂ. ಜಿ. ಕುಲಕರ್ಣಿ, ರಂಗಂಪೇಟೆ
೨ ಶ್ರೀ. ಕೇಶವರಾವ ತಿಳಿಗೊಳ, ರಂಗಂಪೇಟೆ
೩ ಶ್ರೀ. ಜನಾರ್ದನರಾವ್ ಹಳಿಜೋಳ, ರಂಗಂಪೇಟೆ
೪ ಶ್ರೀ. ವೆಂಕೋಬರಾವ್ ವನದುರ್ಗ, ರಂಗಂಪೇಟೆ
೫ ಶ್ರೀ. ರಾಮಭಟ್ಟ ರಾಜಜೋಶಿ, ರಂಗಂಪೇಟೆ
೬ ಕು. ಸುಭದ್ರಾ ಬುದ್ಧಿವಂತಸೆಟ್ಟಿ, ಮಿರಿಯೂಲ, ರಂಗಂಪೇಟೆ
೭ ಶ್ರೀಮತಿ ನಾಗಮ್ಮಸೆಟ್ಟಿ, ಮಿರಿಯಾಲ, ರಂಗಂಪೇಟೆ
೮ ಶ್ರೀಮತಿ ಇಂದಿರಾದೇವಿ ಕೃಷ್ಣಾಚಾರ್ಯ ಸಗರ, ರಂಗಂಪೇಟೆ
೯ ಶ್ರೀಮತಿ ಶಕುಂತಲಾಬಾಯಿ ವೆಂಕೋಬರಾವ್ ವನದುರ್ಗ
೧೦ ಶ್ರೀ. ಗುರುಸ್ವಾಮಪ್ಪ (ಮುಕ್ಕಣ್ಣಾ) ಪೋಲಂಪಲ್ಲಿ

ರಂಗಂಪೇಟೆಯ ಕರ್ನಾಟಕಸಂಘದ ಸದಸ್ಯರ ಪರವಾಗಿ, ಕೋಶಾಧ್ಯಕ್ಷರಾದ ಶ್ರೀಮಾನ್ ಬುದ್ಧಿವಂತಸೆಟ್ಟಿಯವರು ಪತ್ರ ಬರೆಯುತ್ತ ಕೊನೆಯಲ್ಲಿ :

" ಜಯಂತಿಯ ಶಾಶ್ವತನಿಧಿಗಾಗಿ ಇನ್ನೂ ಕೆಲವರಿಂದ ಹಣ ಕೂಡಿಸಿ ಕಳುಹುತ್ತೇವೆ. ಜಯಂತಿಯನ್ನು ನಿಲ್ಲಿಸುವ ವಿಚಾರ ಬಿಡಬೇಕು. 'ಜಯಂತಿ' ಶಾಶ್ವತವಾಗಿ ಬಾಳಲಿ ಎಂದು ಹಾರೈಸುವೆವು " ಎಂದು ಬರೆದಿದ್ದಾರೆ.

ಇವರಂತೆಯೆ ಅಲ್ಲಲ್ಲಿಯ ಕನ್ನಡ ಸಂಘ-ಸಂಸ್ಥೆಗಳವರು ಜಯಂತಿಗಾಗಿ ಪ್ರತ್ಯಕ್ಷ ಸಹಾಯದ ಪ್ರಯತ್ನವನ್ನು ಮಾಡಿದರೆ, ಜಯಂತಿ ಮತ್ತೆ ಜೀವಂತವಾಗಿಕೊಂಡು ಮೇಲಕ್ಕೇಳುವುದರಲ್ಲಿ ಸಂದೇಹವಿಲ್ಲ.

ಫೆಬ್ರುವರಿಯಿಂದ ಇಲ್ಲಿಯವರೆಗಿನ ಅವಧಿಯಲ್ಲಿ, ೫ ರೂಪಾಯಿ —೧೦ ರೂಪಾಯಿ—ಹೀಗೆ ಸಹಾಯಧನವನ್ನು ಕಳುಹಿದ ಕೆಲವು ಸಹೃದಯರೂ ಇದ್ದಾರೆ. ಅವರಂತೆಯೆ ಕಳುಹುವ ಆಶ್ವಾಸನದ ಕಾಗದ ಬರೆದವರೂ ಇದ್ದಾರೆ. ಹಣ ಕಳುಹಿದ ಮಹನೀಯರೆಲ್ಲರೂ ತಮ್ಮ ಹೆಸರನ್ನು ಪ್ರಕಟಿಸಕೂಡದೆಂದು ತಿಳುಹಿದುದರಿಂದ, ಅನಿವಾರ್ಯವಾಗಿ ಇಲ್ಲಿ ಅವರ ಹೆಸರುಗಳನ್ನು ತಿಳುಹಿಲ್ಲ.

ನಮ್ಮ ವಿನ್ನಹವನ್ನು ಮನ್ನಿಸಿ, ಫೆಬ್ರುವರಿಯಿಂದ ಇದುವರೆಗೆ ಸುಮಾರು ೨೦ ಜನರು ಹೊಸತಾಗಿ ಚಂದಾದಾರರಾಗಿ ಹಣ ಕಳುಹಿದ್ದಾರೆ. ಚಂದಾದಾರರನ್ನು ಒದಗಿಸುವ ಕಾರ್ಯದಲ್ಲಿ ಶ್ರೀಮಾನ್ ವಿ. ಬಿ. ದೇಶಪಾಂಡೆ ಮುಂಬಯಿ, ಶ್ರೀ. ಎ. ಎಂ. ಅಣ್ಣಿಗೇರಿ ಎಂ. ಎ ಧಾರವಾಡ ಅವರಿಂದ ಸಹಕಾರವು ದೊರೆಯುತ್ತಲಿದೆ. ರಂಗಂಪೇಟೆಯ ಕರ್ನಾಟಕ ಸಂಘದವರು ಹೆಚ್ಚಿಗೆ ಚಂದಾದಾರರನ್ನು ಕೂಡಿಸಿಕೊಡುವ ಆಶ್ವಾಸನವಿತ್ತಿದ್ದಾರೆ. ಜಯಂತಿಯನ್ನು ಬದುಕಿಸಲೇಬೇಕೆಂಬ ಬುದ್ಧಿಯಿಂದ, ಕೇವಲ ಸ್ವಯಂಪ್ರೇರಣೆಯಿಂದಲೆ ಮುಂದೆ ಬಂದಿರುವ ಈ ಮಹನೀಯರಿಗೆಲ್ಲ ಜಯಂತಿಯ ಕೃತಜ್ಞತೆಯ ವಂದನೆಗಳು.

ಇದೆಲ್ಲವನ್ನೂ ನೋಡಿದರೆ, ಜಯಂತಿಯು ಬದುಕಿ ಮುಂದು ವರಿಯಬೇಕೆನ್ನುವ ಮಹನೀಯರು ಕೆಲವು ಜನರಾದರೂ ಇರುವರೆಂಬುದು ಸಿದ್ಧವಾಗುವುದು. ಆದರೆ ಬಹುಜನ ಕನ್ನಡಿಗರು ಜಯಂತಿಯನ್ನು ಇದುವರೆಗೂ ಔದಾಸೀನ್ಯದಿಂದ ಕಾಣುತ್ತಿರುವುದು ವಿಷಾದದ ಸಂಗತಿಯಾಗಿದೆ. ನಮ್ಮ ನಾಡಿನ ಪ್ರತಿಯೊಂದು ಹೈಸ್ಕೂಲು, ಮಿಡಲ್ ಸ್ಕೂಲುಗಳು ಜಯಂತಿಗೆ ಚಂದಾದಾರರಾಗುವ ಮನಸ್ಸು ಮಾಡಿದರೆ ಸಾಕು; ನಮ್ಮ ಆರ್ಥಿಕಸಂಕಟದ ಬಹುಭಾಗ ಇಲ್ಲವಾದಂತಾಗುವುದು. ಹಳ್ಳಿಯ ವಾಚನಾಲಯಗಳೂ ಜಯಂತಿಯನ್ನು ಸ್ವಾಗತಿಸಬೇಕು. ಇದರಿಂದ ಪರಸ್ಪರ ಪ್ರಯೋಜನವಿರುವುದು.

ಸರಕಾರದಿಂದಲೂ ನೆರವು ಬೇಕು

ಇಂದಿನ ನಮ್ಮ ಸರಕಾರ ಪ್ರಜೆಗಳಿಂದ ನಿರ್ಮಿತವಾದು. ದಾದರೂ, ಪ್ರಜೆಗಳ ಕಲ್ಯಾಣಕ್ಕೆ ಬೇಕಾಗುವ ಪ್ರತಿಯೊಂದು ಚಳವಳಿಯನ್ನೂ ಅದು ಮಾಡಲಾರದು. ಸಂಸ್ಕೃತಿಪ್ರಚಾರದಂತಹ ವಿಧಾಯಕ ಚಳವಳಿ, ಸ್ವಯಂಸೇವಕರಿಂದಲ್ಲದೆ ಸರಕಾರದಿಂದ ನಡೆಯುವುದು ಸಾಧ್ಯವಿಲ್ಲ. ಆದುದರಿಂದ ಪ್ರಜಾಕಲ್ಯಾಣದ ಕಡೆಗೆ ದೃಷ್ಟಿಯಿರುವ ಸರಕಾರ, ಸ್ವಯಂಸೇವಕರ ಸಂಸ್ಕೃತಿಪ್ರಚಾರ ಕಾರ್ಯಗಳಿಗೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು. ಅವರ ಕೊರತೆಗಳೇನೆಂಬುದನ್ನು ತಿಳಿದುಕೊಂಡು ಅವುಗಳನ್ನು ಕಳೆಯಲು ಮುಕ್ತಮನಸ್ಸಿನಿಂದ ಸಹಕಾರ ನೀಡಬೇಕು.

ಯಾರೂ ಎಂದೂ ಓದದ ಪ್ರಚಾರಪತ್ರಿಕೆಗಳಿಗಾಗಿ ನಮ್ಮ ಸರಕಾರಗಳು ಹಣದ ಹೊಳೆಯನ್ನು ಹರಿಸುತ್ತಿರುತ್ತವೆ ಅದರಲ್ಲಿಯ ಸ್ವಲ್ಪಾಂಶವನ್ನಾದರೂ — ಜನತೆಗಾಗಿ ಕಾರ್ಯ ಮಾಡುವ — ಪತ್ರಿಕೆಗಳಿಗೆ, ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ, ಒದಗಿಸುತ್ತಿದ್ದರೆ, ಜನತೆಯ ಬುದ್ಧಿ-ಮನಸ್ಸು-ಹೃದಯಗಳ ಬೆಳೆವಣಿಗೆಗೆ ಎಷ್ಟೋ ಅನುಕೂಲವಾದೀತು.

ಒಂದು ದುರ್ದೈವದ ಸಂಗತಿಯೆಂದರೆ, ಭಾರತದ ಮಿಕ್ಕ ರಾಜ್ಯಗಳಲ್ಲಿ ಸಾಹಿತ್ಯಿಕರಿಗೆ — ಸಂಸ್ಕೃತಿಭಕ್ತರಿಗೆ ಸರಕಾರದಿಂದ ದೊರೆಯುತ್ತಿರುವ ಸಹಾನುಭೂತಿ ಸಹಕಾರಗಳು ನಮ್ಮ ರಾಜ್ಯ ಸರಕಾರದಿಂದ ದೊರೆಯುತ್ತಿಲ್ಲ. ನಮ್ಮ ನಾಡಿನ ಧುರೀಣರಿಂದ ರಾಜಕಾರ್ಯವೊಂದನ್ನುಳಿದು ಮಿಕ್ಕ ಯಾವ ವಿಷಯದಲ್ಲಿಯೂ ಆಸಕ್ತಿಯೇ ಇದ್ದಂತಿಲ್ಲ. ಆದರೆ ಸಮಾಜದ ಸುಖ-ಶಾಂತಿಗಳು ಕೇವಲ ರಾಜಕೀಯ ಕಾಯಿದೆ-ಕಾನೂನುಗಳ ಮೇಲೆ ಅವಲಂಬಿಸಿರದೆ, ಜನತೆಯ ಮನಸ್ಸು-ಹೃದಯಗಳ ಮೇಲೆಯೆ ಹೆಚ್ಚು ಅವಲಂಬಿಸಿವೆಯೆಂಬುದನ್ನು, ನಮ್ಮ ರಾಜಕೀಯ ಸೂತ್ರಧಾರಿಗಳೂ ಮುಂದಾಳುಗಳೂ ಮರೆಯು ನಡೆಯುಲಾಗದು.

ಧನ್ವಂತರೀ ಮಂದಿರ

(ಒಂದು ಸಣ್ಣಕತೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ.

ಜೀನಕೊಡವೆಂದು ನಂದಿ ಹೋದರೆ, ಕುಡಿದು ನೋಡಿದಾಗ ಕಾಲಕೂಟದ ಪರಿಣಾಮವನ್ನು ಒದವಿಸಿತು. ಪಾಪ, ಹುಟ್ಟುವ ಮಕ್ಕಳು ಬದುಕಬೇಕೆಂದು ವಿಷಧಿಗಾಗಿ ಹೋದರೆ, ಧನ್ವಂತರಿ ಸರಳೆಯ ಬದುಕಿಗೂ ಸಂಚಕಾರ ಕೊಟ್ಟ.

ದೀಪಾವಳಿಯ ಹಬ್ಬದ ದಿನ ಪ್ರತಿಭಳ ತಂಗಿ, ತಂಗಿಯ ಗಂಡ ಇಬ್ಬರನ್ನೂ ಹಸೆಯ ಮೇಲೆ ಕೂರಿಸಿ ಅಕ್ಷವೀಳ್ಯ ಮಾಡಬೇಕಾಗಿತ್ತು.

"ಸಂಜೆಗೆ ಎಲ್ಲರನ್ನೂ ಕರೆದು ದೊಡ್ಡದಾಗಿ ಅರತಿ ಇಟ್ಟುಕೊಂಡರಾಯಿತು; ಈಗ್ಗೆ ನಿನ್ನ ಸ್ನೇಹಿತೆ ಸರಳಾನ ಕರೆದು ಬಾ. ಅಕೆಯೂ ಯಾವಾಗಲೂ ನಿನ್ನ ಕೇಳ್ತಾ ಇರ್ತಾಳೆ"—ಎಂದಳು ಪ್ರತಿಭಾಳ ತಾಯಿ.

ಸರಳಾ ಮದುವೆಯಾಗಿ ಅತ್ತೆಯ ಮನೆಗೆ ಬಂದು ಹತ್ತು ವರ್ಷ ಆಗಿತ್ತು. ಆಗಿನಿಂದಲೂ ಅವಳಿಗೂ ಪ್ರತಿಭಾಗೂ ತುಂಬಾ ಸ್ನೇಹ. ಪ್ರತಿಭಾ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದರೂ, ಅವರ ಸ್ನೇಹ ಕಡಮೆಯಾಗಿರಲಿಲ್ಲ. ಪ್ರತಿಭಳ ಪತಿ ಪೋಲೀಸ್ ಇಲಾಖೆಯಲ್ಲಿದ್ದ. ಅತನಿಗೆ ಅದೇ ಊರಿಗೆ ವರ್ಗವಾಗಿ ಎರಡು ತಿಂಗಳಾಗಿತ್ತು. ಮಾರ್ಕೆಟ್ ಬಳಿ ಮನೆ ಮಾಡಿದ್ದ. ಪ್ರತಿಭಾ ಆಗಾಗ ತಾಯಿ ಮನೆಗೆ ಬರುವಳು. ಹಾಗೆ ಬಂದಾಗಲೆಲ್ಲಾ ತಪ್ಪದೆ ಸರಳೆಯನ್ನೂ ಮಾತನಾಡಿಸಿಕೊಂಡು ಹೋಗುವಳು.

ಪ್ರತಿಭಾ ಹಬ್ಬದಿಂದ ಸರಳೆಯನ್ನು ಕರೆಯಲು ಹೋದಳು. ಸರಳೆಯ ಮನೆ ತುಂಬಾ ದೊಡ್ಡದು. ವಿಸ್ತಾರವಾದ ಅಂಗಳ. ಅಂಗಳವನ್ನೆಲ್ಲಾ ಸಾರಿಸಿ ಅದರ ತುಂಬಾ ಹಸೆ ಇಟ್ಟಿದ್ದಳು. ಪ್ರತಿಭಾ ಆ ಹಸೆಗಳನ್ನು ನೋಡುತ್ತ ಕ್ಷಣ ಹಾಗೆಯೇ ನಿಂತಳು.

ಒಳಗಿನಿಂದ ಯಾರೋ ರೇಗಿದ–ಕರ್ಕಶ ಶಬ್ದ ಕೇಳಿ ಪ್ರತಿಭಾ ಮೆಟ್ಟಿ ಬಿದ್ದಳು. ರೇಗುತ್ತಿದ್ದುದು ಸರಳೆಯ ಅತ್ತೆ—

"ಮಹಾರಾಯತಿ–ಯಾವ ಹೊತ್ತಿನಲ್ಲಿ ಕಾಲು ಹಾಕಿದಳೋ–ಇಲ್ಲದ ದರಿದ್ರ ಹತ್ತಿಬಿಡ್ತು! ಬೆಳಗಾಗೆದ್ದು ಇವಳ ಮುಖ ನೋಡಿದ ದಿನ, ಏನಾದರೂ ಅರಿಷ್ಟ ಕಾದಿರುತ್ತೆ. ಕಸಗುಡಿಸಿರುವ ಲಕ್ಷಣ ನೋಡಿದರೆ ಸಾಕು—ಮೂಲೆಯ ಕಸ ಮೂಲೇಲಿ. ನೆಲದ ಕಸ ನೆಲದಲ್ಲಿ."

'ಹಬ್ಬದ ದಿನ. ಬೆಳಗ್ಗೆ ಎದ್ದಕೂಡಲೆ ಮನಸ್ಸನ್ನು ಹುಳಿಹುಳಿ ಮಾಡಿಕೊಳ್ಳಬೇಕೇ? ಛೀ, ಸರಳೆ ಈ ನರಕದಲ್ಲಿ ಹೇಗೆ ಕಾಲ ನೂಕುತಿದ್ದಾಳೋ! ಸಂಜೆ ಬಂದು ಅವಳನ್ನು ಕಾಣುವುದು; ಈಗ ಹೋಗಿಬಿಡೋಣ' ಎಂದು ಪ್ರತಿಭಾ ಎರಡು ಹೆಜ್ಜೆ ಹಿಂದಿಟ್ಟಳು. ಆದರೆ ... ಸರಳೆ ಅವಳನ್ನು ನೋಡಿಬಿಟ್ಟಳು. ತನ್ನ ದುಗುಡ ಅಡಗಿಸಿಕೊಂಡು, ಪ್ರತಿಭಳನ್ನು ಒಳಕ್ಕೆ ಕರೆದಳು—

ಪ್ರತಿಭಾಗೆ ಸರಳೆಯ ನಿಸ್ತೇಜ ಮುಖ, ನಲುಗಿದ ಶರೀರ ಕಂಡು ವ್ಯಥೆಯಾಯಿತು. ಸಿರಿಯಿದ್ದ ಮಾತ್ರಕ್ಕೆ ಸುಖ ಸಿಕ್ಕೀತೆ? ಸರಳೆಯ ಪತಿ ಗಣ್ಯಾವರ್ತಕರು ಸರಳೆಗೆ ಹೊರಲಾರದಷ್ಟು ಒಡವೆ ಹೇರಿದ್ದರು. ಆದರೇನು? ಸರಳೆಗಾದ ನಾಲ್ಕು ಮಕ್ಕಳೂ ಹುಟ್ಟಿದೊಡನೆ ತೀರಿದುವು. ಈ ಮಕ್ಕಳ ಸಾವಿಗೆ ಸರಳೆಯ ಹೀನ ಅದೃಷ್ಟವೇ ಕಾರಣವೆಂದು ಅವಳ ಅತ್ತೆ ಆಕ್ಷೇಪಿಸಹತ್ತಿದಳು. ಸರಳೆಯ ಜೀವನವನ್ನು ಅದಷ್ಟು ದುಸ್ಸಹನೀಯ ಮಾಡಿದಳು. ಹುಣ್ಣಿನ ಮೇಲೆ ಬರೆ ಎಳೆದಂತಾಗಿ, ಹಡೆದೊಡಲ ದುಃಖ ಮತ್ತೂ ಹೆಚ್ಚಿತು. ಸರಳೆ ಅದೇಕೊರಗಿನಲ್ಲಿ ಸೊರಗಿದಳು. ಈಗ, ಸರಳೆ ಪುನಃ ಗರ್ಭಿಣಿ.

'ಕರುಬುರುಕಿ'ಯಾದ ಅವಳು, ಈ ಬಾರಿಯೂ ಮಗುವನ್ನು ತಿಂದುಕೊಳ್ಳುವಳೆಂದೂ, ಬೇರೆ ಹೆಣ್ಣು ತಂದು ಮಗನಿಗೆ ಮದುವೆ ಮಾಡುವುದಾಗಿಯೂ ಅವಳ ಅತ್ತೆಯು ಅಟಾಟೋಪ.

"ಎಕಿಷ್ಟು ನಲುಗಿದೀಯ ಸರಳಾ? ಬಯಕೇ ಸಂಕಟ ತುಂಬಾ ಹೆಚ್ಚು ಅಂತಾ ಕಾಣುತ್ತೆ" ಎಂದಾಗ, ಸರಳಾ ವ್ಯಸನದಿಂದ ನಿಡುಸುಯ್ದಳು.—

"ಏನು ಸಂಕಟವೋ ಏನೋ! ಪೂರ್ವಜನ್ಮದ ಪಾಪಕರ್ಮ ನನ್ನ ಕಾಡ್ತಾ ಇರುವಾಗ, ಯಾರೇನು ಮಾಡ್ತಾರೆ ಹೇಳು. ಬಂದ ಹುಟ್ಟು ಬಾಯ್ಗಿಲ್ಲ"

"ಯೋಚಿಸಬೇಡ, ಸರಳಾ! ಈ ಸಲ ಎಲ್ಲವೂ ಸರಿಯಾಗುತ್ತೆ!"

ಆದರೂ ಸರಳಾ ಗೆಲುವಾಗಲಿಲ್ಲ. ಭವಿಷ್ಯದಲ್ಲಿ ಅವಳಿಗೆ ನಂಬಿಕೆ, ಭರವಸೆಗಳಿರಲಿಲ್ಲ. ಸ್ವಲ್ಪ ಅನುಮಾನಿಸಿ:

"ನಾನೊಂದು ಮಾತು ಕೇಳ್ತೀನೆ. ಬೇಸರ ಮಾಡಿಕೋ ಬಾರದು, ಪ್ರತಿಭಾ!"

"ಬೇಸರ ಏಕೆ? ಕೇಳು, ಅಗತ್ಯವಾಗಿ ಕೇಳು"

"ಮೊನ್ನೆ ಪಕ್ಕದ ಮನೆ ಶಾರದಮ್ಮ ಹೇಳಿದರು—ಗರ್ಭ ದೋಷದಿಂದ ಹೀಗೆ ಆಗ್ತಾ ಇದೆ, ಯಾರಾದರೂ ನಾಟಿ (native) ಪಂಡಿತರಿಂದ ಔಷಧಿ ತೆಗೆದುಕೊಳ್ಳಿ—ಅಂದರು."

"ಇರಬಹುದು. ಸರಿಯಾದ ಡಾಕ್ಟರಿಗೆ ತೋರಿಸು. ಡಾಕ್ಟರ್ ಸಂಪತ್ ಆಯುರ್ವೇದಿಕ ಡಾಕ್ಟರ್; ಬೇಕಾದರೆ ಅವರಿಗೇ ತೋರಿಸು"

"ಶಾರದಮ್ಮ ಹೇಳಿದರು:—ಮಾರ್ಕೆಟ್ ಬಳಿ ಧನ್ವಂತರೀ ಮಂದಿರ—ಅನ್ನುವ ಔಷಧಾಯಲ ಇದೆಯಂತೆ; ಅಲ್ಲಿನ ಪಂಡಿತರು ತುಂಬಾ ಬುದ್ಧಿವಂತರು, ಅವರ ಕೈಲಿ ತೆಗೆದುಕೊಳ್ಳಿ—ಅಂದರು. ಶಾರದಮ್ಮನ ನಾದಿನಿಗೆ ಐದಾರು ಮಕ್ಕಳು ಹೋದಮೇಲೆ, ಅತನ ಕೈಲಿ ಔಷಧಿ ಕೊಡಿಸಿದರಂತೆ. ಈಗ ಎರಡು ಮೂರು ಮಕ್ಕಳು ಬದುಕಿಕೊಂಡಿವೆಯಂತೆ. ನೀನು ಅಲ್ಲೇ ಇದೀಯ ನಿನಗೆ ಆ ಪಂಡಿತರ ವಿಷಯ ತಿಳಿದಿರಬಹುದು.!"

ಪ್ರತಿಭಾ ಯೋಚಿಸಿದಳು. ಅವಳು ಆ ಬೋರ್ಡನ್ನು ನೋಡಿದ್ದಳು. ಆದರೆ ಆಸಕ್ತಿಯಿಂದ ವಿಚಾರಿಸಿರಲಿಲ್ಲ.

"ಮುಂದಿನ ಭಾನುವಾರ ಬರ್ತೀನೆ. ಆಗ ಎಲ್ಲಾ ಹೇಳ್ತೀನೆ ನಾನು ಈ ವರೆಗೂ ವಿಚಾರಿಸಿರಲಿಲ್ಲ."

"ಖಂಡಿತಾ ಮರೆಯಬೇಡಮ್ಮ. ಹೀಗೆ ಆಗಿ ಹೋಗಿ ಹೊಟ್ಟೆ ಉರಿಸುವುದಕ್ಕಿಂತ, ಅವು ಹುಟ್ಟದೇ ಇದ್ದರೆ ಎಷ್ಟೋ ಚೆನ್ನಾಗಿರೋದು. ನನ್ನ ಹಣೆಬರಹ ಹೀಗಿದೆ"—ಎಂದು ಕಣ್ಣೀರು ತುಂಬಿಕೊಂಡಳು.

"ಹುಟ್ಟು ಸಾವು ನಮ್ಮ ಕೈಲಿದೆಯೇನಮ್ಮ? ನೀನು ಸಮಾಧಾನಮಾಡಿಕೋ. ಈ ಸಾರಿ ಎಲ್ಲ ಒಳ್ಳೆಯದಾಗುತ್ತೆ."—ಎಂದು ಸಮಾಧಾನ ಮಾಡಿದಳು ಪ್ರತಿಭಾ.

ಪ್ರತಿಭಾ ಇನ್ನೊಂದು ದಿನ ಬಂದಾಗ ಪಂಡಿತರ ವಿಷಯವನ್ನೆಲ್ಲಾ ಹೇಳಿದಳು.

"ನಾನು ಆ ಪಂಡಿತನ ಸಂಗಡ ಮಾತನಾಡಿದೆ. ನಿನ್ನ ವಿಷಯ ಹೇಳಿದೆ. ಅತ ಔಷಧಿ ಕೊಡೋಕೆ ಒಪ್ಪಿಕೊಂಡರು. ಒಮ್ಮೆ ನಿನ್ನ ನೋಡಬೇಕಂತೆ. ಆಮೇಲೆ ಒಂದು ಮಂಡಲ ಔಷಧಿ ಕೊಡಬೇಕಂತೆ...ನನಗೇನೋ ಅತನ ನಡೆನುಡಿ ಇಷ್ಟವಾಗಲಿಲ್ಲ. ಅತನ ಅತಿವಿನಯ ಕಂಡು ಮಹಾಧೂರ್ತ–ಎಂದುಕೊಂಡೆ."

"ಅವರು ಹೇಗಿದ್ದರೆ ಏನಮ್ಮ? ಔಷಧಿ ಗುಣ ಕೊಟ್ಟರೆ ಸಾಕು. ದಯವಿಟ್ಟು ನಮ್ಮ ಅತ್ತೆಯ ಕಿವಿಗೆ ನೀನೇ ಈ ಸುದ್ದಿ ಹಾಕು. ನಾನಾಗಿ ಕೇಳೋಕೆ ಸಂಕೋಚವಾಗುತ್ತೆ."

ಪ್ರತಿಭಾ ಅವಳ ಅತ್ತೆಗೆ ವಿಷಯ ತಿಳಿಸಿದಳು.

"ಅಗತ್ಯವಾಗಿ ನಾಳೆಯೇ ಕರೆದುಕೊಂಡು ಹೋಗಿ ತೋರಿಸಮ್ಮ. ಶಾರದಮ್ಮ ಹೇಳಿದಾಗಿನಿಂದ ನಾನೂ ನಮ್ಮ ಹುಡುಗನಿಗೆ 'ಹೋಗಿ ವಿಚಾರಿಸಿಕೊಂಡು ಬಾ' ಅಂತಾ ಹೇಳ್ತಾ ಇದ್ದೆ; ಅವನು ಕಿವಿಯ ಮೇಲೆ ಹಾಕಿಕೊಂಡಿರಲಿಲ್ಲ. ಇವಳ ಹಣೆಬರಹದಲ್ಲಿ ತೌರುಮನೆಯ ಸುಖ ಬರೆದಿಲ್ಲ. ತಂದೆ ತಾಯೀನ ತಿಂದುಕೊಂಡೇ ನಮ್ಮನೆಗೆ ಸೇರಿದಾಳೆ. ಈ ಮನೆಯೂ ಉದ್ಧಾರವಾಗಲಿಲ್ಲ..... ಕೈಲಾದುದನ್ನೆಲ್ಲ ನಾವೂ ಮಾಡಿನೋಡೋದು; ಆಮೇಲೆ ದೇರೆ ಲಗ್ನ ಮಾಡಿಬಿಡೋದು—ಅಂದು ಕೊಂಡಿದೀನೆ."

ಎಂದು ಎದೆಯ ಕಹಿಯನ್ನು ಕಳ್ಳುತ್ತಲೇ ಒಪ್ಪಿಗೆಕೊಟ್ಟರು. ಸರಳಾ ತಲೆ ತಗ್ಗಿಸಿದಳು.

"ಅಪ್ಪಚ್ಚು ದಿನ ಗ್ರಹಚಾರ. ಏನು ಮಾತಲು ಸಾಧ್ಯ? ಈ ಸಲ ಎಲ್ಲವೂ ಸುಖವಾಗುತ್ತೆ!" ಎಂದು ಸಮಾಧಾನ ಹೇಳಿದಳು, ಪ್ರತಿಭಾ.

ಮರುದಿನವೇ ಪ್ರತಿಭಾ ಸರಳೆಯನ್ನು ಪಂಡಿತರ ಬಳಿಗೆ ಕರೆದೊಯ್ದಳು....ಪಂಡಿತ ಶಿವಮೂರ್ತಿ, ನೋಡಲು ಸ್ವಲ್ಪ ಭಯಂಕರ ವ್ಯಕ್ತಿಯೇ ಆ ದಪ್ಪವಿಾಸೆ, ಕೆಂಗಣ್ಣು ಮುಖಕ್ಕೆ ರೌದ್ರಕಳೆ ಕೊಟ್ಟಿದ್ದುವು. ಆದರೆ ಅತನ ಅತಿವಿನಯ, ಮೃದುಧ್ವನಿ ಸ್ವಲ್ಪ ಧೈರ್ಯ ಕೊಡುತ್ತಿತ್ತು.

ಸರಳೆ ಶ್ರೀಮಂತೆ ಎಂಬುದು ಅವಳನ್ನು ನೋಡಿದರೇ ತಿಳಿಯುತ್ತಿತ್ತು. ಅವಳಿಟ್ಟ ವಜ್ರದೋಲೆ, ವಜ್ರದ ಮೂಗುತಿ, ಏಳು ಎಳೆಯ ಚಿನ್ನದ ಸರ, ಕೈಯಲ್ಲಿದ್ದ ಐದಾರು ಜೊತೆ ಚಿನ್ನದ್ದ ಬಳೆಗಳು ಚಿನ್ನದ ಡಾಬು.....

ಶಿವಮೂರ್ತಿ ಔಷಧಿ ತರಲು ಒಳಕ್ಕೆ ಹೋದರು. ಪ್ರತಿಭಾ ಸರಳೆಯನ್ನು ಅಡಿಯಿಂದ ಮುಡಿಯವರೆಗೂ ನೋಡಿದಳು.

"ನಿನ್ನ ಪಕ್ಕದಲ್ಲಿ ಕೂರುವುದಕ್ಕೇ ನನಗೆ ನಾಚಿಕೆಯಾಗುತ್ತಮ್ಮ.....ಸ್ವರ್ಣಪುತ್ಥಲಿಯ ಪಕ್ಕದಲ್ಲಿ ಚಂದನದ ಗೊಂಬೇನ ಕೂರಿಸಿದಂತೆ ಕಾಣುತ್ತೆ!"

"ನನಗೂ ಈ ಹೊರೆ ಹೇರಿಕೊಳ್ಳೋಕೆ ಇಷ್ಟವಿಲ್ಲಮ್ಮ. ನೀವು ತುಂಬಾ ಬಂಗಾರ ಹೊತ್ತಿರಿ, ಹೆಮ್ಮೆ ಹೆಚ್ಚುವುದೇ. ಹೊರತು ಹರ್ಷ ಹೆಚ್ಚುವುದಿಲ್ಲ. ನಮ್ಮ ಅತ್ತೆಗೆ ತಮ್ಮ ದೊಡ್ಡಸ್ತಿಕೆ ತೋರಿಸಿಕೊಳ್ಳೋಕೆ ಬಹಳ ಇಷ್ಟ. ನಾನು ಬೇಡ ಅಂದರೆ ತಪ್ಪಾಗುತ್ತೆ. ಅವರ ಸಂತೋಷಕ್ಕಾಗಿ ಇದೆಲ್ಲಾ ಧರಿಸಬೇಕಾಗಿದೆ. ನನಗಿಲ್ಲದ ಎರಡು ಒಡವೆ ಇವೆ ನಿನಗೆ—ಮನಸ್ಸಿಗೆ ನೆಮ್ಮದಿ, ಉತ್ಸಾಹ. ನನಗಿಂತ ನೀನೆ ಸಿರಿವಂತೆ, ಪುಣ್ಯವಂತೆ—ನನ್ನ ಕಷ್ಟ, ದುಃಖ ನಿನಗೆ ಎಲ್ಲಿದೇ ಇದೆಯಲ್ಲಾ!"

—ಎಂದು ಉಸಿರ್ಗರೆದಳು.

"ನನ್ನ ಒಡವೆಗಳು ಒಡವೆಯೇ ಒಡವೆಗಳು. ಅವು ಎಂದಾದರೂ ನಿನ್ನವಾಗಬಹುದು. ಆದರೆ ನಿನ್ನೀ ಒಡವೆಗಳು ನನ್ನವಾಗಬಹುದೇ?"

"ನಿನ್ನ ಒಡವೆಗಳು ನನ್ನವಾದರೆ ಸಾಕಮ್ಮ. ಈ ಒಡವೆಗಳು ಇದ್ದರೆ ಅಪಾಯ, ಹೋದರೆ ಚಂತೆ. ನನ್ನ ಯಜಮಾನ್ರು ಬಳ್ಳಾರಿಗೆ

ಯಾವುದೋ ನೆಪವೆಗೆ ಕರೆದುಕೊಂಡು ಹೋಗುವಾಗ, ಎಲ್ಲಾ ಒಡವೆಗಳನ್ನೂ ಮನೆಯಲ್ಲೇ ತೆಗೆದಿಡಿಸಿದ್ದರು "

" ಪರವಾಗಿಲ್ಲ, ಹಾಗಾದರೆ! ನಿನ್ನ ಗಂಡನಿಗಿಂತ ನಾನೇ ಧೈರ್ಯವಂತೆ. ನಿನ್ನ ಮೇಲ್ವಿಚಾರಣೇನ — ನಗಸಹಿತ-ವಹಿಸಿಕೊಂಡಿದೇನೆ. "

— ಎಂದು ನಕ್ಕಳು, ಪ್ರತಿಭಾ.

ಶಿವಮೂರ್ತಿ ಯಾವುದೋ ಚೂರ್ಣ ಕೊಟ್ಟು, ಮರುದಿನ ತಾನೇ ಒಂದು ಔಷಧ ಕೊಡುವುದಾಗಿ ಹೇಳಿಕಳುಹಿದರು

ಶಿವಮೂರ್ತಿ ಮರುದಿನವೇ ಸರಳೆಯ ಮನೆಗೆ ಹೋಗಿ ಪರಿಚಯ ಮಾಡಿಕೊಂಡರು. ಸರಳೆಯ ಮೇಲಿನ ಅರಿವ್ಯ ಹೋಗುವಂತೆ ಎಳ್ಳದಗಿಡದ ಪೂಜೆಯನ್ನು ತಾವು ನಲವತ್ತು ದಿನ ಮಾಡುವುದಾಗಿ ಹೇಳಿ, ಅದಕ್ಕಾಗಿ ನೂರು ರೂಪಾಯಿ ವಸೂಲ್ ಮಾಡಿಕೊಂಡರು

ಆತ ಸರಳೆಯ ಅತ್ತೆಯ ಉದಾರತೆಯನ್ನು ಬಹುವಾಗಿ ಹೊಗಳಿದರು. ಸರಳೆ ಈಗಿನ ಕಾಲದ ಬೆತಗಿಗೆ ಮಾರುಹೋಗದೆ ಮನೆಯು ಮಹಾಲಕ್ಷ್ಮಿಯಂತೆ ಸರ್ವಾಲಂಕಾರ ಭೂಷಿತೆಯಾಗಿರುವುದನ್ನು ಕೊಂಡಾಡಿದರು.

ಸರಳೆಯು ಅತ್ತೆಗೆ ಶಿವಮೂರ್ತಿಯ ಬಗ್ಗೆ ಹುಂದಾ ಸದಭಿಪ್ರಾಯ ಮೂಡಿತು.

ಪ್ರತಿಭಾ ಮತ್ತೆ ಸರಳೆಯನ್ನು ನೋಡಲು ಹೋಗಲಾಗಲಿಲ್ಲ. ಆದರೆ ಸರಳೆ, ಅವಳ ಅತ್ತೆ, ಪಂಡಿತನ ಹಸ್ತಗುಣದಲ್ಲಿ ಪೂರ್ಣ ನಂಬಿಕೆ ಇಟ್ಟು—ನಿಶ್ಚಿಂತರಾಗಿರುವರೆಂದೂ, ಸರಳೆ ಅಷ್ಟಾಗಿ ಕಟಕಿ ಮಾತುಗಳನ್ನು ಕೇಳಬೇಕಾಗಿಲ್ಲವೆಂದೂ ತಿಳಿದು ಸಂತೋಷಿಸಿದಳು

ಸಂಕ್ರಾಂತಿ ಹಬ್ಬದಲ್ಲಿ, ಪ್ರತಿಭಾ ತೌರುಮನೆಗೆ. ಹಾಗೂ ಸರಳೆಯು ಮನೆಗೆ ಎಳ್ಳು ಬೀರಿವಳು; ಒಂದೆರಡು ದಿನಗಳಲ್ಲಿಯೇ ನಾತೂ ಅಲ್ಲಿಗೆ ಬಂದು ಎಳ್ಳು ಬೀರುವುದಾಗಿ ಸರಳಾ ತಿಳಿಸಿದಳು.

× × × ×

ಪ್ರತಿಭಾಳ ಪತಿ ಶ್ಯಾಮಣ್ಣ, ಚಿಂತಾಕ್ರಾಂತನಾಗಿ ಗಂಭೀರವಾಗಿ ಕೂತಿದ್ದ.

" ಏಕ್ರೀ ಇಷ್ಟು ಯೋಚನೆ? ಲೋಕದ ದುಃಖಕ್ಕೆಲ್ಲಾ ನಾನೇ ಏಕೈಕ ಗುತ್ತಿಗೆದಾರ—ಎನ್ನುವಂತೆ ಇದೀರಲ್ಲಾ! "

—ಎಂದಳು ಗೆಲವಿನಿಂದ.

" ಪೋಲೀಸ್ ಕೆಲಸ ನಿನ್ನ ಮನೆಗೆಲಸದಂತೆ ಹಗುರ—ಎಂದು. ಕೊಂಡಿದಿಯಾ? ನೋಡು, ಈ ಎರಡು ತಿಂಗಳಲ್ಲಿ ಅರೇಳು ಮಂದಿ ಪತ್ತೆ ಇಲ್ಲವಾಗಿದಾರೆ— ಸಾವುಕಾರ್ ಸಿದ್ದಪ್ಪನವರ ಹೆಂಡತಿ ಎರಡು ತಿಂಗಳಿಂದ ಪತ್ತೆಯಿಲ್ಲ. ಹದಿನೈದು ದಿನಗಳ ಹಿಂದೆ ಜವಳಿ ಅಂಗಡಿ ಭರಮಣ್ಣನವರ ಹೆಂಡತಿ ದೇವಸ್ಥಾನಕ್ಕೆ ಹೋದವರು ಹಾಗೆಯೇ ನಾಪತ್ತೆ; ರಾಮಯ್ಯನವರ ತಂಗಿ—ಮನೆ ತಪ್ಪಿದ ಕುಮುದಮ್ಮ— ನೊನ್ನೆಯಿಂದ ಪತ್ತೆಯಿಲ್ಲವಂತೆ! ನಮ್ಮ ಬಡಾವಣೆಯಲ್ಲೇ ಮತ್ತೆ ಮತ್ತೆ ಹೀಗಾಗಬೇಕಾದರೆ? "



" ಬಿಡಿ, ಆ ಕುಮುದಮ್ಮ ಸಂಗೀತದ ಮೇಷ್ಟ್ರ ಸಂಗಡ ಓಡಿ ಹೋಗಿರಬೇಕು! "

" ಸಿದ್ದಪ್ಪನವರ ಹೆಂಡತಿ? "

" ಅಕೆ ಅತ್ತೆ—ಮಾವಂದಿರ ಕಾಟ ಸಹಿಸಲಾರದೆ ತಲೆತಪ್ಪಿಸಿಗೊಂಡಿರಬೇಕು "

" ಭರಮಣ್ಣನ ಹೆಂಡತಿ? "

" ಸ...ರಿ! ಆಗಾಗ್ಗೆ ಹೊಟ್ಟೆನೋವು ಬರುತ್ತೆ ಅಂತಾ ಗೋಳಾಡ್ತೋರಂತೆ; ಎಲ್ಲಿ ಬಾವಿ, ಕೆರೆ ಕುಡುಕಿ ಹಾರಿಕೊಂಡಿದಾಳೋ! ಇಲ್ಲದ ಸಂಶಯ ಪಟ್ಟು ಚಿಂತೆಮಾಡ್ತೀರಿ! ...."

" ಬೇಷ್. ನಿನ್ನಂತಹ ಮೇಧಾವಿ ಇದ್ದರೆ ನಮ್ಮ ಖಾತೆಯು ಕೆಲಸ ಅರ್ಧ ಕಡಿಮೆಯಾಗೋದು. ಕಣ್ಣಿಂದ ಕಂಡವಳಿಗಿಂತ ಹೆಚ್ಚಾಗಿ ಊಹೆಯನ್ನೇ ಸತ್ಯವೆಂದು ಸಾಧಿಸಿ ಬಿಡ್ತೀಯಲ್ಲಾ! "

—ಎಂದು ಹಾಸ್ಯಮಾಡಿದ.

× × × ×

ಪ್ರತಿಭಾಳ ಮನೆ ಸ್ವಲ್ಪ ಎತ್ತರದ ಸ್ಥಳದಲ್ಲಿತ್ತು, ಕೋಣೆಯ ಕಿಟಕಿಯು ಬಳಿ ನಿಂತರೆ, ಆ ರಸ್ತೆಯು ತುದಿಯಲ್ಲಿದ್ದ ಧನ್ವಂತರೀ ಮಂದಿರ ಕಾಣುತ್ತಿತ್ತು.

ಸರಳೆ ಬರಬಹುದೆಂಬ ನಿರೀಕ್ಷೆಯಿಂದ, ಪ್ರತಿಭಾ ಆಗಾಗ್ಗೆ ಕಿಟಕಿಯಿಂದ ನೋಡುತ್ತಾ, ಲಘುಸಾಹಿತ್ಯವನ್ನು ಓದುತ್ತ ಅಲ್ಲೇ ಕುರ್ಚಿಯಲ್ಲಿ ಕೂತಿದ್ದಳು.

ನೋಡುತ್ತಿರುವಂತೆಯೇ ಹಸಿರು ವೈಸೂರ್ ಸಿಲ್ಕ್ ಉಟ್ಟ ಹೆಂಗುಸು— ಸರಳೆಯದೇ ನಿಲುವು, ಅದೇ ನಡಿಗೆ— ಧನ್ವಂತರೀ ಮಂದಿರಕ್ಕೆ ಹೋದಳು.

ನಿಶ್ಚಯವಾಗಿ ಸರಳೆಯೇ-ಅಲ್ಲಿಗೆ ಹೋಗಿ ಅನಂತರ ಇಲ್ಲಿಗೆ ಬರುವಳೇನೋ, ಕಾಪಿಯನ್ನಾದರೂ ಮಾತುವ—ಎಂದು ಪುಸ್ತಕ ಮುಚ್ಚಿಟ್ಟು ಮೇಲೆದ್ದಳು.

ಕಾಪಿಮಾಡಿಟ್ಟರೂ ಸರಳೆ ಬರಲಿಲ್ಲ. ಧನ್ವಂತರೀ ಮಂದಿರದ ಬಾಗಿಲು ಮುಚ್ಚಿತ್ತು. ಕಾದು ಕಾದು ಪ್ರತಿಭಾಗೆ ಬೇಸರವಾಯಿತು.

ಸರಳೆ ಹಾಗೆಯೇ ಹಿಂದಕ್ಕೆ ಹೋಗಿರಬಹುದೇ? ಅಥವಾ ಪಂಡಿತರ ಮನೆಯಲ್ಲೇ ಇರಬಹುದೇ?

ಈ ತೊಳಲಾಟವೇಕೆ?— ಒಂದುಹೆಜ್ಜೆ ಹೋಗಿ ಕೇಳಿಯೇ ಬಿಡುವ— ಎಂದುಕೊಂಡು, ಬಂದು ಧನ್ವಂತರೀ ಮಂದಿರದ ಬಾಗಿಲನ್ನು ಬಡಿದಳು.

ಸುಮಾರು ನಾಲ್ಕೈದು ನಿಮಿಷಗಳನಂತರದ ಪಂಡಿತರೇ ಬಂದು ಬಾಗಿಲನ್ನು ತೆರೆದರು.

ಅತನ ಕೈಯೆಲ್ಲಾ ಮಣ್ಣಾಗಿತ್ತು.

"ಓ, ನೀವಾ? ಏನು ಬೇಕಾಗಿತ್ತು?"

—ಎಂದು ಹಲ್ಲು ಕಾಣುವಂತೆ ನಕ್ಕ.

"ಈಗ ಸ್ವಲ್ಪ ಹೊತ್ತಿನ ಹಿಂದೆ ಸರಳಾ ನಿಮ್ಮ ಮನೇಗೆ ಬರಲಿಲ್ವೇ?"

"ಇಲ್ಲವಲ್ಲಾ....ಯಾರೂ ಬರಲಿಲ್ಲವಲ್ಲಾ...."

ಪ್ರತಿಭಾ ಕ್ಷಣ ಅಪ್ರತಿಭಳಾದಳು.

"ಈಗ ಅರ್ಧಗಂಟೆಯ ಹಿಂದೆ ಒಬ್ಬಾಕೆ ಬರಲಿಲ್ವೇ? ನಾನೇ ಕಿಟಕಿಯಲ್ಲಿ ನೋಡಿದೇನೆ."

"ಓ, ನೀನೇ ನೋಡಿದಿರಾ? ನಾನು ಹಿಂದೆ ಗಿಡ ನೆಡ್ತಾ ಇದ್ದೆ, ರಂಗ ಇಲ್ಲಿದ್ದ. ವಿಚಾರಿಸ್ತೇನೆ....ಲೋ, ರಂಗಾ...."

ಒಂದೆರಡು ನಿಮಿಷಗಳನಂತರ ಜವಾನ ರಂಗ ಬಂದ.

"ಸ್ವಲ್ಪ ಹೊತ್ತಿಗೆ ಮುಂಚೆ, ಯಾರಾದರೂ ಹೆಂಗಸರು ಬಂದಿದ್ದರೇನೋ?"

"ಹೂಂ, ಸ್ವಾಮಿ, ಎಳ್ಳುಬೀರಿ ಆಗಲೇ ಹೋದರಲ್ಲಾ...."

"ಯಾವ ಕಡೆಗೆ ಹೋದರು?"

—ಕುತೂಹಲದಿಂದ ಕೇಳಿದಳು ಪ್ರತಿಭಾ

"ನಾ ಅದನ್ನು ನೋಡಲಿಲ್ಲ, ತಾಯಿ!"

ಪ್ರತಿಭಾ ವಿಚ್ಛಾಗಿ ಮನೆಗೆ ಬಂದಳು.

ಅವಳು ಸರಳೆ ಹೌದೋ ಅಲ್ಲವೋ? ಸರಳೆಯಾದರೆ ತಮ್ಮ ಮನೆಗೇಕೆ ಬರಲಿಲ್ಲ? ತನ್ನ ಮೇಲೆ ಅಸಮಾಧಾನವೋ? ಅಥವಾ ಗಂಡನ ಸಂಗಡ ಬಂದಿದ್ದು ಅತ ಎಲ್ಲಾದರೂ ನಿಂತು ಕಾಯುತ್ತಿದ್ದರೋ? ಆದರೂ ಎಳ್ಳು ಬೀರಲಾದರೂ ತಮ್ಮ ಮನೆಗೆ ಬರಬೇಕಾಗಿತ್ತಲ್ಲಾ?

—ಪ್ರತಿಭಾಗೆ ಒಂದೂ ಬಗೆ ಹರಿಯಲಿಲ್ಲ

ರಾತ್ರಿ ಏಳುಗಂಟೆಗೆ ಶ್ಯಾಮಣ್ಣ ಬಂದ. ಅವಳ ಬಗೆ ಕದಡಿರುವುದನ್ನು ಕಂಡು:

"ಈ ದಿನ ದೇವಿಯವರಿಗೂ ಚಿಂತೆ. ಹೆಗಲೇರಿದೆಯಲ್ಲಾ! ಕಾರಣ?"

—ಎಂದು ಅಣಕವಾಡಿದ.

"ಸರಳಾ ಬರಲಿಲ್ಲ ನೋಡಿ;—ಅಲ್ಲಿಗೆ ಬಂದು ಹಾಗೆಯೇ ಹೋಗಿಬಿಟ್ಟಳೇನೋ!'

ಸುದಾಮ ಚರಿತಂ

ಶ್ರೀ. ಸಾಲಿ ರಾಮಚಂದ್ರರಾಯ ವಿರಚಿತಂ

ಸಂಸ್ಕೃತ ನೂತನಕಾವ್ಯ — ಕ್ರಯ ೧ ರೂಪಾಯ

"ತುಂಬ ಅಚ್ಚರ್ಯವಾಯಿತು ಮನಮೆಚ್ಚಿದೆ. ಬಹಳ ಚೆನ್ನಾಗಿದೆ. ಬಹಳ ಚೆಲೋದಾಗಿದೆ. ತುಂಬ ಸರಲವೂ ಸರಸವೂ ಆಗಿದೆ, ಸಂಸ್ಕೃತ ಕಾವ್ಯಸಾಹಿತ್ಯದ ಉದ್ದಾಮ ಕವಿಗಳನ್ನು ಪದೇ ಪದೇ ನೆನಪಿಸುತ್ತಲೂ ಇದೆ. ಹಳಗಾಲದ ಸಂಸ್ಕೃತ ಸಾಹಿತ್ಯವನದಿಂದ ಎತ್ತಿಕೊಂಡು ಇಂದಿನ ಸಾಹಿತ್ಯವನದಲ್ಲಿ ಕಸಿ ಮಾಡಿದ ಬಳ್ಳಿಯು ಹಣ್ಣಿನಂತಿದೆ. ಕಸಿಯ ಹಣ್ಣು ರೂಪದಲ್ಲೂ ರುಚಿಯಲ್ಲೂ ಕಾಯಿಹಣ್ಣಿನ್ನು ಬಿಟ್ಟೆರಲಾರದಷ್ಟೆ"

ರಾಷ್ಟ್ರಕವಿ — ಶ್ರೀ. ಎಂ. ಗೋವಿಂದ ಪೈ

ಪ್ರತಿಗಳಿಗಾಗಿ:

ಆಳಳವಾಡಿ ಬುಕ್‌ಡಿಪೊ, ವಿಜಯರೋಡ್

ಧಾರವಾಡ.

ಸಂಸ್ಕೃತಿ ಪ್ರಕಾಶನ, ಮಾಳಮಡ್ಡಿ

—ಎಂದು, ಅಲ್ಲಿ ಶಿವಮೂರ್ತಿಯೊಡನೆ ಆಡಿದ ಮಾತನ್ನೆಲ್ಲಾ ಹೇಳಿದಳು

"ಅಥವಾ ನಿನ್ನ ಗೆಳತಿಯನ್ನೂ 'Missing list'ಗೆ ಸೇರಿಸಬೇಕಾಗಿದೆಯೋ?"

—ಎಂದು ನಗೆಯಾಡಿದ.

"ಛೀ, ಸುಮ್ಮನಿರಿ! ಅವಳು ಅಂತಹವಳಲ್ಲ. ಅಲ್ಲದೆ ಗರ್ಭಿಣಿ"

ಇಬ್ಬರೂ ಊಟಮುಗಿಸಿ, ಆರಾಮವಾಗಿ ಮಾತನಾಡುತ್ತ ಕೂತರು. ಯಾರೋ ಬಾಗಿಲು ತಟ್ಟಿದರು. ಪ್ರತಿಭಾ ಹೋಗಿ ಬಾಗಿಲುತೆಗೆದು ನೋಡುತ್ತಾಳೆ. ಸರಳೆಯು ಪತಿ!

"ಸರಳಾ ನಿಮ್ಮ ಮನೇಗೆ ಬಂದಳೆ? ಇಷ್ಟು ಹೊತ್ತಾದರೂ ಇನ್ನೂ ಮನೆಗೆ ಬಂದಿಲ್ಲ ನಾಲ್ಕುಗಂಟೇಲಿ ಎಳ್ಳುಬೀರಲು ಇಲ್ಲಿಗೆ ಹೊರಟಳಂತೆ."

"ಏನು, ಇಲ್ಲಿಗೇ ಬಂದಳಂತೆ? ಒಬ್ಬಳೇ ಹೊರಟಿದ್ದಳೇ?"

"ಹೌದು ತಾಯಿ, ತಿಳಿದ ಸ್ಥಳ....ಒಬ್ಬಳೇ ಹೋಗಿಬರ್ತೇನೆ ಅಂದಳಂತೆ. ಇಷ್ಟು ಕತ್ತಲಾದರೂ ಬರಲಿಲ್ಲವಲ್ಲಾ ಅಂತ ನಾನೇ ಹುಡುಕಿಕೊಂಡು ಬಂದೆ."

"ಇಲ್ಲಾರೀ, ಇಲ್ಲಿಗೆ ಬಂದೇ ಇಲ್ಲ. ನಾನೂ ಅದೇ ಯೋಚನೇಲಿದ್ದೆ—ಬರ್ತೇನೆ ಅಂದವಳು ಬರಲಿಲ್ಲವಲ್ಲಾ ಎಂದು ಕೂತ್ಕೊಳ್ಳಿ."

ಪ್ರತಿಭಾ ಸತ್ತ್ವ ಉಡುಗಿದವಳಂತೆ ಶಾಮಣ್ಣನ ಮುಂದಿನ ಕುರ್ಚಿಯಲ್ಲಿ ಕೂತಳು.

"ಈಗೇನು ಮಾಡುವುದೂ ಅಂದ್ರೆ? ಸರಳೆಯು ಪತಿ ಬಂದಿದಾರೆ! ನಿಮ್ಮ ಮಾತಿನಂತೆ ಸರಳೆಯೂ ಆ 'Missing'ಎಂದು ಕಾಣ್ತಾ ಇದೆ!"

ಶಾಮಣ್ಣನ ಹುಬ್ಬುಗಳು ಬಿಗಿದುಕೊಂಡುವು. ಮುಖ ಗಂಭೀರವಾಯಿತು. ಒಂದೆರಡು ನಿಮಿಷ ಯೋಚಿಸಿದ.

"ನೀವು ಸ್ವಲ್ಪ ವಿಶ್ರಮಿಸಿಕೊಳ್ಳಿ. ನಾನು ಅರ್ಜೆಂಟಾಗಿ ಹೋಗಬೇಕಾಗಿದೆ—ಬೇಕಾದರೆ ಪೋಲೀಸ್ ಕಂಪ್ಲೇಂಟ್ ಕೊಡಿ. ಮುಂದೆ ನೋಡೋಣಂತೆ"—ಎಂದು ಸರಳೆಯ ಪತಿಗೆ ಹೇಳಿ ಹೊರಟ.

ಶಾಮಣ್ಣ ಪೋಲೀಸ್‌ಸ್ಟೇಷನ್‌ನಿಂದ ಸಬ್ಬಂದಿ ಕರೆತಂದು ಮಂದಿರವನ್ನು ಮುತ್ತಿದ. ವಿರೋಧಿಸುತ್ತಿದ್ದ ಶಿವಮೂರ್ತಿಯನ್ನು ಬಂಧಿಸಿ, ಎಲ್ಲೆಡೆಯಲ್ಲೂ ಶೋಧಿಸುವಂತೆ ಆಜ್ಞೆಯಿತ್ತ.

ಶಾಮಣ್ಣ ಮನೆಯ ಹಿಂದಿದ್ದ ಹಿತ್ತಲನ್ನು ಈಕ್ಷಿಸಿದ. ಆ ದಿನ ಅಗೆದ ರಾಶಿ ಮಾಡಿದ ಮಣ್ಣು ಒಂದೆಡೆಯಿತ್ತು. ಹೊಸದಾಗಿ ಬದನೆಸಸಿಗಳನ್ನು ನೆಟ್ಟು ಪಾತಿಗಳಿದ್ದುವು.

ಮನೆಯನ್ನೆಲ್ಲಾ ಶೋಧಿಸಿ ಏನೂ ಕುರುಹು ಸಿಕ್ಕದೆಂದು ಹೊರಬಂದ ಪೋಲೀಸರಿಗೆ ಪಾತಿಗಳನ್ನು ಅಗೆಯುವಂತೆ ಹೇಳಿದ.

ಅವನ ಆಜ್ಞೆ ಕೇಳಿ, ಮನದಲ್ಲೇ ನಕ್ಕು, ಅಗೆದರು. ಯಾವುದೋ ಜಡವಸ್ತು ಸಿಕ್ಕಿತು. ಉತ್ಸಾಹದಿಂದ ಪೂರ್ತ ಅಗೆದು ತೆಗೆದಾಗ, ಹೆಂಗುಸಿನ ಶವವೆಂದು ತಿಳಿಯಿತು.

ಸರಳೆಯದೇ ಶವವೆಂದು ಗುರುತಾಯಿತು.

ಶಿವಮೂರ್ತಿ ಅದು ತನ್ನ ಕೃತ್ಯವೆಂದೇ ಒಪ್ಪಿಕೊಂಡ. ಬೀರುವಿನಲ್ಲಿ ಬಚ್ಚಿಟ್ಟಿದ್ದ ಸರಳೆಯ ಹಸಿರು ಸಿಲ್ಕು ಸೀರೆ, ಒಡವೆಗಳು ಎಲ್ಲವನ್ನೂ ತೆಗೆದುಕೊಟ್ಟ.

ಶಿವಮೂರ್ತಿ ವೈದ್ಯನೇ ಅಲ್ಲ—ಪ್ರಸಿದ್ಧ ಕೇಡಿ. ಅರೇಳು ವರ್ಷಗಳಿಂದ ತಲೆಮರೆಸಿಕೊಂಡಿದ್ದ. ವೈದ್ಯನ ಸೋಗು ಹಾಕಿಕೊಂಡು ಸುಲಿಗೆ ಮಾಡುತ್ತಿದ್ದ.

ಶಿವಮೂರ್ತಿಯ ಕಪ್ಪೊಪ್ಪುಗೆ ಭಯಂಕರವಾಗಿತ್ತು. ಮೈ ನಡುಗಿಸುವಂತಿತ್ತು:

"ಇದು ನನ್ನ ಹನ್ನೊಂದನೇ ಕೊಲೆ. ಹತ್ತನೆಯದಕ್ಕೆ ನಾನು ನಿಲ್ಲಿಸಬೇಕೆಂದುಕೊಂಡಿದ್ದೆ. ಹತ್ತು ಸರಿಹೆಜ್ಜೆ ಇಟ್ಟೆನೆಂಬ ಹುಮ್ಮಸ್ಸಿನಲ್ಲಿ, ಮತ್ತೆ ಹೆಜ್ಜೆ ಇಡಹೋಗಿ ಎಡವಿದೆ. ಅದೇ ನಾ ಮಾಡಿದ ತಪ್ಪು.

ವೈದ್ಯವಿದ್ಯೆಗಿಂತಲೂ ನನ್ನ ಮಂತ್ರವಿದ್ಯೆ ಕಂಡು ಜನ ಮರುಳಾಗಿದ್ದರು. ನನ್ನ ಪೂಜೆ-ಪುನಸ್ಕಾರಗಳ ಗಾಳಕ್ಕೆ ಭಾವುಕ ಹೆಣ್ಮಕ್ಕಳು ಬೇಗ ಮರುಳಾಗಿ ಬಲೆಗೆ ಬೀಳುತ್ತಿದ್ದರು.

ಮೈತುಂಬಾ ಒಡವೆಯಿಟ್ಟು ಒಂಟಿಯಾಗಿ ಊರಿಬಿಸಿಲಿನಲ್ಲಿ ಅಕೆ ಬಂದಾಗ, ನನ್ನ ಮನ ಚಂಚಲವಾಯಿತು. ಕಸಬುಗಾರಿಕೆಯ ಸೆಳೆತ ನೋಡಿ! ನಿರಾಯಾಸವಾಗಿ ಕೈಗೆ ಸಿಗುವ ಆಸ್ತಿಯನ್ನು ದಕ್ಕಿಸಿಕೊಳ್ಳುವಂತೆ ನನ್ನ ಕಸಬುಗಾರಿಕೆ ಒತ್ತಾಯಮಾಡಿತು. ತಲೆಯ ಮೇಲೆ



ಕೊಟ್ಟ ಒಂದೇ ಏಟು ಅಕೆಯ ಪ್ರಜ್ಞೆ ತಪ್ಪಿಸಿತು! ಅಕೆಗೆ ಎಲ್ಲರ ಕಾಟ,—ಕೋಟಲೆಗಳಿಂದಲೂ ಮುಕ್ತಿ ದೊರೆಕಿಸಿತು!

ಒಡವೆ-ವಸ್ತುಗಳನ್ನೆಲ್ಲಾ ಸುಲಿದುಕೊಂಡು, ರಂಗನ ಸಹಾಯದಿಂದ ಹಿತ್ತಲಲ್ಲಿ ಹೂತುಬಿಟ್ಟೆ.

ನೀವು ಏನು ಶಿಕ್ಷೆ ಕೊಡಬಲ್ಲಿರಿ? ಒಂದು ಕೊಲೆಗೆ ಮರಣ ದಂಡನೆಯ ಶಿಕ್ಷೆ! ಆದರೆ ನನ್ನ ಇನ್ನೂ ಹತ್ತು ಕೊಲೆಗಳು ಶಿಕ್ಷೆಯಿಲ್ಲದೆ ಮನ್ನಿಸಲ್ಪಟ್ಟಂತಾಗುತ್ತೆ."

—ಎಂದು ಲಘುವಾಗಿ ನಕ್ಕ.

ಅವನ ಹೇಳಿಕೆಯಂತೆ, ಹಿತ್ತಲನ್ನು ಅಗೆದು ಶೋಧಿಸಿದಾಗ ಏಳು ಅಸ್ಥಿಪಂಜರಗಳು ದೊರೆತುವು.

× × × ×

"ನಿಮಗೆ ಅಷ್ಟೆ ಅಗೆಯಬೇಕೆಂದು ಹೇಗೆ ತಿಳಿಯಿತು?"

—ಪ್ರತಿಭಾ ಆಸಕ್ತಿಯಿಂದ ಕೇಳಿದಳು.

"ನೀನು ಆತನ ಕೈ ಮಣ್ಣಾಗಿತ್ತು ಎಂದಿದ್ದೆ. ಅದಕ್ಕೂ ಹೆಚ್ಚಾಗಿ ಅಲ್ಲಿ ಮಣ್ಣಿನ ರಾಶಿ ಬಿದ್ದುದನ್ನು ನೋಡಿ ಅನುಮಾನ ಆಯಿತು. ನಾನೂ ತೋಟಗಾರಿಕೆಯಲ್ಲಿ ಪಳಗಿದವನು. ಪಾತಿ ಮಾತಲು ಅಗೆದರೆ, ಅಷ್ಟು ಮಣ್ಣು ಏಕೆ ರಾಶಿ ಬೀಳುವುದು? ಬೇರೆ ವಸ್ತುವನ್ನು ಭೂಮಿಗೆ ಹಾಕಿರಬೇಕು. ಈ ಸರಳ ತರ್ಕ ನನ್ನ ಸಮಸ್ಯೆಗೆ ಬೆಳಕು ಬೀರಿತು. ಅಲ್ಲದೆ ನನಗೆ ಅವನ ಮೇಲೆ ಮೊದಲಿನಿಂದಲೂ ಸ್ವಲ್ಪ ಗುಮಾನಿ ಇತ್ತು, ಅಷ್ಟೆ!"

"ನನ್ನ ಮನಸ್ಸನ್ನು ಕೊರೆಯುವ ವ್ಯಥೆ ಒಂದೇನೇ—ನಾನಾಗಿಯೇ ಹೇಳಿ, ಸಂಚೀನ ಸಾವಿನ ಬಾಯೊಳಕ್ಕೆ ನೂಕಿದಂತಾಯ್ತಲ್ಲಾ ಎಂದು ಆ ಬೋರ್ಡನ್ನು ನೋಡಿ ನೋಪಹೋದಂತಾಯ್ತು."

"ನೀನು ಇನ್ನು ವ್ಯಥೆ ಪಟ್ಟು ಏನು ಪ್ರಯೋಜನ? ಸರಳೆಯು ಸಾವಿಂದ ಉಳಿದವಳಾದರೂ ಕಣ್ಮರೆಯುವಂತಾಯ್ತು; ಅತನ ವೇಷ ಪತ್ತೆ ಆಯ್ತು. ಅತನ ಪೂಜಾತಂತ್ರಕ್ಕೆ ಬಲಿಯಾಗಲಿದ್ದ ಎಷ್ಟೋ ಮಂದಿಯ ಪ್ರಾಣರಕ್ಷಣೆ ಆಯ್ತು."

"ಹಾಗೆ ಸಮಾಧಾನ ಹೇಳಿಕೊಳ್ಳುವುದೊಂದೇ ಉಳಿದಿರುವ ದಾರಿ"—ಎಂದು ನಿಡುಸುಯ್ದು ಪ್ರತಿಭಾ

———

ಅದೃಶ್ಯ ಕವಿಯ "ಕಾಳಿದಾಸ"

(ಕನ್ನಡಿಗರ ಪರಂಪರೆಯ ಆಖ್ಯಾಯಿಕೆ)

ಶ್ರೀ. ಎಂ. ಎಸ್ ಕುರಂದವಾಡ ಬಿ. ಎ. ಕುಮಟಾ

ಸುಪ್ರಸಿದ್ಧ ಐತಿಹಾಸಿಕ ಪುರುಷರ ವಾಸ್ತವಜೀವನ ವಿಚಾರಗಳೇ ನಮಗಿಂದು ಗೊತ್ತಾಗುವಂತಿಲ್ಲ. ಅವರ ಜೀವನಕಥೆಗಳೆಂದು ರೂಢಿಯಲ್ಲಿರುವ ಕಥೆಗಳೆಲ್ಲ ಕಟ್ಟುಕಥೆಗಳಾಗಿವೆ. ಕಾಳಿದಾಸ ಕವಿ ಕನ್ನಡಿಗರಿಗೆ ಹೇಗೆ ಪರಿಚಿತನಾಗಿದ್ದಾನೆಂಬುದನ್ನು ನಾವಿಲ್ಲಿ ನೋಡಬಹುದು.

ಗುಪ್ತರ ಸುವರ್ಣಯುಗದಲ್ಲಿ, ಲೌಕಿಕ ಸಾಹಿತ್ಯದ ಸಮೃದ್ಧಿಯನ್ನುಂಟು ಮಾಡಿದವರಲ್ಲಿ, ಭಾರತದ ಹೆಮ್ಮೆಯ ಕವಿಯೆನಿಸಿದ ಮಹಾಕವಿ ಕಾಳಿದಾಸನು ಮೊದಲಿಗನು. ಶ್ರೀಮಾನ್ ಎಸ್. ಅನಂತರಂಗಾಚಾರ್ಯರು ಹೇಳುವಂತೆ, " ಲೌಕಿಕ ಸಾಹಿತ್ಯದ ಅಗ್ರೇಸರ ಕಾಳಿದಾಸ. ಗುಪ್ತರ ಸುವರ್ಣಯುಗದ ತೇಜಸ್ವಿ, ಅವನ ಜ್ಯೋತಿಯು ಅಖಂಡ ಸಾಹಿತ್ಯದ ಮೇಲೆ ಪ್ರಸರಿಸಿದೆ. "

" ಮಾಳವಿಕಾಗ್ನಿಮಿತ್ರ, " " ವಿಕ್ರಮೋರ್ವಶೀಯ, " ಮತ್ತು ಸಂಸ್ಕೃತ ಸಾಹಿತ್ಯದಲ್ಲಿಯಷ್ಟೇ ಏಕೆ ? ವಿಶ್ವಸಾಹಿತ್ಯದಲ್ಲಿ ಉಚ್ಚಸ್ಥಾನ ಪಡೆದ " ಅಭಿಜ್ಞಾನ ಶಾಕುಂತಲಂ " ಎಂಬ ಮೂರು ಶ್ರೇಷ್ಠ ನಾಟಕಗಳನ್ನೂ, ಕಾವ್ಯರಚನಾರತುನಗಳೆನಿಸಿದ, " ರಘುವಂಶ " " ಕುಮಾರಸಂಭವ "ಗಳೆಂಬ ಎರಡು ಮಹಾಕಾವ್ಯಗಳಲ್ಲದೆ, ಸಂಸ್ಕೃತ ಸಾಹಿತ್ಯದಲ್ಲಿಯೇ ಬಹು ಸುಂದರಕಾವ್ಯವಾದ " ಮೇಘದೂತ " ಮುಂತಾದ ಅಮರ ಕೃತಿಗಳನ್ನೂ ರಚಿಸಿ, ವಿಶ್ವದ ಎಲ್ಲ ವಿದ್ವಾಂಸರಿಂದ ಮೆಚ್ಚಿಕೆಯನ್ನು ಪಡೆದು, ಪಾಶ್ಚಾತ್ಯ ನಾಟಕಕಾರನಾದ ಶೇಕ್ಸ್‌ಪಿಯರನಿಗೆ ಸರಿದೊರೆಯೆನಿಸಿದ, ಭಾರತರತ್ನ ಕಾಳಿದಾಸನು, " ಭರತ ಖಂಡದ ಅತ್ಯುತ್ತಮ ನಾಟಕಕಾರನೂ ಕವಿಯೂ ಆಗಿದ್ದನೆಂಬುದ ನಿರ್ವಿವಾದ ವಿಷಯ. ಅತನ ಗ್ರಂಥಗಳು ಎಲ್ಲ ದೇಶ-ಕಾಲಗಳ ಮನ್ನಣೆಗೆ ಪಾತ್ರವಾಗಿವೆ. "

" ಆದರೂ ಅತನ ವಿಷಯವಾಗಲಿ ಅತನ ಕಾಲದ ವಿಷಯವಾಗಲಿ ಯಾವ ಸ್ಪಷ್ಟ ವಿಷಯಗಳೂ ತಿಳಿದಿಲ್ಲ " ಭವಭೂತಿಯಂತೆ ತನ್ನ ಪರಿಚಯವನ್ನು, ತನ್ನ ಯಾವ ಕೃತಿಗಳಲ್ಲಿಯೂ ಹೇಳಿಕೊಂಡಿರದೆ ಈ ಮಹಾಕವಿಯು, ಅತನ ಗ್ರಂಥಗಳನ್ನು ಓದಿ, ಮೆಚ್ಚಿ, ಅವನ ಪಾಂಡಿತ್ಯವನ್ನು ಹೊಗಳಿ, ಅವನನ್ನು ಅಭಿನಂದಿಸಿ, ಅವನ ವಿಷಯವನ್ನು ತಿಳಿಯಲಿಚ್ಛಿಸುವ ವಿದ್ವಜ್ಜನರಿಗೆ, ರಸಿಕರಿಗೆ, ಓದುಗರಿಗೆ ತುಂಬ ನಿರಾಶೆಯನ್ನುಂಟು ಮಾಡುತ್ತಾನೆ. ಸರ್ವ ಪ್ರಯತ್ನಗಳನ್ನು ಮಾಡಿದರೂ ಎಲ್ಲಿಯೂ ಅವನ ನಿಜವಾದ ವ್ಯಕ್ತಿಗತ ಇತಿಹಾಸವು ತಿಳಿದುಬಾರದಿದುರಿಂದ, ಅವನ ಅಭಿಮಾನಿಗಳು ತಮ್ಮ ಊಹೆಯ ಬಲದಿಂದ, ಕಲ್ಪನಾಸಾಮರ್ಥ್ಯದಿಂದ " ಅವನು ಆ ರಾಜನಲ್ಲಿ ಇದ್ದಿರಬಹುದು; ಅವನ ಚರಿತ್ರೆ ಹೀಗಿರಬಹುದು! " ಎಂದುಹೊದಲಾಗಿ ಕಟ್ಟುಕಥೆಗಳನ್ನು ರಚಿಸಿಕೊಂಡು, ತಮ್ಮ ಅತ್ಯ ಸವಧಾನ ಮಾಡಿಕೊಂಡರು — ಗೊಂಬೆಗಳಂತೆ ನಿಮಿತ್ತಮಾತ್ರರಾಗಿರುವ ಮಾನವರು, ನಿಷ್ಕರುಣ ಕಠೋರ ಕಾಲನು ಕವಿಯ ಚರಿತ್ರೆಯನ್ನು ತನ್ನ ಅಗಾಧವಾದ ಕರಾಳ ಗರ್ಭದಲ್ಲಡಗಿಸಿಕೊಂಡಿರಲು, ದಂತಕಥೆಗಳನ್ನು ಕಟ್ಟಲು ಶಕ್ತರಾಗಬಲ್ಲರೇ ಹೊರತು, ಅದಕ್ಕಿಂತ ಹೆಚ್ಚಿನದೇನನ್ನು ಮಾಡಲು ತಾನೇ ಸಮರ್ಥರಾಗಬಲ್ಲರು ? ಇದರಿಂದಾದ ಸ್ವಾಭಾವಿಕ ದುಷ್ಪರಿಣಾಮವೆಂದರೆ: " ಪದ್ಧತಿಯಂತೆ ಇವನ ವಿಷಯವಾಗಿಯೂ ಅನೇಕ ದಂತಕತೆಗಳಿವೆ ಆದರೆ ಅವಕ್ಕೆ ಹೆಚ್ಚಿನ ಐತಿಹಾಸಿಕ ಮನ್ನಣೆಯಿಲ್ಲ ಇವುಗಳ ಪ್ರಕಾರ ಅತನು ಬಾಲ್ಯದಲ್ಲಿ ದಡ್ಡನಾಗಿದ್ದಂತೆಯೂ ಕಾಳಿಯ ವರಪ್ರಸಾದದಿಂದ ಉದ್ಭವ. ಕವಿಯಾದಂತೆಯೂ ಕೊನೆಯಲ್ಲಿ ಸಿಂಹಳದ್ವೀಪದಲ್ಲಿ ಒಬ್ಬ ವೇಶ್ಯೆಯಿಂದ ಹತನಾದಂತೆಯೂ ಊಹಿಸಬೇಕಾಗಿದೆ. "

ಕಾಳಿದಾಸನ ಬಗ್ಗೆ ಎಲ್ಲ ಭಾಷೆಗಳಲ್ಲಿ ಅನೇಕಾನೇಕ ದಂತಕತೆಗಳು ಹುಟ್ಟಿರುವುದನ್ನು ಕಾಣಬಹುದು. ಐತಿಹಾಸಿಕ ಮನ್ನಣೆಯಿಲ್ಲದೆ ಈ ಬಗೆಯ ದಂತಕತೆಗಳಿಲ್ಲ, ತಮ್ಮ ತಮ್ಮ ಅತ್ಯ ಸವಧಾನಕ್ಕೋಸ್ಕರ ರಚಿಸಲ್ಪಟ್ಟಿರುವ " ಪುರಾಣಗಳು ! " ಸಂಖ್ಯೆಯಲ್ಲಿ ಕವಿಯ ಕೃತಿಗಳಿಗಿಂತ ಹೆಚ್ಚಿರುವ ಈ ಪುರಾಣಗಳೆಲ್ಲ, ಫಣಿರಾಯನ ಭಾರ ಹೆಚ್ಚಿಸಲು ಸಾಧನವಾಗಿನೆಯೇ ಹೊರತು, ನಿಜವಾದ ಉದ್ದೇಶವನ್ನು ಎಳ್ಳಷ್ಟೂ ಸಾಧಿಸಲು ಶಕ್ಯೋಜನಕಾರಿಯಾಗಿಲ್ಲ — ಎಂಬ ಸಂಗತಿಯನ್ನವಲೋಕಿಸಿದರೆ, ತುಂಬ ವಿಷಾದವಾಗುತ್ತದೆ; ಕವಿಗಾಗಿ ಮನ ಮರುಗುತ್ತದೆ.

ಇದೇ ದಿಶೆಯಲ್ಲಿ, ಕರ್ನಾಟಕದಲ್ಲಿ ಯಾವ ದಂತಕಥೆ ಪ್ರಚಲಿತವಿತ್ತೆಂಬುದನ್ನು ನಾವು ಈಗ ನೋಡಬಹುದು. ಮೈಸೂರಿನಿಯರ

ಶೈಲದ ಕವಿಯಾದ ಅದ್ರೀಶ ಅಥವಾ ಅದೃಶ್ಯ ಕವಿ, ಕಾಳಿದಾಸನ ಬಗ್ಗೆ ತನ್ನದೊಂದು 'ದಂತಕಥೆ' ಯನ್ನು ಬರೆದು, 'ಪುರಾಣ' ಗಳಿನಿಸಿರುವ ಆ ಕೃತಿಗಳ ಸಾಲಿನಲ್ಲಿ ತನ್ನ ಕೃತಿಯನ್ನು ನಿಲ್ಲಿಸಲು ಪ್ರಯತ್ನಿಸಿದ್ದು, ಅವನಿಗೂ ಕೀರ್ತಿದಾಯಕವಾದ ಸಂಗತಿ ಮತ್ತು ಕರ್ನಾಟಕಕ್ಕೂ ಗೌರವದಾಯಕ ವಿಷಯ. ಕರ್ನಾಟಕದಲ್ಲಿ ಕಾಳಿದಾಸನ ಬಗ್ಗೆ ಪ್ರಚಲಿತವಿದ್ದ ದಂತಕಥೆಯನ್ನು ಒದಗಿಸಿದ ಕವಿ ಅದ್ರೀಶನನ್ನು ಮತ್ತು ಅವನ 'ಕಾಳಿದಾಸ' ಎಂಬ ಕಾವ್ಯಭಾಗವನ್ನೂ ಕನ್ನಡಿಗರಿಗೆ ಅಲ್ಪದರಲ್ಲಿ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

ಕವಿ ಅದ್ರೀಶ :

ವಾರ್ಧಿಕ ಷಟ್ಪದಿಯು ಕೇವಲ ಒಂಭತ್ತುವರೆ ಪದ್ಯಗಳಲ್ಲಿ, ಕವಿ ಕಾಳಿದಾಸನ ಬಗ್ಗೆ ಪ್ರಚಲಿತವಿದ್ದ ದಂತಕಥೆಯೊಂದನ್ನು ಕನ್ನಡಿಗರಿಗೆ ಒದಗಿಸಿರುವ ಕರ್ನಾಟಕ ಕವಿಯಾದ ಅದೃಶ್ಯ ಅಥವಾ ಅದ್ರೀಶನ ಬಗ್ಗೆ, "ಕನ್ನಡ ಸಾಹಿತ್ಯಚರಿತ್ರೆ" ಯಲ್ಲಿ ಸಿಗುವ ಪರಿಚಯವು ತೀರ ಸ್ವಲ್ಪ; ಕಾಳಿದಾಸನಂತೆ ಅವನ ಸ್ಥಿತಿಯೂ ಆಗಿರುವುದು. ಸ್ವಲ್ಪ ಸೋಜಿಗದ ವಿಷಯ!

ಕವಿಯ 'ಪ್ರೌಢರಾಯನ ಕಾವ್ಯ' ದಲ್ಲಿ ನಮಗೆ ಈ 'ಕಾಳಿದಾಸ' ಕಥಾಭಾಗ ದೊರೆಯುತ್ತದೆ. ವೈಸೂರೊಡೆಯರ ಕಾಲದಲ್ಲಿ ಕನ್ನಡ ಸಾಹಿತ್ಯ ತೋರಿದ ವಿಶೇಷಾಂಶಗಳಲ್ಲಿ, ನೇರವಾದ ಚಾರಿತ್ರಿಕ ಕಾವ್ಯಗಳ ಕಚ್ಚಳವೊಂದಾಗಿದೆ. ಅದೃಶ್ಯಕವಿಯ 'ಪ್ರೌಢರಾಯನ ಕಾವ್ಯ'ವೂ ಅದೇ ಸಾಲಿನಲ್ಲಿ ಬರುತ್ತದೆ ಇದು ಹೆಸರಿನಲ್ಲಿ ಚರಿತ್ರೆಯ ನಿದರ್ಶಕವಾಗಿದ್ದರೂ, ಇದರಲ್ಲಿ ಶಿವಶರಣರ ಕಥೆಯೇ ಮುಖ್ಯವಾಗಿದೆ ನೂಕನ ಶರಣರ ಕಥೆಗಳು ಈ ಕಾಲಾವಧಿಯಲ್ಲಿ ಹೇರಳವಾಗಿದ್ದುವು ಅದರಲ್ಲಿ ಪ್ರೌಢರಾಯನಿಗೆ ಅವನ ಮಂತ್ರಿ ಹೇಳಿದ ಶಿವಶರಣರ ಕಥೆಯು ಸಾರವಿದೆ. ಈ ಕೃತಿಯು ನೋಡಲಿಕ್ಕೆ ಐತಿಹಾಸಿಕವಾಗಿದ್ದರೂ, ನಿಜವಾಗಿಯೂ ಧಾರ್ಮಿಕವಾಗಿದೆ"— ಇದಿಷ್ಟು ಕವಿ ಅದ್ರೀಶನ ಬಗ್ಗೆ ಮತ್ತು ಅವನ ಕೃತಿಯಾದ 'ಪ್ರೌಢರಾಯನ ಕಾವ್ಯ' ದ ಬಗ್ಗೆ ನನುಗೆ "ಕನ್ನಡ ಸಾಹಿತ್ಯ ಚರಿತ್ರೆ"ಯಿಂದ ಸಿಗುವ ಮಾಹಿತಿ.

ಇದರಿಂದ ಕವಿಯು ಪ್ರೌಢರಾಯನ ಆಸ್ಥಾನದಲ್ಲಿದ್ದವನು, ಅರಸನಿಗಾಗಿ ಕಾವ್ಯ ಬರೆದು ಮನ್ನಣೆಗಳಿಸಿದವನು, ರಾಯನ ಮಂತ್ರಿ ಅರಸನಿಗೆ ಹೇಳಿದ ಸಾರ ಇವನ ಕೃತಿಗಳಲ್ಲಿದೆ; ತೋರಿಕೆಗೆ ಐ ಹಾಸಿಕದಂತಿದ್ದರೂ ಇವನ ಕೃತಿ ನಿಜವಾಗಿಯೂ ಧಾರ್ಮಿಕವಾಗಿದೆ – ಎಂಬುದಾಗಿ ಸ್ವಲ್ಪ ಮಾಹಿತಿ ದೊರೆಯುತ್ತದೆ. ಧಾರ್ಮಿಕ ಕಾವ್ಯ ಬರೆದು ಇವನು ರಾಜನ ಮನ್ನಣೆಗೊಳಗಾಗಿದ್ದನು ಎಂದೂ ಇದರಿಂದ ಕಂಡುಬರುತ್ತದೆ ರಾಜ ಮನ್ಯಾದಿತವಾದ 'ಪ್ರೌಢರಾಯನ ಕಾವ್ಯ' ದ ತನೆಯ ಸಂಧಿಯಲ್ಲಿ ನಮಗೆ ಅವಶ್ಯವಿರುವ 'ಕಾಳಿದಾಸ' ಎಂಬ ಕಥಾಭಾಗ ದೊರೆಯುತ್ತದೆ.

ಅಲ್ಲದೆ ಇವನ ವಿಷಯದಲ್ಲಿ ಸಂಶಯಾಸ್ಪದವಾಗಿರುವ ಅಭಿಪ್ರಾಯವೊಂದನ್ನು ನಾವು "ಕನ್ನಡ ಸಾಹಿತ್ಯಚರಿತ್ರೆ" ಯಲ್ಲಿ ಕಾಣಬಹುದಾಗಿದೆ.—"ಚಾವುರಸನು ತನ್ನ ಕೃತಿಯಾದ ಪ್ರಭುಲಿಂಗಲೀಲೆಯ ಬಗ್ಗೆ ಹೇಳಿರುವ 'ಸತ್ಕವರ' ಕಥೆಯಲ್ಲ, ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲ್ಕುವರ ಸೀಮೆಯ ಹೊರಲಬು ತಾನಲ್ಲ' ಎಂಬ ಮಾತನ್ನು ಅದೃಶ್ಯಕವಿಯು, 'ಪ್ರೌಢರಾಯನ ಕಾವ್ಯ'ದಲ್ಲಿ ಹೇಳಿರುವುದನ್ನು ನೆನೆಯಬೇಕು. ಅದೃಶ್ಯ ಕವಿಯು ಈ ಮಾತನ್ನು 'ಕುಮಾರವ್ಯಾಸ ಭಾರತಕ್ಕೆ ಅನ್ವಯಿಸಿ ಕತೆಕಟ್ಟಿರುವ ಸಂಭವವೂ ಇದೆ' ಎಂಬ ಮಾತನ್ನೊಂದು ಇವನ ವಿಷಯದಲ್ಲಿ ಅಡಿರುವುದನ್ನು ನಾವು ಕಾಣಬಹುದಾಗಿದೆ. ಆದರೆ ಇದರಲ್ಲಿ ನಂಬಬಹುದಾದ ಅಂಶ ಸ್ವಲ್ಪ ಸಂಶಯಾಸ್ಪದವಾಗಿರುವುದರಿಂದ, ಮತ್ತು ನಮ್ಮ ಕಾವ್ಯದ ಅಧ್ಯಾಸಕ್ಕೆ ಇದು ಅಷ್ಟು ಅವಶ್ಯಕವಲ್ಲವಾದುದರಿಂದ, ನಾವು ಇದನ್ನು ಅಷ್ಟಾಗಿ ಗಮನಿಸಬೇಕಾಗಿಲ್ಲ. ನಮ್ಮ ಅಧ್ಯಾಸಕ್ಕೆ ಬೇಕಾದ ಕವಿಯ ಪರಿಚಯ ಮತ್ತು ಅವನ ಕೃತಿಯ ವಿಚಾರದ ಕುರಿತಾಗಿ ಸಾಕಷ್ಟು ಮಾಹಿತಿಯು ನೊದಲೇ ದೊರೆತಿದೆ. ಅಲ್ಲದೆ ಇದರಲ್ಲಿ ವಾಸ್ತವಿಕಾಂಶ ಎಷ್ಟೆಂಬುದನ್ನು ಕಂಡು ಹಿಡಿಯುವುದು ಸ್ವಲ್ಪ ಪ್ರಯಾಸದ ಕೆಲಸ.

"ಕನ್ನಡ ಸಾಹಿತ್ಯ ಚರಿತ್ರೆ"ಯಿಂದ ದೊರಕುವ ಪರಿಚಯದಿಂದಲೂ ಕವಿಯು ತನ್ನ ಕಾವ್ಯದಲ್ಲಿ ಹೇಳಿರುವ, "ಬರೆವೆನಿನ್ನೊಂದು ಕಥೆ ಹರಭಕ್ತರುನ್ನತಿಯ" ಎಂಬ ಮಾತಿನಿಂದಲೂ ಕವಿ ವೀರಶೈವನೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಅದ್ರೀಶ ವೀರಶೈವ ಕವಿ, ಪ್ರೌಢರಾಯನ ಆಸ್ಥಾನದಲ್ಲಿದ್ದುಕೊಂಡು ಧಾರ್ಮಿಕ ಕಾವ್ಯ ಬರೆದು ರಾಜಮನ್ನಣೆ ದೊರಕಿಸಿದವನು ಎಂಬುದನ್ನೂ ಅಲ್ಲದೆ ಅವನ ಕೃತಿಯಾದ 'ಪ್ರೌಢರಾಯನ ಕಾವ್ಯ'ದ ಬಗ್ಗೆ ವಿಮರ್ಶಾಯುಕ್ತವಾದ ವಿಶೇಷ ಮಾಹಿತಿಯನ್ನೂ ನಾವು 'ಕನ್ನಡ ಸಾಹಿತ್ಯಚರಿತ್ರೆ'ಯಲ್ಲಿ ನೋಡಬಹುದಾಗಿದೆ. ಅಂತೂ ಕವಿಯ ಬಗ್ಗೆ ಸ್ವಲ್ಪವಾದರೂ ನಿಶ್ಚಿತವಾದ ಪರಿಚಯವನ್ನು ದೊರಕಿಸಿರುವುದು ಸಂತೋಷದ ವಿಷಯ.

"ಅವನ 'ಕಾಳಿದಾಸ ಕಥೆ'"

ಅವನ 'ಪ್ರೌಢರಾಯನ ಕಾವ್ಯ' ದ ಎರಡನೆಯ ಸಂಧಿಯಲ್ಲಿ ನನುಗೆ ದೊರಕುವ 'ಕಾಳಿದಾಸ'ವೆಂಬ ಕಾವ್ಯಭಾಗವಾರ್ಧಿಕ ಷಟ್ಪದಿಯಲ್ಲಿದೆ. ಕೇವಲ ಇಂತಹ ಒಂಭತ್ತುವರೆ ಪದ್ಯಗಳಲ್ಲಿ, ಕವಿಯು ತನ್ನ ಕಾಲದಲ್ಲಿ ಪ್ರಚಲಿತವಿದ್ದ ದಂತಕಥೆಯೊಂದನ್ನೋ ಅಥವಾ ತನ್ನ ಕಲ್ಪನೆಯ ಸಾಮರ್ಥ್ಯದಿಂದ ಕಟ್ಟಿರುವ ಕಥೆಯೊಂದನ್ನೋ ಕನ್ನಡಿಗರಿಗೆ ಪರಿಚಯ ಮಾಡಿಕೊಡುತ್ತಾನೆ.

ಈ ವರೆಗೆ ನಾವು ನೋಡುತ್ತಿರುವ ದಂತಕಥೆಗಳಲ್ಲಿ ಕಾಳಿದಾಸ ಕವಿಯ ಪೂರ್ವೇತಿಹಾಸದ ಬಗ್ಗೆ ಅಷ್ಟು ಭಿನ್ನಾಭಿಪ್ರಾಯಗಳಿಲ್ಲ. ಆದರೆ ಭಿನ್ನಾಭಿಪ್ರಾಯಗಳು ಹೆಚ್ಚಾಗಿ ಕಂಡುಬರುವುದು ಅವನ ಖಚಿತ ಇತಿಹಾಸದ ಬಗ್ಗೆ. ಅವನು ಯಾವನ ಆಸ್ಥಾನ ಕವಿಯಾಗಿದ್ದನೋ ಆ ರಾಜನ ಬಗ್ಗೆ, ಅವನು ವಾಸಿಸಿದ ಕಾಲಾವಧಿಯ ಬಗ್ಗೆ! ಇದುವರೆಗೆ ನಾವು ಅವಲೋಕಿಸಿದ ಎಲ್ಲ ದಂತಕಥೆಗಳಿಗಿಂತ ತೀರ ಭಿನ್ನವಾದುದೊಂದು ದಂತಕಥೆಯನ್ನು ಈ ಕಾವ್ಯದಲ್ಲಿ ಕಾಣುವುದೇ

ನಿಜವಾಗಿ ವಿಸ್ಮಯಕಾರಕ ವಿಷಯ! ಉಳಿದ ದಂತಕಥೆಗಳಿಗಿಂತ ತೀರ ಭಿನ್ನವಾದ ಮತ್ತು ಅದೇ ಹೊತ್ತಿಗೆ ತುಂಬ ವಿಚಿತ್ರವಾದ ದಂತಕಥೆಯೊಂದನ್ನು ಇವರಲ್ಲಿ ಕಾಣುವ ನಮಗೆ ವಿಸ್ಮಯಾಶ್ಚರ್ಯ-ಗಳುಂಟಾಗದೆ ಇರದು.

'ಪ್ರೌಢರಾಯನಿಗೆ ಅವನ ಮಂತ್ರಿ ಹೇಳಿದ ಶಿವಶರಣರ ಕಥೆಯ ಸಾರ' ವಿರುವುದರಿಂದ, ಕವಿಯು, "ಹರಭಕ್ತರುನ್ನತಿಯ ಕಥೆಯನಾಲಿಸು" ಎಂದು ಹೇಳಿದವನೇ, ತ್ಕ್ಷಣ ಕಥೆಯನ್ನು ಹೇಳ-ಲಾರಂಭಿಸುತ್ತಾನೆ!

"ಧಾರಾಪುರವನ್ನು ಆಳುವ ಭೂಪತಿ ಭೋಜರಾಜ. ಅವನ ಮಗಳು ಪದ್ಮಾವತಿಯು ಸರ್ವ ವಿದ್ಯೆಗಳಲ್ಲಿ ಪಾರಂಗತಳಾಗಿ, ನುರಿತ ಪಂಡಿತೆಯಾಗಿದ್ದಳು. ಹೀಗೆ ಸರ್ವವೂ ಕುಶಲದಿಂದ ನಡೆಯುತ್ತಿರು-ವಂತೆ, ರಾಜನು ಒಂದು ದಿನ ವರರುಚಿಯನ್ನು ಕುರಿತು, "ನಿನಗೆ ಕುಲವಾವುದು?" ಎಂದು ಕೇಳಲು, ಅವನು 'ನಿಮ್ಮಯ ಸಭಾ ಸ್ಥಾನದಲ್ಲಿರುವವರನ್ನೆಲ್ಲ ವಿಚಾರಿಸಿರಿ' ಎಂದು ರಾಜನಿಗೆ ಆಹ್ವಾನ-ವೀಯುತ್ತಾನೆ. ಎಲ್ಲರೂ ಸರ್ವ ಪ್ರಯತ್ನಗಳನ್ನು ಕೈಕೊಳ್ಳುತ್ತಾರೆ ಆದರೆ ಆ ಪ್ರಶ್ನೆಗೆ ಉತ್ತರ ಹುಡುಕುವುದು ಯಾರಿಗೂ ಸಾಧ್ಯವಾಗು-ವುದಿಲ್ಲ. (೧)

ಆಗ ಶಶಿವದನೆ ಪದ್ಮಾವತಿ, 'ಈ ಪ್ರಶ್ನೆಗೆ ತಾನು ಉತ್ತರ ಕಂಡು ಹಿಡಿಯುತ್ತೇನೆ, ಅದಕ್ಕೆ ಒಂದು ಪಕ್ಷದವಧಿ ಬೇಕು ಎಂದು ತಂದೆಗೆ ತಿಳಿಸಿ, ಅದರಂತೆ ಉತ್ತರವನ್ನು ಕಂಡುಹಿಡಿಯಲು ಸರಿಯಾದ ಸಮಯ ಬರಲಿ ಎಂದು ಕಾಯುತ್ತಿರುತ್ತಾಳೆ. ಅದರಂತೆ ವರರುಚಿಯು ಒಂದು ದಿನ, 'ಮೃದುವಾಸಿನೊಳು ಮಲಗಿರಲು' ಪದ್ಮಾವತಿಯು ಅವನ ಮುಖದ ಮೇಲೆ ತಣ್ಣೀರನ್ನೆರಚಲು, ತಕ್ಷಣ ಅವನ ಬಾಯಿ-ಯಿಂದ ಹೊರಬಿದ್ದ 'ಅಚ್ಚಿ' ಯೆಂಬ ಸ್ವಜಾತಿಭಾಷೆಯ ನುಡಿ-ಯನ್ನು ಕೇಳಿ, ಅವನು 'ತಿಗುಳ' ಕುಲದವನೆಂದು ನಿರ್ಧರಿಸಿ, ತನ್ನ ಉತ್ತರವನ್ನು ತಂದೆಗೆ ತಿಳುಹುತ್ತಾಳೆ. (೨)

ಮರುದಿನ ರಾಜನು ವರರುಚಿಯನ್ನು, ಅದು ನಿಜಸಂಗತಿಯೋ ಅಲ್ಲವೋ? ಎಂದು ವಿಚಾರಿಸಲು, ವರರುಚಿಯು ಅದು ನಿಜಸಂಗತಿ-ಯೆಂಬುದಾಗಿ ಒಪ್ಪಿಕೊಳ್ಳುತ್ತಾನೆ. ಮತ್ತು ಮನಸ್ಸಿನಲ್ಲಿ, 'ಇವಳು ಚತುರಿ. ತನಗೆ ಮಾಡಿದ ಅವಮಾನವನ್ನು ಸೇಡಿನಿಂದಲೇ ತೀರಿಸ-ಬೇಕು.' ಎಂದು ಅಂದುಕೊಂಡು, ಯೋಗ್ಯ ಸಮಯಕ್ಕಾಗಿ ಕಾಯು-ತ್ತಿರುತ್ತಾನೆ. ಆ ತಕ್ಕ ಸಮಯವೂ ಸಹ ಒಂದಿಗೆ ಬರುತ್ತದೆ ಅವನಿಗೆ. ಭೋಜ ನರನಾಥನು 'ಮಗಳು ಪ್ರಾಪ್ತವಯಸ್ಕಳಾಗಿದ್ದಾಳೆ. ಅವಳಿಗೆ ಯೋಗ್ಯವರನನ್ನು ಅರಸು' ಎಂದು ವರರುಚಿಗೆ ತಿಳಿಸಲು, ಅವನು ಕುರುಬನೊಬ್ಬನನ್ನು ತಂದು 'ಜನವರಿಯದೊಲ್ತನ್ನ ವಂದಿರದೊಳಿರಿಸಿ-ಕೊಂಡು' ಅವನಿಗೆ 'ಒಂದೆರಡು ಮಾಸ ನೀರೆರೆದು, ಪರಿಮಳದ್ರವ್ಯ ಸಂದಿಸಂದಿಗೆ ತೀಡಿ, ಪರಮಾನ್ನ ಭಕ್ಷ್ಯಗಳ ಚೆಂದದಿಂದುಣಿಸಿ, ವಸ್ತ್ರ-ವನುಡಿಸಿ ರತ್ನಖಚಿತಾಭರಣಗಳನೆ ತೊಡಿಸಿ' ವರನನ್ನು ಸಿದ್ಧಮಾಡಿ ಕುಳ್ಳಿರಿಸಿ ಹೋಗಿ ಅರಸನಿಗೆ 'ಅತಿ ಪ್ರೌಢ ವರನನ್ನು ಹುಡುಕಿ-ಕೊಂಡು ಬಂದಿದ್ದೇನೆ' ಎಂದು ತಿಳಿಸಿ, ಅವನ ಅಪ್ಪಣೆ ಪಡೆದು, ಕುರುಬನನ್ನು ಅರಮನೆಗೆ ಕರೆದೊಯ್ಯುವಾಗ, "ಉಮಾಮಹೇಶ್ವರ ನಿಮ್ಮನಿಂದು ರಕ್ಷಿಸಲೆಂದು ಜನಪನಂ ಪರಸೆನುತ" ಅವನಿಗೆ ಕಲಿಸಿ-ಕೊಂಡು ಬರುತ್ತಾನೆ.

ಬಾಯೊಳಗೆ ಜಪಿಸುತ್ತ ಬರುತ್ತಲಿದ್ದ; ಅರಸನನ್ನು ಕಂಡೊಡನೆ ವರರುಚಿ ಕಲಿಸಿಕೊಟ್ಟಿದ್ದ ಮಾತನ್ನು ಸಂಪೂರ್ಣವಾಗಿ ಮರೆತು ಕುರುಬನು, ನಡುನಡುಗಿ, 'ಊಕ್ಕೃಡಾರಾಯ' ಎಂದೆನ್ನುತ್ತಾನೆ. ಅದರ ಅರ್ಥ ತಿಳಿಯದ ಅರಸು ವರರುಚಿಯ ಮುಖವನ್ನೀಕ್ಷಿಸಲು,

'.....ಊ ಎನಲುಮಾಮಹೇಶ
ರಾಯೆಕೇಳ್ ಸೃಷ್ಟಿಯೆನಲು ಸೃಷ್ಟ್ಯ ಸೃಷ್ಟಿಸುವ ಶಿವ।
ರಾಯನಲು ನಿಮ್ಮ ರಕ್ಷಿಸಲೆಂಬ ಪರಕೆಯಾ।
ನ್ಯಾಯವಿದು.....' ಎಂದು ವರರುಚಿಯು ಆ ಕುರುಬನ ಮಾತಿಗೆ ತಕ್ಕ ಅರ್ಥವನ್ನರುಹಲು ಜನಪ ಹರ್ಷಿತನಾಗುತ್ತಾನೆ (೩, ೪, ೫)

ತನ್ನ ಕುವರಿಗೆ ಯೋಗ್ಯನಾದ ಮತ್ತು ಪಂಡಿತನಾದ ವರ ದೊರಕಿದನೆಂಬ ಸಂತೋಷದಲ್ಲಿ ಅರಸು ತವಕದಿಂದ ಮಗಳ ವಿವಾಹ-ವನ್ನು ಅತಿ ಸಂಭ್ರಮದಿಂದ ಜರುಗಿಸಿದ; ಅನಂತರ ಅವರಿಬ್ಬರನೂ ಶಯ್ಯಾಗೃಹಕ್ಕೆ ಕಳಿಸುತ್ತಾರೆ.

ಪದ್ಮಾವತಿಯು ಶಯನಗೃಹದಲ್ಲಿ ಪ್ರವೇಶಿಸಿದ ಸಮಯದಲ್ಲಿ, ಕುರುಬ ಪರ್ಯಂಕದಡಿಯಲ್ಲಿ ಮಲಗಿಕೊಂಡಿರುತ್ತಾನೆ. ಆಗ ಅವಳು 'ತವೆ ಹೆಡ್ಡನೆಂದು ಕರೆದು ಮಂಚದ ಮೇಲೆ ಕುಳ್ಳಿರಿಸಿ, ಜವದಿಂದ ಮೃಗನಾಭಿ ಮೈಗೆ ಪೂಸುವೆನೆಂದು' ಅದನ್ನು ಅಣಿ ಮಾಡಿಕೊಂಡು ಅವನ ಮುಂದಿರಿಸಲು ಆ ಹೆಡ್ಡನು, 'ಇದರ ರುಚಿಯಾವುದು? ಸವಿಯೋ, ಹುಳಿಯೋ, ಸಪ್ಪೆಯೋ ಹೇಳು' ಎಂದನಂತೆ!

'ಅಯ್ಯೊ ಕೆಟ್ಟೆ, ಕಟ್ಟನೆಂದು' ಪದ್ಮಾವತಿಯು ಮನದಲ್ಲಿ ತುಂಬ ಮರುಗುತ್ತ 'ಕಟ್ಟಳಿದು ಕಪ್ಪುರದ ವೀಳ್ಯವನು ಕೊಡಲವನು ಹುಟ್ಟಿದಂದಿನ ನೊದಲು ಹಸಿಯ ಸೊಪ್ಪನೆ ತಿಂದುದಿಲ್ಲ' ಎಂದೆನಲು, ಆ ನುಡಿಯನ್ನು ಕೇಳಿದಾಕ್ಷಣ 'ತಾನು ಮೋಸಹೋದೆನಲ್ಲ!' ಎಂದು ಹಲುಬುತ್ತಾಳೆ. ಕುರುಬನನ್ನು ಹೆದರಿಸಿ ಅವನಿಂದ ವರ-ರುಚಿಯ ತಂತ್ರವನ್ನೆಲ್ಲ ಅರಿತುಕೊಳ್ಳುತ್ತಾಳೆ ವರರುಚಿಯು ಮಾಡಿದ ಮೋಸಕ್ಕಾಗಿ, ರೋಷಗೊಳ್ಳುತ್ತಾಳೆ. ಕೊನೆಗೆ, ಸಮಾಧಾನ ತಂದು-ಕೊಂಡು, 'ಬಿಟ್ಟೊಡೆನ್ನಂ ಬೇಡಿದಷ್ಟು ಕುರಿಯಂ ಕೊಡುವೆ' ಎಂದು ಹಲುಬುತ್ತಿರುವ ಕುರುಬನ ಬಗ್ಗೆ ಸಹಾನುಭೂತಿ, ಅಂತಃಕರಣವನ್ನು ತಾಳಿ, ಅವನನು ಕರೆದುಕೊಂಡು ಹೋಗಿ, 'ಮಾಕಾಳಿಯಾ ವರ ಭವನವನ್ನು' ಹೊಗುತ್ತಾಳೆ.

ದೇವಿಯ ಎದುರಿಗೆ ನೊಣಕಾಲೂರಿ ನಮಿಸಿ 'ವರರುಚಿಯು ಸೇಡಿನಿಂದ ಕುರುಬನನ್ನು ತಂದು ನನಗೆ ಗಂಡನನ್ನಾಗಿ ಮಾಡಿದ್ದಾನೆ. ನೀನು ಇವನಿಗೆ ಕರುಣೆಯಿಂದ ವಿದ್ಯೆಯನ್ನು ಕೊಟ್ಟು ಉತ್ತಮ ಪುರುಷನನ್ನಾಗಿ ಮಾಡದಿದ್ದರೆ, ನಾನು ಇಲ್ಲಿಯೇ ನಿನ್ನ ಪಾದತಲ-ಗಳಲ್ಲಿ ನನ್ನ ಹರಣವನ್ನೊಪ್ಪಿಸುತ್ತೇನೆ' ಇತ್ಯಾದಿಯಾಗಿ ಅನನ್ಯ ಭಕ್ತಿಭಾವದಿಂದ ಬೇಡಿಕೊಳ್ಳುತ್ತಾಳೆ. (೬, ೭, ೮).

ಆ ಬಾಲೆಯು ಅಷ್ಟು 'ಧೃಢವಿಡಿದು ದೈನ್ಯದಿಂ ಕೊಂಡಾಡುವುದ ನೋಡಿ' ದೇವಿಯು ತ್ಕ್ಷಣ ಪ್ರಸನ್ನಳಾಗಿ, 'ಕಡು ಬೇಗದಿಂ ದಂಡೆಯು ಕೊಂಡಿಲವ ತೆಗೆದು' ಕೊಡಲು ರಾಜಗುರುವರಿಯೇ ಅದನ್ನು ತಂದು ಕುರುಬನಿಗೆ ಮುಡಿಸಿದ ಮೂರನೆಯ ಗಳಿಗೆಗೇ ಜ್ಞಾನೋದಯವಾಗುತ್ತದೆ. ಅವನು ಉತ್ತಮ ಪುರುಷನಾಗುತ್ತಾನೆ.

ಅನಂತರ ಮಡದಿಯೆಚ್ಚರಿಸಿ, ಹಾಲು ಕೊಟ್ಟು, ಕಪ್ಪುರವೀಳ್ಯ ಮೆಡಿಸಿಕೊಟ್ಟು, ಗಂಧ ಪರಿಮಳ ಲೇಪನವನ್ನು ಮಾಡಿದ ನಂತರ ಎಲೆ ನಲ್ಲ, ಕಮಲದಿ ಕಮಲ ಪುಟ್ಟಿತೆಂಬುದ ಕೇಳಿಬಲ್ಲೆ'ಎನ್ನುತ್ತಾಳೆ ,ಅವನಿಗೆ.

'ಪ್ರವ ದೆಯೂ. ನುಡಿಗೆ ತಾಂ ಪರಮ ಹರ್ಷಿತನಾಗಿ' ಅವನು 'ರಮಣೀ ಮಣಿಯ ನಿನ್ನ ಮುಖಕಮಲದೊಳು ನೇತ್ರ ಕಮಲ ಪುಟ್ಟಿದುದೆನಲು' ಅವನಿಗೆ 'ಕವಿ ಕಾಳಿದಾಸನೆಂಬಭಿದಾನ ಮೂದುದಾಗ!' (೯ ಮತ್ತು ೧೦).

—ಇದಿಷ್ಟು ನಮಗೆ ಇಲ್ಲಿಯ 'ಕಾಳಿದಾಸ' ಕಥಾಭಾಗದಿಂದ ಕಂಡುಬರುವ ದಂತಕಥೆ!

ಕೆಲವು ಗಮನೀಯ ವಿಚಾರಗಳು :—

ಮೊದಲು ಓದುತ್ತ ಹೋದಂತೆ, ಅದ್ರೀಶ ಕವಿಯ ಕಾಲದಲ್ಲಿ ಪ್ರಚಲಿತವಿದ್ದ ದಂತಕಥೆ ಇದಿರಬಹುದು ಎಂದೆನಿಸುವ ಈ ಕಥೆಯು ಪೂರ್ಣ ಓದಿ ಮುಗಿಸಿದಾಗ, ಇದು ಸಂಪೂರ್ಣ ದಂತಕತೆಯಿರಲಿಕ್ಕಿಲ್ಲ; ಕವಿಯ ಕಲ್ಪನಾಕೌಶಲ್ಯದಿಂದ ರಚಿಸಲ್ಪಟ್ಟಿರುವ ಒಂದು ಕಾವ್ಯ-ಕುಸುಮವಾಗಿರಲಿಕ್ಕೂ ಸಾಕು—ಎಂಬ ಅಭಿಪ್ರಾಯಬಾರದೆ ಇರದು. ಕೇವಲ ಇದನ್ನು ಓದಿದ ಮಾತ್ರಕ್ಕೆ ನಿಜವಾದ ಸಂಗತಿ ಇಂಥದೇ ಎಂದು ಖಚಿತವಾಗಿ ಹೇಳಲಿಕ್ಕೆ ಬಾರದು.

ಇನ್ನು ಇದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಒರೆಗೆ ಹಚ್ಚಿ ನೋಡಿದರೆ, ಕಾಳಿದಾಸ ಕವಿಯ ಬಗ್ಗೆ ಒಂದೇ ಒಂದು ಗ್ರಂಥವೆಂದು ಇದುವರೆಗೆ ಪ್ರಕಾಶಿತವಾಗಿದ್ದು, ಇತ್ತೀಚಿನ ಹೊಸ ಸಂಶೋಧನೆಗಳಿಗನುಸಾರವಾಗಿ ಅದೂ ಸಹ ಒಂದು 'ಪುರಾಣ' ಎಂದು ನಿರ್ಧರಿಸಲ್ಪಟ್ಟಿರುವ 'ಭೋಜಪ್ರಬಂಧ'ಕ್ಕೂ ಇದಕ್ಕೂ ಸಾಮ್ಯ—ವೈಷಮ್ಯಗಳಿರುವುದು ಕಂಡುಬಾರದೆ ಇರಲಾರದು! ಆಳವಾದ ಅಭ್ಯಾಸಿಗಳಿಗೆ ಇದರಲ್ಲಿ ಅದರಲ್ಲಿಯ ಸಾಮ್ಯಕ್ಕಿಂತ ವೈಷಮ್ಯಗಳೇ ಹೆಚ್ಚಿರುವುವೆ ಬಹುಮಾತು ಗಮನಕ್ಕೆ ಬಾರದೆ ಹೋಗಲಿಕ್ಕಿಲ್ಲ. ಎರಡರ ತುಲನಾತ್ಮಕ ವಿಮರ್ಶೆ, ಆದಿಯಿಂದ ಅಂತ್ಯದವರೆಗೆ ಇದರಲ್ಲಿ (ಅಲ್ಲಲ್ಲಿ ಸ್ವಲ್ಪ ಸಾಮ್ಯವಿದೆ) 'ಭೋಜಪ್ರಬಂಧ'ಕ್ಕಿಂತಲೂ ವಿಭಿನ್ನವಾದ ಕಥೆ ಮತ್ತು ವಿಸದೃಶ ವೈಷಮ್ಯಗಳಿರುವುದನ್ನು ಬೆಳಕಿಗೆ ತಾರದೆ ಇರದು.

ಹೀಗಾಗಿ, ನಂಬಲರ್ಹವಾದ ಅಂಶವೆಷ್ಟರಮಟ್ಟಿಗೆ ಇದರಲ್ಲಿದೆ ಎಂದು ನಿರ್ದಿಷ್ಟವಾಗಿ ಹೇಳುವುದು ಸ್ವಲ್ಪ ಕಷ್ಟದ ವಿಷಯ. ಅಂತೂ ಕಾಳಿದಾಸನ ಬಗ್ಗೆ ಹಿಂದಕ್ಕೆ ಕರ್ನಾಟಕದಲ್ಲಿ ಯಾವ ಒಂದು ಬಗೆಯ ದಂತಕಥೆ ಅಥವಾ ವಿಷಯ ಪ್ರಚಲಿತವಿತ್ತೆಂಬುದನ್ನು ಮಾತ್ರ ನಾವು ಇದರಿಂದ ಗ್ರಹಿಸಬಹುದಾಗಿದೆ.

ಕಾವ್ಯ ಗುಣಗಳು :—

ಇನ್ನು ಕಾವ್ಯಗುಣಗಳ ದೃಷ್ಟಿಯಿಂದ ಈ ಕಾವ್ಯವನ್ನು ಕುರಿತು ಒಂದೆರಡು ಮಾತು ಹೇಳುವುದು ಅತ್ಯವಶ್ಯ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಹೇಳಿದಂತೆ ನೋಡಲು ಚಾರಿತ್ರಿಕವಾಗಿದ್ದರೂ ಇದು ನಿಜವಾಗಿ ಧಾರ್ಮಿಕವಾಗಿದೆ ಕಾಳಿದಾಸನ ಮೂಲಕ ಹರಭಕ್ತರುನ್ನತಿಯ ಕಥೆಯನ್ನೊಂದು ಪ್ರೌಢರಾಜನಿಗೆ ಇದರಲ್ಲಿ ವಿವರಿಸಲಾಗಿದೆ.

ಕೆಲವೊಂದು ದೃಶ್ಯಗಳನ್ನು ಕವಿಯು ತನ್ನ ಪಾಂಡಿತ್ಯದಿಂದ, ಪ್ರೌಢಿಮೆಯಿಂದ ತುಂಬ ಉತ್ತಮವಾಗಿ ಸೃಷ್ಟಿಸಿದ್ದಾನೆ ಉದಾಹರಣೆಗೆ— ಪದ್ಮಾವತಿಯು ವರರುಚಿಯು ಕುಲವನ್ನು ತಿಳಿದ ಸಂದರ್ಭ; ಕುರುಬ ರಾಜನನ್ನು ಕಂಡು ಕಲಿಸಿದ ಮಾತನ್ನು ಮರೆತು ಬಾಯಿಗೆ ಬಂದಂತೆ ಗಳುಹಿದ ದೃಶ್ಯ; ಇವೆಲ್ಲವಕ್ಕಿಂತ ಹೆಚ್ಚಾಗಿ ಶಯನಗೃಹದಲ್ಲಿ ಕುರುಬ ತೋರಿಸಿದ ಹೆಡ್ಡತನ ಮುಂತಾದ ಕೆಲವು ಮುಖ್ಯ ದೃಶ್ಯಗಳನ್ನು ತುಂಬ ಚಾಣ್ಕ್ಯೆಯಿಂದ ಕೌಶಲ್ಯದಿಂದ ರಚಿಸಿರುವುದರಿಂದ ಇವುಗಳಿಂದಲೇ ಈ ಕಾವ್ಯಕ್ಕೆ ಹೆಚ್ಚು ಕಳೆ ಬಂದಿದೆ. ಇವಿಷ್ಟನ್ನು ಬಿಟ್ಟರೆ ಹೆಕ್ಕಿಕೊಳ್ಳಬಹುದಾದ ಉಳಿದ ಕಾವ್ಯಗುಣಗಳು ಇದರಲ್ಲಿ ಕಂಡುಬರಲಾರವು. ಕವಿಯು ತನ್ನೆಲ್ಲ ಲಕ್ಷ್ಯವನ್ನು ಕಥಾ ಪೋಷಣೆಯ ಕಡೆಗೆ ತಿರುಗಿಸಿರುವುದೇ ಇದಕ್ಕೆ ಮುಖ್ಯ ಕಾರಣ.

ಕವಿಯು ಕವಿತಾಕೌಶಲ್ಯವನ್ನು ತೋರಿಸಬಹುದಾದ ಇನ್ನೊಂದು ಉದಾಹರಣೆಯೆಂದರೆ ಮೂಲದಲ್ಲಿ ಇದ್ದ—

" ಕಮಲೇ ಕ್ಯಮಲೋತ್ಪತ್ತಿಃ ಶ್ರೂಯತೇ ನ ತು ದೃಶ್ಯತೇ ।
ಬಾಲೇ ತವ ಮುಖಾಂಭೋಜಾತ್ಕಥಮಿಂದೀವರದ್ವಯಮ್ ॥'

ಎಂಬ ಸಂಸ್ಕೃತ ಶ್ಲೋಕವನ್ನು ಕವಿಯು ತುಂಬ ಜಾಣ್ಮೆಯಿಂದ—

'ಕಮಲದಿ ಕಮಲ ಪುಟ್ಟಿತೆಂಬುದ ಕೇಳಿ ಬಲ್ಲೆ ।
ರಮಣೀಮಣಿಯೆ ನಿನ್ನ ಮುಖಕಮಲದೊಳು ನೇತ್ರ
ಕಮಲ ಪುಟ್ಟಿದುವೆನಲು ॥'

ಎಂದು ಅರ್ಥಗರ್ಭಿತವಾಗಿ ಅನುವಾದಿಸಿದ್ದಾನೆ.

ಕೇವಲ ಕ್ವಚಿತ್ತಾದ ಇವಿಷ್ಟು ಕಾವ್ಯಗುಣಗಳನ್ನಷ್ಟು ಬಿಟ್ಟರೆ ಉಳಿದ ಯಾವ ಬೇರೆ ಗುಣಾಗಳನ್ನೂ ನಾವಿಲ್ಲಿ ಕಾಣಲಾರೆವು.

ಒಟ್ಟಿನಲ್ಲಿ ಹೇಳುವುದಾದರೆ 'ಮಹಾಕವಿ ಕಾಳಿದಾಸ'ನ ಬಗ್ಗೆ ಇಲ್ಲಿಯ ವರೆಗೆ ಬಂದಿರುವುವೆಲ್ಲ ದಂತಕಥೆಗಳು, ಪುರಾಣಗಳೇ ಆಗಿರುವುದರಿಂದ, ನಿರಾಶರಾದ ಅವನ ಅಭಿಮಾನಿಗಳಾದ ನಮ್ಮೆಲ್ಲರಿಗೆ, ಯಾರಾದರೂ ಪುಣ್ಯವಂತರು ನಿಜವಾದ ಇತಿಹಾಸವನ್ನು ಬೆಳಕಿಗೆ ತಂದು ನಮಗೆಲ್ಲ ಸಮಾಧಾನವನ್ನೀಯಲಿ ಎಂದು ಕೋರುತ್ತೇನೆ.

ವಾಮನನಿಗೆ

'ಅನಾಮಿಕ' ಧಾರವಾಡ

ಏಕೆ ನೀನಾತುರದಿ ಹಾರಲೆಳಸುತಲಿರುವಿ
ವ್ಯೋಮ–ವ್ಯೋಮಾಂತರದ ತಾರಕೆಗಳೆಡೆಗೆ ?
ಏಕೆ ನೀ ಭೂಮಿ ಅಂತರ್ಜಲವ ಬಾಚಿರುವಿ
ಭೀಮ ಜ್ಯೋತಿಯ ಮುಂಜಿನುಂಡೆಯೆಡೆಗೆ ?

ಬಿಂದುವಿನ ಸ್ಥಿರದಸ್ಥಿರತೆಯ ಸ್ಥಾಯಿಬಾಂಧ-
ದನುಬಂಧದೊಲು ಕಾಲ ಸಾಗುತಿಹುದು;
ಇಂದೆಂಬ ಕ್ಷಣಕೊಂದು ಹಿಂದಿರುತ ಆದಕೊಂದು
ಮುಂದಿನಾಯುಸವೆಂಬ ಮಾನವಿಹುದು.

ಆ ಅಕಲ್ಪನ ಜಲ್ಪಿಗೊಂಡು ಕಲ್ಪನೆಯುಂಟು
ಕಲ್ಪಾಂತರವ ಕೊರೆವ ಮನಸಿನಲ್ಲಿ—
ಸಂಕಲ್ಪಸಂಸಿದ್ಧಿ ಸಂಯೋಜನದಕುಂಟು
ಬಲ್ಪ ರೂವಾರಿಸುವ ಕನಸಿನಲ್ಲಿ.

ಬಿಂದುವಿಗು ಇತಿಹಾಸವೊಂದಿಹುದು ಅದರ ಬಲ
ಕುಂದುವಿಕೆಗೂ ಒಂದು ಛಂದಳುಂಟು;
ಬಂಧಕ್ಕೆ ಬದುಕಿನುತ್ತುಂಗಕ್ಕೆ ಕಲ್ಪವಿದೆ
ಒಂದು ಒಂದಾಗಿರುವುದಕ್ಕು ಬೆಲೆಯುಂಟು.

ಅವಕಾಶದಾಕಾಶ ಕಾಲ ಜೀವನಜಾಲ
ಚಿತ್ರಿತವು ಚೈತ್ರ–ವೈಶಾಖದಂತೆ;
ಸ್ಥಾಯಿ ಮಧ್ಯಮ ಉನ್ನತೋನ್ನತದ ಕಾರ್ಗಾಲ
ಯುಗಧನಕೆ ಋಣದ ಕೋಲ್ಮಿಂಚಿದಂಚೆ

ಹಿಂದಿನಾ ಬೆನ್ನಿನೊಳೆ ಬಂದ ಈ ಇಂದಿಗೂ
ನಾಳೆಯನು ರೂಪಿಸುವ ವೌನವಂತೆ—
ಇಂದಿನೀ ಯುಗದಶಾಂತತೆಗೆ ಯುಗಮಂಥನಕೆ
ನಾಳೆಗಿಳೆಯನು ಅಮೃತವಾಗಿಸುವ ಚಿಂತೆ.

ಇಂತಿರಲು ನೀನೇಕೆ ಚಿಂತೆಯಲಿ ಮುಳುಗಿರುತ
ಕಂಪಿಸುತ್ತಿರುವಿ ನಿನ್ನಜ್ಞಾನಕೆ ?
ಬಂತು ಬಾರದು ಬಂದುದಿಲ್ಲ ಬಹುದೆಂದೆನುತ
ಮಂಪರದಿ ಮುತ್ತಿರುವೆ ಸುಜ್ಞಾನಕೆ.

ನಿನ್ನ ಜನ್ಮದ ಸುಕೃತ ನಿನ್ನನಾಲಿಂಗಿಸಲು
ಬನ್ನ ತಾ ಪಡುತಿಹುದು ತವಕಬಟ್ಟು—
ವಾಮನಾಕಾರದೀ ನಿನ್ನನ್ನು ಜಗವಳೆವ
ತ್ರಿವಿಕ್ರಮವನಾಗಿಸಲು ಜೀವಕೊಟ್ಟು.

ಕಾಯುತಿದೆ ಕಾಯುತಿದೆ ಕಾಲತಾ ಕಾಯುತಿದೆ.
ಕಣ್ಣನ್ನು ಮುಂದೆ ಮುಂದಕ್ಕೆಚಾಚಿ—
ವಿಾಯುತಿದೆ ವಿಾಯುತಿದೆ ನಿನ್ನತನ ವಿಾಯುತಿದೆ
ಮಣ್ಣಲ್ಲಿ ಮೇಣಮೃತವನ್ನು ಬಾಚಿ.

ಎಂದೆ ನೀ ತವಿಸದಿರು ತಪಿಸದಿರು ಓ ಮನವೆ,
ಇಂತಿಲ್ಲ ನಾಳೆ ಆದು ಬಹುದು ನಿನಗೆ

ಜೀವನಸಂದೇಶ

(ರೇಡಿಯೋ ನಾಟಕ)*

ನಾಟಕದ ಅವಧಿ : ೩೦ ನಿಮಿಷಗಳು.

ಮೂಲ ಲೇಖಕರು :
ಪ್ರೊ. ಕೈಲಾಸ ಚಂದ್ರದೇವ ಬೃಹಸ್ಪತಿ

ಅನುವಾದಕ :
ಶ್ರೀ. ಜಿ. ಜಯಸಿಂಹರೆಡ್ಡಿ 'ಹರಿಜೀತ್' ಇಂದೂರು, (ಮ. ಪ್ರ.)

ನಾಟಕದ ಪಾತ್ರಗಳು :

ಪುರುಷ ಪಾತ್ರಗಳು :

೧. ಶ್ರೀ ಶಂಕರಾಚಾರ್ಯ
೨. ಪದ್ಮಪಾದ
೩. ಮಂಡನಮಿಶ್ರ (ಸುರೇಶ್ವರ).
೪. ರಾಜಾ ಅಮ್ಮುಕ
೫. ಕಾಪಾಲಿಕ

ಸ್ತ್ರೀ ಪಾತ್ರಗಳು :

೧. ಭಾರತಿ
೨. ತರಳಿಕೆ
೩. ಚಿತ್ರಾಂಗದೆ

೧

(ಶಂಕರಾಚಾರ್ಯರು, ಪದ್ಮಪಾದ ಮತ್ತು ತರಳಿಕೆ)

[ಸ್ಥಾನ : ಮಾಹಿಷ್ಮತಿ ಮತ್ತು ನರ್ಮದೆಯ ಸಂಗಮ]

ಶಂಕರಾಚಾರ್ಯ :— ದೇವಿ, ನಮಗೆ ಆಚಾರ್ಯ ಮಂಡನರ ಮನೆಯ ದಾರಿ ತೋರಿಸುವೆಯಾ ?

ತರಳಿಕೆ :— ಓ! ತಮಗೆ ಮಂಡನಮಿಶ್ರರ ಮನೆ ಗೊತ್ತಿಲ್ಲವೆ ? ಸಮಸ್ತ ಭಾರತದಲ್ಲಿ ಅವರ ಪಾಂಡಿತ್ಯ.....

ಶಂಕರ :— ಆಚಾರ್ಯ ಮಂಡನರ ಮಾಹಾತ್ಮ್ಯದಿಂದ ಅಕಸ್ಮಿತರಾಗಿಯೇ ನಾವೀ ನರ್ಮದಾ ಮತ್ತು ಮಾಹಿಷ್ಮತಿಯ ಸಂಗಮಕ್ಕೆ ಬಂದಿದ್ದೇವೆ.....

ತರಳಿಕೆ :— ಹಾಗಾದರೆ ತಾವು ಪರದೇಶಿಗರೊ ?....ಹಾಗಿದ್ದರೆ ....ತಮ್ಮ ಪರಿಚಯವನ್ನೀಯುವ ಕೃಪೆ ಮಾಡುವಿರಾ ?

ಶಂಕರ :— ನನ್ನನ್ನು ಶಂಕರನೆನ್ನುವರು. ನಾನು ಆಚಾರ್ಯ ಮಂಡನರ ದರ್ಶನದ ಉತ್ಕಂಠೆ ... ...

ತರಳಿಕೆ :— ಸಂಗಮದಿಂದ ನೀರುಕೊಂಡೊಯ್ಯಲು ಬಂದಿದ್ದೆ; ನಡೆಯಿರಿ ನಾನತ್ತಕಡೆಯೇ ಹೊರಡುತ್ತಿದ್ದೇನೆ.

ಶಂಕರ :— ಇಲ್ಲಿಗೆಷ್ಟುದೂರವಿದೆ, ಆಚಾರ್ಯರ ನಿವಾಸ ?

ತರಳಿಕೆ :— ಅದೋ, ಎದುರಿಗಿರುವುದೆ ! ಆಚಾರ್ಯ ಮಂಡನರ ಮಾಹಾತ್ಮ್ಯದಿಂದ ಈ ಮಾಹಿಷ್ಮತಿ ಧನ್ಯಳು. ಪಂಜರಗಳಲ್ಲಿ ಬೆಳೆದಿರುವ ಮೈನಾಗಳೂ ಆಚಾರ್ಯರ ಪ್ರಭಾವದಿಂದ, ಸ್ವಪಂಚದ ನಿತ್ಯತೆ ಮತ್ತು ಅನಿತ್ಯತೆಯ ನೆಲೆ ವಿಚಾರ ಮಾಡುತ್ತಿರುತ್ತವೆ....

ಪದ್ಮಪಾದ :— (ನಗುತ್ತಾನೆ).

ಶಂಕರ :— ಏಕೆ ನಕ್ಕೆ ಪದ್ಮಪಾದ ?

ಪದ್ಮಪಾದ :— ಮಂಡನಮಿಶ್ರರ ಮೈನಾಗಳ ಪಾಂಡಿತ್ಯವನ್ನು... ...

ತರಳಿಕೆ : — (ವ್ಯಂಗ್ಯಪೂರ್ವಕವಾಗಿ ಶಂಕರರೊಂದಿಗೆ) ತಮಾ[illegible] ಸಂಗಾತಿ, ಆ ಮೈನಾಗಳ ಪಾಂಡಿತ್ಯವನ್ನು ಈಗ ಸ್ವತಃ ನೋಡುವರು.

ಪದ್ಮಪಾದ :— ಹಗಲಿರುಳೂ ಕರ್ಮಕಾಂಡಿಗಳ ಬಾಯಿಂದ 'ಜಗಧ್ಮ್ರುವಂ ಸ್ಯಾತ್, ಜಗಧ್ಮ್ರುವಂ ಸ್ಯಾತ್' ಎಂಬುದನ್ನು ಕೇಳಿ ಕೇಳಿ, ಮೈನಾಗಳೂ ಈ ವಾಕ್ಯಗಳನ್ನು ಕಂಠಸ್ಥಗೊಳಿಸುವುದರಲ್ಲಿ ತೊಡಗಿರಬಹುದೆಂದು ನನಗೆ ನಂಬಿಕೆಯಿದೆ, ದೇವಿ! ಒಂದುವೇಳೆ ಮಾಹಿಷ್ಮತಿಯಲ್ಲಿ ಈ ಬಾಯಿಪಾಠದ ಹೆಸರೇ ಪಾಂಡಿತ್ಯವೆನಿಸಿದ್ದರೆ ....

ಶಂಕರ :— ಶಾಂತಂ ಪಾಪಂ! ಸನ್ಯಾಸಿಗೆ ವ್ಯಂಗ್ಯ ತೋಭಿಸುವುದಿಲ್ಲ ಪದ್ಮಪಾದ !

---

* ಲಖನೌ ಆಕಾಶವಾಣಿ ಕೇಂದ್ರದಿಂದ 'ಭಾರತ ಭಾರತಿ' ಎಂಬ ವಿಶೇಷ ಶಾಖೆಯಿಂದ ಕಾರ್ಯಕ್ರಮವಾದ ಮೂಲ ಹಿಂದೀ ನಾಟಕದ ಅನುವಾದವಿದು. — ಲೇ.

ತರಳಿಕೆ :— ಆರ್ಯ ಮಂಡನರ ದರ್ಶನ ಪಡೆಯುವವರಿಗೂ ಜನರಿಗೆ ಈ ಬಗೆಯ ಮತಿಭ್ರಮಣೆ ಕಾಡುತ್ತದೆ.

ಶಂಕರ :— ಆಚಾರ್ಯ ಮಂಡನರನ್ನು ಅವಮಾನಿಸುವುದು ಪದ್ಮಪಾದನ ಗುರಿಯಾಗಿರಲಿಲ್ಲ. ತಾವು ಶಾಂತರಾಗಿರಿ.

ತರಳಿಕೆ :— (ಕ್ರೋಧ) ಸಾಕ್ಷಾತ್ ಬ್ರಹ್ಮನ ಅವತಾರವಾದ ಆ ಮಂಡನರನ್ನು ಅವಮಾನಿಸುವ ಸಾಹಸವಾದರೂ ಯಾರಲ್ಲಿದೆ ?

ಪದ್ಮಪಾದ :— ಕ್ಷಮಿಸು ದೇವಿ, ಆಚಾರ್ಯ ಮಂಡನ.....

ತರಳಿಕೆ :— ಅಧೀರನಾಗಬೇಡ ಯತಿಶ್ರೇಷ್ಠ ! ಅನೇಕ ಬೌದ್ಧ ಭಿಕ್ಷುಗಳಿಗೆ ಮತ್ತು ಅದ್ವೈತವಾದಿ ಸಂನ್ಯಾಸಿಗಳಿಗೆ—ಮಿಶ್ರ ದಂಪತಿಗಳ ಎದುರಿಗೆ—ತಲೆತಗ್ಗಿಸಿ ತಮ್ಮ ವಸನ, ಪಾತ್ರೆ, ಕಾವಿ ಮತ್ತು ದಂಡಕ್ಕೆ ತಿಲಾಂಜಲಿಯನ್ನೀಯಬೇಕಾಗಿ ಬಂದಿದೆ.

ಶಂಕರ :— ಆಚಾರ್ಯಮಿಶ್ರರ ಸಹಧರ್ಮಿಣಿ ಆರ್ಯೆ ಭಾರತಿಯಂತಹ ದೇವಿಯರಿದುರಿಗೆ ಶ್ರದ್ಧಾವನತವಾಗುವ ಮಸ್ತಕಗಳೇ ಧನ್ಯ. ತಾಯಿ ಭಾರತಿ ನಮಗೆ ಪ್ರಣಮ್ಯರು.

ತರಳಿಕೆ :— ನಾನು ಆರ್ಯೆ ಭಾರತಿಯ ಸಖಿ ವತ್ತು ಸೇವಕಿ—ತರಳಿಕೆ. ಆಚಾರ್ಯರ ಪ್ರಾಸಾದದ ದ್ವಾರ ಬಂದಿತು. ತಾಳಿ, ನಾನು ಒಳಗೆ ಹೋಗಿ ತಮ್ಮ ಆಗಮನದ ಸೂಚನೆಯನ್ನು ಅರುಹುತ್ತೇನೆ.

(ನಿರ್ಗಮನ)

ಭಾರತಿ :— ಭಾರತಿಯು ಅಭಿವಂದಿಸುವಳು.

ಶಂಕರ :— ಪರಬ್ರಹ್ಮನು ಸರ್ವರಿಗೂ ಕಲ್ಯಾಣವನ್ನುಂಟು ಮಾಡಲಿ. ಆರ್ಯೆ ಭಾರತಿಯ ದರ್ಶನದಿಂದ ನಾವು ಧನ್ಯರಾದೆವು.

ಭಾರತಿ :— ಇವರೇ ತಮ್ಮ ಶಿಷ್ಯ ಪದ್ಮಪಾದರು ?

ಶಂಕರ :— ತರಳಿಕೆಯು ಪ್ರಸ್ತಾಪಿಸಿರಬೇಕು. ಆಕೆ ಈತನ ಮಾತುಗಳಿಂದ ಸ್ವಲ್ಪ ಭ್ರಮೆಯಲ್ಲಿ ಬಿದ್ದಿದ್ದಾಳೆ.

ಭಾರತಿ :— (ನಕ್ಕು) ತರಳಿಕೆಯೇ ಏಕೆ ? ತಮ್ಮ ಅಭಿಪ್ರಾಯದಲ್ಲಿ ಜೀವಮಾತ್ರರೂ ಮಾಯೆಯಲ್ಲಿ ಬಿದ್ದಿದ್ದಾರೆ.

ಶಂಕರ :— (ನಕ್ಕು) ಆರ್ಯೆಗೆ ವಾಗ್ವಿಲಾಸ ಶೋಭಿಸುವುದು. ಆಚಾರ್ಯರು ನಾನು ಬಂದಿರುವುದನ್ನರಿತಿದ್ದಾರೆಯೆ ?

ಭಾರತಿ :— ಆರ್ಯಪುತ್ರನಿಗೆ ತಮ್ಮ ಶುಭಾಗಮನದ ಪರಿಚಯವಿದೆ. ಅವರು ಶ್ರಾದ್ಧಕರ್ಮದಲ್ಲಿ ವ್ಯಸ್ತರಾಗಿದ್ದಾರೆ .....

ಶಂಕರ :— (ನಕ್ಕು) ಶ್ರಾದ್ಧಸ್ಥಳಕ್ಕೆ ಸಂನ್ಯಾಸಿಯ ಪ್ರವೇಶ..

ಭಾರತಿ :— (ನಕ್ಕು) ಆ ಮಾತು ಹೋಗಲಿ ಬಿಡಿ. ನಾವು ಗೃಹಸ್ಥರು. ಆರ್ಯಪುತ್ರನ ಪರವಾಗಿ ಅವರ ಈ ಸೇವಕಿ ಅತಿಥಿಗಳ ಸ್ವಾಗತಕ್ಕೋಸ್ಕರ ಸಿದ್ಧಳಾಗಿದ್ದಾಳೆ.

ಶಂಕರ :— ಆಚಾರ್ಯ ಮಂಡನರ ಆದರ್ಶ ಅರ್ಧಾಂಗಿನಿಯ ಆಶ್ರಯ, ಈ ಸಂನ್ಯಾಸಿಗಳಿಗೆ ಮಾತೆಯ ಮಮತಾಪೂರ್ಣ ಮಡಿಲು; ಮತ್ತು ಗೃಹಸ್ಥರಿತ್ರ ಒಂದೊಂದು ಹಿಡಿ ಅನ್ನವೇ ಈ ಯತಿಗಳ ಜೀವನ.

ಭಾರತಿ :— ಲೋಕಕಲ್ಯಾಣಕ್ಕೋಸ್ಕರ ಕೆಲಸಮಾಡುವ ಸಂನ್ಯಾಸಿಗಳ ಎದುರಿಗೆ ಭಾರತಿ ನತಮಸ್ತಕಳು ಆತಿಥ್ಯವನ್ನು ಸ್ವೀಕರಿಸಿ. ಆರ್ಯಪುತ್ರನೊಡನೆ ಯಥಾಸಮಯದಲ್ಲಿ ಸಮಾಗವ್ ವಾಗುವುದು.

೨

(ಭಾರತಿ ಮತ್ತು ತರಳಿಕೆ)

ತರಳಿಕೆ :— ಈ ಪದ್ಮಪಾದನು ಅತ್ಯಂತ ಅಭಿಮಾನಿ ಎಂದು ತೋರುತ್ತದೆ. ಶಂಕರರೂ ಅತನ ಗುರುವಾಗಿದ್ದಾರೆ.

ಭಾರತಿ :— ಹಾಗಲ್ಲ ಸಖಿ, ಶಂಕರಾಚಾರ್ಯರು ಈ ಯುಗದ ಮಹಾವಿಭೂತಿಗಳು. ಕೇವಲ ಹದಿನಾರು ವರ್ಷದ ವಯಸ್ಸಿನಲ್ಲಿಯೇ ಇಷ್ಟು ದೊಡ್ಡ ಜ್ಞಾನಿ ಮತ್ತು ಯೋಗಿಯಾಗಿರುವ ವ್ಯಕ್ತಿಯ ಜನ್ಮವು, ಯಾವುದೋ ಒಂದು ಹಿರಿಯ ಕಾರ್ಯಕ್ಕೋಸ್ಕರವಾಗಿದೆ.

ತರಳಿಕೆ :— ಈ ತಲೆದೋಳಿಸಿದವರಿನ್ಯಾವ ಹಿರಿಯ ಕಾರ್ಯ ಸಾಧಿಸುವರು ?

ಭಾರತಿ :— ಭಾರತದ ಸಿಂಧೂಪ್ರದೇಶದ ಮೇಲೆ ವಿಧರ್ಮಿಗಳ ಅಧಿಕಾರವಾಗಿಬಿಟ್ಟಿದೆ. ಸನಾತನದ ವಿಭಿನ್ನ ಅಂಗಗಳಲ್ಲಿ ಅವಿಶ್ವಾಸ, ಅಶ್ರದ್ಧೆ ಮತ್ತು ಸ್ವಾರ್ಥಗಳು ಮನೆಮಾಡಿಕೊಂಡಿವೆ ದೇವಮಂದಿರಗಳ ವಿನಾಶವು ಜನಸಾಧಾರಣವನ್ನು ಹತಬುದ್ಧಿಗೊಳಿಸಿದೆ. ಬರ್ಬರ ದಾಳಿಗಾರರು ಕನ್ಯಾಕುಬ್ಜದ ಪ್ರದೇಶದ ವರೆಗಿನ ಭೂಭಾಗವನ್ನು ಮೆಟ್ಟಿ ಪ್ರಳಯದೃಶ್ಯವನ್ನು ಕಾಣಿಸುತ್ತಿದ್ದಾರೆ. ನಾವು ದಾರಿತಪ್ಪಿ ತೊಳಲಾಡುತ್ತಿದ್ದೇವೆ; ಮತ್ತು ನಮ್ಮ ಜೀವನದ ಒಂದು ಸಸಾರ ಭಾಗವು ನಾಶವಾಗಿ, ನಾವು ಕೇವಲ ಟೊಳ್ಳು ಭಾಗವನ್ನೇ ತತ್ತ್ವವೆಂದು ತಿಳಿದಿದ್ದೇವೆಂದು ತೋರುತ್ತದೆ.

ತರಳಿಕೆ :— ಇಂದು ದೇವಿಯ ವಿಚಾರ ಸ್ವಲ್ಪ.....

ಭಾರತಿ :— ಇಂದೇ ಅಲ್ಲ ಸಖಿ, ಈ ವಿಚಾರ ನನ್ನ ಮನದಲ್ಲಿ ಅನೇಕ ವರ್ಷಗಳಿಂದ ಬೇರೂರಿದೆ. ಯಾವ ಜಾತಿ ಪ್ರಪಂಚಕ್ಕೆ ದೃಷ್ಟಿಯಿತ್ತು ತನ್ನ ವಿಚಾರಸಾಗರದಲ್ಲಿ ಅನೇಕ ಮತ-ಮತಾಂತರಗಳ ನದಿಗಳನ್ನು ವಿಲೀನಗೊಳಿಸಿಕೊಂಡಿತೊ, ಯಾವ ಜಾತಿ ವಿದೇಶೀಯರನ್ನೂ ಅರಗಿಸಿಕೊಂಡು ಆತ್ಮಸಾತ್ ಗೊಳಿಸಿತೊ, ಆ ಜಾತಿ ಏಕೆ ದಲಿತವಾಗುತ್ತಿದೆ ? ಅಗತ್ಯಗಳಲ್ಲಿ ನಾವು ಕೆಲವನ್ನು ಕಳೆದುಕೊಂಡಿದ್ದೇವೆ. ನಮ್ಮ ದುರ್ಬಲತೆಯ ಕಾರಣವನ್ನು ನಾವು ಕಂಡು ಹಿಡಿಯಲೇ ಬೇಕು.

ತರಳಿಕೆ :— ಹಾಗಾದರೆ ನಿಮ್ಮ ಅಭಿಪ್ರಾಯ—ಶಂಕರರು ಈ ವ್ಯಾಧಿಗೆ ಕಾರಣ ಕಂಡುಹಿಡಿಯುವರೆಂದೆ ?

ಭಾರತಿ :— ಹೌದು.

ತರಳಿಕೆ :— ಆಚಾರ್ಯ ಮಂಡನಮಿತ್ರರು ಕಾರಣ ಕಂಡು ಹಿಡಿಯದ ವ್ಯಾಧಿಯು.....?

ಭಾರತಿ :— ಆರ್ಯಪುತ್ರನ ಎದುರಿಗೆ ಈ ಪ್ರಶ್ನೆ ಏಳುವುದಿಲ್ಲ.

ಎಂದುಕೊಂಡೆಯಾ? ನಮ್ಮಿಬ್ಬರಲ್ಲಿ ಬಹುಶಃ ಇದೇ ವಿಷಯದಲ್ಲಿ ಜರ್ಜೆರಿಯಾಗಿದೆ.

ತರಳಿಕೆ :— ಈಗ?

ಭಾರತಿ:— ಅರ್ಯಪುತ್ರನ ವಿದ್ವತ್ತೆಯ ವಿಚಾರದಲ್ಲಿ ಯಾರಿಗೆ ತಾನೆ ಸಂದೇಹವಿದೆ? ಆದರೆ ಶಾಸ್ತ್ರಗಳ ಜ್ಞಾನವೇ ಉಪಯೋಗಿಯಾಗುವುದಿಲ್ಲ. ಅವುಗಳಿಗನುಕೂಲವಾಗಿ ಆಚರಣೆಯ ನಿಶ್ಚಿತ ಜ್ಞಾನ.....

ತರಳಿಕೆ:— ಶಾಸ್ತ್ರಗಳ ವಾಸ್ತವಿಕ ಅರ್ಥವನ್ನು ಆಚಾರ್ಯರೂ ದೇವಿಯೂ ಅರಿತಿಲ್ಲವೆ? ತಮ್ಮಂತಹ ಆದರ್ಶ ದಂಪತಿಗಳ ಆಚರಣೆಯೂ ಶಾಸ್ತ್ರಸಮ್ಮತವಲ್ಲವೆ?

ಭಾರತಿ:— ನಾವು ಮಾಡುವುದನ್ನೆಲ್ಲ ಶಾಸ್ತ್ರಾನುಕೂಲವೆಂದು ತಿಳಿದೇ ಮಾಡುತ್ತೇವೆ; ಆದರೆ ನಾವು ಶಾಸ್ತ್ರಾನುಕೂಲವೆಂದು ತಿಳಿಯುವ ದೃಷ್ಟಿ ನಿಜವಾಗಿಯೂ ಶಾಸ್ತ್ರಾನುಕೂಲವೊ ಅಲ್ಲವೊ – ನಾವು ಶಾಸ್ತ್ರಗಳ ಅರ್ಥವನ್ನರಿಯುವುದರಲ್ಲಿ ತಪ್ಪು ಮಾಡುತ್ತಿದ್ದೇವೆಯೆ— ಎಂಬುದೇ ಪ್ರಶ್ನೆ.

ತರಳಿಕೆ:— ಇದೇನೋ ವಿಲಕ್ಷಣವಾಗಿದೆ.

ಭಾರತಿ:— (ನಕ್ಕು) ಇದರಲ್ಲಿ ವಿಲಕ್ಷಣತೆಯೇನಿದೆ? ಒಂದಾದ ನಂತರ ಇನ್ನೊಂದರಂತೆ ಕಳೆಯುತ್ತಿರುವ ಈ ಶತಾಬ್ದಿಗಳು ಯಾವಾಗಲೂ ಮನುಷ್ಯನ ವಿಕಾಸವನ್ನೇ ಮಾಡುವುದಿಲ್ಲ. ಅಗಾಗ ಅವನನ್ನು ಸಿಲುಕಿಸುವುದೂ ಉಂಟು.

ತರಳಿಕೆ:— ಅದು ಹೇಗೆ?

ಭಾರತಿ:— ಮರೆತೆಯೊ ಗೀತೆಯ ವಾಕ್ಯವನ್ನು? ಕೃಷ್ಣನು ಅರ್ಜುನನಿಗೆ 'ನಾನೀ ಜ್ಞಾನವನ್ನು ವಿವಸ್ವಾನನಿಗಿತ್ತೆ, ಅವನು ಮನುವಿಗೆ ಕಲಿಸಿದನು, ಇಕ್ಷ್ವಾಕುವು ಮನುವಿನಿಂದ ಕಲಿತನು' ಎಂದು ಹೇಳಿದ್ದಾನೆ. ಪರಂಪರಾಪ್ರಾಪ್ತವಾದ ಈ ಜ್ಞಾನ, ಬಹು ಕಾಲದಿಂದ ಪೃಥ್ವಿಯ ಮೇಲೆ ಲುಪ್ತವಾಗಿ ಬಿಟ್ಟಿದೆ.

ತರಳಿಕೆ:— ಹಾಗಾದರೆ?

ಭಾರತಿ:— ಈ ಯುಗದಲ್ಲಿ ಆ ಜೀವನದೃಷ್ಟಿ ಪುನಃ ನಾಶವಾಗಿದೆಯೆಂದು ತೋರುತ್ತದೆ. ಶಂಕರರು ಬ್ರಹ್ಮಸೂತ್ರ, ಗೀತೆ ಮತ್ತು ಉಪನಿಷತ್ತಿನ ಮೇಲೆ ಭಾಷ್ಯ ಬರೆದಿದ್ದಾರೆ. ಅರ್ಯಪುತ್ರನ ಗುರುಗಳಾದ ಆಚಾರ್ಯ ಕುಮಾರಿಲಭಟ್ಟರೂ ಆಚಾರ್ಯ ಶಂಕರರನ್ನು ಪ್ರಶಂಸಿಸಿದ್ದಾರೆ. ನನ್ನ ದೈವೃತವಾದವು ನಿಜವಾಗಿಯೂ ನೋದದ ವಾಸ್ತವಿಕ ಅರ್ಥವಲ್ಲವೆ?

ತರಳಿಕೆ:— ದೊಡ್ಡ ದೊಡ್ಡ ಅದ್ವೈತವಾದಿಗಳೂ ಅರ್ಯನ ಎದುರಿಗೆ ನಿರುತ್ತರರಾಗುವುದನ್ನು ಕಂಡಿದ್ದೇನೆ.

ಭಾರತಿ:— ಕೇವಲ ಶಾಸ್ತ್ರಾರ್ಥದಲ್ಲಿಯೇ ಸೋಲು-ಗೆಲವಿನ ಪ್ರಶ್ನೆಯಿಲ್ಲ. ಸತ್ಯದ ವಾಸ್ತವಿಕ ಶೋಧನೆಯೇ ಪ್ರಶ್ನೆ. ತತ್ತ್ವ ಬೋಧವನ್ನು ಎದುರಿಟ್ಟುಕೊಂಡೇ 'ವಾದ' ವಾಗಬೇಕು. ಆದರೆ ಶಾಸ್ತ್ರಾರ್ಥದಲ್ಲಿ ವ್ಯಕ್ತಿಯ ಪ್ರತಿಭೆ ಗೆಲ್ಲುತ್ತದೆ. ಅರ್ಯಪುತ್ರನು ಸಾವಿರಾರು ಶಾಸ್ತ್ರಾರ್ಥಗಳಲ್ಲಿ ವಿಜಯ ಪಡೆದಿರುವುದು ಅವರ ವಿಲಕ್ಷಣ ಪ್ರತಿಭೆಯ ಪರಿಚಯವನ್ನೀಯುವುದೇ ಹೊರತು, ವಾಸ್ತವಿಕ ಸತ್ಯ-ಜ್ಞಾನದ ಪರಿಚಯವನ್ನಲ್ಲ. ಒಂದು ವೇಳೆ ಅವರ ಪ್ರತಿಪಕ್ಷಿ ಅವರಿಗಿಂತಲೂ ಹೆಚ್ಚು ಪ್ರತಿಭಾಶಾಲಿಯಾಗಿದ್ದರೆ, ಆತನು ತನ್ನ ಮಾತನ್ನು ಒಪ್ಪುವಂತೆ ಮಾಡುವನು. ಆತನಿಗಿಂತಲೂ ಹೆಚ್ಚು ಪ್ರತಿಭಾಶಾಲಿ ತನ್ನ ಕಥನವೇ ನಿಜವೆಂದು ತೋರಿಸುವನು. ತರ್ಕಕ್ಕೆ ಕೊನೆಯೇ ಇಲ್ಲ

ತರಳಿಕೆ:— ಆಚಾರ್ಯರೊಂದಿಗೆ ಶಂಕರರ ಶಾಸ್ತ್ರಾರ್ಥವಾಗುವುದೆ?

ಭಾರತಿ:— ಇದು ಅತ್ಯಗತ್ಯವಾದುದು. ಆದರೆ ಅರ್ಯಪುತ್ರನೂ ದುರಾಗ್ರಹಿಯಲ್ಲ; ಶಂಕರಾಚಾರ್ಯರೂ ಹಟವಾದಿಗಳೆಂದು ತೋರುವುದಿಲ್ಲ. ನಾನು ಪರಿಚಯದ ಸಮಯದಲ್ಲಿಯೇ ವ್ಯಂಗ್ಯವಾಡಿದ್ದೆನು. ಶಂಕರಾಚಾರ್ಯರು ನಕ್ಕು ಮುಗುಚಿಹಾಕಿದ್ದರು. ಭಾರತದ ಈ ಎರಡು ಮಹಾವಿಭೂತಿಗಳು ಯಾವುದಾದರೊಂದು ನಿರ್ಣಯಕ್ಕೆ ಬಂದು ತಲುಪಿದರೆ, ನಿಸ್ಸಂದೇಹವಾಗಿ ಜಗತ್ತಿನ ಕಲ್ಯಾಣವಾಗುವುದು.

ಶ

(ಶಂಕರರು, ಮಂಡನ ಮತ್ತು ಭಾರತಿ)

ಮಂಡನ:— ತಮಗಾವ ಕಷ್ಟವೂ ಆಗಲಿಲ್ಲ ತಾನೆ ಯತಿಶ್ರೇಷ್ಠ?

ಶಂಕರ:— ಮಂಡನ ವಿಶ್ವರಂತಹ ಸದ್ಗೃಹಸ್ಥರ ಆತಿಥ್ಯವೆಂದ ಬಳಿಕ ಯಾರಿಗೆ ತಾನೇ ಕಷ್ಟವಾದೀತು? ಅಲ್ಲದೆ ಭಾರತಿಯ ರೂಪದಲ್ಲಿ ಸಾಕ್ಷಾತ್ ಸರಸ್ವತಿಯೇ ವಿರಾಜಮಾನವಾಗಿರುವಲ್ಲಿ .....

ಭಾರತಿ:— (ನಕ್ಕು) ಇದು ಆಚಾರ್ಯ ಶಂಕರರ ಶಾಲೀನತೆ. ತಾವು ತಮ್ಮ ವಾಗ್ಧಾರೆಯಿಂದ ಈ ಕುಟೀರವನ್ನು ಪವಿತ್ರಗೊಳಿಸಿದ್ದೀರಿ ಅತಿಥಿಯಲ್ಲಿ ಎಲ್ಲ ದೇವತೆಗಳೂ ನೆಲೆಸಿರುತ್ತಾರೆ. ಅಲ್ಲದೆ ತಮ್ಮಂತಹ ಅತಿಥಿಗಳು ಭಾಗ್ಯಶಾಲಿಗಳಿಗೇ ಸಿಗುವುದು ಹೇಳಿ, ಶಾವೇಕೆ ಕಷ್ಟ ತೆಗೆದುಕೊಂಡಿರಿ?

ಶಂಕರ:— ಸಂನ್ಯಾಸಿಯ ಯಾತ್ರೆಗೆ ಕಾರಣ ಭಿಕ್ಷೆ. ಅದನ್ನು ಪಡೆಯಲು ಬಂದಿದ್ದೇನೆ.

ಮಂಡನ: — ಅಪ್ಪಣೆ ಕೊಡಿ, ನಿನು ಸೇವೆ ಮಾಡಬಲ್ಲೆನು?

ಶಂಕರ:— ನಿಮ್ಮನ್ನು ಛಲದಿಂದ ವಚನಕ್ಕೆ ಬದ್ಧರನ್ನಾಗಿ ಮಾಡುವುದು ನನಗೆ ಇಷ್ಟವಿಲ್ಲ. ನಾನು ಬ್ರಹ್ಮಸೂತ್ರದ ಮೇಲೆ ಭಾಷ್ಯದ ರಚನೆ ಮಾಡಿದ್ದೇನೆ. ತಾವದರ ಮೇಲೆ 'ವಾರ್ತಿಕ' ವನ್ನು ಬರೆಯಬೇಕೆಂದು ನನ್ನಿಚ್ಛೆ ಆಚಾರ್ಯ ಕುಮಾರಿಲರ ಸಮ್ಮತಿಯ ಮೇರೆಗೆ ನಾನಿಲ್ಲಿಗೆ ಬಂದಿದ್ದೇನೆ.

ಮಂಡನ: — ಗುರುದೇವನ ಅಣತಿಯನ್ನು ಪಾಲಿಸುವೆನು; ಆದರೆ ನನಗೆ ಅಸಕ್ತಿಯಿಲ್ಲದ ಅದ್ವೈತವಾದದ ಮೇಲೆ.... ...

ಶಂಕರ:— ಅದ್ವೈತವಾದದ ಮೇಲೆ ಅನಾಸಕ್ತಿಯಿರದಂತೆ

ಮಾಡಲು ಯತ್ನಿಸುತ್ತೇನೆ. ಹಾಗಾದ ಬಳಿಕವೇ ತಾವು 'ವಾರ್ತಿಕ'ವನ್ನು ಬರೆಯಬಹುದು.

ಭಾರತಿ:— ವೇದಬಾಹ್ಯವಾದ ಅದ್ವೈತವಾದದಲ್ಲಿ ಆರ್ಯ-ಪುತ್ರನ ಆಸಕ್ತಿಯುಂಟಾಗುವುದು ಅಸಂಭವ.

ಶಂಕರ:— ಅದ್ವೈತವಾದವು ವೇದಬಾಹ್ಯವಲ್ಲ!

ಮಂಡನ— ಹಾಗಿದ್ದಲ್ಲಿ ನಾನು ಸಂನ್ಯಾಸವನ್ನು ಸ್ವೀಕರಿಸುತ್ತೇನೆ.

ಶಂಕರ:— ಬಹಳ ಸಂತಸದ ಸಂಗತಿ. ಲೋಕದಲ್ಲಿ ಹರಡಿರುವ ಅನೇಕ ಅವ್ಯವಸ್ಥೆಗಳನ್ನು ದೂರವಾಡಲು, ಇಂದು ತಮ್ಮ ಜೀವನದ ಪ್ರತಿಯೊಂದು ಕ್ಷಣವನ್ನೂ ಲೋಕಕಲ್ಯಾಣಕ್ಕೋಸ್ಕರ ಮೀಸಲಾಗಿಡುವ ಅನೇಕ ವಾಸನಾರಹಿತ ಸಂನ್ಯಾಸಿಗಳ ಅವಶ್ಯಕತೆಯಿದೆ. ತಮ್ಮ ಸಂನ್ಯಾಸಗ್ರಹಣವು ಈ ದಿಶೆಯಲ್ಲಿ, ಕೇವಲ ತಮ್ಮ ವ್ಯಕ್ತಿಗತ ಲೌಕಿಕಕಲ್ಯಾಣ ಅಥವಾ ಸ್ವರ್ಗವಾಪ್ತಿಗೋಸ್ಕರ ಯಜ್ಞಾದಿ ಕರ್ಮಗಳನ್ನು ಮಾಡುವ ಅನೇಕ ಬ್ರಾಹ್ಮಣರಿಗೆ ಆದರ್ಶವಾಗುವುದು.

ಮಂಡನ:— ಸ್ವಲ್ಪ ಸ್ಪಷ್ಟಪಡಿಸುವ ಅನುಗ್ರಹ ಮಾಡಬೇಕು.

ಶಂಕರ:— ದ್ವೈತಬುದ್ಧಿ ಜನ ಸಾಧಾರಣತೆಯಲ್ಲಿ ಸ್ವಾರ್ಥಕ್ಕೆ ಜನ್ಮವೀಯುತ್ತದೆ. ವ್ಯಕ್ತಿ ತನ್ನನ್ನು ಅನ್ಯ ಜೀವಿಗಳಿಂದ ಬೇರ್ಪಡಿಸಿಕೊಂಡು, ತನ್ನ ಕಲ್ಯಾಣದ ವಿಷಯದಲ್ಲಿ ಚಿಂತಿಸುವನು. ತನಗೋಸ್ಕರವೇ ಲೌಕಿಕ ಸಂಪತ್ತನ್ನಿಚ್ಛಿಸುತ್ತಾನೆ. ವ್ಯಕ್ತಿಯ ಈ ದೃಷ್ಟಿಕೋಣ ಸಾಮಾಜಿಕತೆಗೆ ವಿರೋಧಿಯಾಗಿದೆ.

ಮಂಡನ— ಹಾಗಾದರೆ ಅದ್ವೈತವಾದಿ?

ಶಂಕರ— ಅದ್ವೈತವಾದಿಯು ದೃಷ್ಟಿಯಲ್ಲಿ ಸಮಸ್ತ ಜಗತ್ತೂ ಆ ಅವ್ಯಕ್ತಬ್ರಹ್ಮನ ವ್ಯಕ್ತಸ್ವರೂಪವಾಗುವುದರಿಂದ, ಅವನ ದೃಷ್ಟಿಯಲ್ಲಿ ಜಗತ್ತಿನ ಕಲ್ಯಾಣವೇ ಅವನ ಕಲ್ಯಾಣವಾಗಿರುತ್ತದೆ. ಏಕೆಂದರೆ, ಅವನು ಸ್ವತಃ ಬ್ರಹ್ಮನಿಂದ ಸ್ವಲ್ಪವೂ ಬೇರೆಯಲ್ಲ. ಈ ದೃಷ್ಟಿ–ವ್ಯಕ್ತಿಯು ಲೋಕಸಂಗ್ರಹದಲ್ಲಿ ಪ್ರವೃತ್ತನಾಗುವಂತಹ ಪರಿಣಾಮವನ್ನೀಯುವ — ಜೀವನದೃಷ್ಟಿಯನ್ನು ಮನುಷ್ಯನಿಗೆ ಕೊಡುತ್ತದೆ. ಬ್ರಹ್ಮನ ವ್ಯಕ್ತರೂಪವಾದ ಜಗತ್ತಿನ ಸೇವೆಯೂ ಬ್ರಹ್ಮನ ಉಪಾಸನೆಯೇ!

ಮಂಡನ— ಜೀವ ಮತ್ತು ಬ್ರಹ್ಮನ ಏಕತ್ವವು ಪ್ರತ್ಯಕ್ಷ ಜ್ಞಾನದ ವಿರೋಧಿ. ನನಗೆ ಪ್ರತ್ಯಕ್ಷ ರೂಪದಲ್ಲಿ 'ನಾನು ಮಂಡನ ಮಿಶ್ರ, ತಾವು ಶಂಕರಾಚಾರ್ಯರು; ನಮ್ಮಿಬ್ಬರಲ್ಲಿ ಯಾರೂ ಬ್ರಹ್ಮರಲ್ಲ' ಎಂದು ಅನುಭವವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಜೀವ ಮತ್ತು ಬ್ರಹ್ಮದ ಏಕತ್ವ....

ಶಂಕರ— ಯಾವುದನ್ನು ತಾವು 'ನಾನು' ಮತ್ತು 'ನೀನು' ಎಂದು ತಿಳಿದು ಬ್ರಹ್ಮನಿಂದ ಬೇರ್ಪಡಿಸುತ್ತಿರುವಿರೊ, ಆ ಅಹಂಭಾವ ವಾಸ್ತವಿಕವಲ್ಲ; ದೃಷ್ಟಿಯ ಭ್ರಮೆ ಮಾತ್ರ.

ಮಂಡನ:— ತಮ್ಮೀ ತರ್ಕ ಪ್ರತ್ಯಕ್ಷ ವಿರೋಧಿಯಾಗಿದೆ.

ಶಂಕರ:— ನಾನೇ ಇನ್ನಷ್ಟು ಸ್ಪಷ್ಟಪಡಿಸಲೆ? ತಾವು ಮಾಡುತ್ತಿರುವ ಜೀವ ಮತ್ತು ಬ್ರಹ್ಮನ ಭೇದವಿಚಾರದ ಜ್ಞಾನವು ಇಂದ್ರಿಯಗಳ ಮೂಲಕ ನಿಜವಾಗಿಯೂ ಉಂಟಾಗುವುದೆ? ಬ್ರಹ್ಮನ ಅನುಭೂತಿಯೂ ಇಂದ್ರಿಯಗಳಿಂದಾಗುತ್ತದೆಯೆ? ಇಂದ್ರಿಯಗಳ ಮೂಲಕ ನಾವು 'ಬ್ರಹ್ಮ'ನನ್ನೂ ಅರಿತಿಲ್ಲ, 'ಜೀವದ' ಭೇದನನ್ನೂ ಅರಿತಿಲ್ಲ. ಇಂದ್ರಿಯಗಳ ಮೂಲಕ ಬ್ರಹ್ಮ ಮತ್ತು ಜೀವದ ಅಭೇದದ ಜ್ಞಾನವೂ ನಮಗೆ ತಿಳಿಯುವುದಿಲ್ಲ— ಇದು ಸ್ಪಷ್ಟವಾಗಿದೆ. ಬ್ರಹ್ಮ ಮತ್ತು ಅದರೊಂದಿಗೆ ಅಭೇದದ ಅನುಭೂತಿಯು, ಸಾಧನೆ ಮತ್ತು ಯೋಗದ ಮೂಲಕ ಆಗುವುದು ಪ್ರಮಾದರಿಂದಲೇ ದಾರ್ಶನಿಕನು ಯೋಗಿಯಾಗಬೇಕಾದುದು ಅನಿವಾರ್ಯ.

ಮಂಡನ:— ಪ್ರತಿಯೊಬ್ಬ ವ್ಯಕ್ತಿಯೂ ದಾರ್ಶನಿಕ ಅಥವಾ ಯೋಗಿಯಾಗಲಾರ; ಆದುದರಿಂದ ಶ್ರುತಿಗಳು ಪ್ರಮಾಣಗಳೆಂದು ಜನಸಾಧಾರಣರಿಗೋಸ್ಕರವೂ ಒಪ್ಪಲಾಗಿದೆ; ದಾರ್ಶನಿಕರಿಗೋಸ್ಕರವೂ ಒಪ್ಪಲಾಗಿದೆ. ಶ್ರುತಿಗಳು, ಯೋಗದ ಮೂಲಕ ಬ್ರಹ್ಮನ ಸಾಕ್ಷಾತ್ಕಾರವನ್ನು ಅನುಭವಿಸಿದ್ದ ಪೂರ್ವಾರ್ಷ ಋಷಿಗಳ ಅನುಭವದ ತತ್ತ್ವ. ತಾವು 'ಜೀವ' ಮತ್ತು 'ಬ್ರಹ್ಮ'ನ ಅಭಿನ್ನತೆಯು ವೇದಾನುಕೂಲವೆಂದು ಸಾಧಿಸುವಿರಾ?

ಶಂಕರ:— ಅಗತ್ಯವಾಗಿ! ವೇದಗಳು ಜೀವ ಮತ್ತು 'ಬ್ರಹ್ಮ'ನ ಅಭೇದವನ್ನು ಪ್ರತಿಪಾದಿಸುವುವು. 'ತತ್ತ್ವಮಸಿ' 'ಅಯಮಾತ್ಮಾ ಬ್ರಹ್ಮ' 'ಅಹಂ ಬ್ರಹ್ಮಾಸ್ಮಿ' ಮೊದಲಾದ ವಾಕ್ಯಗಳು 'ಜೀವ' ಮತ್ತು 'ಬ್ರಹ್ಮ'ನ ಏಕತ್ವವನ್ನು ತಿಳಿಸುತ್ತವೆ.

ಮಂಡನ:— 'ಜೀವ' ಅಲ್ಪಜ್ಞ, 'ಬ್ರಹ್ಮ' ಸರ್ವಜ್ಞ! ತಾವು ಚರ್ಚಿಸುತ್ತಿರುವ 'ಜೀವ' ಮತ್ತು 'ಬ್ರಹ್ಮ'ನ ಏಕತೆಯನ್ನು ಪ್ರತಿಪಾದಿಸುವುದಿಲ್ಲ. ತಮ್ಮ ಅರ್ಥದ ಪ್ರಕಾರ 'ಜೀವ'ನ ಅಲ್ಪಜ್ಞತೆಯ ಪ್ರತ್ಯಕ್ಷ ಜ್ಞಾನದಿಂದ ಶ್ರುತಿಯು ವಿರೋಧವಾಗುತ್ತದೆ.

ಶಂಕರ:— ಪ್ರತ್ಯಕ್ಷ ಮತ್ತು ಶ್ರುತಿಯಲ್ಲಿ ಯಾವ ವಿರೋಧವೂ ಇಲ್ಲ. ಎರಡರ ಆಶ್ರಯಗಳೂ ವಿಭಿನ್ನವಾಗಿವೆ. ಪ್ರತ್ಯಕ್ಷ ಪ್ರಮಾಣವು ಅವಿದ್ಯಾಯುಕ್ತ ಜೀವ ಮತ್ತು ಮಾಯಾಯುಕ್ತ ಈಶ್ವರನ ಭೇದವನ್ನು ತೋರಿಸುತ್ತದೆ; ಆದರೆ 'ತತ್ತ್ವಮಸಿ' ಶ್ರುತಿಯು ಅವಿದ್ಯಾರಹಿತ ಆತ್ಮ ಮತ್ತು ಮಾಯಾರಹಿತ ಬ್ರಹ್ಮನ ಅಭೇದವನ್ನು ತೋರಿಸುತ್ತದೆ. ಪ್ರತ್ಯಕ್ಷದ ಆಶಯ ವಿಶುದ್ಧ ಆತ್ಮ ಮತ್ತು ಬ್ರಹ್ಮ; ಆದುದರಿಂದ ವಿರೋಧದ ಪ್ರಶ್ನೆಯೇಳುವುದಿಲ್ಲ.

ಮಂಡನ:— ಈಗ ಹೀಗೆ ಊಹಿಸೋಣ— 'ಜೀವ'ನು ಸರ್ವಜ್ಞನಲ್ಲ ಸರ್ವಜ್ಞನಾಗದಿರುವುದರಿಂದ ದೇಹವು ಬ್ರಹ್ಮನಿಂದ ಬೇರೆಯಿರುವ ಬಗೆಯಲ್ಲಿಯೇ ಅವನು ಭಿನ್ನನು. ಈ ಊಹೆಯ ಪ್ರಮಾಣ 'ಜೀವ' ಮತ್ತು 'ಬ್ರಹ್ಮ'ನ ಏಕತ್ವಕ್ಕೆ ವಿರೋಧಿಯಾಗಿದೆ.

ಶಂಕರ:— ನಾವಿಲ್ಲಿ ಒಂದು ವಿಷಯವನ್ನರಿತುಕೊಳ್ಳಬೇಕು. ಒಂದು ಪಾರಮಾರ್ಥಿಕ ಸತ್ಯ, ಇನ್ನೊಂದು ವ್ಯಾವಹಾರಿಕ ಸತ್ಯ. ದೇವದತ್ತನು ರಂಗಭೂಮಿಯ ಮೇಲೆ ದುಷ್ಯಂತನ ರೂಪದಲ್ಲಿ

ಬಂದಾಗ, ದರ್ಶಕರಿಗೆ ದೇವದತ್ತನು ದುಷ್ಯಂತನಾದುದೇ ನಿಜವೆನಿಸುತ್ತದೆ— ಅಗಿನ ವ್ಯವಹಾರ ದೃಷ್ಟಿಯಲ್ಲಿ ಹಾಗೆಯೇ ತಿಳಿದುಕೊಳ್ಳಬೇಕು. ಆದರೆ ನಿಜವಾಗಿಯೂ ದೇವದತ್ತನು ದುಷ್ಯಂತನಲ್ಲ. ಇದೇ ರೀತಿ ವಿಭಿನ್ನನಾಗಿ ಕಾಣಬರುವ— ಈಶ್ವರನಿಂದ 'ಜೀವ'ಗಳ ಬೇರ್ಪಡಿಕೆ ವ್ಯಾವಹಾರಿಕ ಅಥವಾ ಕಾಲ್ಪನಿಕವೇ ಆಗಿದ್ದರೂ, ಪಾರಮಾರ್ಥಿಕ ಅಥವಾ ವಾಸ್ತವಿಕವಲ್ಲ. ದೇಹ ಮತ್ತು ಬ್ರಹ್ಮನಲ್ಲಿ ತಾವು ಸಂಕೇತಿಸಿದ ಭೇದ ಕಾಲ್ಪನಿಕವಾದುದು; ಆ ಭೇದವನ್ನು ನಾವೂ ಒಪ್ಪುತ್ತೇವೆ. ಕಪ್ಪೆಚಿಪ್ಪನ್ನು ಬೆಳ್ಳಿಯೆಂದು ತಿಳಿಯುವ ವ್ಯಕ್ತಿ, ಅದರ ವಾಸ್ತವಿಕತೆಯನ್ನು ಅರಿಯುವ ವರೆಗೆ ಅದನ್ನು ಬೆಳ್ಳಿಯೆಂದೇ ತಿಳಿದುಕೊಂಡಿರುವಂತೆ, ಅವಿದ್ಯಾಗ್ರಸ್ತ 'ಜೀವನು' ತನ್ನಲ್ಲಿ ಮತ್ತು 'ಬ್ರಹ್ಮ'ನಲ್ಲಿ ಭೇದವೆಂದರಿಯುವನು.

ಮಂಡನಃ— ನಾವು ವೇದದ ಮಾತನ್ನು ಪುನಃ ಮರೆತು ಬಿಟ್ಟೆವು. ಋಗ್ವೇದ-ಅಥರ್ವಣವೇದದಲ್ಲಿ ಮತ್ತು ಮುಂಡಕೋಪನಿಷತ್ತಿನ ಪ್ರಸಿದ್ಧ ಶ್ರುತಿ 'ದ್ವಾಸುಪರ್ಣಾ'ದಲ್ಲಿ 'ಜೀವ' ಮತ್ತು 'ಬ್ರಹ್ಮ'ನ ಭೇದ ಸ್ಪಷ್ಟರೂಪದಲ್ಲಿದೆ, ಏಕೆಂದರೆ 'ಜೀವ'ನು; ಕರ್ಮಫಲಭುಕ್ತನು; 'ಈಶ್ವರ'ನಿಗೆ ಕರ್ಮಫಲದೊಡನೆ ಯಾವ ಸಂಬಂಧವೂ ಇಲ್ಲ.

ಶಂಕರಃ— ಕ್ಷಮಿಸಬೇಕು! ಈ ಶ್ರುತಿಯಲ್ಲಿ 'ಜೀವ' ಮತ್ತು 'ಬ್ರಹ್ಮ'ನ ಭೇದವನ್ನಲ್ಲ; ಬುದ್ಧಿ ಮತ್ತು ಪುರುಷನ ಭೇದವನ್ನು ತಿಳಿಸಲಾಗಿದೆ. ಕರ್ಮಫಲವನ್ನನುಭವಿಸುವುದು 'ಬುದ್ಧಿ' ಎಂದು ಶ್ರುತಿಯು ಹೇಳುವುದು. ಬುದ್ಧಿಯಿಂದ ಬೇರೆಯಾದ ಕಾರಣ ಪುರುಷನು ಕರ್ಮಫಲವನ್ನನುಭವಿಸಲಾರನು.

ಮಂಡನಃ— ನನ್ನಲ್ಲಿ ಮತಭೇದವಿದೆ ಬುದ್ಧಿಯು ಜಡವಾದುದು, ಭುಕ್ತನು ಚೇತನ ವಸ್ತು. ಆದುದರಿಂದ ಪೂರ್ವೋಕ್ತ ಶ್ರುತಿಯಲ್ಲಿ 'ಜೀವ' ಮತ್ತು 'ಬ್ರಹ್ಮ'ನ ವರ್ಣನೆಯಿದೆ; ಬುದ್ಧಿ ಮತ್ತು ಪುರುಷನ ವರ್ಣನೆಯಲ್ಲ.

ಶಂಕರಃ— 'ಪೈಂಗ್ಯರಹಸ್ಯ' ಎಂಬ ಬ್ರಾಹ್ಮಣಗ್ರಂಥವು ಬುದ್ಧಿಯೇ ಕರ್ಮಫಲವನ್ನನುಭವಿಸುವುದೆಂದು ತಿಳಿಸಿ 'ಜೀವ'ನನ್ನು ಸಾಕ್ಷಿಮಾತ್ರವೆನ್ನುತ್ತದೆ. 'ಬ್ರಾಹ್ಮಣ' ಗ್ರಂಥಗಳ ಈ ವಾಖ್ಯಾನವಿರುವಾಗ, ಮೇಲೆ ಹೇಳಿದ ಶ್ರುತಿಯ ಸಾರಾಂಶವೂ ಇದೇ ಆಗಿದೆ

ಮಂಡನಃ— 'ಜೀವ' ಮತ್ತು 'ಈಶ್ವರ'ನ ಭಿನ್ನತೆಯನ್ನು ಪ್ರತಿಪಾದಿಸುವ ಶ್ರುತಿಗಳೂ ಇವೆ.

ಶಂಕರಃ— ಶ್ರುತಿಗಳ ಸಂಬಂಧದಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು—ಅವುಗಳು ಬೇರೆಯ ಕಡೆ ದುರ್ಲಭವಾದ ಜ್ಞಾನದ ಪ್ರತಿಪಾದನೆ ಮಾಡಬೇಕು; ಅಂದರೆ ಪ್ರತ್ಯಕ್ಷ ಅಥವಾ ಊಹೆ ಮೊದಲಾದುವುಗಳಿಂದ ಪ್ರಾಪ್ತವಾಗದ ಜ್ಞಾನವನ್ನು ಪ್ರತಿಪಾದಿಸುವ ಶ್ರುತಿಯೇ ಪ್ರಬಲವಾಗಿರುತ್ತದೆ. ವಸ್ತುಗಳ ಸಾಧಾರಣತೆಯನ್ನು ತೋರಿಸುವ ವಿಭಿನ್ನತೆ ಜಗತ್ತಿನಲ್ಲಿ ಸ್ವತಃ ಪ್ರತ್ಯಕ್ಷವಾಗಿದೆ. ಶ್ರುತಿಯ ವಿಭಿನ್ನತೆ ಮಾಡುವೆಡೆಯಲ್ಲಿ, ಇದೇ ವಿಭಿನ್ನತೆ ಯಿರುವುದು. ವೇದದಲ್ಲಿ ವರ್ಣಿತವಾದ 'ಜೀವ' ಮತ್ತು 'ಬ್ರಹ್ಮ'ನ ಅಭೇದವೇ ಶ್ರುತಿಯಿಂದ ಮಾತ್ರ ಪ್ರಾಪ್ತವಾಗುವ ಜ್ಞಾನ. ಆದುದರಿಂದ ಜೀವ ಮತ್ತು ಬ್ರಹ್ಮನ ಅಭೇದವೇ ಶ್ರುತಿಯ ಪ್ರತಿಪಾದ್ಯ ವಿಷಯ.

ಭಾರತಿ:— ತಮ್ಮ ತರ್ಕ ಹೃದಯವನ್ನು ಪ್ರಭಾವಿತಗೊಳಿಸುತ್ತದೆ ಯತಿಶ್ರೇಷ್ಠ!

ಮಂಡನಃ— ಆಚಾರ್ಯ ಜೈಮಿನಿ, ಕರ್ಮವನ್ನು ಮಾತ್ರ ಫಲದಾತೃವೆಂದು ಒಪ್ಪಿ, ಈಶ್ವರನ ನಿರಾಕರಣೆ ಮಾಡಿದ್ದಾರೆ. ತ್ರಿಕಾಲಜ್ಞ ಜೈಮಿನಿಯ ಸೂತ್ರವು ವೇದದ ವಾಸ್ತವಿಕ ಅರ್ಥವನ್ನು ಸ್ಪಷ್ಟ ಪಡಿಸುವುದಿಲ್ಲವೆ?

ಶಂಕರ:— ಮಹಾಮುನಿ ಜೈಮಿನಿಯ ಅಭಿಪ್ರಾಯ ಪರಬ್ರಹ್ಮನ ಪ್ರತಿಪಾದನೆಯೇ ಆಗಿತ್ತು. ಆ ಪರಬ್ರಹ್ಮನ ಪ್ರಾಪ್ತಿಯ ಸಾಧನೆಯಾದ ಕಾರಣವೇ 'ಕರ್ಮ'ಗಳಿಗೆ ಮಹಾಮುನಿ ಜೈಮಿನಿಯು ಇಷ್ಟು ಮಹತ್ತ್ವವಿತ್ತಿರುವುದು. ಜೈಮಿನಿಯ ವಾಸ್ತವಿಕ ಅಭಿಪ್ರಾಯವನ್ನು ಮರೆತ ಕಾರಣವೇ ಜನರಲ್ಲಿ ದ್ವೈತಬುದ್ಧಿಯು ಪ್ರಾದುರ್ಭಾವವಾಗಿದೆ. ಕರ್ಮಗಳ ಮೂಲಕ ಚಿತ್ತಶುದ್ಧಿಯಾಗುತ್ತದೆ. ಚಿತ್ತಶುದ್ಧಿ ಬ್ರಹ್ಮಜ್ಞಾನದಲ್ಲಿ ಸಹಾಯಕವಾಗಿರುವುದರಿಂದಲೇ ಕರ್ಮಗಳಿಗೆ ಮಹತ್ತ್ವವಿರುವುದು.

ಮಂಡನಃ:— ಮಹರ್ಷಿ ಜೈಮಿನಿಯ ಅಭಿಪ್ರಾಯ ಪರಬ್ರಹ್ಮನ ಪ್ರತಿಪಾದನೆಯೇ ಆಗಿದ್ದರೆ, ಅವರು ಈಶ್ವರನನ್ನು ಏಕೆ ನಿರಾಕರಿಸಿದರು?

ಶಂಕರಃ:— (ನಕ್ಕು) ಮಹರ್ಷಿ ಜೈಮಿನಿಯು, ಶ್ರುತಿ ಪ್ರತಿಪಾದಿತವಾದ ಈಶ್ವರನನ್ನು ಎಲ್ಲಿಯೂ ನಿರಾಕರಿಸಿಲ್ಲ. ನೈಯಾಯಿಕರು ಊಹೆಯಿಂದ ಸಿದ್ಧಪಡಿಸಲು ಯತ್ನಿಸುವ ಈಶ್ವರನನ್ನು ಅವರು ನಿರಾಕರಿಸಿದ್ದಾರೆ. ಶುಷ್ಕ ಊಹೆಯಿಂದ ಈಶ್ವರನ ಸಿದ್ಧಿಯಾಗಬಲ್ಲುದೆ? 'ಬ್ರಹ್ಮ'ನು ಉಪನಿಷತ್ತುಗಳಲ್ಲಿ ಗಮ್ಯನು. ತರ್ಕ ಮತ್ತು ಬ್ರಹ್ಮಾನುಭವದೊಡನಾವ ಸಂಬಂಧವಿದ್ದೀತು! ಉಪನಿಷತ್ತುಗಳಿಗೆ ಕರ್ಮವಿಮಾಂಸೆಯ ಯಾವ ವಿರೋಧವೂ ಇಲ್ಲವೆ? ತಮ್ಮ ಗುರುದೇವ ಆಚಾರ್ಯ ಕುಮಾರಿಲಭಟ್ಟರೂ 'ಶ್ಲೋಕವಾರ್ತಿಕ'ದ ಆರಂಭದಲ್ಲಿ ಈಶ್ವರನ ಸ್ತುತಿ ಮಾಡಿದ್ದಾರೆ. ಅನೀಶ್ವರವಾದಿಗಳಾಗಿ ಮಹರ್ಷಿ ಜೈಮಿನಿಯೂ ಇರಲಿಲ್ಲ; ಕುಮಾರಿಲರೂ ಇರಲಿಲ್ಲ. ಆದರೆ ನೈಯಾಯಿಕರ ಈಶ್ವರ ವಿಷಯಕ ಶುಷ್ಕ ಊಹೆಯನ್ನು ಇಬ್ಬರೂ ಖಂಡಿಸಿದರು.

ಮಂಡನಃ:— ನನಗೆ ತೃಪ್ತಿಯಾಯಿತು. ನಾನು ಸಂನ್ಯಾಸ....

ಭಾರತಿ:— ನಿಲ್ಲಿ, ಇನ್ನೂ ತಮಗೆ ಸೋಲಾಗಿಲ್ಲ. ನಾನು ತಮ್ಮ ಅರ್ಧಾಂಗಿನಿ. ಪತಿ ಮತ್ತು ಪತ್ನಿ ಸೇರಿ ಒಂದು ವ್ಯಕ್ತಿತ್ವವಾಗುತ್ತದೆ. ನಾವು ಗೃಹಸ್ಥರು. ಆಚಾರ್ಯ ಶಂಕರರು ನನ್ನನ್ನು ಸಂತುಷ್ಟಗೊಳಿಸಿದ ಬಳಿಕವೇ ಅವರು ವಿಜಯಿಗಳಾದವೆಂದು ತಿಳಿಯಬೇಕು.

ಶಂಕರ :— ತಮ್ಮೊಂದಿಗೆ ವಿವಾದವೆ ? ಮಹಿಳೆಯರೊಂದಿಗೆ ಪುರುಷರ .. ....

ಭಾರತಿ :— ನಾನು ತಮ್ಮ ಸಿದ್ಧಾಂತವನ್ನು ಒಪ್ಪಲು ಸಿದ್ಧಳು ಆಗಿಲ್ಲ ತಮಗೆ ತಮ್ಮ ಸಿದ್ಧಾಂತಗಳ ರಕ್ಷಣೆಯ ಅಭೀಪ್ಸವಿದ್ದರೆ....

ಶಂಕರ :— ಆದರೆ ದೇವಿ, ಮಹಿಳೆಯರೊ.....

ಭಾರತಿ :— ಏಕೆ ? ತನ್ನ ಸಿದ್ಧಾಂತಗಳನ್ನು ಖಂಡಿಸಿದವರನು ನಿರುತ್ತರಗೊಳಿಸಬೇಕು ಮಹರ್ಷಿ ಯಾಜ್ಞವಲ್ಕ್ಯ ಮತ್ತು ಗಾರ್ಗಿ, ಜನಕ ಮತ್ತು ಸುಲಭಾ ಅವರ ಶಾಸ್ತ್ರಾರ್ಥದ ವಿಷಯವನ್ನು ತಮ್ಮಂತಹ ಸರ್ವಜ್ಞರರಿತಿಲ್ಲವೆ ?

ಶಂಕರ :— ಹೀಗಿದ್ದಲ್ಲಿ ದೇವಿಯ ಆಜ್ಞೆ ಶಿರೋಧಾರ್ಯ !

ಭಾರತಿ :— ನಾನು ಗೃಹಿಣಿಯೂ ಆಗಿದ್ದೇನೆ; ಅತಿಥ್ಯದ ಧ್ಯಾನವೂ ಇದೆ. ಶಾಸ್ತ್ರಾರ್ಥದಿಂದ ಹೊಟ್ಟೆ ತುಂಬುವುದಿಲ್ಲ; ಮೊದಲು ಭೋಜನ ಮಾಡಿಬಿಡಿ; ಅನಂತರ ಇರುತ್ತದೆ ವಾಕ್ಚಾತುರ್ಯಾಲಾಪ.

ಶಂಕರ :— (ನಕ್ಕು) ಅಪ್ಪಣೆ.

ಳ

(ಭಾರತಿ ಮತ್ತು ತರಳೆ)

ಭಾರತಿ :— ಆಚಾರ್ಯ ಶಂಕರರು ನಿಜವಾಗಿಯೂ ಸರ್ವಜ್ಞರು. ಶಾಸ್ತ್ರಾರ್ಥದ ಸಂಪೂರ್ಣ ಕಲೆಯು ಪ್ರಯೋಗವನ್ನು ಮಾಡಿಯೂ ನಾನವರನ್ನು ನಿರುತ್ತರಗೊಳಿಸಲಾರದೆ ಹೋದೆ ಆರ್ಯ ಪುತ್ರನನ್ನು ನಿರುತ್ತರಗೊಳಿಸಿದಾಗಲೇ ಮನದಲ್ಲಿ ನಾನಾಗ ಈ ವಿಲಕ್ಷಣ ಸಂನ್ಯಾಸಿಯ ಸಮಕ್ಷಮದಲ್ಲಿ ನತಮಸ್ತಕಳಾಗಿದ್ದೆ.

ತರಳಿಕೆ :— ಹಾಗಾದರೆ ಶಾಸ್ತ್ರಾರ್ಥದ ವಿಷಯವನ್ನೇಕೆ ಕೆದ. ಕಿದಿಂ ?

ಭಾರತಿ :— (ನಕ್ಕು) ಆಗ ನನ್ನ ಪತ್ನೀರೂಪವು ಜಾಗೃತವಾಯಿತು. ಆರ್ಯಪುತ್ರನ ಸೋಲಿನಿಂದ, ಅವರ ಅರ್ಧಾಂಗಿಯು ಹೈದಳುಕ್ಕೆ ಪೆಟ್ಟು ಬಿದ್ದಿತು. ಅದಕ್ಕೋಸ್ಕರ ಅಷ್ಟೆ.

ತರಳಿಕೆ :— ಹೀಗಿದ್ದರೆ, ಈ ಸಂನ್ಯಾಸಿಯನ್ನು ಹೇಗಾದರೂ ಸೋಲಿಸಬೇಕು

ಭಾರತಿ : — ಅದು ಹೇಗೆ ? ಎಲ್ಲಾ ಶಾಸ್ತ್ರಗಳನ್ನೂ ತಡಕಾಡಿದೆ. ಎಲ್ಲಿ ಪ್ರಶ್ನಿಸಿದರೂ, ಅಲ್ಲಿ ಪ್ರಶ್ನೆ ಪೂರ್ತಿಯಾಗುವುದಕ್ಕಿಂತ ಮುಂಚೆಯೇ ಶಂಕರಾಚಾರ್ಯರ ಉತ್ತರ ಸಿದ್ಧವಾಗಿರುತ್ತದೆ. ಅವರು ನಿಜವಾಗಿಯೂ ಸರ್ವಜ್ಞರು.

ತರಳಿಕೆ :— ಒಂದು ಉಪಾಯ ಹೊಳೆದಿದೆ ದೇವಿ !

ಭಾರತಿ :— ಏನು ?

ತರಳಿಕೆ :— ಈ ಮಹಾಶಯರು ಬಾಲ್ಯದಿಂದಲೇ ಸಂನ್ಯಾಸಿಗಳಾಗಿದ್ದಾರಲ್ಲವೆ ? ಇವರಿಗೇ ಕಾಮಶಾಸ್ತ್ರದ ವಿಷಯದ ಪ್ರಶ್ನೆಗಳನ್ನು ಮಾಡಬಾರದು ? ಈ ವಿಷಯದಲ್ಲಿ ಬಾಬಾಜಿಯವರು ಬರಿಗೈಯವರು

ಭಾರತಿ :— (ನಕ್ಕು) ಬಹು ಕೆಟ್ಟವಳಲ್ಲವೇ ನೀನು ?

ತರಳಿಕೆ :— ಏಕೆ ? ಕಡುಕಿನ ವಿಷಯವಾದರೂ ಏನಿದೆ ? ಶಾಸ್ತ್ರಾರ್ಥವು ಯುದ್ಧವಿದ್ದಂತೆ. ಅದರಲ್ಲಿ ಸಂಕೋಚವೆಂತಹುದು ? ಪ್ರತಿವಾದಿಗೇನಾದರೂ ಆಗಲಿ, ನಿರುತ್ತರಗೊಳಿಸುವುದೊಂದೇ ತನ್ನ ಗುರಿಯಾಗಿರಬೇಕು.

ಭಾರತಿ :— ನನಗೆ ಬೇಕಾದುದು ಶಾಸ್ತ್ರಾರ್ಥ ಮಾತ್ರವೇ ಅಲ್ಲ, ಸತ್ಯಶೋಧನೆ.

ತರಳಿಕೆ :— (ನಕ್ಕು) ಜೀವನದಲ್ಲೆಲ್ಲಾ ಮಾಡುತ್ತಿರಬಹುದು ಸತ್ಯಶೋಧನೆಯನ್ನು ! ಈಗ ಮಾತ್ರ ಆಚಾರ್ಯಮಿಶ್ರರನ್ನು ಸಂನ್ಯಾಸದ ಗೊಂದಲದಿಂದ.....

ಭಾರತಿ :— ಆರ್ಯಪುತ್ರನು ಸಂನ್ಯಾಸವನ್ನು ತೆಗೆದುಕೊಂಡರೆ ನನಗೇನೂ ದುಃಖವಾಗುವುದಿಲ್ಲ. ಲೋಕಕಲ್ಯಾಣವು ಕ್ಷುದ್ರ ಸ್ವಾರ್ಥಕ್ಕಿಂತಲೂ ಮಿಗಿಲಾದುದು.

ತರಳಿಕೆ :— ನನಗೆ ಶಂಕರರ ಸರ್ವಜ್ಞತೆಯಲ್ಲಿ ಸಂದೇಹವಿದೆ. ಗೃಹಸ್ಥಾಶ್ರಮದಂತಹ ಜೀವನದ ಪ್ರಮುಖಭಾಗದ ಅನುಭವವಿಲ್ಲದವರ ಗೊಂದಲದಲ್ಲಿ ಸಿಕ್ಕಿ ಸಂನ್ಯಾಸಿಯಾಗುವೆದು ಸರಿಯಲ್ಲ. ತಮ್ಮ ಕಾಮಶಾಸ್ತ್ರ ವಿಷಯದ ಪ್ರಶ್ನೆಗಳಿಗೆ ಉತ್ತರವಿತ್ತರೆ, ಆಗ ಶಂಕರರ ಸರ್ವಜ್ಞತೆಯನ್ನು ಒಪ್ಪಬಹುದು; ಅನ್ಯಥಾ ಇಲ್ಲ. ಆಚಾರ್ಯಮಿಶ್ರರು ಒಬ್ಬ ಶಂಕರರಂತಹ ಅಸರ್ವಜ್ಞರ ಶಿಷ್ಯರಾಗಿ ಯೋಗ್ಯಂ ಕಾರ್ಯ ಸಾಧಿಸುವರೆಂದು ನನಗೆನಿಸುವುದಿಲ್ಲ

ಭಾರತಿ :— ಶಂಕರಾಚಾರ್ಯರು ಮಹಾಯೋಗಿಗಳು. ಅವರ ಸರ್ವಜ್ಞತೆಯಲ್ಲಾವ ಸಂದೇಹವೂ ನನಗಿಲ್ಲ.

ತರಳಿಕೆ :— ನಾನು ಆರ್ಯೆಗೀಯುತ್ತಿರುವ ಸಲಹೆಯಲ್ಲಿ ನೀತಿಯೂ ಇದೆ.

ಭಾರತಿ : — ಏನು ?

ತರಳಿಕೆ : — ಒಂದ ವೇಳೆ ಶಂಕರರು ಕಾಮುಕಲಾ ವಿಷಯದ ಪ್ರಶ್ನೆಗಳಿಗೆ ಉತ್ತರವಿತ್ತು ತಮ್ಮ ಉತ್ತರ ಅನುಭವಸಿದ್ಧವೆಂದು ತಿಳಿಸಿದರೆ, ಅವರ ಸಂನ್ಯಾಸವೇ ಕಪಟವಾಗಿರುತ್ತದೆ. ತಮ್ಮ ಆ ಜ್ಞಾನವನ್ನು ಕೇವಲ ಪುಸ್ತಕೀಯವೆಂದರೆ, ಅನುಭವದ ಅಭಾವದಲ್ಲಿ ಅವರಾ ಜ್ಞಾನ ಅವರನ್ನು ಸರ್ವಜ್ಞರೆಂದು ಸಿದ್ಧಪಡಿಸುವುದಿಲ್ಲ. ನಿರುತ್ತರರಾದರೆ ಗೆಲವು ತಮ್ಮದೆ !

ಭಾರತಿ :— ನೀನು ಚಾಣಕ್ಯನ ಶಿಷ್ಯಳು !

ತರಳಿಕೆ :— ಏನಾದರೂ ಆಗಿರಲಿ ದೇವಿ! ನಾಳೆ ಈ ಸಂಬಂಧದಲ್ಲಿ ನೀವು ಪ್ರಶ್ನಿಸಬೇಕು.

ಭಾರತಿ :— ಪ್ರಶ್ನೆಯನ್ನೇನೋ ಕೇಳಿಬಿಡುತ್ತೇನೆ. ಆದರೆ ಪರಿಣಾಮ, ವಿಳಂಬವಾದರೂ ಶಂಕರರಿಗೆ ಅನುಕೂಲವಾಗಿಯೇ ಪರಿಣಮಿಸುವುದು.

ತರಳಿಕೆ :— ಮೊದಲು ನೋಡಿ, ಬಾಬಾಜಿಗಳು ಏನು ಮಾಡುತ್ತಾರೆಯೊ !

ಭಾರತಿ :— (ನಕ್ಕು) ಚೆನ್ನಾಗಿದೆ, ಏನೋದವಾಗಿಯೇ ಇರುವುದು. ಸರಿ, ವಿಶ್ರಮಿಸೋಣ, ನಟ್ಟಿರುಳು ಕಳೆದಿದೆ.

೫

(ಭಾರತಿ, ಮಂಡನ, ಶಂಕರಾಚಾರ್ಯರು ಮತ್ತು ಪದ್ಮಪಾದ)

ಭಾರತಿ:— ಇಂದು ನಮ್ಮ ಮತ್ತು ನಿಮ್ಮ ವಿಚಾರವಿನಿಮಯದ ಕೊನೆಯದಿನ ಯತಿಶ್ರೇಷ್ಠ, ತಾವು ನನ್ನ ಪ್ರಶ್ನೆಗಳಿಗುತ್ತರವಿತ್ತಲ್ಲಿ ಆರ್ಯಪುತ್ರನು ತಮ್ಮ ಶಿಷ್ಯರಾಗಿ ಸಂನ್ಯಾಸಿಯಾಗಬಹುದು. ಇಲ್ಲದಿದ್ದರೆ ಅಲ್ಪಜ್ಞರ ಶಿಷ್ಯನಾಗುವುದರಲ್ಲಿ ಆರ್ಯಪುತ್ರನಿಗೆ ಲಾಭವಾದರೂ ಏನಿದೆ?

ಶಂಕರ:— ತಾವು ಪ್ರಶ್ನಿಸಿ ದೇವಿ! ನನಗೆ ತಿಳಿದಷ್ಟು ಉತ್ತರವೀಯಲು ಪ್ರಯತ್ನಿಸುತ್ತೇನೆ.

ಭಾರತಿ:— ಸರಿ, ಹಾಗಾದರೆ ದಯೆಯಿಟ್ಟು ಹೇಳಿ— ಕಾಮದ ಕಲೆಗಳೆಷ್ಟು? ಅವುಗಳ ಸ್ವರೂಪವೇನು? ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳಲ್ಲಿ ಇವುಗಳ ಸ್ಥಿತಿ ಬೇರೆಯಾಗುವುದೊ? ಪುರುಷ ಮತ್ತು ಸ್ತ್ರೀಯರಲ್ಲಿ ಈ ಕಲೆಗಳ ನಿವಾಸವು ಎಷ್ಟು ಬಗೆ?

ಮಂಡನ:— ಅಲ್ಲ ಭಾರತಿ, ಒಬ್ಬ ಸಂನ್ಯಾಸಿಗೆ ಈ ಪ್ರಶ್ನೆ ಅನುಚಿತ

ಭಾರತಿ: ಏಕೆ? ನನ್ನ ಪ್ರತಿವಾದಿಗಳಾಗಿರುವ ಆಚಾರ್ಯ ಶಂಕರರು ಸಂನ್ಯಾಸಿಗಳಾಗಿರುವುದು ಸಂಯೋಗವಷ್ಟೇ; ಅವಕ್ಕೆ ನಾನು ಹೊಣೆಯಲ್ಲ. ಪ್ರತಿವಾದಿಯು ನನ್ನ ಪ್ರಶ್ನೆಗಳಿಗೆ ಉತ್ತರವೀಯದಿದ್ದಲ್ಲಿ ಸೋಲನ್ನೊಪ್ಪಿಕೊಳ್ಳಲಿ.

ಶಂಕರ:— ತಾವು ನನ್ನನ್ನು ಧರ್ಮಸಂಕಟದಲ್ಲಿ ಸಿಲುಕಿಸಿದ್ದೀರಿ. ಈ ಪ್ರಶ್ನೆ ತಮ್ಮ ಉದಾರಹೃದಯದ ಉತ್ಪತ್ತಿಯಲ್ಲ ಇರಲಿ. ಈ ಪ್ರಶ್ನೆಗಳಿಗೆ ಉತ್ತರವೀಯಲು ನನಗೆ ತಾವು ಒಂದು ಮಾಸದ ಗಡುವೀಯುವ ಅನುಗ್ರಹ ಮಾಡುವಿರಾ?

ಮಂಡನ — ಅಗತ್ಯವಾಗಿ. ಈ ಗಡುವೀಯಲು ಭಾರತಿಗೆ ಯಾವ ತೊಂದರೆ ಇಲ್ಲ. (ಭಾರತಿಯೊಂದಿಗೆ) ಹೌದಲ್ಲವೆ?

ಭಾರತಿ — ಇಷ್ಟು ಅವಧಿ ನೀಯಲು ನನಗಾವ ತೊಂದರೆಯೂ ಇಲ್ಲ.

ಶಂಕರ — ಹಾಗಾದರೆ ದೇವಿ ನನಗೆ ಅಪ್ಪಣೆ ಕೊಡಬೇಕು. ಒಂದು ಮಾಸದ ಒಳಕ ನಾನು ಪುನಃ ಬರುತ್ತೇನೆ.

ಭಾರತಿ— ನಾನೊಂದು ಮಾಸದ ವರೆಗೆ ನಿರೀಕ್ಷಿಸುತ್ತೇನೆ.

ಶಂಕರ— (ಪದ್ಮಪಾದನೊಂದಿಗೆ) ನಡೆ, ಹೋಗೋಣ ಪದ್ಮಪಾದ.

ಪದ್ಮಪಾದ— ಅಪ್ಪಣೆ

೬

(ಪದ್ಮಪಾದ ಮತ್ತು ಶಂಕರರು)

ಪದ್ಮಪಾದ— ಏನು ಮಾಡುವಿರಿ ಆಚಾರ್ಯ?

ಶಂಕರ— ಕಾಮಕಲೆಯ ಅನುಭವ!

ಪದ್ಮಪಾದ— ಸಂನ್ಯಾಸಧರ್ಮ ಭ್ರಷ್ಟವಾಗುವುದಿಲ್ಲವೆ?

ಶಂಕರ— ಇಲ್ಲ.

ಪದ್ಮಪಾದ— ಹೇಗೆ?

ಶಂಕರ— ಅಮ್ರುಕನೆಂಬ ರಾಜನು ಈಗ ತಾನೆ ಮರಣಿಸಿರುವುದನ್ನೂ ಮತ್ತು ಅವನ ರಾಣಿಯರು ಗೋಳಾಡುತ್ತಿರುವುದನ್ನೂ ನಾನು ಯೋಗಬಲದಿಂದ ನೋಡುತ್ತಿದ್ದೇನೆ. ಪರಕಾಯ ಪ್ರವೇಶ ವಿದ್ಯೆಯ ಮೂಲಕ, ನಾನು ರಾಜನ ಶರೀರದಲ್ಲಿ ಪ್ರವೇಶಿಸುತ್ತೇನೆ. ನಾವು ಮಂಡನ ಮಿಶ್ರರ ಆಶ್ರಮದಿಂದ ಹೊರಟು ಬಹುದಿನಗಳು ಕಳೆದುವು. ನಾವಲ್ಲಿಗೆ ಬಹಳ ದೂರದಲ್ಲಿದ್ದೇವೆ. ಎದುರಿಗೆ ಈ ಪರ್ವತವಿದೆ. ಅಲ್ಲಿಯಾವುದಾದರೂ ಗುಹೆಯನ್ನು ಹುಡುಕಿ ನಾನು ಶರೀರವನ್ನು ತ್ಯಜಿಸುತ್ತೇನೆ. ನೀನು ಜಾಗರೂಕನಾಗಿ ನನ್ನ ಶರೀರದ ರಕ್ಷಣೆಯನ್ನು ಮಾಡಬೇಕು.

ಪದ್ಮಪಾದ—ಅದರಿ ಪರಕಾಯ ಪ್ರವೇಶದ ಮೂಲಕವಾದರೂ ಕರ್ಮೋಪಭೋಗವು ಸಂನ್ಯಾಸಿಗೆ ಯೋಗ್ಯವೆ?

ಶಂಕರ— (ನಕ್ಕು) ಫಲಾಫಲಗಳು ಮನದಲ್ಲಿ ಸಂಕಲ್ಪವನ್ನುಳ್ಳವರಿಗೇ ಪ್ರಾಪ್ತವಾಗುವುದು. ಸಮಸ್ತ ಸಂಕಲ್ಪಗಳ ತ್ಯಾಗ ಮಾಡಿರುವವನು ಕರ್ಮಫಲದಲ್ಲಿ ಲಿಪ್ತನಾಗುವುದಿಲ್ಲ. ಜಗತ್ತನ್ನು ಮಿಥ್ಯ ಎಂದರಿತ ಸಂನ್ಯಾಸಿಯನ್ನು ಕರ್ಮಬಂಧನದಲ್ಲಿ ಸಿಲುಕಿಸುವುದಿಲ್ಲಿ, ನಾವು ವಾಸನಾಹೀನರು. ಕಾಮವಾಸನೆಯ ಲವಲೇಶವು ನಮ್ಮಲ್ಲಿಲ್ಲ ಅದುದರಿಂದ ಪರಕಾಯ ಪ್ರವೇಶದ ಮೂಲಕ ಕಾಮಶಾಸ್ತ್ರದ ವ್ಯಾವಹಾರಿಕ ಜ್ಞಾನವು ನಮಗೆ ನಿಂದನೀಯವಲ್ಲ. ಮಂಡನ ಮಿತ್ರರ ಸಂನ್ಯಾಸವು ಇಂದು ಲೋಕಕಲ್ಯಾಣಕ್ಕೆ ಅಗತ್ಯವಾಗಿದೆ. ಆ ಪವಿತ್ರ ಗುರಿಯ ಸಾಧನೆಯಾದ ನಮ್ಮಾ ವಾಸನಾಹೀನ ಕಾರ್ಯವೂ ನಿಂದನೀಯವಲ್ಲ. ನೀನು ಭಯಪಡಬೇಡ.

ಪದ್ಮಪಾದ— ಅಪ್ಪಣೆ.

೭

(ಗುಂಪಿನಲ್ಲಿ ಸಾರ್ವತ್ರಿಕ. ಮಧ್ಯಮಧ್ವದಲ್ಲಿ 'ಮಹಾರಾಜಾ ಅಮ್ರುಕರಿಗೆ-ಜಯವಾಗಲಿ' ಎಂಬ ಸಾಮೂಹಿಕ ಪ್ರಣಾದ).

೮

(ಮಹಾರಾಜಾ ಅಮ್ರುಕ ಮತ್ತು ಮಹಿಷಿ ಚಿತ್ರಾಂಗದೆ)

ಚಿತ್ರಾಂಗದೆ— ಅಳುತ್ತಾ ಅಳುತ್ತಾ ನನ್ನದಂತೂ ದುಸ್ಥಿತಿಯಾಗಿತು ಇಷ್ಟು ದೀರ್ಘವಮೂರ್ಛೆಯೆ?

ಅಮ್ರುಕ— ನೀನೇನೆಂದು ತಿಳಿದಿದ್ದೆ ಪ್ರಿಯೆ?

ಚಿತ್ರಾಂಗದೆ— ಹೋಗಲಿ ಬಿಡಿ ಆ ಚರ್ಚೆಯೇಕೆ?

ಅಮ್ರುಕ— ಮಂತ್ರಿಗಳೂ ನಮ್ಮನ್ನು ಮೃತರೆಂದು ತಿಳಿದು ಬಿಟ್ಟಿದ್ದರೆ?

ಚಿತ್ರಾಂಗದೆ— ಮಂತ್ರಿಗಳನ್ನು ಬಿಡಿ, ರಾಜವೈದ್ಯರೂ ಅರಳು ಮರಳಾಗಿದ್ದರು. ನಾವು ಸಹಗಮನ ಮಾಡಲು ಸಿದ್ಧರಾಗಿದ್ದೆವು. ತಮ್ಮ ಶರೀರವನ್ನು ಚಿತೆಯ ಮೇಲಿಡಲಾಗಿತ್ತು.

ಅಮ್ರುಕ— (ಉಲ್ಲಾಸಪೂರ್ವಕವಾಗಿ) ಸರಿ!!

ಚಿತ್ರಾಂಗದೆ— ಮಹಾಮಂತ್ರಿಗಳು ರಾಜ್ಯದ ಅಧಿಕಾರಿ ಯೊಬ್ಬನ ಶೋಧನೆಯಲ್ಲಿದ್ದರು. ನಾನೀ ಕಥೆಯನ್ನು ಅನ್ಯರಿಂದ ಕೇಳಿದೆ.

ಅಮ್ರುಕ— ಬಳಿಕ ಏನಾಯಿತು ?

ಚಿತ್ರಾಂಗದೆ— ಅಗ್ನಿದಾಹವಾಗುತ್ತಿರುವಸ್ಪರಲ್ಲಿಯೇ ತಾವು ಒಂದು ಸಾರಿ ಮೈಮುರಿದು ಕಣ್ಣು ತೆರೆದಿರಿ.

ಅಮ್ರುಕ— ಆ ದೃಶ್ಯ ಇನ್ನೂ ನನ್ನ ಕಣ್ಮುಂದೆಯೇ ಇದೆ ಸಂತೋಷಾಶ್ಚರ್ಯಗಳಿಂದ ಮಹಾಮಂತ್ರಿಯ ಹೃದಯ ಗದ್ಗದ ವಾಗಿತ್ತು. ಅವರು ನನ್ನ ಚರಣಗಳನ್ನು ಅಪ್ಪಿಕೊಂಡರು.

ಚಿತ್ರಾಂಗದೆ— ಆ ಘಟನೆಯಾಗಿ ಇಪ್ಪತ್ತೈದು ದಿನಗಳಾ ದುವು. ಆದರೆ ಈಗಲೂ ಯೋಚಿಸಿದಾಗಲೆಲ್ಲಾ ರೋಮಾಂಚನ ವಾಗುತ್ತದೆ.

ಅಮ್ರುಕ – ದುಃಖದ ಬಳಿಕ ಸುಖ ಉಂಟಾದರೆ ಅದರ ಮಹತ್ತ್ವ ಹೆಚ್ಚುವುದು. ಹೋಗಲಿ ಬಿಡು, ನಡೆ ವಿಶ್ರಮಿಸೋಣ.

ಚಿತ್ರಾಂಗದೆ – ನಡೆಯಿರಿ.

೯

(ಭಾರತಿ ಮತ್ತು ತರಳಿಕೆ)

ಭಾರತಿ:— ಶಂಕರಾಚಾರ್ಯರೇ ಗೆದ್ದರು, ಸಖಿ!

ತರಳಿಕೆ:— ಅವರಿನ್ನೂ ಹಿಂದಿರುಗಿಯೇ ಇಲ್ಲ.

ಭಾರತಿ: - ಹಿಂದಿರುಗುವರು. ಕಾಮಶಾಸ್ತ್ರದ ಜ್ಞಾನವನ್ನು ಅವರು ಪಡೆದಿದ್ದಾರೆ

ತರಳಿಕೆ:— ವಿವಾಹ ಮಾಡಿಕೊಂಡರೆ ?

ಭಾರತಿ:— ಇಲ್ಲ! ಅವರು ಯೋಗಿಗಳು, ಅವರಿಗಾವುದೂ ಅಸಂಭವವಲ್ಲವೆಂದು ನಾನು ಹೇಳಿರಲಿಲ್ಲವೆ ?

ತರಳಿಕೆ: - ಅವರು ಮಾಡಿದುದಾದರೂ ಏನು ?

ಭಾರತಿ:— ಮೃತನಾದ ರಾಜಾ ಅಮ್ರುಕನ ಶರೀರದಲ್ಲಿ ಪ್ರವಿಷ್ಟರಾಗಿ, ರಾಜಸುಖವನ್ನು ಭೋಗಿಸಿದರು.

ತರಳಿಕೆ:— ಹ್ಹಾ !

ಭಾರತಿ:— ಅವರಿಗೆ ಆ ಭೋಗದಲ್ಲಿ, ಇತ್ತಿದ್ದ ಗಡುವಿನ ಧ್ಯಾನವೂ ಇರಲಿಲ್ಲ

ತರಳಿಕೆ:— ಮತ್ತೆ ?

ಭಾರತಿ:— ಪದ್ಮಪಾದನು ಗಾಯುಕನ ವೇಷದಲ್ಲಿ ಅಮ್ರುಕ ವೇಷಧಾರಿ ಶಂಕರಾಚಾರ್ಯರ ಬಳಿ ಹೋಗಿ, ಒಂದು ಹಾಡಿನಲ್ಲಿ ಅವರಿಗೆ ಗಡುವಿನ ಜ್ಞಾಪಕವಿತ್ತು ಬಂದನು.

ತರಳಿಕೆ:— ಅನಂತರ ?

ಭಾರತಿ:— ಶಂಕರಾಚಾರ್ಯರು ಅಮ್ರುಕನ ಶರೀರವನ್ನು ತ್ಯಜಿಸಿ ಪುನಃ ತಮ್ಮ ಶರೀರದಲ್ಲಿ ಪ್ರವೇಶಿಸಿ, ಇತ್ತಕಡೆಯೇ ಬರು ತ್ತಿದ್ದಾರೆ.

ತರಳಿಕೆ:— ತಾವಿದನ್ನು ಹೇಗೆ ಅರಿತಿರಿ ?

ಭಾರತಿ:— ಯೋಗಿಗಳಿಗೆ ಯಾವುದು ಅಸಂಭವ ? ಕಳೆದಿರು ಳಿನಲ್ಲಿ ಶಂಕರರು, ಸ್ವತಃ ಕನಸಿನಲ್ಲಿ ನನಗೆ ಈ ಸತ್ಯವನ್ನು ತಿಳಿಸಿದರು.

ತರಳಿಕೆ:— ಅದೊ, ಆಚಾರ್ಯ ಶಂಕರರು ಮತ್ತು ಪದ್ಮ ಪಾದರು ಇತ್ತ ಕಡೆಯೇ ಬರುತ್ತಿದ್ದಾರೆ.

ಭಾರತಿ:— ನಾನು ಹೇಳಿರಲಿಲ್ಲವೆ ?

(ಶಂಕರ ಮತ್ತು ಪದ್ಮಪಾದರ ಪ್ರವೇಶ)

ಭಾರತಿ: – ಭಾರತಿಯು ಆಚಾರ್ಯರನ್ನು ಸ್ವಾಗತಿಸುತ್ತಾಳೆ. ಪ್ರಯಾಣದಲ್ಲಾವ ಕಷ ವೂ ಆಗಲಿಲ್ಲ ತಾನೆ ?

ಶಂಕರ:— ಪರಬ್ರಹ್ಮನ ಕೃಪೆಯಿಂದ ಸಕುಶಲನಾಗಿದ್ದೇನೆ· ಸಂನ್ಯಾಸಿಗೆ ಕಷ್ಟವೇನು, ಸುಖವೇನು ?

ಭಾರತಿ: — ಸಂನ್ಯಾಸಿಗೂ ಶಕ್ಯರೆ ಸಿಹಿಯಾಗಿರುವುದು ಮತ್ತು ಬೇವು ಕಹಿಯಾಗಿರುವುದು.

ಶಂಕರ:— (ನಕ್ಕು) ಸಂನ್ಯಾಸಿಯೂ ಮನುಷ್ಯನೆಂಬುದರಲ್ಲಿ ಯಾರಿಗೂ ಸಂದೇಹವಿಲ್ಲ

ಭಾರತಿ:— ಅದೊ, ಅರ್ಯಪುತ್ರನ ಆಗಮನವಾಗುತ್ತಿದೆ

(ಮಂಡನರ ಪ್ರವೇಶ)

ಮಂಡನ :— ಓ .. ..ಆಚಾರ್ಯ! ಪ್ರಣಾಮುಗಳನ್ನು ಸ್ವೀಕರಿಸಿ ಯಾವಾಗ ದಯೆಮಾಡಿಸಿದಿರಿ ?

ಶಂಕರ:— ಕೆಲವೇ ಕ್ಷಣಗಳ ಹಿಂದೆ.

ಭಾರತಿ :— ತಾವು ಕುಳಿತುಕೊಳ್ಳಿ,

ಶಂಕರ:— (ನಕ್ಕು) ಅಕ್ಕಣಿ, ಈಗಲೇ ಶಾಸ್ತ್ರಾರ್ಥವಾಗು ವುದೆ ?

ಭಾರತಿ:— (ನಕ್ಕು) ಈಗವರ ಅಗತ್ಯವಿಲ್ಲ ನಾನು ನನ್ನ ಪ್ರಶ್ನೆಗಳಿಗುತ್ತರ ಪಡೆದಿದ್ದೇನೆ.

ಮಂಡನ :— ನಡೆ ಒಳ್ಳೆಯದಾಯಿತು ಈಗ ನಾನು ಸಂನ್ಯಾಸವನ್ನು ತೆಗೆದುಕೊಳ್ಳಲೇ ಬೇಕು.

ಭಾರತಿ :— ಅಗತ್ಯವಾಗಿ ನನ್ನದಾವ ಅಭ್ಯಂತರವೂ ಇಲ್ಲ

ಮಂಡನ:— (ಭಾರತಿಯೆಡೆಗೆ) ನೀನು ವ್ಯರ್ಥವಾಗಿ ಆಚಾರ್ಯಚರಣಗಳಿಗೆ ತೊಂದರೆಯನ್ನಿತ್ತೆ.

ಭಾರತಿ:— ....ನಾನೆ ? ಇಲ್ಲ ಆರ್ಯಪುತ್ರ, ತಾವೆಲ್ಲ ವನ್ನು ಅರಿತೂ ನನ್ನನ್ನ ನಾಚಿಕೆಗೆ ಗುರಿಪಡಿಸುವಿರಿ ಕೇಳಿ, ಈ ತರಳಿಕೆಯನ್ನು.

ಶಂಕರ:— (ನಕ್ಕು) ತರಳಿಕೆಯು ಪದ್ಮಪಾದನ ವ್ಯಂಗ್ಯದ ಸೇಡನ್ನು ನಮಗೆ ತೀರಿಸಿದಳು.

ತರಳಿಕೆ:— ನಾನು ಲಜ್ಜಿತಳಾಗಿದ್ದೇನೆ. ಆಚಾರ್ಯರು ಕ್ಷಮಿಸಬೇಕು

ಶಂಕರ: (ನಕ್ಕು) ಲಜ್ಜಿತಳಾಗುವ ವಿಷಯವೇನಿಲ್ಲ. ಆಚಾರ್ಯ ಮಂಡನರ ಮೈನೆಯು ತನ್ನ ಪಾಂಡಿತ್ಯವನ್ನು ಪ್ರಮಾ ಣಿತವಾಗಿ ತೋರಿಸಿತು.

ತರಳಿಕೆ:— ಮೈನೆಯು ಕೇವಲ ಕೇಳಿಸಿದ ಮಾತುಗಳನ್ನೇ ಕಂಠಸ್ಥ ಮಾಡಿಕೊಳ್ಳುವುದು ಆಚಾರ್ಯ. ಅದರಲ್ಲಿ—ಪಾಂಡಿತ್ಯ-ವೆಲ್ಲಿ ಬಂದೀತು? ತಮ್ಮ ಶಿಷ್ಯನ ಹೇಳಿಕೆಯೇ ಸತ್ಯಸಿದ್ಧವಾಯಿತು· ತರಳಿಕೆಯು ಮೈನೆ—ಎಂದು ಪ್ರಮಾಣಿತವಾಯಿತು.

(ಎಲ್ಲರೂ ನಗುವರು)

೧೦

(ಪದ್ಮಪಾದ ಮತ್ತು ಶಂಕರಾಚಾರ್ಯ)

ಪದ್ಮಪಾದ:— ಆಚಾರ್ಯರ ಚರಣಗಳು ಈಗಾವ ಕಡೆ ತಿರುಳುವುವು? ಕಾಪಾಲಿಕರಿಂದ ಈಗ ಈ ಶ್ರೀಶೈಲವು ಶೂನ್ಯವಾಯಿತು ಮಂಡನಮಿಶ್ರ.....

ಶಂಕರ:— ಪುನಃ ಅದೇ ಮಂಡನಮಿಶ್ರ.....? ಸುರೇಶ್ವರರೆಂದು ಹೇಳು. ಮಂಡನಮಿಶ್ರರೆಂಬ ಹೆಸರು ಗೃಹಸ್ಥಾಶ್ರಮದ ತ್ಯಾಗದೊಂದಿಗೇ ಹೋಯಿತು. ಈಗ ಸುರೇಶ್ವರರೆಂದೇ ಕರೆಯಬೇಕು.

ಪದ್ಮಪಾದ:— ಕ್ಷಮಿಸಿ ಆಚಾರ್ಯಚರಣ ಅಭ್ಯಾಸವಶದಿಂದ ಸುರೇಶ್ವರಾಚಾರ್ಯರ ಮೊದಲಿನ ಹೆಸರೇ ಬಾಯಿಯಿಂದ ಹೊರಡುತ್ತದೆ .....ನಾನು ನಿನ್ನ ಈ ಹೊಸ ಶಿಷ್ಯನನ್ನು ಸಂದೇಹದ ದೃಷ್ಟಿಯಿಂದ ನೋಡುತ್ತೇನೆ.

ಶಂಕರ:— ಸುರೇಶ್ವರರನ್ನೇ?

ಪದ್ಮಪಾದ:— ಬಿಲ್ಲ ಭಗವನ್, ಕೆಲವೇ ಮಾಸಗಳ ಹಿಂದೆ ಸಂನ್ಯಾಸ ತೆಗೆದುಕೊಂಡ ಆ ಕಾಪಾಲಿಕನನ್ನು.

ಶಂಕರ: — ಏಕೆ?

ಪದ್ಮಪಾದ:— ನನಗವನ ಶಿಷ್ಯತ್ವ ಕಸಬವೆಂದು ತೋರುತ್ತದೆ ಕೆಲವೇ ದಿನಗಳ ಹಿಂದೆ ಅವನು ಕಾಪಾಲಿಕರ ನಾಯಕನಾಗಿದ್ದನು. ಮಾಲೆ, ಅಲಂಕಾರ, ಕುಂತಲ, ಚೂಡಾಮಣಿ ಭಸ್ಮ ಮತ್ತು ಯಜ್ಞೋಪವೀತವನ್ನು ಅವನ ಅಷ್ಟು ಬೇಗನೆ ಹೇಗೆ ಮರೆಯಬಲ್ಲನು? ಈ ಮದಿರಾಸೇವೀ ಕಾಪಾಲಿಕನನ್ನು ಕಂಡರೆ, ನನಗೆ ಜುಗುಪ್ಸೆ ಉಂಟಾಗುತ್ತದೆ.

ಶಂಕರ:— ಸಂನ್ಯಾಸಿಯು ರಾಗದ್ವೇಷದಿಂದ ವಿಮುಕ್ತನಾಗಿರಬೇಕು.

ಪದ್ಮಪಾದ:— ನಾನಿನ್ನೂ ಸಾಧಕನು, ಸಿದ್ಧನಲ್ಲ. ಆಚಾರ್ಯರು ಕ್ಷಮಿಸಬೇಕು.

ಶಂಕರ:— ಇಲ್ಲಿಯ ಜನರ ಅಸಕ್ತಿ ಕಾಪಾಲಿಕನ ಕಡೆ ಇನ್ನೂ ಇದೆಯೊ?

ಪದ್ಮಪಾದ:— ನಾನು ಜನರ ವಿಷಯವನ್ನು ನಿನೇದಿಸುವುದಿಲ್ಲ. ಈ ಹೊಸ ಸಂನ್ಯಾಸಿಯ ಮೇಲೆ ನನಗೆ ನಂಬಿಕೆಯಿಲ್ಲ.

ಶಂಕರ:— ನೋಡೋಣ.

೧೧

(ಪದ್ಮಪಾದ ಮತ್ತು ಶಂಕರಾಚಾರ್ಯರು)

ಗಾಯಹೊಂದಿದ ವ್ಯಕ್ತಿಯೊಬ್ಬನ ಚೀತ್ಕಾರ. ಮೆಲ್ಲನೆಮೆಲ್ಲನೆ ನರಳುವ ಶಬ್ದ.)

ಶಂಕರ:— ಏನದು ಪದ್ಮಪಾದ?

ಪದ್ಮಪಾದ:— ನೋಡಿ ಸಾಯುತ್ತಿದ್ದಾನೆ ತಮ್ಮೀ ಪ್ರಿಯ ನವೀನ ಶಿಷ್ಯ.

ಶಂಕರ:— ಯಾರು ಕೊಂದರವನನ್ನು?

ಪದ್ಮಪಾದ:— ಈ ತ್ರಿಶೂಲ.

ಶಂಕರ:— ನೀನು ಕೊಂದೆಯಾ?

ಪದ್ಮಪಾದ: — ಇವನಿಗಿದೇ ಯೋಗ್ಯವಾಗಿತ್ತು.

ಶಂಕರ:— ಅವನ ಅಪರಾಧ?

ಪದ್ಮಪಾದ:— ತಾವು ಸರ್ವಾಧಿಕ್ಯರಾಗಿದ್ದಿರಿ ಈ ಮುಷ್ಯನು ಮೆಲ್ಲಗೆ ತಮ್ಮ ಕುಟೀರದಲ್ಲಿ ನುಗ್ಗಿದ. ನಾನಾವಾಗಲೂ ಇವನ ಮೇಲೆಯೇ ಕಣ್ಣಿಡುತ್ತಿದ್ದೆ; ಹಿಂದಿನಿಂದ ಬಂದು ನೋಡಿದರೆ ತಮ್ಮ ಶಿರಶ್ಛೇದನ ಮಾಡಲು ಖಡ್ಗವನ್ನು ಎತ್ತಿದ್ದಾನೆ. ತಕ್ಷಣವೇ ಈ ತ್ರಿಶೂಲ ಇವನ ವಕ್ಷದಲ್ಲಿ ಪಾರಾಗಿ ಹೋಯಿತು

ಶಂಕರ: — ಭವಿತವ್ಯತೆಯನ್ನಾರೂ ತಿಳಿಸಲಾರರು. ಇವನು ನನ್ನ ಶಿರವನ್ನು ಯಾಚಿಸಿದ್ದನು

ಪದ್ಮಪಾದ — ಆಚಾರ್ಯರು ಆ ಯಾಚನೆಗೆ ಒಪ್ಪಿಗೆ ನೀಡಿದ್ದರು.

ಶಂಕರ:— (ನಕ್ಕು) ಹೌದು! ಪಾಪ, ಯಾವುದೋ ಸಿದ್ಧಿಗೋಸ್ಕರ ಸರ್ವಜ್ಞನ ಶಿರವನಿಚ್ಛಿಸುತ್ತಿದ್ದ. ನಾವೇ ಇವನಿಗೆ ಸರ್ವಜ್ಞರಾಗಿ ಸಿಕ್ಕಿದೆವು.

ಪದ್ಮಪಾದ:— ನೀಚ! ಮದಿರಾಪಾನ ಮಾಡಿ ತೂರಾಡುತ್ತಾ ಇವನಿತ್ತ ಬಂದಾಗಲೇ, ಇವನ ಕೆಂಗಣ್ಣುಗಳು ಮತ್ತು ಮದಿರೆಯ ದುರ್ಗಂಧವು ನನ್ನನ್ನು ಎಚ್ಚರಿಸಿದವು ಇವನ ವೇಷವನ್ನು ನೋಡಿ! ಅದೇ ಮೂಳೆಗಳ ಮಾಲೆಯಿದೆ ಇವನ ಕೊರಳಲ್ಲಿ. ಮದಿರೆಯ ದುರ್ಗಂಧದಿಂದ ನನ್ನ ತಲೆಯೇ ಸಿಡಿದುಹೋಗುತ್ತಿದೆ. ಕಾಲುಡಿದು ಎಳೆದುಹಾಕುವೆ ಇವನನ್ನು.

ಶಂಕರ:— ಇಲ್ಲ ಇಲ್ಲ! ಮೃತನ ಸನ್ಮಾನ ಮಾಡಬೇಕು. ಸಂನ್ಯಾಸಿಯೇ ಮರ್ಯಾದೆಯನ್ನುಲ್ಲಂಘಿಸಿದರೆ ಜನಸಾಧಾರಣದ ಗತಿಯೇನಾಗುವುದು? ಇವನು ಸಂನ್ಯಾಸವನ್ನು ತೆಗೆದುಕೊಂಡಿದ್ದವನು, ಸಂನ್ಯಾಸಿಗಳಿಗೆ ತಕ್ಕಂತೆಯೇ ಇವನ ಅಂತಿಮಕ್ರಿಯೆಗಳಾಗಲಿ.

೧೨

(ಶಂಕರಾಚಾರ್ಯ, ಸುರೇಶ್ವರ ಮತ್ತು ಪದ್ಮಪಾದ)

ಪದ್ಮಪಾದ:— ಶಾರದಾದೇವಿಯ ಪ್ರತಿಷ್ಠಾಪನೆಯಿಂದ ಜನರಲ್ಲಿ ಆಚಾರ್ಯರು ಸಗುಣೋಪಾಸನೆಯು ವಿರೋಧಿಗಳೆಂಬ ಭ್ರಮೆ ದೂರವಾಗಿದೆ.

ಶಂಕರ: — (ನಕ್ಕು) ಈಗ ಹಿರಿಯ ಕಾರ್ಯ ಸಾಧಿಸುವುದು ಉಳಿದಿದೆ. ನಾವಿಲ್ಲಿ ಒಂದು ಮಠದ ಸ್ಥಾಪನೆಯ ವಿಚಾರವಾಗಿ ಯೋಚಿಸುತ್ತಿದ್ದೇವೆ ಶಿಷ್ಯರಿಗೋಸ್ಕರ ಕುಟೀರಗಳು ಸಿದ್ಧವಾಗಿವೆ. ಅದ್ವೈತವಾದದ ಪ್ರಚಾರ ಕೇಂದ್ರವಾಗಲು ಈ ಸ್ಥಾನ ಉಪಯುಕ್ತವಾಗಿದೆ.

ಪದ್ಮಪಾದ:— ತಮ್ಮ ಭಾಷ್ಯದಲ್ಲಿ 'ವಾರ್ತಿಕ'ವನ್ನು ಬರೆಯುವ ವಿಷಯು.....

ಶಂಕರ:— ನಾವದರ ವಿಚಾರಕ್ಕೇ ಬರುತ್ತಿದ್ದೇವೆ. ನಿನ್ನ ಸಂಗಾತಿಗಳು ನೀನೇ ವಾರ್ತಿಕವನ್ನು ಬರೆಯಬೇಕೆಂದು ಬಯಸುತ್ತಾರೆ

ಪದ್ಮಪಾದ:— ಈ ಸೇವಕನು ಆ ಕಾರ್ಯಕ್ಕೆ ಅನರ್ಹನು ಈ ಕಾರ್ಯ ಸುರೇಶ್ವರಾಚಾರ್ಯರದು.

ಸುರೇಶ್ವರ:— ಸೇವಕನು ಈ ಕಾರ್ಯಕ್ಕೆ ಸರ್ವಥಾ ಅಯೋಗ್ಯನು. ನನ್ನ ಸಂಗಾತಿಗಳು ಇನ್ನೂ ನನ್ನ ಮೇಲೆ ನಂಬಿಕೆಯಿಟ್ಟಿಲ್ಲ. ನಾನು ಸೋತು ಸಂನ್ಯಾಸ ಸ್ವೀಕರಿಸಲು ಬಾಧ್ಯನಾದೆನೆಂದವರು ತಿಳಿದಿದ್ದಾರೆ. ಸಂನ್ಯಾಸದಲ್ಲಿ ನನಗೆ ವಾಸ್ತವಿಕ ಆಸಕ್ತಿಯಿಲ್ಲವೆಂದು ಅವರ ಅಭಿಪ್ರಾಯ.

ಶಂಕರ:— ನಾನೇನು ತಿಳಿದಿದ್ದೇವೆ? ಸಂನ್ಯಾಸದಲ್ಲಿ ತಮಗೆ ಆಸಕ್ತಿಯಿಲ್ಲದಿದ್ದರೆ, ತಾವು ಸಂನ್ಯಾಸವನ್ನು ಸ್ವೀಕರಿಸುವ ಪ್ರತಿಜ್ಞೆಯನ್ನಾದರೂ ಏಕೆ ಮಾಡುತ್ತಿದ್ದಿರಿ? ತಾವೇ ವಾರ್ತಿಕವನ್ನು ಬರೆಯಬೇಕು. ದಿವಂಗತ ಆಚಾರ್ಯ ಕುಮಾರಿಲರ ಇಚ್ಛೆಯೂ ಇದೇ ಆಗಿತ್ತು.

ಸುರೇಶ್ವರ— ಅಪ್ಪಣೆ.

ಶಂಕರ:— ಭರತಭೂಮಿಯಲ್ಲಿ ಅದ್ವೈತವೇದಾಂತದ ಪ್ರಚಾರ ಸ್ಥಾಪನೆಯ ಪವಿತ್ರಕಾರ್ಯವನ್ನು ನಾವು ಮಾಡಬೇಕಾಗಿದೆ. ಲೋಕದಲ್ಲಿ ಅಭೇದಬುದ್ಧಿ ಉತ್ಪನ್ನವಾಗುವನರೆಗೆ, ಸಮಾಜದಲ್ಲಿ ಅವ್ಯವಸ್ಥೆ ಇರುವುದು. ಜಗತ್ತನ್ನು ಬ್ರಹ್ಮನ ವ್ಯಕ್ತರೂಪವೆಂದು ತಿಳಿದು, ನಿರಂತರವಾಗಿ ಅದರ ಕಲ್ಯಾಣದಲ್ಲಿ ಪ್ರವೃತ್ತನಾಗುವುದೇ ಮಾನವಧರ್ಮ. ಇದೇ ಎಲ್ಲಕ್ಕಿಂತಲೂ ಕಠಿಣವಾದ ಉಪಾಸನೆ ಇದರಲ್ಲಿಯೇ ಎಲ್ಲರ ಕಲ್ಯಾಣವಿರುವುದು. ವರ್ಣಾಶ್ರಮಧರ್ಮದ ಈ ಮೂಲತತ್ತ್ವವನ್ನೇ ಜನರು ಇಂದು ಮರೆತಿರುವರು. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿ—ಇವರೆಲ್ಲರಲ್ಲಿಯೂ ಈ ದೃಷ್ಟಿಕೋಣವನ್ನು ಉತ್ಪನ್ನಗೊಳಿಸುವುದೇ ನಮ್ಮ ಪವಿತ್ರ ಗುರಿ.

ಪದ್ಮಪಾದ— ಇಂದು ಧರ್ಮದ ತತ್ತ್ವವೇ ವಸ್ತುತಃ ಗೂಢವಾಗಿ ಬಿಟ್ಟಿದೆ. ಜನರು ಕೇವಲ ಬಾಹ್ಯಾಚಾರವನ್ನೇ ಜೀವನದ ತತ್ತ್ವವೆಂದು ತಿಳಿದಿದ್ದಾರೆ.

ಸುರೇಶ್ವರ— ವಾಸ್ತವಿಕಜ್ಞಾನ ಮತ್ತು ಅದಕ್ಕನುಸಾರವಾಗಿ ಕರ್ಮವನ್ನು ಮರೆಯುವುದರಿಂದ, ಸಮಾಜಕ್ಕೆ ಇಂತಹ ಸ್ಥಿತಿ ಬರುತ್ತದೆ. ಭಾರತದಲ್ಲಿ ಹೊಸದಾಗಿ ಬಂದಿರುವ ಏಕೇಶ್ವರವಾದವು ಜೀವ ಮತ್ತು ಜಗತ್ತನ್ನು ಬ್ರಹ್ಮನಿಂದ ಬೇರೆಯೆಂದು ತಿಳಿದು ಪ್ರಪಂಚದ ಮೇಲೆ ಮನಸ್ವೀ ಅತ್ಯಾಚಾರ ನಡೆಸುತ್ತಿದೆ. ಹಿಂಸೆಯ ಬಲದಿಂದ ಅದು ತನ್ನ ಮಾತನ್ನು ಪ್ರಪಂಚವೇ ಒಪ್ಪಬೇಕೆಂದು ಬಯಸುತ್ತದೆ.

ಶಂಕರ— ಯಾವುದೋ ಅಂಶದವರೆಗೆ ಅದು ತನ್ನ ಆಚಾರಗಳಿಂದ ಸಫಲವಾಗುತ್ತಿದ್ದರೂ, ಅದರ ಸಫಲತೆ ನಮ್ಮ ಅಜ್ಞಾನದ ಪರಿಣಾಮವೆ. ನಾವು ಕೇವಲ ನಮ್ಮ ನಮ್ಮ ಸ್ವಾರ್ಥದಲ್ಲಿ ಮುಳುಗಿ, ವಾಸ್ತವಿಕ ವಿಷಯವನ್ನು ಮರೆತಂದಿನಿಂದ ಏಕತೆಯು ಅನೇಕತೆಯ ರೂಪತಾಳಿದೆ. ಫಲವಾಗಿ, ಜನರು ಜೀವನದ ಪ್ರತಿಯೊಂದು ಪಕ್ಷದಲ್ಲಿಯೂ ಸೋಲುತ್ತಿದ್ದಾರೆ.

ಸುರೇಶ್ವರ— ಹಾಗಾದರೆ ಆಗುವುದೇನು ಭಗವನ್?

ಶಂಕರ— ಕಲ್ಯಾಣವಾಗುವುದು. ನಾವು ಭಾರತದ ಚಿತ್ರವನ್ನು ಎಳೆದಿದ್ದೇವೆ. ಆ ಚಿತ್ರವನ್ನು ಸಜೀವಗೊಳಿಸಬೇಕಾಗಿದೆ.

ಪದ್ಮಪಾದ— ಏನಾ ಚಿತ್ರ ಭಗವನ್?

ಶಂಕರ— ಭಾರತವನ್ನು ನಾವು ನಾಲ್ಕು ಭಾಗಗಳನ್ನಾಗಿ ವಿಂಗಡಿಸುತ್ತೇವೆ. ನಾಲ್ಕೂಭಾಗಗಳಲ್ಲಿ ನಾವು ಒಬ್ಬೊಬ್ಬ ವಾಸನಾಹೀನ ವಿದ್ವಾಂಸ ಸಂನ್ಯಾಸಿಯನ್ನು ನಿಯುಕ್ತಗೊಳಿಸುತ್ತೇವೆ. ಆ ನಾಲ್ವರೂ ತಮ್ಮ ತಮ್ಮ ಪ್ರದೇಶಗಳಲ್ಲಿ ತಿರುಗಾಡಿ, ಜನರಿಗೆ ಜೀವನದ ಪಾಠವನ್ನು ಕಲಿಸುವರು. ಜನರು ಚೆನ್ನಾಗಿ ಬಾಳುವುದನ್ನು ಮತ್ತು ಜೀವನವನ್ನು ಉಪಭೋಗಿಸುವುದನ್ನೂ ಕಲಿಯುವರು ಈ ಸಂನ್ಯಾಸಿಗಳ ಬಳಿ ಸಂಪತ್ತಿರುವುದು. ಆದರೆ ಅವರು ಅದರ ಉಪಯೋಗವನ್ನು ಪ್ರಪಂಚಕ್ಕೋಸ್ಕರ ಮಾಡುವರು. ಸಮಸ್ತ ವಿಶ್ವವೂ ಇವರ ಪರಿವಾರವಾಗಿರುವುದು. ರಾಜರುಗಳು ಇವರ ವಶವರ್ತಿಗಳಾಗಿ ಪ್ರಜಾಪಾಲನೆ ಮಾಡುವರು

ಪದ್ಮಪಾದ:— ರಾಜರುಗಳ ನೇಮಕ ಅನಿವಾರ್ಯ.

ಶಂಕರ:— ವ್ಯಕ್ತಿಯ ಚಾರಿತ್ರ್ಯವೆ ಬೇರೊಬ್ಬರ ನಿಯಾಮಕವೂ ಆಗಿರುತ್ತದೆ. ಆದರ್ಶ ಚಾರಿತ್ರ್ಯದ ಸಂನ್ಯಾಸಿ ತನಗೋಸ್ಕರ ಬದುಕದೆ ಜಗತ್ತಿಗೋಸ್ಕರ ಬದುಕಿದರೆ, ಅವನ ಅನುಕರಣೆ ಮಾಡಿ ಬಡವರೂ ಬಲ್ಲಿದರೂ ತಮ್ಮ ತಮ್ಮ ಕರ್ತವ್ಯಪಾಲನೆ ಮಾಡುತ್ತಾ ಪರರಿಗೋಸ್ಕರ ಬಾಳುವುದನ್ನು ಕಲಿಯುವರು. ವ್ಯಕ್ತಿಗತ ಸ್ವಾರ್ಥದ ತ್ಯಾಗ ಬಹು ದೊಡ್ಡ ಶಕ್ತಿ. ಪೂರ್ವದಲ್ಲಿ ಗೋವರ್ಧನಮಠ, ದಕ್ಷಿಣದಲ್ಲಿ ಶೃಂಗೇರಿಮಠ, ಪಶ್ಚಿಮದಲ್ಲಿ ಶಾರದಾಮಠ ಮತ್ತು ಉತ್ತರದಲ್ಲಿ ಜ್ಯೋತಿರ್ಮಠ—ಇವು ಈ ಜ್ಞಾನದ ಪ್ರಸಾರಕೇಂದ್ರಗಳಾಗುವುವು.

ಪದ್ಮಪಾದ:— ಗುರುದೇವರು ನಮ್ಮನ್ನು ತೊರೆದುಬಿಡುವರೆ

ಶಂಕರ:— ಎಲ್ಲವನ್ನೂ ತ್ಯಜಿಸಿರುವವನಲ್ಲಿ ಯಾರೊಂದಿಗಾದರೂ ವ್ಯಕ್ತಿಗತ ಮೋಹವೆಲ್ಲಿ? ಗೋವರ್ಧನ ಮಠದಲ್ಲಿದ್ದು ನೀನೆ ಅಂಗ, ವಂಗ, ಕಳಿಂಗ ಮತ್ತು ಉತ್ಕಟದಲ್ಲಿ ಜ್ಞಾನಪ್ರಸಾರವನ್ನು ಮಾಡಬೇಕು.

ಸುರೇಶ್ವರ:— ಆಚಾರ್ಯರು ನನ್ನನ್ನೂ.....?

ಶಂಕರ:— ಕೇಳಿ. ಆಂಧ್ರ, ದ್ರಾವಿಡ, ಕೇರಳ ಮತ್ತು ಕರ್ನಾಟಗಳನ್ನು ನಾನು ಹಸ್ತಾಮಲಕನ ಭಾಗದಲ್ಲಿ ಇಟ್ಟಿದ್ದೇನೆ

ಎಸ್ಸೆಲಾ ಬೆಟರೀಸ್ ಲಿಮಿಟೆಡ್
ಮುಂಬಯಿ— ಕಲ್ಕತ್ತಾ— ದಿಲ್ಲಿ— ಕಾನ್‌ಪುರ್— ಮದ್ರಾಸ್— ನಾಗಪುರ್
NAS-56 E-1

ಶೃಂಗೇರಿಯಲ್ಲಿದ್ದು ಅವನೇ ಈ ಪ್ರದೇಶಗಳ ಕೆಲಸವನ್ನು ಮಾಡುತ್ತಾನೆ. ಸಿಂಧು, ಸೌವೀರ, ಸೌರಾಷ್ಟ್ರ ಮತ್ತು ಮಹಾರಾಷ್ಟ್ರಗಳನ್ನು ಶಾರದಾಪೀಠದ ಅಂತರ್ಗತವಾಗಿ ನೀನು ನಿರ್ವಹಿಸಬೇಕಾಗುವುದು

ಸುರೇಶ್ವರ ನಾನೆ ಭಗವನ್?

ಶಂಕರ— ಹೌದು, ಸಂನ್ಯಾಸಾಶ್ರಮ ವಿಶ್ರಾಮಕೋಸ್ಕರ ಇದೆಯೆ? ಕುರು, ಕಾಶ್ಮೀರ, ಪಾಂಚಾಲ ಮತ್ತು ಕಾಂಭೋಜಗಳ ಕಾರ್ಯವನ್ನು ಜ್ಯೋತಿರ್ಮಠದಲ್ಲಿದ್ದುಕೊಂಡು ತೋಟಕನು ನೋಡುತ್ತಾನೆ

ಪದ್ಮಪಾದ— ಅಪ್ಪಣೆ.

(ಶಂಕರರು ಮತ್ತು ಶಿಷ್ಯಗಣ)

ಶಂಕರ— ಈ ಶೃಂಗೇರಿಯಲ್ಲಿ ಹಸ್ತಾಮಲಕನನ್ನು ಬಿಟ್ಟು ಅನ್ಯ ಮೂರು ಮಠಗಳ ಸ್ಥಾಪನೆಗೋಸ್ಕರ ನಾವು ಭಾರತದ ಯಾತ್ರೆಯನ್ನು ಮಾಡುತ್ತೇವೆ

ಪದ್ಮಪಾದ— ಮಠದ ವಿಧಾನವನ್ನು ಆಚಾರ್ಯರು ನಿಶ್ಚಿತಗೊಳಿಸಿರುವರೆ?

ಸುರೇಶ್ವರ— ಮಠಾಧಿಪತಿಗೆ ದೇಶದಲ್ಲೆಲ್ಲಾ ಯಾತ್ರೆ ಮಾಡುವ ಅಧಿಕಾರವಿದೆಯೆ?

ಶಂಕರ— ಇಲ್ಲ. ತಮ್ಮ ತಮ್ಮ ಪ್ರದೇಶಗಳ ಹೊಣೆ ನಾಲ್ಕೂ ಮಠಾಧ್ಯಕ್ಷರದಾಗುವುದು. ಅವರು ಅನ್ಯ ಪ್ರದೇಶಗಳಲ್ಲಿ ಪ್ರವೇಶಿಸಕೂಡದು.

ಪದ್ಮಪಾದ— ಮಠದ ಆಚಾರ್ಯಪರಂಪರೆಯ ಪ್ರವರ್ತನೆ ಯಾವ ಬಗೆಯಲ್ಲಾಗುವುದು?

ಶಂಕರ— ಪವಿತ್ರ, ಜಿತೇಂದ್ರಿಯ, ವೇದವೇದಾಂಗ-ವಿಶಾರದ ಯೋಗಿ ಮತ್ತು ಸಮಸ್ತ ಶಾಸ್ತ್ರಗಳಲ್ಲಿಯೂ ನಿಷ್ಣಾತನಾದ ವ್ಯಕ್ತಿಯೇ ಮಠದ ಅಧಿಕಾರಿಯಾಗಬಲ್ಲನು. ಯಾರಾದರೂ ಹೀಗಿಲ್ಲವೆಂದು ಕಂಡಲ್ಲಿ, ಪದಾರೂಢರಾಗಿದ್ದರೂ ವಿದ್ವಾಂಸರು ಅವರನ್ನು ನಿಗ್ರಹಿಸುವರು ಮತ್ತು ಅಗತ್ಯವಾದರೆ ಅವರನ್ನು ಪದಚ್ಯುತಗೊಳಿಸಲೂ ಬಹುದು.

ಪದ್ಮಪಾದ— ರಾಜರುಗಳ ನೇಮಕ.....

ಶಂಕರ— ಸದ್ಗುಣಸಂಪನ್ನ ಆಚಾರ್ಯರನ್ನು ಯಾವಾಗಲೂ ನಮ್ಮ ಪ್ರತಿನಿಧಿ ಅಥವಾ ಪ್ರತಿರೂಪಗಳೆಂದರಿಯಬೇಕು. ರಾಜ ಮತ್ತು ಪ್ರಜೆಗಳು ಕಾಯಾ ವಾಚಾ ಮನಸಾ ಮಠಗಳ ಹಿತವನ್ನು ಚಿಂತಿಸುತ್ತಾರೆ. ಇದುವೇ ಋಷಿಸಮ್ಮತ ಮಾರ್ಗ. ನಾನು ಬ್ರಹ್ಮ, ನೀನು ಬ್ರಹ್ಮ. ಸರ್ವವೂ ಬ್ರಹ್ಮ, ಬ್ರಹ್ಮನಲ್ಲದೆ ಎಲ್ಲಿಯೂ ಯಾವುದೂ ಇಲ್ಲ. ಇದುವೇ ಜೀವನದ ವಾಸ್ತವಿಕ ಸಂದೇಶ. ಈ ವಾಸ್ತವಿಕ ಜ್ಞಾನವನ್ನು ಎದುರಿನಲ್ಲಿಟ್ಟುಕೊಂಡು, ಎಲ್ಲಾ ವ್ಯಕ್ತಿಗಳೂ ತಮ್ಮ ತಮ್ಮ ಕರ್ತವ್ಯಪಾಲನೆ ಮಾಡಲಿ ಜಗತ್ತಿನ ವ್ಯವಹಾರದಲ್ಲಿ ಧರ್ಮದ ರಕ್ಷಣೆಯಾಗಲಿ. ಎಲ್ಲರೂ ಸುಖಿಗಳಾಗಿರಲಿ, ಸರ್ವರ ಕಲ್ಯಾಣದಲ್ಲಿಯೇ ವ್ಯಕ್ತಿಯ ಕಲ್ಯಾಣವಿರುವುದು. ಇದುವೇ ಸನಾತನ ಮಾರ್ಗ, ಇದುವೇ ವಿಶ್ವಧರ್ಮ!

ಎಚ್ಚರಿಕೆ

(ಅನುಭವ ಹೂತೆ)

ಶ್ರೀ. ಜಳ್ಕೂರು ಸುಬ್ರಾಯ ಅಡಿಗ, ಗಂಗೊಳ್ಳಿ

ನಮ್ಮ ಪ್ರತಿಯೊಂದು ಕೃತಿಯ ಪರಿಣಾಮಗಳೂ ನಮಗೆ ಒಂದೊಂದು ಬಗೆಯ ಅನುಭವಗಳನ್ನು ತಂದುಕೊಡುವುವು. ಈ ಅನುಭವಗಳು ನಮ್ಮ ಮುಂದಿನ ಮಾರ್ಗಕ್ರಮಣದ ಮುನ್ನೆಚ್ಚರಿಕೆಯ ಸಂದೇಶಗಳಾಗಿ ಇರುವುವು. ಈ ಸಂದೇಶಗಳನ್ನರಿತು ಮುಂದಡಿಯಿಡುತ್ತ ಹೋದರೆ, ನಮ್ಮ ಬಾಳಿನ ದಾರಿ ಸುಗಮವಾಗುವುದು!

ಎಚ್ಚರಿಕೆಯೆಂಬ ತಲೆಬರೆಹದಿಂದ ಆರಂಭವಾಗುತ್ತಿರುವ ಈ ಲೇಖನ ಲೇಖನವಷ್ಟೇ ಅಲ್ಲ—ನನ್ನ ಜೀವನದಲ್ಲಿ ಘಟಿಸಿದ ಕೆಲವು ವಾಸ್ತವಿಕ ಘಟನೆಗಳ ಸಂಗ್ರಹವೂ ಹೌದು; ಜೀವನದಲ್ಲಿ ತಗಲುವ ಅತಿ ಸಾಧಾರಣ ಆಘಾತವೂ ನನ್ನ ಮನಃಶಾಂತಿಯನ್ನು ಕಲಕಿ, ಎಷ್ಟೋ ದಿನಗಳ ವರೆಗೆ ನನ್ನನ್ನು ಪೀಡಿಸುತ್ತಿರುವುದರಿಂದ, ಅವನ್ನೆಲ್ಲ ನೆನಪಿಟ್ಟುಕೊಂಡರೆ ಮುಂದೆ ಅಂತಹ ಅರುಚಿಕರ ಪ್ರಸಂಗ ಬಾರದಂತೆ ಅದಷ್ಟು ಜಾಗ್ರತೆ ವಹಿಸಬಹುದೆಂದು ನನ್ನ ಆಸೆ. ಯಾವುದಾದರೊಂದು ಭಾವನೆಯೂ ಅತಿರೇಕಕ್ಕೆ ಹೋದಾಗ, ಅದರಿಂದ ಕೇಡಾಗಬಹುದೆಂದು ಪ್ರಕೃತಿ ಎಚ್ಚರಿಕೆಯಿಯಾಯುತ್ತದೆ. ಉದಾಹರಣೆಗಾಗಿ ದೈಹಿಕ ಪರಿಸ್ಥಿತಿಯನ್ನೇ ತೆಗೆದುಕೊಳ್ಳೋಣ; ಒಂದೇ ಕೆಲಸವನ್ನು ಬಹು ಹೊತ್ತು ನತನಕ ಮಾಡುತ್ತಿದ್ದರೆ, ನಮಗೆ ಆಯಾಸವಾಗುತ್ತದೆ. ಆ ಅಂಗಕ್ಕೆ ವಿಶ್ರಾಂತಿಬೇಕೆಂಬುದರ ಸಂಕೇತವದು. ಆದರೆ ನಾವದನ್ನು ಕಡೆಗಣಿಸಿದರೆ, ಮುಂದೆ ಮತ್ತೂ ದೊಡ್ಡ ಕೇಡುಂಟಾಗಬಹುದು. ದೈಹಿಕ ಆರೋಗ್ಯವು ಕೆಟ್ಟೊಡನೆಯೇ ತಲೆನೋವು ಕಾಣಿಸಿಕೊಳ್ಳುವುದುಂಟು. ತಲೆನೋವು ಅನಾರೋಗ್ಯದ ಬಗ್ಗೆ ಪ್ರಕೃತಿ ಕೊಡುವ ಮುನ್ನೆಚ್ಚರಿಕೆಯೆಂದು ಭಾವಿಸದೆ, ಅದನ್ನೇ ಹತ್ತಿಕ್ಕುವ ಹುಚ್ಚುತನಕ್ಕೆ ಕೈಹಾಕಿ, ಹಲವಾರು ಮಾತ್ರೆಗಳನ್ನು ನುಂಗುತ್ತಾರೆ. ಕಳ್ಳರು ನುಗ್ಗುತ್ತಿದ್ದಾರೆಂದು ತಿಳಿದು ನಾಯಿ ಬಗುಳಿದರೆ, ನಮ್ಮ ಗಾಢನಿದ್ರೆಗೆ ಅಡ್ಡಿಬಂತಲ್ಲ—ಎಂದು ಅದರ ಕುತ್ತಿಗೆಯನ್ನೇ ಹಿಚುಕುವವರು ಎಂತಹ ತಿಳಿಗೇಡಿಗಳೋ—ತಲೆನೋವನ್ನು ಮಾತ್ರ ದೂರಗೊಳಿಸಿ ಮುಂದಿನ ಕಾಹಿಲೆಗೆ ಕರೆಗೊಡುವವರೂ ಅಷ್ಟೇ ಅವಿವೇಕಿಗಳು.

ಪ್ರತಿಯೊಂದು ಸಂದರ್ಭದಲ್ಲೂ ಪ್ರಕೃತಿ ನಮಗೆ ಜಾಗ್ರತೆ ಹೇಳಿಯೇ ತನ್ನ ಕೆಲಸವನ್ನು ಮಾಡುತ್ತದೆ. ಎಂತಹ ಪಾತಕಿಯಿರಲಿ—ಅವನು ಅನ್ಯಾಯಮಾಡುವಾಗ, ಅವನ ಹೃದಯ 'ಬೇಡ....ಬೇಡ....! ಇದು ಘೋರಪಾತಕ'—ಎಂದು ಸಾರಿ ಸಾರಿ ಹೇಳಿ, ಅವನನ್ನು ಆ ಜಘನ್ಯ ಕೃತ್ಯದಿಂದ ಹಿಂದಿರುಗಿಸಲು ಪ್ರಯತ್ನಿಸುತ್ತದೆ. ಆದರೇನು? ಹೃದಯದ ಮಾತಿಗೆ ಕಿವಿಗೊಡದೆ ಮುಂದುವರಿದಾಗಲೇ ಭಯಂಕರ ಅಪರಾಧಗಳು ಘಟಿಸುತ್ತವೆ.

ಇಂತಹ ಎಚ್ಚರಿಕೆಯಾಗಲಿ, ಮುನ್ಸೂಚನೆಯಾಗಲಿ, ದೈಹಿಕ ಅಸ್ತವ್ಯಸ್ತತೆಗೆ ಮಾತ್ರ ಸಂಬಂಧಿಸಿದುದಲ್ಲ. ವ್ಯವಹಾರದಲ್ಲೂ ನಾವಿದನ್ನು ಗುರುತಿಸಬಹುದು. ಎಷ್ಟೋ ಬಾರಿ ನಾವು ಪರೋಪಕಾರ ದೃಷ್ಟಿಯಿಂದಾಗಲಿ, ಸದ್ಭಾವನೆಯಿಂದಾಗಲಿ, ಮಾಡುವ ವ್ಯವಹಾರ ನಮಗೇ ಹಾನಿಕರವಾಗಬಹುದು. ಇಂತಹ ಒಂದೊಂದೂ ಘಟನೆ, ಭವಿಷ್ಯದ ಬಗ್ಗೆ ನಮಗೆ ಎಚ್ಚರಿಕೆ ಕೊಡುತ್ತದೆ ನನ್ನ ಜೀವನದಲ್ಲಿ ಸಂಭವಿಸಿದ ಇಂತಹ ನಾಲ್ಕಾರು ಘಟನೆಗಳನ್ನಷ್ಟೇ ಇಲ್ಲಿ ಉದಾಹರಿಸುತ್ತೇನೆ:

(೧) ಅಧ್ಯಾಪಕ ವೃತ್ತಿಗೆ ಕಾಲಿಡುವ ಆರಂಭದಲ್ಲಿ, ಅಧ್ಯಾಪಕರ ಬಗ್ಗೆ ವಿಚಿತ್ರಕಲ್ಪನೆ ನನ್ನಲ್ಲಿ ಬೇರೂರಿತ್ತು. ಆದರ್ಶ ಅಧ್ಯಾಪಕನೆಂದರೆ ಸದಾ ಗಂಟುಮೋರೆ ಹಾಕಿಕೊಂಡಿರಬೇಕು; ಅಪ್ಪಿತಪ್ಪಿಯೂ ಅವನು ವಿದ್ಯಾರ್ಥಿಗಳೆದುರು ಮಂದಹಾಸ ಬೀರಬಾರದು. ಹುಡುಗರಿಗೆ ಸ್ವಲ್ಪವೂ ಸಲುಗೆ ಕೊಡಬಾರದು. ಉಪಾಧ್ಯಾಯರ ಹೆಸರು ಎತ್ತಿದೊಡನೆಯೇ ಹುಡುಗರು ಗಡಗಡ ನಡುಗಬೇಕು. ಬೆತ್ತದ ಭಯ ಯಾವಾಗಲೂ ಅವರಿಗಿರಬೇಕು. ಮುಖ್ಯವಾಗಿ ಭಯವೇ ಜ್ಞಾನದ ಆರಂಭ. ಎಂಬ ಸೂತ್ರವನ್ನು ಅವನು ನೆನಪಿನಲ್ಲಿಟ್ಟುಕೊಳ್ಳಬೇಕು....ಎಂದೆಲ್ಲ ಊಹಿಸಿಕೊಂಡಿದ್ದೆ. ಈ ಊಹನೆಗೆ ಬಹುಮಟ್ಟಿಗೆ ನನ್ನ ವಿದ್ಯಾರ್ಥಿಜೀವನವೂ ಹಾಗೆಯೇ ಕಳೆದಿದ್ದುದು ಕಾರಣವಾಗಿತ್ತು. ವೈಚಳಿ ಬಿಟ್ಟು ನಮ್ಮ ಉಪಾಧ್ಯಾಯರೊಡನೆ, ಸರಿಯಾಗಿ ಒಂದೇ ಒಂದು ಮಾತನ್ನಾದರೂ ಆಡಿದ ನೆನಪು ನನಗಿಲ್ಲ. ಆದರ್ಶ ವಿದ್ಯಾರ್ಥಿ ಹೀಗೆಯೇ ಇರಬೇಕೆಂಬ ಹುಚ್ಚು ಕಲ್ಪನೆ ನನ್ನದು!

ಅದೇ ಕಲ್ಪನೆಯ ಆಧಾರದ ಮೇಲೆಯೇ ನನ್ನ ಅಧ್ಯಾಪಕ. ವೃತ್ತಿ ಆರಂಭವಾದರೂ, ಪ್ರತಿಯೊಂದು ಬಾರಿಯೂ ಶಿಕ್ಷೆ ವಿಧಿಸಿದ ಬಳಿಕ ನನ್ನ ಮನಸ್ಸಿಗೆ ತುಂಬಾ ಬೇಸರವಾಗುತ್ತಿತ್ತು. ನಾನು ಮಾಡಿದುದು ಅನ್ಯಾಯವೆಂದೇ ಭಾವನೆಯಾಗುತಿತ್ತು. ಪ್ರತಿ ಸಲವೂ 'ಎಲ್ಲಾದರೂ ಪೆಟ್ಟು ಬಲವಾಯಿತೆ? ಜ್ವರಬಂದಿರಬಹುದೆ?' ಎಂಬ ಆಶಂಕೆಯೇ ತಲೆ ತಿನ್ನತೊಡಗಿತು. ಪೆಟ್ಟು ತಿಂದ ವಿದ್ಯಾರ್ಥಿಯೇನೋ ಮರುಗಳಿಗೆಯಲ್ಲೇ ಅದನ್ನು ಮರೆತುಬಿಟ್ಟರೂ, ಆ ದಿನ ವಿಡೀ ನನಗೆ ವಿಶೇಷ ಕಳವಳವಾಗುತ್ತಿತ್ತು. ನನ್ನ ಕಲ್ಪನೆ ನಿರಾಧಾರವಾದುದೆಂದೂ, ಪ್ರೀತಿ-ವಿಶ್ವಾಸಗಳಿಂದ ವಿದ್ಯಾರ್ಥಿ ಕಲಿಯುವಷ್ಟು ಸುಲಭವಾಗಿ ಭಯದಿಂದ ಕಲಿಯುವುದಿಲ್ಲವೆಂದೂ ಅರಿತಾಗ, ಮನಸ್ಸು ಸಾಕಷ್ಟು ಹಗುರವಾಯಿತು. ಯಾವಾಗಲೂ ಉಪಾಧ್ಯಾಯರ ಭಯವೇ ನಮ್ಮ ಸುತ್ತಲೂ ಸುಳಿಯುತಿದ್ದಾಗ, ನಾವು ಪಡೆದ ಹೆಚ್ಚಳವಾದರೂ ಏನು? ಆ ಹೆದರಿಕೆಯೇ ಇಂದು ಎಲ್ಲವನ್ನೂ ನೆ.ಟ್ಟ ನಿಲ್ಲುತ್ತಿದೆ! ಸಭೆಯಲ್ಲಿ ನಾಲ್ಕು ಮಾತು ಆಡಬೇಕಾದರೆ ಜೀವವೇ ಹಾರಿಹೋದಂತಾಗುತ್ತದೆ; ಬಾಯಿ ತಡವರಿಸುತ್ತದೆ.....ಕಾಲು ಗದಗದಿಸುತ್ತ.....ಈ ಗಲಿಬಿಲಿಯಲ್ಲಿ ಹೇಳಬೇಕಾಗಿದ್ದ ಎರಡು ಮಾತೂ ಎಲ್ಲೋ ಹಾರಿಹೋಗುತ್ತದೆ.... ಈ ಸಭಾಕಂಪನಕ್ಕೆ ಕಾರಣವಾದರೂ ಏನು? ಆ ಆದರ್ಶ ಅಧ್ಯಾಪಕರ ಆದರ್ಶಭಯ ತಾನೇ? ಇದೆಲ್ಲವನ್ನೂ ಚೆನ್ನಾಗಿ ಮನಗಂಡು, ವಿದ್ಯಾರ್ಥಿಗಳೊಡನೆ ಸಲುಗೆಯಿಂದಿರುವುದೇ ಅವರ ಪ್ರಗತಿಗೆ ಕಾರಣವಾಗಬಹುದೆಂದು ಭಾವಿಸಿದೆ.

(೨) ಪ್ರೀತಿ-ವಿಶ್ವಾಸದ ವ್ಯವಹಾರ ಆ ದೃಷ್ಟಿಯಿಂದ ನಿರುಪಾಯವೆನಿಸಿದರೂ, ಇದರಲ್ಲೂ ವಿಶೇಷ ಜಾಗರೂಕತೆ ಅಗತ್ಯವೆನಿಸಿತು. ಅವಿವೇಕಿಗಳೊಡನೆ ಸಲುಗೆಯ ವ್ಯವಹಾರ ತರಗತಿಯ ಶಿಸ್ತಿಗೇ ಭಂಗತರುವುದೆಂದು ನನ್ನ ಹಾಗೂ ಇತರರ ಉದಾಹರಣೆಗಳಿಂದ ಅರಿವಾಗಿತ್ತು. ಅದ್ದರಿಂದ ಗೆಳೆತನದ ವ್ಯವಹಾರ ನಡೆಯಿಸಲು ವಿವೇಕಿವಿದ್ಯಾರ್ಥಿಗಳನ್ನು ಮಾತ್ರ ಆರಿಸಿಕೊಂಡೆ. ಎಷ್ಟೋ ವರ್ಷಗಳ ವರೆಗೆ ಇದು ನಿರಾತಂಕವಾಗಿ ಸಾಗಿತು.

ಆದರೆ ಮೊನ್ನೆ ಮೊನ್ನೆ ನನ್ನ ಲೆಕ್ಕಾಚಾರ ಅಡಿ ಮೇಲಾಗುವ ಸಂದರ್ಭವೊದಗಿತು. ಬಹುಶಃ ನನ್ನೀ ಸಲುಗೆಯು ವಿಪರೀತ ಹೆಚ್ಚಿತೆಂದು ಪ್ರಕೃತಿಗೇ ಮನವರಿಕೆಯಾಗಿ, ಅದನ್ನು ಕಡಿಮೆ ಮಾಡಲು ಈ ಆಘಾತವನ್ನೊಡ್ಡಿರಬಹುದು.

ವಿವೇಕಿಗಳೆಂದು ನಾನು ಭ್ರಮಿಸಿದ ಕೆಲವೇ ವಿದ್ಯಾರ್ಥಿಗಳಲ್ಲಿ, ಒಬ್ಬನು ಸಲುಗೆಯ ಅನುಚಿತ ಲಾಭ ಪಡೆದುಕೊಂಡ. ಮಿತಿವಿಚಾರಿದ ಸಲುಗೆ, ಗೆಳೆತನದ ವ್ಯವಹಾರ, ಅವನನ್ನು ಅಕ್ಷರಶಃ ಅಕ್ಷಯವಾಗಿ ಈ ಸಾಹಸಕ್ಕೆ ಪ್ರೇರೇಪಿಸಿರಬಹುದು; ಅವನೆಂದ ಮಾತು ಬಹು ಸಣ್ಣದಾದರೂ, ವಿವೇಕಿಯೊಬ್ಬನಿಗೆ ಶೋಭಿಸುವಂತಹದಿರಲಿಲ್ಲ. ಸಾಧಾರಣ ತುಂಟ ಹುಡುಗನು ಅಂತಹ ಮಾತು ನುಡಿದಿದ್ದರೆ ನಾನೇನೂ ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಆದರೆ ಉತ್ತಮ ವಿದ್ಯಾರ್ಥಿಯೆನಿಸಿದ (ಅಥವಾ 'ಎಂದು ನಟಿಸಿದ') ಅವನೇ ನನ್ನೀ ಮೂಲ ಭಾವನೆಗೆ ಏಟನ್ನು ಹಾಕಿರುವಾಗ ತುಂಬ ದುಃಖವಾಯಿತು. ಆ ಒಂದೇ ನುಡಿ ಅವನ ಮೇಲೆ ನನಗಿದ್ದ ಅಭಿಮಾನ ಹಾಗೂ ಸದ್ಭಾವನೆಯನ್ನು ಸಮೂಲವಾಗಿ ತೊಡೆದುಹಾಕಿತು. ತಾನೊಬ್ಬ ಜಾಣ ವಿದ್ಯಾರ್ಥಿಯೆಂಬ ಒಣಹೆಮ್ಮೆ; ವಿದ್ಯಾರ್ಥಿಮಂಡಲಿಯಲ್ಲಿ ತಾನೊಬ್ಬ ಗಣ್ಯ ವಿದ್ಯಾರ್ಥಿಯೆಂಬ ಅಹಂಭಾವ ಹಾಗೂ 'ಇವರೇನು ತನಗೆ ಲಕ್ಷ್ಯವೆ?'—ಎಂಬ ಅಸಡ್ಡೆ ಅವನ ತಲೆ ತಿರುಗಿಸಿರಬೇಕು. ಆದರೆ ಈ ಘಟನೆ ನನ್ನ ಮನಸ್ಸಿಮಿತವನ್ನು ಒಂದು ವಾರದ ವರೆಗೂ ಕೆಡಿಸಿಬಿಟ್ಟಿತು. ಮುಂದೆಂದೂ ಇಂತಹ ವಿದ್ಯಾರ್ಥಿಗಳ ಬಗ್ಗೆ ಅತ್ಯೀಯ ಭಾವನೆ ಮಾಡದಿರಲಿ—ಎಂದೇ ನಾನು ಭಗವಂತನನ್ನು ಬೇಡಿಕೊಳ್ಳುತ್ತೇನೆ.

(೩) ನನಗೊಬ್ಬ ಅತ್ಯಾಪ್ತ ಮಿತ್ರರಿದ್ದಾರೆ. ಬೇರೆಲ್ಲ ದೃಷ್ಟಿಯಿಂದ ಇವರನ್ನು ಮರೆತುಬಿಡಬಹುದಾದರೂ, ಪುಸ್ತಕಗಳ ಬಗ್ಗೆ ಮಾತ್ರ ನೆನಪಿಡಬೇಕಾಗಿದೆ. ಏನೆಂದರೆ, ಒಮ್ಮೆ ಇವರು ಕೊಂಡೊಯ್ದ ಪುಸ್ತಕಗಳನ್ನು ವರ್ಷಗಟ್ಟಲೆಯಾದರೂ ಹಿಂದಿರುಗಿಸುವುದಿಲ್ಲ..... ಒಂದೋ, ಅವರೇ ಈ ದಾರಿಯಾಗಿ ಬರುವುದನ್ನು ಮರೆತಿರುತ್ತಾರೆ. ....ಅಥವಾ ಪುಸ್ತಕ ತರುವುದೇ ಮರೆತಿರುತ್ತದೆ. ಬಹುಶಃ ಈ ರೀತಿಯಲ್ಲಾದರೂ ತಮ್ಮನ್ನು ನಾವು ಮರೆಯದಿರಲೆಂಬುದೇ ಅವರ ಹಾರ್ದಿಕ ಇಚ್ಛೆಯಾಗಿರಬೇಕು. ನನಗೆ ಪುಸ್ತಕ-ಪತ್ರಿಕೆಗಳೆಂದರೆ ಪಂಚಪ್ರಾಣ ಪ್ರತಿಬಾರಿಯೂ ಇವರು ನನ್ನ ಒಂದೊಂದು ಪ್ರಾಣವನ್ನು ಹಿಂಡಿ ಹಿಸುಕಿಬಿಡುತ್ತಾರೆ. ಕಳೆದ ಸಲ ಇವರು ನನ್ನ 'ಆರೋಗ್ಯ' ಪತ್ರಿಕೆಯನ್ನೊಯ್ದು; ಗೆದ್ದಲಿಗೆ ಆಹಾರವಾಗಿತ್ತು, ಹುಳುಗಳು ತಿಂದುಳಿದುದನ್ನು ಮಾತ್ರ ತಂದುಕೊಟ್ಟರು! ಅತಿಥಿಸತ್ಕಾರದ ಈ ಕ್ರಮ ಶ್ಲಾಘ್ಯವಾದರೂ ಪರರ ವಸ್ತುವನ್ನಲ್ಲ—ಸ್ವವಸ್ತುಗಳನ್ನು ಮಾತ್ರ ಆ ಕಾರ್ಯಕ್ಕೆ ಉಪಯೋಗಿಸಬೇಕೆಂಬ ವಿವೇಕವಾದರೂ ಬೇಡವೆ? ಯಾರಿಗೂ ಎಂತಹ ಅಗತ್ಯ ಬಂದಾಗಲೂ ಪುಸ್ತಕ-ಪತ್ರಿಕೆಗಳನ್ನು ಕೊಡಬಾರದು—ಎಂದೇ ಈ ಅನುಭವ ನನಗೆ ಬುದ್ಧಿಗಲಿಸಿದೆ!

(೪) ಒಳ್ಳೇ ಪತ್ರಿಕೆಗಳನ್ನು ಕಂತೆ (ಕೈಯಲ್ಲಿ ಹಣವಿದ್ದಾಗ) ಚಂದಾದಾರನಾಗುವ ದುರಭ್ಯಾಸ, ಕೆಲವರಂತೆ ನನಗೂ ಇತ್ತು. ವ್ಯಾಪಾರದಲ್ಲಿ ಮೋಸಮಾಡುವ ಎಷ್ಟೋ ಜನರನ್ನು ನಾನು ಬಲ್ಲೆ. ೫ ರೂಪಾಯಿಗೆ ರೇಡಿಯೋ ಕೊಡುವುದಲ್ಲದೆ ಒಟ್ಟಿಗೆ ಚಿನ್ನದುಂಗುರಗಳನ್ನು ದಾನವೀಯುವ ಅಮೃತಪದದ ಮೇಧಾವೀ ವ್ಯಾಪಾರಿಗಳ ವ್ಯವಹಾರ ನನಗೆ ತಿಳಿದಿದೆ; ಆದರೆ ಈ ವಂಚನೆ ಪತ್ರಿಕಾಕ್ಷೇತ್ರದಲ್ಲೂ ಕಾಲಿಡುತ್ತದೆಂದು ನಾನು ಊಹಿಸಿದ್ದಿಲ್ಲ. 'ಮುಸ್ಯಾನ್' ಎಂಬ ಹಿಂದೀ ಪತ್ರಿಕೆಯೊಂದು ಪ್ರಯಾಗದಿಂದ ಹೊರಡುತ್ತಿತ್ತು (ಈಗದು ಬದುಕಿದೆಯೋ ಸತ್ತಿದೆಯೊ ತಿಳಿದಿಲ್ಲ). ಎರಡು ವರ್ಷಗಳ ಹಿಂದೆ ವಾರ್ಷಿಕ ಚಂದಾಹಣ ಕಳುಹಿಂದೆ; ಎರಡು ಸಂಚಿಕೆ ಬಂದುವು. ಮತ್ತೆ ಸುದ್ದಿಯೇ ಇಲ್ಲ. ಬರೆದರೆ ಉತ್ತರವೂ ಇಲ್ಲ. Reply card ಬರೆದೆ; ಅಂಚೆಚೀಟು ಒಳಗಿಟ್ಟು

ಕವರು ಹಾಕಿದೆ. ಯಾವುದಕ್ಕೂ ಉತ್ತರವಿಲ್ಲ. ಬಹುಶಃ ಅಷ್ಟು ದೂರದ ವರೆಗೆ ನಾನು ಖರಲಾರನೆಂದೇ ಅವರ ಯೋಜನೆಯಿರಬಹುದು! ಹೀಗಾಗಿ ಬಹುದೂರದ ಪತ್ರಿಕೆಗಳಿಗೆ, ವಿಚಾರಿಸದೆ ಚಂದಾಹಣ ಕಳುಹಬಾರದೆಂದು ನಾನೀಗ ಪೆಟ್ಟು ತಿಂದು ಬುದ್ಧಿ ಕಲಿತಿದ್ದೇನೆ. ಈ ಮಾತು ಕಹಿಯಾಗಬಹುದಾದರೂ ಸ್ವಾನುಭವದಿಂದ ಪಡೆದುದಲ್ಲವೆ?

(೫) ನನ್ನ ಬಿಡಾರದಿಂದ Post Office ಸುಮಾರು ೨ ಫರ್ಲಾಂಗ್ ದೂರದಲ್ಲಿದೆ. ಕಳ್ಳನೆ ಬರೆಯಬೇಕಾದರೆ ಇರಲೆಂದು ಕಾರ್ಡು, ಕವರು ಹಾಗೂ ಅಂಚೆಚೀಟುಗಳನ್ನು ಸಾಕಷ್ಟು ಸಂಗ್ರಹಿಸಿಟ್ಟುಕೊಂಡಿದ್ದೇನೆ. ಅಕ್ಕಪಕ್ಕದವರು ಅಗತ್ಯಬಂದಾಗ, ಎಂತಹ ಅವೇಳೆಯಲ್ಲಾದರೂ, ಪೀಡಿಸಿ ಕಾರ್ಡು-ಕವರುಗಳನ್ನೊಯ್ಯುವುದುಂಟು. ಪರೋಪಕಾರಕ್ಕಾಗಿ ಇದು ಆರಂಭವಾಗಿದ್ದರೂ ಅಲ್ಪಸ್ವಲ್ಪ ನಷ್ಟವೇ ನನಗುಂಟಾಗಿದೆ. ಕಾರಣವೇನೆಂದರೆ ಉದ್ದರಿಯಾಗಿ ಕಾರ್ಡುಗಳನ್ನೊಯ್ಯುವಾಗ, ದಾಕ್ಷಿಣ್ಯಕ್ಕಾಗಿ ಕೊಡಬೇಕಾಗುತ್ತದೆ. ಮಾತಾಡಿದರೆ....' ನಿಮ್ಮ ಒಂಭತ್ತು ಕಾಸುಗಳನ್ನು ನಾವೇನು ತಿಂದು ಹಾಕುತ್ತೇವೆಯೇ?' ಎನ್ನುವುದಿಲ್ಲವೆ? ಆದರೆ ಈ ಅಲ್ಪ ಹಣ ಅವರಿಗೆ ಮರೆತುಹೋಗುವುದೇ ಹೆಚ್ಚು. ನಮಗೆ ಕೇಳಲೂ ನಾಚಿಕೆ. ಹೀಗಾಗಿ ಅಲ್ಪಸ್ವಲ್ಪ ನಷ್ಟವೇ ನನ್ನ ಪಾಲಿಗೆ ಆಗುವ ಲಾಭ!

ಇದನ್ನಾದರೂ ಸಹಿಸಿ ಸುಮ್ಮನಿರಬಹುದು; ಆದರೆ ಇತ್ತೀಚೆಗೆ ಪರಿಚಿತನೂ ನನ್ನ ಸ್ವಭಾವವನ್ನು ಬಲ್ಲವನೂ ಆದ ಒಬ್ಬನು ನನ್ನ ಬಳಿಗೆ ಬಂದು ಗಂಭೀರವಾಗಿಯೇ—' ಇನ್‌ಲೇಂಡ್‌ಲೆಟರಿಗೆ ಆರು ಮುಕ್ಕಾಲೆ? ಏಳೆ?' ಎಂದು ಕೇಳಿದ. ಹಿಂದೆಯೂ ಅವನು ವ್ಯವಹಾರ ಮಾಡಿದ್ದುಂಟು. ಹೀಗಿದ್ದರೂ ಈ ತಮಾಷೆ (!) ಏಕೆ ಬೇಕಿತ್ತು? ಗೇಲಿಮಾಡಲೆಂದೆ? ನಾನು ಅಂತಹ ಕ್ಷುದ್ರ ಮನೋವೃತ್ತಿಯವನೆಂದೆ?—ನನಗಂತೂ ಅರ್ಥವಾಗಲಿಲ್ಲ. ನಗುನಗುತ್ತ ಹೇಳಿದ್ದರೆ ಅದಕ್ಕಾದರೂ ಒಂದು ಅರ್ಥವಿರುತ್ತಿತ್ತು. ಆದರೆ ಈ ಬಿಗುತನ? ನಷ್ಟಹೊಂದಿಯೂ ಉಪಕಾರಮಾಡುವ ಮನೋವೃತ್ತಿ ಬಹುಶಃ ಪ್ರಕೃತಿಗೆ ಒಪ್ಪಿಗೆಯಾಗಲಿಲ್ಲವೆಂದು ತೋರುತ್ತದೆ. ಅದಕ್ಕೇ ಈ ಎಚ್ಚರಿಕೆಯನ್ನಾದು ಕೊಟ್ಟರಬೇಕು.

(೬) ನನ್ನ ಗೆಳೆಯನೊಬ್ಬನಿಗೆ ಒಮ್ಮೆ ಸಾಧಾರಣ ಜ್ವರ ಬಂತು. ನನಗೂ ಅಲ್ಪಸ್ವಲ್ಪ ವೈದ್ಯಕೀಯ ತಿಳಿದಿದೆಯೆಂಬ ಹಂಭವಿತ್ತು. ನನಗೆ ಗೊತ್ತಿದ್ದ ಒಂದು ಪ್ರಯೋಗವನ್ನು ಮಾಡಿತೋರಿಸಬೇಕೆಂಬ ಚಪಲದಿಂದ ಒಂದು ಔಷಧಿ ಮಾಡಿಕೊಟ್ಟೆ; ನನ್ನ ದುರದೃಷ್ಟವೋ.....ಔಷಧಿಯ ದುಷ್ಪ್ರಭಾವವೋ....ಜ್ವರ ಏರುತ್ತಹೋಯಿತು. ಒಟ್ಟಿಗೆ ಬಡಬಡಿಸಲೂ ಆರಂಭಿಸಿದ. ಒಂದು ಮೈಲು ದೂರದಲ್ಲಿದ್ದ ಡಾಕ್ಟರರನ್ನು ಕರೆತರುವ ತನಕ ನನ್ನ ಭಯ ಹೇಳತೀರದು. ಮುಂದೆ ಅವನು ಸುಲಭದಲ್ಲೇ ಗುಣಹೊಂದಿದರೂ, ನನ್ನ ತಲೆಗಡರಿದ್ದ ವೈದ್ಯಕೀಯದ ಹುಚ್ಚು ಮಾತ್ರ ಅಂದಿನಿಂದ ಸಂಪೂರ್ಣ ಬಿಟ್ಟುಹೋಯಿತು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಹಾರ್ಮೋನಿಯಂ, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.
ಮಾಲಕರು ಬಿ. ಜೆ. ಮುತ್ತಗಿ

(೭) ಕಟ್ಟಕಡೆಗೆ ನನ್ನ ಗೆಳೆಯನೊಬ್ಬನು ಹೇಳಿದ ಸಂಗತಿಯೊಂದನ್ನು ಉಲ್ಲೇಖಿಸಿ ಈ ಲೇಖನವನ್ನು ಮುಗಿಸುತ್ತೇನೆ ಇದು ಅವಾಸ್ತವದಂತೆ ಕಂಡರೂ, ಅಸಂಭವನೀಯವೆಂದು ನನಗೇಕೋ ಎನ್ನಿಸುವುದಿಲ್ಲ:

ಒಮ್ಮೆ ಯಾವುದೋ ಕಾರ್ಯಕ್ಕಾಗಿ ನನ್ನ ಮಿತ್ರ ತನ್ನ ಗೆಳೆಯನ ಮನೆಗೆ ಹೋಗಿದ್ದ; ಅವನ ತಂದೆ ಕಾಹಿಲೆಯಿಂದ ಹಾಸಿಗೆ ಹಿಡಿದಿದ್ದರು....ಕಾಹಿಲೆ ಉಲ್ಬಣಕ್ಕೇರಿತು. ಮಿತ್ರನು ಸಮಾಧಾನ ಹೇಳುವವನಂತೆ—' ನೀನೇನೂ ಚಿಂತಿಸಬೇಡಿ; ನಿಮ್ಮ ತಂದೆಯವರು ಬಹು ಬೇಗ ಗುಣಹೊಂದುವರು' ಎಂದು ಹಾರಯಿಸಿದನಂತೆ. ಆದರೆ ಆ ಮಾತು ಆ ಗೆಳೆಯನಾಗಲೀ ಅವನ ಹೆಂಡತಿಗಾಗಲೀ ಅಷ್ಟೇನೂ ಹಿತವಿಸಲಿಲ್ಲವೆಂದು ಅವರ ಮುಖಭಾವವೇ ಹೇಳುತ್ತಿತ್ತಂತೆ....

ಮುಂದೆ ಆ ಗೆಳೆಯನ ಸಂಪೂರ್ಣ ಇತಿಹಾಸ ಮಿತ್ರನಿಗೆ ಗೊತ್ತಾಯಿತು; ತಂದೆ ಶ್ರೀಮಂತನಿದ್ದರೂ ಮಹಾಜಿಪುಣನೆಂದೂ, ಹಣದ ಎಲ್ಲಾ ವ್ಯವಹಾರವೂ ಅವನ ಕೈಯಲ್ಲೇ ಇರುವುದರಿಂದ ಗೆಳೆಯನು ಖರ್ಚಿಗೆ ತುಂಬಾ ಚಡಪಡಿಸಬೇಕಾಗುತ್ತಿತ್ತೆಯೆಂದೂ, ಆ ತಂದೆ ಕೊನೆಯುಸಿರು ಎಳೆದರೇನೇ ಮಗು-ಸೊಸೆಯರು ವಿಲಾಸ ಜೀವನಕ್ಕೆ ಅನುಕೂಲವೆಂದೂ ಅವನರಿತುಕೊಂಡ. ಈ ಸ್ಥಿತಿಯಲ್ಲಿ ತನ್ನ ಹಾರಯಿಕೆ ಅವರಿಗೆ ಅಪಥ್ಯವಾದುದೂ ತಪ್ಪಲ್ಲವೆಂದರಿತ.

ಆದ್ದರಿಂದ ಶುಭ ಕೋರುವುದಕ್ಕೂ ಸಂದರ್ಭ ಅಸಂದರ್ಭಗಳನ್ನು ನೋಡಿಕೊಳ್ಳಬೇಕೆಂದು ಈ ಎಚ್ಚರಿಕೆ ತಿಳಿಸುವುದಿಲ್ಲವೆ?

ಹೀಗೆಯೇ ಒಂದಲ್ಲ—ಹಲವು ಅನುಭವಗಳು ನಮ್ಮ—ನಿಮ್ಮ ಜೀವನದಲ್ಲಿ ಘಟಿಸಿರಬಹುದು. ಅವೆಲ್ಲವನ್ನೂ ನೆನಪಿಟ್ಟುಕೊಂಡು ಎಚ್ಚರಿಕೆಯಿಂದ ವ್ಯವಹರಿಸಬೇಕಾಗುವುದು. ಆದರೆ ಪ್ರತಿಯೊಂದು ಅನುಭವವನ್ನೂ ಪಡೆಯುವಾಗ ನಮಗುಂಟಾಗುವ ಆಘಾತ ಅಸಹನೀಯ ಅದನ್ನು ನಗುನಗುತ್ತ ನುಂಗಿಕೊಳ್ಳುವ ತಾಳ್ಮೆ ನಮಗುಂಟಾಗಲೆಂದು ಹಾರಯಿಸುತ್ತೇನೆ

ಹೆಣ್ಣು

(ಒಂದು ನಲ್ವಾಡು)

'ಮಗು' ಬಿರಾದಾರ, ಬಬಲೇಶ್ವರ.

ಕೆನ್ನೆಬಟ್ಟಲಾಗ ರಕುತ ತುಳುಕತದ
ನಡೀಬ್ಯಾಡ ನೀನೂ
ಜೆನ್ನೆ ಒಟ್ಟುಗೂಡಿ ನಿಂತು ಮಲೀತದ
ತಡೀಬ್ಯಾಡ ನೀನೂ ೧
ರತೀ ಜೆಲುವಿ ಅಂತ ಜನಾ ಆಡತದ
ನೀನಽ ರತಿ ಏನಽ
'ಜತೀ ನನಗ ಜಗದಾಗಽ ಇಲ್ಲ' ಅಂತ
ಸಾರ ಬರತಿ ಏನ ? ೨
ಹಗಲಿನೆದೀ ಮ್ಯಾಗ ಇರುಳು ಆಡುವಂಗ
ಕೆನ್ನಿಮ್ಯಾಗ ಕುರುಳ
ದಿಗಲುಗೊಳಿಸತಾನ ನವಿಲ ಬಣ್ಣ ಕಣ್ಣ
ಹೊಳೀವಂಗ ಹೆರಳ ೩
ಕೋಗಿಲ್ಯಿಂಡಿಗೇ ನೀನಽ ಕಲಿಸಿದೇನ
'ಕುಹೂ' ಅನ್ನು ಅಂತ
ಜೊನ್ನ ಬೆಳಕಿಗೆ ನಿನ್ನ ಮೈಯ ಬಣ್ಣ
ಕೊಟ್ಟ ಏನ ಸ್ವಂತ ? ೪
ಮೂರು ಲೋಕದಾನ ಜೆಲುವಿನೆಲ್ಲಾನು
ಕದ್ದು ತಂದ ತುಡುಗೀ
ಬುವಿಯು ಬಾಳಿಗೇ ನೆರನು ಬರಲಿ ಅಂತ
ಬೊಮ್ಮ ಕೊಟ್ಟ ಕೊಡುಗೀ ! ೫

ಹಿಂದ ನೋಡಿದಾಗ ಸಣ್ಣ ಹುಡುಗಿ ನೀ
ನನ್ನ ತಂಗಿ ಹಾಂಗs
ಇಂದ ನೀನು ಹ್ಯಾಂಗಾದೆ ಹೀಂಗನಾ
ಧಂಗ ಬಡಿಯು ಹಂಗs ೬

ಮುಂದ ನೀನೂನು ತಾಯಿ ಆಗುವಾಕಿ
ನನ್ನ ತಾಯಿ ಹಾಂಗs
ಅಂದ ಕಂದ ನಾ ನಿನ್ನ ಕಣ್ಣಿನಾಗ
ಹರಿಸ ದೇವಿ ಹಾಂಗs ! ೭

ತಂಗಿ ತರುಣಿ ತಾಯಿ ಮೂರು ಒಟ್ಟುಗೂಡಿ
ಆದೆ ಬದುಕೆ ಹೆಣ್ಣs
ಅಂಗಗೇಡಿಯನು ಕೂಡಿ ತರುಣಿ ನೀ
ಆದೆ ಜಗದ ಕಣ್ಣs ! ೮
ಯಾಕ ನೋಡತದ ಲೋಕ ನಿನ್ನ ಬರೇ
ತರುಣಿ ಅಂತ ಹೇಳs ?
'ತಂಗಿ ತಾಯಿ ನಾ ಅಲ್ಲೇ'ನಂತ ನೀ
ಕೈಯ ಹಿಡಿದು ಕೇಳs ! ೯

ಪ್ರಾರ್ಥನೆ

'ನೀಲಕಂ' ಮುಂಬಯಿ.

ಓ ಅನ ಭವಗಳೆ,
ನನ್ನನ್ನು ಮಾಗಿಸಿ; ಬರಿಯೆ ಹಣ್ಣಾಗಿಸಬೇಡಿ.
ಪರಿಸ್ಥಿತಿಗಳೆ,
ನನ್ನೊಳಗಿನ ಕೆಡುಕನ್ನೇ ಹೊರಗೆಡುಕಬೇಡಿ ಸದಾ;
ಒಳತೂ ಅರಳಿ ಗಮಗಮಿಸಲಿ ಆಗಾಗ !
ವಿಧಿಯೆ,
ಸುಖವನ್ನೇ ಕೊಡು ಎಂದು
ಬೇಡಲಾರೆ—
(ಅದರಾಸೆ ಎಂದೋ ಕೊರೆತಿದಿದ್ದೇನೆ)

ಕಷ್ಟವನ್ನೇ ಕೊಡು ಎಂದೆಂದಿಗೂ
ಬೇಕಾದರೆ—
ಇದೋ ಎದೆಗೊಟ್ಟು ನಿಲ್ಲುತ್ತೇನೆ.
ಇಷ್ಟೇ:
ಈ ಅನುಭವಗಳು, ಪರಿಸ್ಥಿತಿಗಳು, ಕಷ್ಟಗಳು
ನನಗೆ ಒದಗಿದಾಗ, ಅವು
ನನ್ನನ್ನು ಮಿದುವಾಗಿಸಲಿ,
ಅದರಿ—
ಮುರಿಯದಿರಲಿ.

ಪ್ರತಿಜ್ಞೆ

(ಸಣ್ಣಕಥೆ)

ಶ್ರೀಮತಿ 'ಕಲಾ' ಮಲ್ಲೇಶ್ವರಂ ಬೆಂಗಳೂರು

●

ಕನ್ನಡ ಸಂಸ್ಕೃತಿಯ ಧಿರೋದಾತ್ತ ಚರಿತ್ರೆಗಳೇನಾದರೂ ದೊರೆಯುತ್ತಿದ್ದರೆ, ಕೊಳಕುಬಟ್ಟೆಯನ್ನು ತೊಟ್ಟ ಹಳ್ಳಿಯ ಹಿರಿಯರಲ್ಲಿಯೆ! ಸೂಟು-ಬೂಟಿನ ಇಂದಿನ ನಾಗರಿಕರಿಗೆ, ಇಂಗ್ಲಂಡಿನ ಪ್ರಸಿದ್ಧ ಪುರುಷರೆಲ್ಲ ತಿಳಿದವರಾಗಿರುವರು. ಆದರೆ ಕನ್ನಡಿಗರಾದ ಜಕ್ಕಣ-ಡಂಕಣರು ಅಪರಿಚಿತರೇ!

●

ಬಸ್ಸು ಹೊರಟಿತು. ನನಗೂ ಬಸ್‌ನಿಲ್ದಾಣಕ್ಕೆ ನಡೆದು ಸುಸ್ತಾಗಿತ್ತು. ನನ್ನ ಅದೃಷ್ಟ ಚೆನ್ನಾಗಿತ್ತು ಅಂತ ಕಾಣುತ್ತೆ, ಕಿಟಕಿಯ ಬಳಿ ಜಾಗ ಸಿಕ್ಕಿತು ನನ್ನ ಸೀಟಿನ ಪಕ್ಕದಲ್ಲಿಯು ಜಾಗ ಖಾಲಿ ಇತ್ತು. ಬಸ್ಸು ಹೊರಡಲು ನಾಲ್ಕು ನಿಮಿಷವಿದೆ—ಎನ್ನುವಾಗ, ವಯಸ್ಸಾದ ಗೌಡರೊಬ್ಬರು ಹತ್ತಿದರು. ನನ್ನ ಪಕ್ಕದಲ್ಲಿಯೆ ಬಂದು ಕುಳಿತರು. ಅತನ ಕೊಳೆಗೂಡಿದ ದುಪಟಿ, ಆ ನೆರೆತ ಬಿಳಿಯ ಗಡ್ಡ, ತಲೆಗೆ ಸುತ್ತಿದ್ದ ಕೆಂಪುಬಟ್ಟೆ—ಇವನ್ನೆಲ್ಲ ನೋಡಿದರೆ, ಬೇಂದ್ರೆಯವರ "ಭೂಮಿತಾಯಿಯ ಜೊಚ್ಚಿಲ ವರ್ಗ"ನ ನೆನಪಾಗುತ್ತಿತ್ತು. ಬಸ್ಸು ಹೊರಟಿತು. ನಮ್ಮೆದುರುಸಾಲಿನಲ್ಲಿ ಕುಳಿತಿದ್ದ ತಂದೆ, ಮಗಳು—ಮುಕ್ಕಾಲುಪಾಲು ಸಕಲೇಶಪುರದವರಿರಬೇಕು—ಅವರನ್ನು ಆ ಗೌಡರು ಕೇಳಿದರು: "ಯಾವೂರಿಗೆ ಸ್ವಾಮಿ?" ಮಗಳು ತುಂಬಾ ಜಾಣೆ. ಏದು—ಊರ ವ್ಯಾಯವಿರಬಹುದು. ತಂದೆ ಉತ್ತರಿಸುವ ಮೊದಲೇ ಹೇಳಿದಳು: "ಅರಸೀಕೆರೆಗೆ" ಎಂದು. ತಂದೆ ಮೆಲುನಗೆ ಬೀರುತ್ತಾ "ನೀನೆತ್ತಲಾಗೆ ಗೌಡರೆ?" ಎಂದರು. "ನಮ್ಮದು ಬೇಲೂರು; ಕೆಲಸದ ಮೇಲೆ ಅರಸೀಕೆರೆಗೆ" ಎಂದರು ಅವರು.

ಬಸ್ಸು ಹಸಿರುಗದ್ದೆಗಳ ಮಧ್ಯೆ ಹಾದು ಹೋಗುತ್ತಿತ್ತು. ಬಸ್ಸಿನೊಡನೆ ಮನಸ್ಸೂ ಓಡಿತು: ನಾನು ರಜಾಕ್ಕೆ ನನ್ನ ಚಿಕ್ಕಮ್ಮನ ಮನೆಗೆ ಹೋಗಿದ್ದೆ. ಕಾಲೇಜಿನ ಬಾಗಿಲು ತೆರೆಯುವ ವೇಳೆಗೆ ಊರಿಗೆ ಹಿಂದಿರುಗ ಬೇಕಾಗಿತ್ತು. ಬಸ್ಸಿನಲ್ಲಿ ಕುಳಿತಾಗ ಚಿಕ್ಕಮ್ಮ-ಚಿಕ್ಕಪ್ಪನ ಉಪಚಾರ, ಅವರುಗಳೊಡನೆ ನೋಡಿದ ಶ್ರವಣ ಬೆಳು. ಗೊಳ, ಬೇಲೂರು, ಹಳೇಬೀಡು, ಎಲ್ಲ ಒಂದೊಂದಾಗಿ ನೆನಪಿಗೆ ಬರುತ್ತಿದ್ದುವು. ಆ ಗೌಡರು ತತ್‌ಕ್ಷಣ ನನ್ನ ಕಡೆಗೆ ತಿರುಗಿ ನೋಡಿದರು. ನನ್ನನ್ನು ಒಂದು ಬಾರಿ ಪರೀಕ್ಷಿಸಿ "ಗಂಟೆಯೆಷ್ಟಾಯ್ತು?" ಎಂದು ಕೇಳಿದರು. ನಾನು ಕಟ್ಟಿದ್ದ ಕೈಗಡಿಯಾರವನ್ನು ಕಂಡೇ ಆತ ಆ ಪ್ರಶ್ನೆ ಕೇಳಿದ್ದಿರಬೇಕು. "ಎಂಟು, ಹತ್ತು." ಎಂದೆ ಎದುರಿಗೆ ಕುಳಿತಿದ್ದ ಮಗುವನ್ನು "ಯಾವ ತರಗತಿಲೀ ಓದುತ್ತೀ ಮಗೂ?" ಎಂದು ಪ್ರಶ್ನಿಸಿದರು. "ಎರಡನೆ ಕ್ಲಾಸು" ಸ್ಪಷ್ಟವಾಗಿ ಉತ್ತರವಿತ್ತಳು ಆ ಹುಡುಗಿ. "ನೀನೂ ಓದುತ್ತಿರುವೆಯಾ ಮಗೂ?" ನನ್ನ ಕಡೆಗೆ ತಿರುಗಿ ಮತ್ತೆ ಪ್ರಶ್ನಿಸಿದರು. "ಹೂಂ" ಎಂದಿಷ್ಟೇ ಉತ್ತರವಿತ್ತೆ. ನನ್ನ ಆಲೋಚನೆಗಳಿಗೆಲ್ಲಾ ಅಡ್ಡ ಬರುತ್ತಿದ್ದರು; ನಾನು ಮೊಟಕಾಗಿ ಉತ್ತರಿಸಿದ್ದು ಆತನಿಗೆ ಹಾಸ್ಯವಾಗಿ ಕಂಡಿರಬೇಕು. ಮತ್ತೆ "ಏನು ಓದುತ್ತೀಯಮ್ಮಾ?" ಎಂದರು. "ಸೀನಿಯರ್ ಇಂಟರ್", ಈ ಸಾರಿ ಕಟುವಾಗಿಯೇ ಉತ್ತರಿಸಿದೆ. ಸಾಮಾನ್ಯವಾಗಿ ಹಳ್ಳಿಯ ಕಡೆಯಲ್ಲೆಲ್ಲಾ ೫ ರೂ. ೧೨ ರೂ. ೩೦ ರೂಪಾಯಿಯ ಪರೀಕ್ಷೆಗಳು ಎಂದರೇನೇ ತಿಳಿಯುವುದು. ಅದ್ದರಿಂದ, ಇನ್ನಾದರೂ ಮಾತು ನಿಲ್ಲಿಸಲಿ ಎಂದು ಇಂಗ್ಲೀಷಿನಲ್ಲಿ 'ಸೀನಿಯರ್ ಇಂಟರ್' ಎಂದದ್ದು.

ಆತ ಬಿಟ್ಟಾರಿಯೇ? "ನಿಮ್ಮೂರು?". ನನಗೆ ನಿಜವಾಗಿಯೂ ರೇಗಿತು. "ಬೆಂಗಳೂರು" ಎಂದಿಷ್ಟೇ ಅಂದು ಬೇರೆ ಕಡೆಗೆ ತಿರುಗಿದೆ. ಅದಕ್ಕೇ ಹಳ್ಳಿಯ ಜನ ಎನ್ನುವುದು. ಮಾತಾಡಲು ಬೇಡವಾಗಿದ್ದರೂ ಸತಾಯಿಸಿ ಮಾತನಾಡುವುದು. ಯಾವ ವಿಷಯದ ಆಲೋಚನೆಗೂ ಅವಕಾಶಕೊಡದೆ ಪೀಡಿಸುವ ಈ ಜನಕ್ಕೆ ಏನೆನ್ನಬೇಕು?—ಹೀಗೆ ಏನೇನೋ ಎನ್ನಿಸುತ್ತಿತ್ತು. "ಓಹೋ! ರಜಾಕ್ಕೆ ಬೇಲೂರು, ಹಳೇಬೀಡು ನೋಡಲು ಬಂದಿದ್ದೆ ಅಂತ ಕಾಣುತ್ತೀ; ಅಲ್ವೇಮ್ಮಾ?" "ಹೌದು!" ಎಂದೆ. "ದೇವಸ್ಥಾನ ಚೆನ್ನಾಗಿದೆ ಅಲ್ಲವೆ?" ಪ್ರಶ್ನೆಯ ಸುರಿಮಳೆ ಕರೆಯಲು ಮೊದಲು ಮಾಡಿದ ಪ್ರಪಂಚವೆ ಹೇಳುತ್ತೆ ಅದರ ಸೌಂದರ್ಯ, ನಾನೇನು ಹೊಸದಾಗಿ ಹೇಳಬೇಕೆ? ಆದರೂ ಔಪಚಾರಿಕವಾಗಿ "ಹೌದು. ತುಂಬಾ ಚೆನ್ನಾಗಿದೆ" ಎಂದೆ.

"ಬೇಲೂರು ಚೆನ್ನವೋ, ಹಳೇಬೀಡು ಚೆನ್ನವೋ?" ನನ್ನ ಕಲ್ಪನೆಯೆಲ್ಲಾ ಇತ್ತ್ಯೆತ್ತಿಗೆ ತತ್ತರಿಸಿ ಹೋಗಿತ್ತು. ಆದ್ದರಿಂದ ಧೈರ್ಯವಾಗಿ ಹರಟಿಯುನ್ನಾದರೂ ಹೊಡೆಯೋಣ ಎಂದುಕೊಂಡು ಮಾತಿಗೆ ಶುರು ಮಾಡಿದೆ.

"ನನಗೇನೋ ಹಳೇಬೀಡು ತುಂಬಾ ಚೆನ್ನಾಗಿ ಕಂಡಿತು ಗೌಡರೇ! ಅಲ್ಲಿಯ ಆ ಪ್ರಶಾಂತ ವಾತಾವರಣ, ಆ ದ್ವಾರಸಮುದ್ರ, ತಂಗಾಳಿ ಎಲ್ಲಾ ಮನಸ್ಸಿಗೆ ತುಂಬಾ ಶಾಂತಿ, ಆನಂದ ತಂದಿತು. ಬೇಲೂರು ಯಾವುದಕ್ಕೂ ಕಡಿಮೆಯಿಲ್ಲ. ಅದರದೇ ಒಂದು ತೆರನಾದ ಅಂದ, ಇದರದೇ ಒಂದು ರೀತಿಯ ಸೊಬಗು. ಎರಡನ್ನೂ ಒಬ್ಬನೇ ಕಟ್ಟಿದ್ದಲ್ಲವೆ, ಆ ಪ್ರಸಿದ್ಧ ಜಕಣಾಚಾರಿ?" ಸಾಕಷ್ಟು ಚೆನ್ನಾಗಿಯೇ ಮಾತನಾಡಿದೆ ಎನ್ನಿಸಿತು.

ಗೌಡರು ಯಾಕೋ ಒಂದು ಬಾರಿ ಕುತೂಹಲದಿಂದ ನಿಟ್ಟಿಸಿದರು. ಆ ಕಂದುಬಣ್ಣದ ಆಳವಾದ ಕಣ್ಣುಗಳಲ್ಲಿ ಹೊಳಪು ಮೂಡಿತು. ಒಂದು ರೀತಿಯ ಉತ್ಸುಕತೆಯಿಂದಲೇ "ಇಷ್ಟೆಲ್ಲಾ

ಅಸಕ್ತಿಯುಳ್ಳ ನೀನು, ಕೈದಾಳ ನೋಡದೆ ಹೋಗುತ್ತೀಯಾಮ್ಮಾ?" ಎಂದು ಕೇಳಿದರು.

"ಕೈದಾಳ!" ಹೆಸರೇ ಕೇಳಿರಲಿಲ್ಲ ನಾನು. "ಎಲ್ಲದೆ ಆ ಊರು ಗೌಡರೆ?" ಎಂದೆ. "ಆ ಹಳ್ಳಿ ಎನ್ತು ತಾಯಿ! ತುಮಕೂರು ಜಿಲ್ಲೆಯಲ್ಲಿದೆ. ಹೆಸರೇ ಕೇಳಿಲ್ಲವೇ? ಬಿಡಮ್ಮಾ" ಎಂದು ಆತ ನಿರುತ್ಸಾಹದಿಂದ ಅತ್ತ ಮೊಗ ತಿರುಹಿದರು. ಎದುರು ಸಾಲಿನಲ್ಲಿದ್ದ ಆ ತಂದೆ "ಅದೇನು ಅಲ್ಲಿಯ ವಿಶೇಷ?" ಎಂದರು 'ಪರವಾಯಿಲ್ಲ. ನಾನೊಬ್ಬಳೆ ಅಲ್ಲ ಮಂಕು; ನನ್ನಂತಹರೂ ಇದ್ದಾರೆ' ಎಂದು ಧೈರ್ಯವಾಯಿತು.

"ಕೈದಾಳ ಜಕಣಾಚಾರಿ ಹುಟ್ಟಿ ಬೆಳೆದ ನಾಡದು. ದೊಡ್ಡ ಕಥೆಯದು. ಎಂಥೆಂಥ ಮಹನೀಯರು ಹುಟ್ಟಿ ಬೆಳೆದ ನಾಡಿದು. ಪುಣ್ಯ ಭೂಮಿ!" ಎಂದರು.

"ಆ ಕಥೆ ನಿಮಗೆ ತಿಳಿದಿದೆಯೋ?" ನಾನೇ ಮತ್ತೆ ಕೇಳಿದೆ. "ಗೊತ್ತು", ಚುಟುಕಾಗಿ ಉತ್ತರವಿತ್ತರು ಗೌಡರು. ಈ ಸಾರಿ ಸೋಲು ನನ್ನದಾಯಿತು, "ಹಾಗಾದರೆ ಹೇಳಿ ಸ್ವಾಮಿ. ಕಾಲ ಬಂದಾಗ ಅಲ್ಲಿಗೆ ಹೋದರೂ ಹೋಗಬಹುದು. ಕಥೆ ತಿಳಿದಿದ್ದರೆ ಉತ್ಸಾಹ ಇಮ್ಮಡಿಯುತ್ತೆ" ಎಂದೆ. "ದೊಡ್ಡ ಕಥೆ, ಹಿಂದಿನ ಕಾಲದ ವಿಚಾರ. ನಿಮಗೆ ಯಾಕಮ್ಮಾ ಅದೆಲ್ಲಾ. ಇಂಗ್ಲೀಷ್ ಪುಸ್ತಕ, ಇಂಗ್ಲೀಷ್ ಕಥೆ ಎಂದ್ರೆ ಬಾಯಿ ಬಿಡ್ತೀರಿ! ನಮ್ಮ ಕಾಲದ್ದು ಕಟ್ಟಿ ಕೊಂಡು ಏನು ಹೇಳಿ" ಮುನ್ಯಿಗೆ ಮುಯ್ಯ! ನಿಜವಾಗಿಯೂ ನನಗೆ ತುಂಬಾ ಅವಮಾನವಾಯಿತು.

"ಹಾಗೆಂದರೇನು ಗೌಡರೆ? ನಮ್ಮ ದೇಶದ್ದು ನಾವು ಕಲಿಯದೆ ಮತ್ತಾರು ಕಲಿಯುತ್ತಾರೆ?" ಇದ್ದುದರಲ್ಲಿ ಧೈರ್ಯ ತಂದುಕೊಂಡು ಕೇಳಿದೆ.

ಎದುರಿಗಿದ್ದ ಮಗುವಿನ ತಂದೆ, "ನೀವೇ ಹೇಳಿ ಗೌಡರೆ, ಮುಂದಿನ ಕಥೇನ. ಕೇಳುವ! ದಾರಿನೂ ಬೇಗ ಕಳೆಯುತ್ತೆ. ವಿಚಾರವೂ ತಿಳಿಯುತ್ತೆ" ಎಂದರು. ಅಕ್ಕಪಕ್ಕದಲ್ಲಿದ್ದವರೂ ದನಿಗೂಡಿಸಿದರು, "ಹೇಳಿ ಸ್ವಾಮಿ, ಹೇಳಿ ಗೌಡ್ರೆ" ಎಂದು. ಗೌಡರು ಕಥೆ ಶುರು ಮಾಡಿದರು.

× × × ×

ಹಿಂದೆ ಕೈದಾಪುರವೆಂಬ ನಾಡೊಂದಿತ್ತು. ಅದನ್ನು ನೃಪರಾಯನೆಂಬ ದೊರೆ ಆಳುತ್ತಿದ್ದ. ಅತನ ಪತ್ನಿ ಮಹಾದೇವಿ. ಆಕೆ ಮಹಾ ಪತಿವ್ರತೆ, ಭಕ್ತಿವಂತೆ, ಸಾಧ್ವಿ. ಆ ರಾಜ್ಯಕ್ಕೆ ನೃಪರಾಯ-ಮಹಾದೇವಿಯರು ತಾಯಿ-ತಂದೆಯಂತಿದ್ದರು. ಯಾವೊಬ್ಬ ಪ್ರಜೆಯೂ ಕಷ್ಟಕ್ಕೆ ಒಳಗಾಗದಂತೆ, ಯಾವೊಂದು ಪ್ರಾಣಿಗೂ ಹಿಂಸೆಯಾಗದಂತೆ, ಬಲು ಅಕ್ಕರೆಯಿಂದ ರಾಜ್ಯ ಪರಿಪಾಲನೆ ಮಾಡುತ್ತಿದ್ದರಂತೆ ಹೀಗೇ ಇರಲು ಒಂದು ಸಾರಿ ಮಹಾದೇವಿಗೆ—ಪಟ್ಟದರಸಿಗೆ, ಯಾವುದೋ ಕಾಹಿಲೆ ಬಂದೊದಗಿತಂತೆ....ಪಾಪ! ಮಹಾ ಮಹಾ ಪಂಡಿತರೆಲ್ಲಾ ಬಂದರೂ ವಾಸಿಯಾಗಲೇ ಇಲ್ಲ, ಮಹಾದೇವಿಯ ಅಂತ್ಯ ಸಮೀಪ ಆಯಿತು ಎಂದೇ ಎಲ್ಲರೂ ಅಂದುಕೊಂಡರು. ಒಂದು ಸೋಮವಾರ ಸಂಜೆ ಮಹಾರಾಣಿ ಮಹಾದೇವಿ, ತನ್ನ ಅಂತಿಮ ಇಚ್ಛೆಯನ್ನು ಪ್ರಕಟಿಸಿ ಕೊನೆಯುಸಿರನ್ನು ಎಳೆದಳು. ರಾಜ್ಯಕ್ಕೆ ರಾಜ್ಯವೇ ಗೋಳಾಡಿತು. ಹೆಸುವನ್ನು ಕಳೆದುಕೊಂಡ ಕರುವಿನಂತೆ ಜನ ದುಃಖಿಸಿದರು. ರಾಜ್ಯಾಧಿಕಾರಿಗಳು. ಆ ಮಹಾತಾಯಿಯ ಕೊನೆಯ ಆಶೆಯನ್ನಾದರೂ ಪೂರೈಸುವ—ಎಂದು, ಕೆಲಸಕ್ಕೆ ಶುರು ಮಾಡಿದರು. ಮಹಾರಾಣಿಯ ಅಂತಿಮ ಆಶಯ, ರಾಜ್ಯದಲ್ಲಿ ಒಂದು—ಕನ್ನಡ ನಾಡಿಗೇ ಕಲಶಪ್ರಾಯವಾಗುವಂಥ—ಸತ್ಯನನ್ನು, ಧರ್ಮವನ್ನು, ಆಚರಿಸಿಕೊಂಡು ಬರುವ ದೇವಸ್ಥಾನವೊಂದು ಸ್ಥಾಪಿತವಾಗಬೇಕು. ಮಹಾರಾಜ ನೃಪರಾಯನ ಕೀರ್ತಿಕೌಶಲವನ್ನು ಬೆಳಗುವಂತಹ ಒಂದು ದೇವರ ಸ್ಥಾನ ಅಲ್ಲಿ ನಿರ್ಮಿತವಾಗಬೇಕು—ಎಂಬುದೇ.

ಮಹಾಮಂತ್ರಿ ರಾಣಿಯ ಕೊನೆಯಾಸೆಯನ್ನು ನೆರವೇರಿಸಲೋಸುಗ, ಶಿಲ್ಪಿಗಳಲ್ಲಿ ಹಿರಿಯನಾದ ದೇವಯ್ಯನನ್ನು ಕರೆಯಿಸಿದ. ಎಲ್ಲಾ ವಿವರಗಳನ್ನೂ ಕೊಟ್ಟ. ದೇವಯ್ಯ ಒಪ್ಪಿಕೊಂಡು ತನ್ನ ಶಿಲ್ಪಿ ಬಳಗವನ್ನೆಲ್ಲಾ ಕರೆಯಿಸಿದ; ಸಭೆ ನಡೆಯಿಸಿದ. ಸಭೆಯಲ್ಲಿ ಹಾಜರಿದ್ದವರಲ್ಲಿ ಜಕಣಾಚಾರಿಯೂ ಒಬ್ಬ. ಆಗ ಆತನಿನ್ನೂ ತರುಣ. ಅವನ ಕೀರ್ತಿ ಅದಾಗಲೇ, ಅವನ ಸಣ್ಣ ಪುಟ್ಟ ಕೆಲಸಗಳಲ್ಲೇ ಬೆಳಕಿಗೆ ಬಂದಿತ್ತು. ಆದ್ದರಿಂದ ಆತನಿಗೆ ಸ್ವಲ್ಪ ಅಹಂಭಾವ ಮೂಡಿತ್ತು. ಹಿರಿಯರ ಹುಮ್ಮಸದಲ್ಲಿ ಆತನಿಗೆ, ತನ್ನನ್ನೇ ಎಲ್ಲರೂ ಕೇಳಲಿ, ತನ್ನನ್ನೇ ಎಲ್ಲರೂ ನೇಮಿಸಲಿ—ಎಂಬ ಅಪೇಕ್ಷೆ; ಆದರೆ ದೇವಯ್ಯ ನಿಷ್ಪಕ್ಷಪಾತಿ. ಹಿರಿಯ, ಎಲ್ಲವನ್ನೂ ಕಂಡವ, ಅನುಭವಸ್ಥ ಅವನ ಕಣ್ಣಲ್ಲಿ ಎಲ್ಲರೂ ಒಂದೇ. ಆದ್ದರಿಂದ ಯಾವ ಭೇದಭಾವವನ್ನೂ ಎಣಿಸಲಿಲ್ಲ. ಜಕಣಾಚಾರಿಗೆ ಮೊದಲೇ ಸ್ವಲ್ಪ ಮುಂಗೋಪ ಮಹಾಸಿಟ್ಟು ಬಂತು. ಸಭೆಯನ್ನೇ ಬಿಟ್ಟು ಹೊರಟು ಹೋದ. ದೇವಯ್ಯ ಸಭೆಯನ್ನು ಮುಂದುವರೆಯಿಸಿದರೂ ಕೆಲಸ ಫಲಕಾರಿಯಾಗಲಿಲ್ಲ ದೇವಯ್ಯ ವೃದ್ಧ; ಕೆಲಸ ಒಪ್ಪಿಕೊಳ್ಳಲು ಭಯ ಮಿಕ್ಕವರೆಲ್ಲಾ "ಅಯ್ಯಾ, ನಾವೇನು ಕಂಡಿದ್ದೇವೆ! ಅಂತಹ ಮಹಾಕಾರ್ಯ ಒಪ್ಪಿಕೊಳ್ಳಲು ನಮಗೆ ಧೈರ್ಯ ಸಾಲದು. ಅದೇನು ಸಾಮಾನ್ಯ ಕೆಲಸವೇ?" ಎಂದರು. "ನಾನೊಲ್ಲೆ", "ತಾನೊಲ್ಲೆ" ಎಂದು ಹಿಂಜರಿದರು, ಈ ವಿಚಾರ ನೃಪರಾಯನ ತನಕ ಹೋಯಿತು. ಮಹಾರಾಜನಿಗೆ ರಾಣಿ ಅಗಲಿದ ಮೇಲೆ, ಬಾಳ್ವೆಯಲ್ಲಿ ಬೇಸರು ಬಂದಿತ್ತು. ಜೀವನದಲ್ಲಿ ವೈರಾಗ್ಯ ಮೂಡಿತ್ತು. "ಆಗಲಿ, ಗಳಿಗೆ ಕೂಡಿಬಂದರೆ ಅದಿಸ್ಪರ ಮಾತು. ಆಗೇ ಆಗುತ್ತೆ ನೋಡುವ!" ಎಂದು ನುಡಿದ; ಕೆಲಸ ಅಸ್ಪಷ್ಟಕ್ಕೇ ನಿಂತಿತು.

ಇತ್ತಲಾಗಿ ಜಕಣಾಚಾರಿ, ಗರ್ಭಿಣಿ ಹೆಂಡತಿಯನ್ನು ತೌರಿನಲ್ಲಿ ಬಿಟ್ಟು, ವೃದ್ಧ ತಾಯಿಯ ವ್ಯವಸ್ಥೆ ಮಾಡಿ, ತನಗೆ ಸನ್ಮಾನ ದೊರೆಯದ ಊರಿನಲ್ಲಿದ್ದೇನು ಪ್ರಯೋಜನ?—ಎಂದುಕೊಂಡು, ತನ್ನ ಅದೃಷ್ಟವನ್ನು ಪರೀಕ್ಷಿಸಲೋಸುಗ ಹೊಂಟೇ ಬಿಟ್ಟ. ಹೊಯಿಸಳರ ರಾಜಧಾನಿಗೆ ಹೋಗಿ, ರಾಜಾಧಿರಾಜ ವಿಷ್ಣುವರ್ಧನನ ಕೈಕೆಳಗೆ ಕೆಲಸ ಮಾಡಲು ಆರಂಭಿಸಿದ. ಆಗಲೇ ರೂಪುಗೊಂಡಿದ್ದ ಆ ಚಿರಸ್ಮರಣೀಯ,

ಅದ್ಭುತ ದೇವಾಲಯಗಳು, ಬೇಲೂರಿನ ದೇವಾಲಯದ ಕೆಲಸ ಸಾಗುತ್ತಿತ್ತು. ಅಷ್ಟರಲ್ಲೇ ಈ ಘಟನೆ ಸಂಭವಿಸಿತು.

ಅವನು ಊರು ಬಿಟ್ಟು ಹೊರಟು ಹೋದ ಮೇಲೆ ಅವನ ಮಗ ಡಂಕಣಾಚಾರಿ ಜನಿಸಿದ. ತಾಯಿ, ಅಜ್ಜಿಯರೊಡನೆ ಬೆಳೆದು, ತಂದೆಯ ಮುಖವನ್ನೇ ಕಂಡರಿಯದ ಶಿಶು, ಡಂಕಣ. ಬೆಳೆ ಬೆಳೆಯುತ್ತಾ ಓರಗೆಯವರಿಂದ, ಸ್ನೇಹಿತರಿಂದ, ತನ್ನ ತಂದೆ ನಾಡನ್ನೇ ತ್ಯಜಿಸಿದ ಕಥೆ ತಿಳಿಯಿತು. ಅವನಿಗೆ ಹದಿನೈದು ಹದಿನಾರಿರಬಹುದು. ಆಗಲೇ ಮೂಡಿತು, ಅವನಿಗೆ ಒಂದು ಛಲ. ಹೇಗಾದರೂ ಮಾಡಿ ತಂದೆಯನ್ನು ಅರಸಬೇಕು; ಏನಾದರೂ ಮಾಡಿ ಅವನನ್ನು ಮರಳಿ ಕರೆತರಬೇಕು ಎಂಬ ಮಹತ್ತ್ವಾಕಾಂಕ್ಷೆಯಿಂದ ಊರನ್ನು ಬಿಟ್ಟು ಹೊರಡಲು ಯೋಚನೆ ಮಾಡಿದ ಗಂಡನೂ ಇಲ್ಲದೆ, ಮಗನನ್ನೂ ಕಳೆದುಕೊಳ್ಳುವ ಪರಿಸ್ಥಿತಿ ಬಂದಿತು ಅವನ ತಾಯಿಗೆ. ಅಜ್ಜಿ, ತಾಯಿ ಸೆರಗೊಡ್ಡಿ ಬೇಡಿದರೂ, ಅವನ ನಿರ್ಧಾರ ಕದಲಲಿಲ್ಲ ಹುಡುಕಿಯೆ ತರುವೆನೆಂಬ ಹಟ ಅವನಲ್ಲಿ ಮೂಡಿತ್ತು. ಹೊರಟೇ ಬಿಟ್ಟ.

× × × ×

ಚೈತ್ರ ಮಾಸದ ಬಿಸಿಲು. ಕಾಲುನಡೆಯಲ್ಲಿಯೆ ಹೊರಟ ಡಂಕಣ ಹೊಯಿಸಳರ ಬೀಡಿಗೆ ಬಂದ. ಬೇಲೂರಿನ ದೇವಾಲಯ ನಿರ್ಮಿತನಾಗುತ್ತಿತ್ತು. ಅಲ್ಲೇ ನಿಶ್ರಮಿಸಿಕೊಳ್ಳಲು ಕುಳಿತ. ಹಾಗೆಯೇ ಒಳಹೊಕ್ಕು ನೋಡೋಣವೆಂದು ಒಳಗೆ ನಡೆದ ಕೆಲಸ ಸಂಭ ಮದಿಂದ ಸಾಗಿತ್ತು. ಕಲ್ಲುಗಳ ರಾಶಿ ಒಂದೆಡೆ, ಕೆತ್ತಿದ ಬೊಂಬೆಗಳು ಮತ್ತೊಂದೆಡೆ, ಒಂದೇ ಸಮನಾಗಿ, ಅವಿರತವಾಗಿ ಬರುತ್ತಿತ್ತು ಉಳಿಯ ಸದ್ದು, ಕಿವಿಗೆ ಇಂಪಾಗಿತ್ತು. ಶಿಲ್ಪಿಯ ಮಗನಲ್ಲವೆ ? ಶಿಲ್ಪಶಾಸ್ತ್ರ ರಕ್ತದಲ್ಲಿ ಹರಿಯುತ್ತಿತ್ತು. ತಂದೆಗಿಂತಲೂ ಮಗ ಬುದ್ಧಿವಂತ, ಎಂದು ಅವನ ಊರಲ್ಲಿ ಎಲ್ಲರೂ ಅನ್ನುತ್ತಿದ್ದರು ಅಂತಹವನಿಗೆ ಇಂತಹ ಕೆಲಸ ಎಂದರೆ ಸೈಯಲ್ಲಾ ಬಾಯಿ. ಒಂದೊಂದೇ ವಿಗ್ರಹಗಳನ್ನು ಪರಿಶೀಲಿಸುತ್ತಾ ಬಂದ. ಆಲ್ಲೊಂದೆಡೆ ಕೇಶವನ ವಿಗ್ರಹ ಕಡೆದಿಟ್ಟಿದ್ದರು ಅದ್ಭುತ ರಮ್ಯ ಕೆತ್ತನೆಯ ಕೆಲಸ. ಕರಿಯ ಕಲ್ಲಿನ ಸುಂದರ ಮೂರ್ತಿ. ಅದನ್ನೇ ನಿಟ್ಟಿಸುತ್ತಾ ನಿಂತ ಡಂಕಣಾಚಾರಿ. ಅಕ್ಕಪಕ್ಕದಲ್ಲಿದ್ದವರೆಲ್ಲಾ ಇವನನ್ನೇ ನೋಡುತ್ತಾ ಇದ್ದರು. ಅದನ್ನು ನೋಡಿದವರೆಲ್ಲಾ ಆ ಕೆತ್ತನೆಯನ್ನು ಮಾಡಿದ ಶಿಲ್ಪಿಯನ್ನು ಹೊಗಳಿ, ಹರಸಿ ಹೋಗುತ್ತಿದ್ದರು. ಆದರೆ ಡಂಕಣಾಚಾರಿಯಿಂದ ಅವರು ನಿರೀಕ್ಷಿಸಿದ್ದ ಉತ್ತರ ದೊರೆಯಲಿಲ್ಲ. ಉತ್ತರವಾಗಿ, ಡಂಕಣಾಚಾರಿ ಆ ಮೂರ್ತಿಯ ಹತ್ತಿರಕ್ಕೆ ಹೋಗಿ, ಅದರ ನಾಭಿಯ ಬಳಿ ಎರಡು ಸಾರಿ ಬಡಿದ. ಆಮೇಲೆ ಪರಿಹಾಸ್ಯವಾಗಿ ನಕ್ಕ. ಅಲ್ಲಿದ್ದವರಿಗೆ ಎಲ್ಲಾ ಆಶ್ಚರ್ಯ. "ಯಾರಯ್ಯ ನೀನು", "ಎಲ್ಲಿಂದ ಬಂದೆ ?" "ಅದನ್ನು ಕಂಡು ನಗುವಷ್ಟು ತಿಳಿದಿದ್ದೀಯಾ ನೀನು" ಎಂಬ ನಾನಾ ರೀತಿಯ ಮಾತುಗಳು ಎದ್ದುವು. ಎಲ್ಲಾ ಕೆಲಸಗಾರರೂ ಬಂದು ಮುತ್ತಿದರು. ಅಷ್ಟರಲ್ಲಿ ಯಾರೋ ಒಬ್ಬರು ಹೋಗಿ ಜಕಣಾಚಾರಿಯನ್ನೂ ಕರೆತಂದರು, ತಂದೆ, ಮಕ್ಕಳ ಭೇಟಿ; ಸೊಹ್ರಾಬ್ ರುಸ್ತುಂರಂತೆ ಆಯಿತು. ಜಕಣಾಚಾರಿಗೋ, ಮೂಗಿನ ಮೇಲೆ ಕೋಪ, ತುಂಬಾ ದುಡುಕು. "ನನ್ನ ಕೆತ್ತನೆಯನ್ನು, ಶಿಲ್ಪವನ್ನು ವಿಮರ್ಶಿಸುವ ಗಂಡೆದೆ ಈ ಅವಿವೇಕಿ ಬಾಲಕನಿಗೆ ಬಂತೇ ?" ಎಂದುಕೊಂಡೇ ಬಂದ, ಇಬ್ಬರ ನಡುವೆ ವಾಗ್ವಾದ ಬೆಳೆಯಿತು. ಡಂಕಣಾಚಾರಿ ಸೋಲಲಿಲ್ಲ. "ಶಿಲ್ಪದಲ್ಲಿ ದೋಷವಿದೆ" ಎಂದೇ ಸಾಧಿಸಿದ, "ಎಂತಹ ದೋಷ ?", ಜಕಣಾಚಾರಿಯ ಸವಾಲು. "ವಿಗ್ರಹದ ನಾಭಿಯ ಬಳಿ, ಏನೋ ಸೇರಿದೆ ಎಂಬ ಸಾರಿ ಹೇಳುತ್ತೇನೆ. ನಾಭಿಯ ಬಳಿ, ಸ್ವಲ್ಪ ನೀರೂ, ಕೊಂಚ ಮರಳೂ, ಒಂದು ಕಪ್ಪೆ ಇದೆ ಇದು ಖಂಡಿತ" ಎಂದ ಡಂಕಣ ಸರಿ. ರಾಜನವರೆಗೂ ಹೋಯಿತು ದೂರು. ಊರಿನ ಮುಖ್ಯಾಧಿಕಾರಿಗಳೆಲ್ಲಾ ಸೇರಿದರು. ಎಲ್ಲರೆದುರಿನಲ್ಲಿ ಮುಂದುವರೆಯಿತು ಚರ್ಚೆ. ತಂದೆ ಮಗನ ಮಹತ್ತರ ಮಾತುಗಳು, ತಂದೆಯೆಂದು ತಿಳಿಯದ ಮಗ, ಮಗನೆಂಬ ಅರಿವಿಲ್ಲದ ತಂದೆ, ಇಬ್ಬರಲ್ಲಿ ಮಾತುಕತೆಗಳು.

ಜಕಣಾಚಾರಿ ಕಡೆಯದಾಗಿ "ಈ ವಿಗ್ರಹದಲ್ಲಿ ನೀನು ಹೇಳುತ್ತಿರುವಂತೆ ದೋಷವಿರುವುದೇ ಆದರೆ, ಎಲ್ಲರ ಸಮ್ಮುಖದಲ್ಲಿ ಪ್ರತಿಜ್ಞೆ ಮಾಡಿ, ಕೇಶವನ ಆಣೆ ಇಟ್ಟು ಹೇಳುತ್ತೇನೆ ಕೇಳಿ, ಈ ನನ್ನ ಬಲಗೈಯನ್ನು ತುಂಡರಿಸುತ್ತೇನೆ. ಅದೇನಾದರೂ ದೋಷ ರಹಿತವಾಗಿದ್ದರೆ, ಇದೇ ರೀತಿಯ ಪ್ರತಿಜ್ಞೆಗೆ ನೀನು ಒಳಪಡು" ಎಂದು ಘೋಷಿಸಿದ. ಡಂಕಣಾಚಾರಿ ಅನುಮತಿ ಇತ್ತ. ಆಗ ಸಂಜೆ ನಾಲ್ಕು ಘಂಟೆಯ ಸುಮಾರಿರಬಹುದು. ಪ್ರತಿಜ್ಞೆ ಎಲ್ಲರ ಸಮ್ಮುಖದಲ್ಲಿ ಮಾಡಿದ್ದಾಗಿತ್ತು ಮಾರನೆಯ ದಿನ ಪರೀಕ್ಷೆ ಎಲ್ಲರೂ ಚದರಿದರು. ಡಂಕಣಾಚಾರಿ ಹುಸಿನಗೆ ಬೀರುತ್ತಾ ಊರಿನ ಭತ್ರದ ಕಡೆ ಹೊರಟ. ಜಕಣಾಚಾರಿ ಅಹಂಕಾರದ ನಗೆ ಬೀರುತ್ತಾ ತನ್ನ ಬಿಡಾರಕ್ಕೆ ತೆರಳಿದ. ಆದರೂ ಅದೇಕೋ ಅವನ ಮನಸ್ಸಿನಲ್ಲಿ ಒಂದು ರೀತಿಯ ಅಳುಕು. ಅವನಿಗೆ ಎಂದೂ, ಯಾರೂ ಈ ರೀತಿಯ ಸವಾಲ್ ಹಾಕಿರಲಿಲ್ಲ ಅಂತಹುದರಲ್ಲಿ, ಈ ಕಣ್ಣ ಹುಡುಗನ ಬಾಯಿಗೆ ಬಿದ್ದೆನಲ್ಲಾ—ಎಂಬ ಕೋಪ ಒಂದು ಕಡೆ; ಮತ್ತಾವುದೋ ಒಂದು ಅವ್ಯಕ್ತ ಭೀತಿಯೊಂದು ಕಡೆ, ಎಲ್ಲಾ ತರಹ ತಳಮಳದಿಂದ ಆ ರಾತ್ರಿಯನ್ನು ಹೇಗೋ ಕಳೆದ ಮರುದಿನ ಬೆಳಕು ಹರಿಯಿತು. ಊರಿಗೆ ಊರೇ ಶಿಲ್ಪಿಯ ಪ್ರತಿಜ್ಞೆಯನ್ನು ಕೇಳಿ, ಮುಂದಿನ ಕೌತುಕವನ್ನು ವೀಕ್ಷಿಸಲು ಬಂದಿದ್ದರು ಅಧಿಕಾರಿಗಳು, ಮುಖ್ಯಾಧಿಕಾರಿಗಳು, ಜನ ಸಾಮಾನ್ಯರು, ಒಟ್ಟಿನಲ್ಲಿ ಸಮಸ್ತರೂ ಮೊಗಚಿದ್ದರು ಜಕಣಾಚಾರಿ ಮೊದಲು ಬಂದ, ವಿಗ್ರಹವನ್ನು ಹೊರಗಿನ ಪ್ರಾಕಾರದಲ್ಲಿ ಎಲ್ಲರಿಗೂ ಕಾಣಿಸುವಂತೆ ಇಟ್ಟ. ಹತ್ತಿರದಲ್ಲೇ ಮಚ್ಚು ಕತ್ತಿಯನ್ನೂ ಇರಿಸಿದ ಜನರೆಲ್ಲಾ "ಹೋ" ಎಂದು ಕೂಗಿದರು. ಅಷ್ಟರಲ್ಲಿಯೇ ಡಂಕಣಾಚಾರಿಯೂ ಬಂದ. ಜನ ಮತ್ತೂ ಕೂಗಿತು, ಆ ಸಂಘಟನೆಯ ನ್ಯಾಯ ತೀರ್ಮಾನ ಮಾಡುವ ನ್ಯಾಯಾಧಿಪತಿ ಮುಂದೆ ಬಂದ ಸೂಜಿ ಕೆಳಗೆ ಬಿದ್ದರೆ ಕೇಳಿಸುವಂತಹ ಮೌನ ಅವರಿಸಿತು. ನ್ಯಾಯಾಧಿಕಾರಿ ಗಂಭೀರ ಧ್ವನಿಯಲ್ಲಿ ಕೇಳಿದ "ನಿಮ್ಮ ಪ್ರತಿಜ್ಞೆಗಳನ್ನು ಇನ್ನೂ ಇಟ್ಟುಕೊಂಡಿದ್ದೀರೋ ?" "ಹೌದು", ಇಬ್ಬರೂ ಕೂಡಿಯೇ ಎತ್ತರಿಸಿದರು. "ಹಾಗಾದರೆ ಪರೀಕ್ಷೆ ನಡೆಯಲಿ"

ಎಂದು ತೀರ್ಮಾನವಿತ್ತ ನ್ಯಾಯಾಧಿಪತಿ. "ಯಾವ ರೀತಿಯ ಪರೀಕ್ಷೆ?" ಜಕಣಾಚಾರಿ ಡಂಕಣನನ್ನು ಪ್ರಶ್ನಿಸಿದ "ವಿಗ್ರಹವನ್ನು ಒಡೆಯಬೇಕೆನ್ನುತ್ತೀಯಾ?"

"ಬೇಡ! ಮೊದಲು ಚಂದನವನ್ನು ವಿಗ್ರಹಕ್ಕೆ ಪೂರ್ತಿ ಬಳೆಯುವ. ನಾನು ಹೇಳಿದ್ದೇ ನಿಜವಾದರೆ, ನಾಭಿಯ ಬಳಿ ತೇವ ವಿರುವುದರಿಂದ ಅಲ್ಲಿ ಚಂದನ ಆರುವುದಿಲ್ಲ. ಆಮೇಲೆ ಬೇಕಾದರೆ ವಿಗ್ರಹವನ್ನು ಬಗೆದು ನೋಡೋಣ." ಎಂದ ಡಂಕಣ.

ಚಂದನ ಬಂದಿತು. ಜನರೆಲ್ಲಾ ಮುಳ್ಳ ಮೇಲೆ ನಿಂತಂತೆ ನಿಂತಿದ್ದರು. ಎಲ್ಲರಿಗೂ ಉಸಿರು ಬಿಡಲು ಭಯ. ಚಂದನವನ್ನು ಬಳಿದಾಯಿತು. ವಿಗ್ರಹ ಚಂದನದ ಬೊಂಬೆಯಾಯಿತು. ನಿಮಿಷ—ಗಂಟೆಗಳು ಕಳೆಯುತ್ತಾ ಬಂದ ಹಾಗೆಲ್ಲಾ, ಕಾಲು, ತಲೆ, ಕೈಗಳ ಮೇಲಿನ ಚಂದನ ಒಣಗುತ್ತ ಬಂದಿತು. ಕೆಲವರು "ಹುಡುಗನಿಗೇ ಜಯ, ಅದು ನಿಜ" ಎಂದರು. ಮತ್ತೆ ಕೆಲವರು "ದೊಡ್ಡ ಶಿಲ್ಪಿಗೆ ಗೆಲವು. ಇದು ಖಂಡಿತ!" ಎಂದರು. ಮೂರು ಗಂಟೆಗಳ ಕಾಲ ಕಳೆಯಿತು. ವಿಗ್ರಹದ ನಾಭಿಯ ಸುತ್ತ ಹೊರತು ಉಳಿಕ್ಕೆಲ್ಲಾ ಕಡೆಯ ಚಂದನ ಒಣಗಿತು. "ಇನ್ನೂ ಒಂದು ಗಂಟೆ ಕಾಯುವ!" ಮಿಕ್ಕ ಎಲ್ಲಾ ಶಿಲ್ಪಿಗಳೂ ಕೂಗಿದರು "ಆಗಲಿ" ನ್ಯಾಯಾಧಿಪತಿ ಇನ್ನೂ ಒಂದು ಗಂಟೆಯ ಕಾಲ ಹೊತ್ತನ್ನು ಹೆಚ್ಚಿಸಲು ಅನುಮತಿ ಇತ್ತ.

ಜಕಣಾಚಾರಿಯ ಮುಖ ಕಳೆಗುಂದಿತು. ಆ ಅವ್ಯಕ್ತಭೀತಿಯ ಕಾರಣ ಅರಿವಾಯಿತು. ಕಾಲು ಗಂಟೆಯಾಯಿತು, ಅರ್ಧ ಗಂಟೆಯಾಯಿತು; ಇಲ್ಲ. ನಾಭಿಯ ಸುತ್ತ ಒರಲಿಲ್ಲ. ಮುಕ್ಕಾಲಾಯಿತು, ಕಡೆಗೆ ಒಂದಾಯಿತು. ಉಹುಂ, ಒಣಗಲಿಲ್ಲ. ಜನರೆಲ್ಲಾ ಒಂದೇ ಗಂಟಲಿನಲ್ಲಿ ಕೂಗಿದರು. ಜಕಣಾಚಾರಿ ಆ ಹದಿನಾರು ವರ್ಷದ ಬಾಲಕನ ಮುಂದೆ ತಲೆ ತಗ್ಗಿಸಿದ. ನಾಭಿಯ ಬಳಿ ಕೊರೆಯ ಲಾಯಿತು. ಡಂಕಣನ ಮಾತು ಸತ್ಯವಾಗಿತ್ತು. ಕಪ್ಪೆ, ನೀರು, ಮರಳು ಇದ್ದೇ ಇತ್ತು. ಪ್ರತಿಜ್ಞೆ. ಜಕಣಾಚಾರಿ ಅಚಲನಾಗಿದ್ದ. ಒಂದೇ ಸಾರಿ, ಎಲ್ಲರ ಸಮ್ಮುಖದಲ್ಲಿ, ಹಿಂದಿನ ದಿನ ಮಾಡಿದ ಪ್ರತಿಜ್ಞೆಯನ್ನು ಇಂದು ನಿಜ ಮಾಡಿದ ಎಡಗೈಯಿಂದ ಮಚ್ಚನ್ನು ಎತ್ತಿ ಹಿಡಿದ; "ಕೇಶವಾಯ ನಮಃ" ಎನ್ನುತ್ತಾ, ಬಲಗೈಯ ಮೊಣಕೈಯ ಮೇಲೆ ಎತ್ತಿ ಹೊಡೆದ. ವಿಗ್ರಹದ ಕಾಲ ಬಳಿ, ತುಂಡರಿಸಿದ ಕೈ ಮುರಿದು ಬಿತ್ತು; ರಕ್ತ ಚಿಮ್ಮಿತು. ಜನರೆಲ್ಲಾ "ಹೊ! ಭಲೆ! ಸತ್ಯವಂತ ಜಕಣಾಚಾರಿ" ಎಂಬ ಕೂಗನ್ನು ಕೂಗ ಹೆಚ್ಚಿದರು. ಜಕಣಾಚಾರಿ ಸೋತ ಧ್ವನಿಯಲ್ಲಿ ಕೇಳಿದ: "ನೀನಾರ ಮಗನಯ್ಯಾ?"

"ನಾನು ಕೃದಾಪುರದ ಶಿಲ್ಪಾಚಾರಿ ಮುದ್ದಣ್ಣನ ಮಗನಾದ ಜಕ್ಕಣ್ಣನ ಮಗ" ಎಂದ.

ಜಕಣಾಚಾರಿ "ಹಾ" ಎಂದು ಚೀರಿದ; ಹತ್ತಿರ ಬಂದು ನಿಟ್ಟಿಸಿ ನೋಡಿದ. ಹೌದು! ತಾನು ಬಿಟ್ಟಾಗ ಇನ್ನೂ ಹುಟ್ಟಿ ಬೆಳಕು ಕಾಣದ ಕೂಸದು. ತನ್ನ ಹಾಗೆಯೇ, ಅದೇ ಹಣೆಯ ಎಡಭಾಗ ದಲ್ಲಿಯ ಮಚ್ಚೆ; ಕೊರಳಿನಲ್ಲಿ ತನ್ನ ಹೆಂಡತಿ ಧರಿಸಿದ ಹುಲಿಯುಗುರಿನ ಸರ, ಹೌದು! ಸಂದೇಹವೇ ಇಲ್ಲ. ತನ್ನ ಮಗನೇ ಅವನು. "ಡಂಕಣಾ — ಮುದ್ದು ಕಂದಾ" ಎನ್ನುತ್ತಾ ತನ್ನ ಮೊಂಡು ಕೈಯಿಂದಲೇ ಅಪ್ಪಿದ. ಡಂಕಣನಿಗೆ ಅರಿವಾಯಿತು. "ಅಯ್ಯಾ—ಅಯ್ಯಾ..... ನಾನೆಂತಹ ಪಾಪಿ! ತಂದೆಯ ಕೈಯನ್ನೇ ಕತ್ತರಿಸಿದ ನೀಚ" ಎಂದು ಗೋಳಾಡಿದ. ಜಕಣಾಚಾರಿ ಸಂತಸದಿಂದ ಉಬ್ಬಿದ. "ಎಂತಹ ಶಿಲ್ಪಚಾತುರ್ಯ ನಿನ್ನದು ಡಂಕಣ್ಣಾ! ನನ್ನ ಮಗನೇ ಸರಿ" ಎನ್ನುತ್ತಾ, ಪ್ರೀತಿಯಿಂದ ತನ್ನ ಬೀಡಾರಕ್ಕೆ ಒಯ್ದ. ಅಲ್ಲಿಯೇ ಉಳಿದಿದ್ದ ಜನ ಈ ಅದ್ಭುತವನ್ನು ಕಂಡು ನಂಬಿಗೆಯ ಮೇಲೆ ದೆರಳಿರಿಸು ವಂತಾಯ್ತು. "ಆ ಕಾಲವೆ ಮಗ ಕೇಳಬೇಕೆ! ಅಂತೂ ದೇವ ಲೋಕವಿಂದ ಬಂದ ವಿಶ್ವಕರ್ಮಿಗಳು," ಎಂದುಕೊಂಡು ಹಿಂದಿರು ಗಿದರು.

ಅಂದಿನಿಂದ ಪ್ರಸಿದ್ಧವಾಯಿತು "ತಪ್ಪೆ ಚನ್ನಿಗರಾಯ"ನ ವಿಗ್ರಹ ಜಕಣಾಚಾರಿಯ ನೆಲ್ಲಿಚಾರಣೆ ಯಲ್ಲಿ. ಡಂಕಣನ ಸಹಾಯದಿಂದ ದೇವಾಲಯದ ಕೆಲಸ ಪೂರ್ತಿಯಾಯಿತು. ಮಗ-ನೊಡನೆ ಊರಿಗೆ ಹಿಂದಿರುಗಲು ಜಕಣಾಚಾರಿ ಒಪ್ಪಿದ್ದ.

ಅಂದು ರಾತ್ರಿ ಮಗನೊಡನೆ ಮಲಗಿ ನಿದ್ರಿಸುತ್ತಿದ್ದಾಗ, ಅವನಿಗೊಂದು ಸ್ವಪ್ನವಾಯಿತು ಕೇಶವನ ವಿಗ್ರಹ ಸಜೀವವಾಗಿ, ಸುಂದರವಾಗಿ, ಕಾಣಿಸಿತು. ಮೆಲ್ಲಗೆ, ಅಮಾನುಷವಾಗಿ, ಅಲೌಕಿಕ ವಾದ ಧ್ವನಿಯಲ್ಲಿ ಆ ಚೆನ್ನಿಗರಾಯನು ಇವನ ಕಿವಿಯಲ್ಲಿ ಉಸುರಿ ದಂತಾಯಿತು: "ಜಕ್ಕಣ್ಣಾ; ನಿನ್ನ ಊರಿಗೆ ಹಿಂದಿರುಗು. ಅಲ್ಲಿ ನನ್ನದೊಂದು ದೇವಾಲಯವನ್ನು ನಿರ್ಮಿಸು. ನಿನ್ನ ಕೈಯನ್ನು ನಿನಗೆ ಹಿಂದಿರುಗಿಸುತ್ತೇನೆ." ಎಂದಂತಾಯ್ತು. ಜಕಣಾಚಾರಿ ಗಾಬರಿ ಗೊಂಡು ಎದ್ದ. ಹೌದು! ಮತ್ತೆ ಮತ್ತೇ ಅದೇ ಮಾತು ಕೇಳಿಸು ತ್ತಿತ್ತು. ಮನಸ್ಸಿನಲ್ಲಿಯೇ ಏನನ್ನೋ ನಿರ್ಣಯಿಸಿಕೊಂಡು ಮಲಗಿದ.

ಊರಿಗೆ ತಂದೆಯೊಡಗೂಡಿ ಬಂದ ಮಗನನ್ನು ಕಂಡ ಅವನ ಅಬ್ಬೆ, ಅವ್ವೆಯರಿಗೆ ಅವ ಆನಂದಕ್ಕೆ ಪಾರವೇ ಇಲ್ಲ. ಜಕ್ಕಣ್ಣಾ ನೃಪರಾಯನನ್ನು ಕಂಡ. ತನ್ನ ಆಲೋಚನೆಯನ್ನು ತಿಳಿಸಿ, ಅಲ್ಲಿ ಒಂದು ಕೇಶವ ದೇವಾಲಯವನ್ನು ನಿರ್ಮಿಸಲು ಆರಂಭಿಸಿದ. ಆದರೆ ಈಗ ಅವನಿಗೆ ಹಿಂದಿನ ಅಹಂಭಾವವಿರಲಿಲ್ಲ ತಾನು ಮಾಡುತ್ತಿರು ವುದು ತನ್ನ ಕೀರ್ತಿಗಾಗಿ ಅಲ್ಲ ದೇವರಿಗೆ ಅರ್ಪಿತ—ಎಂಬ ಭಾವನೆ ಯಿಂದ ನಿರ್ಮಿಸುತ್ತಿದ್ದ ತನ್ನ ಕಲೆಯಲ್ಲಿ ಮುಕ್ತಿಯನ್ನು ಕಂಡ. ದೇವಾಲಯ ಅದ್ಭುತವಾಗಿ, ರಮ್ಯವಾಗಿ ಸುಂದರವಾಗಿ ರೂಪು ಗೊಳ್ಳುತ್ತಾ ಬಂದಿತು. ಶ್ರೀ ಚನ್ನಕೇಶವನ ವಿಗ್ರಹವನ್ನು ಕಡೆದು ಮುಗಿಸಿದಾಗ, ಅವನ ಕೈ ಮೊದಲಿನಂತಾಗಿತ್ತು. ಪುರಂದರದಾಸರು, ತ್ಯಾಗರಾಜರು, ಸಂಗೀತದಲ್ಲಿ ಮುಕ್ತಿಪಡೆದರೆ, ಜಕಣಾಚಾರಿ

(೪೩ನೆಯ ಪುಟ ನೋಡಿರಿ)

ಉಧೋ ಲಕ್ಷ್ಮಣಾ!

ಲೇ. ಅ. ರಾ. ಸೇ.

— ೧ —

ಗರಗರನೆ ತಿರುಗುತಿದೆ ಬೀಸುಗಲ್ಲು—
ಇಂಥ ಅಣುಯುಗದಲ್ಲು.
ತಿರುಗುತ್ತಲೇ ಇತ್ತು ರಾಮರಾಜ್ಯದ ಗುಡಿಸಲೊಂದೊಂದರಲ್ಲೂ.
ತೆವಿದೆ ಮುಂಬಾಗಿಲನು, ಒಳಗೆ ನುಗ್ಗಿತು ಧೂಳು;
ತೇಕುತ್ತ ಬಂತು ಅರಿಬೆಳುದಿಂಗಳು—
ಬರಿಮನದಿ ತುಂಬಿತ್ತು ಅದೆ ತಂಗುಳು,
ಮುರಿದು ಬಿದ್ದಿದೆ ಕುಂಟೆ, ಒಡೆಯುದಿದೆ ಹೆಂಟೆ
ಹುಳು ತಿಂದು ನೆಗ್ಗಿಹುದು ಹಳೆ ನೇಗಿಲು.
ಚಂದಿರನ ಮುಖಕೆಸೆದ ಕಪ್ಪುಮಸಿಯೆನೆ ಮೇಘ
ಮುಂದಬುದ್ಧಿಗು ಎರಚಿ ಹಗುರಾಗಿದೆ.
ಶೀಳಿಟ್ಟು ನರಿ ಕೂಗೆ, ರೆಕ್ಕೆ ಬಡಿಯಲು ಕಾಗೆ,
ಅದರ ಗೂಡಿಗೆ ನುಗ್ಗಿತೊಂದು ಗೂಗೆ;
ಹಗಲೆಲ್ಲ ತಳಮಳ—ಇರುಳೆಲ್ಲ ಕಳವಳ—
ಮಲಗಬಾರದೆ ಹೊನ್ನು ? ಇಲ್ಲ ಹಾಗೇ
ವಿಲವಿಲೀ ಎನ್ನುವುದೆ ಜಡಜೀವರಿಹೆ—ಕಂಡಿಲ್ಲವೇ—
ಇಷ್ಟೆ, ಹೀಗೇ
" ಬಾ, ಏನು ಸುದ್ದಿ—ಇದುವರೆಗೆ ಎಲ್ಲಿದ್ದೆ ?
ರಾಮರಾಜ್ಯವನು ನೀ ಹೇಗೆ ಕಟ್ಟಿದ್ದೆ ? "
" ಅಂಧಿಭವ ನಾನಲ್ಲವೊ ನಾನೇ ರಾಮರಾಜ್ಯ ಮೂಲಸ್ತಂಭ—
ಮಂಥರೆ ಯಾರುತೀರಿ ? ತರಿಯಿರಿ ? ಸದ್ಯ ಕಳ್ಳಬಳ್ಳ
ನಾನೇ ವಸಿಷ್ಠನಸಿಸ್ಟೆಂಟ್
ಇಟ್ಟೆನು ನೋಡಿ ಮುಹೂರ್ತ;
ರಾಮನಿಗೋ ವನವಾಸ—
ದಶರಥನಿಗೆ ಸ್ವರ್ಗವಾಸ—
ಭರತರಾಯ ಸದ್ಗುಣ ಸಂಪನ್ನ, ಕಟ್ಟಿದೆನವನಿಗೆ ಮುಗುವಾಣ—
ಲಕ್ಷ್ಮಣನೋ ಬಲು ಹಟಮಾರಿ....
'ಬಾರೋ ಸುಖವಾಗಿ ನ ಅಯೋಧ್ಯೆಯಲಿ !'
ಎಂದರೆ ಕಾಡಿಗೆ ಹೋಗುವೆನೆಂದ.
ರೋಗಲೇಳಿ ಅವನು, ಧರ್ಮಕೆ ಆಗಲೇಳಿ ವಿಜಯ "
ಪಂಚಾತಪದ ತಾಪವನು ನುಂಗಿ ಕೈಯೆತ್ತಿ
ತುಂಡುಬಟ್ಟೆಯನುಟ್ಟು ನಡೆದನೋ ಧೀರ—
ಕುಗ್ಗಿಸದು ತೆಂಗಳಿಕೆಯ ಕೂರಲಗು ಹಿಗ್ಗನಿನ

ದೀನ ದಲಿತರ ತಾಪ ಮುಗ್ಗಿದರೆ ಮಾನವತೆ
ಹಿಗ್ಗಿದರೆ ಅದೆ ಇವಗೆ ಪುಷ್ಪಹಾರ.
ಗಂಧರ್ವನಗರಿಯಲಿ ಅಮೃತಭಕ್ಷಣ
ಹೊರಡು ಕೈಯೆತ್ತಿ ಘೋಷಿಸು ಉಧೋ ಉಧೋ ಲಕ್ಷ್ಮಣಾ!
" ನೀನೊಬ್ಬನೇ ತಿಂದು ತೇಗಿದರೆ ಸಾಕೇ ?
ದಕ್ಕಬೇಕಲ್ಲ ಆ ಗಂಟು—
ತಿಂದು ತೇಗುವೆನೆಂಬೆ ಯಾರದೋ ಗಂಟು!
ಬರಿ ಸುಳ್ಳು ನಿನಗು ಆದಕೂ ಇರುವ ನಂಟು,
ಫಲಿಸದೆಂದೆಂದಿಗೂ ಮುಂಗೈಯ ಜೋರು,
ಕಾದೆ ಇದೆ ನಿನ್ನ ಸೇರಿಗೆ ಸವಾಸೇರು !
ನಿನಗೆಂದೆ ಪಡೆದನ್ನ ಸುಧೆಯಲ್ಲ; ಕೇಳು ಅದು ಕಾಳಕೂಟ,
ಹಂಚಿ ಉಂಡರೆ ಅದೇ ಅಮೃತ ಕೇಳಿದು ಧರ್ಮದಾಟ! "
ಎಂದು ನೀ ಬೋಧಿಸಿದಪೇ ಮಾತ ಕೇಳಿದೆನು
ಅದು ತಿಳಿಯಲಿಲ್ಲ —
ಕಿವುಡ, ತುಟಿಯಲುಗಿದುದ ಕಂಡು ತಲೆ ಹಾಕಿದನು
ಫಲವೇನೊ ಅದು ಹೊಳೆಯಲಿಲ್ಲ
" ಹೃದಯ ಪರಿವರ್ತನೆಯು ಫಲಿಸಿದಾಕ್ಷಣ
ಕೆಲಸವಾದಂತೆ ಅರ್ಧ
ಕಲಹವಳಿವುದು ಬೆಳೆವುದಾಗ ಸೌಹಾರ್ದ.
ಕಳಕಳಿಸಿ ನಗುವುದೋ ನಮ್ಮ—ನೆಲವಾಗ
ಅಳಿವುದು ಅಧರ್ಮ ಇಳೆ ತೊಳಗಿ ಬೆಳಗುವುದು.
ಕೈಗೆ ದೊರೆಕೊಳುವುದೆ ಮುಕ್ತಿರಾಜ್ಯ—
ತ್ಯಾಗಾಗ್ನಿಯಲಿ ಸುಡಲು ಭೋಗದಾಜ್ಯ—
ದಾತದಲಿ ಮನವ ನೀನನುಗೊಳಿಸಿದಾಗ
ಮನದ ಕಲುಷವ ನೀನು ತೊರೆದು ಬಂದಾಗ
ಕಳವಳವು ತೊಲಗಿ ಸುಖ ಶಾಂತಿ ಬಂದಾಗ "
(ತೆರೆಗಳಡಗಿ ಸಮುದ್ರ ನೆಲೆಗೆ ನಿಂದಾಗ
ಇನ್ನೇನೊ ಅದಾಗ ಸುತ್ತೇನೊ ಅದಾಗ!!)
" ಏನಾಗ ? "
" ಅದಾಗ.... .... ಅದಾಗ . .... "
ಹಾನೂಜ್ ದಿಲ್ಲಿ ದೂರ ಅಸ್ತ್

— ೨ —

ಕರೆಯುತಿದೆ ಒಂದು ದನಿ ಬಾ ಬಾ ಬಾ!
ಕರುಣೆಯಿಂದೀತು ಕರೆಯುವರು ಮತ್ತಿನ್ನಾರು

ಆ ಅದೇ ನಿನ್ನೊಬಾ
ಹೋಗುವೆನದೆಂದು ?
ಅವನ ಪಥದಲಿ ನಾನು ಸಾಗುವೆನದೆಂದು ?
ಬಂದು ಗಿಡದಡಿಯಲ್ಲಿ ನಿಂತು ನೋಡಿದೆ ಸೀಲೆ
ಹುಳಗಾಯಿ ಕೈಬೀಸಿ ಕರೆಯಿತೆನ್ನ :
ಬಾ ಬಾ ಬಾ—
ನಾ ಗಿಡದ ಮೇಲೇರಿ ಕಶುಗಾಯ ತಿತ್ತು ದವಡೆಯಲಿಟ್ಟು ಕಡಿದೆ–
ಹಲ್ಲು ಜುಳ್ಳೆನಲಾಯ್ತು ಬಹಳ ರೋಮಾಂಚ–
(ಅದೆ ಸ್ವರ್ಗ ಜೊತೆಗುಪ್ಪುಕಾರವಿರೆ ಕೊಂಚ!)
ಮೇಲೆ ಕುಳಿತವ ಕಡೆನಾ ದಿವ್ಯಪಥವ
ಅಲ್ಲಿ ಗುಂಪಿನ ಮುಂದೆ ನಿಂತಾ ನಿನೋಬಾ
ಕರೆದನೆನ್ನನು ಬೇಗ ಬಾರೊ ಬಾ ಬಾ ಬಾ.
The Jackals howl is not reassuring
The crows sharp bill offends

Thats why you see me up the tree
I do not trust your friend.

೯

ದೂರ ದೂರಕೆ ಸರಿಯುತಿದೆ ನಿಮಾನದ ಮೊರೆತ
ಬಾಲದಂಚಿನ ದೀಪಕಾಂತಿ ಮರೆಯಾಯ್ತು—
ಸ್ವಪ್ನಸೀಮೆಯ ಅಚೆಯಿಂದ ಮೊಳಗಿದ ಘೋಷ
ನಿಃಸ್ವಪ್ನ ಲೋಕದಲಿ ಲಯವಾಗಿ ಹೋಯ್ತು.
ನಡುಹಗಲ ಕತ್ತಲೆಗೆ ಬೆಂದು ಬೆಗಡಾದ ಮನ
ಚಂದ್ರಿಕೆಯ ಕಾವಳದಿ ಸಿಟ್ಟಿದು ಹೋಯ್ತು;
ಎದೆಗೆ ತಾಕದ ಆಪ್ತವಾಕ್ಯಗಳ ಸಂತೆಯಲಿ
ಸರ್ವೋದಯದ ಸೊಲ್ಲು ಬೀದಿ ಹುಯಿಲಾಯ್ತು,
ಮತ್ತೊಮ್ಮೆ ಶಿವ ಬಂದ ಭಿಕ್ಷೆ ಸಿಗಲಿಲ್ಲ.

ಈ ಕವನದ ಬಗ್ಗೆ ಲೇಖಕರು ಬರೆದ ಎರಡು ಮಾತು

'ಉರ್ಧೋ ಲಕ್ಷ್ಮಣಾ' ಎಂಬ ಈ ಕವನವನ್ನು ನಿಮ್ಮ ಅವಗಾಹನೆಗೆ ಕಳುಹಿಸುತ್ತಿದ್ದೇನೆ. 'ಸರ್ವೋದಯ'ಕ್ಕೆ ನಮ್ಮಲ್ಲಿ ದೊರೆಯುತ್ತಿರುವ ಬಾಯುಪಚಾರವನ್ನು ಕಂಡು ನನಗೆ ತುಂಬಾ ಬೇಸರವಾಗಿದೆ. 'ಸರ್ವೋದಯ' ಒಂದು ತತ್ತ್ವ ಪ್ರಮೇಯವೋ ಅಥವಾ ವ್ಯವಹಾರ್ಯ ವಿಧಾನವೋ ಎಂಬುದು ಸ್ಪಷ್ಟವಾಗಿಲ್ಲ ಈ ಬಗೆಗೆ ನನ ಅಭಿಪ್ರಾಯಗಳನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಗುಣಗ್ರಾಹಿಗಳೂ, ಸಹೃದಯರೂ ಆದ ತಮಗೆ ಮೇಲ್ಕಂಡ ಪದ್ಯಕ್ಕೆ ಟಿಪ್ಪಣಿ ಕೊಡುವುದು ಅವಶ್ಯಕ. ಎರಡು ಸಂದರ್ಭಗಳ ಸೂಚನೆಯನ್ನು ಮಾತ್ರ ನೀಡುತ್ತೇನೆ.

೧) ತಾನು ದೆಹಲಿಗೆ ಬರುವುದರೊಳಗಾಗಿ, ದೆಹಲಿಯಿಂದ ಹೋಗದಿದ್ದರೆ ಮರಣವಡನ ವಿಧಿಸುವುದಾಗಿ ಘೋಷಿಸುದೀನ್ ತೊಗಲಕ್ ಬಾದಶಹನು ಷೇಕ್ ನಿಜಾಮುದೀನ್ ಔಲಿಯಾ ಎಂಬ ಸಂತನಿಗೆ ಹೇಳಿ ಕಳುಹಿದನಂತೆ ಆಗ ಔಲಿಯಾ 'ಹಾನೂಜ್ ದಿಲ್ಲಿ ದೂರ್ ಅಸ್ತ್ (ದೆಹಲಿ ಇನ್ನೂ ಬಹುದೂರವಿದೆ) ಎಂದನಂತೆ ತೊಗಲಕ್ ದೆಹಲಿಯನ್ನು ತಲುಪಲೇ ಇಲ್ಲ. ಮಾರ್ಗದಲ್ಲೇ ಮೃತನಾದನಂತೆ (ಮಾತಿಗೂ ಮರಣಕ್ಕೂ ಸಂಬಂಧವಿದೆಯೆಂದು ನಾನು ನಂಬುವುದಿಲ್ಲ)

೨) 'The Jackals..... ....' ಇತ್ಯಾದಿ ಪದ್ಯ ಪಂಚತಂತ್ರದಿಂದ ಉದ್ಧರಿಸಿದ್ದು. ಬಡಗಿಯೊಬ್ಬನಿಗೂ ಸಿಂಹವೊಂದಕ್ಕೂ ಸ್ನೇಹ ಬೆಳೆಯುತಂತೆ. ಬಡಗಿ ಕೊಟ್ಟ ತಿಂಡಿ ತಿಂದು ಸಿಂಹ ಬೇಟೆ ಆಡಲಿಲ್ಲವಂತೆ. ನರಿ ಮತ್ತು ಕಾಗೆ ಸಿಂಹವನ್ನು ಪುಸಲಾಯಿಸಿ ಬಡಗಿಯನ್ನು ಕೊಂದುಬಿಡು ಎಂದುವಂತೆ. ಎಂದಿನಂತೆ ಸಿಂಹ ಒಂದೇ ಬರದೆ ನರಿ–ಕಾಗೆಗಳೊಡನೆ ಬಂದಾಗ, ಬಡಗಿ ಮರ ಹತ್ತಿದನಂತೆ. ಸಿಂಹ ಇಳಿದು ಬಾ ಎಂದಾಗ ಬಡಗಿ The Jackals howl.... ಪದ್ಯ ಹೇಳಿದನಂತೆ

ತಮ್ಮವನೇ ಆದ 'ಅ. ರಾ ಸೇ.'

(೪೬೬ನೆಯ ಪುಟದಿಂದ ಬಂದುದು)

ಶಿಲ್ಪದಲ್ಲಿ ಮುಕ್ತಿಯನ್ನು ಪಡೆದ ಡಂಕಣಾಚಾರಿಯು ಅತ್ಯಕ್ಕೆ ಶಾಂತಿ,-ಸಮಾಧಾನ ಸಿಕ್ಕಿತು. ಪಟ್ಟದರಾಣಿ ಮಹಾದೇವಿಯು ಕೊನೆಯಾಸೆ ಸಫಲಗೊಂಡಿತು. ನೃಪರಾಯನಿಗೆ ಹರ್ಷವಾಯಿತು ಜನರಿಗೆಲ್ಲಾ ಸಮಾಧಾನವಾಯಿತು. ಜಕಣಾಚಾರಿಯ ಕನಸಿನ ಕಥೆ ನಿಜವಾಯಿತು ಈ ಅದ್ಭುತವನ್ನು ಕೇಳಿದ ಹೊನ್ನಾಡಿನ ಜನರೆಲ್ಲಾ ಕೃದಾಪುರ ಎನ್ನುವುದನ್ನು ಬಿಟ್ಟು "ಕೈದಾಳ" ಎನ್ನಹತ್ತಿದರು. ನಿಷ್ಠೆಯಿಂದ, ಭಕ್ತಿಯಿಂದ, ಒಲವಿನಿಂದ, ಸಂಯಮದಿಂದ ಮಾಡಿದ ಕಾರ್ಯಕ್ಕೆ ಎಂದಿಗೂ ಜಯ ಎಂಬಂತೆ, ಆ ಕೃದಾಪುರದ ಕೇಶವ ದೇವಾಲಯ ಕಂಗೊಳಿಸುತ್ತಿತ್ತು. ಆ ನಾಡನ್ನು ಈಗ ಕೈದಾಳ ಎನ್ನುತ್ತಿದ್ದಾರೆ.

× × × ×

ಗೌಡರು ಹೇಳಿದ ಕಥೆಯನ್ನು ನಾನು ತಿರುಗಿ ಹೇಳಿದ್ದೇನೆ. ಗೌಡರು "ಅಂತಹ ಪವಿತ್ರಕ್ಷೇತ್ರವನ್ನು ಕಾಣವೇ ಹೋಗುತ್ತೀಯನ್ಮಾ?" ಎಂದದ್ದು, ಕವಿಯಲ್ಲಿ ಇನ್ನೂ ಮೊರೆಯುತ್ತಿದೆ.

ಪುಸ್ತಕ ವಿಮರ್ಶೆ

'ಆ ಮನೆ'

(ನಾಟಕದ ಒಂದು ಕಾಣ್ಕೆ)

ಕಂಡವರು: ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ)

ಬೆಳ್ದಿಂಗಳಿನ ಶೀತಕಾಂತಿಯಲ್ಲಿ, ಸಾವಿನಮನೆಯಿಂದ ಹಸು-ಗೂಸುಗಳ ಮೇಲೆ ಮಲ್ಲಿಗೆಯ ಹೂಗಳುದುರುವುದನ್ನು ಕಂತ ಕಣ್ಣ, ಕೇವಲ ಭಾವನಾಪರವಶನಾದ ಕಲ್ಪನೆಯ ಕಣ್ಣಲ್ಲ; ಎದೆಗಿಚ್ಚನ್ನು ತುಂಬಿಕೊಂಡು ಸಾವಿನ ಮುಸುಕನ್ನು ಸೀಳಹೋಗಿ ಅಲ್ಲಿ ಅಳಲೂ ಬಾರದ, ನಗಲೂ ಬಾರದ, ಹಿಮಶೀತಲ ಬೆಳ್ದಿಂಗಳನ್ನು ಸಂತಪದ ಹಂಬಲಿನ ಹೂಗನಸುಗಳನ್ನು ಕಾಣುವಲ್ಲಿ ಕವಿಯು ನಿಜವನ್ನೇ ಕಣ್ಣಿಕ್ಕಿ ಕಾಣುತ್ತಿರುತ್ತಾನೆ. 'ಆ ಮನೆ'ಯಲ್ಲಿ ಶ್ರೀ ಕೀರ್ತಿಯವರು ಇಂಥದೊಂದು ಕಾಣ್ಕೆಯನ್ನು ಕಂಡು ಕಾಣಿಸಿದ್ದಾರೆ 'ಆ ಮನೆ'ಯು ಮೈಸೂರ ಸರಕಾರದಿಂದ ಬಹುಮಾನ ಪಡೆದ ನಾಟಕ. ಅದರೆ ಈ ಕೃತಿಯ ಬೆಲೆಯಿನ್ನು ಬಹುಮಾನದ ಮೊತ್ತದಿಂದ ಅಳೆಯಬೇಕಾಗಿಲ್ಲ ಅದು ರಂಗದ ಮೇಲೆ ಬಂದಾಗ ನಮ್ಮ ಅನುತಾಪದಿಂದುದುರುವ ಕಂಬನಿಗಳ ಮೇಲಿಂದ ಅಳೆಯಬೇಕಾಗಿದೆ. ಅದರಲ್ಲಿಯೂ ಅದು ನಮ್ಮ ಹೆಣ್ಣುಮಕ್ಕಳ ಮೂಕ ಸಂವೇದನೆಗಳನ್ನು ಯಾವ ಪರಿಯಲ್ಲಿ ಕಲಕುವದೋ ಎಂಬುದನ್ನು, ನೆನೆಯಲಿಕ್ಕೂ ಮೈ ನಡುಗುತ್ತದೆ ಅಂಥದೊಂದು ಕರುಣರಮ್ಯ, ನಿಗೂಢಶಾಂತ ಶೀತಲಕಾಂತಿ ಈ ನಾಟಕವನ್ನೇ ತುಂಬಿ ನಿಂತಿದೆ.

ಇದೆಂಥ ವಾತಾವರಣ? ಇದೆಂಥ ನಾಟಕ? ಇದೇನು ಅರೇಬಿಯನ್ ನೈಟ್‌ಗಳಂಥ ರೋಮ್ಯಾಂಟಿಕ್ ನಾಟಕವೆ? ಅದ್ಭುತ ರಮ್ಯ ಕಲ್ಪನಾ ಚಿತ್ರವೆ?— ಎಂದು ಅನ್ನಿಸುವುದು; ಅದರೆ ನಾಟಕದ ವಸ್ತು ತೀರ-ತೀರ ವಾಸ್ತವ. ನಂಬಲಾರದಷ್ಟು ಸರಳ ಘಟನೆ! ಅದು ಒಂದು ಮಕ್ಕಳಾಟ! ಒಂಬತ್ತು ಜನ ಹುಡುಗರು, ಐದು ಜನ ಹುಡುಗಿಯರು ಕೂಡಿಕೊಂಡು ಮದುವೆಯ ಆಟ ಆಡುತ್ತಿದ್ದಾರೆ. ಆಟ ಹುಡುಗಾಟ! ಎಲ್ಲರೂ ಏರಿಂದ ಏಳ ವರುಷದೊಳಗಿನ ಮಕ್ಕಳು. ಅವರಿಗೆ ಹಿರಿಯರಂತೆ ಆಡುವ ಹಂಬಲು. ಹಿರಿಯರ ಪ್ರಾಣ ಸಂಕಟದ ಆಟ, ಮಕ್ಕಳಲ್ಲಿ ಹುಡುಗಾಟವಾಗಿದೆ. ಅದರೂ ಆಡುವಾಗ ಎಳೆ ಮನವನ್ನು ಮರೆತಿದ್ದಾರೆ. ಹಿರಿತನವನ್ನು ಅರಿತಿಲ್ಲ ಅದರೆ ಅನುಕರಣೆಯಲ್ಲಿ ಯಾವುದೊಂದು ಚಿಕ್ಕ ಸಂಗತಿಯನ್ನೂ ಮರೆತಿಲ್ಲ. ಆಟದಲ್ಲಿಯೂ ಅವರ ಹಸುಳೆತನದಿಂದ ಅವರೆಲ್ಲರೊಂದೊಂದು ಚಿಲುಮೆಯ ಪುತ್ಥಳಿಗಳಾಗಿ ಕಂತರೆ, ಅವರ ಅನುಕರುಣೆಯಿಂದ ಧ್ವನಿತವಾಗುವ ಜೀವನವೋ—ತನ್ನ ಸಮಸ್ತ ಭಾರವನ್ನೂ ಹೊತ್ತು ನಿಂತು ಗಂಭೀರವಾಗಿ ಹಿರಿಯರೆದುರು ಬರುತ್ತದೆ.

ಈ ಒಂದು ಪರಿಣಾಮವುಂಟಾಗಲಿಕ್ಕೆ ಮುಖ್ಯ ಕಾರಣವೆಂದರೆ,- ನಾಟಕದಲ್ಲಿಯ ಪ್ರತ್ಯಂಶವೂ ಹಿರಿಜೀವನದ ಸಂಕೇತವಾಗಿ ಬಂದಿರುವದು. ನಾಟಕಕಾರರು ಮುನ್ನುಡಿಯಲ್ಲಿ ಈ ಅಂಶವನ್ನು ಸೂಚಿಸಿದ್ದಾರೆ. ಅವರ ಸೂಚನೆ ಅವರ ಕೃತಿಯಲ್ಲಿ ಸಾರ್ಥಕವಾಗಿ ಬಂದಿದೆ. ಜೀವನದ ಸಣ್ಣ ಸುಟ್ಟ ಅಂಶಗಳು ಅರ್ಥಗರ್ಭಿತವಾದ ಸಂಕೇತಗಳು ಆಗುವುದು ಕವಿಯ ನಿಲುವಿನ ಎತ್ತರವನ್ನು ತೋರಿಸಿದರೆ, ಆ ಸಂಕೇತಗಳು ಹೃದಯಗಮ್ಯವಾಗುವುದು ಅತನ ಕಲಾವಂತಿಕೆಯ ಮಾಟಗಾರಿಕೆಯನ್ನು ತೋರಿಸುತ್ತವೆ. 'ಆ ಮನೆ' ಯಲ್ಲಿ ಶ್ರೀ. ಕೀರ್ತಿಯವರು ಸಾಧಿಸಿದ ಮಾಟಗಾರಿಕೆಯೂ ನಿಂತು ನೋಡುವಂಥದಿದೆ.

'ಆ ಮನೆ' ಒಂದು ಹಾಳುಮನೆ. ಒಂದು ಕಾಲಕ್ಕೆ ತುಂಬು ವೈಭವದಿಂದ ಮೆರೆದಂಥದು. ಹಿರಿಗೌಡರ ಗೌಡಿಕೆಯ ಕಾಲದಲ್ಲಿ ಸಂಪತ್ತು ತೂಗುದೊಟ್ಟಿಲಾಗಿ ತೂಗಿದೆ. ಅದರ ನೆನಹು ಒಬ್ಬ ಸಕ್ಕರೆಯ ಗಿಣಿಮಾರುವ ಮುದುಕನ ಮುಪ್ಪಾಂತರ ಮರುಕಳಿಸುತ್ತದೆ. ಮೊದಲನೆಯ ಅಂಕದ ಮೊದಲ ದೃಶ್ಯದ ತುಂಬ ಸಾವಿನ ಹಾಳು ಮನೆಯಿಂದ ಸತ್ತ ವೈಭವದ ಧೂಳು ಏಳುವಂತೆ ನಾಟಕದ ಹಿನ್ನೆಲೆ ತಲೆ ಎತ್ತುತ್ತದೆ ಒಟ್ಟು ಎರಡಂಕದ ಈ ನಾಟಕದಲ್ಲಿ ನಾಲ್ಕು ತಲೆಮಾರುಗಳು ಕಾಣುತ್ತನೆ ಒಂದು ಸತ್ತ ಬಾಳು ಅದು ಹಿರಿಗೌಡರ ಹಾಳಾದ ಮನೆತನದ ಕತೆ. ಎರತನೆಯದು ಆ ಸಾವಿನ ಬಾಯಿಯ ದಂಡೆಯ ಮೇಲೆ ಕುಳಿತು ಯಾವಾಗ ಕೆಳಗುರುಳ ಬೇಕೋ—ಎಂದು ನಿಂತ ಹೆಣ್ಣುಮುದುಕ ಹಾಗು ಅವನ ಸಂಗಡ ಹೆಣ್ಣು ಮಾರುವ ಮುದುಕಿ ಮೂರನೆಯದು ಮಕ್ಕಳ ತಾಯಿ ತಂದೆಗಳ ಅರಿವು ಮರೆವಿನ ಮಧ್ಯಮ ಬಾಳು. ನಾಲ್ಕನೆಯದು ಹಿಗ್ಗಿನ ಮೊಗ್ಗುಗಳಂತಿರುವ ಹಸುಳೆಗಳು ಬಾಳಿನ ಈ ನಾಲ್ಕು ಮುಖಗಳಲ್ಲಿ ಮೊದಲಿನ ಮೂರು ಮುಖಗಳೂ ಹಿನ್ನೆಲೆಯಲ್ಲಿ ನಿಗೂಢ ನೀಲಾಕಾಶದಂತೆ ನಿಂತುಕೊಂಡು, ನಾಲ್ಕನೆಯ ಹಸುಳೆತನದ ನಗು-ಮೊಗವೊಂದು ಮುಂದು ಬಂದಿದೆ.

ಒಂದನೆಯ ದೃಶ್ಯದಲ್ಲಿಯ ಹೆಣ್ಣುಮುದುಕನು 'ಆ ಮನೆ'ಯ ಸುತ್ತಲೂ ನಾನಾ ಭಾವಗಳ ನೆನಹಿನ ಗಾಳಿಯನ್ನು ತುಂಬುವದರ ಜೊತೆಗೆ, ಭೂತ-ಭೇತಾಳಗಳ ರಮ್ಯ ಭಯಾನಕತೆಯನ್ನು ತುಂಬುತ್ತಾನೆ ಆ ಮನೆಯಲ್ಲಿ ಇನ್ನೊಂದು ಸುಕುಮಾರ ಹೆಣ್ಣುಜೀವ ಭೂತವಾಗಿ, ಬೆಳ್ದಿಂಗಳಿರುಳಿನಲ್ಲಿ ತಾಯ್ತನದ ಎದೆಗಿಚ್ಚು ತುಂಬಿಕೊಂಡು

ಮೂಳವಾಗಿ ಕ್ರಂದಿಸುತ್ತದೆ. ಅವಳು ಜೊಯಿಸರ ಸೊಸೆ. ಈ ನಾಟಕದಲ್ಲಿ ನಡೆವ ಮಕ್ಕಳ ಮದುವೆಯಲ್ಲಿ ವಧುವಾಗುವ ಗಂಗು. ಏನ ತಾಯಿ ಈಕೆ. ಆ ಮುದುಕ ಹೇಳುವ ಕತೆಗಳೆಲ್ಲ ಸಾವಿನವು; ಮಾತೆಲ್ಲ ಸಾವಿನವು. 'ಆತ ಸಾವನುಂಡು ಬದುಕಿದವ.' ಬಾಳಿನ ಬಯಕೆಯಿಲ್ಲದೆ ಸಾವಿನ ಭಯವಿಲ್ಲದೆ, ಕನ್ನ ಮೋಟುಮುದಿಂಥ ಸಾವಿರದ ಜೀವನಕ್ಕಾಗಿ ಪ್ರತಿಕ್ಷಣ ಹಳಿದುಕೊಳ್ಳುತ್ತ, ಮರುಕಳಿಸುವ ನೆನಹುಗಳಲ್ಲಿ ಹೊತ್ತುಗಳೆಯುವವನಾತ! ಅವನ ಮಾತು ಕೇಳುತ್ತ ಹೋದರೆ, ಸಾವೇ ಪಡೆಪಡೆಯಾಗಿ ಸುತ್ತಿಕೊಂಡು ಬಂದು ನಮ್ಮ ಬಾಳನ್ನೆಲ್ಲ ಮುತ್ತಿ ನಿಲ್ಲುವಂತೆ ಅನ್ನಿಸುತ್ತದೆ. ಅವನ ಜೀವನದಲ್ಲಿಯೂ ಸುಖದ ದಿನಗಳಿವೆ. ಅವನ ಹಿರಿಗೌಡರು ತಮ್ಮ ತಲೆಯ ಮೇಲಿನ ರುಮಾಲು ತೆಗೆದು ಅವನ ತಲೆಯ ಮೇಲಿಟ್ಟು ಗೌರವಿಸಿದ ಸಂಭ್ರಮ ಅತನದು. ಆದರೆ ಆಂಥವುಗಳನ್ನೆಲ್ಲ ನುಂಗಿ ನೀರವವಾಗಿ ನಿಂತ ಸಾವು, ನೂರು ಮುಖಗಳಲ್ಲಿ ಬಂದಿದೆ. ಕೊಲೆಗಡಕತನವೊ! ಪ್ಲೇಗೋ! ಗುದ್ದಾಟನ ಜೇನೆಯೋ! ಆತ್ಮಹತ್ಯೆಯೋ! ಎಂಥೆಂಥವೊ ಕತ್ತಲಿನ ಮುಖಗಳು. ಈ ಎಲ್ಲ ಕತ್ತಲಿನ ಭಯಾನಕತೆಯ ಗರ್ಭದಲ್ಲೊಂದು ಸಣ್ಣ ಮಕ್ಕಳ ತಿಳಿಬೆಳಕಿನ ಚಿಕ್ಕ ವರ್ತುಲ. ಆ ಮುದುಕನಿಗೆ ಇಡಿ ಬಾಳೇ ಇಂಥದೊಂದು ಹುಡುಗಾಟವಾಗಿ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ನಾವು ನಾಟಕದ ಹುಡುಗಾಟವನ್ನು ಕಾಣುತ್ತೇವೆ

ಹುಡುಗಾಟವೆಂದರೆ ಹುಡುಗಾಟ! ಕಿಟ್ಟಯ್ಯು ಶಾಮನ ಕೈಯೊಳಗಿನ ಸಕ್ಕರೆಗಿಣಿಯನ್ನು ಒಂದು 'ಪೇಣೆ' (ಪೆನ್ಸಿಲ್ಲು) ಯ ಕರಾರಿನಿಂದ ಜೀವುತ್ತಾನೆ. ಚೀಪ ಹೋದವನು, ಪೂರ್ಣವಾಗಿ ನುಂಗಲು ಸಿದ್ಧನಾಗಿ, ನಾಲ್ಕು ಪೇಣೆಗಳನ್ನು ಶಾಮನಿಂದ ಬಿಡಿಸುವ ಪ್ರಸಂಗ ಹೊಟ್ಟೆ ಹುಣ್ಣಾಗುವಂತೆ ನಗುವಂತಹದು. ಇಲ್ಲಿ ಹುಡುಗರೆಲ್ಲ ಹುಡುಗರಾಗಿ, ತುಂಟರಾಗಿ, ಅವರಲ್ಲಿಯೇ ಕೆಲವರು ಕೊಂಕುತನ. ಸೌಮ್ಯತನ, ಹಿತಸನ ವಹಿಸಿ ನಿಲ್ಲುತ್ತಾರೆ. ಅವರನ್ನು ಹೆಣ್ಣು ಹುಡಗರು ಸಂಧಿಸಿದಾಗ, ಅಲ್ಲಿ ನಡೆಯುವ ಅನಿರ್ವಚನೀಯ ಆಕರ್ಷಣೆಯ ಮುಗ್ಧ ಜೆಲ್ಲಾಟ, ತುಂಟತನಗಳು ನೋಡಿ ನಲಿಯಬೇಕಾದಂತಹವು. ಹೆಣ್ಣು ಹುಡುಗಿಯರಿಗೆ ಕಿಟ್ಟಯ್ಯು ಹಿರಿತನದಲ್ಲಿ ಹುಡುಗರೆಲ್ಲ ದಾರಿ. ಕಿಟ್ಟಿದಾಗ, ಹುಡುಗಿಯರ ಹಿರಿಮಣಿ 'ಕಾಶಿ' 'ಯಾಕೋ, ಕೊಲ್ಯಾ, ನಿನಗ ಹ್ಯಾಂಗ ಕಾಣಸತದ?' ಎಂದು ಗದರಿಸುವುದು ಹುಡುಗರ ಜಗಳಾಟದ ಜೆಲುವಿಗೆ ಹಿರಿತನದ ಒಪ್ಪ ಹಾಕಿದಂತಿದೆ. ಮಕ್ಕಳ ಜಗಳಾಟ ಹರುಷದ ಹಾಂಗಾಟ! ಮರುಕ್ಷಣದಲ್ಲಿ ಕಾಶಿ ಕಿಟ್ಟಿ ಒಂದಾಗಿ, ಸಂಜೆಯ ಮುಂದೆ ಎಲ್ಲರೂ ಒಂದು ಆಟ ಆಡುವ ಯೋಜನೆ ಮಾಡುತ್ತಾರೆ.

ಎರಡನೆಯ ದೃಶ್ಯದಲ್ಲಿ ನಾವೆಲ್ಲ ಆ ಮನೆಗೆ ಬರುತ್ತಿದ್ದೇವೆ. ಹೆಣ್ಣುಹುಡುಗಿಯರು ಇನ್ನೂ ಬಂದಿಲ್ಲವೆಂದು, ಗಂಡು ಹುಡುಗರೆಲ್ಲ ದಾರಿ ಕಾಯುತ್ತಿದ್ದಾರೆ. ದಾರಿ ಕಾಯುವುದಾಗದೆ ಕೊನೆಗೆ ಹಾಳು ಮನೆಯ ಮುಚ್ಚಿದ ಬಾಗಿಲಲ್ಲಿ ಇಣಿಕಿಕ್ಕಿ ಆ ನಿಗೂಢ ಮನೆಯಲ್ಲಿ ಏನಿದೆಯೋ ಎಂದು ಕಾಣಲೆಳಸುತ್ತಾರೆ. ಹಿರಿಯರು ಸಾವಿನ ಅಗಮ್ಯತೆಯಲ್ಲಿ ಹಣಿಕಿಕ್ಕಿ ನೋಡಿದಂತೆ, ಮಕ್ಕಳು ಆ ದೆವ್ವದ ಮನೆಯನ್ನು ಪರೀಕ್ಷಿಸುತ್ತಾರೆ. ಅವರಿಗೆ ಪ್ರತ್ಯಕ್ಷವಾಗಿ ಏನು ಕಂಡಿತೋ ದೇವರೇ ಬಲ್ಲ. ಆದರೆ ಅವರು ಹುಟ್ಟಿಸಿದ ಮಾತು ಸಾವಿರ! ಏಳು ಹೆಡೆಯ ಸರ್ಪವೂ, ತೂಗುಮಂಚವೂ, ವಿಕರಾಳ ದೆವ್ವವೂ, ಏಳು ಸುತ್ತಿನ ಕೋಟೆಯೂ ಏನೇನೋ ಕಂಡುವು. ಕೆಲವರಿಗೆ ಏನೂ ಕಂಡಿಲ್ಲ. ಅದೆಲ್ಲ ಕುತೂಹಲದ ಕತೆ ಹೇಳುವಾಗ ಹೆಣ್ಣು ಹುಡುಗಿಯರು ಬರುತ್ತಾರೆ. ನಾನಾ ರೀತಿಯ ಚರ್ಚೆಯಾಗಿ ಕೊನೆಗೆ ಕಾಶಿಯ ಹೇಳಿಕೆಯ ಪ್ರಕಾರ 'ಮದುವೆ'ಯ ಆಟ ನಿಶ್ಚಯವಾಗುತ್ತದೆ 'ದೊಡ್ಡವರು ಮಾಡಿದ್ದಾಂಗ' ಮಾಡುವುದೇ ಅವರ ಆಟ. ಮಕ್ಕಳಲ್ಲಿಯು ಅನುಕರಣದ ಹಂಬಲು, ಹಿರಿಯರ ಸತ್ಯಾಂಶವನ್ನು ಅವರು ಸೂಕ್ಷ್ಮವಾಗಿ ಅವಲೋಕಿಸಿದ ಬಗೆಗಳನ್ನು ಇಲ್ಲಿ ಅತ್ಯಂತ ಹೃದಯಂಗಮವಾಗಿ ಮೂಡಿಸಲಾಗಿದೆ. ಹುಡುಗರು ತಮ್ಮ ಎಳೆಯ ಮನಸ್ಸಿನ ಅಳು-ನಗು, ಚೆಲ್ಲಾಟಗಳ ಮುಖಾಂತರ ಹಿರಿಯರ ದೊಡ್ಡ ಬಾಳನ್ನು ಧ್ವನಿಸಿದ ರೀತಿ, ಹೆಜ್ಜೆಹೆಜ್ಜೆಗೂ ಗಂಭೀರವಾಗುತ್ತ ಹೋಗುತ್ತದೆ.

ಕಿಟ್ಟಿಯನ್ನು ವರನನ್ನಾಗಿಸಿ, ಗಂಗೂನನ್ನು ವಧುವನ್ನಾಗಿಸಿ ಕಾಶಿಯು ವರನ ತಾಯಿಯಾಗುತ್ತಾಳೆ. ಸುಮ್ಮಿಯು ವಧುವಿನ ತಾಯಿ ಭೀಮು ವರನ ತಂದೆ. ರಾಮು ವಧುವಿನ ತಂದೆ. ಹಣಮು ಪುರೋಹಿತ. ರಂಗ ತ್ವಾಳ. ಉಳಿದ ಮಂದಿ "ಅತ್ಲಾಗ ಇಪ್ಪು ಇತ್ಲಾಗ ಇಪ್ಪು" ಹಂಚಿಹೋಗುತ್ತಾರೆ.

ಮುಂದಿನದು ಮದುವೆ. ಮನೆಯ ಅಂಕದಲ್ಲಿ. ಅದಂತೂ ಶ್ರೀ. ಕೀರ್ತಿಯವರ ಅದ್ಭುತಸೃಷ್ಟಿ. ಆಟ ಹುಡುಗರದಾದರೂ ಹಿರಿಯರ ಕರುಳೇ ಮಿಡಿಯುವಂತೆ ಈ ಆಟ ನಡೆಯುತ್ತದೆ. ಹುಡುಗಿಯನ್ನು ನೋಡುವುದರಿಂದ ಪ್ರಾರಂಭಮಾಡಿ ವರದಕ್ಷಿಣೆ, ವರೋಪಚಾರಗಳ ಮಾತು ಬರುತ್ತವೆ. ವರನ ತಾಯಿ ಕಾಶಿ ಚೊಚ್ಚಲ ಮಗನ ತಾಯಿಯಂತೆ. ಅವಳಿಗೆ 'ತಾಯೀ ನೇಮೂ ಬಿಡಿಸಬೇಕು. ಚೌಕಲಾಣಿ ಹಾಕಬೇಕು. ಹಾಗಲಹಂದ್ರಾ ಹಾಕಬೇಕು.... ...' ಇತ್ತ ವಧುವಿನ ತಾಯಿ ಸುಮ್ಮಿಗೆ ಒಂಟಿ ಮಗಳು. 'ಇದು ಒಂದ್ರಾಗ ನಮ್ಮ ಕಣ್ಣುಪ್ರೀತಿ ಎಲಾ ಸೀರಿಸಿಗೋ ಬೇಕು ನಾವೂ. ನೀವೇನೂ ಕಾಳಜಿ ಮಾಡಬೇಡ್ರಿ ಕಾಶೀಬಾಯರ....' ಎಂದು ಹೇಳುತ್ತಾನೆ.—ವಧುವಿನ ತಂದೆ ರಾಮು. "ಒಟ್ಟು ಹುಡುಗಿನ್ನ ತಗೊಂಡು ಮನೆತನ ಉದ್ಧಾರ ಮಾತಬೇಕು ತೀರ್ತ್ಯಾ—" ಎಂದು ಬೇಡಿಕೊಳ್ಳುತ್ತಾನೆ. ಹೀಗೆಯೇ ನಾಟಕ ಗಂಭೀರವಾಗುತ್ತ ಸಾಗಿ, ಮದುವೆಯಾಗಿ ಉರುಬಣಿ ನಡೆಯುತ್ತದೆ. ವಧುವಿನ ತಾಯಿಗೆ ಮಗು ದಣಿಯುವುದೆಂಬ ಕಸಿವಿಸಿ; ಕೊನೆಗೆ ಕೂಸು ಒಪ್ಪಿಸುವ ಪ್ರಸಂಗದಲ್ಲಿಯಂತೂ ಅಪ್ಪಿಯ ಭಾವಗಳನ್ನು ರಂಗದಲ್ಲಿ ಹೆಣ್ಣು-ಮಕ್ಕಳು ಕಂಡು ಅನುಭವಿಸಬೇಕು.

ಕತೆಗೆ ಪರಿಪೂರ್ಣ ಕಾವೇರುವ ಮುನ್ನ, ಎರಡನೆಯ ಅಂಕದಲ್ಲಿ ಸಾದುವ ಅಯ್ಯನವರ ಚುಟುಕುದೃಶ್ಯ ರಂಗಜೋತೆಗಾಗಿ ಬಂದಿದೆ. ತದನಂತರ ಮೂರನೆಯ ದೃಶ್ಯ. ಹುಡುಗರಲ್ಲಿ ಕೆಲವರಿಗೆ ಅಟವ

ಭಾವನೆಗಳು ಅನ್ಯೋನ್ಯವಾಗಿ, ನಿಜವೇನೋ ಎಂದೆನ್ನುವಂತೆ, ಅವರನ್ನು ಅವರಿಸತೊಡಗುತ್ತವೆ. ಗಂಗು ಹುಡುಗರಿಂದ ಬಹಳ ಛೇಡಿಸಿಕೊಂಡು, ಆಟವೊಲ್ಲೆನೆಂದರೂ ಯಾರೂ ಕೇಳರು. ಕಿಟ್ಟಿಯು ಕುಳಿತ ಸ್ಥಳ ಬಿಟ್ಟು ಇನ್ನೊಂದು ಕಡೆಗೆ ಬಂದರೆ, ಅದು ತನ್ನದೆನುವನೆ. ಅಲ್ಲಿ ತಂದೆ, ಮಗಳು ಗಂಡನ ಮನೆಯಿಂದ ಜಗಳಾಡಿ ಬಂದಳೆಂದು ಜರಿಯುತ್ತಾನೆ. ತಾಯಿಯಾದವಳು ಮಗುವನ್ನು ಅಪ್ಪಿಕೊಂಡು ರಂಬಿಸುತ್ತಾಳೆ. ಅತಿಚೇಷ್ಟೆಯಿಂದ ನಿಜವಾಗಿಯೂ ದುಃಖಿತಳಾದ ಗಂಗೂ, ಆಗ ಬಿಕ್ಕಿ ಅಳುವುದನ್ನು ಕಂಡರೆ ಹಿರಿಯರಿಗೂ ಕಂಬನಿ ಮಿಡಿಯುತ್ತದೆ. ಅಲ್ಲಿ ಗಂಗೂ ಸುಮ್ಮಿ ಹುಡುಗರಲ್ಲ. ಹಿರಿಯರ ಬಾಳಿನ ಒಂದು ಗಂಭೀರ ಪ್ರಸಂಗವನ್ನು ಧ್ವನಿಸುವ ಸುಕುಮಾರ ಸಂಕೇತಗಳಾಗಿ ನಿಲ್ಲುತ್ತಾರೆ. ಕೊನೆಗೆ ಗಂಗೂ ಕಿಟ್ಟಿಯ ಕಡೆಗೆ ಹೋಗುತ್ತಾಳೆ. ಆ ವೇಳೆಗೆ ಕಿಟ್ಟುವಿಗೆ ಗಂಗುವಿನ ಬಗೆಗೆ ನಿಜವಾಗಿಯೂ ಅನುಕಂಪ ಹುಟ್ಟುತ್ತದೆ. ಇವರೆಲ್ಲರ ಜಂಜಡದಿಂದ ದೂರವಾಗುವುದಕ್ಕಾಗಿ ಅವರು ಆ ಮನೆಯಲ್ಲಿ ಅಡಗಿಕೊಳ್ಳುತ್ತಾರೆ. ಉಳಿದ ಹುಡುಗರೆಲ್ಲ ಗಾಬರಿಯಾಗಿ ಹುಡುಕಾಡಿ, ಕೊನೆಗೆ ಮನೆಗಾದರೂ ಹೋಗಿರಬಹುದೇ?—ಎಂದು ಹೋಗುತ್ತಾರೆ. ಇಲ್ಲಿಗೆ ಬಂದಾಗ ಶ್ರೀ ಕೀರ್ತಿಯವರು, ನಾಟಕಕ್ಕೆ ತೀರ ವಿಚಿತ್ರ ಗಂಭೀರವಾದ ತಿರುವು ಕೊಡುತ್ತಾರೆ. ಒಮ್ಮೆಲೆ ನಾಟಕಾವರಣದಲ್ಲಿ ಭಯಾನಕ ಶಾಂತಿಯೂ ಅದರಲ್ಲಿ ಹಾಲುಬೆಳುದಿಂಗಳೂ ತುಂಬಿಬರುತ್ತವೆ. ಆಗ ಗಂಗೂ, ಕಿಟ್ಟು ತಮ್ಮ ತಂದಿನ ಅಭಿನಯವನ್ನು ಮುಗಿಸುವುದಕ್ಕಾಗಿ ಕೊನೆಯದಾಗಿ "ಸಾವಿನ" ಆಟ ಆಡೋಣವೆನ್ನುತ್ತಾರೆ. ಆ ಮಾತು ಪ್ರೇಕ್ಷಕರಿಗೆ ಸಿಡಿಲಿನಂತೆ ಆಗುತ್ತದೆ. ಹೌದು, ಅಂದಿನ ಆಟ 'ದೊಡ್ಡವರು ಮಾಡಿದಂತೆ' ಮಾಡುವುದು. ಗಂಗುವಿನ ತಾಯಿ—ಜೋಯಿಸರ ಸೊಸೆ ಸತ್ತಿರುವುದನ್ನು ಗಂಗೂ ಕಂಡಿದ್ದಾಳೆ. ಸಾವೆಂದರೇನೋ ಆ ಎಳೆಮಗು ಅರಿಯದು. ಆದರೆ ಸುಮ್ಮನೆ ಮಲಗಿದರೆ ಸತ್ತಂತಾಯಿತೆಂದು ಅವಳ ಕಲ್ಪನೆ. 'ಹೀಗೆಯೇ ಮಾತನಾಡುತ್ತಾ ಆಡುತ್ತಾ ಆ ಎಳೆಯ ಮಕ್ಕಳಿಗೆ ಅಲ್ಲಿಯೇ ನಿದ್ರೆ ಹತ್ತುತ್ತದೆ. ನಿದ್ದೆಯ ಬಡಬಡಿಕೆಯಲ್ಲಿ ಕಿಟ್ಟು ತನ್ನ ಗೆಳೆಯ ರಂಗನನ್ನು 'ಕೊಲ್ಲುತ್ತೇನೆ'ಂದು ಹೇಳುತ್ತಿದ್ದಾನೆ. ಕೊಲ್ಲುವುದೆಂದರೇನೋ ತಿಳಿಯದು. ಆದರೂ ಹಿರಿಯರ ಮಾತು ಅವನ ಬಡಬಡಿಕೆಯಲ್ಲಿ ಬರುತ್ತದೆ. ಸುತ್ತಲೂ ರಣ ರಣ ಬೆಳುದಿಂಗಳು ಸಾವಿನ ಶೀತಲ ಶಾಂತಿ. ಆಗ 'ಆ ಮನೆ'ಯ ಮುಚ್ಚಿದ ಬಾಗಿಲು ತೆರೆದು ಗಂಗುವಿನ ತಾಯಿ ಪ್ರೇತವಾಕಾರವಾಗಿ ಮುಂದೆ ಬರುತ್ತದೆ. ಸಾವಿನ ಸುತ್ತುವರಿಯಲ್ಲಿ ಸಾವರಿಯದ ಎಳೆಮಗುಗಳು ಮಲಗಿವೆ. ಗಂಗುವಿನ ತಾಯಿ ಪ್ರೇತವಾದರೂ ತಮ್ಮ ಅವಳೆದೆಯೂ ಬೆಂದ ಹಂಬಲಿನಿಂದ ತುಂಬಿದೆ. ಈ ಮಕ್ಕಳು ಊಟಬಟ್ಟು ಮಲಗಿನೆ ಎಂಬ ಚಿಂತೆ ತಾನು ಬದುಕಿದ್ದರೆ ಈ ಪುಟ್ಟಳಿಗಳನ್ನೊಂದಾಗಿಸುವಂತೆ ತನ್ನ ಮದುವೆ ಮಾಡುತ್ತಿದ್ದೆನಲ್ಲಾ—ಎಂಬ ಹಂಬಲು. ಸಾವಿನ ಸಮಸ್ತ ದುಃಖವನ್ನೂ ತುಂಬಿಕೊಂಡು, ಸಾವಿನ ಪ್ರತ್ಯಕ್ಷ ಮೂರ್ತಿಯಾಗಿ ಅವಳು ನಿಂತಿದ್ದಾಳೆ ಅವಳೆದುರು ಆ ಮಕ್ಕಳು ಸಾವಿನ ಆಟವಾಡಿ ಮಲಗಿದ್ದಾರೆ. "ಹುಂ ಮತ್ತ ಸಾಯೋಆಟಾ ಆಡತಾವಂತ!.... ಪಾಪ, ಇವಕ್ಕೇನು ಗೊತ್ತು ಸಾವಂದರೆ....?...." ಆ ತಾಯಿ ಬೆಂದ ಹೃದಯ ಕನವರಿಸುತ್ತದೆ. "ನನ್ಮಾವ್ವಾ, ಒಬ್ಬ ಒಳ್ಳೇ ಮುತ್ತಿನಂಥ ಗಂಡನ್ನ ಮಾಡಿಕೊಂಡು, ಮಕ್ಕಳನ್ನ ಹಡೆದು, ಅವನ್ನ ಸಾಕಿ ಸಲುಹಿ ದೊಡ್ಡವರನ್ನು ಮಾಡಿ ಕಡೆತನಕ ಬಾಳು ನನ್ನ ಮಗಳ....! ...." ಏನು ತಾಯಿಹೆಂಬಲೊ! ಆ ಹಂಬಲೇ ಹರಕೆಯಾಗಿ ಅರಳಿದಂತಿದ್ದ ಎರಡು ಹೂಗಳನ್ನೆತ್ತಿ ಆ ಮಕ್ಕಳ ಮೇಲಿಸೆದು, ಆ ಗಂಗೂನ ತಾಯ ಪ್ರೀತಿ ಮಾಯವಾಗುತ್ತದೆ. ಆ ಗಂಭೀರಕ್ಷಣದಲ್ಲಿ ಆ ಹೊತ್ತಿಗೆ ಹಿನ್ನೆಲೆಯಲ್ಲಿ ನಾಲ್ಕಾರು ಧ್ವನಿಗಳು ಕೇಳುತ್ತವೆ. ಅವುಗಳಲ್ಲಿ ಗಂಗುವನ್ನೂ ಕಿಟ್ಟುವನ್ನೂ ಅರಸಬಂದ—ಅವರಿಬ್ಬರ ತಂದೆಗಳ ಧ್ವನಿಯಿದೆ. ಅವರಲ್ಲಿ ಗಂಗುವಿನ ತಂದೆಯ ಧ್ವನಿ ಮುಪ್ಪಿನಿಂದ ನಡುಗುತ್ತ ಬರುತ್ತದೆ:

"ದೇವರು, ತಾಯಿ ಸತ್ತ ಹುಡಿಗಿ, ಅಕೀ ತಲೀಮ್ಯಾಲೆ
ನಾಕು ಅಕ್ಕಿಕಾಳು ಬಿದ್ದವಂದರ ಪಾಪಾತು.....
ಅಕಿ ತಾಯೀ ರಿಣಾ ಮುಟ್ಟಿದಷ್ಟಾಂಗಾತು....ಅಕೀಗೆ
ಆ ಮನಿ, ನನಗ ನಿನ್ನ ಮನಿ ... ..."

ಅಲ್ಲಿಗೆ ಪುನಃ ಮೊದಲಿನ ಮುದುಕನ ಹಾಡು ಕೇಳುತ್ತದೆ:

"ಮಾಡಿ ಮುಸುಳುವ ಚಿತ್ರ ಕಾಣಣ್ಣಾ | ಈ ಬದುಕು ಬಾಳೇ
ವೆಲ್ಲ ನೋಟದ ಪಾತ್ರ ಕಾಣಣ್ಣಾ ||
.....ನಸಕುನಾಡನು ಬೇಡ ಬೇಕಣ್ಣಾ | ಹಬ್ಬಿರುವ ಕತ್ತಲಿ
ಮುಸುಕು ಸುತ್ತಿ—ನೋಡ ಬೇಕಣ್ಣಾ ||...."

ನಾಟಕದ ಈ ಕೊನೆಯಂಚಿಗೆ ಬಂದು ನಿಂತಾಗ, ಸಾವೇ ಬಾಳಿನ ತಂತಿಯನ್ನು ಮಿಡಿದು ಬೆಳಕಿನ ಸಂಗೀತವನ್ನು ನುಡಿಸಲೆಳಸುತ್ತಿರುವಂತೆ ಅನ್ನಿಸುತ್ತದೆ. ಇದು ಹೌದೆ? ನಾಟಕಕಾರರು ಇದನ್ನು ಬಯಸಿದ್ದಾರೆಯೆ? ಹಾಗೆಂದು ಕೇಳಿದರೆ, ಏನೋ ಒಂದು ಕ್ಷಣ ತತ್ತರಿಸುತ್ತಾನೆ. ಒಮ್ಮೊಮ್ಮೆ ನಾಟಕಕಾರರು ವಿವರಿಸದಿದ್ದ—ಆದರೆ ಅವರ ಕೃತಿಯಲ್ಲಿ ಧ್ವನಿತವಾದ—ಕಲವೊಂದು ಮಾತುಗಳೂ ಕಾಣಿಸುತ್ತವೆ. ಶ್ರೀ. ಕೀರ್ತಿಯವರು ಮುನ್ನುಡಿಯಲ್ಲಿ ಒಂದು ಮಾತನ್ನು ಅಸ್ಪಷ್ಟವಾಗಿ ಹೇಳಿದ್ದಾರೆ: "ಜೀವನದಲ್ಲಿ ಕಾಣುವ ಸತ್ಯದ ಪರಿಗಳನ್ನು ಒಂದೊಂದಾಗಿ ಬಿಚ್ಚಿನೋಡಿದಾಗ, ಕೊನೆಗೆ ಅನಿರ್ವಚನೀಯವಾದ ಗೂಢವೊಂದೇ ಉಳಿಯುತ್ತದೆ" ಇಲ್ಲಿ 'ಗೂಢ'ವೆಂಬುದು ಬರಿ ಗೂಢವಲ್ಲ. ಅದು ಅನಂತ ಹಾಗೆಂದು ಮುನ್ನುಡಿಕಾರರು ಹೇಳಿಲ್ಲ. ಆದರೆ ಅವರ ಪ್ರತಿಭೆ ಸೃಷ್ಟಿಸಿದ ಒಂದು ಪ್ರತಿಮೆಯಲ್ಲಿ, ಆ ಅರ್ಥವಿದೆ. ಇಲ್ಲವಾದರ ಆ ಬೆಳ್ದಿಂಗಳಿರುಳಿನಲ್ಲಿ ಶ್ವೇತಾಂಬರೆಯಾಗಿ, ಪರಿಶುದ್ಧ ಹಂಬಲಿನ ಹೃದಯವನೆತ್ತು, ಕೈಯಲ್ಲಿ ಎರಡು ಹೂ ಹಿಡಿದು ನಿಂತ ಗಂಗುವಿನ ತಾಯಿಯ ಸೃಷ್ಟಿಗೆ ಏನರ್ಥ? ಅದೊಂದು ಅಕಸ್ಮಿಕ ಪ್ರತಿಮೆಯಲ್ಲ. ಅದು ಪ್ರತಿಭೆಯ ಭಾಷೆ. ಆ ಬೆಳ್ದಿಂಗಳಿನ ತುಂಬ ಅನಂತತೆಯ ನಿಗೂಢ ಆನಂದ ತುಂಬಿನಿಂತಿದೆ. ಅದರ ಗರ್ಭದಿಂದ ಅಳಿದ ಅಳುವಿನಿಂದ ಹೊರಹೊರುಪದ ಹೊವರಳಿ ಕನಸಿನ ಲೋಕದಿಂದ ಕೆಳಗುದುರುತ್ತಿವೆ. ಆಗ ಪ್ರತಿಭೆ ಹಾಡುತ್ತದೆ:

(೪೪ನೆಯ ಪುಟ ನೋಡಿರಿ)

ಆ 'ನಿಸರ್ಗ ನಿಯಮ' ಈ

(ಒಂದು ರೂಪಕಕಥೆ)

ಶ್ರೀ. ಕುಲಕರ್ಣಿ ಶಂಕರರಾಯರು, ಅಕ್ಕಲಕೋಟೆ

" ಲೋಕದ ಜೀವಿಗಳೆಲ್ಲವಕ್ಕೂ ಸಾವು ಅನಿವಾರ್ಯ. ಆದರೆ ಆ ಸಾವು ಒಬ್ಬೊಬ್ಬನ ಕೊಲೆಯಾಗಿ ಸಂಭವಿಸುವುದು ಅನಿವಾರ್ಯವಲ್ಲ. ಅಂತರಂಗದಲ್ಲಿ ಮೋಸ, ವಂಚಕತನಗಳ ನುಡುವಾಗಿ, ಬಾಹ್ಯದಲ್ಲಿ ಸಭ್ಯತೆಯ ಸೋಗುಹಾಕಿ, ನಿರಪರಾಧಿಗಳ ಜೀವಯಜ್ಞ ನಡೆಯಿಸುವ ಕುಹಕಿಗಳ ಸಂಖ್ಯೆಗೇನೂ ಕೊರತೆಯಿಲ್ಲ ಈ ನಿಸರ್ಗದಲ್ಲಿ. ಆದರೆ ಅಂತಹ ಕುಕರ್ಮಿಗಳ ಬದುಕೂ ಪಾಪಕ್ಕೆ ತಕ್ಕ ಶಿಕ್ಷೆಗೀಡಾಗುವಂತೆ ಅನೇಕ ನಿಯಮಗಳನ್ನು ರಚಿಸಿಟ್ಟಿದೆ, ಅದೇ ನಿಸರ್ಗ "

ಆ ವಿಶಾಲ ಬಯಲುನೆಲದ ಅಂಗೈಯುಗಲದಷ್ಟೂ ಅವಕಾಶ ಬಿಡದೆ ಹಬ್ಬಿಕೊಂಡ ಹಸಿರು ಎಳೆಹುಲ್ಲಿನ ಮಧ್ಯೆ, ಕೆರು ಸ್ರವಾಹವೊಂದು ಓರೆಕೋರೆಯಾಗಿ ಹರಿದುಹೋಗಿದೆ.–ಅಂದವಾಗಿ ಬಾಚಿ ತೀಡಿ ತೆಗೆದ ಕೇಶರಾಶಿಯ ನಡುವಿನ ಬೈತಲೆಯಂತೆ. ' ಜುಳುಜುಳು, ಸಳಸಳ '— ಇದು ಆ ಕೆರುಸ್ರವಾಹದ ನಿರಂತರ ನುಡಿತ. ಅಂತಹ ನುಡಿತದ ವಾಗ್ಧುರ್ಯಸೇವನೆಗೆಂದೋ ಏನೋ, ಉದ್ದುಕೊಕ್ಕಿನ ಶುಭ್ರದೇಹಿ ಹಕ್ಕಿಯೊಂದು ಸ್ರವಾಹದ ಬಯಿಗೆ ಕುಳಿತಿದೆ–ಮೌನ ವ್ರತಧಾರಿ, ಸಾತ್ತ್ವಿಕತಪಸ್ವಿಯಂತೆ—ಭಾರತೀಯ ದೇ. ಭ. ನಂತೆ; ಅವರ ಮನಸ್ಸು ಮಾತ್ರ ಚಲನವಿಚಲನವಾಗಿತ್ತೆಂದು ಅವರ ಕಣ್ಣುಗಳೇ ತಿಳಿಸುತ್ತಿದ್ದುವು.

' ತೊಬಕ್ಕ 'ನೆ ಮಿಂಚುಮೈಯ ಮೀನೊಂದು ಮೇಲೆ ಬಂದು ಮತ್ತೆ ಜಳಕಂಡಿತು. ಉದ್ದುಕೊಕ್ಕಿನ ಶುಭ್ರದೇಹಿ ಗಬಕ್ಕನೆ ಗೋಣು ಹೊರಳಿಸಿ ಅತ್ತನೋಡಿ, ಎರಡು ಹೆಜ್ಜೆ ಕಿತ್ತುಹಾಕಿ, ' ಯಾರವರು ? ' ಎಂದಿತು. ನೀರ ಪರದೆಯುಲ್ಲಿಂದಲೇ ಧ್ವನಿ ಬಂತು : " ನಾನೇ—ನನಗೆ ಅನಿಮಿಷ ' ಎನ್ನುತ್ತಾರೆ. ಆದರೆ ತಾವು ...ತಾವು ... ? "

' ಓಹೋ ! ಇಷ್ಟೇಕೇ ಸಂಕೋಚ ? ಬೇಕಾದರೆ ಹೊರಗೆ ಬಂದು ಕೇಳಬಹುದಲ್ಲ.... '–ಎಂದು ಒಳ್ಳೇ ಗಂಭೀರತೀನಿಯಿಂದ ನಗುತ್ತ ಉತ್ತರಿಸಿತು ಶುಭ್ರದೇಹಿ.

' ಊಂ–ಹೂಂ !–ನಿಮ್ಮನ್ನು ಕಂಡರೆ ನನಗೇಕೋ ಭಯವಾಗುತ್ತಿದೆ. ಹೊರಗೆ ಬಂದು ನಿಮ್ಮ ಪರಿಚಯ ಕೇಳುವಷ್ಟು ಧೈರ್ಯ ನನ್ನಲ್ಲಿಲ್ಲ. ಇಲ್ಲಿಂದಲೇ ಕೇಳಿಕೊಳ್ಳುವೆ ಹೇಳಿ '— ಸಂಕೋಚಪೂರ್ಣ ಸ್ವರದಲ್ಲಿ ಮೀನು ವಿನಂತಿಸಿತು. ಶುಭ್ರದೇಹಿ ಇನ್ನೂ ಒತ್ತಾಗಿ ನಕ್ಕು ಎರಡು ಹೆಜ್ಜೆ ಮುಂಬಂದು—' ಇದೋ ನೋಡು, ಪರೋಕ್ಷವಾಗಿ ಬಂಧು ! ನನ್ನ ಕಂಡರೆ ನಿನಗೆ ಭಯವಾಗುತ್ತಿರುವುದು ನನ್ನ ಅಪರಿಚಿತತೆಗೋ ? ಅಶಿಷ್ಟ, ಚಾರಿತ್ರ್ಯಕ್ಕೋ ? ಏನೇ ಇರಲಿ, ಗೆಳೆಯನಾ ! ನನ್ನ ಮಾತನ್ನು ನಂಬುವೆಯಾದರೆ, ಒಂದು ವಿಷಯ ಹೇಳುವೆ ' ಎಂದು ಉಪಾಧ್ಯಾಯನಂತೆ ನುಡಿಯಿತು. ಆಗ ಮಿಂಚುದೇಹಿ ಇನ್ನೊಮ್ಮೆ ' ತೊಬಕ್ಕ 'ನೆ ಮೇಲೆ ಬಂದು ಮುಳುಗಿ ಹೇಳಿತು : ' ಹೇಳಬಹುದು, ಅತ್ಮೀಯರಂತೆ ನುಡಿಯುವ ನಿಮ್ಮ ನುಡಿಯ ಶೈಲಿಯನ್ನು ನಿರೀಕ್ಷಿಸಿದಾಗ, ನೀವು ನನಗೆ ಹತ್ತಿರದವರಂತೆಯೇ ಕಂಡಿರುವಿರಿ. ಹೇಳಿ, ನಿಮ್ಮ ಮಾತನ್ನು ನಂಬುವೆ ! ' ಶುಭ್ರದೇಹಿ ಹರುಷದ ಹೊನ್ನ ಹೊಳೆಯುಲ್ಲಿ ಮಿಂದು, ಇನ್ನೂ ಗಂಭೀರತೀವಿಯಲ್ಲಿ ಕೊರಳನ್ನು ನೀಟಾಗಿಸಿ ಹೇಳತೊಡಗಿತು : ' ಮುಮತೆಯ ಮಿತ್ರಾ, ಜಗದ ಜೀವಕೋಟಿಯಲ್ಲಿ, ನನಗೂ ನಿನಗೂ ಏನಭ್ಯಂತರವಿದೆ ? ನೀನು ನೀರಲ್ಲಿ ಬದುಕುವೆಯಾದರೆ ನಾನು ನೆಲದ ಮೇಲೆ—ಅಷ್ಟೆ. ಎಲ್ಲಿಯೇ ಬದುಕುವುದು ಮುಖ್ಯವಲ್ಲ. ಬದುಕುವ ಜೀವಿಗಳೆಲ್ಲ ಏಕಾಭಿನ್ನ ಸಮತೆಯ ಸೂತ್ರವನ್ನೇ ಅವಲಂಬಿಸಿ ಬದುಕಬೇಕೆಂಬ ವಿಚಾರವಾದಿ ನಾನು. ಒಬ್ಬರನ್ನೊಬ್ಬರು ಹಿಂಸಿಸಿ, ಧ್ವಂಸಿಸಿ, ಸ್ವಹಿತಸಾಧನೆಯ ಅಕ್ರಮವಾಗಾನುಸರಣೆ ಮಾಡುವುದು ಜೀವಿತ್ವದ ಲಕ್ಷಣವಲ್ಲ. ನೋಡು, ನನಗೀಗ ಹೊಸ ಬೆಳಕು ಕಂಡಿದೆ. ಹೊರವೈಬಣ್ಣದಷ್ಟೇ ಒಳಮನಸ್ಸಿನ ಪರದೆಯನ್ನೂ ತೊಳೆದು ' ಅಕಲಂಕ ಚಿತ್ತನಾಗಿರುವೆ. ' ಅದಲ್ಲದೂ ಈಗಲೀಗ ನಾನೊಂದು ಹಿರಿದಾದ ಸೇವಾಕಾರ್ಯ ಆರಂಭಿಸಿರುವೆ ನಿ...ನ....ಗೆ "

' ಯಾವ ಸೇವಾಕಾರ್ಯ ತಾನೆ ? ನನಗೆ ಗೊತ್ತಿಲ್ಲ '— ಮೀನು ಸಾಶ್ಚರ್ಯವಾಣಿಯಲ್ಲಿ ಒತ್ತರಿಸಿಯಿತು.

' ಓಹೋ ! ಅವಿನ್ನೂ ಯಾರಿಗೂ ತಿಳಿದಂತಿಲ್ಲ ' ಲೋಕದ ಕ್ಷುದ್ರ ಹಾಗೂ ನಿರಪರಾಧಿ ಜಾತುಗಳ ಜೀವರಕ್ಷಣೆ ! ಇದು ನಾನಾರಂಭಿಸಿರುವ ಸೇವಾಕಾರ್ಯದ ತಲೆಬರೆಹ. ಇನ್ನು ಯಾವ ಜೀವಿಗೂ ಅನ್ಯಾಯ, ಅಕಲ್ಯಾಣ ಘಟಿಸಲಾರದು ' ಎಂದು ನಿಶ್ಚಲ ಪರಿಯಲ್ಲಿ

ತಾರಕಂಬಗಳು

(ಲಲಿತಪ್ರಬಂಧಗಳ ಸಂಕಲನ)

ಲೇಖಕರು :

ಶ್ರೀ. ಬಿ. ಆರ್. ವಾಡಪ್ಪಿ, ಎಂ. ಎ.

ಇದೀಗ ಪ್ರಕಟವಾಗಿದೆ.

ಹಿರಿಯ ಕವಿಗಳಾದ ಶ್ರೀಮಾನ್ ಬೇಂದ್ರೆ ದತ್ತರಾಯರ ಮುನ್ನುಡಿಯೂ ಇದೆ.

ಬೆಲೆ ೧-೩೦ ನ. ಪೈ. ಕ್ರೌ. ೧೬ ಪುಟಗಳು.

ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

ಮತ್ತು

ಸಮಾಜ ಪುಸ್ತಕಾಲಯ, ಭಗತ್ ಸಿಂಗ್ ಬೀದಿ ಧಾರವಾಡ.

ನುಡಿದುದು ಶುಭ್ರದೇಹಿ. ಏನು 'ತೊಬರ್'ನೆ ಇನ್ನೊಮ್ಮೆ ಮೇಲೆ ಬಂದು ಮುಳುಗಿ ಕೇಳಿತು : 'ನಿಮ್ಮ ಆಹಾರದ ಪ್ರಶ್ನೆ !'— ಈ ಮಾತಿಗೆ ತುಂಬುಗರ್ವದಲ್ಲಿ ನಗು-ನಗುತ್ತ 'ನನಗಾಸ್ಪದ್ಧೆ ನಾನು ಆರಂಭಿಸಿರುವ ಸೇವಾಕಾರ್ಯದ ಮುಂದೆ ಬಹು ದೊಡ್ಡದೆನಿಸಿಲ್ಲ. ಬೇಕಾದರೆ ಪ್ರಸ್ತುತ ಕರ್ಮನಿರ್ವಹಣೆಗಾಗಿ, ಸ್ವಂತದ ಪ್ರಾಣವನ್ನೂ ಮುಡುಪಿಡಬಲ್ಲೆ. ಒಟ್ಟನಲ್ಲಿ ಕಲ್ಯಾಣದ ಕೊಲೆಯಾಗಬಾರದಷ್ಟೆ' — ಎಂದು ಉತ್ತರಿಸಿ ಸುಮ್ಮನಾಯಿತು. ಸಹರ್ಷದುಲ ಕಿತವಾಗಿ ಮತ್ತೂ, ಮತ್ತೂ ಮೇಲೆ ಬಂದು ಹರಿದಾಡಿತು ಮೀನು. 'ಎಂತಹ ಘನತಮ ತ್ಯಾಗಶೀಲವೃತ್ತಿ ! ಎಂತಹ ದಿವ್ಯ ಕಲ್ಯಾಣ ಧ್ಯೇಯ !!' ಎನ್ನುವ ಉದಾತ್ತ ಆದರಭಾವ ತಳೆದು ನೀರಪರದೆಯಿಂದೀಚೆ ನಿರ್ಭಯವಾಗಿ ಬಂದು ಬಂದು ನೆಗೆದಾಡಿತು. ಶುಭ್ರದೇಹಿ, ಅದನ್ನೇ ಏಕಲಕ್ಷ್ಯವೆಂದು ನಿಟ್ಟಿಸಿ, ಇನ್ನೂ ಎರಡು ಹೆಜ್ಜೆ ಮುಂಬಂದು ಕೊರಳು ಕೆಳಮಾಡಿತು. ಮೀನು ತನ್ನದೇ ಆದ ಮಬ್ಬುಭರವಸೆಯಲ್ಲಿ ಅತ್ತಿಂದಿತ್ತ ಹರಿದಾಡುತ್ತಿತ್ತು. ಶುಭ್ರದೇಹಿ, ಕೊಕ್ಕನ್ನು ಸಾವರಿಸಿತು. ಹುಚ್ಚುಹರುಷದ ತರಂಗ ತಲ್ಪದಲ್ಲಿ ತೇಲಿಬರುತ್ತಿರುವ ಮೀನನ್ನು....ಆತ್ಮೀಯ ಬಂಧುವನ್ನು.... ಮಮತೆಯ ಮಿತ್ರನನ್ನು ಕ್ಷಣದಲ್ಲಿಯೇ—'ಉದರಗುಹೆ'ಯತ್ತ-ಸ್ವಾಗತಿಸಿ ಕಣ್ಣು ಮುಚ್ಚಿತು.

'ಅಯ್ಯೋ ! ಅನ್ಯಾಯ !! ಅನ್ಯಾಯ !!! ಇದೇನು ಶುಭ್ರದೇಹಿ, ಇದೇ ಏನು ನಿನ್ನ ಸೇವಾಕಾರ್ಯದ ಇಂಗಿತ ? ಕುಹಕಿ. ವಾಪಿ-ಪಾ....' ಎಂದು ಮುಂತಾಗಿ ಜೀವದ ಕೊನೆಯುಸಿರು ಬಿಡುತ್ತ ಮಿಂಚುದೇಹಿ ಅರಚಿಕೊಂಡಿತು. ಆದರೆ ಶುಭ್ರದೇಹಿ, ಉಲ್ಲಾಸ ಪೂರ್ಣ ಪ್ರತಿಷ್ಠಾಭಾವದಲ್ಲಿ ಉತ್ತರಿಸಿತು 'ಗೆಳೆಯಾ, ಇದು ನಿಸರ್ಗ ನಿಯಮ. ನಾನು ಮಾಡಿದುದು ಪಾಪವೂ ಅಲ್ಲ. ಅನ್ಯಾಯವೂ ಅಲ್ಲ. ಹ ! ಹ !! ಹ !!!' ಕೊಕ್ಕಿನ ಹಕ್ಕಿ ಕೃಪ್ತಿನಿರ್ಭರವಾದ ನಗೆ ಸೂಸಿ ಅತ್ತಿತ್ತ ಹಾರಾಡಿತು.

ಒಂದೇ ಒಂದು ಕ್ಷಣ! 'ಸುಂಯ್'—ಯಾವ ಮರೆಯಿಂದಲೋ ಗುರಿಗಲ್ಲೊಂದು ಬೀಸಿ ಬಂದು ಶುಭ್ರದೇಹಿಯ ಗಂಟಲಿಗೆ ತಾಗಿತು. 'ಫಡಕ್ ಫಡಕ್'— ಪಕ್ಕ ಬಿಚ್ಚಿ ಒದ್ದಾಡುತ್ತ ಆ ಹಕ್ಕಿ ನೆಲ ಕ್ಕಪ್ಪಿತ್ತ ವೇದನಾಯುಕ್ತ ಕಂಪಿತ ಸ್ವರದಲ್ಲಿ ಮಿಡುಕಿತು.

'ಅಯ್ಯೋ ! ಅನ್ಯಾಯ !! ಅಧರ್ಮ !!! ನಿರಪರಾಧಿಯ ನಿಷ್ಕಾರಣ ಹತ್ಯ !!! ಏಯ್ ಹಸುರಿನ ಹರೆಯದಲ್ಲಿ ಲೋಲಾಡುವ ಗಿಡ ಮರ ಬಳ್ಳಿಗರಾ, ನಿಮ್ಮಲ್ಲಿ ಈ ಅನುಚಿತ ಪ್ರಕಾರವನ್ನು ಧಿಕ್ಕರಿಸುವ ಆತ್ಮೀಯತೆಯು ಹೇವವಿಲ್ಲವೆ ? ಅಯ್ಯೋ ! ಪಾಪಿ-ಪಾ....'

ಗಿಡ ಮರ ಬಳ್ಳಿಗಳು ಯಾವ ಮರುಮಾತನ್ನೂ ಆಡದೆ ಎಷ್ಟೂ ಅಲುಗದೆ ಮೌನವಾಗಿ ನಿಂತಿದ್ದುವು ಶಾಪಸಿಕ್ತ ಜೀವಿಯಂತೆ. ಆದರೆ.... ಗಿಡವೊಂದರ ರೆಂಬೆಯ ಮೇಲಿಂದ ಇದ್ದಕ್ಕಿದ್ದಂತೆ ಉತ್ತರರೂಪೀ ನುಡಿ ಹರಿದು ಬಂತು :

'ಮಹಾನುಭಾವಾ, ಇದು ಅನ್ಯಾಯವೂ ಅಲ್ಲ ಪಾಪವೂ ಅಲ್ಲ, ಇದೂ ನಿಸರ್ಗನಿಯಮ' ಶುಭ್ರದೇಹಿ ಬಿದ್ದಲ್ಲಿಂದಲೇ ಕೊರಳು ಹೊರಳಿಸಿ ರೆಂಬೆಯತ್ತ ದೃಷ್ಟಿಸಿತು. ಗುರಿಕಾರನೊಬ್ಬ ಕೈಯಲ್ಲಿ ಕವಣೆ ಹಿಡಿದು ನಗುತ್ತ ಕುಳಿತಿದ್ದ ರೆಂಬೆಯ ಮೇಲೆ.

(೪೬ನೆಯ ಪುಟದಿಂದ ಬಂದುದು)

"ನಸುಳು ನಾತನು ಬೇತಬೇಕಣ್ಮ ! ಕಬ್ಬಿರುವ ಕತ್ತಲಿ
ಮುಸುಕುಸರಿಸಿ—ನೋಡಬೇಕಣ್ಣಾ ॥

ಕಾಣ್ಕೆಯ ಬಗೆಗೆ ಮಾತನಾಡುವಾಗ ಸಣ್ಣ ಮಾತುಗಳನ್ನು ದೊಡ್ಡ ಮಾತುಗಳಲ್ಲಿ ಹೇಳಿದಂತೆ ಕಾಣಿಸುತ್ತದೆ. ದೊಡ್ಡ ಮಾತುಗಳನ್ನು ಸಣ್ಣ ಮಾತುಗಳಲ್ಲಿ ಹೇಳುವ ಕಾಲವಿದು. ಅದರೆ ಪ್ರತಿಭೆಯು ಕಣ್ಣಿನ, ಪ್ರತಿಮೆಯ ಗರ್ಭದಲ್ಲಿ ಒನ್ನೊಮ್ಮೆ ನಿಜವ ಕಣ್ಣಿಂದ ಕಂಡ ಮಾತು ಮೂಡಿಯುತ್ತವೆ. ಈ ಬಗೆಯ ಕಾಣ್ಕೆಯು ರೀತಿನೀತಿಗಳ ಬಗೆಗೆ ನಮ್ಮ ವಿಮರ್ಶಾರಂಗದಲ್ಲಿ ಹೆಚ್ಚಾಗಿ ವಿಚಾರ ನಡೆಯಬೇಕೆಂಬ ಬಲವಾದ ಅನಿಸಿಕೆಯಿಂದಲೇ ಈ ಲೇಖನ ದೀರ್ಘವಾಯಿತು. ಅಂತೆಯೇ ಈ ನಾಟಕದಲ್ಲಿ ಬಳಸಿದ ಉತ್ತರ ಕನ್ನಡದ ಕೆಚ್ಚಿನಭಾಷೆ, ಅದರ ವರ್ಣನೆಯಿರಿ, ಜೀವಕಳೆಗಳ ಬಗೆಗೆ ಹೆಚ್ಚು ಹೇಳದೆ ನಾಟಕಕಾರರ ಮಾತಿನಲ್ಲಿಯೇ ಈ 'ಕಾಣ್ಕೆಯನ್ನು ಕೊನೆಗೊಳಿಸಬಯಸುವೆ : "ಕಲಿಪಾಪದ ಫಲವಾಗಿ, ಭವಿಷ್ಯದ ಬೀಡುವಾಗಿರುವ ಶೈಶವದ ಅಲೌಕಿಕ ಸೌಂದರ್ಯವನ್ನು ಸೆರೆ ಹಿಡಿಯುವ ಸಾಹಸ ಇಲ್ಲದೆ...." ಈ ಸಾಹಸ ಸಫಲವಾಗಿದೆ—ಎಂದು ಹೇಳಿದರೆ, ಬಹು ದೊಡ್ಡ ಸಾಹಸದ ಮಾತೇನೂ ಆಗಲಿಕ್ಕಿಲ್ಲವೆಂದು ಭಾವಿಸುವೆ.

ಸಾದರ ಸ್ವೀಕಾರ

ಶ್ರೀ

೧೧೯ **ಶ್ರೀಭುವನೇಶ್ವರೀ ಪಂಚಾಂಗ** (ವರ್ಷಭವಿಷ್ಯ ಸಹಿತ) ಅಚ್ಚುಗೊಳಿಸಿದವರು ಜ್ಯೋತಿರ್ವಿದ್ವಾನ್ ಶ್ರೀ. ಶೇಷಶಾಸ್ತ್ರಿ ಹೆಬ್ಬಾಳ, ಸುರಪುರ. ಪ್ರಕಾಶಕರು ಆರ್ಯವೈಶ್ಯಸಂಘ, ರಂಗಂಪೇಟೆ (ಸುರಪುರ), ಜಿ. ಗುಲಬುರ್ಗಾ. ೯೪ ಪುಟಗಳು, ಬೆಲೆ ೦-೮೨-೦.

'ಸುರಪುರ ಪಂಚಾಂಗ'ಎಂಬುದು, ನಮ್ಮ ನಾಡಿನಲ್ಲಿ೬೦-೭೦ ವರ್ಷಗಳಿಂದಲೂ ಒಳ್ಳೆಯ ಪಂಚಾಂಗ-ಎಂದು ಹೆಸರನ್ನು ಪಡೆದಿದೆ. ಸದ್ಯದ ಜ್ಯೋತಿರ್ವಿದ್ವಾನ್ ಅವರು ಅದೇ ಪರಂಪರೆಯ ಗಣಿತದಿಂದ ಪಂಚಾಂಗ ರಚಿಸಿರುವುದಲ್ಲದೆ, ಜ್ಯೋತಿರ್ಗಣಿತದ ಹೊಸ ಸಂಶೋಧನೆಗಳನ್ನೂ ಜೊತೆಗಾಗಿ ಅರಿತಿರುವರೆಂಬುದನ್ನೂ ಪ್ರಕಟಪಡಿಸಿದ್ದಾರೆ. ಇದರಲ್ಲಿ ಜನ್ಮರಾಶಿಯ ಗೋಚರೀಗ್ರಹಗಳನ್ನು ಅನುಸರಿಸಿ ವಿಸ್ತಾರವಾಗಿ ಬರೆದ ೧೨ ತಿಂಗಳ ಭವಿಷ್ಯವಿರುವುದಲ್ಲದೆ, ದೇಶ-ವಿದೇಶಗಳ ರಾಜಕೀಯ ಆರ್ಥಿಕ ಭವಿಷ್ಯವೂ ಇರುವುದು. ದೊಡ್ಡ ಅಳತೆಯಲ್ಲಿ ಸುಂದರವಾದ ಮುದ್ರಣ, ಜ್ಯೋತಿಷ್ಯದ ಮೇಲೆ ವಿಶ್ವಾಸವಿರುವವರು ಈ ಪಂಚಾಂಗದಿಂದ ಸಾಕಷ್ಟು ಪ್ರಯೋಜನವನ್ನು ಪಡೆಯಬಹುದು. ಯಾವ ಕೆಲಸಕ್ಕೆ ಯಾವ ದಿನ-ವಾರ-ನಕ್ಷತ್ರಗಳು ಒಳ್ಳೆಯವೆಂಬ ವಿವರಣೆಯನ್ನೂ ವಧೂ-ವರರ ಹೊಂದಿಕೆಯ ಕುರಿತ ಜ್ಯೋತಿಷ್ಯ ವಿಚಾರವನ್ನೂ ಈ ಪಂಚಾಂಗದಲ್ಲಿ ಕೊಡಲಾಗಿದೆ. ಇಂತಹ ಉಪಯುಕ್ತ ಪಂಚಾಂಗವನ್ನು ಪ್ರಕಟಿಸುವ ಹೊಣೆಹೊತ್ತು ಯೋಗ್ಯ ಬೆಲೆಗೆ ಎಲ್ಲರಿಗೂ ದೊರಕುವಂತೆ ಮಾಡಿದ ಪ್ರಕಾಶಕರು ಅಭಿನಂದನೆಗೆ ಪಾತ್ರರಾಗಿದ್ದಾರೆ.

೧೧೯ **ಸಮಗ್ರವೇದಾಂತ** (ವೇದಾಂತ ವಿಷಯಕ ಚರ್ಚಾತ್ಮಕ ಗ್ರಂಥ) ಲೇಖಕರು ಮತ್ತು ಪ್ರಕಾಶಕರು ಶ್ರೀ. ರಾ. ವೆ. ಕರಿಗುದರಿ, 'ಶಂಭೋ ತವಾರಾಧನಂ' ೫೬ ಅ ದೇಣುಕನಗರ ಹುಬ್ಬಳ್ಳಿ. ಕ್ರೌ. ಅ. ೧೧೫ ಪುಟಗಳು. ಬೆಲೆ ೧-೦-೦

ನಮ್ಮ ನಾಡಿನಲ್ಲಿರುವ ಎಲ್ಲ ವೇದಾಂತಗಳು ತಮ್ಮ ತಮ್ಮ ರೀತಿಯಲ್ಲಿ ಪೂರ್ಣವೂ ಅಹುದು; ಅಪೂರ್ಣವೂ ಅಹುದು—ಎಂದು ಹೇಳಲು ಲೇಖಕರು ಹೊರಟಿದ್ದಾರೆ ಕಾಲೋಚಿತವಾಗಿ ಈ ಕಾರ್ಯ ನಡೆಯಲೇ ಬೇಕಾದುದು. ಆದರೆ ಇಂತಹ ಗ್ರಂಥಗಳನ್ನು ಬರೆಯುವವರು, ಎಲ್ಲ ವೇದಾಂತಗಳನ್ನೂ ಸಪ್ರಮಾಣವಾಗಿ—ಕೂಲಂಕಷವಾಗಿ—ತೂಕ ಮಾಡಬೇಕಾಗುವುದು. ತಾವು ತಿಳಿದುಕೊಂಡುದೇ ವೇದಾಂತ—ಎಂದು ಬರೆಯ ಹೊರಟರೆ, ತರ್ಕಶುದ್ಧವಲ್ಲದ ಅಭಾಸಾತ್ಮಕ ವಿಧಾನಗಳು, ಗ್ರಂಥಕರ್ತನ ಗುರಿಯನ್ನು ಸಾಧಿಸಲು ಸಮರ್ಥವಾಗಲಾರವು. ಪ್ರಸ್ತುತ ಗ್ರಂಥಕರ್ತರು, ಎಲ್ಲ ವೇದಾಂತಗಳನ್ನೂ ನಿಜ್ಞಾಸುಭಾವದಿಂದ ನೋಡಿ, ಸಮದೃಷ್ಟಿಯಿಂದ ವಿವರಿಸುವೆನೆಂದು ಹೇಳುವರಾದರೂ, ಅದ್ವೈತ ವೇದಾಂತದ ಬಗೆಗಿರುವ ಅವರ ಪಕ್ಷಪಾತದೃಷ್ಟಿ ಒಡೆದು ಕಾಣುವುದು. ವ್ಯಕ್ತಿಗೆ ಅಂತಹ ದೃಷ್ಟಿ ಇರಬಾರದೆಂದಲ್ಲ; ಆದರೆ ಈ ಗ್ರಂಥಲೇಖನಕ್ಕಾಗಿ ಇರಿಸಿಕೊಂಡ ಗುರಿಯು ಸಾಧನೆಗೆ ಅದು ಅಸಮರ್ಪಕವೆನಿಸುವುದು.

೧೨೦ **ಆರಾಧನೆ** (ವಾರ್ಷಿಕ ಸಂಚಿಕೆ) ಸಂಪಾದಕರು ಶ್ರೀ. ಕೆ. ಶ್ರೀನಿವಾಸ ಅವರು. ಸಹಸಂಪಾದಕರು ಶ್ರೀ. ಟಿ. ಸದಾನಂದ ಉಚ್ಚಿಲ ಅವರು. ಪ್ರಕಾಶಕರು ಶ್ರೀ. ವಸಂತಕುಮಾರ್ ಶೆಟ್ಟಿ, 'ಆರಾಧನೆ' ಕಾರ್ಯಾಲಯ, ಮಾತುಂಗಾ, ಮುಂಬಯಿ. ೧೬. ಡೆ. ಅ. ೬೪ ಪುಟಗಳು. ಬೆಲೆ ೦-೮-೦.

ಮುಂಬಯಿ ತರುಣ ಕನ್ನಡಿಗರ ಗುಂಪಿನ ಕನ್ನಡ ಅಭಿಮಾನದ ಪ್ರತೀಕವಿದು. ಅವರೇ ಬರೆದ ಸಾಹಿತ್ಯದ ವಿವಿಧರೂಪದ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಈ ಪ್ರಯತ್ನ ತರುಣ ಸಾಹಿತ್ಯಿಕರ ಶುಭಭವಿಷ್ಯಕ್ಕೆ ಸಹಕಾರಿಯಾಗಲಿ.

೧೨೧ **ಡಾ. ಕಬ್ಬೂರ ನಾರಾಯಣರಾಯರು** (ಜೀವನ ಚರಿತೆ) ಪ್ರೊ. ಸರೋಜಿನಿ ಮಹಿಷಿ ಎಂ. ಎ., ಎಲ್‌ಎಲ್. ಬಿ.; ಶ್ರೀ. ಗೋವಿಂದಮೂರ್ತಿ ದೇಸಾಯಿ ಬಿ. ಎ.; ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ, ಬಿ ಟಿ; ಶ್ರೀ. ಎಸ್. ಎಸ್. ಗದಗಕರ ಬಿ. ಎ.—ಈ ನಾಲ್ವರು ಬರೆಹಗಾರರು. ಪ್ರಕಾಶಕರು ಡಾ. ಕಬ್ಬೂರ ಸತ್ಕಾರ ಸಮಿತಿಯ ಕಚೇರಿ, ಕರ್ನಾಟಕ ಹೈಸ್ಕೂಲ್, ಕೋಟೆ—ಧಾರವಾಡ. ಡೆ. ಅ. ೮೦ ಪುಟಗಳು.

ಡಾ. ಕಬ್ಬೂರ ಅವರ ಬಾಲ್ಯದಿಂದಲೂ ಇದುವರೆಗಿನ ಜೀವನ ಘಟನೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಸ್ವಾತಂತ್ರ್ಯಯುದ್ಧದ ಚಳವಳಿಯಲ್ಲಿ ಅಯುಷ್ಯನನ್ನು ಸವೆಸಿದ, ಡಾ. ಕಬ್ಬೂರರ ಸಾಹಸದ ಘಟನೆಗಳು ರೋಮಾಂಚಕಾರಿಯಾಗಿವೆ. ಓಲು ಕೈಯಲ್ಲಿ ತೆಗೆದು ಕೊಂಡವರಲ್ಲಿ ಮುಗಿಸುವ ವರೆಗೂ ಈ ಜೀವನ ಚರಿತ್ರೆ ಕುತೂಹಲವನ್ನು ಕಾಯುಬಲ್ಲದು. ಬರೆದ ಭಾಷೆಯಲ್ಲಿ ಚಿಂತ್ರಕಾರರ ವಿಷಯಕವಾದ ಅತ್ಮೀಯತೆಯ ರಭಸವೂ, ಶುದ್ಧತೆಯೂ ಇವೆ.

೧೨೨ **ಅಮೃತಮತಿ** (ನಭೋವಾಣಿ ರೂಪಕ-ನಾಟಕಗಳು) ಬರೆದವರು ಶ್ರೀ. ವರದರಾಜ ಹುಯಿಲಿಗೋಳ ಎಂ. ಎ, ಬಿ ಟಿ ಅವರು. ಪ್ರಕಾಶಕರು ಶ್ರೀ ಭಾಲಚಂದ್ರ ಫಾಟೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೧೧೪ ಪುಟಗಳು ಬೆಲೆ ೧-೮-೦.

೧೨೩ **ಬಿರುದಿನ ಕುದುರೆಯ ಹಿಂದೆ** (ಲಕ್ಷ್ಮೀಶನ ಜೈಮಿನಿಭಾರತದಲ್ಲಿಯ ಕಥೆಗಳ ಗದ್ಯರೂಪ) ಲೇಖಕರು ಶ್ರೀ. ಮಲ್ಲಾರಿ. ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೨೩೨ ಪುಟಗಳು. ಬೆಲೆ ೨-೦-೦.

೧೨೪ **ಮಾತನಾಡುವ ಕುದುರೆ** (ಮಕ್ಕಳಿಗಾಗಿ ಬರೆದ ಕತೆಗಳ ಸಂಕಲನ) ಬರೆದವರು 'ಮನೋಹರ'—ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೪೦ ಪುಟಗಳು. ಬೆಲೆ ೪೦ ನ. ಪೈಸೆ.

ಕರ್ನಾಟಕದಲ್ಲಿ ಭಾವಗೀತ ಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು ಸಂಗೀತಗಾರರ ಆಕ್ಷೇಪಣೆ !

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ :

ಮುದ್ದಣನ ಮಾತು (ಶಿಶುಭಾವದ ಗೀತಗಳು)	....	....	೦—೧೨—೦
ಒಡನಾಡಿ (ನಲ್ವಾಡುಗಳು)	....	....	೧—೦—೦
ವಿರಹಿಣಿ (ಶೃಂಗಾರರೂಪಕ ಗೀತಗಳು)	....	....	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	....	....	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ !

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar

ಜಯಂತಿ

ಸಂಪುಟ ೨೦ ಸಂಚಿಕೆ ೧೨

ಮನುವಿನ ಮಾತು

೧

ಬಾಗಿಲಿಡೆಯಲಿ ಬಂದತಿಥಿಯನು
ಹೀಗಳೆದು ಮನೆಯೊಳಗೆ ಕುಳಿತಾ-
ರೋಗಣೆಯ ಗೈಯುವ ಮನುಜನನುಣ್ಣುವನೆ ಅನ್ನವನು ?
ಆಗುವುನು ಗೋಮಾಂಸ ಸಮುವಪ-
ಹೋಗಿಸುವ ಮಾನವನು ಪೀಲುವ
ನೀಗಿ ನಜೆವಾ ಪಾಪಿ ಚಂಡಾಲನಿಗೆ ಸಮಾನಪನು.

೨

ಮನೆಗೊಪೈಯನೆನಿಪವನು ಮುನ್ನನೆ
ಅನುತ ತೊನೆವುಪಥರ್ಮ ವಿಟದಿಟ,
ಮನೆಗೆ ಬಂದತಿಥಿಗಳು ನಿಪ್ಪರು ಭೃತ್ಯರುಗಳುಂತು,
ತನಿಪ ಬಳಿಕುಳಿದುಪನು ತಾ ತ-
ನ್ನಿನಿಯಳೊಂದಿಗೆ ಭುಂಜಿಸುವುದಿದು
ಸನುಮತವು ಸದ್ಧರ್ಮಕೆಂಬೊರೆದಿಪನು ಮನುರಾಯ !

(ಸಂಸ್ಕೃತದಿಂದ ಅನುವಾದ)

—ಬಿ. ಪಿ. ಎಸ್. ರಾವ್

ಗಣಿಲ ಮೇ

ಈ ಸಂಚಿಕೆಯಲ್ಲಿ:

ಅಬ್ಬಾ, ಇಪ್ಪತ್ತು ವರ್ಷ ಮುಗಿದುವು (ಸಂಪಾದಕೀಯ)
ಸಂಪಾದಕರು ೪೪೧

ನಾಡನಡೆ (ಪಾಸಂಗಿಕ ಟಿಪ್ಪಣಿಗಳು)
"ಕಾಲಭೈರವ" ೪೪೫

ಗುರುರಾಜ (ಸಣ್ಣಕತೆ)
ಶ್ರೀ ಕೆ. ಎ. ಎನ್ ರಾವ್, ಬನಾರಸ ೪೫೨

ಶಿಕ್ಷಣದ ಇಳಿಕೆಯ ಮಟ್ಟ (ವಿಚಾರ ಚರ್ಚೆ)
ಶ್ರೀ ಆರ್. ಪಿ. ಕುಲಕರ್ಣ, ಎಂ. ಎ., ಬಿ. ಟಿ. ಅಥಣಿ ೪೫೦

ಭೀಷ್ಮ (ಕವನ)
ಶ್ರೀ ಕೆ. ಜಿ. ಕೃಷ್ಣಭಟ್ಟ, ಪೆರಡಾಲ ೪೫೩

ಕವಿಕೃತಿಯ ಕುಂದು (ಕವನ)
ಶ್ರೀ. ವಿರೂಪಾಕ್ಷ, ಬಿ. ಕಾಮ್., ಹಗರಿಬೊಮ್ಮನಹಳ್ಳಿ ೪೫೩

ಗುಂಡೂಮೂಮೂನ ಗೋಷ್ಠಿ (ಹರಟೆ)
ಶ್ರೀ ಪಿ. ವಿ. ಗುಡಿ, ಹೊಸದಿಲ್ಲಿ ೪೫೪

ಲಲಿತಪ್ರಬಂಧದ ಸ್ವರೂಪ-ಬೆಳೆವಣಿಗೆ (ಪರಿಚಯಾತ್ಮಕ ಪ್ರಬಂಧ)
ಶ್ರೀ ಎನ್. ಎಸ್. ಗದಗಕರ, ಬಿ. ಎ., ಧಾರವಾಡ ೪೫೫

ಯಾರ ಹೊಲ? (ಒಂದು ಜೀವನಕಥೆ)
ಶ್ರೀ ಅನಂತರಾವ ಕೆ. ಭೋಸಗೆ, ಸೇಡಬಾಳ ೪೬೦

ನಾತಿ-ನೀರೆ (ಸಂಶೋಧನಾತ್ಮಕ)
ಶ್ರೀ ಶಂ. ಬಾ. ಜೋಶಿಯವರು, ಧಾರವಾಡ ೪೬೭

ಸುಖ-ಶಾಂತಿಗಳು ಸ್ವಜ್ಞಾನದಿಂದಲೇ ಲಭಿಸುವುವು (ಮನೋವಿಜ್ಞಾನ)
ಶ್ರೀ ಬಾಪು ಸಿರಹಟ್ಟಿ, ಬಿ. ಎ., ಸಿರಹಟ್ಟಿ ೪೬೯

ಪುಸ್ತಕ ವಿಮರ್ಶೆ ("ಅರಣ್ಯರೋದನ" ಮತ್ತು "ಕಿಷ್ಕಿಂದೆ")
ಶ್ರೀ ಸಿ. ಎಸ್. ಕುಲಕರ್ಣಿ ಎಂ. ಎ, ಬಿ. ಟಿ., ಧಾರವಾಡ ೪೭೨

ಕಿರುಗತೆಗಳೆರಡು (ರೂಪಕಕಥೆ)
ಶ್ರೀ ಎಲ್. ಡಿ. ಟಿ ಇನಾಮದಾರ, ಗುಲ್‌ಬರ್ಗಾ ೪೭೬

ನೂತನ ಸರಕಾರಕ್ಕೆ ಸ್ವಾಗತ
ಕ. ಸಾ. ಪರಿಷತ್ತಿನಿಂದ ಕವರ್ ೩ನೆಯ ಪುಟ

ಜಯಂತಿ

ಸಂಪುಟ ೨೦] [ಸಂಚಿಕೆ ೧೨

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪ ಡೆ ಯ ಬ ಹು ದಾ ದ
ಮಾಸಪತ್ರಿಕೆ

*
* *

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

* *
*

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ

*
* *

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

* *
*

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಅಬ್ಬಾ, ಇಪ್ಪತ್ತು ವರ್ಷ ಮುಗಿದುವು!

ಈ ಸಂಚಿಕೆಯೊಂದಿಗೆ ಜಯಂತಿ ತನ್ನ ೨೦ ವರ್ಷಗಳನ್ನು ಮುಗಿಸಿತು. ಈಗ ಮೂರು-ನಾಲ್ಕು ತಿಂಗಳಿಂದಲೂ ಜಯಂತಿ ತನ್ನ ಕರುಣೆಯ ಕಥೆಯನ್ನು ಕನ್ನಡಿಗರೆದುರು ತೋಡಿ ಕೊಳ್ಳುತ್ತಲೇ ಇದೆ. ೨೦ನೆಯ ವರ್ಷದೊಂದಿಗೆ ತನ್ನ ಜೀವನವನ್ನೂ ಕೊನೆಗೊಳಿಸ ಬೇಕೆಂದಿದ್ದ ಜಯಂತಿ, ಕೆಲವೊಂದು ಸ್ನೇಹಿತರ ಸೌಹಾರ್ದದ ಸಹಾಯದ ಆಶ್ವಾಸನದ ಮೇಲೆ ನಂಬುಗೆಯನ್ನಿರಿಸಿ, ಮತ್ತೆ ಬದುಕಿ ಕಾರ್ಯಮಾಡಲು ಸನ್ನದ್ಧವಾಗಿದೆ. ಈ ಸಂಗತಿಯನ್ನು ಜಯಂತಿಯ ಹಿತಚಿಂತಕರಿಗೆ ತಿಳುಹಲು ನಮಗೆ ಸಮಾಧಾನವೆನಿಸುತ್ತಿದೆ.

ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ. ಸೃಷ್ಟಿ-ಸ್ಥಿತಿಗಳಿಗೆ ಕಾಲಾವಕಾಶ ಬೇಕಾಗುವುದು; ವಿಲಯಕ್ಕೆ ಅದರ ಕಾರಣನೇ ಇಲ್ಲ. ಸೃಷ್ಟಿಗೆ ವಿಲಯ ಕಟ್ಟಿಟ್ಟ ಮಾತಾದರೂ, ಪ್ರತಿಯೊಂದು ಸೃಷ್ಟಿಯ ಸ್ಥಿತಿಯ ಸಾತತ್ಯವನ್ನು ಬಯಸುತ್ತದೆ. ಹಾಗೆಯೇ ಜಯಂತಿ ಬಹುಕಾಲ ಜೀವಿತವನ್ನು ಬಯಸಿದರೆ, ಅದು ಅಸ್ವಾಭಾವಿಕವೇನೂ ಅಲ್ಲ. ಆದರೆ ಅಕರ್ಮಣ್ಯ-ಶಕ್ತಿ ಬದುಕನ್ನು ಬಯಸುವುದರಲ್ಲಿ ಲೋಕಕ್ಕೆ ಪ್ರಯೋಜನವೇನೂ ಇರದು. ಜಯಂತಿಯ ಬದುಕನ್ನು ಅಪೇಕ್ಷಿಸುವವರು ಹಲವಾರು ಜನರಿರುವುದೆಂಬುದನ್ನು ನೋಡಿದರೆ, ಜಯಂತಿ ಅಕರ್ಮಣ್ಯ ವಸ್ತುವಾಗಿ ಬದುಕಿದುದಲ್ಲವೆಂಬುದು ಗೊತ್ತಾಗುವುದು. ಈ ನಂಬುಗೆಯೇ ಜಯಂತಿಯ ಸಂಚಾಲಕರಲ್ಲಿ, ಅದನ್ನು ಮುಂದುವರಿಸುವ ಧೈರ್ಯವನ್ನು ತಂದುಕೊಟ್ಟಿದೆ. ಅವರ ಧೈರ್ಯವನ್ನು ಗಟ್ಟಿಗೊಳಿಸುವ ಶಕ್ತಿ ಕನ್ನಡಿಗರ ಸಹಾಯ-ಸಹಾನುಭೂತಿಗಳಲ್ಲಿದೆ.

ಈ ಮೂರು ತಿಂಗಳ ಕಾಲದ ವಿಲಂಬ

ಸಂಪಾದಕರ ಅನಾರೋಗ್ಯ— ಅಡಚಣೆಗಳು, ಮುದ್ರಣಾಲಯದವರ ವ್ಯವಹಾರವೃತ್ತಿ, ಆರ್ಥಿಕ ಸಂಕಷ್ಟ— ಇವೆಲ್ಲವುಗಳ ಮೂಲಕ, ಈ ಮೂರುತಿಂಗಳ ಸಂಚಿಕೆಗಳು, ಎಂದೂ ಇಲ್ಲದಷ್ಟು ಅನಿಯಮಿತವಾಗಿ ಹೊರಟಿವೆ. ಇದಕ್ಕಾಗಿ ನಮಗೆ ತುಂಬ ಕಳವಳವಾಗಿದೆ. ಸಮಯ ನಿಷ್ಠತೆಗಾಗಿ ಹೆಸರು ಪಡೆದ ಜಯಂತಿ, ಈಗ ಅನಿವಾರ್ಯವಾಗಿ ಆ ಬಿರುದಿಗೆ ಎರವಾಗ ಬೇಕಾಯಿತು. ಇದರಿಂದ ನಮ್ಮ ವಾಚಕವರ್ಗಕ್ಕೆ ಆದ ಅನನುಕೂಲದ ಕಲ್ಪನೆ ನಮಗೆ ಇಲ್ಲದೆ ಇಲ್ಲ. ವಿರೋಧಪರಿಸ್ಥಿತಿಯ ಕೂಡ ಎಷ್ಟೊಂದು ಹೋರಾಡಿದರೂ, ಅದರ ಶಕ್ತಿ ಬಲವಾಗಿ ನಾವು ಸೋತು ಶರಣಾಗತರಾಗಬೇಕಾಯಿತು. ವ್ಯವಹಾರ ದೃಷ್ಟಿಯಿಂದ ಇದೊಂದು ಜಯಂತಿಗೆ ಹಾನಿಯೇ; ಆದರೆ ಪ್ರೀತ್ಯಾದರಗಳಿಂದ ಜಯಂತಿಯನ್ನು ನೋಡುವ ವಾಚಕವರ್ಗ, ಈ ನಮ್ಮ ತಪ್ಪನ್ನು ಕ್ಷಮಿಸುವರೆಂದು ನಮ್ಮ ಭರವಸೆ. ಬೇಗನೆ ಮುದ್ರಣದ ಬಗೆಗೆ ಹೊಸ ವ್ಯವಸ್ಥೆಯನ್ನು ಮಾಡಿಕೊಂಡು, ಒಂದೆರಡು ತಿಂಗಳಲ್ಲಿಯೇ ಮತ್ತೆ, ಸಮಯಕ್ಕೆ ಸರಿಯಾಗಿ ಸಂಚಿಕೆಗಳನ್ನು ನಮ್ಮ ವಾಚಕರಿಗೆ ಸಲ್ಲಿಸುತ್ತೇವೆ. ಅಲ್ಲಿಯವರೆಗೆ ನಾವು ಅವರಲ್ಲಿ ಸಹಾನುಭೂತಿ-ಸೌಹಾರ್ದಗಳನ್ನು ಬಯಸುತ್ತೇವೆ.

೨೦ನೆಯ ವರ್ಷದಲ್ಲಿ

ಎಷ್ಟೋ ಆಪತ್ತಿಗಳನ್ನು ಅನುಭವಿಸುವ ಸಂದರ್ಭವು ಒದಗಿದರೂ, ಜಯಂತಿ ತನ್ನ ಅಂತಃಸತ್ತ್ವದಲ್ಲಿ ಯಾವ ಬಗೆಯ ವಿಕೃತಿಯನ್ನೂ ತಂದು ಕೊಂಡಿಲ್ಲವೆಂಬುದು ನಮ್ಮ ನಾಡಿಗರ ಅನುಭವದ ಸಂಗತಿಯಾಗಿದೆ. ಬಾಹ್ಯ ಸೌಂದರ್ಯವಿಲ್ಲದೆ ಹೋದರೂ, ಆಕಾರ-ಗಾತ್ರಗಳಲ್ಲಿ ಸ್ವಲ್ಪವೂ ಹೆಚ್ಚು ಕಡಿಮೆಯಿಲ್ಲದಂತೆ, ಜಯಂತಿ ತನ್ನ ೧೨ ಸಂಚಿಕೆಗಳನ್ನು ವಾಚಕರಿಗೆ ಸಲ್ಲಿಸಿರುವುದು. ಕಾಗದದ ವಿಷಯ ಹೇಳಿದರೆ, ತಿಂಗ-ತಿಂಗಳೂ ಜಯಂತಿಯ ನಷ್ಟವನ್ನು ಹೆಚ್ಚಿಸುತ್ತ

ಬಂದಿತು. ಆದರೂ ಯಾವ ಸಂಚಿಕೆಯೂ ತನ್ನ ಪುಟಸಂಖ್ಯೆಯನ್ನು ಕಡಮೆ ಮಾಡಿಕೊಳ್ಳಲಿಲ್ಲ.

ಈ ವರ್ಷದಲ್ಲಿ ಬಂದಿರುವ ಸುಮಾರು ೫೦೦ ಪುಟಗಳಲ್ಲಿ, ಲೇಖನದ ದೃಷ್ಟಿಯಿಂದ, ಒಂದು ಪುಟವೂ ವ್ಯರ್ಥವೆನಿಸದಂತಿದೆಯೆಂಬುದನ್ನು ಯಾರೂ ಹೇಳಬಹುದು. ಜಯಂತಿಯ ಈ ಸಂಪುಟದಲ್ಲಿ ಪ್ರಕಟವಾದ ಸಣ್ಣಕಥೆಗಳೆಂದರೆ, ಈ ವರ್ಷದ ಒಳ್ಳೆಯ ಕಥಾಸಾಹಿತ್ಯ ನಿರ್ಮಿತಿಯ ಪ್ರಾತಿನಿಧ್ಯವನ್ನು ವಹಿಸುವಂತಿರುವುವು. ಹಾಗೆಯೇ ಕವನಗಳು. ಭಾವಪೂರ್ಣವಾದ ಹೊಸ ಹೊಸ ಕವನಗಳಲ್ಲದೆ, ವರ್ತಮಾನ ಸೃಷ್ಟಿಯೆನಿಸುವ ನವ್ಯಕವನಗಳೂ ಇದರಲ್ಲಿ ಪ್ರಕಟವಾಗಿವೆ. ಏಕಾಂಕ ಶ್ರುತಿರೂಪಕಗಳು ಇದರಲ್ಲಿದ್ದು ಸಹೃದಯರ ಮೆಚ್ಚಿಕೆಗೆ ಪಾತ್ರವಾಗಿವೆ. ಅಲ್ಲದೆ ಪ್ರಬಂಧ, ವೈಜ್ಞಾನಿಕ ಲೇಖನ, ಇವೆಲ್ಲ ಅಧಿಕೃತ ವಿದ್ವಾಂಸರ ಲೆಕ್ಕೆಣಿಕೆಯಿಂದ ಇಳಿದುವುಗಳಾಗಿದ್ದು, ಜನಸಾಮಾನ್ಯರಲ್ಲಿ ಬಹುಶ್ರುತತೆಯನ್ನು ಬೆಳೆಸುವಂತಹವಾಗಿರುವುವು. ಸಂಪಾದಕೀಯ ವಿಭಾಗ, ವಿಮರ್ಶಾ ವಿಭಾಗ ಇವಂತೂ ಜಯಂತಿಯ ವೈಶಿಷ್ಟ್ಯಗಳೇ ಆಗಿವೆ. ಅನೇಕ ಹೊಸ ಲೇಖಕರನ್ನು ಪರಿಚಯ ಮಾಡಿಕೊಡುವ ತನ್ನ ಸಂಪ್ರದಾಯವನ್ನು, ಜಯಂತಿ ಈ ವರ್ಷವೂ ಮುಂದುವರಿಸಿಕೊಂಡು ಬಂದಿದೆ.

ಕಳೆದ ತಿಂಗಳಲ್ಲಿ ದೊರೆತ ಆರ್ಥಿಕ ನೆರವು

ಓರಿಸ್ಸಾ ಆಕಾಶವಾಣಿಯಲ್ಲಿ (ಕಟಕ) ಸಂಗೀತ ವಿಭಾಗದ ನಿರ್ದೇಶನ ಅಧಿಕಾರದಲ್ಲಿರುವ **ಶ್ರೀಮಾನ್ ಗುರುರಾವ ದೇಶಪಾಂಡೆಯನರು** ಜಯಂತಿಗೆ ಕ್ಷೇಮವನ್ನು ಕೋರಿ, ತಮ್ಮ ಸೌಹಾರ್ದದ ಗುರುತಾಗಿ ೧೦ ರೂಪಾಯಿಗಳ ಸಹಾಯಧನ ಕಳುಹಿರುವರು. ಇದರಂತೆಯೇ ಮಂಡಿಕೇರಿಯ ಸರಕಾರೀ ಕಾಲೇಜಿನ ವ್ಯಾಧ್ಯಾಪಕರೊಬ್ಬರು, ಚಂದಾಹಣವಲ್ಲದೆ ಪ್ರತ್ಯೇಕವಾಗಿ ೫ ರೂಪಾಯಿಗಳನ್ನು ಸಹಾಯಧನವೆಂದು ಕಳುಹಿರುವರು. ಸಹಾಯ-ಸಹಕಾರದ ಪತ್ರಗಳೂ ಕೆಲವರಿಂದ ಬಂದಿವೆ. ಇವರೆಲ್ಲರಿಗೂ ಜಯಂತಿಯ ಕೃತಜ್ಞತೆಯೊಂದಿಗಿನ ಅಭಿವಂದನೆಗಳು.

ಜಯಂತಿಯ ಮುಂದಿನ ಮಾರ್ಗಕ್ರಮಣ

ಬರಲಿರುವ ವರ್ಷದಲ್ಲಿ ಜಯಂತಿಯ ಸ್ವರೂಪವನ್ನು ಇದ್ದುದರಲ್ಲಿಯೇ ಸುಂದರಗೊಳಿಸುವುದರ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕೆಂದು ಸಂಕಲ್ಪಿಸಿದ್ದೇವೆ. ಮೊದಲನೆಯದಾಗಿ ಮುದ್ರಣದ ಅಚ್ಚುಕಟ್ಟುತನ; ಈ ಏರ್ಪಾಡನ್ನು ಈಗಾಗಲೇ ಮಾಡಲಾಗಿದೆ. ಹೆಚ್ಚಿನ ಹಣದ ಅನುಕೂಲತೆಯಾದಂತೆ ಮುಖಪುಟವನ್ನು ಸಚಿತ್ರವಾಗಿ ಮಾಡಬೇಕೆಂದಿದ್ದೇವೆ. ಕಥೆ-ನಾಟಕಗಳಲ್ಲಿ ಸಂದರ್ಭಚಿತ್ರಗಳನ್ನೂ ಸೇರಿಸಬೇಕೆಂದಿದ್ದೇವೆ.

ಈಗಿರುವ ಸಂಪಾದಕೀಯ ವಿಭಾಗಗಳಲ್ಲದೆ, **'ನಮ್ಮ ಸಮಾಜದ ಸ್ವರೂಪ'** ಎಂಬ ಹೊಸ ವಿಭಾಗವೊಂದನ್ನು ಕೊಡಬೇಕೆಂದಿದ್ದೇವೆ. ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗವಲ್ಲದೆ, ಹೊಸ ಹೊಸ ಪುಸ್ತಕಗಳ ವಿಮರ್ಶೆಗಳನ್ನೂ ಪ್ರಕಟಿಸಬೇಕೆಂದಿದ್ದೇವೆ. ಅತ್ಯುತ್ತಮ ಸಣ್ಣಕಥೆ-ಚಿಕ್ಕ ನಾಟಕಗಳಂತೂ ಸರಿಯೇ ಸರಿ. ಇದೆಲ್ಲ ನಮ್ಮ ಗುರಿಯನ್ನು ಸಾಧಿಸಿ, ಪತ್ರಿಕೆಯನ್ನು ಹೆಚ್ಚು ಪ್ರಯೋಜನಕಾರಿಯಾಗುವಂತೆ ಮಾಡಲು ಕನ್ನಡಿಗರೆಲ್ಲರ ಕ್ರಿಯಾತ್ಮಕ ಸಹಕಾರವು ಬೇಕೇ ಬೇಕು.

ಅಭಿನಂದನೆಗಳು

ಕಳೆದ ವರ್ಷವು ಕೊನೆಗೊಳ್ಳಬೇಕಾದರೆ ಹಲವು ಜನರಿಂದ ತನಗೆ ಸಹಕಾರ ದೊರೆತುದನ್ನು ಜಯಂತಿಯು ಎಂದೂ ಮರೆಯಲಾರದು. ಜಯಂತಿಗೆ ಮುಖ್ಯಜೀವಾಳದಂತಿರುವುದು ನಮ್ಮ ಚಂದಾದಾರರ ಬಳಗ. ಅದರ ಪ್ರೀತಿಯ ಸ್ವಾಗತ ದೊರೆಯದೆ ಹೋದರೆ ಜಯಂತಿಯ ಗತಿಯೇ ಕುಂಠಿತವಾದೀತು. ಇದರ ಪೋಷಣೆಯ ಬಹುಭಾಗದ ಹೊಣೆ ಚಂದಾದಾರರ ತಲೆಯ ಮೇಲಿರುವುದು. ಆದಕ್ಕಾಗಿ ಮೊತ್ತ ಮೊದಲು ಅವರಿಗೆ ನಮ್ಮ ಅಭಿನಂದನೆಯ ಸಲುವಳಿ.

ಎರಡನೆಯದಾಗಿ ನಮ್ಮ ಲೇಖಕರ ಬಳಗ. ಜಯಂತಿಯಲ್ಲಿ ತಮ್ಮ ಲೇಖನ ಬರಬೇಕೆಂದು ಅಪೇಕ್ಷಿಸುವ— ಅನೇಕ ಜನ— ವಿದ್ವಾಂಸ ಲೇಖಕರು ಕನ್ನಡನಾಡಿನಲ್ಲಿ ಇದ್ದಾರೆ. ಅವರ ಸಹಕಾರ ಜಯಂತಿಗೆ ಯಾವಾಗಲೂ ದೊರೆಯುತ್ತಿರುವುದು ಒಂದು ಸಂತೋಷದ ಸಂಗತಿ. ಅವರೆಲ್ಲರೂ ಜಯಂತಿಯ ಸಾಂಸ್ಕೃತಿಕ ಮಟ್ಟವನ್ನು ಅರಿತುಕೊಂಡಿದ್ದಾರೆ ಸರಿ. ಆದರೆ ಜಯಂತಿಯಂತಹ ಪತ್ರಿಕೆ ಬದುಕಿ ಬಾಳುವುದರ ಕಡೆಗೂ ಅವರು ಲಕ್ಷ್ಯಕೊಡಬೇಕೆಂದು ಬಿನ್ನವಿಸಿಕೊಳ್ಳುವ ವಿಪರೀತಪರಿಸ್ಥಿತಿಯಲ್ಲಿ ಜಯಂತಿಯಿದೆ. ನಿಜವಾಗಿ ನೋಡಿದರೆ, ಲೇಖಕರು ಜಯಂತಿಯಿಂದ ಪ್ರತಿಫಲವನ್ನು ನಿರೀಕ್ಷಿಸಬೇಕು; ಆದರೆ ಈಗ ಜಯಂತಿ ಆ ಲೇಖಕರನ್ನೂ ವಿನಯದಿಂದ ಬಿನ್ನವಿಸಿಕೊಳ್ಳುವುದು: ಎಲ್ಲರೂ ಕೂಡಿ ಜಯಂತಿಯ ಆರ್ಥಿಕ ಪರಿಸ್ಥಿತಿಯನ್ನು ಮೊದಲು ಸುಧಾರಿಸಿರಿ; ಅದಕ್ಕಾಗಿ ಲೇಖಕರೆನಿಸಿಕೊಳ್ಳುವವರು ಕೂಡ ಜಯಂತಿಗೆ ಚಂದಾದಾರರಾಗಿ ಸಹಕರಿಸಿರಿ— ಎಂದು.

ಜಯಂತಿಯಲ್ಲಿ ಜಾಹೀರಾತುಗಳು ಬಹಳವಿಲ್ಲ. ಅದಕ್ಕಾಗಿ ನಾವು ಪ್ರಯತ್ನವನ್ನೂ ಮಾಡಿಲ್ಲ. ಆದರೆ ನಂಜನಗೂಡಿನ ಸದ್ವೈದ್ಯ ಶಾಲೆಯ ಒಡೆಯರೂ, ಧಾರವಾಡದ ಬಿ. ಜೆ. ಮುತ್ತಿಗೆಯವರೂ, ಜಯಂತಿಗೆ— ಕೇವಲ ಸಹಾಯ ಬುದ್ಧಿಯಿಂದ—ತಮ್ಮ ಜಾಹೀರಾತುಗಳನ್ನು ಕೊಟ್ಟಿರುವರು! ಇವರಿಗೆ ನಮ್ಮ ಹೃತ್‌ಪೂರ್ವಕ ಅಭಿನಂದನೆಗಳು.

ಆರ್ಥಿಕ ಆಪತ್ತಿಯ ಕಾಲದಲ್ಲಿ, ಮುದ್ರಣಕಾಗದವು ದುರ್ಮಿಳವಾಗಿರುವಾಗ, ಜಯಂತಿಗೆ ಕಾಗದವನ್ನು ಬದಗಿಸಿ ಸಹಾಯವಿತ್ತವರು, ಸಂಯುಕ್ತ ಕರ್ನಾಟಕದ ಸಂಪಾದಕರಾದ ಶ್ರೀಮಾನ್ ಮೊಹರೆ ಹಣಮಂತರಾಯರು. ಅವರ ಉಪಕೃತಿಯನ್ನೂ ಜಯಂತಿ ಎಂದೂ ಮರೆಯದು.

—ಸಂಪಾದಕರು

ನಾಡನಡೆ

ಕಾತರಭಾವಕ್ಕೆ ಗುರಿಯಾದ ಕಾಂಗ್ರೆಸ್ಸು

ಯಾವುದೇ ಒಂದು ಸಂಸ್ಥೆಯನ್ನು ಕೀರ್ತಿಶಿಖರಕ್ಕೆ ಏರಿಸುವುದೂ, ಪಾತಾಳಾಖಾತಕ್ಕೆ ಕೆಡಹುವುದೂ, ಆ ಸಂಸ್ಥೆಯಲ್ಲಿರುವ ವ್ಯಕ್ತಿಗಳೇ! ಎಲ್ಲ ವ್ಯಕ್ತಿಗಳೂ ಒಂದೇ ಆದರ್ಶದಿಂದ— ವ್ಯಕ್ತಿಸ್ವಾರ್ಥವನ್ನು ಮರೆತು— ದುಡಿಯುತ್ತಲಿದ್ದರೆ, ಆ ಸಂಸ್ಥೆಯು ಉನ್ನತ ಶಿಖರಕ್ಕೇರುವುದು. ಅದರಂತೆ ವ್ಯಕ್ತಿವ್ಯಕ್ತಿಗಳೂ ಪ್ರತ್ಯೇಕ ಗುರಿಯನ್ನಿರಿಸಿಕೊಂಡು, ವ್ಯಕ್ತಿಹಿತಸಾಧನೆಗಾಗಿ ಹೆಣಗತೊಡಗಿದರೆ, ಸಂಸ್ಥೆಯು ಪತನದ ದಾರಿಯನ್ನು ಹಿಡಿಯುವುದು.

ಭಾರತರಾಷ್ಟ್ರೀಯ ಮಹಾಸಭೆಯು ಸ್ವಾತಂತ್ರ್ಯಸಾಧನೆಗಾಗಿ ದುಡಿಯುತ್ತಿರುವಾಗ, ಅದರ ಸದಸ್ಯರಲ್ಲಿ ಎಂತಹ ಸಂಘಟನೆಯಿದ್ದಿತು! ಎಷ್ಟೊಂದು ಸೌಹಾರ್ದ-ಸಹಕಾರಗಳಿದ್ದುವು! ಅದೇ ಸಂಸ್ಥೆ ತನ್ನ ಗುರಿಯನ್ನು ಸಾಧಿಸಿ, ಭಾರತಪ್ರಜಾಪ್ರಭುತ್ವದ ಅಧಿಕಾರಸೂತ್ರವನ್ನು ಕೈಕೊಂಡ ಮೇಲೆ, ಅದರ ಸದಸ್ಯರಲ್ಲಿ ಎಂತಹ ಒಡಕುತನ; ಎಷ್ಟೊಂದು ಅಸಹನೆ-ಅಸಹಕಾರ ಭಾವ! ಇಂದು ಕಾಂಗ್ರೆಸ್ ಮಹಾಸಂಸ್ಥೆ, ಹೊರಗಿನ ವಿರೋಧಿಗಳಿಗಿಂತ— ಯಾದವ ರಾಜವಂಶದಂತೆ —ಆಪ್ತೀಯ ವಿರೋಧಿಗಳಿಂದಲೇ ವಿನಾಶದ ದಾರಿಯನ್ನು ಹಿಡಿಯುವ ಸಂದರ್ಭ ಬಂದು ಕುಳಿತಿದೆ.

ಇಂದು ಪ್ರತಿಯೊಂದು ರಾಜ್ಯದಲ್ಲಿಯೂ, ಅಧಿಕಾರದಲ್ಲಿ ಇರುವ ಕಾಂಗ್ರೆಸ್ ಪಕ್ಷೀಯರಲ್ಲಿಯೇ ಒಳಜಗಳ. ವ್ಯಕ್ತಿ-ವ್ಯಕ್ತಿಗಳಲ್ಲಿಯ ದ್ವೇಷ-ಮತ್ಸರಾಗ್ನಿ, ಕಾಂಗ್ರೆಸ್‌ಮಹಾಸಂಸ್ಥೆಯನ್ನೇ ಹೋಳು ಮಾಡಲು ನಿಂತಿದೆ. ಪೂರ್ವ ಪಂಜಾಬದಲ್ಲಿ ಒಂದು ಬಗೆಯ ಜ್ವಾಲೆ ಎದ್ದಿದ್ದರೆ, ಪಶ್ಚಿಮ ಬಂಗಾಲದಲ್ಲಿ ಇನ್ನೊಂದು ಬಗೆಯ ಬೆಂಕಿ ನಿಗಿನಿಗಿಸುತ್ತಿದೆ. ಒರಿಸ್ಸಾದಲ್ಲಿಯ ಉರಿ ಒಂದು ಬಗೆಯದಾದರೆ, ಮೈಸೂರು ರಾಜ್ಯದಲ್ಲಿಯ ಕಿಚ್ಚು ಮತ್ತೊಂದು ಬಗೆಯದು. ಕಾಂಗ್ರೆಸ್ಸಿನ ಮುಖ್ಯ ಧುರೀಣರು ಇದರಿಂದ ಭ್ರಾಂತರಾಗಿಬಿಟ್ಟಿದ್ದಾರೆ. ಮುಖ್ಯ ಪ್ರಧಾನರು ಬೇಸತ್ತು ತಮ್ಮ ಪದದಿಂದ ನಿವೃತ್ತರಾಗುವೆನೆಂದು ಹೇಳುವವರೆಗೂ ಪರಿಸ್ಥಿತಿಯು ಮುಂದುವರೆದಿದೆ. ಮೊನ್ನೆ ಮೊನ್ನೆ ದಿಲ್ಲಿಯಲ್ಲಿ ಸೇರಿದ ಎ. ಐ. ಸಿ. ಸಿ.ಯಲ್ಲಿ, ಒತ್ತಾಯದಿಂದ ಮುಖ್ಯಪ್ರಧಾನರ ಮನಸ್ಸನ್ನು ಬದಲಿಸಲಾಯಿತಾದರೂ, ರಾಜ್ಯ-ರಾಜ್ಯಗಳಲ್ಲಿ ಎದ್ದಿರುವ ಪಕ್ಷದ ಅಂತಃಕಲಹ, ಭವಿಷ್ಯವನ್ನು ಎಂತಹ ರುದ್ರಗಂಭೀರ ಪರಿಸ್ಥಿತಿಯಲ್ಲಿ ಇರಿಸಿರುವುದೋ ಎಂದು ಕಾಂಗ್ರೆಸ್ಸಿನ ಅಭಿಮಾನಿಗಳೆಲ್ಲರೂ ಕಾತರಭಾವವನ್ನು ತಾಳಿರುವರು.

ಎ. ಐ. ಸಿ. ಸಿ. ಏನೋ ಕಾಂಗ್ರೆಸ್ಸನ್ನು ಪರಿಶುದ್ಧಗೊಳಿಸುವ — ಸಿಸ್ತನ್ನು ಬಿಗಿಯಾಗಿ ಕಾಯ್ದುಕೊಳ್ಳುವ — ನಿರ್ಣಯವನ್ನು ಮಾಡಿದೆ. ಆದರೆ ಗುಂಪುಗೂಡಿದಾಗಿನ ಅಭಿಪ್ರಾಯವನ್ನು ಒಂಟಿಗ ರಾಗಿರುವಾಗ ಸ್ವಾರ್ಥಬುದ್ಧಿಯಿಂದ ಬದಲಿಸುವವರೇ ಹೆಚ್ಚಾಗಿರುವಲ್ಲಿ ಯಾವ ನಿರ್ಣಯ ಏನು ಮಾಡಬಲ್ಲದು?

ಇಂತಹ ಪರಿಸ್ಥಿತಿ ಬಂದುದೇಕೆ?

ಈ ಪ್ರಶ್ನೆಯ ಉತ್ತರಕ್ಕೆ ನಾವು ಬಹಳವಾಗಿ ಸೂಕ್ಷ್ಮ ಸಂಶೋಧನವನ್ನೇನೂ ಮಾಡಬೇಕಾಗಿಲ್ಲ. ಇಂದಿನ ಕಾಂಗ್ರೆಸ್ ಸಂಸ್ಥೆಯಲ್ಲಿ ಬಹುಜನರು ಯಾವ ಮನೋವೃತ್ತಿಯವರು?— ಎಂಬುದನ್ನು ವಿಶ್ಲೇಷಣ ಮಾಡಿ ನೋಡಿದರೆ ಸಾಕು.

ರಾಜ್ಯರಾಜ್ಯಗಳಲ್ಲಿಯ ಹಿಂದಿನ ಕಾಲದ ಕಾಂಗ್ರೆಸ್ಸಿಗರ ಸ್ವಾರ್ಥತ್ಯಾಗ, ಪ್ರಾಮಾಣಿಕತನ, ಸಂಘಟನಾ ಶಕ್ತಿ—ಇವು ಬ್ರಿಟಿಶರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ್ದುವು. ಎಂತಲೇ ಅವರು ಭಾರತವನ್ನು ಬಿಟ್ಟು ಹೋಗುವಾಗ, ಕಾಂಗ್ರೆಸ್ಸಿಗರ ಮಹಾಶಕ್ತಿಯನ್ನೊಪ್ಪಿ, ಇವರ ಕಡೆಗೆ ರಾಜ್ಯಸೂತ್ರಗಳನ್ನು ಒಪ್ಪಿಸಿಕೊಟ್ಟರು. ಭಾರತೀಯರ ಕಡೆಗೆ ಅಧಿಕಾರ ಬಂದಿತು; ಕಾಂಗ್ರೆಸ್ಸು ಎಲ್ಲರಿಗೂ ತನ್ನ ತೆರೆದ ಬಾಗಿಲಲ್ಲಿ ಸ್ವಾಗತವಿತ್ತಿತು. ಬ್ರಿಟಿಷರ ಕಾಲದ ಅಧಿಕಾರಪ್ರಿಯ ವ್ಯಕ್ತಿಗಳೆಲ್ಲ ಕಾಂಗ್ರೆಸಿನೊಳಗೆ ಸೇರಿದರು; ಹಿಂದಿನ ಕಾಲದ ಸ್ಥಳೀಯ ಸಂಸ್ಥೆಗಳಲ್ಲಿಯ ಕೊಳಕು ರಾಜಕಾರಣವನ್ನೂ ತಮ್ಮೊಂದಿಗೆ ಒಯ್ದು ಆ ಪರಿಶುದ್ಧ ಸಂಸ್ಥೆಯಲ್ಲಿ ಸೇರಿಸಿದರು.

ಜಾತಿಜಾತಿಗಳ ಪಂಗಡಗಳು ತಲೆದೋರಿದುವು. ವ್ಯಕ್ತಿವ್ಯಕ್ತಿಗಳ ಪಕ್ಷಗಳು ಎದ್ದು ನಿಂತುವು ಚುನಾವಣೆಯ ಕಾಲದಲ್ಲಿ ಇದರ ದುಷ್ಪರಿಣಾಮ ಕಾಣದೆ ಇರಲಿಲ್ಲ ಅನೇಕ ಜನ ಕಾಂಗ್ರೆಸ್ಸಿಗರೇ ಕಾಂಗ್ರೆಸ್ಸಿನ ವಿರುದ್ಧ ಬಂಡು ಹೂಡಿ ಅಸೆಂಬ್ಲಿ—ಪಾರ್ಲಿಮೆಂಟುಗಳಿಗೆ ಹುರಿಯಾಳುಗಳಾಗಿ ನಿಂತರು. ಅವರಲ್ಲಿಯ ಬಹುಜನರು ಚುನಾವಣೆಯಲ್ಲಿ ಆಯಶಸ್ವಿಗಳಾದರೂ, ಕಾಂಗ್ರೆಸ್ ಸಂಸ್ಥೆಯಿಂದ ಬಹಿಷ್ಕೃತರಾದರು. ಇನ್ನು ಆಯ್ಕೆಹೊಂದಿ ಹೋದವರಾದರೂ ಒಮ್ಮನದವರಾಗಿ ಇದ್ದಾರೆನ್ನಬೇಕೇ? ಕಾಂಗ್ರೆಸ್ಸಿನವರೇ ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಉರುಳಿಸುವ ಮಹಾಕಾರ್ಯವನ್ನು ಮಾಡುತ್ತಿದ್ದಾರೆ.

ಚುನಾವಣೆಯಲ್ಲಿ ಆಯ್ಕೆಪಡೆದವರೆಲ್ಲ ಮಂತ್ರಿಗಳಾಗುವುದು ಸಾಧ್ಯವೇ? ಮಂತ್ರಿಗಳ ಸಂಖ್ಯೆ ಪರಿಮಿತವಾಗಿರುವುದು. ಮುಖ್ಯ ಮಂತ್ರಿಯ ಸ್ಥಾನವಂತೂ ಒಂದೇ ಇರುವುದು. ಎಲ್ಲರೂ ಮಂತ್ರಿಯಾಗಬೇಕೆಂಬ— ಮುಖ್ಯಮಂತ್ರಿಯೇ ಆಗಬೇಕೆಂಬ— ಮಹತ್ತ್ವಾಕಾಂಕ್ಷೆಯುಳ್ಳವರಾದರೆ, ಸರಕಾರದಲ್ಲಿ ಶಾಂತ ವಾತಾವರಣ ಹೇಗೆ ಉಳಿಯಬೇಕು? ರಾಜ್ಯ—ರಾಷ್ಟ್ರಗಳ ಜನತೆಯ ಕಲ್ಯಾಣ ಹೇಗೆ ಸಾಧಿಸಬೇಕು? ಅಧಿಕಾರಸ್ಥಾನದಲ್ಲಿರುವವರು ವಿರೋಧಿಪಕ್ಷಗಳನ್ನು ಎದುರಿಸಬೇಕಾಗುವುದಂತೂ ಸರಿಯೇ; ತಮ್ಮ ಪಕ್ಷದಲ್ಲಿಯ ವಿರೋಧಿಗಳನ್ನೂ ಎದುರಿಸಬೇಕಾಗುವುದು. ಇಂತಹ ಪರಿಸ್ಥಿತಿಯ ಮೂಲಕವಾಗಿಯೇ ಆಗಬೇಕಾದ ಸಾಮಾನ್ಯ ಕಾರ್ಯಗಳೂ ಸರಕಾರದಿಂದ ಆಗದಂತಾಗುವುವು. ಇದು ವಿರೋಧಿಗಳಿಗೆ

ಈಗ ಸಾಧಿಸಿಕೊಂಡರು. ಆದರೆ ಶ್ರೀ. ನಿಜಲಿಂಗಪ್ಪನವರ ಮಂತ್ರಿ ಮಂಡಳದಂತೆಯೆ ಇದೂ ಅಭದ್ರವಾದ ಆಸನದ ಮೇಲೆಯೇ ಕುಳಿತು ಕೊಳ್ಳಲಿದೆ. ಏಕೆಂದರೆ ಈ ಆಸನವೂ ಅನೇಕ ವ್ಯಕ್ತಿಗಳ ಅತೃಪ್ತಿ-ಅಸಂತುಷ್ಟಿಗಳ ಮೇಲೆಯೆ ಸ್ಥಾಪಿತವಾಗಿರುತ್ತದೆ.

ಮೈಸೂರುರಾಜ್ಯದಲ್ಲಿದ್ದ ಈ ಬಗೆಯ ಪರಿಸ್ಥಿತಿಯು ಬೇಗನೆ ಕೊನೆಗೊಣುವಂತೆ ಕಾಣುವುದಿಲ್ಲ. ಏಕೆಂದರೆ, ಯಾವ ಪಂಗಡದ ಮಂತ್ರಿಮಂಡಲ ರೂಪುಗೊಂಡರೂ, ಕೆಲವೊಂದು ಪ್ರಭಾವಶಾಲಿ ವ್ಯಕ್ತಿಗಳು ಹೊರಗೆ ಉಳಿದೇ ಉಳಿಯುತ್ತವೆ. ಮಂತ್ರಿಗಳಾಗಬೇಕೆಂಬ ಅವರ ವಾಸನೆಗಳು ತೃಪ್ತವಾಗದೆ, ಅವು ಭೂತಗಳ ರೂಪವನ್ನು ತಾಳುವುವು; ಅಧಿಕಾರಸ್ಥಾನದಲ್ಲಿರುವವರಿಗೆ, ಈ ಭೂತಗಳಿಂದ ತಮ್ಮ ಪೀಠವನ್ನು ಸಂರಕ್ಷಿಸಿಕೊಳ್ಳಲು ಹಗಲಿರುಳು ಎಚ್ಚತ್ತು ಮಂತ್ರ ಮಾಟ ಮಾಡಿಸಬೇಕಾಗುವುದಲ್ಲದೆ, ಜನತೆಯ ಕಲ್ಯಾಣಕಾರ್ಯವನ್ನು ಮಾಡುವುದಕ್ಕೆ ಅವಕಾಶವೇ ದೊರೆಯದಂತಾಗುವುದು. ಕಾಂಗ್ರೆಸ್ ರಾಜ್ಯ ಪ್ರಾರಂಭವಾದಾಗಿನಿಂದ ನಮ್ಮ ಮೈಸೂರು ರಾಜ್ಯದಲ್ಲಂತೂ ಇದೇ ಕ್ರಮವು ನಡೆದಿದೆ.

ಹಳೆಯ ಮೈಸೂರಿನಲ್ಲಿ ಮೊದಲು ಮಾನ್ಯ ಕೆ. ಸಿ. ರೆಡ್ಡಿಯವರೊಂದಿಗೆ ಕುಸ್ತಿ ನಡೆದು, ರೆಡ್ಡಿಯವರು ಬಿದ್ದು ಕೆ. ಹನುಮಂತಯ್ಯನವರು ಗೆದ್ದರು. ಮುಂದೆ ಹನುಮಂತಯ್ಯನವರೊಂದಿಗೆ ಕುಸ್ತಿ ನಡೆದು ಹನುಮಂತಯ್ಯನವರು ಬಿದ್ದರು; ಕಡಿದಾಳ ಮಂಜಪ್ಪನವರು ಧೂಮಕೇತುವಿನಂತೆ ಮೇಲೆದ್ದರು. ಮುಂದೆ ರಾಜ್ಯಪುನರ್ಘಟನೆಯ ಮಹಾ ಕುಸ್ತಿಯಲ್ಲಿ ಮಾನ್ಯ ನಿಜಲಿಂಗಪ್ಪನವರು ಗೆದ್ದಿದ್ದರು. ಈಗ ಅವರು ಬಿದ್ದು ಮಾನ್ಯ ಜತ್ತಿಯವರು ಮೇಲೆದ್ದಿದ್ದಾರೆ. ಆದರೆ ಮಾನ್ಯ ಜತ್ತಿಯವರನ್ನು ಕುಸ್ತಿಯಲ್ಲಿ ಗೆದಿಸಿದ ಸೂತ್ರಧಾರಿಗಳು—ಈಗಲೂ—ಮಂತ್ರಿಮಂಡಳದಿಂದ ಹೊರಗೇ ಉಳಿಯುವ ಸಂಭವವಿದೆ. ಅಲ್ಲದೆ ಅವರಿಗೆ ಕುಸ್ತಿ ಹಿಡಿಸುವುದು ಒಂದು ಚಟವಾಗಿ ಬಿಟ್ಟಿದೆ. ಮಾನ್ಯ ಜತ್ತಿಯವರು ಇದರ ಮನವರಿಕೆ ಮಾಡಿಕೊಂಡಷ್ಟೂ ಅವರಿಗೆ ಒಳ್ಳೆಯದು!

ಮಾನ್ಯ ಜತ್ತಿಯವರಿಗೆ ಅಭಿನಂದನೆ!

ಮೈಸೂರು ರಾಜ್ಯದ ಇಂತಹ ಗೊಂದಲದ ಪರಿಸ್ಥಿತಿಯಲ್ಲಿಯೂ ರಾಜ್ಯದ ಮುಖ್ಯಧುರೀಣನ ಮನ್ನಣೆಯನ್ನು ಪಡೆದ ಮಾನ್ಯ ಜತ್ತಿ ಬನಪ್ಪನವರ ವ್ಯಕ್ತಿತ್ವಕ್ಕಾಗಿ ನಮಗೆ ಆನಂದವೂ ಅಭಿಮಾನವೂ ಎನಿಸುತ್ತಿದೆ. ಮುಂಬಯಿ ರಾಜ್ಯದಲ್ಲಿ ಇವರು ಉಪಮಂತ್ರಿಪದದಲ್ಲಿದ್ದರು; ಆದರೆ ಉಪಮಂತ್ರಿಪದದಲ್ಲಿರುವ ಬೇರೆ ಅನೇಕ ವ್ಯಕ್ತಿಗಳ ಯೋಗ್ಯತೆಯನ್ನು ಕಂಡಿರುವವರು, ಮಾನ್ಯ ಜತ್ತಿಯವರಿಗೆ ಅಂದು ದೊರೆತ ಸ್ಥಾನದ ಬಗೆಗೆ ಕುತೂಹಲ ವ್ಯಕ್ತಪಡಿಸುವಂತೇನೂ ಇರಲಿಲ್ಲ. ಅದಕ್ಕೆ ಮೊದಲು ಜಮಖಂಡಿ ಸಂಸ್ಥಾನದಲ್ಲಿ ಮಂತ್ರಿಸ್ಥಾನದಲ್ಲಿ ಇದ್ದುದೂ ಅಷ್ಟೊಂದು ಮಹತ್ತ್ವದ ವಿಷಯವಾಗಿರಲಿಲ್ಲ. ಆ ಮೇಲೆ 'ಜತ್ತಿ ಸಮಿತಿ'ಯಿಂದ ಇವರ ಹೆಸರು ಬಹಳ ಜನರಿಗೆ ಪರಿಚಯವಾಯಿತು. ಆದರೆ ಇಂದಿನ ಕುರುಕ್ಷೇತ್ರದ ವಿಜಯದ ನಾಯಕಪಟ್ಟ ಮಾನ್ಯ ಜತ್ತಿಯವರಿಗೆ ದೊರೆತೀತೆಂದು ಬಹಳ ಜನರು ಭಾವಿಸಿರಲಿಲ್ಲ. ಅದು ಮತ್ತೊಂದು ಯಾವುದಾದರೂ ಮೈಸೂರಿನ ಹಳೆಯ ಹುಲಿಗೆ ದೊರೆಯಬಹುದೆಂದು ಜನತೆ ನಿರೀಕ್ಷಿಸಿದ್ದಿತು. ಆದರೆ ಜತ್ತಿಯವರ ಕರ್ತೃತ್ವಶಕ್ತಿಯ ಬಲದಿಂದಲೋ, ಕುಂಡಲಿಯಲ್ಲಿಯ ಗ್ರಹಗಳ ಬಲದಿಂದಲೋ, ಆ ಸ್ಥಾನ ಶ್ರೀ. ಜತ್ತಿಯವರಿಗೆ ದೊರೆತಿದೆ. ಉತ್ತರ ಕರ್ನಾಟಕದವರಿಗಂತೂ ಇದು ಹೆಮ್ಮೆಯ ಮಾತೇ ಸರಿ!

ಉತ್ತರ ಕರ್ನಾಟಕ ಮುಂಬಯಿ ರಾಜ್ಯದಲ್ಲಿದ್ದಾಗಲೂ ದುರ್ಲಕ್ಷ್ಯಿತವಾಗಿದ್ದಿತು; ಈಗಿನ ಮೈಸೂರು ರಾಜ್ಯದಲ್ಲಿಯೂ ಅಲಕ್ಷ್ಯಿತವಾಗಿಯೆ ಉಳಿದಿದೆ- ಉತ್ತರ ಕರ್ನಾಟಕದವರೇ ಆದ ಶ್ರೀ. ಜತ್ತಿಯವರು ಈ ಕೊರತೆಯನ್ನು ತುಂಬಿಕೊಡುವರೆಂದು ನಾವು ನಂಬಬಹುದು.

ಒಂದು ದುಃಖದ ಸಂಗತಿ

ಸುಮಾರು ೧೪ ವರುಷಗಳಿಂದಲೂ ಜಯಂತಿಯ ಕಾರ್ಯಾಲಯದಲ್ಲಿದ್ದು, ಪ್ರಾಮಾಣಿಕತನದಿಂದ ಜಯಂತಿಗೆ ಸೇವೆ ಸಲ್ಲಿಸಿದ ಶ್ರೀ. ಹಣಮಂತ ಜಾಧವ ಇವನು, ಕರುಳಿನ ರೋಗದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು, ಧಾರವಾಡದ ಸರಕಾರಿ ಆಸ್ಪತ್ರೆಯಲ್ಲಿ, ತಾ॥ ೫-೫-೫೮ ರಂದು ತೀರಿದನು. ಜಯಂತಿಗೆ ಇದೊಂದು ದೊಡ್ಡ ಆಘಾತ. ಸ್ವಯಂಸೇವಕನಂತೆ ಆತ್ಮೀಯತೆಯಿಂದ ಕೆಲಸ ಮಾಡುವವರು ಈ ಕಾಲದಲ್ಲಿ ಅಪೂರ್ವ. ಅವನ ಅಗಲಿಕೆಯಿಂದ ಅತನ ಹೆಂಡತಿ, ಮೂರು ಚಿಕ್ಕ ಚಿಕ್ಕ ಮಕ್ಕಳು ಕೇವಲ ಅನಾಥರಾಗಿ ಬಿಟ್ಟಿದ್ದಾರೆ. ಅವರ ದುಃಖದಲ್ಲಿ ಜಯಂತಿಯೂ ಸಹಭಾಗಿನಿ. ಆದರೆ ಅತನ ಅಭಾವದಿಂದ ಜಯಂತಿಗೆ ತುಂಬಿಬರದಂತಹ ಹಾನಿಯೊಗಿದೆ.

ಗುರುರಾಜ

(ಒಂದು ಸಣ್ಣಕತೆ)

ಲೇಖಕರು:
'ಅಶ್ವತ್ಥ' ಬನಾರಸ

ಈ ಸಂಸಾರದಲ್ಲಿ ಒಬ್ಬ ಮನುಷ್ಯನ ಯಾವುದೋ ಚಟುವಟಿಕೆ, ಇನ್ನೊಬ್ಬನ ಇನ್ನೊಂದು ಯಾವುದೋ ಚಟುವಟಿಕೆಗೆ ಪ್ರಚೋದಕವೆನಿಸುವುದು ಆಶ್ಚರ್ಯದ ಸಂಗತಿ. ಪ್ರೊ. ಗುರುರಾಜರ ಹೊಸ ಹೆಂಡತಿಯ ನೋಹದ ಚೇಷ್ಟೆ, ಎದುರುಮನೆಯ ವಿದ್ಯಾರ್ಥಿ ಪರೀಕ್ಷೆಯಲ್ಲಿ ಪಾಸಾಗಲು ನೆರವಾಯಿತು.

ದೀಪ ಉರಿಯುತ್ತಿತ್ತು.

ಹೂಕಡಿಕೆಯಿಂದ ತಲೆ ಮೂರು ಲೋಕಗಳನ್ನೂ ಸುತ್ತಿ ಜೋಕಾಲಿಹೊಡೆದು ಉಳುಕಿದಂತಾದಾಗ, ಪ್ರೊಫೆಸರ್ ಗುರುರಾಜರು– ರೆಪ್ಪೆಮುತ್ತಿಕೊಂಡಿದ್ದ–ಕೆಂಗಣ್ಣುಗಳನ್ನು. ಮರಣಸಂಕಟದಿಂದ ಬಿಡಲಾರದೆ ಬಿಟ್ಟರು; ಕುರ್ಚಿಯಲ್ಲಿ ಜಾರಿದ್ದ ದೇಹವನ್ನು, ಕಷ್ಟದಿಂದ ಕೈಯೂರಿಕೊಂಡು ಮೇಲೆಳೆದು ನೆಟ್ಟಗೆ ಮಾಡಿದರು; ಮುಂದೆ ನೋಡಿದರು.

ಅಲ್ಲಿ ಮೇಜಿನ ಮೇಲೆ ಅಸ್ತವ್ಯಸ್ತವಾಗಿ ಬಿದ್ದಿದ್ದುವು, ಅರ್ಥವಾಗದ ಆರ್ಥಶಾಸ್ತ್ರದ ಪುಸ್ತಕಗಳು— ಯುದ್ಧಭೂಮಿಯ ಯೋಧರ ಹೆಣಗಳಂತೆ; ಪೆನ್ಸಿಲ್, ಪೆನ್‌ಗಳು ಫಿರಂಗಿ-ಬಂದೂಕುಗಳಂತೆ. ನಿಜ, ಪ್ರೊಫೆಸರರ ವ್ಯಾಸಂಗ ಮುಗಿಯದ ಯುದ್ಧವೇ ಆಗಿತ್ತು. ಒಂದು ದಪ್ಪ ಪುಸ್ತಕವಂತೂ ತೆರೆದೇ ಇತ್ತು, ಅವರ ಕಣ್ಣು ಮುಚ್ಚೇ ಇದ್ದಾಗಲೂ. ಕೈಯೆಣ್ಣೆ ಕುಡಿದ ಮುಖದಿಂದ ಅವರು ಈ ರಣರಂಗವನ್ನು ಸಿಂಹಾವಲೋಕಿಸಿ. ಎಡಪಕ್ಕದಲ್ಲಿದ್ದ ಟೀಪಾಯಿಯ ಮೇಲಿದ್ದ ಬೆಳ್ಳಿಯ ಜೊಂಬಿನಿಂದ ಬೆಳ್ಳಿಯ ಲೋಟಕ್ಕೆ ಸ್ವಲ್ಪವೇ ನೀರನ್ನು ಬಗ್ಗಿಸಿದರು. ಬೆಂಕಿಯನ್ನು ಮುಟ್ಟುವ ಭಯದಿಂದ ಒಂದೇ ಬೆರಳನ್ನು ಬೇಗ ನೀರಿನಲ್ಲಿ ಅದ್ದಿ ತೆಗೆದು, ಕಾಡಿಗೆಯನ್ನು ಹಚ್ಚಿಕೊಳ್ಳುವಂತೆ ಕಣ್ಣಿಗೆ ಮುಟ್ಟಿಸಿದರು. ಇದೇಕೆ ಈ ಭಯ, ಎನ್ನುತ್ತೀರಾ? ಇದು ಬನಾರಸ್. ಅದೂ ಡಿಸೆಂಬರ್ ಕೊನೆ. ಇಲ್ಲಿಯ ಚಳಿ ಮೈಸೂರು- ಬೆಂಗಳೂರಿನ ಚಳಿಯಲ್ಲ; ಅದರ ಅಪ್ಪ, ಅಜ್ಜ. ಕಿಟಕಿ-ಬಾಗಿಲುಗಳನ್ನು ಭದ್ರವಾಗಿ ಹಾಕಿರಬೇಕು. ಒಂದೊಂದು ವೇಳೆ ಕೊರೆತದ ಗಾಳಿ ಬೀಸುವಾಗ, ಸಂದಿಸಂದಿಗೆಲ್ಲ ಕಾಗದವನ್ನೋ ಬಟ್ಟೆಯನ್ನೋ ತುರುಕಿ ಚಳಿಯ ಹಾವಳಿಯನ್ನು ಹೊರಗೇ ಇರಿಸಬೇಕಾಗುತ್ತದೆ. ಆದರೆ ನಿಮ್ಮಾ ಚಳಿಯಂತೆ ಇದನ್ನೇನು ಬೆಂಕಿಯಿಂದ ಸುಡಬೇಕಾಗಿಲ್ಲ. ಶತ್ರುವಿನ ಧಾಳಿಯನ್ನು ಇದಿರಿಸಲು ರಕ್ಷಾಕವಚಗಳನ್ನು ಮಾತ್ರ ಧರಿಸಬೇಕು– ಆರ್ಥರನ ರೌಂಡ್ ಟೇಬಲ್ ಕಾಲದ ನೈಟ್‌ಗಳಂತೆ. ಪ್ರೊಫೆಸರರು ಎರಡು ಜರಸಿಗಳ ಮೇಲೆ ಹೊದ್ದಿದ್ದ ಶಾಲನ್ನು ಮತ್ತಷ್ಟು ಚೆನ್ನಾಗಿ ಕವಿಚಿಕೊಂಡರು; ತಲೆಯ ಕುಲಾವಿಯನ್ನು ಹುಬ್ಬಿನ ವರೆಗೆ ಕೆಳಗೆ ಎಳೆದುಕೊಂಡರು; ಉಣ್ಣೆಯ ಕಾಲುಚೀಲಗಳನ್ನು ಇನ್ನೂ ಸ್ವಲ್ಪ ಮೇಲೆಳೆದು ಬಿಗಿಮಾಡಿಕೊಂಡರು. ಹಲ್ಲು ಕಚ್ಚಿಕೊಂಡು, ತೆರೆದ ಪುಸ್ತಕಕ್ಕೆ ತಲೆತಗ್ಗಿಸಿ, ತಾನಾಗಿ ಬಿಟ್ಟುಹೋಗಿದ್ದ ಸಾಲನ್ನು ತಡಕಾಡಲು ಮೊದಲು ಮಾಡಿದರು. ವ್ಯಾಸಂಗ ಮುಂದುವರೆಯಿತು— ಮತ್ತೆ ಐದು ನಿಮಿಷ.

ಇನ್ನೊಂದು ಬಾರಿ ಜೋಕಾಲಿಯಿಂದ ಭಂಗಪಟ್ಟು ಕಣ್ಣು ಬಟ್ಟಾಗ, ಅವರ ದೃಷ್ಟಿ ಬಲಪಕ್ಕದ ಕಡೆಗಿತ್ತು. ಆಹಾ, ಎಂಥಾ ಮನಮೋಹಕ ದೃಶ್ಯ! ಅಲ್ಲೇ ಕೈಯುದ್ದದಲ್ಲೇ ವಿಶಾಲವಾದ ಮುರದ ಮಂಚದ ಮೇಲೆ ದಪ್ಪ ಸುಪ್ಪತ್ತಿಗೆ— ನೂವನ ಉಡುಗೊರೆ. ಅದರ ಮೇಲೆ ರಜಾಯಿ-ರಗ್ಗುಗಳ ಅಂಟುಜೋಡಿಯ ಅರ್ಧಭಾಗ ತಾನೂ ಆಗಲೇ ಬೆಚ್ಚಗೆ ಮಲಗಿತ್ತು. ಇನ್ನರ್ಧ ಭಾಗ ಆಲಿಂಗಿಸಿದ್ದ ಅವರ ಅರ್ಧಾಂಗಿಯ ಆಕಾರ– ಅಳತೆಗಳನ್ನು, ಗುರುರಾಜರ ಎಕ್ಸರೇ ದೃಷ್ಟಿ ಆ ಹೊದಿಕೆಯ ಸುಕ್ಕುಗಳನ್ನೂ ಒಳಹೊಕ್ಕು ಗುರುತಿಸಿತು. ಮೂಗಿನಿಂದ ಮೇಲೆ, ಹುಬ್ಬಿನಿಂದ ಕೆಳಗೆ ಅಷ್ಟೇ ಮುಚ್ಚಿರದಿದ್ದ ಮಡದಿಯ ಮುಖದ ಭಾಗವನ್ನು ಕಂಡೇ ಅವರ ಮನಸ್ಸು ಮುಲುಮುಲುಗುಟ್ಟಿ, ಒದ್ದಾಡಿತು. ಪ್ರೊಫೆಸರರ ಮನಸ್ಸಿಗೆ ಆ ದೃಶ್ಯ ಆಗ ಬರಿಯ ಆ ಕೋಣೆ, ಮಂಚ, ಮಾಮೂಲು ಮಡದಿಯ ಮುಖ ಇವುಗಳದು ಮಾತ್ರವಾಗಿರಲಿಲ್ಲ. ಬಾಗ್ದಾದ್ ನಗರದ ಸುಲ್ತಾನನ ಅರಮನೆ, ಹಂಸತೂಲಿಕಾ ತಲ್ಪ, ರಾಜಕುಮಾರಿ, ರಾಜಕುಮಾರ— ಹೀಗೆಲ್ಲ, ಹುಂ, ಅರೇಬಿಯನ್ ನೈಟ್ಸ್ ಪುಸ್ತಕದ ಪುಟ-ಪುಟಗಳಲ್ಲೆಲ್ಲ ಹೊಗಿಸಿ ಹಾಯಿಸಿತ್ತು ಭ್ರಾಂತಿಯನ್ನು. ಮತ್ತಾಗಿದ್ದ ಚೈತನ್ಯಕ್ಕೆ ಉನ್ಮತ್ತತೆಯನ್ನು ತುಂಬಿ ಎಚ್ಚರಿಸಿತ್ತು.

ಕರ್ತವ್ಯದ ಕರೆಯನ್ನು ಕೇಳುತ್ತ, ಆಸೆಯ ಪಾಶದ ವಶವಾಗುತ್ತ ಗುರುರಾಜರು ಗಡಿಯಾರದ ಕಡೆಗೆ ನೋಡಿದರು. ಅದು ಇನ್ನೂ ಒಂಬತ್ತೂವರೆಯೆಂದು ಗೊಣಗುತ್ತಿತ್ತು. ಆದರೇನು! ಅವರು ಕಿವಿ ಕೆವುಡು ಮಾಡಿಕೊಂಡು, ರಣರಂಗದಿಂದ ಮುಖ ತಿರುಗಿಸಿ, ಮಂಚದ ಸೊಳ್ಳೆಪರದೆಯನ್ನು ಸರಿಸಿ ಒಳಹೊಕ್ಕುಬಿಟ್ಟರು. ಅಯ್ಯೋ, ವ್ಯಾಸಂಗವೇ!

ಬೆಳಗ್ಗೆ ಎದ್ದಾಗ— ಪ್ರೊಫೆಸರರ ಹೆಂಡತಿ— ದೀಪ ಇನ್ನೂ ಉರಿಯುತ್ತಲೇ ಇತ್ತು.

ಇದೇನು, ಒಂದು ರಾತ್ರಿಯ ಕತೆ—ನಾಟಕವೋ?—ಆಗಿರಲಿಲ್ಲ. ಜುಲೈ ತಿಂಗಳಲ್ಲಿ ಗುರುರಾಜರು ಹೊಸ ಹೆಂಡತಿ ಸರೋಜಳನ್ನು

ಕರೆದುಕೊಂಡು ಬಂದಾಗಿನಿಂದಲೂ ಹೀಗೆಯೇ ಸಾಮಾನ್ಯವಾಗಿ.

ಗುರುರಾಜರ ಸಂಸಾರ ಗುಬ್ಬಚ್ಚಿಯ ಸಂಸಾರದಂತಿತ್ತು. ಪತಿ-ಪತಿಯರು ಅಗಲಿರುತ್ತಿದ್ದ ಸಮಯವೇ ಅಪೂರ್ವವಾಗಿತ್ತು. ಸರೋಜಳ ಹಿಂದೆ ಮುಂದೆ ಸುತ್ತಿಕೊಂಡು ಅಡಿಗೆಯ ಮನೆ ಪುಲಗುವ ಮನೆಗಳ ಮಧ್ಯೆ, ಸಹಾಯಪ್ರಣಯಗಳಲ್ಲಿ ಸದಾ ನಿರತರಾಗುತ್ತಿದ್ದುದೇ ಪ್ರೊಫೆಸರರ ನಿತ್ಯಕಟ್ಟಳೆಯಾಗಿತ್ತು. ಅದು ಯಾವ ಮಾಯದಲ್ಲೋ ಕಾಲೇಜಿಗೆ ಒಂದೆರಡು ಗಂಟೆ ಹೋಗಿ ಅನರ್ಥಶಾಸ್ತ್ರವನ್ನು ಬೋಧಿಸಿ ಬಂದುಬಿಡುತ್ತಿದ್ದರು. 'ಹೇಗೂ ಬಂದು ಬಿಡುತ್ತಾರಲ್ಲ' ಎಂದು ಸರೋಜಾ, ಒಂದೊಂದು ದಿನ ಅವರನ್ನು ಬಿಳ್ಕೊಳ್ಳುವಾಗ, ಬೀದಿಯ ಬಾಗಿಲಿಗೆ ಚಿಲಕವನ್ನು ಹಾಕಿಕೊಳ್ಳುತ್ತಲೇ ಇರಲಿಲ್ಲ! ಬಡಪಾಯಿ ಹುಡುಗನ ಗತಿಯೇಸಾಗಿದ್ದಿತೋ, ಪಾಪ! ಪ್ರೊಫೆಸರರು ಉದ್ಯೋಗವನ್ನು ಇನ್ನೂ ಹೇಗೆ ಉಳಿಸಿಕೊಂಡಿದ್ದರೋ (ದೇವರೇ ಬಲ್ಲ)— ಇದೊಂದು ದೊಡ್ಡ ರಹಸ್ಯದ ಗಂಟಾಗಿತ್ತು— ಆವರ ಹೆಂಡತಿಗೆ. ಇದು ಕೆಲಸದ ದಿನದ ವಿಷಯವಾದರೆ, 'ಸುಭಿಕ್ಷದಲ್ಲಿ ಅಧಿಕಮಾಸ' ಎನ್ನುವಂತೆ, ವಿಶ್ವವಿದ್ಯಾಲಯದಲ್ಲಿ ದಿನಬಟ್ಟು ದಿನ ರಜೆ. ಇಂದು ಅಂಥಾ ಅಮಾವಾಸ್ಯೆ, ನಾಳೆ ಇಂಥಾ ಹುಣ್ಣಿಮೆ, ನಾಡಿದ್ದು 'ಎ' ಏಕಾದಶಿ, ಇಲ್ಲ 'ಬಿ' ದ್ವಾದಶಿ (ಇನೆಯಲ್ಲ!) ಒಂದು ದಿನ ಯಾರದೋ ಜನ್ಮದಿನ, ಇನ್ನೊಂದು ದಿನ ಯಾರದೋ ಪುಣ್ಯದಿನ- ಇವಕ್ಕೇನು, ಇರುವೆ ಸಾಲಿನಂತೆ ಸಾಲುಸಾಲಾಗಿ ಬರುತ್ತಲೇ ಇದ್ದುವು. ಇವೂ ಅಲ್ಲದೆ ಹರತಾಳ, ಮೀಟಿಂಗು, ಮತ್ತೇನೋ ಒಂದಲ್ಲ ಒಂದು. ಯಾವ ಕಾಲು ಜಾರಿದರೂ ಪೀಠಕ್ಕೇ ಪೆಟ್ಟು ಅನ್ನುವಂತೆ, ಏನೊಂದಾದರೂ ಹೇಗಾದರೂ ಪಾಠವೇ ಮೊದಲು ಚಟ್ಟು. ಅಂದ ಮೇಲೆ ಸರಾಸರಿ ವಾರದಲ್ಲಿ ಇನ್ನೂ ಎರಡು ದಿನ (ಭಾನುವಾರ ಶನಿವಾರಗಳನ್ನು ಬಿಟ್ಟು) ಪ್ರೊಫೆಸರರು ಹೊಸಿಲನ್ನು ಹಾಯ್ದು ಹಿಂದಿಡುವ ಅಗತ್ಯವೂ ಇರುತ್ತಿರಲಿಲ್ಲ. ಪಾಠವೆಲ್ಲ ಮನೆಯಲ್ಲೇ ನಡೆಯುತ್ತಿತ್ತು; ಸರೋಜಾಳ ಪಾಲಾಗುತ್ತಿತ್ತು.

ದಿನ ಹೀಗೆ ಕಳೆದು ಸಂಜೆಯಾದರೆ, ಸಿನಿಮಾ ಪ್ರೋಗ್ರಾಂಗೇನು ಬರವಿರುತ್ತಿರಲಿಲ್ಲ. 'ಆಜ್' ಪತ್ರಿಕೆಯನ್ನು ತಿರುವಿ ಹಾಕುತ್ತಿದ್ದಾಗ, ಅವರು ಪೆಚ್ಚಾಗಿ ಗಮನಿಸುತ್ತಿದ್ದುದು— ಅವರಿಬ್ಬರೂ ಅಂದರೂ ಅನ್ನಬಹುದು—ಯಾವ ಯಾವ ಚಿತ್ರಮಂದಿರಗಳಲ್ಲಿ ಯಾವ ಯಾವುದು ನಡೆಯುತ್ತಿದೆ, ಮುಂದೆ ಬರಲಿರುವುವು ಯಾವುವು? ಎಂಬುದನ್ನೆ. ಈ ಗಮನಕ್ಕೆ ಸರಿಯಾಗಿ, ನಮ್ಮ ಸಿನಿಮಾಪ್ರಪಂಚದಲ್ಲಂತೂ ಪ್ರಚಾರಕರ ಪ್ರಕಾರ ಸುಪ್ರಸಿದ್ಧ ನಟನಟಿಯರು, ಹುಣಿಸೆಬಿತ್ತಿದಂತೆ ಹೇರಳವಾಗಿ ಬಿದ್ದಿದ್ದಾರೆ. ಮೀನಾಕುಮಾರಿಯೋ, ಕಾಮಿನೀಕೌಶಲಳೋ ನಾಗಿರ್‌ಸಳೋ; ಸುಚಿತ್ರಾಸೇನಳೋ, ಸುರಯ್ಯಾಮೋಹಿನಿಯೋ, ಮಧುಬಾಲಾಳೋ, ವೈಜಯಂತಿಮಾಲಾಳೋ, ದಿಲೀಪ ಕುಮಾರನೋ, ಅಶೋಕ ಕುಮಾರನೋ, ಬಲರಾಜ ಸಹನಿಯೋ, ಕಪೂರನೋ, ಕಿಶೋರನೋ- ಇದ್ದೇ ಇದೆಯಲ್ಲ, ಮುಗಿಯದ ದೊಡ್ಡ ಪರಂಪರೆ! ಈ ಗಣನೆಯಿಲ್ಲದೆ ತಾರಾಮಂಡಲವೇ ಸಾಲದೆನ್ನುವಂತೆ ಪ್ಲೇಬ್ಯಾಕ್‌ಗಳು, ಸಂಗೀತದ, 'ಆರ್ಕ್'ನ ಮತ್ತು ಇತರ ನೂರೆಂಟು ಬಗೆಯ ಡೈರೆಕ್ಟರುಗಳ ಗೋತ್ರದವರು, ಕತೆಗಾರರು ಹೀಗೆಲ್ಲ ಬೇರೆ, ಆಕರ್ಷಿಸುವುದಕ್ಕೆ. ಪಾಶ್ಚಾತ್ಯ ಚಿತ್ರಗಳ ವಿಷಯವನ್ನು ಪ್ರಸ್ತಾಪಿಸುವುದೇ ಬೇಡ. ಇದನ್ನೆಲ್ಲ ಹೆಚ್ಚು ಬೆಳಿಸಬೇಕೇಕೆ? ಏನೋ ಮೈಸೂರಿಗೆ ರೇಷ್ಮೆಯನ್ನು, ಕಾಶಿಗೆ ಗಂಗೆಯನ್ನು ತೆಗೆದುಕೊಂಡು ಹೋದಂತೆ. ಅಂತೂ 'ಕ್ಲೇರ್'ನ್ನು ಪಡೆದ ಹಿಂದೀಯರು, 'ಆಸ್ಕಾರ್' ಪಡೆದ ಪಾಶ್ಚಾತ್ಯರು, ಪ್ರಕಟನೆಗಳಲ್ಲಿ ಕಾಯ್ದುಕೊಂಡೇ ಇರುತ್ತಿದ್ದರು— ಗುರುರಾಜ ದಂಪತಿಗಳ ಕಾಸನ್ನು ಕಸಿದುಕೊಳ್ಳುವುದಕ್ಕೆ, ಕಾಲವನ್ನು ಕಳೆಯುವುದಕ್ಕೆ. ಸಿನಿಮಾ ಇಲ್ಲದ ಸಂಜೆಗಳಲ್ಲಿ ಜೋಡಿಸಂಚಾರ— ಗೋಡೋಲಿಯಾ ಚೌಕ್‌ಗಳಲ್ಲಿ, ಇಲ್ಲವೇ ವಿಹಾರ— ವಿಶ್ವವಿದ್ಯಾಲಯದ ಆವರಣದಲ್ಲಿ. ಹಿಂದಾದರೆ,— ಅಂದರೆ ಗುರುರಾಜರ ಬ್ರಹ್ಮಚರ್ಯಾಶ್ರಮದಲ್ಲಿ— ಋತುವಿಗನುಸಾರವಾಗಿ ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಪಟಲ್ ಕಾಕ್, ಟೆನಿಸ್ ಇವುಗಳಲ್ಲಿ ಯಾವುದಾದರೂ ಎರಡನ್ನು ಆಡಿಸೋತು, ಬ್ರಿಡ್ಜ್‌ಗೆ ಕುಳಿತು, ಊರಿನ, ದೇಶದ, ಪ್ರಪಂಚದ ರಾಜಕೀಯವನ್ನೆಲ್ಲ ಹರಟೆ ಕೊಚ್ಚಿ, ಮನೆಗೆ ಹಿಂದಿರುಗುವ ಹೊತ್ತಿಗೆ ಹೋಟಲಿನ ಊಟ ತಣ್ಣಗಾಗಿರುತ್ತಿತ್ತು. ಈಗೆಂದರೆ ಆಟ ಚಕ್ಕಂದಗಳೆಲ್ಲ ಹೆಂಡತಿಯೊಡನೆಯೇ ಸಾಗುತ್ತಿದ್ದುವು. ಅನಂತರ ಬಿಸಿಯೂಟ, ಅಗಿದಗಿದು ನಿದಾನವಾಗಿ. ಒಂದೊಂದು ದಿನ, ಅರ್ಥಶಾಸ್ತ್ರ ಆತನನ್ನು ಬಾಧಿಸಿದಾಗ, ಓದಿನ ಶಾಸ್ತ್ರ ಸಾಗುತ್ತಿತ್ತು— ಸರೋಜ ಬಿಸಿ ಹಾಲನ್ನು ತರುವವರೆಗೆ. ಮುಂದೆ, ಯಾವಾಗಲೂ ಸುತ್ತಿರಪ ಬಿಚ್ಚನೆಯ ಹಾಸಿಗೆ ಆಹ್ವಾನಿಸುತ್ತಿತ್ತು— ಶಯನೋತ್ಸವಕ್ಕೆ. ತಟ್ಟನೆ ಈ ಬಲೆಗೆ ಬೀಳದೆ, ಹೊತ್ತಿಗೆ ಸುಪ್ಪತ್ತಿಗೆಗಳೊಡನೆ ಎರಡು ಮುಖದ ಹೋರಾಟವನ್ನು ನಡೆಸಲು ಮನಸ್ಸು ಮಾಡಿದ ಆ ಈ ದಿನಗಳಲ್ಲಿ, ಈ ಭಂಡಾಟ, ಕಟ್ಟಕಡೆಯೆಂದರೆ, ಒಂಬತ್ತೂವರೆ ಗಂಟೆಯ ತೂಕಡಿಕೆಯವರೆಗೂ ನಡೆಯುತ್ತಿತ್ತು. ಆ ಮೇಲೆ ಜೋಲಿ ಸರೋಜಳ ಕಡೆಗೇ. ಒಂದೊಂದು ದಿನ ರಾತ್ರಿಯಲ್ಲಿ ಯಾವಾಗಲೋ ಎಚ್ಚರವಾದಾಗ, ಸರೋಜಾ ಎದ್ದು ಉರಿಯುತ್ತಿದ್ದ ದೀಪವನ್ನು ಆರಿಸುತ್ತಿದ್ದುದುಂಟು. ಬಹಳ ದಿನಗಳಲ್ಲಿ ಬೆಳಗಿನವರೆಗೂ ಉರಿಯುತ್ತಲೇ ಇರುತ್ತಿತ್ತು.

ಒಂದು ರಾತ್ರಿ ಸರೋಜಾ ನಿದ್ದೆಗಣ್ಣಿನಲ್ಲಿ ಎದ್ದು ದೀಪ ಆರಿಸಿದಾಗ, ಅದೇನೋ ಅವಳ ಕಾಲಿನ ಮೇಲೆ ಹರಿದು ಹೋದಂತಾಯಿತು. ಚಿಟ್ಟನೆ ಚೀರಿದಳು; ಹೇಗೋ ಮಂಚಕ್ಕೆ ಹಾರಿದಳು. ಗುರುರಾಜರು ದಿಗ್ಗನೆದ್ದು ಕುಳಿತರು. ಅವರ ಎದೆ ಡವಡವನೆ ಹೊಡೆದುಕೊಳುತ್ತಿತ್ತು. ಸರೋಜಾ ಭಯದಿಂದ ತಬ್ಬಿಕೊಂಡಾಗ, ಅವರ ಎದೆಗಳು ಅವರಿಗೆ ಮುಂಚೆಯೇ ಒಂದರೊಡನೊಂದು ಮಾತಾಡಿಕೊಂಡುವು. ವಿಷಯವೇನೆಂದು ತಿಳಿದುಕೊಳುವು

ಇಷ್ಟಕ್ಕೇ ಅಷ್ಟು ಕಾಲಬೇಕಾಯಿತು. ತಿಳಿದ ಮೇಲೆ ಮಾಡುವುದೇನನ್ನು? ಗಂಡುಸು, ನಿಜ. ಆದರೆ? ಸುಂಚದಿಂದ ಇಳಿಯುವುದಕ್ಕೂ ಭಯ, ಹಾಗೇ ಮಲಗಿಕೊಳ್ಳುವುದಕ್ಕೂ ಭಯ ಏನೋ ಎಂತೊ? ಕತ್ತಲೆಯಲ್ಲಿ ಕಾಲಿಡಬೇಕು, ಹೇಗ ದೀಪ ಹಚ್ಚಿಸಬೇಕು, ಎಂದು ವಿಷಯವನ್ನು ಮನದಲ್ಲಿ ಮಥಿಸುತ್ತಿರುವಾಗ, ಮೂಲೆಯಿಂದ, 'ಕಿಚ್ ಕಿಚ್' ಎನ್ನುವ ಸ್ವರ ಕೇಳಿಸಿತು. ಮೂಗಿಲ! ಅಷ್ಟೇಯೇ? ಗುರುರಾಜರು ಇದನ್ನು ಅಂಗಳದಲ್ಲಿ ಆಗಾಗ ಕಂಡಿದ್ದರು. ಆದರೂ ಇದು ಕಾಲಿನ ಮೇಲೆ ಹರಿಯುವುದಾದರೆ! ಅವರ ನೈಜುಂ ಎಂದಿತು, ಎಷ್ಟೋ ಹೊತ್ತು ಕಳೆದು, ಸರೋಜಾ 'ಏನುಗತಿ!', 'ಗಟ್ಟಿಯಾಗಿ ಕೂಗಿ ಕೊಳ್ಳೋಣವೆ– ಪಕ್ಕದ ಮನೆಯೋರು ಎದ್ದು ಬರೋಹಾಗೆ?' ಎಂದು ಮುಂತಾಗಿ ನೂರಾರು ಪ್ರಶ್ನೆಗಳಲ್ಲಿ ಹಲವಾರು ಉಪಾಯಗಳನ್ನು ಸೂಚಿಸಿದ ಮೇಲೆ, ಗುರುರಾಜರು ಅವಳಿಗೆ ಧೈರ್ಯ ಹೇಳಿ, ಅವಳಿಗೆ ರಗ್ಗು-ರಜಾಯಿಗಳ ಕೋಟೆ ಕಟ್ಟಿ. ತಾವು ಮಂಚದ ಮೇಲೆ ಎದ್ದು ನಿಂತರು. ಹಾಗೆಯೇ ಕಾಲನ್ನು ಸುತ್ತಲೂ ನೀಡಿ ಮೇಜಿನ ಅರ್ಥಶಾಸ್ತ್ರದ ಪುಸ್ತಕವೊಂದರ ಮೇಲೆ ಪಾದವಿಟ್ಟು ಸರಿಸಿ, ಮೆಲ್ಲಗೆ ಅಲ್ಲಿಗೆ ಹತ್ತಿದರು, ಸುತ್ತಲೂ ವಾಲಿಕೊಂಡು 'ಕ್ರೇನ್' ಯಂತ್ರದಂತೆ. ಗೋಡೆಯನ್ನೆಲ್ಲ ತಡಕಾಡಿ 'ಸ್ವಿಚ್' ಒತ್ತಿ ದೀಪ ಹಚ್ಚಿದರು. ಇಲಿ ಅತ್ತಿತ್ತ ಸಡಗರದಿಂದಲೋ, ಗುರುರಾಜರ ಬಗ್ಗೆ ಭಯದಿಂದಲೋ ಸರಸರನೆ ಓಡಾಡುತ್ತಿತ್ತು. ಈಗೇನು ಮಾಡಬೇಕು? ಗುರುರಾಜರು ಮೇಜಿನ ಮೇಲೇ ಕುಳಿತು ಕಾಯ್ದರು. ಬೇಗ ಬಗೆ ಹರಿಯಲಿಲ್ಲ. ಗುರುರಾಜರಿಗೆ ಹುಡುಗರನ್ನು ಬೇಟೆಯಾಡುವುದು ಅಷ್ಟಿಷ್ಟು ತಿಳಿದಿದ್ದಿತೇ ಹೊರತು, ಇಲಿಗಳನ್ನಲ್ಲ. ಕಡೆಗೆ ಸರೋಜಳ ಸೂಚನೆಯಂತೆ ಇಲಿ ಹೊರಬಾಗಿಲಿಗೆ ಆದಷ್ಟು ದೂರವಿದ್ದಾಗಧುಮುಕಿ, ಬಾಗಿಲನ್ನು ತೆಗೆದು ಕುರ್ಚಿಗೆ ಹಾರಿಕೊಂಡರು. ಅಷ್ಟಿಷ್ಟು ಹೊತ್ತಾದ ಮೇಲೆ ಇಲಿ 'ಕಿಚ್ ಕಿಚ್' ಎಂದು ನಗುತ್ತಲೋ, ಹೆದರಿಸುತ್ತಲೋ ಹೊರಗಡೆಗೆ ಹೋಯಿತು.

ಗುರುರಾಜರು ಎಚ್ಚರಿಕೆಯಿಂದ ಕೆಳಗಿಳಿದು, ಮುಂಗಾಲಿನ ಮೇಲೆ ನಡೆಯುತ್ತ ಬಾಗಿಲಿನ ಬಳಿಗೆ ಬಂದು, ಧಡಾರನೆ ಹಾಕಿಕೊಂಡು ಬೋಲ್ಟನ್ನು ಸರಿಸಿದರು. ಈಗ ಧೈರ್ಯದಿಂದ ಬಾಗಿಲಿನ ಮೇಲುಗಾಜಿನಿಂದ ಹೊರಗಡೆ ನೋಡಿದರು, ಇಲಿಗಾಗಿ. ಹಾಗೆಯೇ ಇದಿರುಮನೆಯ ಕಡೆಗೆ ನೋಡಿದರು. ಅಲ್ಲಿಯ ಕಿಟಕಿಯಿಂದಲೂ ದೀಪ ಕಾಣುತ್ತಿತ್ತು.

" ಏನು, ಅಲ್ಲೇ ಇದೆಯೆ?" ಸರೋಜಾ ಕುಳಿತಲ್ಲಿಂದಲೇ ಕೇಳಿದಳು

" ಇಲ್ಲ, ಸರಿ, ಎಲ್ಲೋ ಹೋಯ್ತು, ಆಗಲೇ."

" ಮತ್ತೆ, ಏನು ನೋಡ್ತಾ ಇದ್ರಿ?"

" ಎದುರುಮನೇಲಿ ದೀಪ ಉರೀತಾ ಇದೆಯಲ್ಲ, ಇಷ್ಟು ಹೊತ್ತಿನಲ್ಲಿ– ಅಂತ. ಎಷ್ಟು ಗಂಟೆ?".

" ಹನ್ನೆರಡೂವರೆ. "

" ಆ! ".

"ಹೂಂ; ಆ ದೀಪಾನ ನಾನೂ ನೋಡಿದೀನಿ. ಯಾವಾಗಾದರೂ ಎಳ್ತಾ ಇರ್ತೀನಲ್ಲ, ಯಾವ ಯಾವ ಹೊತ್ತಿನಲ್ಲೋ! ಆಗೆಲ್ಲ ಎಷ್ಟೋ ದಿನ ಕಾಣಿಸ್ತಾ ಇರುತ್ತೆ. ಅಲ್ಲೂ ನಿಮ್ಮಂಥಾ ಹುಚ್ಚರು ಯಾರೋ ಇರಬೇಕು, ಅಲ್ಲವೇನ್ರಿ? " ಸರೋಜಾ ನಕ್ಕಳು.

" ನನ್ನಂಥಾ ಹುಚ್ಚರಾಗಬೇಕಾದರೆ ನಿನ್ನಂಥೋರೂ, ಇರಬೇಕಲ್ಲ. ಅಲ್ಲಿಲ್ಲ ಪಾಪ!" ಗುರುರಾಜರು ದೀಪವನ್ನು ಆರಿಸಿ ಮುಂಚವನ್ನು ಸೇರುತ್ತ ನಕ್ಕು ಹೇಳಿದರು.

" ಅವರು ಯಾರ್ರೀ ಮತ್ತೆ? ಇಷ್ಟು ಹೊತ್ತಿನಲ್ಲೂ....."

"ಆ ಮನೆಯೋರು ಪಿ. ಡಬ್ಲ್ಯು. ಡಿ ಓವರ್‌ಸೀಯರ್. ಮೊನ್ನೆ ತಾನೆ ರಿಟೈರ್ ಆಯ್ತು...."

" ಅಂಥಾ ಮುದುಕರುಗಳು ಯಾಕೆ ದೀಪ ಹಚ್ಚಿಕೊಂಡು ಕೂತಿರ್ತಾರೆ ಎಂಥೆಂಥಾ ಹೊತ್ತಿನಲ್ಲೋ, ಮಿಟಮಿಟ ಅಂತ ಬಿಡಿ."

"ನಾನು ಹಾಗನ್ನಲಿಲ್ಲ. ಅವರ ಮಗ....."

"ಅವರೂ ಪ್ರೊಫೆಸರ್‌ರೇ? "

"ಇಲ್ಲಾ, ಇನ್ನೂ ವಿದ್ಯಾರ್ಥಿ."

"ಅಷ್ಟೊಂದು ಓದ್ತಾನೇ ಮತ್ತೆ?"

"ಹುಂ, ಇಂಜನೀಯರಿಂಗ್ ಕಾಲೇಜಿನಲ್ಲಿದ್ದಾನಂತೆ. ಈಗಾಗಲೇ ಏಳುವರ್ಷ ಆಯ್ತಂತೆ. ಕಡೇ ವರ್ಷದಲ್ಲಿ ಮೂರು ಸಾರಿ ಡುಂಕಿ ಹೊಡೆದಿದಾನಂತೆ."

"ನಿಮ್ಮ ವಿದ್ಯಾರ್ಥಿ ಅಲ್ಲ, ಹಾಗಾದರೆ. ನಿಮಗೆ ಗೊತ್ತೇ ಅವರ ಮನೆಯೋರು?"

"ಇಲ್ಲ. ಹೋದ ವರ್ಷ ಯಾವತ್ತೋ ಒಂದು ದಿನ, ಆ ಓವರ್‌ಸೀಯರ್ ಬಂದಿದ್ರು—ಮನೆ ರಿಪೇರಿಗೆ. ಆಗ ಮಾತಿಗೆ ಮಾತು ಬಂದು ಹೇಳಿಕೊಂಡ್ರು."

"ಈ ಸಾರಿ ಖಂಡಿತ ಪಾಸಾಗ್ತಾನೆ, ನೋಡ್ತಾ ಇರಿ. "

"ಅಯ್ಯೋ ಬಿಡು ಚಿನ್ನಾ, ಅವನು ಏನಾದರೆ ನಮಗೇನು ಈಗ!"

ಮುಂದೆ ಅವರ ಮಾತು 'ಗುಸ ಗುಸ ಪಿಸಪಿಸ' 'ಲೋಚ ಲೊಚ'ಕ್ಕೆ ಇಳಿಯಿತು.

* * *

ತಿಂಗಳುಗಳು ಕಳೆದುವು. ಅಂದು ಜೂನ್ ಹದಿನೈದೋ ಹದಿನಾರೋ. ಬನಾರಸ್ ಬೇಸಗೆಯ ಪರಮಾವಧಿ. ಇಲ್ಲಿ ಚಳಿಯು ಹೇಗೆ ಕ್ರೂರವೋ ಬೇಸಗೆಯೂ ಹಾಗೇ. ಮಧ್ಯಾಹ್ನ ನಾಲ್ಕು ಗಂಟೆಯಾದರೂ ಗುರುರಾಜರ ಮಲಗುವ ಕೋಣೆಯ ಬಾಗಿಲು ಕಿಟಕಿಗಳೆಲ್ಲ ಇನ್ನೂ ಮುಚ್ಚಿಕೊಂಡೇ ಇದ್ದುವು. ಪರದೆಗಳೂ ಇಳಿಬಿದ್ದಿದ್ದುವು, — ಗಾಳಿಯ ಬಿಸಿಯನ್ನೂ, ಬಿಸಿಲಿನ ಝಳವನ್ನೂ ತಡೆಯುವುದಕ್ಕೆ. ಐವತ್ತೆರಡು ಅಂಗುಲದ ಸೀಲಿಂಗ್ ಫ್ಯಾನ್ 'full' ಬಟ್ಟನ ಮೇಲಿದ್ದು ರಭಸದಿಂದ ಬೀಸುತ್ತಿತ್ತು. ಸರೋಜಾ ಮುಂಚದ ಮೇಲೆ

ಕುಳಿತಿದ್ದಳು. ಮಂಚದ ಪಕ್ಕದಲ್ಲಿ ಕಬ್ಬಿಣದ ಕೊಟ್ಟಲು. ಅವಳ ತೊಡೆಯ ಮೇಲೆ ರಾಜಕುಮಾರ ಮಲಗಿದ್ದ. ಹುಂ, ದಂಪತಿಗಳ ಪ್ರೇಮ ಫಲಿಸಿತ್ತು ಆಗಲೇ. ತಾಯಿ ಸೆರಗನ್ನು ಮುಚ್ಚಿಕೊಂಡು ಕುಮಾರನಿಗೆ ಮೊಲೆಯೂಡಿಸುತ್ತಿದ್ದಳು. ಅವಳ ಮುಂದೆ ಅಲ್ಲೇ ಗುರುರಾಜರು ಬಹಳ ಕಾರ್ಯತತ್ಪರರಾಗಿದ್ದರು. ಊರಿನ ಸುಪ್ರಸಿದ್ಧ 'ಜಲಜೋಗ್' ಮಿಠಾಯಿ ಅಂಗಡಿಯಿಂದ ವಿಶೇಷವಾಗಿ ಆರ್ಡರ್ ಕೊಟ್ಟು ಮಾಡಿಸಿದ್ದ ಪೇಡ ತುಂಬಿದ ದೊಡ್ಡ ಹರಿವಾಣದಿಂದ, ಹಿಡಿ ಹಿಡಿ ಪೇಡವನ್ನು ತೆಗೆದು ಪ್ಲಾಸ್ಟಿಕ್ ಚೀಲಗಳಿಗೆ ತುಂಬಿಡುತ್ತಿದ್ದರು. ಆಗಲೇ ಇಪ್ಪತ್ತು ಮೂವತ್ತು ಚೀಲಗಳು ಹೊಟ್ಟೆಯೂದಿಸಿಕೊಂಡು ನಿಂತಿದ್ದುವು; ಇನ್ನೂ ಮಡಿಕೆಯಾಗಿದ್ದುವು ಮೂವತ್ತು ನಲವತ್ತು. ಹುಟ್ಟಿನ ಹಬ್ಬದ ಆನಂದದ ಹಂಚಿಕೆಗೆ ಏರ್ಪಾಡಾಗುತ್ತಿತ್ತು. ಮಗ ಮಹಾರಾಯ ಮೊದಲನೆಯ ತೆರಿಗೆಯನ್ನು ಆಗಲೇ ತೆರಿಸುತ್ತಿದ್ದ. ಗಂಡ-ಹೆಂಡಿರ ಉತ್ಸಾಹ ಜ್ವರ ಮುಖದ ಮೇಲೇ ಚಿಮ್ಮುತ್ತಿತ್ತು. ಅಂದಿನ ಬೇಸಗೆ ಅವರನ್ನು ಬಾಧಿಸುತ್ತಿರಲಿಲ್ಲ.

'ಟಪ್! ಟಪ್! ಟಪ್!' ಬಾಗಿಲು ತಟ್ಟಿದ ಶಬ್ದ.

"ಓ, ಚಪ್ಪಾಸಿ ಇರಬೇಕು; ಬಾ ಅಂತ ಹೇಳಿದ್ದೆನಲ್ಲ, ಇದನ್ನೆಲ್ಲ ಹಂಚೋದಕ್ಕೆ" ಗುರುರಾಜರು ಹೇಳುತ್ತಲೇ ಹಜಾರಕ್ಕೆ ಹೋಗಿ ಹೊರಬಾಗಿಲನ್ನು ತೆಗೆದರು.

"ನಮಸ್ತೇ ಪ್ರೊಫೆಸರ್ ಸಾಹೇಬ್!"

ಬಂದಿದ್ದವನು ಸೇವಕನಲ್ಲ. ಇದಿರು ಮನೆಯ ಯುವಕ! ಅವನ ಮುಖದಲ್ಲಿ ಹರ್ಷ ಹರಡಿಕೊಂಡು ಹೊಳೆಯುತ್ತಿತ್ತು. ಅವನ ಕೈಯಲ್ಲಿ ದೊಡ್ಡ ಬೆಳ್ಳಿಯ ತಟ್ಟೆ. ಅದರೊಳಗೆ ದ್ರಾಕ್ಷಿ, ದಾಳಿಂಬಿ, ಸೇಬು, ಕಿತ್ತಳೆ, ಕಲ್ಲುಸಕ್ಕರೆ, ಬಾದಾಮಿ, ಹೂವು, ಇನ್ನೂ ಏನೇ ನನ್ನೋ ತೆಳ್ಳನೆಯ ವಸ್ತ್ರ ಮುಚ್ಚಿತ್ತು. ಗುರುರಾಜರಿಗೆ ಆದ ಆಶ್ಚರ್ಯದಲ್ಲಿ ಅತನನ್ನು ಸ್ವಾಗತಿಸುವುದು ಕೂಡ ಕ್ಷಣಕಾಲ ಮರೆತು ಹೋಯಿತು.

"ಬನ್ನಿ..... ಕೂತುಕೊಳ್ಳಿ" ಚೇತರಿಸಿಕೊಂಡು ಹೇಳಿದರು.

ಯುವಕ ಒಳಗೆ ಬಂದ.

"ಇದೆಲ್ಲ ಏನು? ಯಾಕೆ? ಏನು ಸಮಾಚಾರ?" ಗುರುರಾಜರು ದಡದಡನೆ ಕೇಳಿದರು.

"ಏನೂ ಇಲ್ಲ ಸರ್. ಏನೋ ಕೊಂಚ. ಇವತ್ತು ಬೆಳಗ್ಗೆ ನಮ್ಮ ಪರೀಕ್ಷೆ ಫಲಿತಾಂಶ ಪ್ರಕಟವಾಯ್ತು. ನಂಗೆ ಪಾಸಾಯ್ತು" ಯುವಕ ತಟ್ಟೆಯನ್ನು ಮೇಜಿನ ಮೇಲಿಡುತ್ತ ಹೇಳಿದ.

"ಓಹೋ, ಹಾಗೇ. ಬಹಳ ಸಂತೋಷ; ಬಹಳ. Hearty Congratulotions!" ಗುರುರಾಜರು ಆತನ ಕೈಯನ್ನು ಬಲವಾಗಿ ಕುಲುಕಿದರು. "ಕೂತುಕೊಳ್ಳಿ, ಕೂತುಕೊಳ್ಳಿ..... ಅದು ಸರಿ, ಇದೆಲ್ಲ ಇಷ್ಟೊಂದು ನಂಗೆ ಯಾಕೆ ಗುರುದಕ್ಷಿಣೆ? ನಾನೇನು ನಿನ್ನ ಗುರುವಲ್ಲ ಏನಲ್ಲ....."

"ತಾವು ಗುರುಗಳೇ ಸರ್; ದೊಡ್ಡ ಗುರುಗಳು! ಪಾಠ ಹೇಳಿ ಕೊಟ್ಟರೇ ಗುರುಗಳೇ?" ಯುವಕ ಕುಳಿತುಕೊಳ್ಳುತ್ತ ಹೇಳಿದ. "ತಮ್ಮಿಂದಲೇ ನನಗೆ ಪಾಸಾದದ್ದು."

"ಆರೆರೇ! ಅದು ಹೇಗಪ್ಪ! ನಾನೂ ಅಂದರೆ ಎಲ್ಲೋ ಅರ್ಥಶಾಸ್ತ್ರ.....ನೀನು ಅಂದರೆ ಎಂಜನೀಯರಿಂಗ್."

"ಹಾಗಲ್ಲ ಸರ್. ತಮ್ಮ ಪ್ರೇರಣೆಯೇ ಕಾರಣ!"

"ನಿಜವಾಗಿ! ಆಶ್ಚರ್ಯ! ಅದು ಹೇಗೆ? ಎಂಥ ಪ್ರೇರಣೆ?"

"ಇಷ್ಟು ವರ್ಷವೂ ನಾನು ಕಷ್ಟಪಡದೆಯೇ ಫೇಲಾಗ್ತಾ ಇದ್ದೆ ಸರ್. ಎಂಟು ಗಂಟೆಗೆಲ್ಲ ತೂಕಡಿಕೆ ಬಂದು, ಸೋತು ಮಲಗಿ ಕೊಂಡು ಬಿಡ್ತಾ ಇದ್ದೆ. ಟೀ ಕುಡಿದರಿಲ್ಲ, ಏನು ಮಾಡಿದರೂ ಪ್ರಯೋಜನವಾಗ್ತಾ ಇರಲಿಲ್ಲ. ಈ ವರ್ಷ, ಅದೇನೋ ತಮ್ಮ ಕೋಣೆಯ ದೀಪ ನಂಗೆ ಬಹಳ ಪ್ರೋತ್ಸಾಹ, ಪ್ರೇರಣೆ ಕೊಡ್ತು. ಎಷ್ಟೆಷ್ಟು ಹೊತ್ತಿನವರೆಗೂ ಉರೀತಾ ಇರ್ತಾ ಇತ್ತು! ಒಂದೊಂದು ದಿನ ಬೆಳಗ್ಗೆ ನಾಲ್ಕರೆಗೂ ಕೂಡ. ತಾವು ಒಂದೇ ಒಂದು ಸಬ್ಜೆಕ್ಟ್ ಹೇಳೋದಕ್ಕೇ ಇಷ್ಟೊಂದು ಕಠಿಣ ವ್ಯಾಸಂಗ ಮಾಡ್ತಾ ಇರೋವಾಗ, ನಾನು ಅಷ್ಟು ವಿಷಯಗಳನ್ನು ಇಟ್ಟುಕೊಂಡೂ ಹಾಗೆ ಮುಂಜೆ ಮಲಗೋದೇ—ಅಂತ ನಾಚಿಕೆ ಆಯ್ತು; ನಾನು ಅಷ್ಟಾದರೂ ಕಷ್ಟಪಡಬೇಕು ಅಂತ ಹಟತೊಟ್ಟು ಓದಿದೆ. ಸಫಲವಾಯ್ತು. ತಮ್ಮ ಉಪಕಾರ—ಮಾಡಿದರೆ ಬಹಳ ಸರ್. ಅದಕ್ಕೇ ತಮ್ಮನ್ನು ಗುರುಗಳು ಅಂದದ್ದು ಈ ಸಣ್ಣ ಕಾಣಿಕೆ ಒಪ್ಪಿಸಿಕೋಬೇಕು ಸರ್."

ಗುರುರಾಜರಿಗೆ ಮಧ್ಯೆ ಆಡಲು ಮಾತೇ ಹೊರಡಲಿಲ್ಲ. ಸುಮ್ಮನೆ ಕೇಳುತ್ತಿದ್ದರು. ಮಾತುಮಾತಿಗೂ ಅವರ ಮುಖ ಕೆಂಪೇರುತ್ತಿತ್ತು. ಉಕ್ಕಿ ಬರುತ್ತಿದ್ದ ಭಾವವನ್ನು ಕಷ್ಟದಿಂದ ತಡೆಹಿಡಿಯುತ್ತಿದ್ದರು ಆದರೆ ಮಲಗುವ ಕೋಣೆಯಿಂದ, ಅಮುಕಿದ ನಗುವಿನ ಸ್ವರ ಕೇಳಿದಾಗ ಅವರಿಗಿನ್ನು ತಡೆಯಲಾಗಲಿಲ್ಲ.

"ಧನ್ಯವಾದಗಳು!..... ಬಂದೆ..... ಆದೇನ್ರೀ?.... ಮಗು ಬಹಳ ಚೇಷ್ಟೆ ಮಾಡ್ತಾ ಇದ್ದಾನೇ?.... ಬಂದೇ, ಬಂದುಬಿಟ್ಟೆ, ಸ್ವಲ್ಪ ಕೂತುಕೊಂಡಿರಿ" ಎಂದು ಹೇಳುತ್ತ ಗುರುರಾಜರು ಮಲಗುವ ಮನೆಗೆ ಹೋದರು.

ಸರೋಜಾ ಬಾಯಿಗೆ ಸೆರಗನ್ನು ಮುಚ್ಚಿಕೊಂಡು ನಗುವನ್ನು ತಡೆಯುತ್ತಿದ್ದಳು; ಆದರೂ ಅದು ಕುಸಕುಸ ಹೊರಸೂಸುತ್ತಿತ್ತು.

"ಮುಚ್ಚಬಾಯ! ಅವನಿನ್ನೂ ಇಲ್ಲೇ ಇದಾನೆ." ಗುರುರಾಜರು ತುಟಿಯ ಮೇಲೆ ಬೆರಳಿಟ್ಟು, ತಾವೂ ಹೆಗಲಿನಿಂದ ಟವಲನ್ನು ತೆಗೆದು ಬಾಯಿಗೆ ಗಿಡಿಗಿಕೊಂಡರು. ಇಬ್ಬರ ಮುಖದಲ್ಲೂ ರಕ್ತ ಚಿಮ್ಮುತ್ತಿತ್ತು— ಗಟ್ಟಿಯಾಗಿ ನಗದಿದ್ದರೆ ಚರ್ಮವನ್ನು ಒಡೆದು ಕೊಂಡು ಹಾರುವುದೋ ಎನ್ನುವಂತೆ.

ಅಂತೂ ಎಷ್ಟು ಕಾಲ ಹೀಗಿರಲಾಗುತ್ತಿತ್ತು.— ಅತಿಥಿ ಕಾಯ್ತುಕೊಂಡಿರುವಾಗ? ಗುರುರಾಜರು ಫೇಡದ ಚೀಲವೊಂದನ್ನು ಹಿಡಿದುಕೊಂಡು, ನಗುಮುಖಕ್ಕೆ ಗಾಂಭೀರ್ಯದ ಮುಖವಾಡವನ್ನು

ಹಾಕಿಕೊಂಡು ಹೊರಗೆ ಬಂದರು.

" ಪರವಾಗಿಲ್ಲ. ನನ್ನಿಂದ ಇಷ್ಟಾದರೂ ಉಪಕಾರ— ನನ್ನ ಇಚ್ಛೆ ಇಲ್ಲದೆಯೇ ನನ್ನ ಯತ್ನವಿಲ್ಲದೆಯೇ—ಆಯಿತಲ್ಲ. ಬಹಳ ಸಂತೋಷ. ಮುಂದೂ ನಿಮಗೆ ಹೀಗೆ ಎಲ್ಲದರಲ್ಲೂ ಜಯಲಭಿಸಲಿ!" ಎಂದರು.

" ತಮ್ಮ ಆಶೀರ್ವಾದ ಸರ್. ಈ ಮೇಲ್ಪಂಕ್ತಿ ಮರೆಯೋದಿಲ್ಲ, ಎಂದೆಂದಿಗೂ. ಅದರಿಂದ ಖಂಡಿತ ಒಳ್ಳೇದಾಗೇ ಆಗುತ್ತೆ ಅಂತಭರವಸೆಯಿದೆ."

" ಇಷ್ಟೆಲ್ಲ ತಗೋಬೇಕೆ?"

" ಹೌದು ಸರ್. ಖಂಡಿತವಾಗಿ!"

" ಸ್ವಲ್ಪವೇ .....?"

" ಇಲ್ಲ. ಸರ್. ತಗೊಂಡು ಬಿಡಿ, ಎಷ್ಟಿದೆ. ಇಷ್ಟಕ್ಕೂ ಅಷ್ಟೊಂದು....."

ಮಾತು ಬೆಳೆಸಿ ಪ್ರಯೋಜನವಿಲ್ಲವೆಂದು ಗುರುರಾಜರು ಆ ತಟ್ಟೆಯದನ್ನೆಲ್ಲ ತೆಗೆದು ಮೇಜಿನ ಮೇಲಿಟ್ಟುಕೊಂಡು, ತಟ್ಟೆಯೊಳಗೆ ಪೇಡದ ಚೀಲವನ್ನಿಟ್ಟು

"ಇವತ್ತು ನಮ್ಮ ಮನೇಲೂ ಒಳ್ಳೆಯ ಸಂದರ್ಭ. ಇದನ್ನು ತಗೋಬೇಕು" ಎಂದರು

" ಏನು ಸರ್ ಅದು?" ಯುವಕ ಕೌತುಕದಿಂದ ಕೇಳಿದ. ಗುರುರಾಜರು ತಟ್ಟನೆ ಉತ್ತರ ಕೊಡಲಿಲ್ಲ. ಆದರೆ ಮಲಗುವ ಮನೆಯಿಂದ ಕುಮಾರನೇ ಕರೆಬಿಕೊಂಡು ಉತ್ತರ ಕೊಟ್ಟ. ಗುರುರಾಜರ ಮುಖದ ಮೇಲೆ ನಗೆ ತಾಂಡವವಾಡಿತು.

"ಓ ಹಾಗೇ! ಅಭಿನಂದನೆಗಳು ಸರ್. ತಾಯೋಳು, ಮಗು ಚೆನ್ನಾಗಿದಾರೇ ಸರ್?" ಯುವಕನಿಗೆ ಊಹೆಯೇ ನೂ ಬೇಕಾಗಿಲ್ಲ.

" ಹುಂ, ಹುಂ, ಥ್ಯಾಂಕ್ಸ್."

" ಬರ್ತೀನಿ ಸರ್. ತುಂಬ ತೊಂದರೆ ಕೊಟ್ಟೆ, ಬಿಸಿಲು ಹೊತ್ತಿನಲ್ಲಿ!" ಯುವಕ ತಟ್ಟೆಚೀಲಗಳನ್ನು ತೆಗೆದುಕೊಂಡು ಎದ್ದ.

" ಛೇ, ಏನಿಲ್ಲ. ಏನು ಕೊಂದರೆ! ಬಹಳ ಸಂತೋಷ."

ಗುರುರಾಜರು ಅವನನ್ನು ಕಳುಹಿಸಿ, ಅವನು ದೂರ ಹೋದಮೇಲೆ ಬಾಗಿಲನ್ನು ಮುಚ್ಚಿಕೊಂಡು ಮಲಗುವ ಮನೆಗೆ ಹಿಂದಿರುಗಿದರು. ಗಂಡ–ಹೆಂಡಿರು ಈಗ ಧಾರಾಳವಾಗಿ ನಕ್ಕರು.

ಎಸ್ಕೆಲಾ ಬಿಟರೀಸ್ ಲಿಮಿಟೆಡ್
ಮುಂಬಯಿ—ಕಲ್ಕತ್ತ—ದಿಲ್ಲಿ—ಕಾನ್‌ಪುರ್—ಮದ್ರಾಸ್—ನಾಗಪುರ್

" ಭಾರಿ ಗುರುಗಳು ಕಂಡ್ರಿ ನೀವು. ನೋಡಿ, ನಿಮ್ಮ ಪ್ರೇರಣೆ!" ಸರೋಜಾ ಕೀಟಲೆ ಮಾಡಿದಳು.

" ಅಂತೂ ಆಯ್ತೋ—ಹೇಗಾದರೂ ?"

" ಅಲ್ರೀ ಅವನು ಏನಾದರೂ ಆಣಕಿಸೋದಕ್ಕೇ ಹೀಗೇನಾದರೂ ....."

" ಛೆ! ಛೆ! ಅವನ ಮಾತಿನಲ್ಲಿ, ಧ್ವನಿಯಲ್ಲಿ ಏನಾದರೂ ವ್ಯಂಗ್ಯ ಎಳ್ಳಷ್ಟಾದರೂ ಇತ್ತೆ? ಉಹುಂ! ಮೊದಲಿನಿಂದ ಕಡೇವರೆಗೂ ಕೃತಜ್ಞತೆಯೇ. ಹಾಲಿನಂಥ ಹುಡುಗ. ಭೋಳೆರಾಯ!"

" ಈಗಲಾದರೂ ಏನಾದರೂ ಉಹಿಸಿಕೊಳ್ಳದೇ....."

" ಸರಿ, ಸರಿ ಆದು ಹೇಗೆ ಗೊತ್ತಾಗುತ್ತೆ....ಹೊಂದಿಸಿಕೊಳ್ಳೋದಕ್ಕೆ, ಚೆನ್ನಾಯ್ತು. ಅಷ್ಟು ಜುರುಕಾಗಿದ್ದರೆ ಹುಡುಗ ಇಷ್ಟು ಸಾರಿ ಡುಂಕಿ ಹೊಡೀತಾ ಇದ್ದನೆ?"

ಇಲ್ಲಿಗೆ ಕುಮಾರ ಸರೋಜಾಳನ್ನು ತರಾಟಗೆ ತೆಗೆದುಕೊಂಡ ಆಭ್ಯರ್ಟಿಸಿ. ಗುರುರಾಜರು ಬಾಕಿಯ ಚೀಲಗಳನ್ನು ತುಂಬಲು ಮೊದಲು ಮಾಡಿದರು.

—

ಶಿಕ್ಷಣದ ಇಳಿಕೆಯ ಮಟ್ಟವೂ, ಅದರ ನಿವಾರಣೋಪಾಯಗಳೂ

ಶ್ರೀ ಆರ್. ಪಿ. ಕುಲಕರ್ಣಿ, ಎಂ. ಎ., ಬಿ ಟಿ, ಜೆ ಎ. ಹೈಸ್ಕೂಲ್, ಅಥಣಿ.

ಇಂದು ನಮ್ಮ ರಾಷ್ಟ್ರದಲ್ಲಿ ಶಿಕ್ಷಣವು ದಿನದಿನವೂ ಕೆಳಮಟ್ಟಕ್ಕೆ ಹೋಗುತ್ತಲಿದೆಯೆಂಬ ಕೂಗು, ಎಲ್ಲೆಲ್ಲಿಯೂ ಕಿವಿಗೆ ಬೀಳುತ್ತಲಿದೆ. ಇದಕ್ಕೆ ಕಾರಣಗಳೇನು? ಕಾರಣರು ಯಾರು?-- ಎಂಬುದರ ವಿಚಾರವನ್ನು ನಾವು ಸ್ವಾಮಾಣಿಕವಾಗಿ ನೂಡಬೇಕಲ್ಲವೆ?

ಇಂದಿನ ವಿದ್ಯಾರ್ಥಿಗಳ ಶಿಕ್ಷಣದ ಮಟ್ಟವನ್ನು ಕುರಿತು ಸ್ಪಷ್ಟವಾಗಿ ಹೇಳುವುದು ಕಡು ಕಷ್ಟ. ಅದೊಂದು ಒಡೆಯುವ ಒಗಟು. ಶಿಕ್ಷಣದ ಮಟ್ಟವು ನಿಜವಾಗಿಯೇ ತಗ್ಗಿದೆಯೇ? ಇಲ್ಲವೆ ಅದೊಂದು ಆಭಾಸವೆ?— ಎಂಬ ಪ್ರಶ್ನೆ ವಿಚಾರಾನಂತರ ಮನದೆದುರು ಬಂದು ನಿಲ್ಲದೆ ಇರಲಾರದು. ಇಂದು ನಡೆಯುತ್ತಿರುವ ಅನೇಕ ಪರೀಕ್ಷೆಗಳ ಫಲಿತಾಂಶಗಳನ್ನು ನೋಡಿದರೆ, ಶಿಕ್ಷಣದ ಮಟ್ಟವು ಯಾವ ವಿಧದಿಂದಲೂ ತಗ್ಗಿಲ್ಲವೆಂದು ಯಾರಾದರೂ ಧಾರಾಳವಾಗಿ ಹೇಳಬಹುದು. ತದ್ವಿರುದ್ಧವಾಗಿ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತ ನಡೆದುದು ಕಂಡುಬಂದಂತೆ, ಈ ಪರೀಕ್ಷೆಗಳ ಫಲಿತಾಂಶದ ಪ್ರಮಾಣದಲ್ಲಿಯೂ ಪ್ರಗತಿಯು ಕಂಡುಬರುವುದು. ೧೯೪೮ ಮತ್ತು ೧೯೪೯ ತರಗತಿಯಲ್ಲಿ ತೇರ್ಗಡೆಹೊಂದುವ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿರುವುದನ್ನು ನೋಡಿದರೆ, ಅದಾವ ಶಿಕ್ಷಣ ತಜ್ಞನು ಮಟ್ಟವು ಇಳಿಮುಖವಾಗಿದೆಯೆಂದು ಎದೆ ತಟ್ಟಿ ಹೇಳುವುದು ಸಾಧ್ಯ? ಆದರೆ ಈ ಫಲಿತಾಂಶಗಳ ಹಿಂದಿರುವ ಸುಸೋಭೂಮಿಕೆಯನ್ನೂ, ಪ್ರಮಾಣಪತ್ರಗಳನ್ನು ಪಡೆದ ತರುಣರ ಜೀವನದ ಮಟ್ಟವನ್ನೂ ಕೂಲಂಕಷವಾಗಿ ನಿರೀಕ್ಷಿಸಿದರೆ, ಸ್ವಾತಂತ್ರ್ಯಕಾಲದ ಶಿಕ್ಷಣ ಮಟ್ಟದ ಸ್ವರೂಪವು ಸ್ಪಷ್ಟವಾಗುವುದು.

The end determines the means. ಗಿಡದ ಗುಣವನ್ನು ಹಣ್ಣಿನಲ್ಲಿ ಕಾಣು, ಎನ್ನುವಹಾಗೆ ಶಿಕ್ಷಣದ ಮಟ್ಟವನ್ನು ಅಳೆಯಬೇಕಾದರೆ, ಶಿಕ್ಷಣೋತ್ತರದ ಬಾಲಕರ ಜೀವನದ ಸ್ಪಷ್ಟ ದರ್ಶನವನ್ನು ಪಡೆಯಬೇಕು. ಇಂದಿನ ಸುಶಿಕ್ಷಿತ ತರುಣರಲ್ಲಿ—ಅದೇಕೆ, ಹಿಂದಿನ ಸುಶಿಕ್ಷಿತರಲ್ಲಿ ಕೂಡ ಸಂಕುಚಿತ ಮನೋವೃತ್ತಿ, ವೈಷಮ್ಯ ಭಾವ ಮತ್ತು ಸ್ವಾರ್ಥಪ್ರವೃತ್ತಿ ಇವು ನಿಃಸಂಕೋಚವಾಗಿ ತಲೆಯೆತ್ತಿ ನಿಂತು ತಾಂಡವವಾಡುತ್ತಿರುವುದು ಎಲ್ಲೆಲ್ಲಿಯೂ ಕಂಡುಬರುವುದು. ನಿಷ್ಕ್ರಿಯತೆ, ನಿರಾಶೆ, ಮತ್ತು ಶಿಸ್ತುಗೇಡಿತನವು ಇಂದಿನ ವಿದ್ಯಾರ್ಥಿಗಳ ಸಾಮಾನ್ಯ ಗುಣಧರ್ಮನಾಗಿದೆಯೆಂದು ಕಂಡುಬರುವುದು. ಕಾರಣಗಳನೇಕವಿರಬಹುದು; ಆದರೆ ಪರಿಣಾಮ ಮಾತ್ರ ಒಂದೇ ಇದೆ. ದುಡ್ಡೇ ದೊಡ್ಡಪ್ಪ ಎಂದು ಬಗೆದು, ಏನಕೇನ ಪ್ರಕಾರೇಣ ದುಡ್ಡು ಗಳಿಸುವುದೊಂದೇ ಜೀವನದ ಗುರಿಯಾಗಿದೆ ಅವರಿಗೆ. ಚಾರ್ವಾಕ ಮನೋವೃತ್ತಿಯು ಬೆಳೆದು ಬಂದುದರಿಂದಲೂ ಸಾಮ್ಯವಾದದ ವಿಕೃತ ರೂಪದ ಪರಿಣಾಮವಾಗಿಯೂ, ಎತ್ತ ನೋಡಿದೆತ್ತ ಲಂಚಿಗುಳಿತನ, ಮತ್ತು ಶಿಸ್ತಿನ ಅಭಾವವು ಕಂಡುಬರುತ್ತವೆ. ಮಾತು, ಮನಸ್ಸು, ಮತ್ತು ಕೃತಿ ಇವುಗಳಲ್ಲಿ ಹೊಂದಿಕೆಯಿಲ್ಲದಾಗಿದೆ, ಬುದ್ಧಿ ಭಾವ ಮತ್ತು ಕ್ರಿಯಾಶಕ್ತಿಗಳ ಅಭಾವವು ರಾಜ್ಯದ ಆಡಳಿತದಲ್ಲಿ ಸಡಿಲನ್ನುಂಟುಮಾಡುತ್ತಿರುವುವು. ಶಿಕ್ಷಣದ ಮುಖ್ಯ ಗುರಿಯಾದ ಶೀಲಸಂವರ್ಧನೆ ಮತ್ತು ಕಾರ್ಯಕತ್ಪರತೆ ಇವು ಇಂದು ತರುಣರಲ್ಲಿ ಬರಬೇಕಾದ ಗುಣಗಳು. ಈ ದೃಷ್ಟಿಯಿಂದ ವಿಚಾರ ಮಾಡುವವರಿಗೆ ಇಂದಿನ ಶಿಕ್ಷಣದ ನೆಲೆ ಯಾವ ಮಟ್ಟಕ್ಕೆ ಹೋಗಿದೆಯೆಂಬುದು ಸ್ಪಷ್ಟವಾಗುವುದು. ಶಿಕ್ಷಣವನ್ನು ಕಡೆಗಣ್ಣಿಟ್ಟು ಅದನ್ನು ಇದೇ ಸ್ಥಿತಿಯಲ್ಲಿ ಮುಂದುವರಿಯಗೊಟ್ಟರೆ, ರಾಷ್ಟ್ರದ ಭವಿತವ್ಯವು ಭೀಕರವೂ ಭಯಾನಕವೂ ಆಗಿ ತೋರುವುದು. ಸಕಾಲಕ್ಕೆ ಸರಿಯಾದ ಉಪಾಯವನ್ನು ಕೈಕೊಳ್ಳದಿದ್ದರೆ, ಮಾತು ಮಿಂಚಿಹೋಗುವುದು; ಆ ಮೇಲೆ ಚಿಂತಿಸಿದರೂ ಪ್ರಯೋಜನವಿಲ್ಲ.

ಈ ರೀತಿಯ ಅಧಃಪತನದ ಕಾರಣಗಳನ್ನು ಕಂಡುಹಿಡಿಯುವುದು ಅವಶ್ಯವಿದ್ದರೂ, ನಿವಾರಣೋಪಾಯಗಳನ್ನು ಸೂಚಿಸುವಾಗ ಅವು ತಾವಾಗಿಯೆ ಬಂದು ಹೋಗುವುದರಿಂದ, ಅವುಗಳನ್ನು ಕುರಿತು ಸ್ವತಂತ್ರ ವಿಚಾರಮಾಡುವ ಆವಶ್ಯಕತೆಯಿಲ್ಲ. ರಾಷ್ಟ್ರದ ಐಕ್ಯವನ್ನೇ ನಷ್ಟಗೊಳಿಸುವ ವಿಚಿತ್ರವಾದ ಮನೋವೃತ್ತಿಯು ಶಿಕ್ಷಿತರಲ್ಲಿ ಮತ್ತು ಕೆಲವು ಶಿಕ್ಷಕರಲ್ಲಿ ಕೂಡ ಇದ್ದುದು ಕಂಡುಬರುವುದು. ಅದೇಕೆ ಶಿಕ್ಷಣದ ಆಡಳಿತವನ್ನು ಸಾಗಿಸುವ ಮೇಲಧಿಕಾರಿಗಳಲ್ಲಿಯೂ ಇಂತಹ ಸಂಕುಚಿತ ಮನೋವೃತ್ತಿಯು ಅಲ್ಲಲ್ಲಿ ವ್ಯಕ್ತವಾಗುತ್ತಿರುವುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಯಥಾ ರಾಜಾ ತಥಾ ಪ್ರಜಾ! ಪ್ರಜಾಪ್ರಭುತ್ವದ ಹೆಸರಿನಲ್ಲಿ ಶಿಕ್ಷಣದಂತಹ ಅತ್ಯಂತ ಮಹತ್ತ್ವದ ವಿಷಯವನ್ನು ರಾಜ್ಯಸರಕಾರಗಳ ಕಡೆಗೆ ಒಪ್ಪಿಸಿ, ರಾಜಕೀಯ ರಂಗದಲ್ಲಿ ಆಟವಾಡುವ ರಾಜಕೀಯ ಪಟುಗಳ ಕೈಗೊಂಬೆಯನ್ನಾಗಿ ಮಾಡಿದ್ದು ಅಷ್ಟೊಂದು ಸಮಂಜಸವಾಗಿ ತೋರುವುದಿಲ್ಲ. ರಾಷ್ಟ್ರದ ಜೀವಾಳವಾದ ಶಿಕ್ಷಣವಿಷಯವನ್ನು ಕೇಂದ್ರ ಸರಕಾರವು ತಾನೇ ವಹಿಸಿಕೊಂಡು, ರಾಷ್ಟ್ರೀಯ ಮನೋವೃತ್ತಿಯನ್ನು, ಮಾದರಿಯ ನಡೆವಳಿಕೆಯನ್ನು, ಉದ್ಯೋಗಶೀಲ ಪ್ರವೃತ್ತಿಯನ್ನು ಮಕ್ಕಳಲ್ಲಿ ಬೆಳೆಸಿ ನವಭಾರತದ ಭಾರವನ್ನು

ಹೊರಲು ಸಮರ್ಥರಾದ ನಾಗರಿಕರನ್ನು ನಿರ್ಮಾಣಮಾಡಲು ಯೋಗ್ಯವಾದ ಶಿಕ್ಷಣದ ಧೋರಣವನ್ನು ನಿರೂಪಿಸಿದರೆ, ಇಂದಿನ ಶಿಕ್ಷಣದಲ್ಲಿ ಕಂಡುಬರುವ ಅನೇಕ ಕುಂದುಕೊರತೆಗಳು ಇಲ್ಲದಂತಾಗುವುವು. ಇಂದಿನ ಈ ವಿಕೇಂದ್ರೀಕೃತ ಧೋರಣವು ರಾಷ್ಟ್ರೀಯ ಶಿಕ್ಷಣಕ್ಕೆ ಅತ್ಯವಶ್ಯವಾದ ಸಮನ್ವಯವನ್ನು ಇಲ್ಲದಾಗಿಸಿದೆ. ರಾಜ್ಯ-ರಾಜ್ಯಗಳಲ್ಲಿಯ ಶಿಕ್ಷಣ ಧೋರಣವು ಭಿನ್ನ ಭಿನ್ನವಾಗಿರುವುದರಿಂದ, ಆಯಾರಾಜ್ಯಗಳ ಸುಶಿಕ್ಷಿತ ತರುಣರಲ್ಲಿ ಪ್ರಾಂತೀಯ ಮನೋವೃತ್ತಿಯೇ ಹೆಚ್ಚಾಗಿ ಬೆಳೆದು ಒಂದುದನ್ನು ನಾವು ಕಾಣುತ್ತೇವೆ. ಮೇಲಾಗಿ ಆಯಾ ರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಡಳಿತ ಸಾಗುವುದರಿಂದಲೂ, ವಿಶಿಷ್ಟ ಗುಂಪಿನ ಕೈಯಲ್ಲಿ ಆಡಳಿತಸೂತ್ರಗಳು ಇರುವುದರಿಂದಲೂ, ರಾಜ್ಯಗಳಲ್ಲಿಯ ಶಿಕ್ಷಣ ಧೋರಣದಲ್ಲಿ ರಾಷ್ಟ್ರೀಯತೆಗಿಂತ, ರಾಜಕೀಯತೆ ಮತ್ತು ಇತರ 'ಯತೆ'ಗಳು ಇದ್ದುದು ಕಂಡುಬರುವುದು. ಸ್ವಾತಿಕೇಶ್ವರಾಜ್ಯ ಸಂಸ್ಥೆಗಳಿಗೆ ಒಪ್ಪಿಸಿದ ರಾಷ್ಟ್ರದ ಶಿಕ್ಷಣವು ಯಾವ ತತ್ತ್ವಗಳ ಮೇಲೆ ಆಧಾರಭೂತವಾಗಿದೆಯೆಂಬುದು ಒಂದು ಎಂದೂ ಬಗೆಹರಿಯದ ಸಮಸ್ಯೆಯೇ ಸರಿ. ಪ್ರಜಾಪ್ರಭುತ್ವದ ಪ್ರಯೋಗಕ್ಕೆ ಶಿಕ್ಷಣದಂತಹ ಜೀವಾಳವಿರುವ ವಿಷಯವನ್ನು ಬಲಿಕೊಡುವುದು ಸರಿಯೆನಿಸಲಾರದು. ಸಂರಕ್ಷಣೆ ಮತ್ತು ಸಂಪರ್ಕಕ್ಕಿಂತ ಶಿಕ್ಷಣವು ಅತಿಮಹತ್ತ್ವದ ವಿಷಯವಾದುದರಿಂದ, ಕೇಂದ್ರೀಕೃತ ಧೋರಣೆಯೇ ಅಲ್ಲಿ ಅತ್ಯಗತ್ಯವು.

ಇನ್ನು ಎರಡನೆಯ ಮಹತ್ತ್ವದ ಮಾತೆಂದರೆ, ಶಿಕ್ಷಣವು ಅವಿಭಾಜ್ಯವಾದ ಒಂದು ಕ್ರಮವೆಂಬುದನ್ನು ನಮ್ಮಲ್ಲಿಯ ಅನೇಕ ತಜ್ಞರು ಮರೆತಂತೆ ತೋರುವುದು ಸರಕಾರವು ತಾನು ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಮಾತ್ರ ಹೊತ್ತಿರುವುದಾಗಿ ಮೇಲಿಂದಮೇಲೆ ಒತ್ತಿ ಹೇಳುವುದು. ಹೀಗೆ ಹೇಳುವುದರ ಔಚಿತ್ಯದ ಅರ್ಥವೇ ಆಗುವುದಿಲ್ಲ. ಇಂದು ನಮಗೆ ಬೇಕಾದುದು ಅಕ್ಷರಜ್ಞಾನ ಮಾತ್ರವಲ್ಲ; ರಾಷ್ಟ್ರದ ನೈತಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ತನ್ನ ಪಾಲಿನ ಅಳಿಲುಸೇವೆಯನ್ನು ಸಲ್ಲಿಸಬೇಕೆಂಬ ಬಯಕೆಯುಳ್ಳ ಕಾರ್ಯಸಿರತ ಯುವಕರು! ಕೇವಲ ಪ್ರಾಥಮಿಕ ಶಿಕ್ಷಣದಿಂದ ಬಾಲಕನ ಬೆಳವಣಿಗೆಯು ಮೇಲಿ ಹೇಳಿದ ಮಟ್ಟಕ್ಕೆ ಬರಲಾರದು. ಶಿಕ್ಷಣ ಎಂದ ಮಾತ್ರಕ್ಕೆ ನವ ಭಾರತದ ಭವಿಷ್ಯತ್ತಿನ ಭಾರವನ್ನು ಹೊತ್ತು ಮುನ್ನಡಿಯಿಡುವ ಬಲವುಳ್ಳ ನವನಾಗರಿಕರಿಂದು ನಮಗೆ ಬೇಕಾಗಿದ್ದಾರೆ. ಈತಹ ಸತ್ತ್ವಶಾಲಿಗಳಾದ ಸುಶಿಕ್ಷಿತ ಯುವಕರನ್ನು ತಕಬೇತಿಗೊಳಿಸಬೇಕಾದರೆ ಕೇವಲ ಪ್ರಾಥಮಿಕ ಶಿಕ್ಷಣವು ಪ್ರಯೋಜನಕ್ಕೆ ಬಾರದು. 'ಶಿಕ್ಷಣದ ಪ್ರಗತಿಯು ವಿಷಯವಾಗಲಿ, ಬಾಲಕರ ಬೆಳವಣಿಗೆಯು ಸಿಗ್ಗೆಯಾಗಲೀ ಇಲ್ಲವೆ ಸರಕಾರವ ಹೊಣೆಯನ್ನು ಕುರಿತಾಗಲೀ ವಿಚಾರ ಮಾಡುವಾಗ, ಪ್ರಾಥಮಿಕ, ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಸಮನ್ವಯತೆಯಿರಬೇಕು -- ಎಂಬ ತತ್ತ್ವವನ್ನು ಯಾರೂ ಅಲ್ಲಗಳೆಯಲಾರದು ಶಿಕ್ಷಣವ ಪ್ರಗತಿಯು ಕೇವಲ ಪ್ರಾಥಮಿಕ ಶಿಕ್ಷಣದಿಂದ ಪೂರ್ತಿಯಾಗಿ ಸಾಧಿಸಬಹುದೆಂದು ಹೇಳಲುಬಾರದು.



ಮಾಧ್ಯಮಿಕ ಶಾಲಾವಯಸ್ಸಿನ ಬಾಲಕನ ಜೀವನದಲ್ಲಿ ಅತಿ ಮಹತ್ತ್ವದ ಕಾಲವಿರುವುದರಿಂದಲೂ, ಹದಿನಾಲ್ಕರಿಂದ ಹದಿನೆಂಟು ವರುಷದ ಅವಧಿಯಲ್ಲಿಯೇ ಬಾಲಕರ ಭವಿಷಜ್ಜೀವನವು ರೂಪುಗೊಳ್ಳುವುದರಿಂದಲೂ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಟ್ಟಗಳಲ್ಲಿ ಸಮನ್ವಯವಾಗಿ ಬಾಲಕನ ಬೆಳೆವಣಿಗೆಯಾಗುವುದು ಅವಶ್ಯವು. ಇಂದು ಇದು ಆಗುತ್ತಿಲ್ಲವೆಂಬುದು ಸ್ಪಷ್ಟವಿದೆ. ಪದರಂತೆಯ ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯ ಮತ್ತು ಮಾಧ್ಯಮಿಕ ಮಟ್ಟಗಳ ಸ್ಥಿತಿಯು.

ಇನ್ನು ಎರಡನೆಯದಾಗಿ ಬಾಲಕರ ಬೆಳೆವಣಿಗೆಯ ವಿಷಯ. ಬಾಲಕರ ಮನಸ್ಸು ಮಣ್ಣಿನ ಮುದ್ದೆಯಲ್ಲಂತೆ. ಅದಕ್ಕೆ ಸರಿಯಾದ ರೂಪ ಬರಬೇಕಾದರೆ ಒಳ್ಳೇ ಮಾರ್ಗದರ್ಶನ ನಡೆಯಬೇಕು. ಅವನ ಮನಃಪ್ರವೃತಿಗಳನ್ನು ತಿದ್ದುವ ಕಾರ್ಯವು ಅವನು ಪ್ರೌಢನಾಗುವವರೆಗೂ ನಡೆಯಲೇ ಬೇಕಾಗುವುದು. ಆದ್ದರಿಂದ ಕೇವಲ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿದರೆ, ಸರಕಾರದ ಹೊಣೆ ತೀರಿದಂತಾಗಲಿಲ್ಲ. ಮಕ್ಕಳನ್ನು ನವನಾಗರಿಕರನ್ನಾಗಿ ಮಾಡುವ ಎಲ್ಲ ಮಟ್ಟದ ಶಿಕ್ಷಣದ ಹೊಣೆಯು ಸರಕಾರವನ್ನೇ ಸೇರಿದೆ ಆದ್ದರಿಂದ ಎಲ್ಲ ಮಟ್ಟಗಳ ಶಿಕ್ಷಣವು ಎಲ್ಲ ಮಕ್ಕಳಿಗೆ ಸರಿಯಾದ ಸಮನ್ವಯದಿಂದ ದೊರೆತರೆ. ಇಳಿಮುಖವಾಗುತ್ತಿರುವ ಇಂದಿನ ಶಿಕ್ಷಣವು ಮೇಲ್ಮುಖವಾಗಬಹುದು.

ಸುಶಿಕ್ಷಿತ ತರುಣರಲ್ಲಿ ತಲೆಯೆತ್ತುತ್ತಿರುವ ಸಂಕುಚಿತ ಭಾವನೆಗಳಿಗೆ ಅವರಿಗೆ ವಿದ್ಯೆಯನ್ನು ಒದಗಿಸುವ ಸಂಸ್ಥೆಗಳು ಮತ್ತು ಆಯಾ ಸಂಸ್ಥೆಯ ಸಂಚಾಲಕರು ಕೆಲಮಟ್ಟಿಗೆ ಹೊಣೆಗಾರರಿರುವರು. ಇವಲ್ಲದೆ ಇಂದಿನ ಶಿಕ್ಷಣವು ಸಿರಿವಂತರ ಸೊತ್ತಾಗಿರುವುದರಿಂದ ಸಮಾಜದಲ್ಲಿದ್ದ ಸಿರಿವಂತರ ಸಮಾಜದ ಶಿಕ್ಷಣದ ಮೇಲೆ ತನ್ನ ವರ್ಚಸ್ಸನ್ನು ಬೀರುವುದು ಸಹಜವಿರುವುದರಿಂದ, ಶಿಕ್ಷಣಕ್ಷೇತ್ರದಲ್ಲಿ ಸಾಮಾಜಿಕ ವೈಷಮ್ಯಗಳು ತಲೆಯೆತ್ತುತ್ತಿರುವುವು ಈ ವೈಷಮ್ಯವನ್ನು ಹೋಗಲಾಡಿಸಿದ ಹೊರತು ನಮ್ಮ ಇಂದಿನ ತರುಣರಲ್ಲಿ ವಿಶಾಲಭಾವನೆಯು

ಭೀಷ್ಮ

ಶ್ರೀ. ಕೆ. ಜಿ. ಕೃಷ್ಣಭಟ್ಟ, ಪೆರಡಾಲ

"ಭಾರತವನ್ನೋದಿದೆಂ" "ಮನವ ಸೆಳೆದವರಾರು ?
ವೀರ ಕರ್ಣನೆ? ಧರ್ಮರಾಜನರ್ಜುನನೆ?
ಮಾರುತಾತ್ಮಜನೆ ? ದುರ್ಯೋಧನನೆ ? ದ್ರೋಣನೇ ?
"ಆರಯ್ಯ? ನುಡಿ!" "ಪೇಳ್ವೊಡಾ ಭೀಷ್ಮನೇ" ॥ ೧ ॥

ಸ್ವಾಮಿಭಕ್ತಂ ಕರ್ಣನಹುದಯ್ಯ! ಧರ್ಮಜಂ
ಸ್ನೇಹನಿಧಿ ಸತ್ಯಸಂಧಂ. ಕಲೆಯೆ ಪಾರ್ಥಂ.
ಭೀಮಬಲನೈ ಭೀಮನೆ:ದಿಲ್ಲ ಧೃತರಾಷ್ಟ್ರ-
ನಾತ್ಮಜಂ ಛಲದಂಕ ದ್ರೋಣಂ ಸಮರ್ಥಂ ॥ ೨ ॥

ವ್ಯಾಸನೊಬ್ಬೊಬ್ಬರಲ್ಲೊಂದೊಂದು ಗುಣಗಳಂ
ತಾಂ ಸೇರಿಸುತೆ ನೋಡಿ, ತೃಪ್ತಿ ಪಡೆಯದೆಯೆ
ಆ ಸಕಲಗುಣಗಳಂ ಭೀಷ್ಮನಲಿ ನೆಲೆಗೊಳಿಸೆ
ತೋಷವಂ ಪಡೆವನೆನೆ ಸರ್ವಗುಣಯುಕ್ತಂ ॥ ೩ ॥

ತಂದೆ ಶಂತನು ಮತ್ಸ್ಯಗಂಧಿಯಂ ನೋಡಿ ಕಾ-
ಮಾಂಧನಾಗುತೆ ವರಿಸೆ ನಿಶ್ಚಯಿಸಲವಳ
ತಂದೆ ಸಮ್ಮತಿಸದಿರೆ ತಿಳಿದಾತನಭಿಸುತವ-
ನಂದು ಭೀಷ್ಮಪ್ರತಿಜ್ಞೆಯಗೈದೆ ಭೀಷ್ಮ! ॥ ೪ ॥

"ಅಧಿಕಾರವೆನಗಿಲ್ಲ ರಾಜ್ಯಾಧಿಪತ್ಯದಲಿ
ಮದುವೆಯಾಗೆಂ ಬ್ರಹ್ಮಚಾರಿಯಾಗಿರ್ವೆಂ"
ಇದು ನಿನ್ನ ಸಂಕಲ್ಪ ! ತ್ಯಾಗವೇನಿದು ಅಲ್ಪ ?
ಮುದದೊಳಚ್ಚಾಮರಣಿಯಾದೆ ನೀನಂದಿಂ ॥ ೫ ॥

ರಾಷ್ಟ್ರವಿದ್ವೇಷಿಗಳ ನಿರ್ಮೂಲನಂ ಗೈದು
ಶಿಷ್ಟರಂ ರಕ್ಷಿಸಿದೆ! ಓ! ಪುಣ್ಯಪುರುಷ!
ರಾಷ್ಟ್ರದುನ್ನತಿಗಾಗಿ ಜೀವನವ ಮುಡಿಪಿಟ್ಟು
ರಾಷ್ಟ್ರಭಕ್ತಿಯು ನಿನ್ನದೇಂ ಕಿರಿದೆ? ಭೀಷ್ಮ! ॥ ೬ ॥

ನುಡಿದಂತೆ ನಡೆವ ನಿನ್ನಾದರ್ಶ ನಡತೆಯದು
ಸಡಿಲಾಮದೇನು ಗುರು ಭಾರ್ಗವನ ಮುಂದೆ?
ಪೊಡವಿಯೊಳ್ "ಭೀಷ್ಮಪ್ರತಿಜ್ಞೆ" ಎಂಬೀ ನುಡಿಯು
ದೃಢವಾಯ್ತು ನಿನ್ನಿಂದೆ ಭೀಷ್ಮ ನೀ ಧನ್ಯಂ ॥ ೭ ॥

ಹಸ್ತಿನಾವತಿಯ ಸಿಂಹಾಸನದ ಸೇವೆಗೆ ಸ-
ಮಸ್ತವನ್ನರ್ಪಿಸಿದ ರಾಷ್ಟ್ರಾಭಿಮಾನಿ !
ಹಸ್ತಮುಂ ಜೋಡಿಸುತೆ ನಿತ್ಯಮುಂ ಪ್ರಾರ್ಥಿಪೆ ಸ-
ಮಸ್ತಕವ ಗುಣಗಳೆನ್ನೊಳು ನೆಲಸುಗೆಂದು ॥ ೮ ॥

ಬೆಳೆಯುವುದು ಕಷ್ಟಸಾಧ್ಯವು. ಆದ್ದರಿಂದ ಸರಕಾರದವರು ಜೀವನವಿಮಾ ಕಂಪನಿಗಳನ್ನು ನಷ್ಟಗೊಳಿಸಿ ರಾಷ್ಟ್ರೀಕರಿಸಿದಂತೆ,ಶಿಕ್ಷಣಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಎಲ್ಲ ಖಾಸಗೀ ಸಂಸ್ಥೆಗಳನ್ನು ನಷ್ಟಗೊಳಿಸಿ ಅವುಗಳ ಆಸ್ತಿಪಾಸ್ತಿಗಳನ್ನು ರಾಷ್ಟ್ರೀಕರಿಸಿ, ಸರಕಾರದವರು ಒಂದೇ ಬಗೆಯ ಶಿಕ್ಷಣವನ್ನು ರಾಷ್ಟ್ರದ ಎಲ್ಲ ವಿದ್ಯಾರ್ಥಿಗಳಿಗೆ ಕೊಡುವ ಏರ್ಪಾಡು ಮಾಡಿದರೆ, ಭಾರತದ ಭವಿತವ್ಯವು ಉಜ್ವಲವಾಗುವುದು. ರಾಷ್ಟ್ರೀಯ ಜೀವನವನ್ನು ಚಿತ್ರಿಸುವ, ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಯಿಸುವ ಮತ್ತು ರಾಷ್ಟ್ರೀಯ ಐಕ್ಯವನ್ನು ಸಾಧಿಸಲು ಅನುಕೂಲವಾದ ಒಂದೇ ವಿಚಾರದ ಪಠ್ಯಪುಸ್ತಕಗಳು ಅಸ್ತಿತ್ವದಲ್ಲಿ ಬರಬೇಕು. ಭಾಷಾಭಿನ್ನತ್ವದ ಹೊರತು ಬೇರೆ ಯಾವಬಗೆಯ ಭಿನ್ನತೆಗೂ ಅಲ್ಲಿ ಅವಕಾಶವಿರಕೂಡದು. ಶಿಕ್ಷಣ ಕ್ಷೇತ್ರದ ಜ, ಆ, ಮೊದಲುಗೊಂಡು ಎಲ್ಲ ಹೊಣೆಯನ್ನು ಕೇಂದ್ರ ಸರಕಾರವೇ ಹೊತ್ತುಕೊಳ್ಳುವಕಾಲ ಬಂದಿದೆ. ಹತ್ತು ವರುಷದ ಈ ಸ್ವಾತಂತ್ರ್ಯದ ಅವಧಿಯಲ್ಲಿ, ರಾಷ್ಟ್ರೀಯ ಐಕ್ಯಕ್ಕಿಂತ ಅನೈಕ್ಯಸೃತ್ತಿಯೇ ಸಮಾಜದಲ್ಲಿ ತಲೆದೋರಿರುವುದು. ಜಾತೀಯತೆ, ಪ್ರಾಂತೀಯತೆ [ಮತ್ತು ಭಾಷೀಯತೆಗಳೇ ಇಂದಿನ ಶಿಕ್ಷಣವನ್ನು ರೂಪಿಸುವಂತೆ ತೋರುತ್ತದೆ. ಈ ಸಂಕುಚಿತ ರಾಷ್ಟ್ರವಿಘಾತಕ ವೃತ್ತಿಗಳನ್ನು ಇಲ್ಲದಂತೆ ಮಾಡುವುದು ಸರಕಾರದ ಮೊದಲನೆಯ ಕೆಲಸ.

ಕವಿಕೃತಿಯ ಕುಂದು!

ಶ್ರೀ ವಿರೂಪಾಕ್ಷ, ಬಿ. ಕಾಮ್ (ಸೀ.)
ಬಳ್ಳಾರಿ

"ಎಲ್ಲರೂ ಕೋಗಿಲೆಯ ಹೊಗಳಿದೆ ಅದರ ದೋಷವನರುಹಿರಿ–
ಲೋಪ ಕೂಪವನಗೆಯಿರಿ!
ನೋಡಿ ಗೆಳೆಯರೆ, ಮುಂದೆಯಾದರು ದೃಷ್ಟಿ ಬೇಗನೆ ಬದಲಿಸಿ
ಜಗವು ಹೊಸದಿದೆ, ಜನರು ಹೊಸಬರು, ಹೊಚ್ಚ ಹೊಸದನೆ
ರೂಪಿಸಿ!"

ಎಂದು ಹೇಳುವ ಕವಿಯೆ; ಸ್ವಾಗತ–
ನಿನ್ನ ನುಡಿಯನು ಮೆಚ್ಚಿದೆ;
ನಿನ್ನ ಕವನಗಳನ್ನು ಓದಿದೆ
ನೀನು ಸಹ– ಓ ತಪ್ಪಿದೆ!

"ರೈತ ಮುಗ್ಧನು! ಸೃಷ್ಟಿಕರ್ತನು- ಪಾಪವೆಸಗನು
ಯೋಗಿಯು!
ಧನಿಕ ಶಕುನಿಯು! ನೋಸ ಹೊಸೆಯುತ
ರೈತ ಬೆಳೆದುದನೆಲ್ಲ ಕಸಿಯುತ
ತಿಂದು ಕುಣಿಯುವ ದುಷ್ಪ್ರಾಣಿಯು! ಜಿಗಳೆಯಂತಹ
ಭೋಗಿಯು!"

ಎಂದು ಬರೆದಿಹೆ; ಕರುಣೆ ಬರುತಿದೆ ನಿನಗೆ ನೋಡುವ ಕಣ್ಣಿದೆ?
ಸಣ್ಣ ಹೊಂಡದಿಯುಂಡು ಕೂಗುವ ಕಪ್ಪೆಗಿಹ ಗುಣ ನಿನಗಿದೆ!
ಅಡ್ಡಿಮಾಡುತ ದನಕೆ ಬೇಲಿಯು ತಿದ್ದು ತಾನೇ ಮೇಯ್ಯಲು
ಎನಿತು ದಿನವಿದು ನಡೆವುದು? ಯಾರಿಗವರಿಗೆ ಚೆಲುವಿದು!
ಒಂದು ದಿನವದೆ ಬೇಲಿಕೊಯ್ಯಲು ಬೂದಿಯಾಗುವುದಾಕ್ಷಣ–
ಬೆಂಕಿಗೊದಗಿತು ತಿಂದು ಬಾಳುವ ಮುದ್ದು ನೋಜಿನ ಜೀವನ

* * * *

ರೈತನೆಸಗುವ ತಪ್ಪು ಬಲ್ಲೆಯಾ?
ರೈತಗಿಹ ನಿಜರೂಪ ನೋಡೆಯಾ?
ನೋಡಿ ಹಾಡುವ ಕಷ್ಟವೇತಕೆ?
ಹೊಗಳು ಹೊಗಳಿರೆ, ಹೂಳು ಸಗ್ಗದಿ
ಮುಕ್ತಿಯಾಟವು–ಕಾವ್ಯದಿ!
ಮಾತಿಗುಸುರುವೆ ಕವಿಯು ಕೊಡು ನೀ ಚಿತ್ತವಿಲ್ಲೀ ಸುಳಿಯಲಿ–
ಹೋದ ವರ್ಷವು ಸಂತೆ ದಿನವದು ಶೇಂಗ ಬೀಜಕೆ ಬಂದನು.
ಅರ್ಧ ಚಣದಲೆ ಕೇಳಿದಷ್ಟು ಬೀಜಕೊಟ್ಟರೆ— ನಿಂದನು.
ಹಣವ ಕೇಳಿದ; ಕೊಟ್ಟೆ ಕೈಯಲಿ— ಖರ್ಚು ಕಡಿನೆಯೆ
ಮಾಡಿನೆ
"ಕಾಳಜಿಯ ಬಿಡಿ, ಮಾಲು ತರುವೆನು ಹೆಚ್ಚು ಬೇಡೆನು"
ಅದೆ ಕೊನೆ!
ಸುಗ್ಗಿ ಮುಗಿಯಿತು! ಹತ್ತು ತಿಂಗಳು ಬಂದು ಮುಖವನು
ತೋರನು
ಮೊನ್ನೆ ತಿಳಿಯಿತು, ಮಾಲು ಹೊರಗಡೆ ಮಾರಿ ಹಣವನು
ಪಡೆದನು!

* * * *

ಕೊಟ್ಟ ಹತ್ತೂ ಚೀಲ ಬೀಜವ ಬಿತ್ತಿ ಬೆಳೆದನೊ ಇಲ್ಲವು
ನಾಲ್ಕು ಚೀಲವನಂದೇ ಮಾರಿದ; ಹೆರವರಲಿ ಹಣ ಪಡೆದನು!
ಪಡೆದು ನಡೆಸಿದ ಕೆಟ್ಟ ಕೃತ್ಯವ
ಕೋರ್ಟುಕಟ್ಟೆಯ ಹತ್ತಿದ!
ನೋತ ವ್ಯಾಜ್ಯದಿ, ಮಾನ ಕಳೆಯಿತು
ಹಣಕೆ ಗುಣವನು ಮಾರಿದ!
ಬಿತ್ತಿ ಉಳಿದಾ ಆರು ಚೀಲವ ಬೆಳೆದನಿಮ್ಮಡಿ ಮಾಲನು
ದೂರದೂರಿಗೆ ಹೋಗಿ ಪರರಿಗೆ ಮಾರಿ ಹಣವನು ಪಡೆದನು.
ಪಡೆದುದೆಲ್ಲಿಯೊ? ಕದ್ದನು!
ಸುಳ್ಳು ಹೇಳುತ ಮೋಸಗೈದಿಹ
ಕುಡಿದು ಕುಣಿಯತ ಪಾಪ ಕುರುಬರ ಮೇಲೆ ಕೈ ಮಾಡುತ್ತಿಹ
ಅದರೂ ಬಹು ಮುಗ್ಧನು— ನರಿಯ ಬುದ್ಧಿಯ ಕಳ್ಳನು!
ಕವಿಯ ಕಣ್ಣಲಿ ಇವನೆ ತ್ಯಾಗಿಯು, ನರನ ರೂಪದಿ ಬಂದನು
ಸತ್ಯ-ದೇವರ ಪ್ರತಿಮೆಯು, ಕೋರ್ಟ ಪ್ರಿಯನಿಹ ರೈತನು
ಕೊಟ್ಟ ಮಾತಿಗೆ ತಪ್ಪಿನಡೆಯುವ ದೃಷ್ಟಿಗೆಸಗದ ಮನುಜನು
ಬೈದರೇನೂ ಬಾರದಿದೆ ಕವಿ ಸುಖವು ಮನಕೆಷ್ಟಿಲ್ಲ— ಓ
ಹಸುರುಗಿಡದಿಹ ಹಸಿರು ಹಾವಿನ ಬಣ್ಣ ನೀ ಕಂಡಿಲ್ಲವೋ!
ಎಲ್ಲರೂ ರೈತರನು ಹೊಗಳಿದೆ ಅವರ ದೋಷವನರುಹಿರಿ
ಲೋಪ ಕೂಪವನಗೆಯಿರಿ!
ಇನ್ನು ತಾಳಿವು ಹೀಗೆ ಬರೆದರೆ, ನಿಮ್ಮ ಕೃತಿಗಳ ಸುಡುವೆವು!
ಬದಲು ಜನರಿಹ ಜಗವು ಬದಲಿದೆ, ಕವನದಿರಲೀ ವಿಷಯವು!

'ಗುಂಡೂಮಾಮಾನ ಗೋಷ್ಠಿ'

(ಒಂದು ಹರಟೆ)

ಡಿ. ವಿ. ಗುಡಿ, ಹೊಸಬುಳ್ಳ

ನಾಲ್ಕು ಜನ ಸೇರಿದಲ್ಲಿ ಯಾವ ವಿಷಯ ಹೊರಟೀತೆಂಬುದರ ನಿಯಮವಿಲ್ಲ. ಅದರಂತೆ ಅದು 'ಹಾಳು ಹರಟೆ' ಎಂದು ಹೆಸರುಗೊಂಡರೂ, ಹರಟೆ ಹೊಡೆಯುವವರ ವ್ಯಕ್ತಿತ್ವನಿದರ್ಶಕವಾಗಿ, ರಸವತ್ತಾದ ಸಾಹಿತ್ಯದ ಗುಣಗಳಿಂದ ತುಂಬಿದುದಾಗುವದು.

ನಾನು ಗುಂಡೂಮಾಮಾನ ಮನೆ ತಲುಪಿದಾಗ ಎಲ್ಲರೂ ಆಗಲೇ ಬಂದಿದ್ದರು. ರಜೆ ಮುಗಿಸಿಕೊಂಡು ನಿನ್ನೆಯೇ ಊರಿಗೆ ಬಂದಿದ್ದ ರಂಗಣ್ಣ, ತನ್ನ ಊರಿನ ಸಂಬಂಧವಾಗಿ ಏನೋ ಹೇಳುತ್ತಿದ್ದ '..... ನಾನು ಮುಂಜಾನೆಯ walking ನುಗಿಸಿಕೊಂಡು ಬರುವಾಗ್ಗೆ' ಅಲ್ಲಿ ಹಣಮಂತ ದೇವರಗುಡಿ-ಶಾಲೆಯಲ್ಲಿಯ ಹುಡುಗರ ಪ್ರಾರ್ಥನೆಯ ಧ್ವನಿ ಕೇಳಿಸಿತು. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು....." ನನಗೊಳ್ಳೇ ಆಶ್ಚರ್ಯವಾಯಿತು. ನಾನು ಕನ್ನಡ ಶಾಲೆಯಲ್ಲಿದ್ದಾಗ ೨೫-೩೦ ವರ್ಷಗಳ ಹಿಂದೆ- ಹೇಳುತ್ತಿದ್ದ ಪ್ರಾರ್ಥನೆ ಇನ್ನೂ ವರೆಗೆ— ಕರ್ನಾಟಕ ಏಕೀಕರಣವಾಗಿ ಒಂದು ಪ್ರಾಂತವಾದರೂ— ಅದೇ ಇರಬೇಕೇ !.... ಗುಡಿಯನ್ನು ಸಮೀಪಿಸುತ್ತಲೇ ನನ್ನನ್ನು ನೋಡಿ ಶಿವಪ್ಪ ಮಾಸ್ತರರು 'ಬರಬೇಕು; ರಜೆಯ ಮೇಲೆಯೇ ರಂಗಣ್ಣನವರೇ ?" ಎಂದು ಕೇಳಿದರು. ನಾನು ಅವರನ್ನು ಕೇಳಿದೆ ! "ಏನು ಮಾಸ್ತರ, ಇನ್ನೂ ನೀವು ಹಳೆಯದನ್ನು ಮರೆತೇ ಇಲ್ಲನಲ್ಲ! ಈ ಪ್ರಾರ್ಥನೆಯಲ್ಲಿ ಸ್ವಲ್ಪ ಬದಲಿಸಬೇಕು— ಉದಯವಾಗಲಿ ಅಲ್ಲ, ಉದಯವಾಗಿದೆ ಎಂದಾಗಬೇಕು. ಕನಸು ಈಗ ನನಸಾಗಿದೆ.' ಶಿವಪ್ಪಮಾಸ್ತರು ಹೇಳಿದರು: ''ರಂಗಣ್ಣನವರೇ ಕ್ಷಮಿಸಿ; ನಿಮ್ಮ ಅಭಿಪ್ರಾಯ ತಪ್ಪಾಗಿದೆ. ನಮ್ಮ ಕನಸು ಇನ್ನೂ ಕನಸಾಗಿಯೇ ಉಳಿದಿದೆ. ಕನ್ನಡ ಜನರು, (ಬಹು ಮಟ್ಟಿಗೆ) ಪ್ರಾಂತ ಒಂದನ್ನು ಬೇರೆ ಮಾಡಿದ್ದಾಗಿದೆ. ಆದರೆ ಆ ಪ್ರಾಂತಕ್ಕೆ 'ಕರ್ನಾಟಕ' ಎಂದು ಕರೆಯುವ ಭಾಗ್ಯ ನಮಗಿಲ್ಲ. ಪ್ರಾಂತ ಒಂದೇ ಆದರೂ 'ನಾವೆಲ್ಲರೂ ಕನ್ನಡಿಗರು' ಎಂಬ ಒಕ್ಕಟ್ಟಿನ ಭಾವನೆ ಬಂದಿಲ್ಲ. ಪ್ರತಿಯೊಬ್ಬರಲ್ಲಿ ದ್ವೇಷ ಅಸೂಯೆ ಹೆಚ್ಚಾಗತೊಡಗಿವೆ. ಅದಕ್ಕೆ ಈ ಜಾತಿ ಪಂಥಗಳೂ ಸಹಾಯಕವಾಗಿವೆ. ಸಂಕುಚಿತ ದೃಷ್ಟಿ, ಸ್ವಾರ್ಥ ಪ್ರತಿಯೊಬ್ಬನಲ್ಲಿಯೂ ಹೆಚ್ಚಿಚ್ಚು ತಲೆಯೆತ್ತತೊಡಗಿವೆ. ಆದರಿಂದಾಗಿ ಕರ್ನಾಟಕವು ಒಂದಾಗಿ ಮುಂದುವರೆಯಬೇಕಾದದ್ದು, ಈಗ ಮೊದಲಿಗಿಂತಲೂ ಹಿಂದುಳಿದಿದೆ. 'ಉದಯವಾಗಿದೆ'ಯೆಂಬ ಭಾವನೆ ಸಂಪೂರ್ಣ ಕನಸಾಗಿ ಪರಿಣಮಿಸಿದೆ. ಉದಯವಾದದ್ದೇ ನಿಜವಾಗಿದ್ದರೆ, ನೋಡಗವಿದಿರಬೇಕು. ಆ ನೋಡಗಳನ್ನು ಚೆದರಿಸಲಿಕ್ಕೆ ಬಿರುಗಾಳಿ ಏಳಬೇಕು. ಆ ಬಿರುಗಾಳಿ ಬೀಸದೆ ಗತ್ಯಂತರವಿಲ್ಲ. ಅದರಿಂದಾಗುವ ಹಾನಿಯನ್ನು ಅನುಭೋಗಿಸಲಿಕ್ಕೆ ನಾವು ಸಿದ್ಧರಾಗಬೇಕು....."

ರಂಗಣ್ಣನ ಮಾತನ್ನು ಕೇಳಿ ಗುಂಡುಮಾಮಾ ನುಡಿದರು. "ಅಹುದು ಅಂಗಣ್ಣಾ, ಶಿವಪ್ಪ ಮಾಸ್ತರರು ಹೇಳಿದ್ದು ಅಕ್ಷರಶಃ ನಿಜ. ಅವರಂತೆ ಪ್ರತಿಯೊಬ್ಬ ಕನ್ನಡಿಗನಿಗೂ ತಿಳಿವಳಿಕೆ ಇದ್ದರೆ, ಕರ್ನಾಟಕ ಉದಯವಾಗಲಿಕ್ಕೆ ಏನು ವೆಚ್ಚ ಹಿಡಿಯಬೇಕಾಗಿದೆ. ಆದರೆ ಅಂತಹ ಜನರು ಸಾವಿರಕ್ಕಾದರೂ ಒಬ್ಬರು ಸಿಗುವರೋ ಇಲ್ಲವೋ ?"

ಅಷ್ಟರಲ್ಲಿ ಶೀನಪ್ಪ ''ಇಂದು ಶಾಸ್ತ್ರಿಯನ್ನು ಎಳೆದುಕೊಂಡು ಬಂದಿದ್ದೇನೆ, ಗುಂಡೂ ಮಾಮಾ'' ಎಂದೆನ್ನುತ್ತ ಬಂದ.

''ಏನು ಶಾಸ್ತ್ರಿ, ಬಹಳ ಅಪರೂಪವಾಗಿದ್ದೀಯಲ್ಲ?' ಎಂದು ಅತ್ತ ತಿರುಗಿದರು.

ಶೀನಪ್ಪ ನಗುತ್ತ ನುಡಿದ: "ಶಾಸ್ತ್ರಿ ಎಂದು ಕರೆಯುವುದು ನಾವು ಸುಮ್ಮನೆಯೇ ? ಅವನಿಗೆ ತಕ್ಕ ಕೆಲಸವಿದ್ದರೇನೇ ಅವನು ಬರಬೇಕು. ಇಂದು ಯುಗಾದಿ ಪ್ರತಿಪದೆಯಲ್ಲವೇ ? ಪಂಚಾಂಗ ಶ್ರವಣ ಮಾಡಿಸುವುದಕ್ಕೆ ಬಂದಿದ್ದಾನೆ."

ಕಿಟ್ಟು ಕೊಂಕು ನುಡಿದ: ''ಶೀನಪ್ಪ, ಹಳೆಯದನ್ನು ಮರೆತು ಬಿಡು. ಈಗ ಎಲ್ಲವೂ ಹೊಸದು. ಭಾರತದಲ್ಲಿ ಈಗ ಒಂದೇ ಪಂಚಾಂಗ—National Calender. ಅದರ ಪ್ರಕಾರ ವರ್ಷ, ತಿಂಗಳು; ದಿವಸಗಳನ್ನು ಎಣಿಸತಕ್ಕದ್ದು. ಇಂದು ಹೊಸವರ್ಷದ ಮೊದಲಿನ ದಿವಸಲ್ಲ....."

ಗುಂಡೂಮಾಮಾ ನಡುವೆಯೇ ಕಿಟ್ಟುವನ್ನು ತಡೆದರು; ಕಿಟ್ಟೂ ಹಾಗೆ ಹೇಳುವುದಾದರೆ ಈಗ ನಡೆದದ್ದು ಒಂದು ಬೇರೆ ವರ್ಷವೇ— ಅಂತರರಾಷ್ಟ್ರೀಯ ಭೂಭೌತಿಕ ವರ್ಷ. International Geography Year. ಇದು ೧೨ ತಿಂಗಳ ವರ್ಷವಲ್ಲ. ೧೮ ತಿಂಗಳದ್ದು. ೧೯೫೭ರ ಜುಲೈನಿಂದ ಈ ವರ್ಷದ ಕೊನೆಯ ವರೆಗೆ. ೬೪ ದೇಶಗಳ ಶಾಸ್ತ್ರಜ್ಞರು ಸಹಕರಿಸಿ, ಗೊತ್ತಿಲ್ಲದ ಎಷ್ಟೋ ವಿಷಯಗಳ ಸಂಬಂಧವಾಗಿ ಶೋಧಮಾಡತಕ್ಕವರಿದ್ದಾರೆ. ಈ ೧೮ ತಿಂಗಳಲ್ಲಿ ನಮ್ಮ ಸೃಷ್ಟಿಯ ನೆಲ, ನದಿ, ಪರ್ವತ, ಸಮುದ್ರಗಳ ಮತ್ತು ಭೂಮಿಯನ್ನಾವರಿಸಿದ ವಾಯು ಮಂಡಲ, ಅದಕ್ಕೂ

ಮೇಲಿನ ಉನ್ನತ ವಾತಾವರಣ ಇವುಗಳ ಭೌತ ಮತ್ತು ವಿದ್ಯುತ್ ಸ್ಥಿತಿಗಳನ್ನು ಮತ್ತು ಅವುಗಳಲ್ಲಿ ಉಂಟಾಗುವ ಬದಲಾವಣೆಗಳ ಕಾರಣಗಳನ್ನು ಕಂಡುಹಿಡಿಯುವುದೇ ಅವರ ಮುಖ್ಯ ಉದ್ದೇಶವಾಗಿದೆ. ರಸಿಯನ್ ಮತ್ತು ಅಮೇರಿಕನರ ಉಪಗ್ರಹಗಳು ಇವುಗಳ ಕಾರ್ಯಕ್ರಮದ ಅಂಗಗಳಾಗಿವೆ.

ವಿಷಯ ಬೇರೆ ಕಡೆಗೆ ತಿರುಗುತ್ತದೆಂದು ಶೀನಪ್ಪನಿಗೆ ಹೆದರಿಕೆಯಾಯಿತೋ! ಕೂಡಲೇ ಉಪಾಯ ಯೋಚಿಸಿದ; ''ಗುಂಡೂ ಮಾವಾ ಇದು ವಿಜ್ಞಾನಿಗಳ ವರ್ಷವಿಷ್ಟೇ ಅಲ್ಲ. ನೀವು ಆ ಅಮೇರಿಕನ್ ಕೋಟ್ಯಾಧೀಶ ಟಾಮ್ ಸ್ಲಿಕ್‌ನ ಹೆಸರು ಕೇಳಿಲ್ಲವೇ? ಅವನು ಹಿಮಮನುಷ್ಯನ snow man ಸಂಬಂಧವಾಗಿ ನಿಜ ಸಂಗತಿಗಳನ್ನು ಕಂಡು ಹಿಡಿಯುವುದಕ್ಕಾಗಿ ಟೊಂಕ ಕಟ್ಟಿದ್ದಾನಂತೆ. ಈಗಾಗಲೇ ಅವನು ಭಾರತಕ್ಕೆ ಬಂದಿದ್ದಾನೆಂದೂ ಕೇಳಿದ್ದೇನೆ. ಇದೂ ಒಂದು ಈ ವರ್ಷದಲ್ಲಿಯ ಕಾರ್ಯಕ್ರಮವೇ.'

'ಅಹುದಹುದು' ಗುಂಡೂಮಾವಾ ನುಡಿದರು. 'ಇಷ್ಟೇ ಇಲ್ಲ, ಜೀವಂತವಾಗಲಿ, ಸತ್ತದ್ದಾಗಲಿ ಹಿಮಮನುಷ್ಯನನ್ನು ಈ ವರ್ಷ ಹಿಡಿದೇ ತೀರಬೇಕೆಂದು ಅವನ ಹಟ. ಅದಕ್ಕೆ ಬೇಟೆಯ ನಾಯಿಗಳನ್ನೂ ಹೆಲಿಕಾಪ್ಟರಗಳನ್ನೂ ಉಪಯೋಗಿಸಬೇಕೆಂದು ಅವನ ಯೋಚನೆ. ಆದರೆ ನೇಪಾಲ ಸರಕಾರದವರು ಹಿಮಮನುಷ್ಯನನ್ನು ಕೊಲ್ಲುವುದಕ್ಕೆ ಅನುಮತಿಯನ್ನು ಕೊಡುವುದಿಲ್ಲ. ಯಾಕೆಂದರೆ ಆಲ್ಲಿಯ ಜನರಲ್ಲಿ ಈ ಹಿಮಮನುಷ್ಯನ ಸಂಬಂಧವಾಗಿ ಅನೇಕ ನಂಬಿಕೆಗಳಿವೆ. ಅವುಗಳನ್ನು ನೋಡಿದರೆ, ಅವಕ್ಕೆ ಅಪಾಯ ಮಾಡಿದರೆ ತಮ್ಮ ಜನಾಂಗಕ್ಕೆಲ್ಲ ಕೇಡಾಗುತ್ತದೆಂದು ಅವರ ನಂಬಿಕೆ. ಅವರು ಅವುಗಳನ್ನು 'ಯೇತಿ' ಎಂದು ಕರೆಯುತ್ತಾರೆ. ತಿಬೇಟದ ಕಡಗೆ ಅವುಗಳಿಗೆ 'ಸುಕ್-ಪಾ' ಎಂದು ಕರೆಯುತ್ತಾರೆ. ಎವ್ವರೆಸ್ಟ್ ಮುಂತಾದ ಹಿಮಾಲಯಗಳ ದೊಡ್ಡ ದೊಡ್ಡ ಶಿಖರಗಳನ್ನು ರಕ್ಷಿಸುತ್ತದೆಂದೂ ಅವರಲ್ಲಿಯ ಭಾವನೆ. ಆದರಿಂದಾಗಿ ಅವರು ಬಹಳ ಭಕ್ತಿ ವಿಶ್ವಾಸಗಳನ್ನು ತೋರಿಸುತ್ತಾರೆ.

ರಂಗಣ್ಣ ಹೇಳಿದ: ಈ ಯೇತಿಗಳ ಬಗ್ಗೆ ಆ ಜನರಲ್ಲಿ ಅನೇಕ ಕತೆಗಳಿವೆ. ಮತ್ತು ಅವುಗಳ ವಿಷಯವಾಗಿ ನಂಬಲಾಗದ ಎಷ್ಟೋ ಸಂಗತಿಗಳನ್ನು ಹೇಳುತ್ತಾರೆ. ಆದರೂ ಅವುಗಳನ್ನು ನೋಡಿದವರು ಒಬ್ಬರೂ ಇಲ್ಲ! ಅವು ಹಿಮಾಲಯದ ಕರಡಿಗಳೆಂದು ಕೆಲವರೆಂದರೆ, ಗೋರಿಲ್ಲಾಗಳೆಂದು ಮತ್ತೆ ಕೆಲವರ ಮತ. ಇಲ್ಲಿಯವರೆಗೆ ಅವುಗಳ ಬಗ್ಗೆ ಗೊತ್ತಿದ್ದ ಮತ್ತು ನೋಡಿದ ವಿಷಯಗಳೆಂದರೆ: ಅವುಗಳ ಹೆಜ್ಜೆಗಳ ಗುರುತು. ಅದೂ ಈ ಪಾಶ್ಚಾತ್ಯರು ಪರ್ವತಾರೋಹಣಕ್ಕೆಂದು ಬರಲಿಕ್ಕೆ ಪ್ರಾರಂಭಿಸಿದಂದಿನಿಂದ. ೧೦ ರಿಂದ ೨೦ ಸಾವಿರ ಫೂಟು ಎತ್ತರದವರೆಗೂ ಈ ಹೆಜ್ಜೆಯ ಗುರುತುಗಳು ಕಂಡುಬರುತ್ತವೆ. ಅವು ಮನುಷ್ಯರ ಹೆಜ್ಜೆಗಳಂತೆಯೇ ಇದ್ದು ಆಕಾರದಲ್ಲಿ ಬಹಳ ದೊಡ್ಡವಿವೆ. ಅವುಗಳ ಮೇಲಿಂದ ಈ ಯೇತಿಗಳ ಎತ್ತರ ೧೦–೧೫ ಫೂಟು ಇರಬಹುದೆಂದು ಅಂದಾಜು ಮಾಡಿದ್ದಾರೆ. ಮನುಷ್ಯರಂತೆ ಅವು ಎರಡು ಕಾಲುಗಳ ಮೇಲೆಯೇ ನಡೆಯಬಲ್ಲವಂತೆ. ಈ ವರ್ಷ ಮತ್ತೆ ಕೆಲವು ಜನರು ಇವುಗಳ ಸಂಬಂಧದಲ್ಲಿ ಹೆಚ್ಚಾಗಿ ಶೋಧಮಾಡತಕ್ಕವರಿದ್ದಾರೆ. ಆ ಮೇಲೆ ಗೊತ್ತಾಗಬೇಕು ನಿಜ ಸಂಗತಿಗಳು''.

ಶಾಸ್ತ್ರಿ ನುಡಿದ: 'ನಮ್ಮ ರಂಗಣ್ಣನಿಗೆ ಪಾಶ್ಚಾತ್ಯರು ಹೇಳಿದ್ದೆಲ್ಲ ವೇದವಾಕ್ಯ. ಈಗಿನ ಜನರ ರೀತಿಯೇ ಹೀಗೆ. ಅವರಿಗೆ ನಮ್ಮ ವೇದಶಾಸ್ತ್ರಗಳಲ್ಲಿ ನಂಬಿಗೆ ಇಲ್ಲ. ಉದಾಹರಣೆಗಾಗಿ ಈ ವಿಷಯ ಹೇಳಬಹುದು:— ನಮ್ಮ ಶಾಸ್ತ್ರ ಪುರಾಣಗಳಲ್ಲಿ ಪುಂಗಳ ಲೋಕದ ಬಗ್ಗೆ ಮತ್ತು ಅಲ್ಲಿಯ ಜನರ ಸಂಬಂಧವಾಗಿ ಉಲ್ಲೇಖವಿದೆ. ಆದರೆ ಅದರ ಗೊತ್ತು ಯಾರಿಗೆ ಮತ್ತು ಅದರಲ್ಲಿ ನಂಬಿಗೆ ಯಾರಿಗೆ? ಈಗಿನ ವಿಜ್ಞಾನಿಗಳು ಎಷ್ಟೋ ವರ್ಷಗಳವರೆಗೆ ಶೋಧ ನಡೆಯಿಸಿ, ಈಗ ನಮ್ಮ ಶಾಸ್ತ್ರಗಳಲ್ಲಿ ಹೇಳಿದ್ದು ನಿಜವೆಂದು ಮನಗಂಡಿದ್ದಾರೆ. ಅವರು ಹೇಳಿದ ನಂತರವೇ ನಮಗೆ ಅದರಲ್ಲಿ ನಂಬಿಗೆ ಹುಟ್ಟುವುದು. ಹಾಗೆಯೇ ಈ ಯೇತಿಗಳ ಬಗ್ಗೆಯೂ ಹೇಳಬಹುದು.''

'' ನೀನು ಅನ್ನುವಂತೆಯೇ ಆಗಲಿ, ಶಾಸ್ತ್ರಿ'' ರಂಗಣ್ಣ ನುಡಿದ. ''ನಿನ್ನ ಅಭಿಪ್ರಾಯವೇನಿದೆ ಹಾಗಾದರೆ ಈ ಯೇತಿಗಳ ಬಗ್ಗೆ?''

ಚಿಕ್ಕ ಬಾಲಕರಿಗೆ ತಿಳಿಸಿ ಹೇಳುವಂತೆ ಶಾಸ್ತ್ರಿ ಹೇಳ ತೊಡಗಿದ: ''ರಂಗಣ್ಣ,ಇಂತಹ ವಿಷಯಗಳಲ್ಲಿ ನನಗೆ ಗೊತ್ತಿದ್ದ ಮತ್ತು ಅಲ್ಲಿಯ ಜನರು ಹೇಳುತ್ತಿರುವ ಸಂಗತಿಗಳು ಮತ್ತು ಸ್ವಲ್ಪ common-sense ಕೂಡಿಸಿದರೆ ಎಲ್ಲವೂ ವಿದಿತವಾಗುತ್ತದೆ. ಗೊತ್ತಿದ್ದ ಸಂಗತಿಗಳೆಂದರೆ— ಹೆಜ್ಜೆಗಳ ಆಕಾರದಿಂದ ಅವು ೧೦–೧೫ ಫೂಟು ಎತ್ತರ ಇವೆ. ೨೦ ಸಾವಿರ ಫೂಟು ಎತ್ತರದ ಮೇಲೆ ಇದ್ದರೂ ಬರಿಗಾಲಿನಿಂದ ನಡೆಯಬಲ್ಲವು. ಎಷ್ಟು ಪ್ರಯತ್ನಿಸಿದರೂ ಅವು ಯಾರ ಕಣ್ಣಿಗೂ ಕಂಡಿಲ್ಲ. ಹೋದ ವರ್ಷ ಇವುಗಳನ್ನು ಕಂಡು ಹಿಡಿಯಲೇಬೇಕೆಂದು ಕೆಲವು ಜನರು ಪ್ರಯತ್ನಮಾಡಿದರು. ಪರ್ವತದ ಮೇಲೆ ಹತ್ತುತ್ತಿದ್ದಾಗ ಆಕಸ್ಮಾತ್ತಾಗಿ ತಿರುಗಿ ನೋಡಲಾಗಿ ಹಿಂದೆ ಬರುತ್ತಿದ್ದ ತಮ್ಮವರಲ್ಲಿ ಯೊಬ್ಬನು ಇಲ್ಲವಾಗಿದ್ದನು. ಅವನ ಹೆಜ್ಜೆಯ ಗುರುತಿಗಳ ಬಡಲು ಯೇತಿಯ ಹೆಜ್ಜೆಯ ಗುರುತುಗಳು ಕಂಡು ಬಂದವು. ಇದೇನು ತೋರಿಸುತ್ತದೆ, ರಂಗಣ್ಣ? ಯೇತಿಗೆ ಜನರ ಕಣ್ಣಿಗೆ ಬೀಳುವ ಮನಸ್ಸಿಲ್ಲವೆಂದಂತಾಗಲಿಲ್ಲವೇ?

ಇನ್ನು ಆಲ್ಲಿಯ ಜನರಿಂದ ಗೊತ್ತಾಗುವ ವಿಷಯ– ಯೇತಿಯು ಹಿಮಾಲಯದ ಶಿಖರಗಳನ್ನು ರಕ್ಷಿಸುತ್ತದೆ; ಅದಕ್ಕೆ ಕೆಡುಕು ಬಯಸಿದರೆ ಇಲ್ಲವೆ ನೋಡಲಿಕ್ಕೆ ಪ್ರಯತ್ನಿಸಿದರೆ, ಒಬ್ಬರಿಗಲ್ಲ ಇಡೀ ಜನಾಂಗಕ್ಕೇನೆ ಅನಿಷ್ಟ ಉಂಟಾಗುತ್ತದೆ. ಹಿಮಾಲಯದ ಆಡಿಯಲ್ಲಿ ಒಂದು ಕುಟುಂಬವಿದೆಯಂತೆ. ತಾಯಿ ಮತ್ತು ಅವಳಲ್ಲಿ ಯೇತಿಯಿಂದ ಹುಟ್ಟಿದ ಮಗ, ಅವನ ಮಕ್ಕಳು. ಅವರೆಲ್ಲ ಬಹಳ ಎತ್ತರವಾಗಿದ್ದು ಅಸಾಧಾರಣ ಸಾಮರ್ಥ್ಯ ಉಳ್ಳವರಾಗಿದ್ದಾರಂತೆ. ಆದರೆ ಅವರು ಯೇತಿಯ ಬಗ್ಗೆ ಏನೂ ಹೇಳಬಯಸುವುದಿಲ್ಲ. ಎಲ್ಲಕ್ಕೂ ಮುಖ್ಯವಾದದ್ದೆಂದರೆ ಹಿಮಾಲಯದ ಆಡಿಯಲ್ಲಿರುವ, 'ಪಾಂಗ ಬೋಚೆ' ಎಂಬ ಮಠದಲ್ಲಿ ಒಂದು ಯೇತಿಯ ತಲೆ ಬುರುಡೆಯನ್ನು

ಇಟ್ಟಿದ್ದಾರೆ. ಆ ಮಠದಲ್ಲಿ ೫೦-೬೦ ವರ್ಷಗಳ ಹಿಂದೆ ಒಬ್ಬ ದೊಡ್ಡ ಲಾಮಾ ಇದ್ದನಂತೆ. ಅವನು ಎಲ್ಲಿಯೂ ಹೊರಗೆ ಹೋಗದೆ ಮಠದಲ್ಲಿಯೇ ಇದ್ದುಕೊಂಡು ತನ್ನ ತಪಃಸಾಧನೆಯನ್ನು ಮಾಡುತ್ತಿದ್ದನು. ಒಂದು ಯೇತಿಯು ಅದನ್ನು ತಿಳಿದು ಪ್ರತಿ ದಿವಸ ಆ ಲಾಮಾನಿಗೆ ಹಣ್ಣು ಹಂಪಲಗಳನ್ನು ತಂದು ಕೊಡುತ್ತಿತ್ತಂತೆ. ಎಷ್ಟೋ ವರ್ಷಗಳ ನಂತರ- ಆ ಯೇತಿಯು ಸತ್ತನಂತರ, ಅದರ ತಲೆಬುರುಡೆಯನ್ನು ಆ ಮಠದಲ್ಲಿಟ್ಟು ಪೂಜಿಸುತ್ತಿದ್ದಾರೆ. ಇದನ್ನು ಈಗಲೂ ಅಲ್ಲಿ ನೋಡಬಹುದು.

ಇವೆಲ್ಲವುಗಳಿಂದ ನೋಡಲಾಗಿ ಯೇತಿಯು ನಮ್ಮೆಲ್ಲರಿಗಿಂತ ೪-೫ ಪೂಟು ಎತ್ತರವಿದ್ದು ನಮಗಿಂತ ಎಷ್ಟೋಪಾಲು ಸಾಮರ್ಥ್ಯ ಉಳ್ಳದ್ದಾಗಿದೆಯಲ್ಲದೆ, ಧರ್ಮಶ್ರದ್ಧೆಯುಳ್ಳದ್ದೂ ಆಗಿದೆ.

ಹಿಮಾಲಯದಲ್ಲಿ ಎಷ್ಟೋ ಜನ ತಪಸ್ವಿಗಳು ಇರುವರೆಂಬ ವಿಷಯ ಎಲ್ಲರಿಗೂ ಗೊತ್ತಿದ್ದದ್ದೇ. ಸುತ್ತು ಆ ತಪಸ್ವಿಗಳು ಎಷ್ಟೋ ಸಾವಿರ ವರ್ಷಗಳಿಂದ ಅಲ್ಲಿ ತಪಸ್ಸು ಮಾಡುತ್ತಿದ್ದಾರೆ. ಮನುಷ್ಯನ ಆಯುಷ್ಯ ಪ್ರಮಾಣ ಅವರಿಗೆ ಸಂಬಂಧಿಸುವುದಿಲ್ಲ. ಎಷ್ಟೋ ಸಾವಿರ ವರ್ಷಗಳಿಂದ ಅಲ್ಲಿ ; ಅವರು ತಪಸ್ಸು ಮಾಡುತ್ತಿದ್ದುದರಿಂದ ಅವರು ತ್ರೇತಾಯುಗ ಕೃತಯುಗದವರಾಗಿರಬೇಕು. ಅವರ ವರ್ಣನೆ ನಮ್ಮ ಶಾಸ್ತ್ರಗಳಲ್ಲಿ ಬರುತ್ತದೆ. ಅವರ ಎತ್ತರ ನಮಗಿಂತಲೂ ೨-೩ ಅಡಿ ಹೆಚ್ಚು ಇದ್ದಿತಂತೆ. ಅಂದ ಬಳಿಕ ಈಗ ಕಂಡುಬರುವ ಹೆಜ್ಜೆಯ ಗುರುತುಗಳು ಅವರನ್ನೇ ಇದ್ದಿರಬಹುದು ಮತ್ತು ಅವರು ತಮ್ಮ ತಪಃಸಾಮರ್ಥ್ಯದಿಂದ ಉಳಿದವರ ಕಣ್ಣಿಗೆ ಕಾಣದೇ ಇರಬಹುದು. ಆದರಿಂದಾಗಿಯೇ ಅಲ್ಲಿಯ ಜನರು ಅವರನ್ನು ಯೇತಿ (ಯತಿ ಋಷಿ) ಎಂದು ಕರೆಯುತ್ತಿರಬಹುದು: ತಿಬೇಟದಲ್ಲಿ ಅವುಗಳನ್ನು 'ಶುಕ್-ಪಾ' ಎಂದು ಕರೆಯುತ್ತಾರೆ. ಹಾಗೆ ಕರೆಯುವುದಲ್ಲಿಯೂ ಒಂದು ಅರ್ಥವಿದೆ. ನಮ್ಮ ವೇದ ಪುರಾಣಗಳಲ್ಲಿ ಉಲ್ಲೇಖಿಸಿದಂತೆ ಮಹಾಭಾರತ ರಚಿಸಿದ ವೇದವ್ಯಾಸರು ಈಗಿನ ಬದರೀನಾಥದಲ್ಲಿ ಆಶ್ರಮ ಕಟ್ಟಿಕೊಂಡು ಇದ್ದರಂತೆ. ಅವರ ಮಗನಾದ ಶುಕ ಮುನಿಯು ಹೆಸರಾದ ಯತಿ ಶ್ರೇಷ್ಠನು. ಆ ಮುನಿ ಪುಂಗವನು ಯಾವಾಗಲೂ ಬೆತ್ತಲೆಯಾಗಿಯೇ ಅಡ್ಡಾಡುತ್ತಿದ್ದನಂತೆ. ಅಂದ ಬಳಿಕ ಬದರೀನಾಥ- ಹಿಮಾಲಯದಲ್ಲಿ, ೧೦-೧೫ ಸಾವಿರ ಪೂಟು ಎತ್ತರದಲ್ಲಿ ಈ ಶುಕಮುನಿಯು ಇದ್ದನೆಂದ ಹಾಗಾಯಿತು. ಅವನಂತಹ ದೊಡ್ಡ ತಪಸ್ವಿಗಳು, ಯಾವ ಯುಗಕ್ಕೋ ಸಂಬಂಧಿಸಿದವರು, ಅವನಂತೆಯೇ (ಬೆತ್ತಲೆಯಾಗಿಯೋ ಗೊತ್ತಿಲ್ಲ) ಬರಿಗಾಲಿನಿಂದ ಅಷ್ಟು ಎತ್ತರದ ಮೇಲಿಂದ ಹಿಮಾಚ್ಛಾದಿತ ಪ್ರದೇಶದಲ್ಲಿ ಇರುತ್ತಿದ್ದಾರೆಂದ ಬಳಿಕ ತಿಬೇಟದ ಜನರು ಅವರನ್ನು ಶುಕಮುನಿಗಳ ಹೆಸರಿನಿಂದ -ಶುಕ್-ಪಾ ಎಂದು ಕರೆಯುತ್ತಿರಬಹುದು. ಇದು ನನ್ನೊಬ್ಬನದೇ ಅಲ್ಲ ಎಷ್ಟೋ ಜನ ವಿದ್ವಾಂಸರ ಅಭಿಪ್ರಾಯವೂ ಹೀಗೇಯೇ ಅದೆ.'



ಕಿಟ್ಟೂ ನಗುತ್ತ ನುಡಿದ 'ಅಂತೂ ಶಾಸ್ತ್ರಿ,ಮುಂಗಗಳನ್ನು ಹನುಮಂತನೆಂದು ಪೂಜಿಸುವವರ ಜೊತೆಗೆ ಗೋರಿಲ್ಲಾಗಳನ್ನು ಯತಿ ಶ್ರೇಷ್ಠನೆಂದು ಪೂಜಿಸುವವನು ನೀನೊಬ್ಬ.'

ರಂಗಣ್ಣ ನುಡಿದ: ನಮ್ಮಲ್ಲಿಯ ದೊಡ್ಡ ವಿದ್ವಾಂಸರು ಶಾಸ್ತ್ರಿ ಹೇಳಿದಂತೆ ಕಲ್ಪನಾಶಕ್ತಿಗೆ ಹೆಚ್ಚು ಮಹತ್ವ ಕೊಡುತ್ತಾರೆಯೇ ಹೊರತು ನಿಜ ಸಂಗತಿಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸುವುದಿಲ್ಲ. ಗುಂಡು ಮಾಮಾ ಹಿಂದಕ್ಕೆ ಹೇಳಿದಂತೆ ಕಾಂಗರಾ ಜಿಲ್ಲೆಯಲ್ಲಿಯ ಜ್ವಾಲಾಮುಖಿ ದೇವಾಲಯವನ್ನು ಒಂದು ಉದಾಹರಣೆಯೆಂದು ಹೇಳಬಹುದು- ಎಣ್ಣೆ ಇಲ್ಲದೆ ದೀಪ ಉರಿಯುತ್ತದೆಂದ ಬಳಿಕ ಅದೊಂದು ದೈವೀಶಕ್ತಿಯೆಂದು ಪೂಜಿಸಲಿಕ್ಕೆ ಪ್ರಾರಂಭಿಸಿದರೇ ಹೊರತು, ಅದರಲ್ಲಿ ಏನಿದೆಯೆಂದು ತಿಳಿದುಕೊಳ್ಳಲಿಕ್ಕೆ ಒಬ್ಬರೂ ಪ್ರಯತ್ನಿಸಲಿಲ್ಲ.ಇದೇ ಪರಿಣಾಮವಾಗಿಯೇ ನಮ್ಮಲ್ಲಿಯ ಸಾಯಿನ್ಸ್ ಪ್ರಗತಿಯನ್ನು ಹೊಂದದೇ ಇದ್ದದ್ದು. ದೊಡ್ಡ ದೊಡ್ಡ ಶಾಸ್ತ್ರಜ್ಞರು ಚರ್ಚಿಸುವುದರಲ್ಲಿಯೇ ತಮ್ಮ ಎಲ್ಲ ವೇಳೆಯನ್ನು ಕಳೆಯುತ್ತಿದ್ದಲ್ಲದೆ, ಪ್ರತ್ಯಕ್ಷ ನೋಡಿ ನೈಜಸ್ಥಿತಿಯನ್ನರಿಯಲಿಕ್ಕೆ ಯತ್ನಿಸುತ್ತಿದ್ದಿಲ್ಲ. ಇದರ ಒಂದು ಉತ್ತಮ ಉದಾಹರಣೆಯಿಂದರೆ:— ಒಂದು ಸಾರೆ ಒಬ್ಬ ರಾಜನ ಸಭೆಯಲ್ಲಿ 'ಕುದುರೆಗೆ ಹಲ್ಲುಗಳೆಷ್ಟು? ಎಂಬ ವಿಷಯದ ಬಗ್ಗೆ ಚರ್ಚೆ ನಡೆದಿತ್ತು. ವೇದ-ಶಾಸ್ತ್ರಗಳ ಆಧಾರದ ಮೇಲಿಂದ ಬೇರೆ ಬೇರೆ ವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಮಾಡಿದರು. ೫-೬ ತಾಸುಗಳ ವರೆಗೆ ಚರ್ಚೆ ನಡೆದರೂ ಯಾವುದೂ ನಿರ್ಣಯವಾಗಲಿಲ್ಲ. ಕಡೆಗೆ ಕೇಳುತ್ತಿದ್ದವರಲ್ಲಿ ಒಬ್ಬ ಸೂಚಿಸಿದನಂತೆ:— 'ಒಂದೆರಡು ಕುದುರೆಗಳನ್ನು ತಂದು ಅವುಗಳ ಹಲ್ಲುಗಳನ್ನು ಎಣಿಸಬಾರದೇಕೆ? ಇಷ್ಟು ಹೇಳಿಯಾದರೂ ಉಳಿಯುತ್ತದೆಯಲ್ಲವೇ?' ಎಂದು. ಕೂಡಲೇ ಎಲ್ಲ ವಿದ್ವಾಂಸರು ಅವನ ಕಡೆಗೆ ತುಚ್ಛ ದೃಷ್ಟಿಯಿಂದ ನೋಡಿ 'ಹಾಗೆ ನೋಡಿ ತಿಳಿಯಬೇಕಾದರೆ ನಿನಗೆ ವಿದ್ವಾಂಸನೆಂದು ಯಾಕೆ ಕರೆಯಬೇಕು?' ಎಂದು ಉದ್ಗಾರ ತೆಗೆದರಂತೆ.

ಗುಂಡುಮಾಮಾ ಹೇಳಿದರು; 'ಅಹುದು ರಂಗಣ್ಣ, ನೀನೆಂದದ್ದು ನಿಜ ಈ ಒಂದೆರಡು ಶತಮಾನಗಳಲ್ಲಿ ಪಾಶ್ಚಾತ್ಯರಿಗೆ ಗೊತ್ತಾದ ಸಂಗತಿಗಳು ನಮ್ಮ ದೇಶದ ಜನರಿಗೆ ಎಷ್ಟೋ ಶತಮಾನಗಳ ಹಿಂದೆಯೇ ಗೊತ್ತಿದ್ದರೂ, ಹೆಚ್ಚಿನ ಪ್ರಗತಿಯಾಗದೆ ನಮ್ಮ ದುರ್ದೈವದಿಂದ ಭಾರತವು ಹಿಂದುಳಿದ ರಾಷ್ಟ್ರಗಳಲ್ಲಿ ಗಣನೆಯಾಗಿದೆ. ಪರ ರಾಷ್ಟ್ರಗಳಿಗೆ ದಾರಿ ತೋರಬೇಕಾಗಿದ್ದ ಭಾರತವೀಗ ಉಳಿದ ರಾಷ್ಟ್ರಗಳಿಂದಲೇ ಸಹಾಯ ಪಡೆಯಬೇಕಾಗಿದೆ. ಆದರೆ ಒಂದೇ ಸಮಾಧಾನದ ವಿಷಯವೆಂದರೆ ಆಧ್ಯಾತ್ಮಿಕದಲ್ಲಿಯಾದರೂ ಪ್ರಗತಿಯನ್ನು ಹೊಂದಿದೆ. ಅದೇ ಉಳಿದವುಗಳಿಂಗಂತ ಮಹತ್ತ್ವದ್ದಲ್ಲವೇ?'

ರಂಗಣ್ಣ ನುಡಿದ: 'ಗುಂಡೂಮಾಮಾ, ನೀವು ಮೊನ್ನೆ ಮೊನ್ನೆ ಪಾಂಡೀಚೇರಿಯಿಂದ ಬಂದಿರುವಿರಿ. ಅದಕ್ಕಿಂತಲೇ ಈ ಮಾತು ಹೇಳುತ್ತಿರುವಿರಿ. ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದರಂತಪ ೩-೪ ಹೆಸರುಗಳ ಮೇಲಿಂದ ಇಡೀ ಭಾರತವೇ ಮುಂದುವರಿದಿದೆಯಂದು ಹೇಗೆ ಹೇಳುವಿರಿ? ಸ್ವಾರ್ಥ ಅಪ್ರಾಮಾಣಿಕತೆ, ಅಸೂಯೆ, ಮೋಸ ಇವು ಜನರಲ್ಲಿ ಹೆಚ್ಚೆಚ್ಚು ಬೇರೂರುತ್ತಿರುವಾಗ, ರಾಷ್ಟ್ರ ಮುಂದುವರೆಯುವ ಬಗೆ ಹೇಗೆ? ಇವುಗಳ ಕಾರಣದಿಂದಲೇ ನಾವು ಅಧಃಪತನಕ್ಕೆ ಇಳಿಯುತ್ತಿರುವುದು. ಎರಡು ವರ್ಷಗಳ ಹಿಂದೆ ದಿಲ್ಲಿಯಲ್ಲಿ ನಡೆದ ಔದ್ಯೋಗಿಕ ಪ್ರದರ್ಶನದಲ್ಲಿಯ ಒಂದು ಚಿಕ್ಕ ವಿಷಯವನ್ನೇ ಉದಾಹರಣೆಗಾಗಿ ಹೇಳಬಹುದು:— ಅಮೃತ ಧಾರಾ ಔಷಧ ಕಂಪನಿಯವರು ತಮ್ಮ ಔಷಧಿಗಳನ್ನೂ ಪ್ರದರ್ಶನಕ್ಕೆ ಇಟ್ಟಿದ್ದರು. ಮತ್ತು ಪ್ರಚಾರಕ್ಕೆಂದು ಸ್ಯಾಂಪಲ್ ಬಾಟಲಿಗಳನ್ನು ಎರಡೇ ಆಣೆ ಬೆಲೆಗೆ ಇಟ್ಟಿದ್ದರು. ಆದರೆ ಅದಕ್ಕೆ ಒಂದು ವಿಶಿಷ್ಟ ಕ್ರಮವನ್ನು ಅನುಸರಿಸಿದ್ದರಂತೆ. ಮಾರುವುದಕ್ಕೆ ಅಲ್ಲಿ ಯಾರೂ ಇರಲಿಲ್ಲ. ನೀವು ಬೇಕಾದಷ್ಟು ಬಾಟಲಿಗಳನ್ನು ತೆಗೆದುಕೊಂಡು ಅಲ್ಲಿಯೇ ಇಟ್ಟ ಪೆಟ್ಟಿಗೆಯಲ್ಲಿ ಅವುಗಳ ಬೆಲೆಯನ್ನು (ಬಾಟಲಿಗೆ ಎರಡಾಣೆಯಂತೆ) ಹಾಕುವುದು. ಅಲ್ಲಿ ಕಂಡು ಬಂದದ್ದೆಂದರೆ ಪ್ರತಿ ದಿವಸ ಇಟ್ಟ ಬಾಟಲಿಗಳೆಲ್ಲ ಮುಗಿದು ಹೋಗಿ, ಪೆಟ್ಟಿಗೆಯಲ್ಲಿ ಕೆಲವು ಆಣೆಗಳು ಮಾತ್ರ ಇರುತ್ತಿದ್ದುವಂತೆ.'

ಕಿಟ್ಟು ನಡುವೆಯೇ ಹೇಳಿದ: 'ರಂಗಣ್ಣ. ಆ ಹಣವಾವರೂ ಜನರ ಪ್ರಾಮಾಣಿಕತೆಯ ಗುರುತಿನದಲ್ಲ. ಆದರೆ ಕೆಲವರಲ್ಲಿ ಮೂಢ ನಂಬಿಕೆಯೊಂದಿದೆ— ಹಣ ಕೊಡದಿದ್ದರೆ ಔಷಧಿ ಗುಣಕಾರಿಯಾಗುವುದಿಲ್ಲವೆಂದು, ಅದಕ್ಕಾಗಿ ಆ ಹಣ ಕೊಟ್ಟದ್ದು.'

ಕಿಟ್ಟುವಿನ ಮಾತಿಗೆ ನಮಗೆಲ್ಲ, ನಗೆ ತಡೆಯುವುದಾಗಲಿಲ್ಲ. ಗುಂಡೂ ಮಾಮಾ ಸಹ ನಗುತ್ತ ಹೇಳಿದರು. 'ಇದೊಂದರಲ್ಲೆಯೆಂತಲ್ಲ. ಪ್ರತಿಯೊಂದರಲ್ಲಿಯೂ ಈ ತರದ ವರ್ತನೆ ಕಂಡು ಬರುತ್ತದೆ. ವ್ಯಾಪಾರ, ಉದ್ಯೋಗ, ಸರಕಾರಿ ನೌಕರಿಗಳಲ್ಲಿಯಂತೂ ಇವು ಹೆಚ್ಚಾಗಿ ಕಂಡುಬರುತ್ತವೆ. ಇವೆಲ್ಲ ಮನುಷ್ಯರಲ್ಲಿಯ ಸ್ವಾಭಾವಿಕ ಗುಣಗಳೇ. ಕೆಲವರಲ್ಲಿ ಹೆಚ್ಚು ಪ್ರಮಾಣದಲ್ಲಿದ್ದರೆ, ಮತ್ತೆ ಕೆಲವರಲ್ಲಿ ಕಡಿಮೆ ಪ್ರಮಾಣದಲ್ಲಿ ಕಂಡು ಬರಬಹುದು. ಅಷ್ಟೆ! ಯಾರಲ್ಲಿಯಾದರೂ ಇವು ಯಾವುವೂ ಇಲ್ಲವಾದರೆ, ಅವನು ಮನುಷ್ಯನಾಗಿ ಉಳಿಯುತ್ತಿರಲಿಲ್ಲ, ದೇವತ್ವವನ್ನೇ ಹೊಂದುತ್ತಿದ್ದನು.'

'ಅದೇನೇ ಇರಲಿ ಗುಂಡುಮಾಮಾ, ವಿಷಯ ಎಲ್ಲಿಯೋ ಪ್ರಾರಂಭವಾಗಿ ಹಿಸು ಮನುಷ್ಯನನ್ನು ದಾಟ ಇಲ್ಲಿಯವರೆಗೂ ಬಂದಿತು. ಆದರೆ ನಿಮ್ಮ ಮಿತ್ರರ ವಿಷಯವಾಗಿ ಏನೂ ಹೇಳಲೇ ಇಲ್ಲವಲ್ಲ?' ಎಂದು ರಂಗಣ್ಣ ಕೇಳಿದ.

'ಅದನ್ನೇ ಯೋಚಿಸಿದ್ದೆ. ಆದರೆ ಹರಟೆಯ ಹಣೆಯ ಬರೆಹವೇ ಹೀಗೆ. ಈ ಶಿನಪ್ಪನಿಂದ ವಿಷಯ ಬೇರೆ ಕಡೆಗೆ ತಿರುಗಿತು. ನನ್ನ ಆ ಮಿತ್ರರ ಪುಣ್ಯದಿಂದ ಈ ಸಾರಿ ನನಗೆ Republic Dayದ ದಿವಸವೇ ದಿಲ್ಲಿಯಲ್ಲಿರುವ ಸುಯೋಗ ಲಭಿಸಿತು ಮತ್ತು ಹೆಚ್ಚು ದಿವಸ ಅಲ್ಲಿ ಇರುವಂತೆಯೂ ಆಯಿತು ಅಂತೂ ನಾನು ಮೊದಲು-೧೯೪೪ರಲ್ಲಿ ನೋಡಿದ್ದ ದಿಲ್ಲಿಗೂ ಈಗಿನದಕ್ಕೂ ಬಹಳೇ ಅಂತರವಿದೆ.' ಎಂದು ಗುಂಡೂ ಮಾಮಾ ಹೇಳುತ್ತಿರುವಾಗಲೇ ರಾತ್ರಿ ಹತ್ತರ ಗಂಟೆ ಕೇಳಿಸಿತು.

ಇನ್ನೇನು! ಎಲ್ಲರೂ ಸೂಟ ಮುಗಿಸಿಕೊಂಡು ಬಂದಿದ್ದೇವೆ. ದಿನಾಲು ನಮ್ಮ ಕ್ಲಬ್ ಕೂಡಬಹುದು. ನಾಳೆ ಸಂಜೆ ಇದರ ಬಗ್ಗೆ ಹೇಳುತ್ತೀನೆಂದು ಗುಂಡೂಮಾಮಾ ಹೇಳಿದರು. ನಾವೆಲ್ಲ ಮನೆಯ ಕಡೆಗೆ ತೆರಳಿದೆವು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಧಾರವಾಡ

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್ ರಿಪೇರಿ ಮಾಡುವವರು; ರಿಪೇರಿ ಮಾಡುವವರು.

ನಂಬುಗೆಯ ಮಾಲು ! ಪ್ರಾಮಾಣಿಕ ವ್ಯವಹಾರ !

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಲಲಿತ ಪ್ರಬಂಧದ

ಸ್ವರೂಪ, ಬೆಳವಣಿಗೆ

(ವಿಹಂಗಾವಲೋಕನ)

ಡಿ ಎನ್. ಎಸ್. ಗದಗಕರ, ಬಿ. ಎ.
ಧಾರವಾಡ

ಲಲಿತಪ್ರಬಂಧಜಾತಿಯು ಸಾಹಿತ್ಯ ನಮ್ಮ ನಾಡಿನಲ್ಲಿಯೂ ಇದೀಗ ರೂಪುಗೊಳ್ಳುತ್ತಲಿದೆ. ಈ ಬಗೆಯ ಸಾಹಿತ್ಯದ ಮೇಲ್ಮೈ, ಅದರ ನಿರ್ಮಾತೃವಿನ ಹರಿತ ಬುದ್ಧಿ, ಲೋಕಾನುಭೂತಿ, ಸಾಮಾಜಿಕ ಪ್ರಜ್ಞೆ, ಭಾಷಾನೈಪುಣ್ಯ ಇವುಗಳನ್ನು ಅವಲಂಬಿಸಿರುತ್ತದೆ.

'Literature is the expression of personality, the echo of the soul; and the writer accordingly expresses ideas and feelings personal to himself'— ಎಂಬ ಆಂಗ್ಲವಿಮರ್ಶಕರ ಸಾಹಿತ್ಯ ವ್ಯಾಖ್ಯೆಯವನ್ನು ಸಮಾಲೋಚಿಸುವಾಗ, ಇದೇ ಸಾಹಿತ್ಯ ಸೃಷ್ಟಿಯ ಒಂದು ಪ್ರಮುಖ ಅಂಗವಾದ ಲಲಿತ ಪ್ರಬಂಧಕ್ಕೂ ವ್ಯಕ್ತಿತ್ವ ನಿರೂಪಣೆ ಜೀವಾಳವೆಂಬ ಅರಿವು ಸ್ಥೂಲವಾಗಿ ಯಾರಿಗೂ ಆಗುವುದುಂಟು. ಪ್ರಬಂಧವೆಂಬ ಪ್ರಕಾರದಲ್ಲಿ ಚಿಂತನಪರ, ವರ್ಣನಪರ, ವಿಚಾರ ಪ್ರಚೋದಕ, ವ್ಯಂಗ್ಯ, ಕಥನಪರ, ಆತ್ಮ ಚರಿತ್ರ— ಎಂದು ವಿಭಾಗಗಳನ್ನು ಅನುಭವದಿಂದ ಕಲ್ಪಿಸಿಕೊಂಡರೂ, ಪ್ರಬಂಧಕ್ಕೆ (essay) ಲಾಲಿತ್ಯದ ಒಪ್ಪ ದೊರೆತಾಗ ಅಲ್ಲಿ ಬಿಗುಹು, ಬಂಧನ, ಕ್ರಮಬದ್ಧತೆಗಳಿಗೆ ಮನ್ನಣೆ ಕಡಿಮೆಯೇ ಆಗುವುದು. ಆದರೂ ಕಟ್ಟುನಿಟ್ಟಿಗಾಗಿ ಬೇಜಾರು ತಲೆದೋರಿತೆಂದು ಪ್ರಬಂಧಕಾರನು ಅಸ್ತವ್ಯಸ್ತತೆ- ಅಸಂಬದ್ಧತೆಗೆ ಎಂದೂ ಮೊರೆಹೋಗಕೂಡದು ಹಾಗಾದರೆ ಸಾಹಿತ್ಯದ ಕಾರ್ಯರಂಗಕ್ಕೇ (Function) ಚ್ಯುತಿ ಬಂದೀತು! ಅಂತಹ ನಿರ್ಮಾತೃ (?) ಸಾಹಿತಿಯೇ ಆಗಲಾರ. ಅಂತೇ 'Lack of restraint' ಎಂಬ ಲಕ್ಷಣ ಲಲಿತ ಪ್ರಬಂಧಕ್ಕೆ ವಿಶೇಷವಾಗಿ ಅನ್ವಯಿಸುವುದು ಎಂಬಲ್ಲಿ ತಥ್ಯಾಂಶವೇ ಹೆಚ್ಚು. ಹೀಗೆ ಪ್ರಬಂಧಕ್ಕೆ 'ಲಘು' ಎಂಬ ಪದ ಜೋಡಿಸಿದಾಗ, ಆ ಬರೆವಣಿಗೆ ಚಿಕ್ಕದಾಗಿರಬೇಕೆಂಬ ತಪ್ಪು ಕಲ್ಪನೆ ಮಾಡಿಕೊಳ್ಳದೆ, ಅಲ್ಲಿ ವೇದಾಭ್ಯಾಸ ಜಡತೆ ಕಡಿಮೆಯಾಗಿ ಕ್ರಮೇಣ ಹಗುರುತನ, ಸ್ವಚ್ಛಂದತೆ ಲಹರಿ ಆಡಿ ಇಡಬೇಕೆಂಬ ವಿಚಾರವನ್ನು ನಾವು ಮೈಗೂಡಿಸಿಕೊಳ್ಳಬೇಕಾಗಿದೆ. ಮೇಲಿನ ಈ ವಿವೇಚನೆಯಿಂದ ಇತಿ ಹಾಸದ ಟಿಪ್ಪಣಿಗಳಾಗಲಿ, ಚಾಚೂ ತಪ್ಪದೆ ಹೇಳಿದ ವರದಿಯಾಗಲಿ ಎಂದೂ ಪ್ರಬಂಧ ಕ್ಷೇತ್ರದಲ್ಲಿ ಬರಲಾರವು.

ಆಂಗ್ಲ ಸಾಹಿತ್ಯದಿಂದಲೇ ಕನ್ನಡದ ಮನೆಗೆ ಬಂದ, ಮೊದಲು ಪರಕೀಯಳಂತೆ ಬೆಳೆದು ಹಿಂದುಗಡೆ ಅದರ ಅಭಿಮಾನಗಳಿಗೆ ಪಾತ್ರಳಾದ ನವವಧುವಿನಂತಿದ್ದ— ಈ ಪ್ರಬಂಧ, ನಿಜವಾಗಿಯೂ ಮನೋರಂಜಕವಾದ ಸ್ಥಿತ್ಯಂತರಗಳನ್ನೊಳಗೊಂಡಿದೆ. ಆಂಗ್ಲ ಸಾಹಿತ್ಯದಲ್ಲಿಯೇ ಮೊಟ್ಟ ಮೊದಲು ಇದು ಅತಿ ಬಿಗುವಿನದಿದ್ದಿತು. ಫ್ರಾನ್ಸಿಸ್ ಬೇಕನ್ನರ "of Truth, of Gardens" ಬರೆವಣಿಗೆಗಳೇ ಇದಕ್ಕೆ ಸಾಕ್ಷಿ! ಎಂತಹ ಸೂತ್ರವತ್ತಾದ ಬರೆವಣಿಗೆ! ಏನು ಪ್ರಗಲ್ಭ ಕಲ್ಪನೆ! ಪ್ರತಿ ಮಾತೆಂದರೆ ಉಕ್ಕಿನ ಕಡಲೆಯೇ— ಎಂಬ ಗತಿ ಆ ಲೇಖನಗಳಿಗಿತ್ತು. ಕಾಲ ಗತಿಸಿತು. ಸಾಮಾಜಿಕ ಪ್ರಜ್ಞೆ ಮೂಡಿದಂತೆಲ್ಲ, ಸೂರ್ಯನ ಕಿರಣಸ್ಪರ್ಶದಿಂದ ಮಂಜಿನ ಮುತ್ತುಗಳು ಮಾಯವಾಗುವಂತೆ ಹಿಂದಿನ ಬಂಧನ ಹೇಳಹೆಸರಿಲ್ಲದಾದುವು —ಭಾರತ ಮಾತೆಯ- ಹಿಂದಿನ- ೩೩ ಕೋಟಿ (?) ಮಕ್ಕಳಂತೆ! ಅಡಿಸನ್ನನ ಕಾಲಕ್ಕೆ ಕೊಂಚ ಕತೆಯ ಛಾಯೆ ಬಡಿಯಿತು ಪ್ರಬಂಧಕ್ಕೆ. ಆದರೆ 'Vision of Mirza'ದಲ್ಲಿಯಂತೆ ತಾತ್ವಿಕತೆ ಹಿಂದೆ ಸರಿಯಲಿಲ್ಲ. ಡಾಕ್ಟರ ಜಾನ್ಸನ್ನರು ಕೇವಲ ಪಾಂಡಿತ್ಯ ಪ್ರದರ್ಶನಕ್ಕೆ ಈ ಸಾಹಿತ್ಯಪ್ರಕಾರವನ್ನು ಪ್ರಯೋಗಿಸಿದರೂ, ಮುಂದಿನ ಸ್ವಿಫ್ಟ್, ಸ್ಟೀಲರು ವ್ಯಂಗ್ಯತೆಗೆ, ಸಮಾಜ ದರ್ಶನಕ್ಕೆ ಇದೊಳ್ಳೆ ರಂಗವೆಂದು ಮನಗಾಣಿಸಿಕೊಂಡರು. ಆಲಿವ್ಹರ್ ಗೋಲ್ಡ್‌ಸ್ಮಿಥ್‌ನ ಕೈಹತ್ತಿದಾಗಂತೂ ಪ್ರಬಂಧದ ಬಣ್ಣವೇ ಬದಲಿಸಿಹೋಗಿತ್ತು. ಕಂಪನಿ ನಾಟಕದ ಟ್ರ್ಯಾನ್ಸಫರ್ ಸೀನ್ ಆಗಿತ್ತೆನ್ನಿರಿ ಬೇಕಾದರೆ! "He touched nothing that he did not adorn" ಎಂಬಂತೆ ಗೋಲ್ಡ್‌ಸ್ಮಿಥ್‌ನ 'City Night Peace' ಎಂಬುದು ನಿಜವಾಗಿಯೂ ಚಿರಂತನ ಉನ್ಮಾದದ ಸೆಲೆಯ ಬರೆವಣಿಗೆಯಾಗಿ ಪರಿಣಮಿಸಿದೆ. ಲೇಖಕನ ಕಳಕಳಿಗೆ ಶ್ರದ್ಧೆಗೆ ಸೀಮೆ ಇಲ್ಲ. ಹೃದಯವನ್ನೇ ತೆರೆದಿಟ್ಟಂತೆ ಅಲ್ಲಿ ಓದುಗನಿಗೆ ಭಾಸವಾಗದೇ ಹೋಗದು. ಲ್ಯಾಂಬ್-ಹ್ಯಾಜ್ಲಿಟ್ಟರಂತೂ ಆಂಗ್ಲ ಪ್ರಬಂಧಕಾರರಲ್ಲಿ ರಾಜಠೀವಿಯನ್ನು ಅಳವಡಿಸಿಕೊಂಡವರೆಂದು ಹೇಳುವರು. ತೀರ ಇತ್ತೀಚಿನ ಗಾರ್ಡಿನರ್, ಬೆಲಾಕ್, ಲ್ಯೂಕಸ್, ಲಿಂಡರಂತೂ ಇಪ್ಪತ್ತನೆಯ ಶತಮಾನದ ಆಂಗ್ಲಪ್ರಬಂಧ ಸಾಹಿತ್ಯದ ಸೀಮಾಪುರುಷರೆಂದು ಮೆರೆದಿದ್ದಾರೆ.

ಇಷ್ಟೊಂದು ಐತಿಹಾಸಿಕ ಹಿನ್ನೆಲೆಯೊಡನೆ ಪ್ರಬಂಧಸಾಹಿತ್ಯದ ಅಂತರಂಗವನ್ನೇ ಒಳಹೊಕ್ಕು ನೋಡಹೊರಟರೆ, ಒಬ್ಬ ಸಹೃದಯ ರಸಿಕ ಸಾಹಿತಿ, ಸಂತೆಯ ಚಿಂತೆ ಮರೆತಾಗ— ಸಿಗರೇಟು ಸೇದುತ್ತಲೋ, ಚಹ ಕುಡಿಯುತ್ತಲೋ, ಸಾಧ್ಯವಿದ್ದರೆ ಎಲೆ ಅಡಿಕೆ ತಂಬಾಕಿನ ಬಾರು ಮಾಡಿಕೊಂಡೇ (ಇಂತಹ ಅಥವಾ ಏತತ್ಸದೃಶ ಚಟಗಳು ಇದ್ದುದಾದರೆ!) ಇದ್ದಾಗ, ತಲೆಯಲ್ಲಿ ಸುರುಳಿಸುರುಳಿಯಾಗಿ ಮೂಲೆಮೂಲೆಯಾಗಿ ಬಂದ ವಿಚಾರದ ಅಲೆಗಳೇ ಪ್ರಬಂಧಕ್ಕೆ

ಪೂರ್ವ ಪೀಠಿಕೆ–ವಸ್ತುವಾಗುವುವು. ಅಂತೂ ಈ ಲೇಖಕನಿಗೆ ಗೋಚರವಾಗದ ವಿಷಯವೇ ಇಲ್ಲ ಪ್ರಬಂಧಕ್ಕೆ! "Any peg will do to hang the hat on" ಎಂಬ ಉಕ್ತಿಯೇ ನಿಜ. "From the waste Paper up to the Star in the firmament" ಎಂಬುದೂ ಇದರ ವ್ಯಾಪ್ತಿಯ ಸೀಮೆಯನ್ನೇ ಬಣ್ಣಿಸುತ್ತದೆ.

ಕನ್ನಡ ಪ್ರಬಂಧ ಸಾಹಿತ್ಯದ ಭವಿಷ್ಯದ್ಪ್ರಶ್ನೆ ಎತ್ತುವುದಕ್ಕಿಂತ ಅದರ ಬೆಳೆವಣಿಗೆಯ ಬಗೆಗೆ ಕೊಂಚ ಮಾತಾಡಿದರೆ ಸೂಕ್ತವೆನಿಸೀತು. ಹಾಗಾದಾಗ ಅಲ್ಲಿಯ ವಿವಿಧ ಪ್ರಯೋಗ, ಎಂಥ ವಾಚಕನ ಕುತೂಹಲವನ್ನೂ ಕೆರಳಿಸದೇ ಹೋಗದು.

ಬೆಕ್ಕಸಗೊಳಿಸುವ ವೈವಿಧ್ಯ, ವಿಸ್ತಾರ, ಸ್ವಾಭಾವಿಕತೆ, ವ್ಯಂಗ್ಯ, ಕಲ್ಪನಾ ವಿಲಾಸ— ಮೊದಲಾದ ಲಕ್ಷಣಗಳ ಮಾನದಿಂದ ಅಳೆಯ ಹತ್ತಿದಾಗ, ಶ್ರೀರಂಗರ (ಶ್ರೀ ಅದ್ಯ ರಂಗಾಚಾರ್ಯ, ಎಂ. ಎ., ಲಂಡನ್) ಬರವಣಿಗೆ ನಮ್ಮ ಕಣ್ಕಟ್ಟುವದು. "ರೆ, ಕಟ್ಟು ಅಥವಾ ಬಕ್ಕಟ್ಟು, ಶಿಕ್ಷಣವೆಂಬ ಶತಕ್ರಮ, ಸ್ವಲ್ಪದರಲ್ಲಿ ಸ್ವಾರಸ್ಯ, ದೋಸೆಯ ಪ್ರಾಣಹಿಂಸೆ, ಬರೆಹಗಾರನ ಬಜೆಟ್ಟು—" ಮೊದಲಾದ ಲಘು ಪ್ರಬಂಧಗಳಲ್ಲಿ ಅವರ ಸಾಮಾಜಿಕ ವಿಡಂಬನೆಗೆ ವಿಶೇಷ ಎಡೆ ದೊರೆತಿದೆ. ಜನನಾಯಕರ ಬಗೆಗೂ ಅವರು ತಮ್ಮ ವಿಚಾರಲಹರಿಯನ್ನು ಹರಿಬಿಟ್ಟಿರುವರು. ತಮ್ಮ ಬಾಲ್ಯನಿಕ ವ್ಯಕ್ತಿಗಳಿಗಾಗಿ ಶ್ರೀರಂಗರು ನಗೆ ತರಿಸಿದರೂ ಸಹಜ ಸಹಾನುಭೂತಿಗೆ ಕೊರತೆ ಕಾಣದು. ಕೇವಲ ಶಿರೋನಾಮೆ ಓದಿದರೂ ವಿಷಯಗಳ ಗಾಢ ಪರಿಜ್ಞಾನ ನಮಗಾಗುವುದು. 'ಋತು ಸಂಹಾರ'ದ 'ವರ್ಷಾಕಾಲದ ವಾಮನಾವತಾರ'ವೆಂಬ ಅವರ ಪ್ರಬಂಧದಲ್ಲಿ ನಗರ ಸಭೆಯ ಸಾರ್ವಜನಿಕ ಬೀದಿಗಳನ್ನು ಕುರಿತು ನಗೆಯಾಡಿದ್ದಾರೆ. "ಮಳೆ ಎಷ್ಟು ಇಂಚಾಯಿತೆಂಬುದನ್ನು ಲೆಕ್ಕ ಹಾಕಲು ಮಾಪು ಬೇಡ; ಅದರ ಮೊಚ್ಚೆ ಹಾಕಿಕೊಂಡು ಅಡ್ಡಾಡುವ ಜನರ ಉಡಿಗೆ-ತೊಡಿಗೆಯ ನೋಲಿನ ಕೆಸರಿನ ಕಲೆ ಅಳೆದರೆ ಸಾಕು" ಎಂದು ಹೇಳಿರುವರು. ಹಾಗೆಯೇ ಮೂರನೆಯ ತರಗತಿಯ ಪ್ರವಾಸಿಕರ ಗೋಳನ್ನು ಚಿತ್ರಮಯವಾಗಿ ಬಣ್ಣಿಸಿರುವರು. ಅಲ್ಲಿಯ ಗದ್ದಲದಲ್ಲಿ ಜನರ ಕಿಸೆಯಲ್ಲಿಯ ಪಾವಲಿ ರೂಪಾಯಿ ಆಯಿತಂತೆ! ಅದನ್ನೇ ಪುರಿಭಾಜಿ ಮಾಡುವವ ಸ್ವೀಕರಿಸಿ ಮರಳಿ ಚಿಲ್ಲರೆ ಸರಿಯಾಗಿ ಕೊಟ್ಟನಂತೆ! ವ್ಯಂಗದ ವಿಶಿಷ್ಟ ಮಾದರಿಯಿದು!

ಕೋ. ಶಿ ಕಾರಂತರ ಹಾಸ್ಯದ ಬಗೆ ಹೆಚ್ಚು ಕಡಿಮೆ ಇದೇ-ಯಾದರೂ ಅವರ ಹರಟೆಗಳು ಉದರಕ್ಕೆ ಸಿಹಿ ಅಧರಂಕ್ಕೆ ಕಹಿ! ಇವರ ಪ್ರಾಣಿ 'ಜೀವನ ಪ್ರಬಂಧಗಳು,' ಕಾಲ್ಪನಿಕ ವ್ಯಕ್ತಿ ವಿವೇಚನೆಗಳು, ಕೊಂಚ ತೀಕ್ಷ್ಣ ವ್ಯಂಗ್ಯದಿಂದೊಡಗೂಡಿ ಸಮಾಜದರ್ಶನ ಮಾರ್ಗದಲ್ಲಿ ಅತ್ಯಂತ ಸಹಾಯಕಾರಿಯಾದುವು. 'ಮೈಲುಕಲ್ಲಿನೊಡನೆ ಮಾತು ಕತೆ' ಎಂಬ ಇವರ ವ್ಯಂಗ್ಯಪ್ರಬಂಧ ಸಂಕಲನೆಯು ಕನ್ನಡ ಲಲಿತ ಪ್ರಬಂಧ ಪ್ರಪಂಚಕ್ಕೇ ನೂತನವಾದದ್ದು. ಓದುಗನಲ್ಲಿ ಜಾಗೃತಿಯುಂಟು ಮಾಡುವ ಶಕ್ತಿ ಅಲ್ಲಿದೆ. ದೋಷ ಎತ್ತಿತೋರುವ ಧ್ಯೇಯವಿದ್ದೇ ಇದೆ.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ 'ಹರಟೆಯ ನುಲ್ಲು' ಎಂಬ ಹೆಸರಿನಿಂದ ಬರೆಯುತ್ತಿದ್ದ ಸಿದ್ಧವ್ವನಹಳ್ಳಿ ಕೃಷ್ಣಶರ್ಮರ ಬರೆಹಗಳು ಅಂದಿನ ಜಯಕರ್ನಾಟಕದ ವಾಚಕರಿಗೆ ಅತೀವ ರುಚಿಸುತ್ತಿದ್ದವು. ಕೃಷ್ಣಶರ್ಮರ ಗದ್ಯದ ಸವಿ ಬಲ್ಲವರಿಗೆ ಅವರ ಹರಟೆಗಳ ಮೋಹಕತೆ ವಿವರಿಸಿ ಹೇಳುವ ಅಗತ್ಯವಿಲ್ಲ.

ಶ್ರೀ ಪು. ತಿ. ನರಸಿಂಹಾಚಾರ್ಯರು, ಶ್ರೀನಿವಾಸರು, ವಿ. ಸೀ. ಅವರು— ಹೆಚ್ಚು ಮನ ಹರಿಬಿಡದಿದ್ದರೂ ಲಾಲಿತ್ಯಗುಣ ಓತಪ್ರೋತವಾಗಿ ಅವರ ಪ್ರಬಂಧಗಳಲ್ಲಿ ಹರಿಯುತ್ತಿರುತ್ತದೆ. ವಿಚಾರಕ್ಕೆ, ಆತ್ಮೀಯತೆಗೆ ವಿಶೇಷ ಪ್ರಾಧಾನ್ಯವುಂಟಾದುದರಿಂದ ಅವರ ಪ್ರಬಂಧ ಓದುವಾಗ ಒಳ್ಳೆ ಭಾವಗೀತೆ(Lyric)ಯ ನೆನಪು ಮಿಂಚಿ ಹೋಗುವದು. ಪ್ರಾಧ್ಯಾಪಕ ವಿ. ಕೆ. ಗೋಕಾಕ ಬಿ.ಎ. (ಆಕ್ಸ್‌ನ್) ಅವರ "ವನಮಾಲೆಗೆ ಓಲೆ"ಗಳಾದರೂ ಇದೇ ಬಗೆಯವು. ಆದರೆ ನಿತ್ಯ ವ್ಯವಹಾರದ ತೀರ ಉಪಯುಕ್ತ ಮಾತುಗಳ ಊಹಾಪೋಹ ಅಲ್ಲಿ ಕಣ್ಕಟ್ಟುವದು. ಆದರೂ, ಮನಸೋಕ್ತ ನೀತಿಬೋಧೆಗೆ (Didacticism) ಅಲ್ಲಿ ಎಡೆ ದೊರೆಯದಿದ್ದುದು ಅತಿ ಸ್ತುತ್ಯನೆನಿಸಿದೆ. ಜಾಗತಿಕಜ್ಞಾನ ಅನುಭವಗಳ ನಿಧಿಯೇ ಆ ಹೊತ್ತಿಗೆ! 'ಮಗಳಿಗೆ ತಂದೆಯ ಓಲೆಗಳು' ಎಂಬ ಅನುವಾದಿತ ಪ್ರಬಂಧ ಮಾಲೆಯ ನೆನಪು ಈಗ ಸುಳಿಯದಿರದು.

'ಅಣುವಿನಲ್ಲಿ ಮಹತ್ತನ್ನು, ಮಹತ್ತಿನಲ್ಲಿ ಅಣುವನ್ನು ಕಾಣುವದು' ಹರಟೆಯ (Personal essay) ಲಕ್ಷಣವೆಂದಾಗ, ಶ್ರೀ ದ. ರಾ. ಬೇಂದ್ರೆಯವರ ಬರಹಗಳು ಒಳ್ಳೇ ನಿದರ್ಶನಗಳಾಗಿ ಪರಿಣಮಿಸುವವು. ಕಸಬರಿಗೆ, ಉಗುಳುವದು, ಸಾವಿನ ಕೂಡ ಸರಸ– ಇಂತಹ ಹಲವೇ ಈ ಮಾತಿಗೆ ಮಾದರಿಗಳು. ಸೂತ್ರವತ್ತಾದ ಮಾತುಗಾರಿಕೆ, ಪರಿಶುದ್ಧ ನಗೆ, ಸಹಜ ಪಾಂಡಿತ್ಯ, ವಿಚಾರ ಸ್ಫೂರ್ತಿಪಕತೆ ಎಲ್ಲ ಎಂಥ ಓದುಗನನ್ನೂ ದಂಗುಬಡಿಸಿ ತಲೆದೂಗಿಸುವವು. ಪ್ರೊ ರಂ. ಶ್ರೀ. ಮುಗಳಿಯವರ 'ನಾದುರಸ್ತ' ಎಂಬ ಲಲಿತಪ್ರಬಂಧ, ವಿಚಾರಲಹರಿಯ ಅಲೆ, ಭಾಷೆಯ ಸಹಜ ಏಸಿರಿ, ಹರಹಿನ ದೃಷ್ಟಿಯಿಂದ ಮಾರ್ಮಿಕ ಬರವಣಿಗೆಯಾಗಿ ಪರಿಣಮಿಸಿದೆ.

ನಾ ಕಸ್ತೂರಿಯವರ 'ಜೊಂಕುಬಾಲ' ನಿಜವಾದ ಹರಟೆಗಳ ಸಂಕಲನ. ಲಘು ಬರೆಹಗಳ ರಹಸ್ಯ, ಸೌಂದರ್ಯ ಅಲ್ಲಿ ಅಡಗಿವೆ. ಜೀವನದ ನಿರಾಶೆ ಹೊಡೆದೋಡಿಸಿ ನಗೆಯ ಕಾರಂಜಿ ನಿರ್ಮಿಸಿ ಸ್ಫೂರ್ತಿಯನ್ನು ತುಂಬಲು ಅವರ ಕೊರವಂಜಿ ಪತ್ರಿಕೆಯು ಸೇವೆ ಹಿರಿದಾಗಿದೆ. ಅಲ್ಲಿಯ ಬಿಸ್ರಾ, ಡಾ. ಶಿವರಾಮು, ದಾಶರಥಿ ದೀಕ್ಷಿತ, ನಾಡಗೀರ ಕೃಷ್ಣರಾಯರು, ಬಿ. ಎ. ಸನದಿ, ಮಂಜುನಾಥ (ಪುಸ್ತಕ ಬಿಡು ಎಂದು ಹೇಳಿದನರು)–ಮೊದಲಾದವ ಮಹನೀಯರು ಅಮೌಲ್ಯ ಸಾಹಿತ್ಯಸೇವೆ ಸಲ್ಲಿಸಿದುದುಂಟು. ಇತ್ತೀಚಿನ ವಿನೋದ ಪತ್ರಿಕೆ

(ಉಳಿದದ್ದು ಪುಟ ನೋಡಿರಿ)

ಯಾರ ಹೊಲ?

(ಒಂದು ಜೀವನ ಕಥೆ)

ಶ್ರೀ ಅನಂತರಾವ ಕೆ. ಭೋಸಗೆ
ಸೇಡಬಾಳ

ಇಂದಿನ ನಮ್ಮ ಹಳ್ಳಿಯ ಜೀವನದ ವಾಸ್ತವ ಚಿತ್ರವಿದು. ಹಳ್ಳಿಯಲ್ಲಿ ಧುರೀಣರೆಂದು ಮೆರೆಯುವ ಗೋಮುಖವ್ಯಾಘ್ರಗಳು, ಅಡಿವೆಪ್ಪನಂತಹ ನಿಷ್ಪಾಪಿ-ನಿರ್ಬಲರನ್ನು ಹೇಗೆ ಭಕ್ಷಿಸಿ ಬಾಯಾಡಿಸುತ್ತಿವೆಯೆಂಬುದನ್ನು ಇದರಲ್ಲಿ ನಾವು ಕಾಣುವೆವು. ಇಂತಹ ಜೀವನ ಇಂದಿನ ಸ್ವತಂತ್ರ ವಾತಾವರಣದಲ್ಲಿ ಹೆಚ್ಚಾಗಿದೆ.

ಅಡಿವೆಪ್ಪ ಅಂದು ಹೊರಲಾರದ ಮೇವಿನ ಹೊರೆ ಹೊತ್ತು ಕೊಂಡು, ಲಗುಬಗೆಯಿಂದಲೇ ಮನೆಗೆ ಬಂದನು. ಮೆಲುಕಾಡಿಸುತ್ತ ಕೊಟ್ಟಿಗೆಯಲ್ಲಿ ಮಲಗಿದ ಎತ್ತು ಎದ್ದುನಿಂತಿತು ಬಳಿಯಲ್ಲಿ ಕಟ್ಟಿದ ಎಮ್ಮೆಯಂತೂ ಗೋಣುಹಾಕುತ್ತ ತನ್ನ ಬೇಡಿಕೆಯನ್ನು ಬಲವಾಗಿ ಸೂಚಿಸಲಾರಂಭಿಸಿತು ಪಡಸಾಲೆಯಲ್ಲಿ ಮೇವಿನ ಹೊರೆಬಿದ್ದ ಸಪ್ಪಳ ಕೇಳಿ, ರೊಟ್ಟಿಯ ಹಿಟ್ಟು ನಾದುತ್ತಿದ್ದ ಬಾಳವ್ವ, ನೀರಿನ ತಂಬಿಗೆಯೊಡನೆ ಹೊರಗೆ ಬಂದಳು. ಗಂಡನ ಮುಖದೆಡೆಗೆ ನೋಡಿದ ಅವಳಿಗೆ, ಅವನ ಸೋತ—ಕಳೆಗುಂದಿದ—ಮೊಗ, ಅವಳಲ್ಲಿ ಗಾಬರಿಯನ್ನು ಹುಟ್ಟಿಸಿತೇನೋ! ಒಮ್ಮೆಲೇ ಅವನನ್ನು ಮಾತ ನಾಡಿಸುವ ಧೈರ್ಯವಾಗಲಿಲ್ಲ ಮೂಕ ಭಾವದಿಂದ ಕ್ಷಣಹೊತ್ತು ತನ್ನ ಪತಿಯನ್ನೇ ದಿಟ್ಟಿಸಿ ನೋಡಿದಳು; ಹಾಗೆಯೇ ಮೇವಿನ ಹೊರೆಯ ಮೇಲೆಯೂ ದೃಷ್ಟಿ ಸರಿಯಿತು; ಮಾತಿಗೆ ಅನುಕೂಲವೂ ಆಯಿತು.

"ಕೆಳಗಿನ ಪಟ್ಯಾಗಿಂದು ಮಾಡಿಕೊಂಡ ಬಂದ್ರ್ಯಾನೋ!"

"ಹೂಂ....."

ಅಡಿವೆಪ್ಪ ಹಗ್ಗದ ತುದಿಯನ್ನು ಹಿಡಿದು ಎಳೆದ ಜೋಳದ ಮೇವಿನ ಹೊರೆ ಹರಡಿ ಬಿತ್ತು. ಕೈಯಲ್ಲಿದ್ದ ಕುರುಪಿಯಿಂದ ಅದನ್ನು ತುಂಡರಿಸಲಾರಂಭಿಸಿದನು ಅಡಿವೆಪ್ಪ.

'ಕಾಳ ಆಗಲಾಕ ಹತ್ತೈತಿ, ಇಂಥಾ ಬೆಳಿ! ....."

"ಇದs ಸಣ್ಣಗಿಂದು ಆ ಪಟ್ಯಾಗ."

ಎಡಗೈಯಲ್ಲಿ ಮೇವಿನ ಹಿಡಿ ಹಿಡಿದು ಬಲಗೈಯಿಂದ ಕುರು ಪಿಯ ಏಟುಗಳನ್ನು ಹಾಕುತ್ತಿದ್ದ ಅಡಿವೆಪ್ಪ, ಸ್ವಾಭಾವಿಕವಾಗಿಯೇ ಉತ್ತರಿಸಿದ. ಹೊಡೆತಕ್ಕೆ ಹಾರಿ ತೆನೆಯೊಂದು ಎಮ್ಮೆಯ ಮುಂದೆ ಹೋಗಿ ಬಿತ್ತು ಇದರಿಂದ ಆದಕ್ಕೆ ಹಿಡಿಸಲಾರದಷ್ಟು ಸಂತಸ ವಾದರೂ, ಅದು ಗಂಟಲಲ್ಲಿಳಿಯ ಬೇಕಾದರೆ ಸಾಕುಬೇಕಾಯಿ ತದಕ್ಕೆ. ಇದೆಲ್ಲವನ್ನೂ ಏಕಚಿತ್ತದಿಂದ ನೋಡುತ್ತಿದ್ದ ಬಾಳವ್ವನಿಗೆ "ನನ್ನ ಹೊಲದಲ್ಲಿ ಎಂಥ ಬೆಳೆಯಿದೆ!" ಎಂದು ಮನದಲ್ಲಿ ಹೆಮ್ಮೆಯ ಹೆಡೆ ಎದ್ದು ನಿಂತಿತು ಇಡೀ ಹುಲುಸಾದ ಬೆಳೆಯ ನಿಲುವೂ ಕಣ್ಮುಂದೆ ಸರಿದು ಹೋಯಿತು.

ಮೇವನ್ನು ತುಂಡರಿಸಿ ಮೂಲೆಗೊತ್ತಿದ ಅಡಿವೆಪ್ಪ. ಸ್ವಲ್ಪ ಮೇವನ್ನು ಎತ್ತು—ಎಮ್ಮೆಗಳಿಗೆ ಒಗೆದು ಬಂದ. ಹೆಂಡತಿಯೆಡೆಗೆ ಅವನ ದೃಷ್ಟಿ ಹರಿಯಿತೇನೋ, ಬಾಳವ್ವನ ಕೈಯಲ್ಲಿಯ ತಂಬಿಗೆ ಯನ್ನು ತೆಗೆದುಕೊಂಡ; ಹೊರ ಅಂಗಳ ಕಡೆಗೆ ಹೋದ.

ಬಾಳವ್ವ ಹಿತ್ತಲ ಬಾಗಿಲಿಗೆ ಹೋಗಿ ಕೂಗಿದಳು.

"ರಾಮೂs!..... ಏ ssಽ ..... ರಾಮೂssಽ .....!"

"ಈಗ ಬತ್ತೀ ನಿ."

"ಲಗೂನ ಬಾ. ಕಬ್ಬು ತಂದಾರ ನೋಡು!"

"ನಿಲ್ಲವ್ವಾs. ಈಗ ಬತ್ತೀನಿ"

"ಬಾsಳಷ್ಟ ಕಬ್ಬು ತಂದಾರ ನೋಡು; ನಿಂಗ ಬೇಕೋ?.... ಬ್ಯಾಡೋ?"

"ಬ್ಯಾಡವs ನಂಗ, ಅಂತಾ ಕಬ್ಬುs!"

ಹಿತ್ತಲಲ್ಲಿ ಗೆಳೆಯರೊಡನೆ ಆಡುತ್ತಿದ್ದ ರಾಮು ತುಂಟತನದಿಂದ ಉತ್ತರಿಸಿದ ಬಾಳವ್ವನ ಸಹನೆ ಮೀರಿತು. 'ಎಂಥಾs ಹುಡುಗನೋs ಯಾನ ಮಣ್ಣೋ!..... ಇದ! ಆಟಕ್ಕ ಹತ್ತಿತಂದ್ರs, ಹೊಟ್ಟ ಪರವಿನೂ ಇರುದಿಲ್ಲ!'

ಎನ್ನುತ್ತ ಗೊಣಗುಟ್ಟುತ್ತಲೇ ಹೋಗಿ, ರಾಮೂನ ರಟ್ಟೆ ಹಿಡಿದು ಎಳೆದು ತಂದಳು ಕುಸು—ಕುಸು' ಮಾಡುತ್ತ ಹಿಂದೆ ಕಾಲು ಎಳೆಯುತ್ತಿದ್ದ ರಾಮೂ, ತಂದೆಯನ್ನು ನೋಡಿ ತನ್ನ ರಾಗ ನಿಲ್ಲಿಸಿದ. ಅಡಿವೆಪ್ಪ ನುಡಿದ.

"ಆಡತಾನ, ಆಡವೊಲ್ಲ ಯಾಕ ಬಡಲಾ!"

"ಯಾನ ಮಣ್ಣ ಆಡತಾನ! ಅವನಮ್ಮೆ ನೋಡ್ರಿs;.... ಅಂಗೀ ನೋಡ್ರಿ;.... ಬೂಸರ್ಯಾ ಮಾದೂರಾಯ ಆಗೀದಾನ! "

ರಾಮೂನ ಧೂಳು-ಮುಳುಗಿದ ಅಂಗಿಯನ್ನು ಜಾಡಿಸಿ, ಸೀರೆಯ ಸೆರಗಿನಿಂದ ಅವನ ಮುಖ ಒರಸುತ್ತ ನುಡಿದಳು ಬಾಳವ್ವ.

"ಹುಡುಗರು ಹಂಗssಽ ಏಳ ಅವ್ವ!"

"ನೀವು ಹೊಲಕ್ಕ ಹ್ವಾದಾಗಿಂದs ನೋಡ್ರಿ, ಕುರುಪಿ ತಗೊಂಡ ಹೋಗಿ ಬಾವೀ ತಗೀತ್ಯಾನ ಅಂತ ಹಡ್ಡಿಕೋssತ್ತ ಕೂತಿದಾನ"

"ಚಲೋ ಆತಲಾ!.... ಬಾವೀತಗದರ ಕೆಟ್ಯಾsನ!"

"ಹೂs.... ಕೆಟ್ಟಯಾರ ಅಂತಾರು! ನೀವೂ ಬಾವೀ ತಗದು ತ್ವಾಟಾ, ಮಾಡಲಾಕ ತಯ್ಯಾರ ಆಗಿದೀರಿ. ಅಂದಮ್ಯಾಲೆ ಇವ್ಯಾsಕ ಬ್ಯಾಡಾssಽ!.... ನಿಮ್ಮ ಮಗಾs ಇಂವ"

ಬಾಳವ್ವನ ಮೊಗದಲ್ಲಿ ನಸುನಗೆ ಮಿಂಚಿತು ಅವಳ ಕುಡಿಗಣ್ಣು ಗಳು ಅಡಿವೆಪ್ಪನತ್ತ ನೋಡಿದಾಗ, ಯಾವುದೋ ತಲ್ಲಣ ತಾಂಡವ ವಾಡುತ್ತಿತ್ತು ಆ ಮುಖಬಿಂಬದ ಮೇಲೆ. ಬಾಳವ್ವ ಸಾವರಿಸಿ ಕೊಂಡು ತನ್ನ ಭಾವ ಬಲಿಸಿದಳು.

"ಊಟಾ ಮಾಡನಡೀರಿ. ರೊಟ್ಟಿಗೆ ಹಂಚು ಇಟ್ಟದ್ಯಾನ! ಯಾವಾಗೋ ನ್ಯಾರೇ ಮಾಡಿ ಹೋಗಿದೀರಿ "

ಅಂದವಳೇ ಒಳಗೆ ಹೋಗಿ, ತಾಟು-ಮಣೆ ಅಣಿ ಮಾಡಿಟ್ಟು ರೊಟ್ಟಿ ಬಡಿಯಲಿಕ್ಕೆ ಕುಳಿತಳು

ಯಾವುದೋ ಆಲೋಚನಾಚಕ್ರದಲ್ಲಿ ಸುತ್ತುತ್ತಿದ್ದ ಅಡಿವೆಪ್ಪ ಹೆಂಡತಿಯನ್ನು ಕೇಳಿದ:

"ಬಾಳೀ, ಸಂಜೇ ಹೊತ್ತು ಯಾರಾದ್ರೂ ಬಂದಿದ್ರಾ?"

"ಹೂಽ.... ಮರತಿದ್ಯಾನ ನೋಡ್ರಿ; ನೀಲಕಂಠಪ್ಪ ಕರೀತಾರಂತ ಯಾರೋ ಬಂದಿದ್ದರು. ಹೊಲಕ್ಕ ಹೋಗೀದಾರಂತ ಹೇಳಿದ್ನಿ; ರೊಟ್ಟಿ ಆರತಾವ. ಊಟಾಮಾಡಿಕೊಂಡ... ಹೋಗ್ರಿ."

ಅಡಿವೆಪ್ಪನ ಎಣಿಕೆಗೆ ಬಾಳವ್ವನ ಹೇಳಿಕೆ ಸರಿಹೋಯಿತು. ಅವನು ಗೂಟದ ಮೇಲಿನ ತನ್ನ ಅಂಗಿ-ರುಮಾಲುಗಳನ್ನು ಎಳೆದು ಕೊಂಡು ಹೇಳಿದ:

"ಬಂದ ಮ್ಯಾಲೇ ಉಟಾಮಾಡ್ತೀನಿ. ಅಲ್ಲಿ ಎಲ್ಲಾರೂ ಹಾದೀ ನೋಡತಿದ್ದಾರು. ಇಂದೂ ಮುಗಿಸೂಣು ಬಾ ಅಂತ ಹೇಳಿದಾರ. ಬೆಳಗಾದ್ರೂ ತಾರೀಕು ಬಂತು."

"ಯಾವಾಗ ಬರ್ತಿರ್ಯೋ ಯಾನೋ! ಒಂದು ರೊಟ್ಟಿ ತಿಂದೂ ಹೋಗ್ರಿ."

"ಈಗ ಬರ್ತ್ಯಾನ!"

ರುಮಾಲನ್ನು ಸುತ್ತಿಕೊಳ್ಳುತ್ತ ಅಡಿವೆಪ್ಪ ಬೀದಿಗಳಿದ ಒಲೆ ಊದುತ್ತಿದ್ದ ಬಾಳವ್ವನಿಗೆ ಅಡಿವೆಪ್ಪನ ಮಾತು ಕೇಳಿಸಲಿಲ್ಲವೇನೋ! 'ರಾಮೂ, ಅವರನ್ನ ಊಟಕ್ಕ ಕರಕೊಂಡ ಬಾರಪ್ಪ' ಎಂದು ಹೊಗೆ ಸುಂಗುತ್ತ ಅಂದಳು. ಆವಳಿಗೂ ಗೊತ್ತು— ಇತ್ತಿತ್ತಲಾಗಿ ನಡೆದ ಹೊಲದ ಗೊಂದಲದಿಂದ ಗಂಡನ ಮನಸ್ಸಿಗೆ ನೆಮ್ಮದಿಯಿಲ್ಲ ವೆಂದು. ಅದಕ್ಕಾಗಿ ಊಟ ಮಾಡಿಸಿಯೇ ಕಳಿಸಬೇಕೆಂದು ಅವಳ ತಳಮಳ.

"ಅಪ್ಪಾಽ, ಅವ್ವಾಽ ಕರೀತಾಳ ಬಾಽ"

"ಉಣ್ಣಾಕ್ಕ ಕರೀತಾಳ ಬಾಽಽಲಾ!"

(೪೫ನೆಯ ಪುಟದಿಂದ ಮುಂದುವರಿದುದು)

ಬೆಂಗಳೂರಿನಲ್ಲಿ ಹೊರಟದ್ದು— ಇದೇ ಮಾರ್ಗದಲ್ಲಿ ಉತ್ಸಾಹದಿಂದ ಮುನ್ನಡೆದಿದೆ.

ಹಿಂದಿನ ಪೀಳಿಗೆಯವರೆನಿಸಿದರೂ ಶ್ರಿ. ಅ. ನ. ಕೃಷ್ಣರಾಯರು ಒಳ್ಳೇ ಲಲಿತಪ್ರಬಂಧಕಾರರು, ಅವರ 'ಪೊರಕೆ' ಎಂಬ ಸಂಗ್ರಹ ಪರಿಶುದ್ಧ ನಗೆ, ಸೂಕ್ಷ್ಮನಿರೀಕ್ಷಣಾಶಕ್ತಿ, ಚಿತ್ರಕತೆಗೆ ಆಗರವಾಗಿದೆ. ಇಂದಿನ ಪೀಳಿಗೆಗೆ ಸಹಜವಾಗಿ ಒಳ್ಳೇ ಸಂಸ್ಕಾರ ಹುಟ್ಟಿಸಲು ಇದು ಅತಿ ಸಾಹಾಯ್ಯಕಾರಿ. ಶ್ರೀ ದತ್ತಾತ್ರಯ ಕುಲಕರ್ಣಿಯವರ 'ಹಾಸು-ಹೊಕ್ಕು' ಕತೆಯು ಒಳ್ಳೇ ಸಂಕಲನವಾಗಿದ್ದರೂ ಅಲ್ಲಿ ಸಹ ಹರಟೆಯ ಲಕ್ಷಣಗಳು ಸಾಕಷ್ಟಿವೆ.

'ಕಾಂಪ್ಲಿಮೆಂಟರಿ ಪಾಸ್' ಎಂಬ ಒಂದೇ ಪ್ರಾತಿನಿಧಿಕ ಹರಟೆಯಿಂದ ಬಳ್ಳಾರಿ ಬೀಚಿಯವರ ನಗೆಹೊನಲಿನ ಅರಿವಾಗಿ ಕಂಪನಿ ನಾಟಕಗಳ ನಿಕೃಷ್ಟಾವಸ್ಥೆಯ ಸ್ಥಿತಿ ಕಟ್ಟಿದರೆ, ಶ್ರೀ ಎಚ್. ಎಸ್. ಪಾಟೀಲರು ಮಾನವಸ್ವಭಾವ ದರ್ಶನವನ್ನೇ ತಮ್ಮಕಿರುಬರೆಹಗಳಲ್ಲಿ ಲಲಿತವಾಗಿ ಒಡಮೂಡಿಸಿರುವರು.

ಎನ್ಕೆಯವರ ಹೆಸರು ಅಷ್ಟು ಒಂದುವೇಳೆ ಎಲ್ಲರಿಗೂ ಪರಿಚಿತವಾಗಿರದಿದ್ದರೂ, ಅವರ 'ಮುಂಗಾಲು ಪುಟ್ಟ' ಎಂಬ ಹರಟೆಗಳ ಸಂಗ್ರಹ ಲೋಕಪ್ರಿಯವಾಗಿದೆ. ಆ ಧರ್ಮಸಾಲೆ, ಮಗ್ನತೆ, ಜೋಗದರ್ಶನ, ನೋಡಕಾಬಾಜಾರ— ಮುಂತಾದ ಪ್ರಬಂಧಗಳ ಸೌಂದರ್ಯಕ್ಕೆ ಮುಗ್ಧನಾಗದ ರಸಿಕನೇ ಇಲ್ಲ. ಜೀವನದ ವಿಕ್ಷಿಪ್ತತೆ, ಸೂಕ್ಷ್ಮದರ್ಶನಗಳನ್ನು ಕಲಾತ್ಮಕವಾಗಿ ರೂಪಿಸಿ ನಗೆಯ ಲಹರಿಗಳನ್ನು ಮಿನುಗಿಸುವಲ್ಲಿ ಎನ್ಕೆಯವರಂತೆ ಇನ್ನೂ ಹಲವಾರು ನಾಮಾಂಕಿತ ಹರಟೆಗಾರರನ್ನು ಹೆಸರಿಸಬೇಕು. ಶ್ರೀ ಬಿ.ಆರ್. ವಾಡಪ್ಪಿಯವರ 'ಗಾಳಿಗುದುರೆ' 'ತಾರಕಂಬ', ಎನ್.ಎಸ್. ಗದಗಕರರ 'ಒಡೆದ ಕನ್ನಡಿ,' 'ಶಾರದೆಯ ಅಪರಾವತಾರ, 'ನಗೀನವಿಲು', 'ಗೋವಾ ಯಾತ್ರೆ'— ಮುಂತಾದ ಲಲಿತ ಪ್ರಬಂಧಗಳ ಸಂಕಲನಗಳು ಇದೇ ದಿಸೆಯಲ್ಲಿಯ ಕೃತಿಗಳು. ಹಲವೇ ಹರಟೆಗಳನ್ನು ಅನಿರುದ್ಧರು (ಮೊರಬ ರಘುನಾಥರು) ಬರೆದರೂ ಅವು ಯಾವ ಮಾನದಿಂದಲೂ ರಂಜಕವಾದುವು. 'ಚಮಚೆ', 'ಗುಂಡು', 'ಸುಳ್ಳು ಸತ್ಯ,' ಅವರ ಒಳ್ಳೆಯ ಬರೆಹಗಳು. ಕೀರ್ತಿನಾಥ ಕುರ್ತಕೋಟಿ, ರಾನಬಹಾದ್ದೂರರು ತಮ್ಮ ಪ್ರಬಂಧಗಳಲ್ಲಿ— ಸಹಜ ವಿವೇಚನೆಯೊಡನೆ ಅಖಂಡ ಸಮಾಜ ಪರಿಜ್ಞಾನವನ್ನು ನಗೆಯ ಹಾಗೂ ಪಾಂಡಿತ್ಯದ ಪ್ರತಿಭೆಯಲ್ಲಿ ತೇಲಿಸಿ ಕನ್ನಡ ಓದುಗರನ್ನು ಋಣಬದ್ಧರನ್ನಾಗಿಸಿರುವರು.

ಇಂತು ಲಲಿತ ಪ್ರಬಂಧದ ಲಾಲಿತ್ಯ ಪರಮಾತ್ಮನ ಮಹಿಮೆಯಂತೆ ಅನಾದ್ಯನಂತವಾಗಿದೆ. ಕೇಳುವವನೆ ಕವಿ ಕವುಡಾದಾವು! ಕಟ್ಟಿಗೆಯ ಬಾಯಿ ಇದ್ದರೆ, ಅದು ಒಡೆದೇ ಹೋಗುವ ಗತಿ! ಹೆಚ್ಚು ಪ್ರಯೋಗವು, ಮನಸಾ ಆಗಿರಲಿಲ್ಲವಾದುದರಿಂದ ತಂತಹ ಅನಾಹುತ ಸಂಭವಿಸಿಲ್ಲವಷ್ಟೆ! ಹೀಗೆ ಜೀವಂತ ಪತ್ರಿಕಾವ್ಯವಸಾಯದಲ್ಲಿಯೂ ಹರಟೆಯ ಅಸ್ತಿತ್ವವನ್ನೂ, ಸ್ಥಾನಮಾನಗಳನ್ನೂ ವಿಾರಿಸಲು ಬಾರದ್ದರಿಂದ ಅದರ ವ್ಯಾಪ್ತಿಯ ಬಗೆಗೇನು ಉಸುರುವುದು? ಆದರೂ ಕನ್ನಡದ ಎಲ್ಲ ಲಘು ಬರೆಹಗಾರರ ಹೆಸರನ್ನು ಹೇಳಲಾಗದ್ದಕ್ಕಾಗಿ ಹಳಹಳಿಸಿ, ಲಲಿತ ಪ್ರಬಂಧದ ಭವಿಷ್ಯದ ಉಜ್ವಲತೆಯ ಬಗೆಗೆ ಅಭಿಮಾನಪಟ್ಟು, ಕಂಪನಿ ನಾಟಕದ ಹನುಮನ ಬಾಲದಂತೆ ಬೆಳೆದ ಈ ಬರೆಹವನ್ನು ಈಗ ತಡೆಯಬಹುದಲ್ಲವೆ? ತಡೆದಾಗ ಕ್ಷೇಮವೇ ಎನಿಸೀತೆ?

ಒಂದೇ ಸವನೆ ತನ್ನ ಕಿರುದನಿಯಿಂದ ಕೂಗಿ ಕರೆಯ ತೊಡಗಿದ ರಾಮು. ಆದರೆ ಅಡಿವೆಪ್ಪ ಮಗನ ಕೂಗು ಕೇಳಿಸಲಾರದಷ್ಟು, ಮನೆಯಿಂದ ದೂರ ಹೋಗಿದ್ದ; ಮುಚ್ಚಂಜೆಯೆ ನಸುಗತ್ತಲೆಯಲ್ಲಿ ಕಾಣಿಸದಾಗಿದ್ದ.

* * *

ನೀಲಕಂಠಪ್ಪ ಎಂದರೆ ಆ ಹಳ್ಳಿಯ ಕೈಗೋಲು. ಅವರ ಸಹಾಯ-ಸಹಕಾರಗಳಿಲ್ಲದೆ ಜನ ಸಾಗುವಂತಿರಲಿಲ್ಲ. ಗಂಡ-ಹೆಂಡಿರ ಕಿರುಕುಳನ್ಯಾಯದಿಂದ ಹಿಡಿದು ಕೋರ್ಟು-ಕಚೇರಿಗಳಲ್ಲಿ ನಡೆಯುವ ದೊಡ್ಡ-ದೊಡ್ಡ ಖಟ್ಲೆಗಳ ವರೆಗೂ ಅವರ ಮಾರ್ಗದರ್ಶಿತ್ವ ಮುಖಂಡತ್ವ ಬೇಕೇ ಬೇಕು. ನೀಲಕಂಠಪ್ಪ ತಮ್ಮ ಆಳವಾದ ಅನುಭವ, ಸಮಾಜಸಂಘಟನಾ ಚಾತುರ್ಯ, ಕುಶಲ ತಂತ್ರಗಾರಿಕೆಗಳಿಂದ ಸಮಾಜದ ನಾಡಿಯನ್ನು ಮಿಡಿಯುತ್ತ, ಕನ್ಯಾಸುನೆದಾಶೆಗಳನ್ನು ಈಡೇರಿಸಿಕೊಳ್ಳುತ್ತ ಸಾಗಿದ್ದರು. ವಯಸ್ಸಿನಲ್ಲಿ ಅಲ್ಲದಿದ್ದರೂ ಬುದ್ಧಿಯಲ್ಲಿ ಅವರೊಬ್ಬರು ಹಿರಿಯ ವ್ಯಕ್ತಿಗಳು ಆ ಊರಲ್ಲಿ. ಮೇಲಾಗಿ ಕಾಂಗ್ರೇಸ ಕಾರ್ಯ ಕರ್ತರು ಬೇರೆ. ಹತ್ತಿಪ್ಪತ್ತು ವರ್ಷಗಳಿಂದಲೂ ಖಾದಿಯನ್ನೇ ಧರಿಸುತ್ತ ಬಂದಿದ್ದಾರೆ. ನಲವತ್ತೆರಡರ ಕ್ರಾಂತಿಯ ಸುಮಾರಿಗೆ ದೇಶಭಕ್ತರಿಲ್ಲರೂ ಸೆರೆಮನೆ ಸೇರಿದಾಗ, ಈ ನೀಲಕಂಠಪ್ಪನೂ ಆರು ತಿಂಗಳ ಕಾಲವನ್ನು ಹಿಂಡಲಗಿ ಕಾರಾಗೃಹದಲ್ಲಿ ಕಳೆಯಬೇಕಾಯಿತು. ಅದೇ ಕಾಲಕ್ಕೆ ಧಾನ್ಯದ ಕಳ್ಳ-ಸಾಗಾಟ ಮಾಡುತ್ತಿದ್ದ ಇವರಿಗೆ, ಯಾವುದರಿಂದ ಜೇಲಾಯಿತು— ಎಂಬುದು ಆ ಊರ ಜನತೆಗೆ ತಿಳಿಯದೆ ಹೋದರೂ, ತಾನು 'ರಾಜಕೀಯ ಕೈದಿ'ಯಾಗಿದ್ದೆನೆಂದೇ ಅವರು ಜನರಿಗೆ ಕಲ್ಪನೆಯನ್ನು ಕೊಟ್ಟರು. ಸ್ವಾತಂತ್ರ್ಯ ಪ್ರಾಪ್ತಿಯ ನಂತರವಂತೂ ನೀಲಕಂಠಪ್ಪನ ಹೆಸರು ಜೆಲ್ಲೆಯ ತುಂಬ ಪಸರಿಸಿದೆ. ಇಂಥ ವ್ಯಕ್ತಿಯ ಕೈಯರಿಯದೆ ಆ ಊರಲ್ಲಿ ಯಾವ ಕಾರ್ಯ ನೆರವೇರಬಲ್ಲದು? ಅದಕ್ಕೆಂತಲೇ ಕಗ್ಗೂರಿನ ದೇಸಾಯರು ಆ ಊರಲ್ಲಿದ್ದ ತಮ್ಮೆರಡು ಹೊಲಗಳನ್ನು ಮಾರಿಸಿ ಕೊಡುವ ಕಾರ್ಯವನ್ನು ನೀಲಕಂಠರ ಕೊರಳಿಗೇ ಹಾಕಿದಾಗ, ಒಂದನ್ನು ತಾವೇ ಕೊಂಡು—ನೆರೆಯಲ್ಲಿದ್ದ ಇನ್ನೊಂದನ್ನು ಅಡಿವೆಪ್ಪನಿಗೆ ಕೊಡಿಸಿ ಕೊಟ್ಟು, ಹೊರಲಾರದ ಉಪಕಾರವನ್ನು ಹೊಂಸಿದ್ದರು. ಅದು ಒಂದು ಉಪಕಾರವೂ, ಅಹುದು. ಆ ಎರಡೂ ಹೊಲಗಳನ್ನು ಮಾಡುತ್ತಿದ್ದ ಸಿದ್ದನ ಕಡೆಯಿಂದ 'ತ್ಯಾಗಪತ್ರ (ರಾಜೀನಾಮೆ)'ಗಳನ್ನು ಬರೆಯಿಸಿಕೊಂಡು ಖರೀದಿ ತಕ್ಕೊಂಡಷ್ಟು ಸಣ್ಣ ಕಾರ್ಯವೇನಲ್ಲ!

ಮುಂದೆ ಯಾವದೋ ಬೆಂಬಲದಿಂದ,— ಯಾವುದೋ ಮುಂಬಲದಿಂದ ಸಿದ್ದ ತನ್ನ 'ರೈತ ತನ'ದ ಹಕ್ಕನ್ನು ಹೊತ್ತು, ಹರಿದಾಡುವಾಗ ಮುರಗುತ್ತಿದ್ದಂತೆ ನೀಲಕಂಠಪ್ಪನೂ ಮನದಲ್ಲಿಯೇ ಕೊರುಗುತ್ತಿದ್ದರು. ಸಿದ್ದನ ಮುರುಗು, 'ಅಡಿವೆಪ್ಪ— ನಾನು ಮಾಡಿದ ಭೂಮಿಗೆ ಒಡೆಯನಾದನಲ್ಲ!'....ಎಂದಿದ್ದರೆ,— ನೀಲಕಂಠಪ್ಪನ ಕೊರಗು 'ಅಡಿವೆಪ್ಪನಿಗೇs ಒಕ್ಕೆಯ ಭೂಮಿ ಹೋಯಿತಲ್ಲಽಽ!' ಎಂದಿತ್ತು.

ಸಿದ್ದ ತನ್ನ ಹಕ್ಕನ್ನು ಹೆಡೆಯಲ್ಲಿಟ್ಟುಕೊಂಡು ಕೋರ್ಟಿಗೆ ಹೋಗಿ ಅಡಿವೆಪ್ಪನ ಮೇಲೆ 'ನೋಟೀಸ್' ತೆಗೆಯಿಸಿಯೂ ಬಂದ. ಏನೂ ಅರಿಯದ ಅಡಿವೆಪ್ಪ ಇದರಿಂದ ಹೌಹಾರಿ ಹೋದ; ನೀಲಕಂಠಪ್ಪನ ಬೆನ್ನಿಗೆ ಬಿದ್ದ. ಊರಲ್ಲಿ ಅದೊಂದು ಹೊಸ ಸಮಸ್ಯೆಯೇ ತೆಲೆಯೆತ್ತಿದಾಗ,ಊರ ನಾಯಕ ನೀಲಕಂಠಪ್ಪ ಸುಮ್ಮನೆ ಇರಲಿಕ್ಕೆ ಹೇಗೆ ಬರುತ್ತದೆ? ಹೇಗಾದರೂ ಮಾಡಿ ಹಳ್ಳಿಯ ನ್ಯಾಯ, ಹಳ್ಳಿಯಲ್ಲಿ ಮುಗಿಸಬೇಡವೇ? ಅದಕ್ಕೆಂತಲೇ ಅವರು ಸಿದ್ದನನ್ನು ಕರೆದು, ನಾಲ್ಕು ಜನರೆದುರಿಗೇ ಮಾತನಾಡುತ್ತಿದ್ದರು:

"ಸಿದ್ದಾs ಎಲ್ಲಾ ಮುಗಿದು ಹೋಗೇತಿ, ಮತ್ತ್ಯಾಕ ಬಡವಗ ತ್ರಾಸ ಕೋಡೋದು?"

"ನಾನೂs ಬಡವ ಅಲ್ಲೇನ್ರಿ?..... ನಾನರೆ ಎಲ್ಲಿ ಸಿರಮಂತ ಅದ್ಯಾನು?"

ಸಿದ್ದನ ಮಾತಿಗೆ ಉಳಿದವರಾರೂ ಮಾತನಾಡಲಿಲ್ಲ. ನೀಲಕಂಠಪ್ಪನವರೇ ನುಡಿದರು: "ನೀs ಬಡವ ಇದ್ದರೂನೂs, ನಾಲ್ಕುಮಂದಿ ಮಕ್ಳು ಮಾಡವರು ಆಗೀದಾರು. ಅಡಿವೆಪ್ಪನ ಹಂಗ ಒಬ್ಬಟಗ್ಯಾ ಅಲ್ಲ!"

"ಸಂಸಾರ ಬೆಳದೇತಿ ಅಂತ ಹೇಳೇs ನಮಗ ಬಿರಿ ಬಂದೈತಿರಿ. ದುಡದು ತಿನ್ನೂs ಬಾಯಿಮ್ಯಾಲೆ ಬಡಿದು ಕಸಕೊಂಡ್ರs, ನಾವರೇs ....ಏನು ಮಾಡೂನು?

ಸಿದ್ದನ ಪ್ರಶ್ನೆ ಎಲ್ಲರನ್ನೂ ದಂಗುಬಡಿಸಿತು. ಕ್ಷಣ ಹೊತ್ತು ಸರಿಯಿತು. ಅಲ್ಲದ್ದ ಹಿರಿಯನೊಬ್ಬ ಮೆಲ್ಲಗೆ ನುಡಿದ:

"ಖರೀದಿ ವೇಳೆಕ್ಕs, ನೀ ಹೇಳಿದಷ್ಟು ಕೊಟ್ಟಾನಂತಲೋ ಅಡಿವೆಪ್ಪ !..... ಮತ್ತ ಈಗ್ಯಾಕ ಆಶೆ, ಆದರ ಮ್ಯಾಲೆ'"

"ಆಶಾ ಇರೋದಲ್ಲಾ! ಆಶಾ ಎಲ್ಲಿ ಬಿಟ್ಟೇತಿ ಮನಷ್ಯಾನ!" ಮತ್ತೊಬ್ಬ ರಾಗ ಎಳೆದ. ಆದರೆ ನೀಲಕಂಠಪ್ಪನವರಿಗೆ ಇದು ಸಹನವಾಗಲಿಲ್ಲವೇನೋ,—

"ಏನಾದ್ರೂ ಒಂದು ಮಾತಾಡಿದ್ರs ಆಯಿತ್ಯಾನ!.... ಅತೀ ಆಶಾ ಗತಿಗೆಡಿಸತೈತಿ— ಅಂಬೂ ಮಾತs ಗೊತ್ತಿಲ್ಲ ಯಾನ ನಿನಗ ಇನ್ನೂ? ಸಿದ್ದಾ! ನಾ ಹೇಳ್ತೀನಿ; ಕೇಳತಿ ಇಲ್ಲೋ?"

ಕೊನೆಯ ಮಾತು ಸಿದ್ದನನ್ನು ಉದ್ದೇಶಿಸಿ ಇದ್ದರೂ, ಅವನು ಕೂಡ ಕೆಲ ಹೊತ್ತು ಮೌನತಾಳಿದನು. ಬಳಿಕ ಕೇಳಿದನು:

"ಏನ ಹೇಳತೀರಿ— ಹೇಳರಲ್ಲಾs!.....

ಎಲ್ಲರ ಲಕ್ಷ್ಯ ನೀಲಕಂಠಪ್ಪನ ಕಡೆಗೆ ಸರಿಯಿತು.

ಸ್ವಾರ್ಥದಾಗs ಪರಮಾರ್ಥ ಸಾಧಿಸೋದು. ನೀನೂs ನೋಡಿದಿ. ಹಣಮಂತ ದ್ಯಾವ್ರ ಗುಡಿ ಒಂದು ಕಡೇ ಬೀಳಲಿಕ್ಕೆ ಆಗೇತಿ. ಅದನ್ನು ದುರಸ್ತ ಮಾಡಬೇಕಾದರ ಸಾವಿರಾರು ರೂಪಾಯಿ ಖರ್ಚ ಐತಿ. ಅದನ್ನಷ್ಟು ಅಡಿವೆಪ್ಪಗಹಾಕಿ ಬಿಡೂಣು. ನಿಮ್ಮಿಬ್ಬರ ಹೆಸರ ಮ್ಯಾಲೇs ಆದೊಂದು ಪುಣ್ಯದ ಕೆಲಸರೆ ಆಗಲಿ!"

ಕುಳಿತವರೆಲ್ಲರೂ ಗೋಣು ಅಲ್ಲಾಡಿಸಿ, ತಮ್ಮ ಒಪ್ಪಿಗೆ ಸೂಚಿಸಿ

ದರು. ಸಿದ್ದಪ್ಪ ಮಾತ್ರ ಸ್ತಂಭಿತನಾಗಿದ್ದ. ಆದ್ದರಿಂದ ಮತ್ತೆ ನೀಲಕಂಠಪ್ಪನವರೇ ಪ್ರಶ್ನಿಸಿದರು.

"ನಿನ್ನ ಹೆಸರಿನ ಮ್ಯಾಲೆ ಒಂದು ಪವಿತ್ರ ಕೆಲಸ ಆಗಲಿ ಅಂತೀಯೋ? ಬ್ಯಾಡ ಅಂತಿಯೋ?...."

"ಆಗಲಿ ಅಲ್ರಿ; ನಾ ಯಾತಕ್ಕ ಬ್ಯಾಡ ಅನ್ನಲಿ?....ಆ....ದ್ರೆ.... ಽಽ.... ನನ್ನ ಕಡೇ, ಯಾನ ನೋಡಿದಾಂಗ ಆಯ್ತು ನೀವು?"

ಸಿದ್ದ ನೀಲಕಂಠಪ್ಪನತ್ತ ನೋಡುತ್ತ ಮಾತು ಎಳೆದ. ಹೊರ ಬಾಗಿಲೆಡೆಗೆ ನೋಡುತ್ತಿದ್ದ ಅವರಿಗೆ ಅಡಿವೆಪ್ಪ ಕಾಲೆಳೆಯುತ್ತ ಬರುವುದು ಕಂಡಿತು. "ಅಲ್ನೋಡು: ಬಂದ ನೋಡು ಅಡಿವೆಪ್ಪ! ಏನಾದ್ರೂಽ ಹೆಚ್ಚು ಕೊಡತಾನೇನು ಕೇಳೋಣು!"

"ಎಪ್ಪ ಹಾದೀ ನೋಡೂದು ನಿಂದು?"

ಎನ್ನುತ್ತ ನೀಲಕಂಠಪ್ಪ ಮುಂದೆ ಕುಳಿತವರು ಹಿಂದೆ ಸರಿದು, ದಿಂಬಿಗೆ ಒರಗಿ ಕುಳಿತರು. ಅಡಿವೆಪ್ಪ ಅಪರಾಧಿಯಂತೆ ಒಂದೊಂದೇ ಹೆಜ್ಜೆಗಳನ್ನು ಸಾವಕಾಶವಾಗಿ ಇಡುತ್ತ, ಪಡಸಾಲೆಯ ಮೆಟ್ಟಿಲು ಗಳನ್ನೇರಿ, ಹಾಸಿದ ಕಂಬಳಿಯ ತುದಿಗೆ ಬಂದು ಕುಳಿತ.

"ಹೊಲದ ಕಡೇ ಹೋಗಿದ್ದಿನ್ರೆಽಽ — ಮೇವು ಮಾಡಿಕೊಂಡು ಬರಲಾಕ ಸಂಜೀಽನ ಆಯ್ತುರಿ."

"ಎಲ್ಲಾ.... ನಮಗ ಬೇಕಾದಾಂಗ ಕಾಣಸ್ತೈತಿ ನೋಡಪಾ! ಇತ್ತ ನೀನೂಽ ಪರಭಾರೆಽ— ಅತ್ತ ಸಿದ್ದನೂ ಪರಭಾರೆ!"

"ಎಲ್ಲಾಽಽ ನಿಮ್ಮ ಕೈಯಾಗ ಐತಿ ಅಲ್ಲರಿ. ನಾವೆಲ್ಲಿ ನಿಮ್ಮನ್ನ ಬಿಟ್ಟು ಇದೇವು!" ಸಿದ್ದನ ಕಡೆಗೆ ನೋಡುತ್ತ ಅಡಿವೆಪ್ಪ ನುಡಿದ. ತನಗಿಂತ ಮೊದಲೇ ಬಂದ ಸಿದ್ದ ನೀಲಕಂಠಪ್ಪನಿಗೆ ತನ್ನಂತೆಯೇ ಮಾತು ಕೊಟ್ಟಿರಬೇಕೆಂದು ನಂಬಿಯೂ ಇದ್ದ.

"ಅದೆಲ್ಲಾಽಽ ... ಖರೇಽಪಾ! ನಾವರೇ ಏನು ಮಾಡೂದು! ಒಬ್ಬರು ಒಂದು ಕಡೆ ಅಂದ್ರಽ,— ಮತ್ತೊಬ್ಬರು ಮತ್ತೊಂದು ಕಡೇ ಜಗ್ಗತೀರಿ."

"ನನ್ನ ತಂದಿ-ತಾಯಿ ಮುಂದ ಹೇಳಿದಾಂಗ ಹೇಳ್ತೀನಿ ನಿಮಗೆಲ್ಲಾ; ಆ ಹೊಲಾ ತಗೊಂಡು ನನ್ನ ಕೈಯೆಲ್ಲಾ ಖಾಲೀ ಆಗೈತಿ; ಒಂದ ದುಡ್ಡೂ ನನ್ನ ಹಂತ್ಯಾಕ ಉಳಿದಿಲ್ರಿ."

ಅಡಿವೆಪ್ಪನ ಅಂತರಾಳದಿಂದ ಬಂದ ಮಾತು ಎಲ್ಲರ ಹೃದಯ ಗಳಲ್ಲಿಯೂ ಕರುಣೆಯ ಕಡಲನ್ನು ಉಕ್ಕೇರಿಸಿತು. ಸಿದ್ದ ಮಾತ್ರ ಬಿರುಮಳೆಯಂತೆ ನುಡಿದ.

"ಅನೀ ಕಾಲಿನಂಥಾ ಹೊಲಾ ಎತ್ತಿ ಹಾಕಿದೀ, ಅದನ್ನ ಹೇಳ ವೊಲ್ಲೆಲಾ!....."

ಈಗ ಅಡಿವೆಪ್ಪನೂ ಕೊಂಚ ಕೆರಳಿದ:

"ಹೊಲಾ ಯಾನ್ನ ಹಾದೀ ಮ್ಯಾಗ ಬಿದ್ದಿತ್ತೂಽಽ ಸಿದ್ದಣ್ಣಾ! ಬುಟ್ಟೇಽನ ಬುಟ್ಟ ರೂಪಾಯಿ ಸುರವಿದ್ಯಾನ!'

"ಅದಽಽ. ನೋಡೋಣಲಾ!..... ಎಲ್ಲಿ ಬಿದ್ದಿತ್ತು ಅಂಬೂದನ್ನ!"..... ಸಿದ್ದ ಘೋಷಿಸಿದ. ಮಾತಿಗೆ-ಮಾತು ಸುಸ್ಮನೆ ಮನಸ್ತಾಪಕ್ಕೆ ಕಾರಣವೆಂದು ಹಿರಿಯನೊಬ್ಬ ತನ್ನ ಅಭಿಪ್ರಾಯ ಸೂಚಿಸಿದನು.

"ಸುಮ್ನಽ ನೀವಿಬ್ಬರೂ ಹಳೇ ರಾಡೀ ತಕ್ಕೋತ ಕೂಡ ತೀರೋ, ಏನು— ನೀಲಕಂಠಪ್ಪನವರು ಹೇಳಿದ್ದ ಕೇಳತೀರೊ?"

"ನೋನ್ನೆಽಽ ಅವರ ಮಾತಿಗೆ ಕಬೂಲ್ ಆಗೀದ್ಯಾನ ಅಲ್ರಿ— ಇನ್ನ ನನ್ನ ಕಡೇ ಯಾನ ಐತಿ ? ಮುಂದಿಂದ ಮುಗಿಸಿ ಬಿಡ್ರಿ"

ಇನ್ನಿರುವುದೆಲ್ಲ ಸಿದ್ದನ ಕಡೆಗೆಯೇ, ಅನ್ನುವ ಭಾವದಿಂದ ಅಡಿವೆಪ್ಪ ನೀಲಕಂಠಪ್ಪನ ಕಡೆಗೇ ನೋಡಿದ.

"ಮ್ಯಾಲೆ ಹೋಗಿ ನಾಽ, ಮಾಡೋದನ್ನ ಮಾಡತೀನಿ. ಆದ್ರಽ, ಮೊದಲ ನಿಮ್ಮಲ್ಲೇ ತಾಳ-ಮೇಳ ಇಲ್ಲ ಆಗೈತ್ಯಲಾ!!...."

"....ಹೊಽಽ....ಸಿದ್ದಾ....! ಏನಂತಿ ?....."

"....."

"ಹರಿಯೂ— ತನಕಾ ಜಗ್ಗ ಬಾರದು."

"ತೋಸಿಕೊಂಡ ಮ್ಯಾಗಽ.... ಮಳೀ ಅಂಜಿಕಿ ಯಾತರದು ? ಹೆಂಗ ಆದಾಂಗ ಆಗಲಿ !"

ಸಿದ್ದನ ನಿಷ್ಠುರನುಡಿಗಳು ನೀಲಕಂಠಪ್ಪನನ್ನು ರೊಚ್ಚಿಗೆಬ್ಬಿಸಿ ದುವು.

"ಇಲ್ಲದ ಆಶೇಕ್ಕ ಬಿದ್ದಽಽ, ಕಳ್ಳಿಗಿ ಹೆತ್ತಿಽಽ.... ಬೆಲ್ಲಾನೂ ಹ್ವಾದೋತು ಸಿದ್ದಾ!"

"ಎತ್ತಿಗಿ ಒಂದ ಬುದ್ಧಿ ಬಂದ್ರಽ.... ಸೆಟ್ಟಿಗೆ ಒಂದು ಬರತೈತ್ರಿ. ಹೇಳತ್ಯಾನ ನಿಮಗೆಲ್ಲಾ.....!!!

ಸಿಡಿಲೆರಗಿದಂತೆ ನುಡಿದ ಸಿದ್ದ ದಡದಡನೆ ಎದ್ದುಹೋದ. ಇಂಥ ಸ್ಥಿತಿಯಲ್ಲಿ ಯಾರಿಗೂ ಅವನನ್ನು ತಡೆಯುವುದಾಗಲಿಲ್ಲ. ಮಳೆ ಕುಟ್ಟಿ ಬೆಳಗಿದಂತಾಯಿತು, ಅಲ್ಲಿಯ ವಾತಾವರಣ. ಒಬ್ಬರ ಮುಖ ವನ್ನೊಬ್ಬರು ನೋಡಿದರು. "ಇಂಥಾ ಸೆಗಣೀ ತಿನ್ನೂಽ ಉದ್ಯೋಗ ನನಗ ಸಹನ ಆಗೂದಿಲ್ಲ!.....ಯಾದರೇ ಕಿವಿ ಊದಿರಬೇಕೂಽ— ಹಾರ್ಯಾಡತಾನ ಆಯ್ತು !"

ನೀಲಕಂಠಪ್ಪನ ಮಾತಿನೆಡೆಗೆ ಅಡಿವೆಪ್ಪನ ಚಿತ್ತವಿರಲಿಲ್ಲ. ಸಿದ್ದನ ರೌದ್ರಾವತಾರ ಅವನ ಅಂತಃಕರಣದ ಮೇಲೆ ಕಾದ ಕಬ್ಬಿಣವ ಬರೆಯನ್ನೆಳೆಯಿತು ಅದರಿಂದ ಗಾಸಿಯಾದ ಅವನು:

"ಹೆಂಗ ಹ್ವಾದ ನೋಡ್ರಿಽಽ, ಸಿದ್ದಣ್ಣ !"

"ಹೋಗವೊಲ್ಲ ತಗೋ, ಏನು ನಿನ್ನ ಈಳೇ ಗಿಡಾ-ಬಾಳೇ ಗಿಡಾ ಕಡಿಯಾವ ಇದ್ದಾನ !....."

"ಒಂದು ಒಳ್ಳೇ ಕೆಲಸದ ಸಲುವಾಗಿ ನಾಲ್ಕ ದುಡ್ಡು ಖರ್ಚಾ ದರೂ, ಆ ಮಾತು ಬ್ಯಾರೇ,..... ಆದ್ರ ತಿರಿತಿರಿಗಿ ಕೊಡು— ಅಂತ ಅಂದ್ರಽ, ಪಾಽಪ ! ಇವನರೇ ಎಲ್ಲೀದು ಕೊಟ್ಟಾನು!"

ಉಳಿದವರ ವಿಚಾರವನ್ನು ಗ್ರಹಿಸುವುದಕ್ಕೋಸ್ಕರ ನುಡಿದರು ನೀಲಕಂಠಪ್ಪ. ತಲೆದೂಗಿ ಸಮ್ಮತಿಯಿತ್ತರು ಅವರೆಲ್ಲ. ದೀರ್ಘ ಆಳಕಿಳಿಕೆಯೊಡನೆ ಕತ್ತೆತ್ತಿ ಮೇಲೆ ನೋಡಿದರವರು. ಎದುರಿಗೇ

ಮಹಾತ್ಮರ ಭಾವಚಿತ್ರ. ಮುಗುಳು ನಗೆಯ ಗಾಂಧಿ ನೀಲಕಂಠಪ್ಪನತ್ತ ನೋಡುತ್ತಿರುವಂತೆ ಕಂಡಿತು. ನೋಡುವುದಾಗಲಿಲ್ಲನೇನೋ,— ಅವಂಗೆ; ಮುಂದೆ ಇದ್ದ ಲಾಟನನ್ನು ಹೊರಳಿಸಿಟ್ಟು ಪ್ರಕಾಶದ ದಿಕ್ಕನ್ನು ಬದಲಿಸಿದರು. ಅಡಿವೆಪ್ಪನ ಚಿತ್ತ ಈ ಯಾವ ಚಲನವಲನ ದೆಡೆಗೂ ಇರಲಿಲ್ಲ. ಚಿಂತೆ ಚಿತೆಯಾಗಿ ಮನಸ್ಸನ್ನು ದಹಿಸುತ್ತಿತ್ತು. ಕೆಲಹೊತ್ತು ನೀರವ, ನಿಃಶಬ್ದ. ನೀಲಕಂಠಪ್ಪನವರೇ ಮೌನದ ಮುದ್ರೆಯೊಡೆದರು:

"ಹೂಂss.... ಹೇಳು ಅಡಿವೆಪ್ಪಾ, ಹೆಂಗ ಮಾಡ ಅಂತೀ !"

"....."

"ನಿನ್ನ ಸಲುವಾಗೇss ಮಾಡೋದು ಇದೆಲ್ಲಾ ಉಸಾಬರಿ. ತಿಳೀಲಾರದ ಮನುಷ್ಯಾ ನೀ....ಹುಚ್ಚನಾಂಗ ತಿರುಗೀ ಅಂತ !!...."

ನೀಲಕಂಠಪ್ಪನ ನುಡಿ ಕೇಳಿ, ಒತ್ತಿನಿಂತ ದುಃಖದ ಒಡ್ಡು ಒಡೆಯಿತು. ಗಳಗಳನೆ ಕಣ್ಣೀರಿಡುತ್ತ ನೀಲಕಂಠಪ್ಪನ ಪಾದಗಳ ಮೇಲೆ ಹಣೆಯಿಟ್ಟು ಬೇಡಿಕೊಂಡ ಅಡಿವೆಪ್ಪ:

"ಅಣ್ಣಾ, ನಾ ಬಡವ. ನನ್ನ ಕಾಯೋದು ಕೊಲ್ಲೋದು ನಿಮ್ಮನ್ನss ಕೂಡೇತಿ."

ಉಳಿದವರು ಹೆಚ್ಚು ಮಾತು ಬೆಳೆಸಿ ಉಪಯೋಗವಿಲ್ಲವೆಂದು ಮುಖ್ಯ ವಿಷಯವನ್ನೇ ನಿರ್ಣಯಿಸಿದರು. ಅದರಲ್ಲಿ ಹನುಮಂತ ದೇವರ ಗುಡಿಯ ದುರುಸ್ತಿಗಾಗಿ, ಅಡಿವೆಪ್ಪನ ಬದಲಾಗಿ ನೀಲಕಂಠಪ್ಪ ನವರೇ ಸಾವಿರ ರೂಪಾಯಿ ಖರ್ಚು ಮಾಡತಕ್ಕದ್ದಿಂದೂ, ಅದರ ಬದಲು ಅಡಿವೆಪ್ಪ, ಮುಂದಿನ ಐದು ವರ್ಷಗಳ ವರೆಗೆ ತನ್ನ ನಾಲ್ಕು ಎಕರೆ ಹೊಲವನ್ನು ನೀಲಕಂಠಪ್ಪನವರ ಒಡೆತನಕ್ಕೆ ಒಪ್ಪಿಸಬೇಕೆಂದೂ ಗೊತ್ತಾಯಿತು. ಅಡಿವೆಪ್ಪನು ಪಂಚರ ಎದುರಿನಲ್ಲಿ ವಚನವಿತ್ತನು. ಕೆಲಸ ಮುಗಿದಂತಾಯಿತು. ಅಷ್ಟರಲ್ಲಿ ನೀಲಕಂಠಪ್ಪನವರಿಗೆ ಊಟದ ಕರೆಯೂ ಬಂತು. ಉಳಿದ ಜನ ಎದ್ದು ಹೋದರು. ದಿಙ್ಮೂಢನಾಗಿ ಕುಳಿತ ಅಡಿವೆಪ್ಪನೂ ಚೇತರಿಸಿಕೊಂಡು, ಎದ್ದು ನಿಧಾನವಾಗಿ ನಡೆದ. ನೀಲಕಂಠಪ್ಪನವರೇ ಕೇಳಿದರು:

"ಹೋಗ್ತಿಯಾ ಅಡಿನೆಪ್ಪಾ ?....." ತೂರಿ ಬರುವ ಕತ್ತಲೆಯಲ್ಲಿ ದಾರಿಗಾಣದೆ ಎಡವುತ್ತ ಸಾಗಿದ ಅಡಿವೆಪ್ಪನು 'ಹೂss.....' ಅನ್ನಲು ಪ್ರಯತ್ನಿಸಿದರೂ ಧ್ವನಿ ಸ್ಪಷ್ಟವಾಗಿ ಹೊಮ್ಮಲಿಲ್ಲ.

ಹೊರಗೆಲ್ಲ ದಟ್ಟವಾದ ಕತ್ತಲೆ ಹರಡಿದ್ದರೂ, ನೀಲಕಂಠಪ್ಪನ ಮನೆಯ ತುಂಬ ಬೆಳಕು. ಆ ಬೆಳಕಿನಲ್ಲಿಯೇ ಅವರಿಗೆ,— ಅವರ ಹೊಸ ತೋಟ, ಅದರ ಹೊಂದಿಗಿದ್ದ ಅಡಿವೆಪ್ಪನ ಹೊಲ! ನಾಲ್ಕು ಎಕರೆಯ ಭೂಮಿ! ಅದೂ ತಮ್ಮ ಬಾವಿಯ ನೀರಿನಿಂದ ನೀರುಣು ವಂತಹದು!.....ಎಂಥ ಸೊಗಸಾದ ಹೊಲ! ಐದು ವರ್ಷಗಳ ವರೆಗೆ! ದಿನಕ್ಕೊಂದು ಭೂ ಕಾನೂನು! 'ಉಳುವವನೆ ಒಡೆಯ!'.... ಹೂss.....ಹು....."

* * * *

"ಗೊರ್ss.....
ಗೊರ್sss....."
"ಸೊಂಯ್ss..... ಸೊಂಯ್sss....."
ಗೋರ್ss ರ್ss"
"ಚ್ss ಚ್ಚ್....ಚಚ್ss ಚಚ್ಚ....."
"ಸಾವಿರ ರೂಪಾಯಿ. ಅಣ್ಣಾ, ನಾ ಬಡವರೀ!....."

ಏನು ಹುಚ್ಚ ಇದ್ದೀ ನೀ! ಆನೀ ಕಾಲಿನಂಥಾ ಹೊಲಾ ನೋಡತೀಯೋ !!! ಏನು ಸೊಟ್ಟ ರೂಪಾಯಿ ನೋಡತೀಯೋ !!"

"ಒಂದು ವರ್ಷ ಬೆಳೆದರ ನಿನ್ನ ರೊಕ್ಕ ಹೊಂಟು ಹೋಗತಾವ"

"ಇಲ್ಲದಿದ್ದರ, ನಿನ್ನ ಹೋಲಾ ಹೋಗತೈತಿ!"

"ಆ ss....."

"ಕಾಯದೆ ಯಾರ ಮನೀದು?"

ಅಯ್ಯೋss.....ಪ್ಪಾ ನನ್ನ ಹೋಲಾನ!....."

"ಅ.... ಅ.... ಊ....ss ....ಊ.....ಊ..... "

ಒಳಮನೆಯಲ್ಲಿ ಮಲಗಿದ್ದ ಬಾಳವ್ವನಿಗೆ ಆಗಲೇ ಅರ್ಧ-ಮರ್ಧ ಎಚ್ಚರಾಗಿತ್ತು. ಆದರೂ ಮಾತಾಡಲು ಬಾಯಿ ಬರಲೊಲ್ಲದು. ದೀಪಹಚ್ಚಲು ಕೈ ಏಳಲೊಲ್ಲವು. ಹಾಸಿಗೆಯಲ್ಲಿ ಮಲಗಿಕೊಂಡೇ—

"ಕೇಳಿದ್ಯಾನ?.... ಕೇಳ್ರಿ ?...."

"....."

"ಎಚ್ಚರಾಗೀದೀರ್ಯಾನ?..... ಆಂ, ಯಾನಂದ್ರಿ! "

"ಊss ಊ.....ಊ ..... ಊss.....ಅಯ್ಯೋ !!.... ನನ....."

"ಹಿಂಗ್ಯಾಕ್ರಿ !!! ಆ..... "

ಜೋಲಿ ಹೊಡೆಯುತ್ತ ಬಾಳವ್ವ ಹಾಸಿಗೆಯಿಂದ ಎದ್ದಳು. ದೀಪ ಹಚ್ಚಿಕೊಂಡು ಪಡಸಾಲೆಯಲ್ಲಿ ಬಂದಳು. ಸುತ್ತಲೂ ಗಾಢವಾದ ಕತ್ತಲೆ 'ಕೇss' ಎನ್ನುತ್ತಿತ್ತು. ಬೇರಾವ ಕಡೆಗೂ ನೋಡ ಲಾರದೆ ಅಡಿವೆಪ್ಪನ ಮುಖದ ಮೇಲಿನ ಕಂಬಳಿಯ ಮುಸುಕನ್ನು ಅಳೆ ತಳ್ಳಿದಳು,— ಭುಜವನ್ನು ತಟ್ಟಿ-ತಟ್ಟಿ ಅಗಳಾಡಿಸಿದಳು.

"ಆss .... ಊs...." ಕನವರಿಸುತ್ತ ಕಣ್ಣು ತೆರೆದ ಅಡಿವೆಪ್ಪ, ಮತ್ತೆ ಮುಚ್ಚಿದ.

"ಮಲಗ ಬ್ಯಾಡ್ರಿ, ಏಳ್ರಿ, ಜರಾ! ಎದ್ದು ಕೂಡ್ರಿ....."

ಅಳಿಸುತ್ತ ಎದ್ದು ಕುಳಿತು ಅಡಿವೆಪ್ಪ ಹೆಂಡತಿಯೆಡೆಗೆ ನೋಡಿದರೂ— ಆಗಾಗ ಕಣ್ಣು ಮುಚ್ಚುತ್ತಲೇ ಇದ್ದ.

"ಯಾನ ಕನಸು ಬಿದ್ದಿತ್ತ ಯಾನ್ರಿ.....?"

"ಎಲ್ಲೀss....ಕ....ನ....ಸ!"

"ಮತ್ತ, ಹಂಗ್ಯಾಕ ಒಡಬಡಸತಿದ್ರಿ....?"

"ಯಾss ...ರಿ....! ಒಡಬಡಿಸಿದಾರ ?"

"ಹಾಂಗಾದರ ಇಷ್ಟೊತ್ತಿನ ತನಕss, ನಾನು ಬಡ-ಬಡಿಸೀ ನ್ಯಾನ್ರಿ?" ಎಂದು ಕೊಂಕು ನಗೆಸೂಸಿ ನುಡಿದಮಾತಿಗೆ ಅಡಿವೆಪ್ಪನ ತುಟಿಗಳು ಅರಳಿದುವು. ಎದ್ದುಹೋಗಿ ಅಡಿವೆಪ್ಪ ದನಗಳಿಗೆ ಮೇವು ಒಗೆದುಬರುವ ತನಕ ಬಾಳವ್ವ ದೀಪ ತೋರಿಸುತ್ತ ನಿಂತಿದ್ದಳು.

"ಹೂss ಹೋಗು ಇನ್ನ, ಮಲಕೋ ಹೋಗು! ಇನ್ನೂ ರಾತ್ರಿ ಬಹಳ ಇದ್ದಾಂಗ ಕಾಣಸ್ತೈತಿ....."

"ನಾ ಒಲ್ಲೆ ತಾಯಿ ಒಳಗ. ಇಲ್ಲೇss ನಿಮ್ಮ ಹಂತ್ಯಾಕ ಬರತೀನಿ...." ಎದೆಯ ಮೇಲೆ ಸೆರಗೆಳೆದುಕೊಳ್ಳುತ್ತಿದ್ದ ಬಾಳವ್ವನೆಡೆಗೆ ಅಡಿವೆಪ್ಪನ ದೃಷ್ಟಿ ಸಹಜವಾಗಿಯೇ ಹೋಯಿತು. ತಾರುಣ್ಯದ ಭಾರದಿಂದ ಎದ್ದು ತೋರುವ ಎದೆಯನ್ನು ಕಂಡು, ಆ ದೇಹ ಪುಲಕಗೊಂಡಿತು. ಯಾವುದೋ ಶಕ್ತಿ ಅಡಿವೆಪ್ಪನನ್ನು ಬೇರೆ ಕಡೆಗೆ ಎಳೆಯಿತು

ಬಾಳವ್ವ ರಾಮೂನನ್ನು ತಂದು ಗಂಡನ ಹಾಸಿಗೆಯಲ್ಲಿ ಹಾಕಿ, ತನ್ನ ಹಾಸಿಗೆಯನ್ನು ಮಾಡಿಕೊಂಡು, ಬಳಿಕ ಮಗನನ್ನು ತನ್ನ ಮಗ್ಗುಲಲ್ಲಿ ಕರೆದುಕೊಂಡಳು.

"ಎಂಥಾ.... ನಿದ್ದಿ ನೋಡ್ರಿ!..... ನಿಮ್ಮ ಮಗಂದು!..... ಒಂದೀಟರೆ ಕಂಯ್-ಕುಂಯ್ ಅಂತಾನೇನು?...."

"ಹೂss ...!!"

ಕಂಬಳಿಯ ಮುಸುಕನ್ನು ಎಳೆದುಕೊಂಡು, ಮಗ್ಗಿಲು ಹೊರಳಿಸಿದ ಅಡಿವೆಪ್ಪ. ಗಂಡನನ್ನು ಏನೋ ಕೇಳಬೇಕೆಂದು ಬಾಯಿ ತೆರೆದರೂ ಬಾಳವ್ವನ ಗಂಟಲಿನಿಂದ ಧ್ವನಿಯೇನೂ ಹೊರಡಲಿಲ್ಲ. ಅವಳಿಗೆ ತನ್ನ ಪತಿಯ ಬಗ್ಗೆ ಅಲೋಚನೆ ಹಿಡಿಯಿತು. ಅವನು ಅಂದು ಸಂಜೆ ಊಟ ಮಾಡದೆ ಇದ್ದದ್ದೂ, ಈಗ ನಿದ್ದೆಗಣ್ಣಿನಲ್ಲಿ ಬಡ-ಬಡಿಸುತ್ತಿದ್ದದ್ದೂ ಆ ಹೆಣ್ಣುಗರುಳಿಗೆ ಆಘಾತವನ್ನುಂಟು ಮಾಡಿದುವು. 'ಅಯ್ಯೋss.... ನನ್ನ....ಹೊಲಾ!...." ಎಂದು ಕಿರುಚಿದ ಭೀಷಣರವ, ಬಾಳವ್ವನನ್ನು ಭಯ-ಭೀತಳನ್ನಾಗಿ ಮಾಡಿತು. ಆ ಶಬ್ದ ಘೋರ ರೂಪ ತಾಳಿ ತಿರುತಿರುಗಿ ಅವಳ ಮನದಲ್ಲಿ ಸುತ್ತಿತು. ಮನೋದೃಷ್ಟಿ ಹಿಂದಿಟ್ಟಿಗಿ ನೋಡಿತು— ಒಂದು ವರ್ಷದ ಹಿಂದೆ:—

ಹಿರಿಯರು ಗಳಿಸಿಟ್ಟ ಹೊಲ 'ಗಡೀ ಪಟ್ಟೀ ಆ ಊರಿಗೇ ಮಿಗಿಲಾದ ಎರೆಯ ಭೂಮಿ. ಮಳೆಯು ಪೂರೈಕೆಯಾದರೆ ಸಾಕು,— ಒಂದು ವರ್ಷದ ಬೆಳೆಯನ್ನು, ನಾಲ್ಕು ವರ್ಷ ಮನೆಯವರೆಲ್ಲ ಕೂತು ತಿಂದರೂ ಸರಿಯದು. ಆದರೆ ಹರದಾರಿ ಹಾದಿ ದೂರವಿದ್ದ ಹೊಲಕ್ಕೆ ಹೋಗಿಬರಬೇಕಾದರೆ ಸಾಕು-ಬೇಕಾಗುವುದು. ಅದಕ್ಕೆಂತಲೇ ಅಡಿವೆಪ್ಪ, ಹಿರಿಯರ ಆ ಒಂಬತ್ತು ಎಕರೆ ಆಡವಿಯನ್ನು ನಾಲ್ಕು ಸಾವಿರ ರೂಪಾಯಿಗಳಿಗೆ ಮಾರಿ, ಊರ ಬಳಿಯಲ್ಲಿರುವ ಎಂಟು ಎಕರೆ ಭೂಮಿಯನ್ನು ಅದು ಸಾವಿಂಕ್ಕೆ ಕೊಳ್ಳಬೇಕಾದರೆ— ಬಾಳವ್ವ ತನ್ನ ಮೈಮೇಲಿನ ಹತ್ತು ತೊಲೆ ಬಂಗಾರವನ್ನೂ ಅದಕ್ಕೆ ಧಾರೆಯೆರೆಯಬೇಕಾಯಿತು 'ಬಾಳೀ, ಒಂದು ವರ್ಷದ ಉತ್ಪನ್ನದಲೇನss ನಿನ್ನ ಬಂಗಾರದಾಗ ಮುಚ್ಚತೇನಿ; ಯಾನ ಕಾಳಜೀಮಾಡಬ್ಯಾಡ."

ಎಂದು ಅಡಿವೆಪ್ಪ ಅಂದಾಗ 'ನನ್ನ ಜೀವಂತ ಬಂಗಾರಕ್ಕ ಆಶ್ಯಾ ಆದಗ ಸಾಕು; ಇಂಥಾ ಸೊಟ್ಟ ಬಂಗಾರ ಎಷ್ಟು ಬಂದೀತು?" ಎಂದು ನುಡಿದು ಗಂಡನ ಮಾತಿನ ಮುಯ್ಯ ತೀರಿಸಿದ್ದಳು ಬಾಳವ್ವ.

ಕೊಟ್ಟಗೆಯಲ್ಲಿ ದನಗಳು ಮೆಲುಕಾಡಿಸುವ ಸಪ್ಪಳ ಕೇಳಿಬರುತ್ತಿದ್ದಿತು. ಒಪ್ಪಿಲೆ ಏನೋ ಸರ್ ಪರ್. ಖು....ಟ್....ಖು....ಟ್....

"ಏಽಯ್, ಸುಮ್ಮನ ಬೀಳರೆಲ್ಲಾ..."

ಅಡಿವೆಪ್ಪ ಮುಸುಕಿನಲ್ಲಿಂದಲೇ ಅಂದನು:

"ಎಮ್ಮಿ ದಾವಣ್ಯಾಗ ನಿಂತಿದ್ದೀತು....."

"ಹೂ!....."

ನಿಮಗ ನಿದ್ದಿಹತ್ತಿಲ್ಯಾನ ಇನ್ನೂ!"

"ಮಾಡಿದ ಕಾರಭಾರ ಮುಗಿಯೂ ತನಕಾ ಎಲ್ಲೀ—ನಿದ್ದಿ—ಎಲ್ಲೀ—ನೀರಡಿಕೆ!"

"ಹಿಂಗ ನೀವು, ಒಂದss ಸನನ ಕಾಳಜೀ ಮಾಡಿಕೊಂತ ಕೂತ್ರss ಯಾನೆ ಆಗೋದು! ನಾವು ಹೊಲಾ ಕೊಂಡದ್ದು ಸುಳ್ಳೋ!.... ದೇಸಾಯರು ಮಾರಿದ್ದು ಸುಳ್ಳೋ!....

"ಅದೆಲ್ಲಾss ಖರೇ!...."

"ಹೊಲಾ ಬೇಕಾಗಿದ್ದರ, ಮೊದಲ ಯಾಕ ಒಲ್ಲೆಂದ?"

"ಮೊದಲ ಒಲ್ಲೆಂದನss.... ಈಗ ದಣಿಸಲಿಕ್ಕೆ ಹತ್ಯಾನಲ್ಲ!!"

ಅಡಿವೆಪ್ಪ ಉಸುರ್ಗರೆದು, ಮುಖದ ಮೇಲಿನ ಹೊದಿಕೆಯನ್ನು ಕೆಳಗೆ ತಳ್ಳಿದನು. ಸೆಕೆಯಾಯಿತೇನೋ, ಅವನಿಗೆ. ಬಾಳವ್ವನ ದನಿ ಕೊಂಚ ಗಡುಸಾಯಿತು. ಅದರಲ್ಲಿ ಸಿಟ್ಟೂ ಮೂಡಿತು.

"ನಮ್ಮಂಥಾ ಬಡವರ ಸುತ್ತss ಏತ್ಯಾನ ಇದೆಲ್ಲಾ!....."

ಇದ್ಯಾನ ಚಂದ ಮಾಡತೈತಿ ಸರ್ಕಾರ....!!

"ಕಾಯದೇನೆss ಅಂಥಾದು ಬಂದೈತ್ಯಂತ!"

"ನಮ್ಮ ಜೋಡೀನ, ಆ ನೀಲಕಂಠಪ್ಪನವರು ತಗೊಂಡು. ಬಾವೀ ತಗದು ತ್ವಾಟಾನೂ ಮಾಡ್ಯಾರ— ಅವರಿಗ್ಯಾನ ಇಲ್ಯಾನ, ಕಾಯದೆ?"

"ಈ ಜಗದಾಗ ದೊಡ್ಡವರ ಪೆಸರು ಯಾರು ತಗೀತಾರು?.... ಎಲ್ಲಾರೂss. ಬಡವರ ಸುತ್ತss ..."

"ಅಮ್ಯಾಲಿ ಹೆಂಗ?"

"ನೀಲಕಂಠಪ್ಪನವರು ಮ್ಯಾಲೆ ಹೋಗಿ, ಖಟ್ಲೇನss ರದ್ದು ಮಾಡಿಸತೇವಂತ ಹೇಳಿದಾರ."

"ಛೆಲೂss ಆಯ್ತು. ದೈವುಳ್ಳನನ ಹೊಟ್ಟೆ ತಣ್ಣಗಾಗಲಿ."

"ಛೆಲೂss ಯಾನ ಆಗತೈತಿ. ಸಾವಿರ ರೂಪಾಯಿ ಕೊಡೋದು ಆಗೇತಿ"

"ಆ!! !.... ಎಲ್ಲೀ ರೂಪಾಯಿ!....."

"ಆ ರೂಪಾಯಿ ಬದ್ಲೀ ಕೆಳಗಿನ ಪಟ್ಟೇನ ಐದು ವರ್ಷ ತನಕಾ ಕೊಡೋದು ಆಗೇತಿ...."

"ಹಾ!! !....."

"ಉಂಗರ ವ್ಯಾಗಿನ ಹಳ್ಳಿನಂಥಾ ನನ್ನ ಹೊಲಾ, ಐದುವರ್ಷ ಒತ್ತೀಹಾಕೋದಾ! ನಮ್ಮಂಥಾ ಬಡವರ ಹತ್ಯಾಕೆಂದರೂಪಾಯಿ ತಗೊಳ್ಳೂ ಬದಲು — ಸೆ....ಗ....ಣಾ....ತಿ....ನೆ....."

"ಅವರ ಯಾತಕ್ಕ ತಿಂದಾರು! ಕಾಂಗ್ರೇಸ್ ಮಂದಿ!! ..... ಹಣಮಂತ ದ್ಯಾವ್ರ ಗುಡೀ ಕಟ್ಟಸಲಾಕ ಖರ್ಚು ಮಾಡತಾರ....!!"

ಇದಾವುದೂ ಬಾಳವ್ವನ ಕಿವಿ ಮುಟ್ಟದಂತೆ ಕಾಣಲಿಲ್ಲ. ಅವಳ ಹೃದಯದಲ್ಲಿ ಎಂದಿಲ್ಲದ ವೇದನೆಯಾಗತೊಡಗಿತು. ತನ್ನ ಹೊಲ ಇನ್ನೊಬ್ಬರ ಕಡೆಗೆ ಹೋಗುವುದನ್ನು ಕೇಳಿ ಮಮ್ಮಲ ಮರುಗಿದಳು. ದುಃಖ ಒತ್ತರಿಸಿ ಬಂತು, ಬಿಕ್ಕು ಹೊರಬಿದ್ದುವು. ಒಡಲಲ್ಲಿಯೇ ನುಂಗಲು ಯತ್ನಿಸಿದಳು.

"ಬಾಳೀ, ಕೆಟ್ಟ ಅನಿಸ್ಯೋ ಬ್ಯಾಡ!.... ಊರಾಗಿನ ದೊಡ್ಡ ಮುಂದೀ ಮಾತು ಕೇಳದಿದ್ದರ ಹೆಂಗ ನಡೆದೀತು!....

ಈ ವರ್ಷದ ಬೆಳಿ ಆಂತೂ ನಾವsss ತಗೋತೀವಿ....."

ಎನ್ನುವಾಗ, ಅಡಿವೆಪ್ಪನ ದೃಷ್ಟಿಯ ಎದುರು ಆ ಜೋಳದ ಬೆಳಿ ಬಂದು ನಿಂತಿತು. ಹೊಲದಲ್ಲಿ ಹಕ್ಕಿ ಕಾಯುವಾಗ ಯಾರೋ ಅಂದ ಮಾತು ನೆನಪಿಗೆ ಬಂತು. 'ಅಡಿವೆಪ್ಪಾ, ಮನೀಗಿ ಜ್ವಾಳಾ ಒಯ್ಯಲಾಕ, ಮೋಟರು ಬಾಡಿಗೀ ಹೇಳಲಾಕss ಬೇಕು." ಈ ಮಾತನ್ನು ಹೆಮ್ಮೆಯಿಂದ ಹೆಂಡತಿಗೂ ಹೇಳಿದ್ದ ಅಡಿವೆಪ್ಪ. ಅವಳ ದೃಷ್ಟಿಯ ಎದುರಿಗೂ ಮುತ್ತಿನಂತಹ ಕಾಳುಗಳನ್ನು ಹೊತ್ತುಕೊಂಡ, ಬಾಳೆಯ ಗೊನೆಗಳಂತಹ ನೊಳದುದ್ದ ತೆನೆಗಳ ಅಪಾರವಾದ ದಂಡು ಸರಿಯಿತು. ಮನದಲ್ಲಿ ವಿಚಾರದ ಕಿರಣವೊಂದು ಮೂಡಿ ಅದು ಉದ್ಗಾರದ ದನಿಯಿಂದ ಹೊರಬಂತು:

"ಈ ವರ್ಷ ಜ್ವಾಳಾ ಮಾರಿ— ಅವರ ರೂಪಾಯಿ ಕೂಡಿಸಿ ಕೊಟ್ರss!"

"ಮೊದಲ ಬೆಳೀ ಆರೀ ಬರಲಿ....."

ಹೆಂಡತಿಯ ವಿಚಾರದಿಂದ ಅಡಿವೆಪ್ಪನ ಮನಸ್ಸಿನಲ್ಲೇನೋ ಕ್ಷಣ ಹೊತ್ತು ಆಶೆಯ ಮೋಡ ಕಾಣಿಸಿಕೊಂಡರೂ, ಕೂಡಲೇ ಅದು ಕರಗಿ ಹೋಯಿತು. ಸತ್ಯನಿಷ್ಠವಿವೇಕದ ಗಾಳಿ ಅದನ್ನು ಹೊಡೆದು ಹಾಕಿರಬೇಕು. ದೀರ್ಘ ಉಸಿರೊಂದು ಹೊರಬಿತ್ತು ಅಡಿವೆಪ್ಪನ ಅಂತರಾಳದಿಂದ. ಗಂಡನಿಗೆ ಜೊಂಪು ಹತ್ತುತ್ತಿರಬೇಕೆಂದು ಬಾಳವ್ವನೂ ಸುಮ್ಮನಾದಳು. ಆ ಗಾಢ ಅಂಧಕಾರದೊಡನೆ ಚಳಿಯೂ ಒಳನುಗ್ಗಿತು. ನಡುಕ ಹುಟ್ಟಿಸಿತು.

* * * *

ಇರುಳು ಕಳೆದು ಅದೇ ಬೆಳಗಾಗಿತ್ತು ಅಡಿವೆಪ್ಪನ ಮನೆಯಲ್ಲಿ ಅದೆಂತಹ ಭಯಾನಕ ವಾತಾವರಣ.....!

ಕೂಗಾಟ..... ಕಿರುಚಾಟ,..... ಬೊಬ್ಬಾಟ— ಒಂದರ ಹಿಂದೊಂದು ಹಾಡುವುದು..... ನಗುವುದು..... ಅಳುವುದು. .....ಬೀಳುವುದು..... ಏಳುವುದು. ಒಂದರೊಳಗೊಂದು.

ಜನ ಜಾತ್ರೆಯಂತೆ ಕೂಡಿದೆ. ಹೋಗುತ್ತಾರೆ. ಬರುತ್ತಾರೆ ಸಂತಯಿಸುತ್ತ ನಿಂತಿದ್ದಾರೆ.

"ಬಾಳೀsಸ ಜನ್ಮ ಹಾಳಾsssಯ್ತು! !....

" ನಡಿಯೂ ಬಂಡಿ ಕೇಲು ಆಚ್ಚೆದಾಂಗಾಯ್ತು! ! ...."

ಮುದುಕಿಯೊಬ್ಬಳು ಕಣ್ಣೀರುದುರಿಸುತ್ತ ನುಡಿದಳು:

"ಛೆಲೋ ಇದ್ದವರದು ಹ್ಯಾಂಗಾದರೂ ಆತು. ಅದರ ದೇವರಂತಹ ಮನುಷ್ಯಾ ಅಡಿವೆಪ್ಪ !....

ಅಡಿವೆಪ್ಪ ಹಾಡಿದ....

"ಜ್ವಾಳಾ ಕೊಯ್ಯುನು ಏsಳ್ರಿ.....!!! ಲಂಂ ಮುಂದುನು ನಡೀರಿ.... !!! " ದನಿತೆಗೆದು ಅತ್ತು ಕರೆದ; ಹಲ್ಲುಕಿರಿದು ನಗಹತ್ತಿದ.

"ಹೊಲ!.... ಹೊಲ! ಹೊಲ!.... ಹೊಲ!...."

"ದೇsವ್ರು, ಯಾನ ಮಾಡಿಟ್ಟೋsssss.... ಬಾಬಾsss ನಿನ್ನ !!! "

ಹಿರಿಯ ಹೆಣ್ಣುಗರುಳೊಂದು ಕಂಒನಿ ಮಿಡಿದು ನುಡಿಯಿತು:

"ದೇವ್ರುs ಯಾತ್ಕ ಮಾಡಾಕ ಹ್ವಾದಾನು.... ಮನಷಾರು ಮಾಡತಾರ.... ಹುಡುಗ ಎದಿ ಒಡಕ....ಜ್ವಾಳಾ ಕಡದದ್ದು ಕೇಳಿ.... ಭ್ರಮಾ ಆಯ್ತು!...."

" ಯಾರ.... ಹೊಲಾ!.... ಯಾರ.... ಮಾತು!.... ಎಷ್ಟ ಹದಗೆಟ್ಟತವ್ವಾ !" ಕೂಡಿದ ಜನರ ಲಕ್ಷ್ಯವನ್ನು ಯಾರೋ ಸೆಳೆದರು. ಬಂದ ನೀಲಕಂಠಪ್ಪ ಬೀದಿಯ ಮೇಲೆ ನಿಂತು " ಬರೇ ಗ್ವಾಳೇ ಆಗಿ ಹಿಂಗ ನಿಂತ್ರ ಆಗೋದ್ಯಾನ?.... ಯಾರಾದ್ರೂsss ದವಾಖಾನೇಕ ತಗೊಂಡುಹೋಗ್ರಿ!....ನಾ ಪತ್ತಾ ಕೊಡತೇನಿ." ಎಂದು ಹೇಳಿ ಮುಂದೆ ಹೋದರು.

ತಾರಕಂಬಗಳು

(ಲಲಿತ ಪ್ರಬಂಧಗಳ ಸಂಕಲನ)

ಲೇಖಕರು

ಶ್ರೀ ಬಿ. ಆರ್. ವಾಡಪ್ಪಿ, ಎಂ. ಎ, ಬಿ. ಟಿ.

ಇದೀಗ ಪ್ರಕಟವಾಗಿದೆ.

ಹಿರಿಯ ಕವಿಗಳಾದ ಶ್ರೀಮಾನ್ ಬೇಂದ್ರೆ ದತ್ತರಾಯರ ಮುನ್ನುಡಿಯೂ ಇದೆ.

ಬೆಲೆ ೧೩೫ ನ. ಪೈ.] [ಕ್ರೌ. ೧೬ ಪುಟಗಳು

ಮಾರಾಟಗಾರರು

ಮನೋಹರ ಗ್ರಂಥಭಾಂಡಾರ, ಧಾರವಾಡ

ಮತ್ತು

ಸಮಾಜ ಪುಸ್ತಕಾಲಯ, ಭಗತಸಿಂಗ ಬೀದಿ, ಧಾರವಾಡ

ನಾರಿ: ನೀರೆ

(ಶಬ್ದಗಳ ಸತ್ಯಾರ್ಥಸಂಶೋಧನೆ)

ಶೀ ಶಂ. ಬಾ. ಜೋಶಿಯವರು,
ಧಾರವಾಡ

ಭಾಷೆಯಲ್ಲಿಯ ಶಬ್ದಗಳಿಗೂ ಅದ್ಭುತವಾದ ಇತಿಹಾಸವಿರುವುದು. ವರ್ತಮಾನ ಕಾಲದಲ್ಲಿ ಇರುವ ಅವುಗಳ ವಾಚ್ಯಾರ್ಥ, ಅನೇಕ ಪರಿವರ್ತನೆಗಳಲ್ಲಿ ಹಾಯ್ದು ಬಂದಿರುವುದು. ಶಬ್ದಗಳ ವ್ಯುತ್ಪತ್ತಿಯನ್ನು ಈರಿತು ವಿಚಾರ ಮಾಡಿದರೆ, ಅವುಗಳಿಗೆ ರೂಢವಾಗಿರುವ ವಾಚ್ಯಾರ್ಥಗಳು ಕೌತುಕವನ್ನುಂಟು ಮಾಡುವುವು.

◆

ನಾರಿಯ ನಿಜಾರ್ಥವೇನು?

ಸಂಸ್ಕೃತದಲ್ಲಿ 'ನಾರಿ' ಎಂದರೆ ಪ್ರೌಢೆ, ಗಂಭೀರೆ, ಗರತಿ. ಕನ್ನಾಡವರ ಜಾನಪದ ಗೀತಗಳ ನಾರಿ ಗಂಭೀರ ಪ್ರಕೃತಿಯವಳಲ್ಲ; ಚಂಚಲೆ, ಚಪಲೆ; 'ನಗನಗತ ಬರುವ ಒಯ್ಯಾರಿ' ನಾರಿ! ಮರ್ಹಾಟಿ ಲಾವಣಿಗಳಲ್ಲಿ ಇವಳಿಗೆ **'ನಾರ'** ಎಂಬರು. ಅಲ್ಲಿ ಬರುವ 'ನಾರ'ಳ ವರ್ಣನೆಗಳು ನಮ್ಮ ಗ್ರಾಮಗೀತಗಳ ನಾರಿಯಂತೆಯೆ ಇವೆ. ಹಿಂದೀ ಲೋಕಗೀತಗಳಲ್ಲೂ 'ನಾರ'ಳೆಂದರೆ ಜನಮನವನ್ನು ಸೂರಿಗೊಂಬ ಮೋಹಿನಿಯೆ ಆಗಿದ್ದಾಳೆ. ಇಂತು ಸಂಸ್ಕೃತ ಸಾಹಿತ್ಯದಲ್ಲಿ ಕಾಣುವ ನಾರಿ, ಲೋಕಸಾಹಿತ್ಯದ 'ನಾರ'–'ನಾರಿ'ಗಿಂತ ಬೇರೆ ಬಗೆಯವಳಾಗಿರುವುದು ನಿಶ್ಚಿತವಾಗಿ ಗೊತ್ತಾಗುತ್ತದೆ. ಈ ತೆರನಾದ ಅರ್ಥವ್ಯತ್ಯಾಸಕ್ಕೆ ಕಾರಣವೇನಿರಬಹುದು? ಇವೆರಡರಲ್ಲಿ ನಾರಿಗೆ ಮೂಲಾರ್ಥವು ಮೂಲಸ್ವರೂಪವು ಯಾವುದು?

ನೀರೆ ಯಾರು?

ನಾರಿಯ ರಹಸ್ಯ ತಿಳಿಯಲು ನೀರೆಯಿಂದ ಏನಾದರೂ ನೆರವು ದೊರೆಯಬಹುದೇ— ವಿಚಾರಿಸತಕ್ಕಂತಹದಾಗಿದೆ. ನಮ್ಮ ಜಾನಪದ 'ನಾರಿ' ಸಾಹಿತ್ಯದಲ್ಲಿ ನೀಱೆಯಾಗಿದ್ದಾಳೆ. ಬೆಡಗಿನ ಈ ನೀಱ-ನೀಱೆಯರ ಪಡೆಮಾತು ಪ್ರಾಚೀನ ಸಾಹಿತ್ಯದಲ್ಲಿ ಕಾಣಿಸಿಕೊಳ್ಳದೆ ಇಲ್ಲ. ಪಂಪನು ಆದಿಪುರಾಣದಲ್ಲಿ ಮಾವಿನ ಮರದ ಸೊಬಗನ್ನು ಬಣ್ಣಿಸುವಲ್ಲಿ ಈ ಮಾತು ಬಂದಿದೆ (೧೧.೬೬):

ತಳಿರೊಳ್ ನೀನೆ ಬೆಡಂಗನ್ಯೆ. ನನೆಗಳೊಳ್ ನೀ ನೀಱಿನ್ಯೆ
ಪುಷ್ಪ ಸಂ-
ಕುಳದೊಳ್ ನೀನೆ ವಿಲಾಸಿಯ್ಯೆ, ಮಿಡಿಗಳೊಳ್ ನೀಂ
ಚೆಲ್ವನ್ಯೆ, ಪಣ್ತಪ-
ಣ್ಗಳಿನೋವೋ ಪೆಱತೇನೊ ನೀನೆ ಭುವಕ್ಕಾರಾಧ್ಯನ್ಯೆ
ಭೃಂಗ ಕೋ-
ಕಿಳ ಕೀರಪ್ರಿಯ ಚೂತರಾಜ, ತರುಗಳ್ ನಿನ್ನಂತೆ ಚೆನ್ನಂಗಳೇ!

ನೀಱಿನೆಂದರೆ ಸುಂದರೆ, ವಿಲಾಸಿ, ಸ್ವರಸಿ ಎಂಬ ಮಾತು ಇಲ್ಲಿ ಸೂಚಿತವಾಗಿದೆ. ಮೋಹನಾಂಗಿ 'ಕಡು ನೀಱಿ'ಯ ವರ್ಣನೆ ಅಭಿನವಪಂಪನಲ್ಲಿ ಬಂದಿದೆ ಹರಿಹರ. ಷಡಕ್ಷರಿಗಳೂ ಈ ನೀಱಿಯರ ಸೊಬಗನ್ನು ಮೆಚ್ಚಿಕೊಂಡಿದಾರೆ

ಸಾಹಿತ್ಯದಲ್ಲಿ ಈ ಪದವನ್ನು ಬಂಡಿಯ ಱಕಾರದಿಂದ ನೀಱಿ, ನೀಱಿ ಎಂದು ಬರೆವ ನಾಡಿಕೆ ಕಂಡರೂ, ನಿರುಕ್ತದ ದೃಷ್ಟಿಯಿಂದ ಇದು ನೀರ, ನೀರೆ ಎಂಬುದಾಗಿರುವುದೇ ಲೇಸೆಂದು ಹೇಳಬೇಕಾಗುತ್ತದೆ. ನೀಱು ಎಂಬ ಪದಕ್ಕೆ ತಮಿಳು–ತೆಲುಗಿನಲ್ಲಿ ಬೂದಿ ಎಂಬ ಅರ್ಥವಿದೆ! ಸುಟ್ಟು ಸುಣ್ಣವಾಗು— ಎಂಬ ಭಾವವುಳ್ಳ 'ನೀಱು' ಕಾಂತ. ರಮಣೀಯಾರ್ಥದಲ್ಲಿ ಬಳಕೆಯಲ್ಲಿ ಬಂದಿರಬಹುದೆಂದು ಊಹಿಸುವುದಕ್ಕಾದೀತೆ? ಅರ್ಜುನನು "ತನ್ನ ಬಾಳನೀರಿಂತೆ ಕಱುಂಗಿ ಕುರ್ಗಿದ (ಯಮುನೆಯ) ನೀರಂ ನೋಡಿದ" ವರ್ಣನೆ ಪಂಪಭಾರತದಲ್ಲಿ ಬಂದಿದೆ (೫. ೨೩ ವ). ಬಾಳ್ ಎಂದರೆ ಖಡ್ಗ. ಬಾಳನೀರು ಎಂಬ ಪಡೆನುಡಿಯಲ್ಲಿರುವ ಅರ್ಥವಿಶೇಷವು ಅಭ್ಯಸನೀಯವಾಗಿದೆ. ಇಲ್ಲಿ 'ನೀರು' ಎಂಬುದಕ್ಕೆ ಕಾಂತಿ, ತೇಜ ಎಂಬ ವ್ಯಂಗ್ಯಧ್ವನಿಯಿದೆ. ಪಂಪಭಾರತದಲ್ಲಿಯೆ ಬಂದ ಇನ್ನೊಂದು ಪ್ರಯೋಗವು ಹೀಗಿದೆ: ಶಿವನು ನಂದಿಯನ್ನೇರಿ ಕರ್ಣಾರ್ಜುನರ ಪರಾಕ್ರಮವನ್ನು ನೋಡಲು ಯುದ್ಧರಂಗಕ್ಕೆ ಹೊರಟಿದ್ದನು. ಗಿರಿಸುತೆ ಶಿವನ ಹಿಂದೆ ಕುಳಿತಿದ್ದಳು. ನಂದಿಯನ್ನೇರಿ ಬರುವಾಗ ಆತನ ನೀರೆಯ "ಮೊಲೆಗಳ ಱಳ್ಕೀಱುಂ **ನೀರು** ಏಱುತುಂ" (೧೨. ೧೫೯). ಇಲ್ಲಿ 'ನೀರು' ಎಂಬುದಕ್ಕೆ ಉತ್ಸಾಹ, ಆನಂದ, ಸೌಂದರ್ಯದೊಡನೆ ಕಾಮುಕಭಾವದ ಧ್ವನ್ಯರ್ಥವೂ ಇಲ್ಲದಿಲ್ಲ. ನೀರ್ ಮತ್ತು ನೀಱು ಎಂದು ಬರೆವಲ್ಲಿ ಸತ್ತ್ವ, ಸೌಂದರ್ಯವನ್ನು ಸೂಚಿಸುವಲ್ಲಿ ಸಹಜ ರಕಾರವನ್ನೂ, ಈ ಗುಣಗಳ ಮೂರ್ತಿ ಎಂಬಾಗ ಬಂಡಿಯ ಱಕಾರವನ್ನೂ ಬಳಸಬೇಕೆಂಬ ಸಂಕೇತವನ್ನು ಕಲ್ಪಿಸಿಕೊಂಡಂತೆ ಕಾಣುತ್ತದೆ. ಆದರೆ ಅಭಿನವಪಂಪನು ಈ ಸೂಕ್ಷ್ಮವನ್ನು ಲೆಕ್ಕಿಸಿದ ಹಾಗೆ ತೋರುವುದಿಲ್ಲ. ಆತನಲ್ಲಿ ನೀಱೀಱು ಎಂಬ ಪ್ರಯೋಗವು ಕಾಣಿಸಿಕೊಳ್ಳುತ್ತದೆ! ಱಕಾರವು ಈಗ ಉಳಿದಿಲ್ಲ. ಅಲ್ಲದೆ ನೀರ್ ಶಬ್ದವೆ ಇವೆಲ್ಲ ಲಕ್ಷಣಾರ್ಥಗಳಿಗೆ ಮೂಲವಾಗಿದೆ. ಆದುದರಿಂದ ನೀಱು, ನೀಱಿ ಎಂಬುವನ್ನು ನೀರ, ನೀರೆ ಈ ರೀತಿಯಾಗಿ ಬರೆಯುವುದಕ್ಕೆ ಯಾವ ಅಡ್ಡಿಯೂ ತೋರುವುದಿಲ್ಲ.

ಆದುದರಿಂದ ಮರ್ಹಾಟಿ, ಹಿಂದಿ ಲೋಕಗೀತಗಳೊಳಗಿನ 'ನಾರ'ಳು ಮತ್ತು ಕನ್ನಾಡ ಲಾವಣಿ ಜಾತಿಯ ಹಾಡುಗಳೊಳಗಿನ ನಾರಿಯು ನೀರೆಯೇ ಆಗಿದ್ದಾಳೆ ಎಂಬಲ್ಲಿ ಯಾವ ಸಂದೇಹಕ್ಕೆ ಇಂಬಿಲ್ಲ.

ನಾರಿ: ನೀರೆಯರ ಈ ನೀರು ಯಾವುದು?

ಈ ನೀರು ಸಂಸ್ಕೃತನಂತೂ ಅಲ್ಲ. ಏಕೆಂದರೆ (i) ತೇಜ, ಕಾಂತಿ, ಮೋಹಕತೆಯ ವಿಶೇಷಾರ್ಥ ಛಾಯೆಯುಳ್ಳ ಪಡೆನುಡಿಗಳು

ಸಂಸ್ಕೃತ ಸಾಹಿತ್ಯದಲ್ಲಿ ದೊರೆಯುವುದಿಲ್ಲ! (ii) 'ನೀರ್' ಶಬ್ದವು ಸಂಸ್ಕೃತದ 'ನೀರ'ದಿಂದ ನಿಷ್ಪನ್ನವಾಯಿತೆಂಬ ಗ್ರಹಿಕೆಯಿತ್ತು. ನುನಿಕ ತುಲನಾತ್ಮಕ ಭಾಷಾಶಾಸ್ತ್ರಜ್ಞರಿಗೆ ಇದು ಒಪ್ಪಿಗೆಯಿಲ್ಲ. (iii) ಇದು ಮಹಾಭಾರತದಲ್ಲಿ ದೊರೆಯುವುದಾದರೂ ಮೂಲ ಸಂಸ್ಕೃತ ಪದವೆಂದು ಹೇಳಲಾಗುವುದಿಲ್ಲ. ಇದು ಜಲವಾಚಕ; ಸಮಾನ್ಯಾರ್ಥದಲ್ಲಿ ಬೇಕಾದಲ್ಲಿ ಬಳಸಿದ್ದು ಕಂಡುಬರುವುದಿಲ್ಲ. ೀರಜ, ನೀರದ ಮುಂತಾದ ಕೆಲವೊಂದು ವಿಶಿಷ್ಟ ಶಬ್ದಸಾಧನೆಯಲ್ಲಿ ಮಾತ್ರ ಇದನ್ನು ಉಪಯೋಗಿಸಿದ್ದುಂಟು. (iv) ಇದು ಸಂಸ್ಕೃತ ದವಾಗಿದ್ದಲ್ಲಿ ತೇಜ, ಕಾಂತಿ, ಆಕರ್ಷಕತೆಯೆಂಬ ಲಕ್ಷಣಾರ್ಥಗಳು ಮೂಲದಲ್ಲಿಯೆ ಇಲ್ಲದಾಗ ದೇಶಿಯಲ್ಲಿ ಹೇಗೆ ಬಂದುವು? (v) ಎರವಾಗಿ ಎತ್ತಿಕೊಂಡ ಮಾತುಗಳಲ್ಲಿ ಮೂಲ ಶಬ್ದದ ಅರ್ಥವ್ಯಾಪ್ತಿಯು ಬಳಿಯುವುದಿಲ್ಲ ಎಂಬುದು ಒಂದು ಸಾರ್ವತ್ರಿಕ ಅನುಭವವುಂಟು.

ಮರ್ಹಾಟೆ ಮತ್ತು ಹಿಂದೀ ನಾರ (ನೀರೆ) ಈ ಊಹೆಗೇ ಬಲವೀಯುವುದು ಕಂಡುಬರುತ್ತಿದೆ. ಏಕೆಂದರೆ 'ನಾರ' ಇದು ನೀರು ಎಂಬ ಅರ್ಥವುಳ್ಳ ಪದವಾಗಿದೆ. 'ನಾರಾಯಣ' ಶಬ್ದದ ಮೂಲಾರ್ಥವನ್ನು ವಿವರಿಸುವಾಗ ಶ್ರೀವ್ಯಾಸರೇ "ಆಪೋ ನಾರಾ" ಎಂಬಲ್ಲಿ, ನಾರ ಶಬ್ದಕ್ಕೆ ನೀರು ಎಂದು ಅರ್ಥವಿರುವುದಾಗಿ ಹೇಳಿದ್ದಾರೆ. ಆದರೆ ಇದು ಸಂಸ್ಕೃತ ಮಾತು ಆಗಿದೆಯೆ?— ಎಂದು ವಿದ್ವಜ್ಜರು ಸಂದೇಹಿಸಿದ್ದಾರೆ. "Probably invented & explain the word Narayana" ಎಂದು ಸಂಸ್ಕೃತ ಮಹಾಕೋಶಕಾರರಾದ ಮೊ. ವಿಲಿಯಂಸರು ಅಭಿಪ್ರಾಯಪಟ್ಟಿದ್ದಾರೆ. ಸಾವಿರಾರು ವರ್ಷಗಳಿಂದ ರಚಿತವಾದ ಸಂಸ್ಕೃತ ಸಾಹಿತ್ಯದಲ್ಲಿ 'ನಾರಾಯಣ'ದಂತಹ ವ್ಯಕ್ತಿನಾಮದ ಹೊರತು ಬೇರೆ ಎಲ್ಲಿಯೂ (ನೀರು ಎಂಬ ಅರ್ಥದ) 'ನಾರ ಶಬ್ದವು ಕಿವಿದೆರೆಗೆ ಬಾರದೆ ಇರುವ ಕಾರಣವೇನಿರಬಹುದು? 'ನಾರಾಯಣ' ಈ ಹೆಸರಂತೂ ಋಗ್ವೇದ ಕಾಲದಿಂದಲೂ ಕೇಳಬರುವುದು! ಜಲಪ್ರವಾಹಕ್ಕೆ ನಾರಾ–ನಾಲೆ ಎಂಬುದಾಗಿ ಆರ್ಯಾವರ್ತದ (ಉತ್ತರ ಭಾರತ) ದೇಶಿಯ ಮಾತಾಗಿದೆ! ನೀರು ಎಂಬಲ್ಲಿರುವ ತೇಜ–ಕಾಂತಿ ಎಂಬ ವಿಶೇಷಾರ್ಥಗಳೂ 'ನಾರ'ದಲ್ಲಿ ಇರುವುದಾಗಿ ಹಿಂದೀ ಲೋಕಸಾಹಿತ್ಯದಿಂದ ನಿಶ್ಚಿತವಾಗುತ್ತದೆ! ಆದಕಾರಣ ಬಹುಜನ ಸಮಾಜಜೀವನಕ್ಕೆ ಇಷ್ಟೊಂದು ನಿಕಟವರ್ತಿಯಾದ 'ನಾರ' ಇದು ದೇಶಿಭಾಷೆಯಿಂದ ಸಂಸ್ಕೃತ ಸಾಹಿತ್ಯದಲ್ಲಿ ನುಸುಳಿಕೊಂಡಿರಬೇಕೆಂದೇ ಗ್ರಹಿಸಬೇಕಾಗುವುದಲ್ಲವೆ? ಸಂಸ್ಕೃತದಲ್ಲಿ ನಾರೀ ಶಬ್ದವು ಹ್ರಸ್ವ ಇಕಾರಾಂತವಾಗಿಯೂ ಉಂಟು. ಉಚ್ಚಾರದ ನಿಶ್ಚಿತತೆಯು ಸಂಸ್ಕೃತ ಭಾಷೆಯ ಹೆಮ್ಮೆಯ ವಿಶೇಷ್ಯವಾಗಿದೆ. ಸಂಸ್ಕೃತದವರು 'ನಾರಿ' ಶಬ್ದದ ವ್ಯುತ್ಪತ್ತಿಯನ್ನು ನೃ–ನರ ಶಬ್ದದಿಂದ ಹೇಳುವುದುಂಟು. ಈ ವ್ಯುತ್ಪತ್ತಿಯಂತೆ ನಾರ–ನಾರಿಯೊಳಗಿನ ನೀರಿನ ಅರ್ಥವೇ ಆಗುವುದಿಲ್ಲ!

ಊರ್ವಶಿಯು ನಾರಾಯಣ ಋಷಿಯ ತೊಡೆಯಿಂದ ಹುಟ್ಟಿದಳು, ಎಂಬ ಪುರಾಣಕತೆಯು ಬಹಳ ಅರ್ಥಗರ್ಭಿತವಾಗಿದೆಯೆಂದು ನನಗೆ ತೋರುತ್ತಿದೆ. ಊರ್ವಶಿಯೆ ಮೊದಲ ಅಪ್ಸರೆ! 'ಅಪ್–ಸರಾ' ಇದರೊಳಗಣ ಅಪ್ (ನೀರು) ಯಾರನ್ನಾಗಲಿ ವಿಚಾರ ಮಾಡಲು ಒತ್ತಾಯಪಡಿಸದೆ ಇರಲಾರದು! ಮತ್ತೆ ಈ ಅಪ್–ಸರೆಯ ಸೃಜನಕ್ಕೆ ಕಾರಣನು ನಾರಣನು! ಎಷ್ಟು ಹೃದ್ಯವಾದ ನಿತಾಂತ ರಮಣೀಯವಾದ ರೂಪಕವಿದು!

ಆದುದರಿಂದ ಅಪ್ಸರೆ: ನಾರ: ನೀರೆ ಇವರು ಬೇರೆಯಲ್ಲ. ಒಂದೇ ಕುಲದವರು! ನಾರ: ನೀರೆ ದೇಶಿ; ಇವಳೇ ಗೀರ್ವಾಣರಿಗೆ ಅಪ್ಸರೆ! ನಾರಣನಿಂದ ಹುಟ್ಟಿದವಳು 'ನಾರ'ಳೆ ಅಲ್ಲದೆ ನುತ್ತೇನು? ದೇಶಿ ಸ್ತ್ರೀವಾಚಕ 'ನಾರ' ಶಬ್ದವು ಸಂಸ್ಕೃತ 'ನಾರಿ'ಯಾಯಿತು. ಆದರೆ ಮೂಲ ನಾರ: ನೀರೆಯೊಳಗಿನ ಮೋಹನಾಂಗಿ ಎಂಬ ಧ್ವನ್ಯರ್ಥವು ಭಾವುಕರಿಗೆ ನಿಲುಕದಾಗಿ ರಸಿಕರು ಇದಕ್ಕೆ ಸಮಾನಾರ್ಥಕ ಅಪ್–ಸರೆ ಎಂಬ ಪ್ರತಿಶಬ್ದವನ್ನು ನಿರ್ಮಿಸಿಕೊಂಡಿರಬೇಕು. ಮೇಲಣ ಊರ್ವಶಿ (ಮೊದಲ ಅಪ್ಸರೆ)ಯ ಜನ್ಮಕಥೆಯ ಹಿನ್ನೆಲೆಯಲ್ಲಿ, ನಾರ (ನೀರೆ): ಅಪ್ಸರೆಯ ಪ್ರತೀಕ ನಿರ್ಮಾಣದ ಮೇಲಣ ಅನುಮಾನಕ್ಕೆ ಪುಟ ದೊರೆಯುತ್ತಿದೆ. ಇದು ಹಾಗಿರಲಿ; ನಾರ: ನೀರೆಯರ ನೀರಂತೂ ಸಂಸ್ಕೃತವಲ್ಲ ಎಂಬ ಮಾತು ಇಲ್ಲಿ ಹೊರಪಡುವುದಷ್ಟೆ?

ಇದು ಎಂತಹ ನೀರು?

ನಾರ–ನೀರು ಇವು ಮೊದಲು ಜಲವಾಚಕ ಶಬ್ದಗಳಾಗಿರಬಹುದೆ ಎಂಬುದು ಸಂದೇಹಾಸ್ಪದವಾಗಿದೆ. ತೇಜ, ಕಾಂತಿ, ಮೋಹಕತೆ ಈ ಗುಣಗಳು ಈಗ ನೀರೆಂದು ಭಾವಿಸಿರುವ ಜಲದಲ್ಲಿ ಉಂಟೆ? "ಆತನ ಎದೆಯೊಡೆದು ನೀರಾಯಿತು" ಎಂಬುದುಂಟು; "ಇದರಂತೆ ಆತನಲ್ಲಿ ನೀರು ಇಲ್ಲ" ಎಂಬುದೂ ಉಂಟು. ಇವೆರಡೂ 'ನೀರು' ಒಂದೇ ಎನ್ನಲಾದೀತೆ? ಈ ಎರಡನೆಯ ಪಡೆನುಡಿಯ 'ನೀರು' ಜಲವಲ್ಲ; ಸತ್ತ್ವ, ತೇಜದಾಯಕ ಪಾನೀಯವಾಗಿರುವ ಶಕ್ಯತೆಯಿದೆ. ಕಂನಾಡವರ ನೀರಿನ ಅರ್ಥಛಾಯೆಗಳೆಲ್ಲವೂ ಮರಾಠಿ 'ಪಾಣೀ'ಯಲ್ಲಿ ಬಂದಿವೆ. 'ಪಾಣೀ' ಎಂದರೆ ಪೇಯ–ಪಾನೀಯ.

ನೀರು, ನಾರಗಳಿಗೆ 'ರಸ' ಎಂಬ ಅರ್ಥವು ಮೊದಲು ಇದ್ದಿತೆಂದು ಗೊತ್ತಾಗುತ್ತದೆ. ಈರುಳ್ಳಿ–ನೀರುಳ್ಳಿ ಇಲ್ಲಿ ಈರ್–ನೀರ್ ಎಂಬುದು ರಸವಾಚಕವಾಗಿರುವುದು ಸ್ಪಷ್ಟವಿದೆ. ಕಂದಮಿಳ ವರ್ಗದ ಹಲವು ನುಡಿಗಳು ಸ್ವರಾದಿಯಾಗಿಯೂ, ವ್ಯಂಜನಾದಿಯಾಗಿಯೂ ಬಳಕೆಯಲ್ಲಿರುವುದು ಕಂಡುಬರುತ್ತದೆ. ಈರ್–ನೀರ್: ಅಲ್–ಪಾಲ್; ಅರ್–ನಾರ್*; ಅಳ್–ಕಳ್ ಈ ರಸಾರ್ಥಕ ಜೋಡಿಯು ಅಭ್ಯಸ-

* ಶ್ರೀ ತೆಳ್ಳಂಜೆ ಗೋಪಾಲಕೃಷ್ಣ ಭಟ್ಟ ಅವರು 'ಅಜ್ರಾಟಿ'ವನ್ನು ಕುರಿತು "ಪ್ರಬುದ್ಧ ಕರ್ನಾಟಕ"ದಲ್ಲಿ ಬರೆದ ಟಿಪ್ಪಣಿಯಲ್ಲಿ ಪ್ರಸ್ತಪಡಿಸಿದ ಎರಡು ಸಂಗತಿಗಳು ಬಹಳ ಮಹತ್ವದವು ಆಗಿವೆ. (೧) 'ಅಜ್ರಾಟಿ' ಎಂಬುದಕ್ಕೆ 'ಚಿಂತೆ' ಎಂದು ರಾಮಾಶ್ವಮೇಧದ ಪ್ರಯೋಗಕ್ಕೆ ತೋರಿದ ಅರ್ಥವು ಅಸಮರ್ಪಕವಾಗಿದೆ; ಅಲ್ಲಿ ಅರ್

ಸುಖ-ಶಾಂತಿಗಳು

ಸ್ವಜ್ಞಾನದಿಂದಲೇ ಲಭಿಸುವುವು

(ಅಂತರ್ಹೇತು ಸಂಶೋಧನೆ – Motivation Reserch)

ಶ್ರೀ ಬಾಪು ಶಿರಹಟ್ಟಿ, ಬಿ. ಎ., ಶಿರಹಟ್ಟಿ

ನಮ್ಮ ನಮ್ಮ ಬಂಧನ-ಮೋಕ್ಷಗಳಿಗೆ, ನಮ್ಮ ನಮ್ಮ ಮನಸ್ಸೇ ಮುಖ್ಯ ಕಾರಣವೆಂದು ತಿಳಿದವರು ಹೇಳಿರುವರು. ಆಧುನಿಕ ಮನಶ್ಶಾಸ್ತ್ರವೂ, ಮಾನವ ಜೀವನದ ಸುಖ-ಶಾಂತಿಗಳಿಗೆ ಆತನ ಮನಸ್ಸಿನ ಅಜ್ಞಾತ ಚೇಷ್ಟೆಗಳೇ ಕಾರಣವೆಂದು ಸಾರುವುದು.

ನಾವು ಮಾಡುವ ಪ್ರತಿಯೊಂದು ಕೃತಿಗೆ ಮೇಲೆ ನೋಡಲು ಒಂದು ಕಾರಣವಿದ್ದರೂ, ಅದರ ಆಳವಾದ ಉದ್ದೇಶವು ಎಷ್ಟೋ ಸಲ ಬೇರೆಯಿರುವುದು. ಪ್ರತಿಯೊಂದು ಕೃತಿಗೆ ಉದ್ದೇಶವು(Intention) ಒಂದಿದ್ದರೆ, ಅಂತರ್ಹೇತು (Motive) ಮತ್ತೊಂದು ಇರುವುದು. ಇದಕ್ಕಾಗಿ ಕೆಲವು ಉದಾಹರಣೆಗಳನ್ನು ನಾವು ತೆಗೆದು ಕೊಳ್ಳಬಹುದು. ಶ್ರೀ. ಜಿಪುಣನು ತನ್ನ ಗೆಳೆಯರ ಜೊತೆಗೆ ಹೋಗುತ್ತಿರುವಾಗ, ಒಬ್ಬ ಬಿಕ್ಷುಕನು ಬಂದು ತನಗೆ ಎರಡಾಣೆಗಳನ್ನು ಕೊಡೆಂದು ಕೇಳುವನು. ತಕ್ಷಣವೇ ಶ್ರೀ. ಜಿಪುಣನು ಎರಡಾಣೆಗಳನ್ನು ಕೊಟ್ಟು ಬಿಡುವನು. ಬಿಕ್ಷುಕರಿಗೆ ಕೆಲಸಮಾಡಲು ಉಪದೇಶಮಾಡುವ ಶ್ರೀ. ಜಿಪುಣನು ಒಮ್ಮೆಲೇ ಈ ಪ್ರಸಂಗದಲ್ಲಿ ಬಿಕ್ಷುಕನಿಗೆ ಎರಡಾಣೆಗಳನ್ನು ಹೇಗೆ ಕೊಟ್ಟನು? ತನ್ನ ಕೃತಿಯ ಅಂತರ್ಹೇತು ಏನಿದೆ ಎಂಬುದು ಎಷ್ಟೋ ಸಲ ಶ್ರೀ. ಜಿಪುಣನಿಗೇ ಗೊತ್ತಿರುವುದಿಲ್ಲ. ಗೆಳೆಯರ ದೃಷ್ಟಿಯಲ್ಲಿ ಶ್ರೀ. ಜಿಪುಣನು 'ದೀನದಯಾಳು' ಎಂದು ತೋರಬಹುದು. ತನ್ನ ಗೆಳೆಯರ ಮೇಲೆ ತಾನು ವಿಶಾಲ ಮನಸ್ಸಿನವನಿದುವೆನೆಂದು ಪ್ರದರ್ಶಿಸುವುದೇ ಭಿಕ್ಷೆ ಕೊಡುವಾಗ ಶ್ರೀ. ಜಿಪುಣನ ಅಂತರ್ಹೇತು ಇರುವುದು. ಮನೆಯಿಂದ ಹೊರಗೆ ಹೋಗುವಾಗ ನಮ್ಮ ವೇಷಾಕನ್ನು ಬದಲಿಸಿ

(೪೬ನೆಯ ಪುಟದಿಂದ ಮುಂದುವರಿದುದು)

ನೀಯವಾಗಿದೆ. ಆಲೆಮನೆ; ಕಬ್ಬಿನ ಹಾಲು (ಪಾಲ್); 'ಆಲ' ಮರವು ಸಂಸ್ಕೃತದಲ್ಲಿ 'ಕ್ಷೀರ' ವೃಕ್ಷಗಳಲ್ಲಿ ಎಣಿಸಲ್ಪಡುತ್ತದೆ! ಆರೂರು-ಆಲೂರು ನದಿಯ ದಂಡೆಯ ಊರುಗಳೇ ಹೆಚ್ಚು. ಸೆನ್ನಾರ್, ಪಾಲಾರ್, ಈ ನದಿಗಳ ಹೆಸರಿನ ಉತ್ತರಪದದಲ್ಲಿರುವ 'ಆರ್' ಇದರ ಅರ್ಥವೇನು? ನಾಲಾ-ನಾರಾ ಎಂಬುದಕ್ಕೂ ಪ್ರವಾಹವಾಚಕ ಅರ್ಥವುಂಟು. ಆಳ್-ಕಳ್ ವಿಚಾರವು ಬೇರೆಡೆಗೆ ಬಂದಿದೆ (ಕಂನಡದ ನೆಲೆ ಪು. ೧೧೬; ೧೯೫); ಜಯ ಕರ್ನಾಟಕ (ಮೇ ೧೯೪೦).

ನಾರ, ನೀರುಗಳ ಮೂಲಾರ್ಥವು 'ರಸ' ಎಂದಿರುವುದು ಈ ಬಗೆಯಲ್ಲಿ ನಿಶ್ಚಿತವಾಗುತ್ತಿದೆ ಆದುದರಿಂದ ಸ್ತ್ರೀವಾಚಕ ನಾರ (ನಾರಿ) ನೀರೆ ಎಂಬ ಮಾತುಗಳು, ಆ ರಸದಂತೆ ಆಕರ್ಷಕ—ಮೋಹಕಳು ಎಂಬ ಲಕ್ಷಣಾರ್ಥದಲ್ಲಿ ರೂಪಕಗಳಾಗಿ ತಲೆದೋರಿದುವೆಂದು ಕಂಡುಬರುತ್ತಿದೆ. 'ನೀರಾ' ಪೇಯವು ಆರೋಗ್ಯ-ಶಕ್ತಿ-ಕಾಂತಿದಾಯಕವೆಂದು ಮಡಿವಂತರೂ ಹೊಗಳಿದ್ದಾರೆ. 'ನಾರ'ವೂ ಇದೇ ವರ್ಗದ ಇನ್ನೊಂದು ಪೇಯ. ನಾರಳದ-ನಾರಿಯಳದ ಸಿಹಿಯಾಳ ಸವಿಗೆ ಮರುಳಾಗದವರುಂಟೆ? ಸಿಹಿಯಾಲದೊಳಗಿನ 'ಆಲ್' ಈ ಉತ್ತರಪದವನ್ನು ಗಮನಿಸಬೇಕು. ನಾರಿಯಳದ ಎಳನೀರಂತಹ ಮಧುರಪೇಯದ ರೂಪಕವೇ ನಾರ(ನಾರಿ)ಯಾಗಿ ಮೈವೆತ್ತಂತೆ ತೋರುತ್ತಿದೆ.

ಅಪ್ಸರೆಯು ದೇಶೀಯ ನಾರ್-ನೀರಿಗಿಂತ ಖ್ಯಾತಿವೆತ್ತಿರುವಳಾದರೂ, ನಾರ-ನೀರೆ ಎಂಬ ಮಾತಿನೊಳಗಿನ ವ್ಯಂಜನಾಶಕ್ತಿ ಅಪ್ಸರೆ ಎಂಬಲ್ಲಿ ಇಲ್ಲ. ಅಪ್-ಸರಾ ಎಂದರೆ ನೀರಲ್ಲಿ ಆಲೆಯುವವಳು ಇಷ್ಟೆ; ನಾರ ಅಥವಾ ನೀರೆ ಎಂದರೆ ಸಾಕ್ಷಾತ್ ಸುಧೆ-ಮಾಧವಿ-ಮೋಹಕ ರಸಾಯನ. ಅಪ್ಸರೆ ಎಂಬುದರಲ್ಲಿ ಕನಿ-ಸಂಕೇತದ ಮೂಲಕ ಅಡಕವಾದ ಅರ್ಥವುಂಟು. ಅಪ್ಸರೆಯ ಅರ್ಥಸ್ವಾರಸ್ಯಕ್ಕೆ ದೇಶೀಯ ನಾರ-ನೀರೆಯ ನೆರವಿಲ್ಲದೆ ನಡೆಯದು.

ಅಥವಾ ಅಪ್ರಿ ಎಂಬುದಕ್ಕೆ 'ನೀರಾಟ' ಎಂಬ ಅರ್ಥವೇ ಸಮಂಜಸವಾಗಿದೆ. ಅವಭೃತ ಸ್ನಾನದ ಪ್ರಕಾರಕ್ಕೆ ಉ. ಕಂನಡ ಜಿಲ್ಲೆಯಲ್ಲಿ 'ಆರಾಟ' ಎಂದು ಹೇಳುವ ವಾಡಿಕೆ ಈಗಲೂ ಇದೆ. (೨) ಆರ್ ಇದನ್ನು ಮುದ್ದಣನು ಅಪ್ರಿ ಎಂಬುದಾಗಿ ಬಂದಿ ರಕಾರವಾಗಿ ಬರೆದಿದ್ದಾನೆ, ಅಷ್ಟೆ (ಸಂಚಿಕೆ ೧೫೩, ಪು. ೭೭).

ಪ್ರಾಚೀನ ನೀರ್, ನಿಪ್ರಿ ಎಂಬ ಪ್ರಯೋಗವು ಅರಾಟ-ಅಪ್ರಾಟದ ತೊಡಕನ್ನು ಬಿಡಿಸಲು ಉಪಯುಕ್ತವಾಗಿದೆ. ಆರ ಎಂಬಲ್ಲಿ ನೀರು ಎಂಬ ಅರ್ಥವೇ ನಿಶ್ಚಿತ. ಅನೇಕಳ ಜಲಕ್ರೀಡೆಯ ವರ್ಣನೆಗಳು ಕಾವ್ಯಗಳಲ್ಲಿ ಬಂದಿವೆ. ಅಭಿನವಪಂಪನ ಅನೇಕಳ ನೀರ ಎರಚಾಟದ 'ಸಿಂಪಿಗೆ'ಯನ್ನು ನೆನೆದುಕೊಳ್ಳಬಹುದು. ಈ ಜಲಕ್ರೀಡೆಗೆ 'ಓಕುಳಿ' ಆಟ ಎಂದು ಉತ್ತರ ಕರ್ನಾಟಕದಲ್ಲಿ ಹೇಳುವರು.

ಹೊರಡುವೆವು. ಇದಕ್ಕೆ ಕಾರಣ ಏನು ಎಂಬುದು ನಮಗೇ ಗೊತ್ತಿರುವುದಿಲ್ಲ. ಅರಿವೆ ಬದಲಿಸಲು ಕಾರಣವನ್ನು ಶೋಧಿಸುವ ಅವಶ್ಯಕತೆ ಕಾಣದಿದ್ದರೂ, ಈ ಕೃತಿಗೆ ಅಂತರ್ಹೇತು ಇರುವುದು. 'ನಾವು ಬೇರೆಯವರ ಕಣ್ಣುಗಳಲ್ಲಿ ಆಕರ್ಷಕರಾಗಿ ಕಾಣಬೇಕು; ಮತ್ತು ಸಮಾಜವು ನಮ್ಮನ್ನು ಗೌರವಿಸಬೇಕು' ಎಂಬುದೇ ಇದಕ್ಕೆ ಅಂತರ್ಹೇತು ಇರುವುದು.

ಮಾನಸಶಾಸ್ತ್ರಜ್ಞರು ಮನುಷ್ಯನ ಮನಸ್ಸನ್ನು ಬರ್ಫಿನ ಗುಡ್ಡದ (Ice berg) ಜೊತೆಗೆ ಹೋಲಿಸುವರು. ಈ ಸಂದರ್ಭದಲ್ಲಿ ಮನಸ್ಸೆಂದರೆ, ಮನುಷ್ಯನು ತನ್ನ ಜನ್ಮದಿಂದ ಸದ್ಯದವರೆಗೆ ತನ್ನ ಪಂಚೇಂದ್ರಿಯಗಳ ಸಹಾಯದಿಂದ ಗ್ರಹಿಸಿದ ವಿಚಾರಗಳು ಅಥವಾ ಅನುಭವಗಳು(Experiences) ಮತ್ತು ಹುಟ್ಟುಗುಣಗಳೆಂದು(Instincts) ಹೇಳಬಹುದು. ಈ ಎಲ್ಲ ಅನುಭವಗಳ ಅಥವಾ ಹುಟ್ಟುಗುಣಗಳ ಅರಿವು ನಮಗೆ ಇರುವುದಿಲ್ಲ. ಬರ್ಫದ ಗುಡ್ಡವನ್ನು ನೀರಿನಲ್ಲಿ ತೇಲಿಬಿಟ್ಟರೆ ೧/೮ ಭಾಗ ನೀರಿನಲ್ಲಿ ಉಳಿದು, ಕೇವಲ ೧/೮ ಭಾಗವು ನಮ್ಮ ದೃಷ್ಟಿಗೆ ಬೀಳುವುದು. ಇದೇ ಪ್ರಕಾರ ಮನುಷ್ಯನ ಅನುಭವಗಳ ಮತ್ತು ಹುಟ್ಟುಗುಣಗಳ ಗುಡ್ಡದ ಕೆಲವೊಂದು ಭಾಗ ಮಾತ್ರ ಅವನ ಅರಿವಿನಲ್ಲಿ ಬರುವುದು; ಅಥವಾ ಅವನ ದೃಷ್ಟಿಗೆ ಬೀಳುವುದು.

ಆದುದರಿಂದ ನಾವು ಮನಸ್ಸಿನಲ್ಲಿ ಸ್ಥೂಲವಾಗಿ ಎರಡು ಭಾಗಗಳನ್ನು ಮಾಡಬಹುದು,— (೧) ಅರಿವುಳ್ಳ ಮನಸ್ಸು (Conscious Mind). ಮತ್ತು (೨) ಅರಿವಿಲ್ಲದ ಮನಸ್ಸು (Unconscious Mind). ಅರಿವಿದ್ದ ಮನಸ್ಸನ್ನು ಕೆನೆಗೆ ಹೋಲಿಸಿದರೆ, ಅರಿವಿಲ್ಲದ ಮನಸ್ಸನ್ನು ಪಾತ್ರೆಯಲ್ಲಿಯ ಹಾಲಿಗೆ ಹೋಲಿಸಬಹುದು. ಅರಿವಿಲ್ಲದ ಮನಸ್ಸಿನ ಪರಿಣಾಮ ಮನುಷ್ಯನ ನಡೆವಳಿಯ (Behaviour) ಮೇಲೆ ಬಹಳಷ್ಟು ಆಗುತ್ತಿರುವುದು. ಅದರಲ್ಲಿಯೂ ಬಾಲ್ಯ ಮತ್ತು ಚಿಕ್ಕಂದಿನಲ್ಲಿಯ ಅನುಭವಗಳು ಎಷ್ಟೋಸಲ ಮನುಷ್ಯನ ವ್ಯಕ್ತಿತ್ವವನ್ನೇ(Personality) ನಿರ್ಮಿಸುವುವು. ಶೈಶವ ಮತ್ತು ಬಾಲ್ಯದಲ್ಲಿ ಸಾಕಷ್ಟು ಪ್ರೀತಿ ದೊರೆಯದಿದ್ದ ವ್ಯಕ್ತಿಯು ಸಮಾಜಘಾತಕ ಚಟುವಟಿಕೆಗಳಲ್ಲಿ ತೊಡಗಿ ಗುಂಡೀಗಾರನಾಗಬಹುದು. ಒಬ್ಬನ ತಾಯಿಯು ಎತ್ತರವಿದ್ದರೆ ಅವನು ತನ್ನ ಪ್ರೌಢ ಜೀವನದಲ್ಲಿ ಎತ್ತರ ಸ್ತ್ರೀಯರಿಗೆ ಹೆಚ್ಚು ಗೌರವವನ್ನು ಸಲ್ಲಿಸಬಹುದು. ಶ್ರೀ. ಭಯದೇವನ ಶೈಶವದಲ್ಲಿ ಮತ್ತು ಬಾಲ್ಯದಲ್ಲಿ ಸುತ್ತಲಿನವರು ಅವನನ್ನು ಅಂಜಿಸುತ್ತಿದ್ದರೆ, ಅವನು ಇಡಿ ಜೀವಮಾನವೆಲ್ಲಾ ಭೀರುವಾಗಿಯೇ ಉಳಿಯುವನು. ಶಿವಾಜಿಯ ತಾಯಿಯು ಅವನ ಎದುರಿಗೆ ಶೈಶವದಲ್ಲಿ ಕೆಲವು ಆದರ್ಶಗಳನ್ನು ಇಟ್ಟು ಪ್ರೋತ್ಸಾಹಿಸಿದ್ದರಿಂದ, ಅವನು ಮಹಾಕೃತ್ಯಗಳನ್ನು ಸಾಧಿಸಿದನು. ಮಹಾವ್ಯಕ್ತಿಗಳ ಜೀವನಚರಿತ್ರೆಗಳನ್ನು ನೋಡಿದರೆ, ಅವರಲ್ಲಿ ಎಷ್ಟೋ ಜನರು ತಮಗೆ ಪ್ರೀತಿಯನ್ನಿತ್ತು ಪ್ರೋತ್ಸಾಹಿಸಿದ ತಾಯಿ ಅಥವಾ ಬೇರೆ ಹಿರಿಯರಿಗೆ ತಮ್ಮ ಋಣವನ್ನು ವ್ಯಕ್ತಮಾಡುವರು. ಸಮಾಜ ಘಾತಕ ಪ್ರೌಢರನ್ನು ತಿದ್ದಿ ಉತ್ತಮ ನಾಗರಿಕರನ್ನಾಗಿ ಮಾಡುವುದು ಕಠಿಣ ವಿಷಯ. ಆದರೆ ಚಿಕ್ಕ ಚಿಕ್ಕವರನ್ನು ತಿದ್ದುವುದು ಸುಲಭವಾಗುವುದು. ಈ ಕಾರಣದಿಂದಾಗಿ ಸುಸಂಸ್ಕೃತ ವಾತಾವರಣದಲ್ಲಿ ಹುಟ್ಟಿದ ವ್ಯಕ್ತಿಯು ಶಿಕ್ಷಣವನ್ನು ಪಡೆಯದಿದ್ದರೂ, ಅವನ ನಡಾವಳಿಯು ಜೆನ್ನಾಗಿರುವುದನ್ನು ನಾವು ಕಾಣುವೆವು.

ಉದ್ದೇಶವು (Intention) ಅರಿವುಳ್ಳ (Conscious) ಮನಸ್ಸಿಗೆ ಸಂಬಂಧಿಸಿದ ವಿಷಯವಾದರೆ, ಅಂತರ್ಹೇತುವು (Motive) ಅರಿವಿಲ್ಲದ (Unconscious) ಮನಸ್ಸಿಗೆ ಸಂಬಂಧಿಸಿದ ವಿಷಯವಾಗಿರುವುದು. ಅರಿವುಳ್ಳ ಮನಸ್ಸಿನ ಮತ್ತು ಅರಿವಿಲ್ಲದ ಮನಸ್ಸಿನ ವಿಚಾರಗಳಲ್ಲಿ ಸಮರಸತೆ ಇದ್ದರೆ ವ್ಯಕ್ತಿಯು ಸುಖಿಯಾಗುವನು ಮತ್ತು ಪ್ರಗತಿಯನ್ನು ಸಾಧಿಸುವನು. ಒಂದು ಉದಾಹರಣೆಯನ್ನು ನಾವಿಲ್ಲಿ ತೆಗೆದುಕೊಳ್ಳಬಹುದು. ಶ್ರೀ. ಚಾಣಕ್ಯನ ಚಿಕ್ಕಂದಿನಲ್ಲಿಯ ಅರಿವುಳ್ಳ ಮನಸ್ಸಿನಲ್ಲಿ ನೆಹರೂರಂತೆ ರಾಜಕಾರಣಿಯಾಗಬೇಕೆಂಬ ಉತ್ಕಟ ಇಚ್ಛೆ ಇರುವುದು. ಅನಂತರ ಈ ವಿಚಾರವು ಅರಿವಿಲ್ಲದ ಮನಸ್ಸಿನಲ್ಲಿ ಹುಗಿಯಲ್ಪಡುವುದು. ಪ್ರೌಢನಾದ ನಂತರ ಚಾಣಕ್ಯನು ರಾಜಕಾರಣದ ಅಭ್ಯಾಸ ಮಾಡಿ, ರಾಜಕಾರಣದಲ್ಲಿಯೇ ಸೇರುವನು. ಅರಿವಿದ್ದ ಮತ್ತು ಅರಿವಿಲ್ಲದ ಮನಸ್ಸಿನ ವಿಚಾರಗಳಲ್ಲಿ ಹೊಂದಿಕೆ ಇರುವುದರಿಂದ, ಚಾಣಕ್ಯನು ಸುಖಿಯಾಗುವನು ಮತ್ತು ಪ್ರಗತಿಯನ್ನು ಸಾಧಿಸುವನು.

ಇನ್ನೊಂದು ಸುಲಭ ಉದಾಹರಣೆ; ಪ್ರತಿಯೊಬ್ಬನು ಸುರಕ್ಷಿತನಾಗಿರಬಯಸುವುದು ಅವನ ಹುಟ್ಟುಗುಣ. ಶ್ರೀ. ಹುಚ್ಚೇಶ್ವರನ ತಂದೆಯು ಸಿಟ್ಟಿನ ಸ್ವಭಾವದವನಿರುವುದರಿಂದ, ಹುಚ್ಚೇಶ್ವರನಲ್ಲಿ ಅ-ಸುರಕ್ಷತೆಯ ಭಾವನೆ ಮೂಡುವುದು. ಹೀಗಾಗಿ ಅವನು ತಂದೆಯನ್ನು ಕಟುವಾಗಿ ಮನಸ್ಸಿನಲ್ಲಿ ಶಪಿಸುವನು. ತಂದೆಯು ಅನ್ನದಾತನಿರುವುದರಿಂದ, ಇದನ್ನು ವ್ಯಕ್ತಮಾಡುವುದು ಅವನಿಗೆ ಸಾಧ್ಯವಿರುವುದಿಲ್ಲ. ಹುಚ್ಚೇಶ್ವರನ ಈ ವಿಚಾರವು ಅರಿವಿಲ್ಲದ ಮನಸ್ಸಿನಲ್ಲಿ ದೂಡಲ್ಪಟ್ಟು, ಅವನ ಅರಿವಿದ್ದ ಮನಸ್ಸಿನಲ್ಲಿ ತಂದೆಯ ಬಗ್ಗೆ ಭಕ್ತಿ ಮೂಡುವುದು. ಅರಿವಿನ್ದ ಮತ್ತು ಅರಿವಿಲ್ಲದ ಮನಸ್ಸಿನಲ್ಲಿಯ ವಿಚಾರಗಳಲ್ಲಿ ವಿರಸ ಉಂಟಾಗುವುದು. ಈ ಕಾರಣಕ್ಕಾಗಿ ಅವನು ಮಾನಸಿಕ ಅಸ್ವಸ್ಥತೆಗೆ (Neurosis) ತುತ್ತಾಗುವನು. ಅವನ ಕಾರ್ಯಗಳಲ್ಲಿ ಒಂದು ಪ್ರಕಾರದ ಗೊಂದಲವು ಕಂಡು ಬರುವುದು. ಇದೇ ತೀಕ್ಷ್ಣಸ್ವರೂಪವನ್ನು ತಾಳಿದರೆ, ಹುಚ್ಚೇಶ್ವರನೂ ಆಗಬಹುದು.

ಮನಸ್ಸಿನಲ್ಲಿಯ ಈ ದ್ವಂದ್ವವನ್ನು (Conflict) ಕಳೆಯಲು ಒಂದು ಉಪಾಯವಿದುವುದು. ಅರಿವಿಲ್ಲದ ಮನಸ್ಸಿನ ವಿಚಾರಗಳನ್ನು ಅರಿವಿದ್ದ ಮನಸ್ಸಿಗೆ ತಂದುಕೊಟ್ಟರೆ ಇದು ಸಾಧ್ಯವಾಗುವುದು. ಹುಚ್ಚೇಶ್ವರನ ಅರಿವಿಲ್ಲದ ಮನಸ್ಸಿನಲ್ಲಿ ತಂದೆಯ ಬಗ್ಗೆ ಇದ್ದ ಅಭಿಪ್ರಾಯವನ್ನು ಅವನ ಅರಿವಿದ್ದ ಮನಸ್ಸಿಗೆ ತಿಳಿಸಿಕೊಟ್ಟರೆ, ಅವನ ದ್ವಂದ್ವ ಅಥವಾ ದುಃಖ ಪರಿಹಾರವಾಗುವುದು. ಅನಂತರ, ಹೆಣಗೆ ಕೈಹಚ್ಚಿಕೊಂಡು ಕುಳಿತ ಅವನು ಕಾರ್ಯೋನ್ಮುಖನಾಗುವನು.

ಚಿಂತೆಯ ಚಿತೆಯಲ್ಲಿ ಬಿದ್ದಾಗಲಿ, ಅಥವಾ ಮನಸ್ಸಿನಲ್ಲಿಯ ದ್ವಂದ್ವದ (Mental Conflict) ಕಾರಣವಾಗಿಯಾಗಲಿ, ಮನುಷ್ಯನ ಕಾರ್ಯಶಕ್ತಿಯು ಕುಂಠಿತವಾಗುವುದುಂಟು. ಈ ಕಾರ್ಯಶಕ್ತಿಯ ಮಾರ್ಗದಲ್ಲಿಯ ಆತಂಕಗಳನ್ನು ತೆಗೆದು ಅದಕ್ಕೆ ಪೂರ್ಣ ಚಾಲನೆ ಕೊಡಬೇಕೆಂದು ಮಾನಸ ಶಾಸ್ತ್ರಜ್ಞರು ಪ್ರಯತ್ನಿಸುತ್ತಿರುವರು. ಈ ಪ್ರಯತ್ನದಲ್ಲಿ ಅವರು ವಿಶಿಷ್ಟ ವ್ಯಕ್ತಿಯ ವಿಶಿಷ್ಟ ನಡೆ-ವಳಿಕೆಯ ಅಥವಾ ಕೆಲವು ಸಾಮಾನ್ಯ ಸಾರ್ವಜನಿಕ ನಡೆವಳಿಕೆಗಳ (Behaviors) ಅಂತರ್ಹೇತುಗಳ ಕಡೆಗೆ ತಮ್ಮ ಲಕ್ಷ್ಯವನ್ನು ಹೊರಳಿಸಿರುವರು ಈ ದಿಶೆಯಲ್ಲಿ ಅಮೇರಿಕೆಯಲ್ಲಿ ಸಾಕಷ್ಟು ಪ್ರಯತ್ನಗಳು ನಡೆದಿರುವುವು. ಕೆಲವೊಂದು ಸಾಮಾನ್ಯ ನಡೆವಳಿಕೆಗಳ ಅಂತರ್ಹೇತುಗಳು ಏನಿರುವವು, ಎಂಬುದರ ಬಗ್ಗೆ "ಟ್ರಾಯಿಡ್" ಮಾಸಿಕದಲ್ಲಿಯ ಕೆಲವೊಂದು ಉದಾಹರಣೆಗಳನ್ನು ನಾವು ತೆಗೆದು ಕೊಳ್ಳಬಹುದು

(೧) ಹವೆ-ಸರಿಸ್ಥಿತಿ ನಿಯಂತ್ರಿಸುವ ಯಂತ್ರ (Air Conditioning Machine)— ತಾಯಿಯ ಗರ್ಭದಲ್ಲಿಯ ಸುರಕ್ಷಿತ ವಾತಾವರಣಕ್ಕೆ ತಿರುಗಿ ಹೋಗುವ ನಮ್ಮ ಅಂತರ್ಹೇತುವಿನ ಮೂಲಕ ನಾವು ಈ ಯಂತ್ರವನ್ನು ಪ್ರೀತಿಯಿಂದ ಉಪಯೋಗಿಸುವೆವು.

(೨) ಸಿಗರೇಟು— ತಾಯಿಯ ಮೊಲೆಯನ್ನು ಉಣ್ಣುವ ನಮ್ಮ ಅಂತರ್ಹೇತುವಿನ ಮೂಲಕ, ಸ್ತನಾಗ್ರದ ಪ್ರತಿನಿಧಿಯಾದ ಸಿಗರೇಟನ್ನು ನಾವು ಸೇದುವೆವೆಂದು, ಮನೋವಿಶ್ಲೇಷಣ ಶಾಸ್ತ್ರದ ಪಿತನಾದ ಫ್ರಾಯಿಡನು (Fread) ಅನ್ನುವನು. ಆದರೆ ಅಮೇರಿಕನ್ನರು ಸಿಗರೇಟನ್ನು ಸೇದುವುದು ತಮ್ಮ ಪುರುಷತ್ವ ಪ್ರದರ್ಶನಕ್ಕಾಗಿ.

(೩) ಸಾಲ— ಆದರ ಸತ್ಕಾರಗಳು ವೈಯಕ್ತಿಕವಾಗಿ ಸಲ್ಲಬೇಕೆಂದು ನಮ್ಮ ಅಂತರ್ಹೇತು ಇರುವುದು. ಆದುದರಿಂದ ಬ್ಯಾಂಕಿನಲ್ಲಿ ಕಡಿಮೆ ಬಡ್ಡಿಗೆ ಹಣ ದೊರೆತರೂ ನಾವು ಹೆಚ್ಚು ಬಡ್ಡಿ ಕೊಟ್ಟು, ನಮ್ಮನ್ನು ಮರ್ಯಾದೆಯಿಂದ ಕಾಣುವ ಸಾವುಕಾರನಿಂದಲೇ ಸಾಲವನ್ನು ತರುವೆವು.

(೪) ಮೋಟಾರು— ಪ್ರತಿಯೊಬ್ಬನೂ ತಾನು ಗಣ್ಯವ್ಯಕ್ತಿಯೆಂದು ಸಮಾಜದ ಮೇಲೆ ಬಿಂಬಿಸಬಯಸುವನು. ಆದುದರಿಂದ ಅವನು, ಹಳೆಯ ಕಾರಿದ್ದರೂ ಅದನ್ನು ಕೊಟ್ಟು ಹೊಸ ಕಾರನ್ನು ಕೊಳ್ಳುವನು. ಅಥವಾ ಬೀಡಿಯಿಂದ ಕೆಲಸ ಸಾಗುತ್ತಿದ್ದರೂ ಸಿಗರೇಟನ್ನು ಸೇದುವನು.

(೫) ಸ್ತ್ರೀಯರು— ತಮಗೆ ಬೇಕಾಗುವ ವಸ್ತುಗಳು ಪಕ್ಕದ ಅಂಗಡಿಯಲ್ಲಿ ದೊರೆಯುತ್ತಿದ್ದರೂ, ದೂರದ ದೊಡ್ಡ ಅಂಗಡಿಗಳಲ್ಲಿ ಅವುಗಳನ್ನು ಅವರು ಕೊಳ್ಳುವರು. ದೊಡ್ಡ ಅಂಗಡಿಗಳಲ್ಲಿ ವಸ್ತುವನ್ನು ತೋರಿಸಿ, "ಅದನ್ನು ಕೊಡಿರಿ" ಎಂದು ಕೇಳಬಹುದು. ಸಣ್ಣ ಅಂಗಡಿಗಳಲ್ಲಿ ಹೆಸರು ಹೇಳಿ ತಮಗೆ ಬೇಕಾದ ವಸ್ತುಗಳನ್ನು ನೋಡಬೇಕಾಗುವುದು. ಹೆಸರು ಗೊತ್ತಿಲ್ಲದಾಗ ಅಜ್ಞಾನ ಪ್ರದರ್ಶನವಾಗಬಾರದೆಂಬ ಅಂತರ್ಹೇತು, ಸ್ತ್ರೀಯರ ಮೇಲಿನ ಕೃತಿಯಲ್ಲಿರುವುದು.

(೬) ಜಾಹೀರಾತು— ನಮ್ಮ ಮಹತ್ತ್ವವನ್ನು ಬೇರೆಯವರು ಅರಿಯಬೇಕೆಂಬ ನಮ್ಮ ಅಂತರ್ಹೇತು ಇರುವುದು. ಭೋಗ್ಯವಸ್ತುಗಳನ್ನು (Luxury articles) ಕೊಳ್ಳುವಾಗ ಈ ಇಚ್ಛೆಯನ್ನು ಕೃಪ್ತಿಗೊಳಿಸುವ ಜಾಹೀರಾತುದಾರನ ವಸ್ತುಗಳನ್ನೇ ನಾವು ಕೊಳ್ಳುವೆವು. ಅಮೇರಿಕೆಯಲ್ಲಿ ಉತ್ಪಾದಕರು, ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞ ಪಾವಲೋವನು ನಾಯಿಗಳಿಗೆ ಕೇಳುವಂತೆ ಘಂಟೆ ಬಾರಿಸಿ– ಅವುಗಳ ಬಾಯಲ್ಲಿ ನೀರು ಬರುವಂತೆ ಮಾಡಿ– ಅನಂತರ ಅವುಗಳಿಗೆ ಆಹಾರ ಕೊಟ್ಟಂತೆ, ಮೊದಲು ದೊಡ್ಡ ಪ್ರಮಾಣದಲ್ಲಿ ತಮ್ಮ ವಸ್ತುಗಳ ಬಗ್ಗೆ ಜಾಹೀರಾತು ಕೊಡುವರು. ಜನರಲ್ಲಿ ಆ ವಸ್ತುಗಳನ್ನು ಕೊಳ್ಳಬೇಕೆಂಬ ಇಚ್ಛೆ ಮೂಡುವುದು. ಅನಂತರ ಆ ವಸ್ತುಗಳನ್ನು ಪೇಟೆಯಲ್ಲಿ ಮಾರಾಟಕ್ಕಿಡುವರು.

ಟ್ರೆಡಾನ್ (Tridon) ಎಂಬುವವರ "ಮನೋವಿಶ್ಲೇಷಣ ಶಾಸ್ತ್ರ ಮತ್ತು ಪ್ರೀತಿ" ('Psychoanalysis and Love') ಎಂಬ ಪುಸ್ತಕದಲ್ಲಿಯ ಉದಾಹರಣೆಗಳನ್ನು ನಾವು ಕೊಡಬಹುದು.

(೧) "ಬೆಂಕಿ" ಎಂದು ಯಾರಾದರೂ ಕೂಗಿದರೆ ಆಲ್ಲಿಗೆ ನಾವು ಒಮ್ಮೆಲೇ ಓಡುವೆವು. ಸಣ್ಣ ಪ್ರಮಾಣದಲ್ಲಿ ಬೆಂಕಿ ಇದ್ದರೆ, "ಇಷ್ಟೇ ಬೆಂಕಿಯೇ?" ಎಂದು ತಿರುಗುವೆವು.

(೨) ಅಪಘಾತ— "ಅಪಘಾತ" ಎಂಬ ಶಬ್ದವು ನಮ್ಮ ಕಿವಿಯ ಮೇಲೆ ಬಿದ್ದಾಗಲೂ ಮೇಲಿನಂತೆಯೇ ಓಡುವೆವು. ಅಪಘಾತದಲ್ಲಿ ಲುಕ್ಸಾನವಾಗಿರದಿದ್ದರೆ, "ಅವನು ಸುಳ್ಳೇ ಕೂಗುವನು" ಎಂದು ಹೊರಳುವೆವು.

ಮೇಲಿನ ಘಟನೆಗಳಲ್ಲಿ ಬೆಂಕಿಯಿಂದ ಅಥವಾ ಅಪಘಾತದಿಂದ ಹಾನಿಯಾಗಬೇಕಿತ್ತೆಂದು ನಮ್ಮ ಅಂತರ್ಹೇತು ಇರುವುದು. ಇದಕ್ಕೆ ಕಾರಣ ವ್ಯಕ್ತಿಗಳ ಹುಟ್ಟು ಸಮಾಜದ ಬಗ್ಗೆ ನಮ್ಮಲ್ಲಿದ್ದ ಭೀತಿ.

ಅರಿವಿಲ್ಲದ ಮನಸ್ಸಿನ ಅಂತರ್ಹೇತುಗಳನ್ನು ತಿಳಿದುಕೊಂಡರೆ ನಮಗೆ ಸಮಾಜದ ಜೊತೆಗೆ ನಡೆದುಕೊಳ್ಳುವುದು ಸಾಧ್ಯವಾಗುವದಲ್ಲದೇ, ವೈಯಕ್ತಿಕವಾಗಿ ನಮಗೆ ಸುಖ-ಶಾಂತಿಗಳೂ ಲಭಿಸುವುವು.

ಹುಟ್ಟುಗುಣಗಳನ್ನು ಬಿಟ್ಟರೆ, ಅರಿವಿಲ್ಲದ ಮನಸ್ಸಿನಲ್ಲಿಯ ಅನುಭವಗಳು, ಅರಿವಿದ್ದ ಮನಸ್ಸಿನಿಂದಲೇ ಅಲ್ಲಿ ಹೋಗಿರುವುವು. ಆದುದರಿಂದ ನಮ್ಮಲ್ಲಿ ಹಾನಿಕಾರಕ ರೂಢಿ ಅಥವಾ ವಿಚಾರಗಳಿದ್ದರೆ ಅವುಗಳನ್ನು ಓಡಿಸಲು, ಪ್ರಸಿದ್ಧ ತತ್ತ್ವಜ್ಞಾನಿಗಳಾದ ಬರ್ಟ್ರಾಂಡ್ ರಸೆಲ್ಲರು ಒಂದು ಉಪಾಯವನ್ನು ಹೇಳುವರು: ಹಾನಿಕಾರಕ ವಿಚಾರ ಅಥವಾ ರೂಢಿಗಳ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ, ಅವುಗಳನ್ನು ಬಿಡುವುದಕ್ಕೆ ನಿರ್ಧಾರ ಮಾಡಬೇಕು. ಅನಂತರ ಈ ನಿರ್ಧಾರವನ್ನು ಮರೆಯಬೇಕು. ಕೆಲವು ದಿವಸಗಳ ನಂತರ ಈ ನಿರ್ಧಾರವು ಅರಿವಿಲ್ಲದ ಮನಸ್ಸಿನಲ್ಲಿ ಬಂದು ಸೇರಿ ಒಂದು ಕ್ರಾಂತಿಯನ್ನೇ ಮಾಡುದು. ಬೇಡವಾದ ರೂಢಿ ಮತ್ತು ವಿಚಾರಗಳನ್ನು ನಮಗೆ ಗೊತ್ತಾಗದ ಹಾಗೆ ಈ ಹೂಳಲ್ಪಟ್ಟ ನಿರ್ಧಾರವು ಓಡಿಸಿಬಿಡುವುದು. ರಸೆಲ್ಲರು ಪುಸ್ತಕಗಳನ್ನು ಬರೆಯುವಾಗ ಅಥವಾ ಬೇರೆ ಕೆಲಸ ಮಾಡುವಾಗ ಈ ಪದ್ಧತಿಯನ್ನು ಅನುಸರಿಸುವರು.

ನಮ್ಮ ಕೃತಿಗೆ ಅಂತರ್ಹೇತು ಏನಿದೆ ಎಂದು ತಿಳಿದುಕೊಂಡರೆ ನಮಗೆ ಸ್ವಜ್ಞಾನವಾಗುವುದು. ಈ ಜ್ಞಾನದಿಂದಾಗಿ ನಮಗೆ ಕೆಲವು ಅನಾತ್ಮ ವಿಚಾರಗಳನ್ನು ಅರಿವಿದ್ದ ಮನಸ್ಸಿನಿಂದ ಅರಿವಿಲ್ಲದ ಮನಸ್ಸಿನಲ್ಲಿ ದೂಡಲು ಬರುವುದು. ಇದರ ಪರಿಣಾಮವಾಗಿ ನಾವು ಸುಲಭ ರೀತಿಯಿಂದ ಸುಖ-ಶಾಂತಿಗಳನ್ನು ದೊರಕಿಸಬಹುದು.

ಪುಸ್ತಕ ವಿಮರ್ಶೆ

ಶ್ರೀ ವಿ. ಜಿ. ಭಟ್ಟರ ಎರಡು
ಕವನ ಸಂಕಲನಗಳು

ಪ್ರೊ. ಸಿ. ಎಸ್. ಕುಲಕರ್ಣಿ, ಎಂ. ಎ., ಧಾರವಾಡ

'ಕಾವ್ಯವೇದನೆ' ಎಂಬ ಕವನ ಸಂಕಲನವು ಪ್ರಕಟವಾದನಂತರ ಮೂರು ನಾಲ್ಕು ವರುಷಗಳವರೆಗೆ ಏನೂ ಬರೆಯದೆ ಇದ್ದ ಶ್ರೀ.ವಿ ಜಿ. ಭಟ್ಟರು, ಒಮ್ಮೆಲೆ 'ಆರಣ್ಯರೋದನ' ಮತ್ತು 'ಕಿಷ್ಕಿಂದೆ' ಎಂಬ ಎರಡು ಕವನಸಂಗ್ರಹಗಳನ್ನು ಪ್ರಕಟಗೊಳಿಸಿದ್ದಾರೆ. ಇದು ಕನ್ನಡ ಓದುಗರಿಗೆ ಒಂದು ಆನಂದದ ಸಂಗತಿ ಎಂದು ಹೇಳಬಹುದು ಯಾಕೆಂದರೆ ಕನ್ನಡದಲ್ಲಿ ವ್ಯಂಗ್ಯವಿಡಂಬನೆಯ ಕಾವ್ಯಗಳು ತೀರ ಕಡಮೆ. ಬಂದ ಕೆಲವು ವ್ಯಂಗ್ಯವಿಡಂಬನೆಯ ಕಾವ್ಯಗಳಲ್ಲಿ ವ್ಯಂಜನದ ಕಿಂತಲೂ ಖಾರವೇ ಹೆಚ್ಚು. ವಿ. ಜಿ. ಭಟ್ಟರ ವಿಡಂಬನೆಯಲ್ಲಿ ಖಾರವು ಕಡಿಮೆಯಾಗುತ್ತಿರುವುದು ಒಂದು ಸ್ವಾಗತಾರ್ಹವಾದ ಬದಲಾವಣೆಯಾಗಿದೆ.

'ಕಾವ್ಯವೇದನೆ'ಯನಂತರ 'ಆರಣ್ಯರೋದನ' ಬರುವುದು ತೀರ ಸ್ವಾಭಾವಿಕ. 'ವೇದನೆ' 'ರೋದನ'ವಾಗದಿದ್ದರೆ ಅನರ್ಥಕ್ಕೆ ಎಡೆಗೊಡುವುದು. ಭಟ್ಟರ ವಿಷಯದಲ್ಲಿ ಇನ್ನೂ ಅಂಥ ಅನರ್ಥಕ್ಕೆ ಯಾವ ಅವಕಾಶವೂ ಇಲ್ಲ ಎಂಬದು ಅವರ 'ಕಿಷ್ಕಿಂದೆ'ಯಿಂದ ನಿಸ್ಸಂದಿಗ್ಧವಾಗಿ ವ್ಯಕ್ತವಾಗುತ್ತದೆ.

'ಆರಣ್ಯರೋದನ'ದಲ್ಲಿ ೫೫ ಪದ್ಯಗಳಿವೆ. ಅದರಲ್ಲಿ ಸುಮಾರು ೩೦ ಪದ್ಯಗಳು **ವನಮಹೋತ್ಸವಕ್ಕೆ** ಸಂಬಂಧಿಸಿದುವು ಇರುವುದರಿಂದ 'ಆರಣ್ಯರೋದನ' ಎಂದು ಹೆಸರು ಇಟ್ಟುದು ಯೋಗ್ಯವೇ ಎಂದು ಹೇಳಬಹುದು. ವನಮಹೋತ್ಸವಕ್ಕೆಸಂಬಂಧಿಸಿದ ಪದ್ಯಗಳೆಲ್ಲ ಮನೋವೇಧಕವಾದ ವಿಡಂಬನೆಯಿಂದ ಕೂಡಿವೆ. ಅವು ಬರೀ ವನಮಹೋತ್ಸವದಲ್ಲಿ ಸೇರಿದವರ ಮನೋಭಾವವನ್ನಷ್ಟೇ ಚಿತ್ರಿಸದೆ, ಇಂದಿನ ನಮ್ಮ ರಾಷ್ಟ್ರೀಯ ಯೋಜನೆಗಳಲ್ಲಿ ದುಡಿಯುತ್ತಿರುವ ಅಧಿಕಾರಿಗಳು ಅಧಿಕಾರೇತರರು ಯಾವ ರೀತಿಯಿಂದ ಕೆಲಸ ಮಾಡುತ್ತಿರುವರೆಂಬುದನ್ನು ಬಹಳ ಹೃದಯಂಗಮವಾಗಿ ಹೇಳುತ್ತವೆ.

"'ಫೋಟೊಗ್ರಾಫರ'ನನ್ನು
ಸದ್ಯ ಕರೆತನ್ನಿ,
'ನ್ಯೂ ಕ್ಯಾಫೆ'ಯಲಿ ನೂರು
ಪ್ಲೇಟು ಶಿರ ಮೈಸೂರು–
ಪಾಕ ಚುಡ ಚಹಗಳಿಗೆ
ಹೇಳಿ ಬನ್ನಿ.
ಆ ಮೂಲೆಯಲಿ ಬೆಳೆದ ಆಲ ಬಹು ಹಬ್ಬಿಹುದು
ಅದನು ಪೂರಾ ಇಂದು ಕಡಿದು ಹಾಕಿ—
ಈಚೆ ಕೋಣನ ಹಾಗೆ ಬೆಳೆದ ಮಾವಿನ ಮರವು
'ಕ್ಯಾಮರಕೆ' ಅಡ್ಡ ಬರುವಂತಿಹುದು;
ಅದನು ಸಹ ಕಡಿದು ಹಾಕಿ!
ಇಲ್ಲಿ ಹಾಸಿ ಗುಡಾರ,
ಅಲ್ಲಿ ಖುರ್ಚಿಯ ಸಾಲು—
'ಫೋಟೊ' ತೆಗೆಯುವ ವೇಳೆ
ನೀವಾಚೆ ನಿಲ್ಲಿ!"

'ಸಿದ್ಧತೆ' ಎಂಬ ಕವನದಲ್ಲಿ ವನಮಹೋತ್ಸವದ ಸಿದ್ಧತೆಯ ಬಗ್ಗೆ ಬರೆದ ಈ ಸಾಲುಗಳು ಇಂದು ನಮ್ಮ ಅಧಿಕಾರಿಗಳಲ್ಲಿ, ಕಾರ್ಯಕರ್ತರಲ್ಲಿ ತಲೆದೋರಿದ ಬರಿ ಪ್ರಸಿದ್ಧಿಯ ಮನೋಭಾವವನ್ನು ಚೆನ್ನಾಗಿ ವ್ಯಕ್ತಪಡಿಸುತ್ತವೆ. ಇಂದು ನಮ್ಮ ಯೋಜನೆಗಳು ನಿಷ್ಫಲವಾಗುತ್ತಿದ್ದರೆ, ಅದಕ್ಕೆ ಇಂತಹ ಮನೋಭಾವನೆಯೇ ಕಾರಣವೆಂದು ಹೇಳಬಹುದು.

'ಆಗಮನ' ಎಂಬ ಕವನವು ನಮ್ಮ ಸಮಾರಂಭಗಳಿಗೆ ಆಗಮಿಸುವ ಮಂತ್ರಿವರ್ಯರನ್ನು, ಅಧಿಕಾರಸ್ಥರನ್ನು, ಮುಖಂಡರನ್ನು ವ್ಯಂಗ್ಯವಾಗಿ ಚಿತ್ರಿಸಿದೆ. **'ಭಾಷಣ'** ಎಂಬ ಕವನದಲ್ಲಿ ಬರುವ:

"ಗಿಡಗಳಿಂದಲೆ ಮೋಡ ಮೋಡವೆ
ಒಡಲು ಮಳೆಗಾ ಮಳೆಯ ನೀರೇ
ಪೊಡವಿಯಲಿ ಬಲುವಿಧದ ಬೆಳೆಕೊಳೆಗೆಲ್ಲ ಆಧಾರ—
ಶಡವ ಮಾಡುವುದೇಕೆ? ನೆಡಿನೆಡಿ
ಆಡವಿಯಾಗಲಿ ಪೊಡವಿಯೆಲ್ಲವು
ಆಡಗಲೂ ಅನುಕೂಲ ಸಂಕಟಕಾಲದಲಿ ನಮ್ಮಗೆ"

ಎಂಬ ಸಾಲುಗಳು ನಮ್ಮ ರಾಜಕೀಯ ಪ್ರಚಾರಭಾಷಣದ ಒಳ್ಳೆಯ ಮಾದರಿಯಾಗಿವೆ. ಇದೇ ರೀತಿಯಾಗಿ **'ಈ ಲಿಸ್ಟು ಫ್ಯಾನಲ್ಲು' 'ಪ್ಲಾಸ್ಟಿಕ್ ಮುರಲಿ' 'ಗೊಂಡಾರಣ್ಯ' 'ಪತನ'** ಮುಂತಾದುವು ನಮ್ಮ ರಾಜ್ಯವು ಯಾವ ರೀತಿ ಸಾಗಿದೆ ಎಂಬುದನ್ನು ಒಂದೊಂದು ಪರಿಯಿಂದ ತಿಳಿಸುತ್ತವೆ.

'ಸಿದ್ಧ'ವೆಂಬದು ರಾಜಕೀಯ ಪಕ್ಷದಲ್ಲಿ ಸೇರಿದವನ ಮನೋಭಾವವನ್ನೂ **'ದಮ್ಮಯ್ಯ'** ಎಂಬುದು ಅಜ್ಞಾನಿಯಾದ ಮತದಾರನ ನಿಸ್ಸಹಾಯತೆಯನ್ನೂ ಚೆನ್ನಾಗಿ ವ್ಯಕ್ತಗೊಳಿಸಿವೆ. **'ಸಂಭ್ರಮ'** ಎಂಬುದು ನಮ್ಮ ಯೋಜನೆಗಳ ಯೋಜಕರ 'ಹುಚ್ಚು ಮಹಮ್ಮದತನ'ವನ್ನು ತಿಳಿಯಾಗಿ ತಿಳಿಸುತ್ತದೆ.

ಹೀಗೆ ವನಮಹೋತ್ಸವದ ವಿಡಂಬನಾತ್ಮಕವಾಗಿ ಬಂದ ಕವನಗಳೆಲ್ಲವೂ ನಮ್ಮ ರಾಜಕೀಯಜೀವನದ ವಿಡಂಬನವನ್ನು ಮಾಡು-

ತ್ತವೆ. ಉಳಿದ ಕವನಗಳು ನಮ್ಮ ಜೀವನದಲ್ಲಿಯ ಹಲವು ರಂಗಗಳಲ್ಲಿ ಕಾಣುವ ಸಂಸ್ಥೆಹಾಗೂ ವ್ಯಕ್ತಿಗಳ ವಿಡಂಬನೆಗಳಾಗಿವೆ.

ನೆಮ್ಮ ಮುನಸೀಪಾಲ್ಟಿಗಳ ಅಸಮರ್ಥ ಹಾಗೂ ಕರುಣಾಜನಕ ಆಡಳಿತವನ್ನು ಕಾವ್ಯಮಯವಾಗಿ ಟೀಕಿಸುವ **'ಮೇಘಮಲ್ಲಾರ'** ಎಂಬ ಕವನವು ಇಡೀ ಸಂಗ್ರಹದಲ್ಲಿಯು ಅತ್ಯುತ್ತಮ ಪದ್ಯಗಳಲ್ಲಿ ಒಂದಾಗಿದೆ. 'ರವಿವಾರ ಮುಂಜಾನೆ ಚರ್ಚಿನೆದುರು' ಎಂಬುದು ನಮ್ಮ ಧಾರ್ಮಿಕ ಭಾವನೆಯ ವ್ಯಾಪಾರೀತನವನ್ನು ಚಿತ್ರಿಸಿದರೆ, **'ಅಜ್ಞಾನದಿಂದ ಜ್ಞಾನಕ್ಕೆ ಸಿಮೆಂಟು ರೋಡು'** ಎಂಬುದು ಸರಕಾರವು ಪ್ರಚಾರಮಾಡಲು ಹವಣಿಸುತ್ತಿರುವ ತಾಂತ್ರಿಕ ಸಲಹೆಯ ನಿಷ್ಫಲತೆಯನ್ನು ಸೂಚಿಸುತ್ತದೆ. **'ಸಕ್ಕಾರ'** ಎಂಬ ಪದ್ಯದಲ್ಲಿ ಒಮ್ಮೆ ತ್ಯಾ-ಗಸೇವೆಗಳ ಜೀವನವನ್ನು ನಡೆಯಿಸಿದವರು ಈಗ ಅಧಿಕಾರ ಐಶ್ವರ್ಯಗಳ ಮೋಹಕ್ಕೆ ಬಲಿಯಾಗಿರುವ ವಿಷಾದದ ಸಂಗತಿಯನ್ನು ಮನೋವೇಧಕವಾಗಿ ಚಿತ್ರಿಸಿದೆ. ಹೀಗೆ ಈ ಕವನಸಂಗ್ರಹದಲ್ಲಿಯ ಎಲ್ಲ ಪದ್ಯಗಳೂ ಒಂದಿಲ್ಲೊಂದು ರೀತಿಯಿಂದ ವಾಚಕರ ಮೆದುಳನ್ನು ತಟ್ಟಿ ಅವರನ್ನು ತಲೆದೂಗಿಸದೆ ಬಿಡುವುದಿಲ್ಲ. ಒಟ್ಟನಲ್ಲಿ **'ಅರಣ್ಯ-ರೋದನ'**ದಲ್ಲಿಯ ಪದ್ಯಗಳನ್ನೆಲ್ಲ ಓದಿ ಮುಗಿಸಿದಾಗ, ಓದುಗನು ವಿ. ಜಿ. ಭಟ್ಟರನ್ನು ಮನಃಪೂರ್ವಕವಾಗಿ ಅಭಿನಂದಿಸದೆ ಇರಲಾರನು. ಬರೀ ಶೃಂಗಾರದ ಸವಿಯೂಟವನ್ನುಂಡು ನಾಲಗೆಯ ರುಚಿಯೇ ಕೆಡುವ ಪ್ರಸಂಗ ಬಂದಾಗ, ಹಾಸ್ಯ,ವ್ಯಂಗ್ಯ,ವಿನೋದ, ವಿಡಂಬನೆಗಳ ವ್ಯಂಜನ ಬಂದು ನಮ್ಮ ಅಭಿರುಚಿಯಲ್ಲಿ ಹೊಸ ರುಚಿಯನ್ನು ಹುಟ್ಟಿಸಿದರೆ, ಅದು ಅಭಿನಂದನೆಗೆ ಯೋಗ್ಯವಾದ ಪ್ರಸಂಗವಲ್ಲದೆ ಮತ್ತೇನು?

'ಕಿಷ್ಕಿಂದೆ' ಎಂಬುದು ಅರಣ್ಯರೋದನದ ನಂತರ ಬಂದ ಕವನ ಸಂಕಲನ. ಅರಣ್ಯರೋದನದಲ್ಲಿ ಕವಿ ತನ್ನ ಸುತ್ತಲಿನ ಜೀವನವನ್ನು ವಿಡಂಬನ ದೃಷ್ಟಿಯಿಂದ ನೋಡಿದ್ದರೆ, 'ಕಿಷ್ಕಿಂದೆ'ಯಲ್ಲಿ ತನ್ನ ಜೀವನವನ್ನೇ ವಿಡಂಬನಾತ್ಮಕವಾಗಿ ಕಂಡಿದ್ದಾನೆ. ವಿ ಜಿ. ಭಟ್ಟರ ವಿಡಂಬನೆ ಅರಣ್ಯರೋದನದಲ್ಲಿ ಪಾಡಾಗಿದ್ದರೆ ಕಿಷ್ಕಿಂದೆಯಲ್ಲಿ ಮಾಗಿ ಬಂದಿದೆ. ಮತ್ತು ಕವಿಯ ಜೀವನಕ್ಕೆ ಸಂಬಂಧಿಸಿದ 'ಕಿಷ್ಕಿಂದೆ'ಯಲ್ಲಿ ಸುಂದರ ದಾಂಪತ್ಯ ಜೀವನದ ಕಂಪು ಇರುವುದರಿಂದ 'ಕಿಷ್ಕಿಂದೆ' ರಮ್ಯವಾಗಿದೆ.

'ಕಿಷ್ಕಿಂದೆ'ಯಲ್ಲಿ ಒಟ್ಟಿಗೆ ೬೯ ಪದ್ಯಗಳಿವೆ. ಎಲ್ಲ ಪದ್ಯಗಳೂ ಒಂದಿಲ್ಲೊಂದು ರೀತಿಯಿಂದ ನಮ್ಮ ಮನಸ್ಸನ್ನು ಹಿಡಿಯುತ್ತವೆ 'ಕಿಷ್ಕಿಂದೆ' ಕವಿಯು 'ಘೋರ ತಪಸ್ಸು ಗೂಢೆ ವಶೀಲಿ'ಗಳಿಂದ ದೊರಕಿಸಿದ 'ಮೂರೇ ಕಡ್ಡಿಪೆಟ್ಟಿಗೆ—ಖೋಲಿಯುಳ್ಳ ಬಾಡಿಗೆ ಮನೆ. ಅದು ಮಳೆಗಾಲದಲ್ಲಿ ಸೋರುವುದು; ಚಳಿಯಲ್ಲಿ ಎಲ್ಲರನ್ನೂ ನಡುಗಿಸುವುದು; ಬೇಸಗೆಯಲ್ಲಿ ತಗಣಿಗಳ ಆಗರವಾಗಿರುವುದು. ಆದರೂ ಕವಿ ಇಲ್ಲಿ ಸುಖದಿಂದ ಕಾಲಕಳೆಯುತ್ತಾನೆ ಮತ್ತು:

'ಉಪ್ಪುಗಂಜಿಯೂ
ಅಮೃತಸಮಾನ
ಒಲವಿರೆ ಹರೆಯಿರೆ,
ಯಾರೋ ದೀನ ?'

ಎಂದು ಕೇಳುತ್ತಾನೆ. ಈ ಮನೆಯಲ್ಲಿಯೇ ಕವಿಗೆ ನಾಲ್ಕು ಮುದ್ದು ಮಕ್ಕಳಾಗುತ್ತವೆ. ಬಾಡಿಗೆಯ ಈ ಚಿಕ್ಕ ಮನೆಯಲ್ಲಿಯೇ ಕವಿ ಸಗ್ಗದ ಸೊಗವನ್ನು ಪಡೆಯುತ್ತಾನೆ. ಅದಕ್ಕಾಗಿಯೇ ಮನೆ ಬದಲಿಸುವ ಪ್ರಸಂಗ ಬಂದಾಗ:

".....
ಊನಬತ್ತಿಯಾ
ಪರಿಮಳದಂತೆ
ಕಿಷ್ಕಿಂದೆಯೊಳಿದೆ ಆನಂದ—
ಯಾವುದೊ ಕರುಣೆಯ ಕೃಪೆಯಿಂದ,
ನಾಲ್ವರು ಮಕ್ಕಳು
ಇಬ್ಬರು ನಾವು
ಸಾಲದಾಗೆ ಕಿ-
ಷ್ಕಿಂದೆಯ ತಾವು
ಮನಸ್ಸಿಲ್ಲದೇ ಮನೆ ಬದಲಿಸಿದೆ "

ಎಂದು ಕವಿ ಈ ಮನೆಯ ಬಗ್ಗೆ ಹೇಳುತ್ತಾನೆ. ಹೀಗೆ ಬಾಡಿಗೆ ಮನೆಯ ವರ್ಣನೆಯಿಂದ ಪ್ರಾರಂಭವಾದ ಕಿಷ್ಕಿಂದೆ ಸೊಗಸಾದ ಕವನಗಳಿಂದ ತುಂಬಿದೆ. **'ಕಳ್ಳಿ'** ಎಂಬ ಕವನದಲ್ಲಿ ಅಪದ್ಧನವನ್ನು ಸಂಗ್ರಹಿಸುವ ಒಲವು ಗೃಹಿಣಿಯರಲ್ಲಿ ಹೇಗೆ ಸಹಜವಾಗಿ ನೆಲಸಿರುವುದೆಂಬುದನ್ನು ಕವಿ ಸೊಗಸಾಗಿ ಬಣ್ಣಿಸಿದ್ದಾನೆ:

" ಅಂದು ಸಾಲವೇ
ಗತಿ ನನಗೆಂದು
ಜೋಲು ಮೋರೆಯಲಿ
ಹೊರಟಿರೆ ಬಂದು—
ಸೆರಗನು ನೀಡಿದಳು;
ಆ ಒಂದಾಣೆ ಆ ಎರಡಾಣೆ
ರುಪ–ರುಪಾಯಿಗಳ ತೋರಿಸಿ ಜಾಣೆ.....
ನನ್ನನು ನೋಡಿಯೆ ನೋಡಿದಳು" —ಎಂಬ ಸಾಲುಗಳಲ್ಲಿ ಕವಿ ಮುಂದಾಲೋಚನೆಯುಳ್ಳ ಗೃಹಿಣಿಯೊಬ್ಬಳ ಸುಂದರ ಚಿತ್ರವನ್ನು ಕೊಟ್ಟಿದ್ದಾನೆ. 'ತವರ ಮನೆಯಿಂದ ನಾನಿನ್ನ ಕರೆಸಿಪೆನೇಕೆ?' 'ನೋಡಿದ್ದೆ ಆಕೆಯನು' 'ಮೂರು ತಿಂಗಳ ಕಂದ' ಎಂಬುವು ದಾಂಪತ್ಯ ಜೀವನದಲ್ಲಿಯ ಒಂದೊಂದು ಸೊಗಸಿನ ಸನ್ನಿವೇಶಗಳನ್ನು ಚಿತ್ರಿಸುತ್ತವೆ. 'ಕಾಟ' 'ಬೊಬ್ಬೆ' ಎಂಬುವು, ತಂದೆಯಾದವನು ತನ್ನ ಮಕ್ಕಳ

ಬಾಲಲೀಲೆಗಳನ್ನು ನೋಡಿ ಆನಂದಿಸುವ ಸುಂದರ ಸಂದರ್ಭಗಳಾಗಿವೆ. 'ಕಾಟು' ಎಂಬ ಕವನದಲ್ಲಿ ಬರುವ:

"ಅಡಿಗೆ ಮನೆ ಕಡೆ ಇವನ ಧಾಳಿ ನಡೆದಿರೆ ಇತ್ತ
ಮುಳುಗುವೆನು ಯಾವುದೋ ಹಿಗ್ಗಿನಲ್ಲಿ—
ತಂದೆಯಾದವರೆಲ್ಲ ಪಡೆದ ಆನಂದವದು
ಕಾಲು-ಬಾಲಗಳೇಕೆ ಅದಕೆ ಇಲ್ಲಿ?
ಮಕ್ಕಳಿಲ್ಲದ ಮಂದಿಗಿಲ್ಲ ಮಕ್ಕಳ ಕಾಟ
ಅಸಲು ಬಡ್ಡಿಯ ಲೆಕ್ಕ ಅವರಿಗಾಟ"

ಎಂಬ ಸಾಲುಗಳೂ 'ಜೊಬ್ಬಿ' ಎಂಬ ಕವನದಲ್ಲಿ ಬರುವ:

"ಹೊರಗಿನ ಜೊಬ್ಬಿಗೆ ಬೆಂಡಾದವ ಈ
ಮಕ್ಕಳ ಜೊಬ್ಬಿಗೆ ಚಿಗುರುವೆನು—
ನಿತ್ಯದ ಬದುಕಿನ ಜೊಬ್ಬಿಗೆ ಮತ್ತೆ
ಮರುದಿನ ಟಗರುವೆನು!"

ಎಂಬ ಸಾಲುಗಳು ಮಕ್ಕಳ ಸುಖವನ್ನು ಎಡೆದುಂಬಿ ಬಣ್ಣಿಸುವ ಚಿರಸ್ಮರಣೀಯ ಮಾತುಗಳಾಗಿವೆ.

'ಹರತಾಗಿದೆ ಬಾಯಿ' ಎಂಬದು ಶ್ಲೇಷಾಲಂಕಾರದಿಂದ ಕೂಡಿದ ಗಂಡ-ಹೆಂಡಿರ ಸರಸಸಂವಾದದ ಸುಂದರ ಪದ್ಯವಾಗಿದೆ. 'ನಳರಾಜ'ದಲ್ಲಿ ಕವಿಯ ನಳಪಾಕದ ಮಾದರಿ ನಮಗೆ ನೋಡಲು ಸಿಗುತ್ತದೆ. 'ನೆಲವಿದೆ ಅಗಲ' ಎಂಬ ಕವನದಲ್ಲಿ ಭವಭೂತಿಯಂತೆ ವಿ. ಜಿ. ಭಟ್ಟರೂ ತಮ್ಮ ಆತ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. 'ಬೀದಿಯ ಕೂಸು' ಎಂಬ ಕವನದಲ್ಲಿ ಕವಿ ನಮ್ಮ ಕರುಣೆಗೆ ಒಂದು ಆಹ್ವಾನವನ್ನು ನೀಡುತ್ತಾನೆ. 'ಒಲವಿನದೇ ವಿನ್ಯಾಸ' ಎಂಬ ಕವನದಲ್ಲಿ ಗಂಡ-ಹೆಂಡಿರ ಬಡಿದಾಟವೂ ಹೇಗೆ ಪ್ರೀತಿಯ ಒಂದು ಪ್ರತಿರೂಪವೇ ಆಗಿದೆ— ಎಂಬದನ್ನು ಕವಿ ಬಣ್ಣಿಸಿದ್ದಾನೆ. 'ಓದಲು ಬರೆಯಲು.....' ಎಂಬ ಕವನದಲ್ಲಿಯ:

"ಪ್ಲಾಸ್ಟಿಕ್ ಟ್ಯೂಬಲ್ಲವು ಕರುಳು
ಓದಲು ಬರೆಯಲು ಇದೆ ಇರುಳು
ಇದೆ ಮುಪ್ಪಿನ ಸಂಜೆ."

ಎಂಬ ಸಾಲುಗಳು ಕವಿಯಲ್ಲಿರುವ ತಂದೆಯ ಕರುಳನ್ನು ತೆರೆದು ತೋರಿಸಿವೆ. ಕವಿಯಲ್ಲಿ ಎಂತಹ ಮಾನವೀಯತೆ, ಎಂತಹ ಅಂತಃಕರಣ ಮಿಡಿಯುತ್ತಿದೆ ಎಂಬದನ್ನು ಎತ್ತಿ ತೋರಿಸಲು ಇವೆರಡೇ ಸಾಲುಗಳು ಸಾಕು. 'ಸಂಸಾರ' ಎಂಬುದು ಇಡಿ ಕವನ ಸಂಕಲನದಲ್ಲಿಯ ಅತ್ಯುತ್ತಮವಾದ ಪದ್ಯಗಳಲ್ಲಿ ಒಂದು. ಇಲ್ಲಿ ಬಂದಿರುವ ಚಿತ್ರ ಕರುಣಾರಸದ ಘಟ್ಟಿಯಾಗಿದೆ. ತುಂಬ ಹೃದಯಸ್ಪರ್ಶಿಯಾಗಿದೆ. 'ಹಳೆಯ ಹರಕು ಚಡ್ಡಿ' ಎಂಬುದು ರಸಿಕರಾದ ದಂಪತಿಗಳ ನಡುವೆ ನಡೆಯಬಹುದಾದ ವಾಗ್ವಾದ, ರಸಿಕತೆಯ ಒಂದು ವಿಶಿಷ್ಟ ಕವನವಾಗಿದೆ. ಇಲ್ಲಿ ನಾವು ಕಂತಿ-ಹಂಪರ ಮೇಲಾಟವನ್ನು ನೆನೆದು ಕೊಳ್ಳುವಂತಾಗಿದೆ. 'ಬ್ರಾಹ್ಮಣ ಜನುಮದಿ ಹುಟ್ಟಿದ ನಮಗೆ' ಎಂಬುದೂ ಇದೇ ಮಾದರಿಯದಾಗಿದೆ. ಈ ಕವನಸಂಕಲನದ ಕೊನೆಗೆ ಬರುವ 'ಪ್ರಾರ್ಥನೆ' 'ಕಪ್ತಾನ' 'ಮೂರ್ತಿ' ಎಂಬ ಮೂರು ಕವನಗಳು, ವಿ. ಜಿ. ಭಟ್ಟರು ವಿಡಂಬನೆಯಿಂದ ಅನುಭಾವ ಕಡೆಗೆ ಒಲಿಯುತ್ತಿದ್ದಾರೆಂಬದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಮುಂದೆ ಬರಲಿರುವ ಈ ಕವಿಯ ಕವನ ಸಂಕಲನದಲ್ಲಿ ಅನುಭಾವದ ಪಡಿನೆಳಲನ್ನು ನಾವು ಕಂಡರೆ, ಅದು ಆಶ್ಚರ್ಯದ ಮಾತು ಆಗಲಿಕ್ಕಿಲ್ಲ.

ಇದಿಷ್ಟು ಈ ಎರಡು ನೂತನ ಕವನಸಂಕಲನಗಳ ಸ್ಥೂಲ ಪರಿಚಯವಾಯಿತು. ಇನ್ನು ಮೇಲೆ ಕವಿಯ ತತ್ತ್ವಜ್ಞಾನದ ಬಗ್ಗೆ ಅವನ ವಿಶಿಷ್ಟ ಶೈಲಿಯ ಬಗ್ಗೆ ಎರಡು ಮಾತುಗಳನ್ನು ಇಲ್ಲಿ ಹೇಳದಿದ್ದರೆ ಈ ವಿಮರ್ಶೆ ಅಪೂರ್ಣವೆನಿಸುತ್ತದೆ.

'ಅರಣ್ಯರೋದನ' 'ಕಿಷ್ಕಿಂದೆ' ಎಂಬ ಈ ಎರಡೂ ಕವನಸಂಕಲನಗಳನ್ನು ಓದುವಾಗ, ಕವಿಗೆ ಒಂದು ನಿರ್ದಿಷ್ಟವಾದ ತತ್ತ್ವಜ್ಞಾನವಿದೆ— ಒಂದು ವಿಶಿಷ್ಟ ದೃಷ್ಟಿಕೋಣವಿದೆ— ಎಂಬ ಮಾತು ಓದುಗನ ಗಮನಕ್ಕೆ ಬರುತ್ತದೆ. ಅಲ್ಲಲ್ಲಿ ಸೂತ್ರಬದ್ಧವಾಗಿ ಗಾದೆಯ ಮಾತಿನಂತೆ ಬರುವ ಸಾಲುಗಳು ನುಡಿಗಳು, ಆಧುನಿಕ ಕಾವ್ಯದಲ್ಲಿಯ ಅರ್ಥಾಂತರನ್ಯಾಸಗಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸೂತ್ರಬದ್ಧ ಮಾತುಗಳನ್ನು ನೋಡಿದಾಗ, ಕವಿಯ ತತ್ತ್ವಜ್ಞಾನದ ಕಲ್ಪನೆ ನಮಗೆ ಉಂಟಾಗುತ್ತದೆ. ಮುಖ್ಯವಾಗಿ ಈ ಕವಿ ಸತ್ಯಪ್ರಿಯ, ಪ್ರಾಮಾಣಿಕ, ಹಾಗೂ ಜೀವನವನ್ನು ನೇರವಾಗಿ ಎದುರಿಸುವವನಾಗಿದ್ದಾನೆ. ಕವಿಯ ವಿಡಂಬನೆಯೆಲ್ಲವೂ ಮಾನವನಲ್ಲಿ ಕಂಡುಬರುವ ಸುಳ್ಳು, ಮರೆಮೋಸ, ಆಡಂಬರಗಳನ್ನು ಹೊರಗೆಡಹುವುದಕ್ಕಾಗಿ ಉಪಯೋಗಿಸಿಕೊಂಡ ಸಾಧನವಾಗಿದೆ. ಅರಣ್ಯರೋದನಲ್ಲಿ ಚಿಂತೆಯೆಂಬ ಕವನದಲ್ಲಿ ಬರುವ:

"ಹಿಂದಿನಾ ಪುಣ್ಯದಿಂ ನಿನ್ನಾಟ ನಡೆಯುತಿದೆ
ಉರುಳುವಾ ಗಾಲಿಯನು ಮುಂದೆ ನೂಕು;
ನೀನೂಕಿದುದರಿಂದಲೇ ಹೋಯಿತೆನಬೇಡ
'ನಾನು ಸಹ ನೂಕಿದೆನು' ಎಂಬ ಸುಖಸಾಕು"

ಎಂಬ ಸಾಲುಗಳೂ, ಇದೇ ಕವನಸಂಕಲನದಲ್ಲಿ ಬರುವ 'ಹಂಗಾಮಿ' 'ನಕಲಿ' ಎಂಬ ಕವನಗಳೂ ಪ್ರಚಾರ, ಆಡಂಬರ ಜೊಳ್ಳುಜಂಭಗಳ ಬಗ್ಗೆ ಕವಿಯಲ್ಲಿರುವ ತಿರಸ್ಕಾರವನ್ನು ತೋರಿಸುತ್ತವೆ. ಮಾನವನು ಕರ್ತವ್ಯನಿಷ್ಠನಾಗಬೇಕೆಂಬದನ್ನು ಸಾರಿ ಹೇಳುತ್ತವೆ.

'ರವಿವಾರ ಮುಂಜಾನೆ ಚರ್ಚಿನೆದುರು' "ದೇಶನ್ನು" "ಸುಳ್ಳು" "ಬೆಣ್ಣೆ" ಇವೇ ಮೊದಲಾದ ಕವನಗಳೂ ಆಷಾಢಭೂತಿತನದ ಬಗ್ಗೆ ಕವಿಯಲ್ಲಿ ಇರುವ ನಿರಂತರವಾದ ದ್ವೇಷವನ್ನು

ವ್ಯಕ್ತಪಡಿಸುತ್ತವೆ. 'ರಾವಣರಿಗೆ-ತಗಲಕರಿಗೆ' ಎಂಬ ಕವನದಲ್ಲಿ ಬರುವ:

'ಅನ್ಯಾಯಕೆ ಪ್ರತಿಭಟಿಸು
ಸತ್ತರು ಸರಿ ಬಿಡಬೇಡ
ಹಿಚುಕು ಅದರ ಕುತ್ತಿಗೆ,
ನಿಂತತ್ತರಿ ನೆಲವೆ ಹುದುಲು
ಸಮರಸಕೂ ಸಮರ ಮೊದಲು
ಕವನವೆಲ್ಲ ಕೇಡಿಗಲ್ಲ
ವೇದಾಂತವು ಹೇಡಿಗಲ್ಲ
ಧೇನಿಸುತಿರು ಪೂಜಿಸುತಿರು
ವಿಶ್ವಶಕ್ತಿನಂಬಿರು
ಜತೆಗೆ ನಿನ್ನ ಕೋವಿಯಲ್ಲಿ
ಸುದ್ದು ಗುಂಡು ತುಂಬಿರು!"

ಎಂಬ ಸಾಲುಗಳು ಕವಿಯಲ್ಲಿ ಅನ್ಯಾಯದ ಬಗ್ಗೆ ತೀವ್ರವಾಗಿರುವ ವಿರೋಧವನ್ನೂ, ಅನ್ಯಾಯದ ಪ್ರತಿಭಟನೆಗಾಗಿ ಹೋರಾಡಬೇಕೆಂಬ ತತ್ತ್ವಜ್ಞಾನದಲ್ಲಿರುವ ನಂಬುಗೆಯನ್ನೂ ನಿರ್ವಿವಾದವಾಗಿ ಎತ್ತಿತೋರಿಸುತ್ತವೆ. "ಇರಿಯದಿರು ಬೆನ್ನಿನಲಿ" ಎಂಬ ಕವನದಲ್ಲಿಯೂ ಕೂಡ ಕವಿಯ ಇದೇ ತತ್ತ್ವಜ್ಞಾನ ಹಾಸು-ಹೊಕ್ಕಾಗಿ ಬಂದಿದೆ. ಒಟ್ಟಿನಲ್ಲಿ ಕವಿಗೆ ಸುರಿಮೋಸ, ಸುಳ್ಳು, ಡಾಂಭಿಕತನ, ಅನ್ಯಾಯ ಇವೆಲ್ಲ ಸೇರುವುದಿಲ್ಲ. ಅವುಗಳನ್ನು ಬೇರುಸಹಿತ ಕಿತ್ತೊಗೆದಾಗಲೇ ಮಾನವಸಮಾಜದಲ್ಲಿ ಸುಖಶಾಂತಿಗಳು ನೆಲೆಗೊಳ್ಳುತ್ತವೆ. ಅದಕ್ಕಾಗಿ ನಿರಂತರ ಹೋರಾಟ ನಡೆಯಬೇಕು— ಎಂದು ಕವಿ ಸಾರಿದ್ದಾನೆ: ನಂಬಿದ್ದಾನೆ.

ಎರಡನೆಯದಾಗಿ ಕವಿ ಮುಖ್ಯವಾಗಿ ಮಾನವತಾವಾದಿ. ಮಾನವ್ಯವೇ ಬಾಳಿನಲ್ಲಿಯ ಬಹು ಬೆಲೆಯುಳ್ಳ ಮೂಲ್ಯವಾಗಿ ಕವಿಗೆ ಕಂಡಿದೆ. "ಕಿಷ್ಕಿಂದೆ" ಕವನಸಂಕಲನದಲ್ಲಿ ಬರುವ "ಸಂಸ್ಕಾರ" ಎಂಬ ಕವನವು ಇದಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಅಲ್ಲಿ ಕವಿ ಹಣಕ್ಕೆ ಬೆಲೆಕೊಡದೆ ಮಾನವತೆಗೆ ಬೆಲೆಕೊಟ್ಟಿದ್ದಾನೆ. "ಗುಬ್ಬಿ" ಎಂಬ ಕವನದಲ್ಲಿ ಬರುವ:

" ಮನುಜರ ಮನೆಯಲಿ ನನ್ನದು ಗೂಡು
ಆ ಪುಣ್ಯವು ನನಗೊಬ್ಬಗೆ ನೋಡು"

ಎಂಬ ಸಾಲುಗಳೂ, ಇದೇ ಕವನಸಂಕಲನದಲ್ಲಿಯ "ಅಪೂರ್ವ ಮುದುಕಿ" ಎಂಬ ಕವನದಲ್ಲಿ ಬರುವ:

'ಪಾಂಡೀಚೇರಿ ಮಾತೆಯ ದರ್ಶನ
ಇದಕಿಂತಲೂ ಹೆಚ್ಚೆ?
ಇವಳನು ಕಂಡೂ ಅಲ್ಲಿಗೆ ಹೋಗಲು
ನಾನಾದರೂ ಹುಚ್ಚೆ?'

ಎಂಬ ಸಾಲುಗಳೂ, ಕವಿ ಮಾನವತೆಗೆ ಕೊಡುವ ಮಹತ್ತ್ವವನ್ನು ತೋರಿಸುತ್ತವೆ. ಕವಿಯಲ್ಲಿ ಮಾನವ ಹೃದಯ ಯಾವಾಗಲೂ ಜಾಗೃತವಾಗಿರುತ್ತದೆ ಎಂಬುದಕ್ಕೆ "ಕಿಷ್ಕಿಂದೆ"ಯಲ್ಲಿ ಬರುವ "ಪ್ರಾರ್ಥನೆ" ಎಂಬ ಕವನವೇ ಸಾಕ್ಷಿ.

ಮಾನವತಾವಾದಿಯಾದರೂ ಕವಿ ತನ್ನ ವ್ಯಕ್ತಿತ್ವವನ್ನು ಸಮಾಜದ ಪ್ರವಾಹದಲ್ಲಿ ತೇಲಿಬಿಟ್ಟವನಲ್ಲ. ಕವಿಗೆ ತನ್ನ ವೈಶಿಷ್ಟ್ಯ ವ್ಯಕ್ತಿತ್ವಗಳು ಬಹಳ ಮಹತ್ತ್ವದ ಸಂಗತಿಗಳಾಗಿವೆ. "ಕಿಷ್ಕಿಂದೆ"ಯಲ್ಲಿ ಬರುವ 'ಕವಿತೆ' ಎಂಬ ಕವನದಲ್ಲಿಯ

"ಯಂತ್ರಗಳ ಪಕ್ಷಗಳ ತೊತ್ತು ಬಾಳುವೆ ಕೀಳು
ವ್ಯಕ್ತಿಯನು ಕೊಲಲಾರದಿನ್ನು ಜನತೆ,
ನನ್ನತನವೊಂದೆ ನನಗಿರಲಿ; ಬೇಡವೆ ಬೇಡ
ಆ ಸಮಾಜವು ಹಂಚಿಕೊಡುವ ಸಮತೆ.
ನಾನಿಂದು ನಾನೇನೆ— ವ್ಯಕ್ತಿಶಾಹಿ
ಆದೀತು ಒಂದು ದಿನ ಜನತೆಗಾಹಿ"

ಎಂಬ ಸಾಲುಗಳೂ, ಅರಣ್ಯರೋದನದಲ್ಲಿ ಬರುವ 'ಕರಕರಾ' ಎಂಬ ಕವನದಲ್ಲಿಯ

"ಹುಟ್ಟಿಸಿದ; ಬಂದಿರುವೆ
ಕಂಠವಿದೆ; ಆಂದಿರುವೆ
ಕರಕರಾ ಎಂದು ಸಹಜ—
ಕಾಗೆಯೇ ಕೂಗದಿರು
ಮಸಿಯ ಮೈ ತೋರದಿರು
ಎಂದು ಹೇಳಲು ನೀನು ಯಾರೋ ಮನುಜ?"

ಎಂಬ ಮಾತುಗಳೂ, 'ಕಿಷ್ಕಿಂದೆ'ಯಲ್ಲಿ ಬರುವ 'ಅವಸರ' ಎಂಬ ಕವನದಲ್ಲಿಯ

"ನನಗಂತೂ ತಲಪಿದ್ದೇ ಗುರಿಯೋ
ಇದು ಎಮ್ಮೆಯ, ಕೋಣನ ಯೋಗಾ ಅಂದರು ಸರಿಯೋ"

ಎಂಬ ಸಾಲುಗಳೂ ಕವಿ ವ್ಯಕ್ತಿನಿಷ್ಠನೆಂಬದನ್ನು ನಿರ್ವಿವಾದವಾಗಿ ಸಾರುತ್ತವೆ.

ವಿಚಾರವಾದಿ ಮಾನವತಾವಾದಿ ವ್ಯಕ್ತಿನಿಷ್ಠನಾದರೂ ಕವಿ ದೇವರಲ್ಲಿ ವಿಶ್ವಾಸವುಳ್ಳವನು. ಮನುಷ್ಯನನ್ನು ಮೀರಿದ ಒಂದು ಶಕ್ತಿ ಇದೆ ಎಂದು ನಂಬಿದವನೂ ಆಗಿರುವನು. 'ಕಿಷ್ಕಿಂದೆ'ಯಲ್ಲಿ ಬರುವ 'ಬ್ರಾಹ್ಮಣ ಜನುವುದಿ ಹುಟ್ಟಿದ ನಿಮಗೆ' ಎಂಬ ಕವನದಲ್ಲಿಯ:

'ಇರುಳ ಹೊದಿಕೆಯಲಿ
ಮಾಡುವೆ ಧ್ಯಾನ
ಓಂಕಾರದ ಆ ಗರ್ಭ ಗುಡಿಯೊಳಗೆ
ಕನಸಿನ ಯಾನ

ಅಂತಹದೊಂದು ದರ್ಶನಕಾಗಿ
ದಿನದಿನ ನವೆಯುವೆನು;
ನಿರಾಕಾರದಾ ಪಾದಕೆ ಬಿದ್ದು
ಹಣೆಯನು ಸವೆಯುವೆನು"

ಎಂಬ ಸಾಲುಗಳೂ 'ಕಪ್ತಾನ' ಎಂಬ ಇನ್ನೊಂದು ಕವನವೂ ಈ ಮಾತಿಗೆ ಬೆಂಬಲವಾಗಿವೆ.

ಇನ್ನು ಕೊನೆಯದಾಗಿ ಕವಿಯ ಶೈಲಿಯ ಬಗ್ಗೆ ನಾಲ್ಕು ಮಾತು: 'ಅರಣ್ಯರೋದನ', 'ಕಿಷ್ಕಿಂದೆ'ಗಳನ್ನು ಓದುವ ಯಾವ ವಾಚಕನಿಗೂ ಶೈಲಿಯ ಸರಳತೆ, ಗದ್ಯಮಯತೆ ತಟ್ಟನೆ ಹೊಳೆಯುತ್ತದೆ. ಕವಿ ತನಗೆ ಬಂದ ಹಾಗೆ ಸಹಜವಾಗಿಯೇ ಕವನಗಳನ್ನು ಬರೆದಿದ್ದಾನೆ. ಶೈಲಿಯ ದೃಷ್ಟಿಯಿಂದ ಈ ಕವನಗಳು **ನವೀನ**-ವಾದರೂ **ನವ್ಯ**ವಲ್ಲ. ನವ್ಯಕಾವ್ಯದಲ್ಲಿ ಬರುವ ಡೊಂಬರಾಟವು ಈ ಕವನಗಳಲ್ಲಿ ಇಲ್ಲ. ಇಲ್ಲಿ ಹಲವು ಆಧುನಿಕ ಪದಪ್ರಯೋಗಗಳೂ, ಇಂಗ್ಲಿಷ್ ಶಬ್ದಗಳೂ ಬಂದರೂ, ನವ್ಯಕಾವ್ಯದ ಕ್ಲಿಷ್ಟತೆ ಇಲ್ಲಿ ಕಾಣಿಸಿಗುವುದಿಲ್ಲ. ಇಲ್ಲಿ ನಮ್ಮ ನಮ್ಮ ಹಳೆಯ ಕಾವ್ಯಲಕ್ಷಣಗಳಾದ ಪ್ರಾಸ, ಶಬ್ದಾಲಂಕಾರ, ಅರ್ಥಾಲಂಕಾರ ಮೊದಲಾದುವುಗಳು ಕಾಣಬರುತ್ತವಲ್ಲದೆ, ಕೆಲವು ಕಡೆಗೆ ಸಂಗೀತದ ಇಂಪೂ ಇದೆ. ಅದರೂ ಇವು ಹೊಸ ರೀತಿಯ ಕವನಗಳಾಗಿವೆ. ಹೊಸದಾಗಿ ನಮ್ಮಲ್ಲಿ ಬರಬೇಕಾದ ಕಾವ್ಯವು ನವ್ಯವಾಗಿಯೇ ಬರಬೇಕಾಗಿಲ್ಲ— ಎಂಬುದಕ್ಕೆ ಇವೆರಡೂ ಕವನಗಳು ಬಲವಾದ ಪ್ರಮಾಣಗಳಾಗಿವೆ. ನವ್ಯವಲ್ಲದಿದ್ದರೂ ನವೀನವಾಗಿ ಹೃದಯಂಗಮವಾಗಿ ಹೇಗೆ ನಮ್ಮ ಮುಂದಿನ ಕಾವ್ಯ ನಡೆದುಬರಬಹುದೆಂಬುದಕ್ಕೆ ಇವು ಮುಂಗುರುತುಗಳು.

ಹೀಗೆ ಶೈಲಿ, ನಿರೂಪಣೆ ಹೊಸತನವುಳ್ಳವಾಗಿದ್ದರೂ, ಕವಿಯ ಮೇಲೆ ಕೆಲವು ಆಧುನಿಕ ಇಂಗ್ಲಿಷ್ ಕವಿಗಳ ಪ್ರಭಾವವು ಬಿದ್ದಿದೆ ಎಂಬುದನ್ನು ವಿಮರ್ಶಕನಾದ ಓದುಗನು ಒಪ್ಪಲೇಬೇಕು. ಗದ್ಯಮಯವಾದ ಸರಳವಾದ, ಸುಂದರವಾದ ಈ ನಿರೂಪಣೆಯ ಮೇಲೆ ವಿಶೇಷವಾಗಿ Robert Frost ಇವರ ಪ್ರಭಾವವನ್ನು ನಾವು ಗುರುತಿಸುತ್ತೇವೆ. ಶೈಲಿಯಲ್ಲಿ ನಿರೂಪಣೆಯಲ್ಲಿ ಇಂಗ್ಲಿಷ್ ಕವಿಗಳ ಪ್ರಭಾವ ಕಂಡರೂ, ಇಲ್ಲಿ ವರ್ಣಿತವಾದ ಅನುಭವಗಳು ಮಾತ್ರ ಸಂಪೂರ್ಣವಾಗಿ ವಿ. ಜಿ. ಭಟ್ಟರ ಅನುಭವಗಳೇ ಆಗಿವೆ. ಇದರಿಂದ ಕಾವ್ಯದ ಗುಣವು ಹೆಚ್ಚಿದೆಯಲ್ಲದೆ ಕಡಿಮೆಯಾಗಿಲ್ಲ.

ಒಟ್ಟಿನಲ್ಲಿ **"ಅರಣ್ಯರೋದನ" "ಕಿಷ್ಕಿಂದೆ"** ಎಂಬ ಎರಡು ಕವನ ಸಂಕಲನಗಳಿಂದ ವಿ. ಜಿ. ಭಟ್ಟರು ಕನ್ನಡ ಸಾರಸ್ವತ ಭಾಂಡಾರದಲ್ಲಿ ಎರಡು ಬೆಲೆಯುಳ್ಳ ರತ್ನಗಳನ್ನು ಸೇರಿಸಿದ್ದಾರೆ— ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲವೆಂದು ನಂಬಿದ್ದೇನೆ.

ಕಿರುಗತೆಗಳಿರಡು:

೧. ಕಮಲಕಿರಣ

ಬ್ರಹ್ಮಾಂಡದಾಳದಲ್ಲಿ ಪ್ರಖರವಾಗಿ ಪ್ರಜ್ವಲಿಸುತ್ತಿರುವ ಕಿರಣವೊಂದು ಭೂಮಿಯತ್ತ ಹೊರಳಿತು ಹಗುರಾಗಿ ಉರುಳಿತು. ತನಗರಿಯದಂತೆ ಮುಂದೆ ಮುಂದೆ ನಡೆಯಿತು. ಏಕೋ? ಏನೋ??

ಕಿರಣದ ಬರುವನ್ನು ಕಂಡ ಮೊಗ್ಗೊಂದು ಅತ್ತ ತಿರುಗಿತು.
ಸುಖದ ಸಮೀರಣಕೆ ಸೋಂಕಿ ಅಲುಗಾಡಿತು.
ಕಿರಣವನ್ನು ಸ್ವಾಗತಿಸಿತು

ಬಳುಕುವ ಮೊಗ್ಗಿನ ಸೌಂದರ್ಯವನ್ನು ಕಂಡ ಕಿರಣ ಅದರ ಸಂಸ್ಪರ್ಶ ಬಯಸಿತು. ಸಾವಧಾನವಾಗಿ ಅದರೆಡೆ ಸಾಗಿತು.

ಮೊಗ್ಗು ಹಿಗ್ಗಿ ಹೂವಾಯಿತು; ವಿಕಸಿತವಾಯಿತು; ಕಿರಣ ಒಳಪ್ರವೇಶಿಸಿತು; ಅಲ್ಲೇ ಸಿಕ್ಕಿಕೊಂಡಿತು. ಮೊಗ್ಗಿನ ಮಧುರ ಮಕರಂದನ್ನಾ ಸ್ವಾದಿಸಿ ಮಾರುಹೋಯಿತು. ಮತ್ತೆ ಮತ್ತೆ ಬಂದಿತು.

——ಇದಾದುದೆಂದೋ ಏನೋ? 'ಕಾಲ' ತನ್ನ ಬೃಹದ್ಗ್ರಂಥದ ಮೊದಲ ಪುಟ ಇನ್ನೂ ಬರೆದಿರಲಿಕ್ಕಿಲ್ಲ. ಅಂದಿನಿಂದ ಇಂದಿನವರೆಗೂ ಈ 'ಮಧುರ ಮಿಲನ' ನಡೆದೇ ಇದೆ.

ಸಾಗರದಲ್ಲಿ ಮೊಗ್ಗು ಅರಳುತ್ತದೆ.
ಪೂರ್ವದಲ್ಲಿ ಕಿರಣ ಉದಯಿಸುತ್ತದೆ.

೨. ಯೋಗಿ?

'ಪೂರ್ಣ' ವಸ್ತುವಿನ ವಿಚ್ಛಿನ್ನಭಾಗಗಳೂ ಪೂರ್ಣವೆಂಬಂತೆ ಕಂಡುವು. ಆ ಭಾಗಗಳಿಗೆ ಮಾತ್ರ ತಾವು 'ಪೂರ್ಣ'ವೆಂಬರಿವು ಇರಲಿಲ್ಲ; ತಿಳಿಯುವ ಗೋಜಿಗೂ ಹೋಗಲಿಲ್ಲ.

'ಪೂರ್ಣತ್ವ'ವನ್ನು ಪಡೆಯಲು ಹವಣಿಸಿದುವು ಆ ಮುಗ್ಧ ಭಾಗಗಳು ಆ ಬಯಕೆ ಉಲ್ಬಣಾವಸ್ಥೆಗೇರಿತು. ಎರಡೂ ಭಾಗಗಳು ಸೇರಿದುವು— ತಾವು ಅಪೂರ್ಣವೆಂಬರಿವಿನಿಂದಲೇ. 'ಮಿಲನ'ದಲ್ಲಿ ಸಾತೋಷ ಪಡೆದುವು; ಪೂರ್ಣವಾದೆವೆಂದು ಬಗೆದುವು

ಹಾಗೆ ಸೇರಲೆಳಸಿದ್ದುವು ಸೃಷ್ಟಿಯನ್ನು ಬೆಳೆಯುವಂತೆ ಮಾಡಿದುವು. 'ಅವನಿಗೆ' ಬೇಕಾದದ್ದೂ ಅದೇ. ಅವುಗಳಿಗೆ ಅಂತಹ ಕಲ್ಪನೆಯಲ್ಲಿಯೇ ಇಟ್ಟ.

ಅವನು ಹಾಕಿದ ಗೆರೆಯನ್ನು ಕೆಲವು ದಾಟದುವು. ತಮ್ಮಲ್ಲೇ 'ಪೂರ್ಣತ್ವ'ವನ್ನು ಕಂಡುವು. ಅವು ಜಗತ್ತನ್ನು ಪ್ರಜ್ವಲಿಸುವಂತೆ ಬೆಳಗಿದುವು.

ಆ ಜ್ಯೋತಿರ್ಭಾಗಗಳೇ ಯೋಗಿಗಳು.

ಭದ್ರಂ! ಶುಭಂ! ಮಂಗಳಂ!

— ಎಚ್. ಡಿ. ಟಿ. ಇನಾಮದಾರ,
ಗುಲ್ಬರ್ಗಾ

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ನೂತನ ಸರಕಾರಕ್ಕೆ ಸ್ವಾಗತ

(ಬೆಂಗಳೂರಿನ ಕ ಸಾ ಪರಿಷತ್ತಿನಿಂದ ಪ್ರಕಟನೆಗಾಗಿ ಬಂದುದು)

ಈಗ ತಾನೆ ಪ್ರಜಾಪ್ರಭುತ್ವದ ಬೈಲಿಗೆ ಕಾಲಿಟ್ಟಿರುವ ನಮ್ಮ ದೇಶದಲ್ಲಿ ಮೇಲಿಂದ ಮೇಲೆ ಸರಕಾರಗಳು ಬದಲಾವಣೆಯಾಗುವುದು ಅಪ್ರಿಯವಾದರೂ ಅನಿವಾರ್ಯವೆಂದು ತೋರುತ್ತದೆ. ಸುಮಾರು ಒಂದುವರೆ ವರ್ಷಗಳ ಹಿಂದೆ ನೂತನವಾಗಿ ರಚನೆಯಾದ ವಿಶಾಲ ಮೈಸೂರುರಾಜ್ಯದ ಹೊಣೆಯನ್ನು ಹೊತ್ತ ಶ್ರೀ ನಿಜಲಿಂಗಪ್ಪನವರ ಸರಕಾರ ಇಂದು ನಿಷ್ಕ್ರಮಿಸಿ, ಕನ್ನಡ ಜನಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿರುವ, ಬಿಸಿರಕ್ತದ ಶ್ರೀ ಬಿ ಡಿ ಜತ್ತಿಯವರ ಸರಕಾರ ರಾಜ್ಯದ ಹೊಣೆಯನ್ನು ಹೊತ್ತು ಕಾರ್ಯೋನ್ಮುಖವಾಗಿದೆ ಸುಮಾರು ಹದಿನೆಂಟು ತಿಂಗಳುಗಳ ಕಾಲ ಶ್ರೀ ನಿಜಲಿಂಗಪ್ಪನವರು ಅವರ ಸರಕಾರವು ನೂತನ ರಾಜ್ಯವನ್ನು ಸಂಘಟಿಸಲು, ಸುಸ್ಥಿತಿಗೆ ತರಲು ತಮ್ಮ ಕೈಲಾದ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆಂದು ನಾವು ಒಪ್ಪಿಕೊಳ್ಳಬೇಕು. ಕರ್ನಾಟಕ ಏಕೀಕರಣಕ್ಕಾಗಿ ಅಪಾರವಾಗಿ ಶ್ರಮಿಸಿದ ಶ್ರೀ ಎಸ್. ನಿಜಲಿಂಗಪ್ಪನವರು ಕರ್ನಾಟಕದ ಮೊದಲನೇ ಮುಖ್ಯ ಮಂತ್ರಿಗಳಾದುದು ಗಮನಾರ್ಹವಾದ ಮತ್ತು ಗೌರವಾರ್ಹವಾದ ಸಂಗತಿಯಾಗಿದೆ. ಕನ್ನಡ ನಾಡು ನುಡಿಗಳಿಗೆ ಅವರಿಂದ ಆದ ಉಪಕಾರಕ್ಕಾಗಿ ಎಲ್ಲರೂ ಅವರಿಗೆ ಕೃತಜ್ಞರಾಗಿದ್ದಾರೆ.

ಹೊಲನನ್ನು ಉತ್ತು, ಬಿತ್ತು, ಕಳೆಯನ್ನು ತೆಗೆದು ಹದಗೊಳಿಸಿ ಮಾಡಿದ ಮೇಲೆ ಆರಂಭವನ್ನು ಮುಂದುವರಿಸುವುದು ಸುಲಭವೆಂಬ ಮಾತು ನಮಗೆಲ್ಲ ತಿಳಿದಿದೆ. ಮೈಸೂರಿನವರು, ಮಂಗಳೂರಿನವರು ಕೊಡಗಿನವರು, ಬೊಂಬಾಯಿನವರು, ಮತ್ತು ಹೈದರಾಬಾದಿನವರು ಎಂಬ ಭಿನ್ನಭಾವಗಳು ಕನ್ನಡ ರಾಜ್ಯೋದಯದ ಫಲವಾಗಿ ಇಂದು ನಮ್ಮ ಜನರಲ್ಲಿ ಇಲ್ಲವಾಗಿದೆ. ಸುಮಾರು ೪೩ ವರ್ಷಗಳ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತು ಕಂಡ ಕನಸು ಇಂದು ನನಸಾಗಿದೆ. ಕನ್ನಡ ರಾಜ್ಯ ನಮ್ಮ ಕಣ್ಣುಗಳ ಮುಂದೆ ಕಂಗೊಳಿಸುತ್ತಿದೆ

ಸುಮಾರು ಎರಡು ಕೋಟಿ ಕನ್ನಡ ಜನಗಳ ಸರ್ವಾಂಗೀಣ ಪ್ರಗತಿಗಾಗಿ ಸೇವೆಯನ್ನು ಸಲ್ಲಿಸುವ ಸುವರ್ಣಾವಕಾಶ ಮಾನ್ಯ ಶ್ರೀ ಬಿ. ಡಿ. ಜತ್ತಿಯವರಿಗೂ ಅವರ ಸರಕಾರಕ್ಕೂ ಪ್ರಾಪ್ತವಾಗಿದೆ ದೇವರ ಅನುಗ್ರಹದಿಂದ ಪ್ರಾಪ್ತವಾದ ಈ ಸಹವಕಾಶವನ್ನು ಜತ್ತಿ ಮಂತ್ರಿ-ಮಂಡಲವು ಸದುಪಯೋಗಪಡಿಸಿಕೊಳ್ಳುತ್ತದೆಂದು ನಂಬುತ್ತೇವೆ.

ಪ್ರಜಾಪ್ರಭುತ್ವದಲ್ಲಿ ಸರಕಾರಗಳು ಬದಲಾವಣೆಯಾಗುವುದು ಕ್ರಮಪ್ರಾಪ್ತವಾದರೂ ಪ್ರಬಲವಾದ ಕಾರಣಗಳಿಲ್ಲದೆ ಮಂತ್ರಿ ಮಂಡಲಗಳು ಮೇಲಿಂದ ಮೇಲೆ ಬದಲಾವಣೆಯಾಗುವುದು ದೇಶಕ್ಕೆ ತುಂಬಾ ಅಪಾಯ ಇವರಲ್ಲಿ ಫ್ರಾನ್ಸ್ ದೇಶದ ಉದಾಹರಣೆಯಿಂದ ನಾವು ದಿನವೂ ಪತ್ರಿಕೆಗಳಲ್ಲಿ ಓದಿ ಅನುಭವಗಳನ್ನು ಪಡೆಯುತ್ತಿದ್ದೇವೆ ಪ್ರಜಾಪ್ರಭುತ್ವವು ಪ್ರಜಾಪ್ರತಿನಿಧಿಗಳ ಪ್ರಭುತ್ವ ಆಗಬಾರದು ಈಗ ನಮ್ಮ ಭಾರತದಲ್ಲಿ ಅನೇಕ ಕಡೆ ನಡೆಯುತ್ತಿರುವುದು ಪ್ರಜೆಗಳ ಹೆಸರಿನಲ್ಲಿ ಪ್ರತಿನಿಧಿಗಳ ಪ್ರಭುತ್ವ ಎಂಬುದನ್ನು ಜನ ಅರಿತಿರುತ್ತಾರೆ. ವಿಶಾಲ ಮೈಸೂರಿನಲ್ಲಿಯೂ ಒರುಗಾಳಿ ಜೋರಾಗಿ ಬೀಸುತ್ತಿದೆಯೆಂಬುದನ್ನು ನಾವು ನೋಡುತ್ತಿದ್ದೆವೆ ಈ ಚಂಡಮಾರುತ ನಮ್ಮ ರಾಜ್ಯದಲ್ಲಿ ತಾಂಡವವಾಡದಂತೆ ಇನ್ನು ನಾಲ್ಕು ವರ್ಷಗಳ ಕಾಲವಾದರೂ ಪ್ರಶಾಂತಕರವಾದ ವಾತಾವರಣವಿರುವಂತೆ ಶ್ರೀಭುವನೇಶ್ವರಿಯು ಅನುಗ್ರಹಿಸಲಿ.

ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಜತ್ತಿಯವರು ದಿ|| ಬಿ ಜಿ. ಖೇರ್ ಮಾನ್ಯ ಮೊರಾರ್ಜಿದೇಸಾಯಿ ಮೊದಲಾದವರ ಕೈಕೆಳಗೆ ರಾಜಕೀಯ ಗರಡಿಗಳಲ್ಲಿ ತಯಾರಾಗಿದ್ದಾರೆ. ಒಂದು ರೀತಿಯಿಂದ ಅವರು ರಾಜಕೀಯ 'Jatti' ಆಗಿದ್ದಾರೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತಿದ್ದಾರೆ, ದೇಶದ ಸ್ವಾತಂತ್ರ್ಯಕ್ಕಾಗಿ, ಕರ್ನಾಟಕ ಏಕೀಕರಣಕ್ಕಾಗಿ ಸುಮಾರು ೩೫ ವರುಷಗಳಿಂದ ಅವರು ಶ್ರಮಿಸಿದ್ದಾರೆ. ಸತ್ಕುಲ ಪ್ರಸೂತರಾಗಿ, ಶ್ರೀಮಂತ ಮನೆತನದವರಾಗಿ ವಿದ್ಯಾವಿನಯಸಂಪನ್ನರಾಗಿ, ಇಂತಹ ಹೊಣೆಗಾರಿಕೆಯ ಸ್ಥಾನವನ್ನು ನಿರ್ವಹಿಸಲು ಅರ್ಹರಾಗಿದ್ದಾರೆ. ಅವರ ಮಂತ್ರಿಮಂಡಲದಲ್ಲಿ ಶ್ರೀಗಳಾದ ಮಲೆನಾಡಿನ ಮಂಜಪ್ಪ, ತುಮಕೂರಿನ ಸುಬ್ರಹ್ಮಣ್ಯಂ, ಮಂಡ್ಯದ ಟಿ. ಮರಿಯಪ್ಪ, ಮಾಧುಗಿರಿಯ ಮಾಲಿ ಮರಿಯಪ್ಪ, ಧಾರವಾಡದ ಕಲ್ಲನಗೌಡ ಪಾಟೀಲ್, ಮಂಗಳೂರಿನ ಡಾ|| ಹೆಗ್ಗಡೆ, ಮೈಸೂರಿನ ಚೆನ್ನಬಸಪ್ಪ, ಕಲ್ಬುರ್ಗಿಯ ಅಣ್ಣಾರಾವ್ ಗಣಮುಖಿ, ಏಕೀಕರಣದ ಎನ್. ರಾಚಯ್ಯ ಮೊದಲಾದ ಅಥಿರಥಮಹಾರಥರಾದ ಮಹನೀಯರಿದ್ದಾರೆ ಆದರಲ್ಲಿ ಹಳೇ ಮೈಸೂರಿನ ಆರು ಜನ ಕರ್ನಾಟಕದ ನಾಲ್ಕು ಜನ ಮಂತ್ರಿಗಳು ಸಂಪುಟದಲ್ಲಿ ಇರುವುದು ಸ್ವಾರಸ್ಯದ ಸಂಗತಿಯಾಗಿದೆ. ಉತ್ಸಾಹಶಾಲಿಗಳಾದ ಆರು ಮಂದಿ ಉಪಮಂತ್ರಿಗಳಿದ್ದಾರೆ. ಅವರಲ್ಲಿ ಇಬ್ಬರು ಸುಶಿಕ್ಷಿತ ಮಹಿಳೆಯರಿದ್ದಾರೆಂಬುದು ಗಮನಾರ್ಹ. ಹೈದರಾಬಾದಿನ ಕರ್ನಾಟಕ, ಕೊಡಗು ಬಳ್ಳಾರಿಗಳಿಗೆ ಈ ಮಂತ್ರಿಮಂಡಲದಲ್ಲಿ ಇನ್ನಷ್ಟು ಪ್ರಾತಿನಿಧ್ಯ ಬೇಕೆನಿಸಿದರೂ, ಒಟ್ಟಿನಲ್ಲಿ ಮಂತ್ರಿಮಂಡಲವು ಸಮಗ್ರ ಕರ್ನಾಟಕವನ್ನೂ ಪ್ರತಿನಿಧಿಸುವಂತಿದೆ ಎನ್ನಬಹುದು ಈ ಮಂತ್ರಿಮಂಡಲದಲ್ಲಿ ಅಲ್ಪಸಂಖ್ಯಾಕರ ಬಗ್ಗೆ ಹೆಚ್ಚು ಔದಾರ್ಯವನ್ನು ತೋರಿಸಿರುವುದು ಶ್ಲಾಘ್ಯವಾಗಿದೆ. ವಿವೇಕಗಳೂ, ಲೋಕಾನುಭವಿಗಳೂ ಆದ ಶ್ರೀ ಜತ್ತಿಯವರ ನೇತೃತ್ವದಲ್ಲಿ ಈ ಮಂತ್ರಿಮಂಡಲವು ನಿರಂತರವಾಗಿ ಜನಗಳ ಸೇವೆಯನ್ನು ನಾಲ್ಕು ವರ್ಷಗಳ ಕಾಲ ಸಲ್ಲಿಸುವಂತಾಗಲೆಂದು ಹಾರೈಸುತ್ತೇನೆ.

॥ ಸಿರಿಗನ್ನಡಂ ಬಾಳ್ಗೆ ॥

ಕರ್ನಾಟಕದಲ್ಲಿ

ಭಾವಗೀತ ಗಾಯನ

ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು
ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?
ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ
'ಆನಂದಕಂದ' ಇವರ ಈ ಗೀತಸಂಕಲನಗಳಿವೆ:

ನುಡ್ದನ ಮೂತು (ಶಿಶುಭಾವದ ಗೀತಗಳು)	....	....	೦ ೧೨—೦
ಒಡನಾಡಿ (ನಲ್ವಾಡುಗಳು)	....	....	೧—೦—೦
ವಿರಹಿಣಿ (ತತ್ತ್ವರೂಪಕ ಗೀತಗಳು)	....	....	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	....	....	೨—೦—೦

ಕಾವ್ಯಪ್ರೇಮಿಗಳೂ, ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿನೋಡಬೇಕು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ:

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and Published for the Proprietors Jayanti Publications, by K. S. Betgeri at the Jayanti Office, Dharwar